ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ-ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ

ಆದ

ಯೋಗವಾಸಿಷ್ಠ

ಸಂಪುಟ ೪

ಉತ್ಪತ್ತಿ ಪ್ರಕರಣ

ದೇವುಡು ಕನ್ನಡಿಸಿದುದು

ಶ್ರೀ ನೀಲಕಂಠೇಶ್ವರ ಪ್ರಿಂಟಿಂಗ್ ವರ್ಕ್ಸ್,
ಸುಲ್ತಾನ್‌ಪೇಟೆ, ಬೆಂಗಳೂರು ನಗರ.
೧೯೪೭

ಯೋಗವಾಸಿಷ್ಠ

ಸಂಪುಟ—೪

ಉತ್ಪತ್ತಿ ಪ್ರಕರಣ

ಶ್ರೀ ಜಯ ಚಾಮರಾಜೇಂದ್ರ ಗ್ರಂಥರತ್ನಮಾಲಾ–ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ ೪

ಉತ್ಪತ್ತಿ ಪ್ರಕರಣ

ದೇವುಡು ಕನ್ನಡಿಸಿದುದು

ಶ್ರೀ ನೀಲಕಂಠೇಶ್ವರ ಪ್ರಿಂಟಿಂಗ್ ವರ್ಕ್ಸ್,
ಸುಲ್ತಾನ್‌ಪೇಟೆ, ಬೆಂಗಳೂರು ನಗರ.
೧೯೪೬

ಪೀಠಿಕೆ

ಯೋಗವಾಸಿಷ್ಠವು ಅದ್ವೈತಸಿದ್ಧಾಂತಕ್ಕೆ ಸೇರಿದ ಪ್ರಕರಣ ಗ್ರಂಥ. ಇದಕ್ಕೆ ವಾಸಿಷ್ಠರಾಮಾಯಣ ಎಂದೂ ಹೆಸರುಂಟು. ಅದ್ವೈತ ಗುರು ಪರಂಪರೆಯ ಆದ್ಯರಾದ ವಸಿಷ್ಠರು "ಸೃಷ್ಟಿಯ ಮೊದಲು ದಿನಗಳಲ್ಲಿ ಲೋಕದಲ್ಲಿ ಶಾಂತಿಯು ನೆಲೆಗೊಳ್ಳಲೆಂದು ಭಗವಂತನಾದ ಚತುರ್ಮುಖನು ಉಪದೇಶಿಸಿದ ಜ್ಞಾನವಿದ್ಯೆ"ಯನ್ನು ಶ್ರೀರಾಮನ ಚಿತ್ತಶಾಂತಿಗೆಂದು ಹೇಳಿದರೆಂದೂ, ಅದನ್ನೇ ವಾಲ್ಮೀಕಿಗಳು ಬ್ರಹ್ಮನಾಜ್ಞೆಯಿಂದ ಗ್ರಂಥವಾಗಿ ವಿರಚಿಸಿದರೆಂದೂ ಈ ಗ್ರಂಥದಲ್ಲಿ ಹೇಳಿದೆ. ವಿದ್ಯಾರಣ್ಯರು ನಿಶ್ಚಲದಾಸರು ಮೊದಲಾದ ಅದ್ವೈತಾಚಾರ್ಯರನೇಕರು ಈ ಗ್ರಂಥದ ಅನೇಕಾಂಶಗಳನ್ನು ತಮ್ಮ ಗ್ರಂಥಗಳಲ್ಲಿ ಸಂಗ್ರಹಿಸಿದ್ದಾರೆ. ವಾಸಿಷ್ಠಸಿದ್ಧಾಂತವೂ ಶಾಂಕರಸಿದ್ಧಾಂತವೂ ಕೆಲವೆಡೆಗಳಲ್ಲಿ ಭಿನ್ನೈಸುವುದೆಂದು ಕೆಲವರ ಅಭಿಪ್ರಾಯವಿದೆ: ಆದರೂ ಅದ್ವೈತ ಸಂಪ್ರದಾಯವನ್ನು ಹಿಡಿದ ಮುಮುಕ್ಷುಗಳೂ ಜಿಜ್ಞಾಸುಗಳೂ ಈ ಗ್ರಂಥವನ್ನು ಪರಮಾದರದಿಂದ ಅಧ್ಯಯನಮಾಡುತ್ತಾರೆ.

ಭೋಗೈಕಪರಾಯಣವಾದ ಆಧುನಿಕ ನಾಗರಿಕತೆಯ ದೇಶಗಳಲ್ಲಿಯೇ ಹುಟ್ಟಿಬೆಳೆದ ಅನೇಕ ದಾರ್ಶನಿಕರು ನಿರೂಪಿಸಿರುವ ಸಿದ್ಧಾಂತಗಳಿಗೂ ಈ ವಾಸಿಷ್ಠಸಿದ್ಧಾಂತಕ್ಕೂ ಎಷ್ಟೋ ಅಂಶಗಳಲ್ಲಿ ಏಕತಾನತೆಯು ಇರುವುದು ಒಂದು ವಿಶೇಷ ಸಂಗತಿ.

ಈ ಗ್ರಂಥದಲ್ಲಿ ನಿರ್ಣಯಸಾಗರ ಪ್ರೆಸ್ಸಿನಲ್ಲಿ ತಾತ್ಪರ್ಯಪ್ರಕಾಶವೆಂಬ ವ್ಯಾಖ್ಯಾನದೊಡನೆ ಮುದ್ರಿತವಾಗಿರುವ ಮೂಲವನ್ನೇ ಬಹುಮಟ್ಟಿಗೆ ಅನುಸರಿಸಲಾಗಿದೆ. ಹಿಂದೆ ಆಸ್ಥಾನ ವಿದ್ವಾನ್ ಬ್ರಹ್ಮಶ್ರೀ ಗುಂಡಶಾಸ್ತ್ರಿಗಳು ಕೃಷ್ಣರಾಜವೈಭವವೆಂಬ ಹೆಸರಿನಿಂದ ವೈರಾಗ್ಯ, ಮುಮುಕ್ಷು ವ್ಯವಹಾರ, ಉತ್ಪತ್ತಿ, ಸ್ಥಿತಿ, ಉಪಶಮಗಳೆಂಬ ಮೊದಲಿನೈದು ಪ್ರಕರಣಗಳನ್ನು ಮೂಲ-ಅನುವಾದ ಸಹಿತವಾಗಿ ಪ್ರಕಟಿಸಿದ್ದರು. ಈಗ ಇಲ್ಲಿ ಪ್ರಕಟವಾಗಿರುವ ಅನುವಾದವು ಸ್ವತಂತ್ರವು. ಅವಶ್ಯವೆಂದು ತೋರಿದ ಕಡೆಗಳಲ್ಲಿಯೂ ಗ್ರಂಥಾಂತರಗಳಲ್ಲಿ ಹೇಳಿರುವುದು ಓದುಗರ ಗಮನಕ್ಕೆ ಬಂದು ಓದಿದ ವಿಷಯವು ದೃಢವಾಗಲೆಂದೂ ಟಿಪ್ಪಣಿಗಳನ್ನು ಕೊಡಲಾಗಿದೆ.

ಭಾರತವಿಂದು ಜಾಗ್ರತವಾಗಿದೆ. ಮಾದರಿಯ ಮೈಸೂರು ಅಕ್ಷರ ಪ್ರಚಾರವನ್ನು ದೇಶಾದ್ಯಂತವೂ ಹರಡಿ ಕೀರ್ತಿವಂತವಾಗಿದೆ. ನಾನಾಮುಖವಾಗಿ ಬೆಳೆಯುತ್ತಿರುವ ದೇಶದ ಸೌಭಾಗ್ಯ ಮಂದಿರಕ್ಕೆ ಕಲಶವಾಗಿ ಜನರಲ್ಲಿ

ವಿದ್ಯಾವಂತರಾಗಬೇಕೆಂಬ ಆಸೆ ಬಲವಾಗುತ್ತಿದೆ. ಕಲಿತ ವಿದ್ಯೆಗಳೆಲ್ಲವೂ ಸಾರ್ಥಕವಾಗಬೇಕಾದರೆ ಬ್ರಹ್ಮವಿದ್ಯೆಯನ್ನು ಕಲಿಯಲೇಬೇಕೆಂಬ ಪ್ರಾಚೀನರ ಉಪದೇಶವಿಂದು ಎಲ್ಲರ ಮನಸ್ಸಿಗೂ ಬರುವ ಕಾಲವೂ ಬಂದಿದೆ. ಇಂತಹ ಸಂಧಿಕಾಲಗಳಲ್ಲಿ ಈ ಗ್ರಂಥವು ಸುಲಭಕನ್ನಡದಲ್ಲಿ ಬರುವುದು ಕನ್ನಡಲೋಕದ ಸುದೈವ. ಕಾವ್ಯಶೈಲಿಯಲ್ಲಿ ವೇದಾಂತವನ್ನು ಇಷ್ಟು ಸುಂದರವಾಗಿ ಸುಲಭ ವಾಗಿ ಬೋಧಿಸುವ ಗ್ರಂಥ ಇನ್ನೊಂದಿಲ್ಲ. ಇದನ್ನು ಓದಿ ಅರ್ಥಮಾಡಿಕೊಳ್ಳಲು ಗ್ರಂಥಾಂತರಗಳ ಸಹಾಯವು ಬೇಕಿಲ್ಲ: ಶ್ರದ್ಧೆಯೊಂದಿದ್ದರೆ ಸಾಕು: ಅದರಿಂದ ಈ ಗ್ರಂಥದಿಂದ ಆಗುವ ಲೋಕೋಪಕಾರವು ಅಷ್ಟಿಷ್ಟಲ್ಲ.

ಈ ಗ್ರಂಥವು ಈ ರೂಪದಲ್ಲಿ ಬರುವುದಕ್ಕೆ ಕಾರಣರು ನಮ್ಮನ್ನಾಳುವ ಶ್ರೀಮನ್ಮಹಾರಾಜರು ಶ್ರೀ ಜಯಚಾಮರಾಜೇಂದ್ರ ಒಡೆಯರು ಬಹದ್ದೂರ್ ಜಿ.ಸಿ.ಬಿ.,ಜಿ.ಸಿ.ಎಸ್.ಐ. ಅವರು. ಈ ಗ್ರಂಥದ ಪಠನ ಪಾಠನಗಳಿಂದ ಲಭಿ ಸುವ ಶ್ರೇಯಸ್ಸೆಲ್ಲವೂ ಮಹಾಸನ್ನಿಧಾನಕ್ಕೇ ಸೇರಿದುದು.

ಈ ಕಾರ್ಯಕ್ಕೆ ತನ್ನನ್ನು ನಿಯಮಿಸಿದ ಆಳುವ ಮಹಾಸ್ವಾಮಿಯವರಿಗೆ ಅನುವಾದಕನು ಅತ್ಯಂತ ಕೃತಜ್ಞನಾಗಿ ಈ ಗ್ರಂಥದ ಅಧ್ಯಯನದಿಂದ ತನಗೆ ಆದ ಪರಮೋಪಕಾರವನ್ನು ನೆನೆದು ಸಮಸ್ತ ಸನ್ಮಂಗಳಾನಿ ಭವಂತು ಎಂದು ಹರಕೆಹೊರುತ್ತಾನೆ.

ಬೆಂಗಳೂರು ನಗರ.
೧೫-೧೧-೧೯೪೬.

ದೇವುಡು

ವಿಷಯ ಸೂಚಿಕೆ

ಸಪ್ತವಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ತಸ್ಮಿನ್ ಗಿರಿತಟೇ ಗ್ರಾಮೇ ತಸ್ಯ ಮಂಡಪಕೋಟರೇ ।
ಅಂತರ್ಧಿಮಾಶ್ವಾಯಯತುಸ್ತತ್ರಸ್ಥೇ ಏವ ತೇ ಸ್ತ್ರಿಯೌ ॥ ೧ ॥

ಅಸ್ಮಾಕಂ ವನದೇವೀಭ್ಯಾಂ ಪ್ರಸಾದಃ ಕೃತ ಇತ್ಯಥ ।
ಶಾಂತದುಃಖೇ ಗೃಹಜನೇ ಸ್ವವ್ಯಾಪಾರಪರೇ ಸ್ಥಿತೇ ॥ ೨ ॥

ಮಂಡಪಾಕಾಶಸಂಲೀನಾಂ ಲೀಲಾಮಾಹ ಸರಸ್ವತೀ ।
ವ್ಯೋಮರೂಪಾ ವ್ಯೋಮರೂಪಾಂ ಸ್ಮಯಾತ್ತೂಷ್ಣೀಮಿವ ಸ್ಥಿತಾಂ ॥ ೩ ॥

ಸಂಕಲ್ಪಸ್ವಪ್ನಯೋರ್ಯೇಷಾಂ ಯತ್ರ ಸಂಕಥನಂ ಮಿಥಃ ।
ಯಥೇಹಾರ್ಥಕ್ರಿಯಾಂ ಧತ್ತೇ ತಯೋಃ ಸಾ ಸಂಕಥಾ ತಥಾ ॥ ೪ ॥

ಇಪ್ಪತ್ತೇಳನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :—ಆ ಗಿರಿತಟಗ್ರಾಮದ ಆ ಬ್ರಾಹ್ಮಣ ಗೃಹದಲ್ಲಿಯೇ ಆ ಹೆಂಗಸರು ಆ ಕೂಡಲೇ ಅಂತರ್ಧಾನವನ್ನು ಹೊಂದಿದರು.

೨. ನಮಗೆ ವನದೇವಿಯರ ಪ್ರಸಾದವು ದೊರೆಯಿತು ಎಂದು ಗೃಹಜನರೆಲ್ಲರೂ ಶಾಂತದುಃಖರಾಗಿ ತಮ್ಮ ತಮ್ಮ ವ್ಯಾಪಾರಗಳಲ್ಲಿ ತೊಡಗಿದರು.

೩. ಆ ಮಂಡಪಾಕಾಶದಲ್ಲಿಯೇ ಲೀನಳಾಗಿ ಆಶ್ಚರ್ಯದಿಂದ ಮೌನವಾಗಿರುವ ವ್ಯೋಮರೂಪಳಾದ ಲೀಲೆಯನ್ನು ಕುರಿತು ವ್ಯೋಮರೂಪಳಾದ ಸರಸ್ವತಿಯು ಹೇಳಿದಳು.

೪. ಸಂಕಲ್ಪ (ಸೃಷ್ಟಿಯಲ್ಲಿಯೂ) ಸ್ವಪ್ನದಲ್ಲಿಯೂ ಇರುವವರಿಗೆ ಹೇಗೆ ಮಾತು ಕಥೆಗಳೂ, ವ್ಯಾಪಾರಾದಿಗಳೂ ನಡೆಯುವುವೋ ಹಾಗೆಯೇ ಅವರಿಬ್ಬರಿಗೂ ಮಾತು ಕಥೆಗಳು ನಡೆದುವು.

ಪೃಥ್ವ್ಯಾದಿನಾಡೀ ಪ್ರಾಣಾದಿ ಋತೇಽಪ್ಯಭ್ಯುದಿತಾ ತಯೋಃ |
ಸಾ ಸಂಕಥನಸಂವಿತ್ತಿಃ ಸ್ವಪ್ನಸಂಕಲ್ಪಯೋರಿವ || ೫ ||

ಶ್ರೀ ಸರಸ್ವತ್ಯುವಾಚ:—

ಜ್ಞೇಯಂ ಜ್ಞಾತಮಶೇಷೇಣ ದೃಷ್ಟಾದೃಷ್ಟಾರ್ಥಸಂವಿದಃ |
ಈದೃಶೀಯಂ ಬ್ರಹ್ಮಸತ್ತಾ ಕಿಮನ್ಯದ್ವದ ಪೃಚ್ಛಸಿ || ೬ ||

ಲೀಲೋವಾಚ :—

ಮೃತಸ್ಯ ಭರ್ತುರ್ಜೀವೋಽಸೌ ಯತ್ರ ರಾಜ್ಯಂ ಕರೋತಿ ಮೇ |
ತತ್ರಾಹಂ ಕಿಂ ನ ತೈರ್ದೃಷ್ಟಾ ದೃಷ್ಟಾಸ್ಮೀಹ ಸುತೇನ ಕಿಂ || ೭ ||

ಶ್ರೀ ಸರಸ್ವತ್ಯುವಾಚ:—

ಅಭ್ಯಾಸೇನ ವಿನಾ ವತ್ಸೇ ತದಾ ತೇ ದ್ವೈತನಿಶ್ಚಯಃ |
ನೂನಮಸ್ತಂಗತೋ ನಾಭೂನ್ನಿಃಶೇಷಂ ವರವರ್ಣಿನಿ || ೮ ||

ಅದ್ವೈತಂ ಯೋ ನ ಯಾತೋಽಸೌ ಕಥಮದ್ವೈತಕರ್ಮಭಿಃ |
ಯುಜ್ಯತೇ ತಾಪಸಂಸ್ಥಸ್ಯ ಚ್ಛಾಯಾಂಗಾನುಭವಃ ಕುತಃ || ೯ ||

---

೫. ಪೃಥಿವ್ಯಾದಿಗಳೂ ನಾಡೀಚಕ್ರವೂ, ಪ್ರಾಣಾದಿಗಳೂ ಇಲ್ಲದಿದ್ದರೂ ಸ್ವಪ್ನ ಸಂಕಲ್ಪಗಳಲ್ಲಿ ನಡೆಯುವಂತೆ ಅವರವರಿಗೆ ಮಾತು ಕಥೆಗಳೂ ನಡೆದು ಅರ್ಥವೂ ಆಯಿತು.

೬. ಶ್ರೀ ಸರಸ್ವತಿಯು ಹೇಳಿದಳು :—ತಿಳಿಯಬೇಕಾದುದನ್ನು ನೀನು ಪೂರ್ಣವಾಗಿ ತಿಳಿದೆ. ದೃಷ್ಟ, ಅದೃಷ್ಟವೆಲ್ಲದರಲ್ಲಿಯೂ ಇರುವುದು ಹೀಗೆ ಒಂದೇ ಬ್ರಹ್ಮಸತ್ತಾ ಎಂಬುದನ್ನು ಕಂಡೆ. ಇನ್ನು ಏನು ಕೇಳುವೆಯೋ ಕೇಳು.

೭. ಲೀಲೆಯು ಕೇಳಿದಳು :—ಮೃತನಾದ ಗಂಡನ ಜೀವವು ರಾಜ್ಯಭಾರ ಮಾಡುತ್ತಿದ್ದ ಕಡೆ ನನ್ನನ್ನು ಯಾರೂ ನೋಡಲಿಲ್ಲ. ಇಲ್ಲಿ ಮಗನು ನನ್ನನ್ನು ನೋಡಿದನು. ಅದೇನು ?

೮. ಶ್ರೀ ಸರಸ್ವತಿಯು ಹೇಳಿದಳು :—ವತ್ಸೆ, ನಿನಗೆ ಅಭ್ಯಾಸವಿರಲಿಲ್ಲ ವಾಗಿ ನಿನ್ನ ದ್ವೈತನಿಶ್ಚಯವು ನಿಶ್ಶೇಷವಾಗಿ ಅಸ್ತವಾಗಿರಲಿಲ್ಲ.

೯. ಯಾರು ಅದ್ವೈತವನ್ನು ಪಡೆದಿಲ್ಲವೋ ಅವರಿಗೆ ಅದ್ವೈತಕರ್ಮ

ಲೀಲಾಸ್ಮೀತಿ ವಿನಾಭ್ಯಾಸಂ ತವ ನಾಸ್ತಂಗತೋಽಭವತ್ |
ಯದಾ ಭಾವಸ್ತದಾ ಸತ್ಯಸಂಕಲ್ಪತ್ವಮಭೂನ್ನ ತೇ ॥ ೧೦ ॥

ಅದ್ಯಾಸಿ ಸತ್ಯಸಂಕಲ್ಪಾ ಸಂಪನ್ನಾ ತೇನ ಮಾಂ ಸುತಃ |
ಸಂಪಶ್ಯತ್ವಿತ್ಯಭಿಮತಂ ಫಲಿತಂ ತವ ಸುಂದರಿ ॥ ೧೧ ॥

ಇದಾನೀಂ ತಸ್ಯ ಭರ್ತುಸ್ತ್ವಂ ಸಮೀಪಂ ಯದಿ ಗಚ್ಛಸಿ |
ತತ್ತೇನ ವ್ಯವಹಾರಸ್ತೇ ಪೂರ್ವವತ್ಸಂಪ್ರವರ್ತತೇ ॥ ೧೨ ॥

ಲೀಲೋವಾಚ :—

ಇಹೈವ ಮಂದಿರಾಕಾಶೇ ಪತಿರ್ವಿಪ್ರೋ ಮಮಾಭವತ್ |
ಇಹೈವ ಸ ಮೃತೋ ಭೂತ್ವಾ ಸಂಪನ್ನೋ ವಸುಧಾಧಿಪಃ ॥ ೧೩ ॥

ಇಹೈವ ತಸ್ಯ ಸಂಸಾರೇ ತಸ್ಮಿನ್ ಭೂಮಂಡಲಾಂತರೇ |
ರಾಜಧಾನೀಪುರೇ ತಸ್ಮಿನ್ ಪುರಂಧ್ರ್ಯಸ್ಮಿ ವ್ಯವಸ್ಥಿತಾ ॥ ೧೪ ॥

(ಸತ್ಯ ಸಂಕಲ್ಪಾದಿ) ಗಳು ಸಿದ್ಧಿಸುವುದಿಲ್ಲ. ಬಿಸಿಲಲ್ಲಿರುವವನಿಗೆ ನೆರಳಿನಲ್ಲಿರುವವನ ಅನುಭವವೆಂತು ಬರುವುದು ?

೧೦. ಅಭ್ಯಾಸವು ಸಾಲದಿದ್ದುದರಿಂದ ನಿನಗೆ ನಾನು ಲೀಲೆಯೆಂಬ ಭಾವವು ಅಸ್ತವಾಗಿರಲಿಲ್ಲ. ಅದರಿಂದ ನಿನಗೆ ಸತ್ಯಸಂಕಲ್ಪತ್ವವು ಬರಲಿಲ್ಲ.

೧೧. ನೀನು ಈಗ ಸತ್ಯಸಂಕಲ್ಪಳಾಗಿರುವೆ. ಅದರಿಂದ, ಮಗನು ನನ್ನನ್ನು ನೋಡಲಿ ಎಂಬ ನಿನ್ನ ಅಭಿಮತವು ನಿನಗೆ ಫಲಿಸಿತು.

೧೨. ಈಗ ನೀನು ನಿನ್ನ ಗಂಡನ ಬಳಿಗೆ ಹೋದರೆ ಅವನೊಡನೆ (ನೀನು ಕೋರಿದರೆ) ವ್ಯವಹಾರಗಳೆಲ್ಲವೂ ಪೂರ್ವದಂತೆ ನಡೆಯುವುವು.

೧೩. ಲೀಲೆಯು ಹೇಳಿದಳು :—ನನ್ನ ಗಂಡನಾದ ಬ್ರಾಹ್ಮಣನು ಈ ಗೃಹಾಕಾಶದಲ್ಲಿಯೇ ಇದ್ದನು ಇಲ್ಲಿಯೇ ಸತ್ತು ಇಲ್ಲಿಯೇ ಅರಸಾದನು.

೧೪. ಇಲ್ಲಿಯೇ ಅವನ ಸಂಸಾರದಲ್ಲಿಯೇ ಆ ಭೂಮಂಡಲಾಂತರದಲ್ಲಿಯೇ ರಾಜಧಾನಿಯಲ್ಲಿಯೇ ಅರಸಿಯಾಗಿರುವೆನು.

ಇಹೈವಾಂತಃಪುರೇ ತಸ್ಮಿನ್ಸ್ಮೃತೋ ಮಮ ಭೂಪತಿಃ |
ಇಹೈವಾಂತಃಪುರಾಕಾಶೇ ತಸ್ಮಿನ್ನೇವ ಪುರೇ ನೃಪಃ ॥ ೧೫ ॥

ಸಂಪನ್ನೋ ವಸುಧಾಪೀಠೇ ನಾನಾಜನಪದೇಶ್ವರಃ |
ಸರ್ವಾರ್ಜವಜವೀಭಾವ ಇಹೈವೈವಂ ವ್ಯವಸ್ಥಿತಃ ॥ ೧೬ ॥

ಅಸ್ಮಿನ್ನೇವ ಗೃಹಾಕಾಶೇ ಸರ್ವಾ ಬ್ರಹ್ಮಾಂಡಭೂಮಯಃ |
ಸ್ಥಿತಾಃ ಸಮುದ್ಗಕೇ ಮನ್ಯೇ ಯಥಾಂತಃ ಸರ್ಷಪೋತ್ಕರಾಃ ॥ ೧೭ ॥

ಸದಾಽದೂರಮಹಂ ಮನ್ಯೇ ತದ್ಭರ್ತುರ್ಮಮ ಮಂಡಲಂ |
ಕ್ವಚಿತ್ಪಾರ್ಶ್ವೇ ಸ್ಥಿತಮಿಹ ಯಥಾ ಪಶ್ಯಾಮಿ ತತ್ಕುರು ॥ ೧೮ ॥

ಶ್ರೀದೇವ್ಯುವಾಚ :—

ಭೂತಲಾರುಂಧತಿ ಸುತೇ ಭರ್ತಾರಸ್ತವ ಸಂಪ್ರತಿ |
ತ್ರಯೋ ನಾಮಾಥವಾಭೂರ್ವ ಬಹವಃ ಶತಸಂಮತಾಃ ॥ ೧೯ ॥

೧೫–೧೬. ಇಲ್ಲಿಯೇ ನನ್ನ ಅಂತಃಪುರ, ಇಲ್ಲಿಯೇ ನನ್ನ ಗಂಡನಾದ ಅರಸನು ಸತ್ತುದು. ಇಲ್ಲಿಯೇ ಅಂತಃಪುರಾಕಾಶವು. ಇಲ್ಲಿಯೇ ಆ ನರಪತಿಯು ನಾನಾ ದೇಶಗಳ ಚಕ್ರವರ್ತಿಯಾದುದು. ಇಲ್ಲಿಯೇ ಸರ್ವಾರ್ಜವಜವೀ ಭಾವವು ಇರುವುದು. *

೧೭. ಈ ಗೃಹಾಕಾಶದಲ್ಲಿಯೇ ಸರ್ವಬ್ರಹ್ಮಾಂಡಗಳೂ ಪೆಟ್ಟಿಗೆಯಲ್ಲಿ ಸಾಸುವೆ ಕಾಳುಗಳು ಇರುವಂತೆ ಇರುವುವು ಎಂದು ಅರಿತೆನು.

೧೮. ಯಾವಾಗಲೂ ನಾನು ದೂರದಲ್ಲಿ ಇರಲಿಲ್ಲವೆಂದು ಅರಿತೆನು. ನಾನು ಗಂಡನ ಮಗ್ಗುಲಲ್ಲಿಯೇ ಇರುವುದನ್ನು ಕಾಣುವಂತೆ ಮಾಡು.

೧೯. ಶ್ರೀ ದೇವಿಯು ಹೇಳಿದಳು:—ಭೂತಲದ ಅರುಂಧತಿಯೆನ್ನಿಸಿ ಕೊಂಡ ವತ್ಸೆ! ಈಗ ನಿನಗೆ ಮೂವರು ಗಂಡಂದಿರು ಅಥವಾ ನೂರಾರು ಜನ ಆದರು.

---

* ಸರ್ವವಸ್ತೂನಾಂ ಆರ್ಜವಂ ಅಕಾಪಟ್ಯಂ ಕೂಟಸ್ಥಂ ಪಾರಮಾರ್ಥಿಕಂ ಬ್ರಹ್ಮ ತಸ್ಮಿನ್ ಕಲ್ಪಿತೋ ಜವೀಭಾವೋ ಮಾಯಿಕ ಚಲನಾದಿ ವಿಕಾರಃ ಇಹೈವ ಮಂಡಪಾಕಾಶೇ ವ್ಯವಸ್ಥಿತಃ॥ —ತಾ. ಪ್ರ.

ಸರ್ವಾರ್ಜವ=ಬ್ರಹ್ಮ; ಜವೀಭಾವ=ಅದರಲ್ಲಿ ನಡೆಯುವ ಮಾಯಾಕಾರ್ಯ.

ನೇದೀಯಸಾಂ ತ್ರಯಾಣಾಂ ತು ದ್ವಿಜಸ್ತೇ ಭಸ್ಮತಾಂ ಗತಃ |
ರಾಜಾ ಮಾಲ್ಯಾಂತರಗತಃ ಸಂಸ್ಥಿತೋಽಂತಃಪುರೇ ಶವಃ || ೨೦ ||

ಸಂಸಾರಮಂಡಲೇ ಹ್ಯಸ್ಮಿಂಸ್ತೃತೀಯೋ ವಸುಧಾಧಿಪಃ |
ಮಹಾಸಂಸಾರಜಲಧಿಂ ಪತಿತೋ ಭ್ರಮಮಾಗತಃ || ೨೧ ||

ಭೋಗಕಲ್ಲೋಲಕಲನಾವಿಕಲೋ ಮಲಚೇತನಃ |
ಜಾಡ್ಯಜರ್ಜರಚಿದ್ವೃತ್ತಿಃ ಸಂಸಾರಾಂಭೋಧಿಕಚ್ಛಪಃ || ೨೨ ||

ಚಿತ್ರಾಣಿ ರಾಜಕಾರ್ಯಾಣಿ ಕುರ್ವನ್ನಪ್ಯಾಕುಲಾನ್ಯಪಿ |
ಸುಪ್ತಃ ಸ್ಥಿತೋ ಜಡತಯಾ ನ ಜಾಗರ್ತಿ ಭವಭ್ರಮೇ || ೨೩ ||

ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ಸುಖೀ |
ಇತ್ಯನರ್ಥಮಹಾರಜ್ಜ್ವಾ ವಲಿತೋ ವಶತಾಂ ಗತಃ || ೨೪ ||

---

೨೦. ಈ ಹತ್ತಿರಹತ್ತಿರದ ಈ ಮೂವರಲ್ಲಿ ಬ್ರಾಹ್ಮಣನು ಭಸ್ಮವಾದನು. ರಾಜನು ಶವವಾಗಿ ಅಂತಃಪುರದಲ್ಲಿ ಮಾಲಾರಾಶಿ ಮಧ್ಯದಲ್ಲಿರುವನು.

೨೧. ಈ ಸಂಸಾರ ಚಕ್ರದಲ್ಲಿ ನಿನಗೆ ಮೂರನೆಯ ಗಂಡನಾಗಿದ್ದವನು ಸಂಸಾರ ಮಹಾಜಲಧಿಯಲ್ಲಿ ಬಿದ್ದು ಭ್ರಾಂತನಾಗಿ,

೨೨. ಭೋಗಗಳೆಂಬ ತೆರೆಗಳಲ್ಲಿ ಸಿಕ್ಕಿ ಒದ್ದಾಡುತ್ತ, ಬುದ್ಧಿಗೆಟ್ಟು, ಚಿದ್ವೃತ್ತಿಯೆಲ್ಲವೂ ಜಡವೂ ಶಿಥಿಲವೂ ಆಗಿ, ಸಂಸಾರಾಂಬುಧಿಯಲ್ಲಿ ಆಮೆಯಾಗಿರುವನು (ಎಲ್ಲಿಯೋ ಅಡಿಯಲ್ಲಿ ಬಿದ್ದಿರುವನು).

೨೩. ಚಿತ್ರವಿಚಿತ್ರಗಳಾಗಿ ಕಷ್ಟವೂ ದುಃಖಕರವೂ ಆದ ರಾಜಕಾರ್ಯಗಳನ್ನು ಮಾಡುತ್ತ ಜಡನಾಗಿ ಸುಪ್ತನಾಗಿರುವನು. ಭವವು ಭ್ರಮವೆಂಬ ವಿಷಯದಲ್ಲಿ ಅವನಿನ್ನೂ ಎಚ್ಚತ್ತಿಲ್ಲ.

೨೪. ನಾನು ಈಶ್ವರನು, ನಾನು ಭೋಗಿಯು, ನಾನು ಸಿದ್ಧನು, ನಾನು ಬಲವಂತನು, ಸುಖಿಯು, ಎಂಬ ಅನರ್ಥಮಹಾರಜ್ಜುವಿನಿಂದ ಸುತ್ತುವಡೆದು ಪರವಶನಾಗಿರುವನು.

ತತ್ಕಸ್ಯ ವದ ಭರ್ತುಸ್ತ್ವಾಂ ಸಮೀಪಂ ವರವರ್ಣಿನಿ |
ವಾತ್ಯಾ ವನಾಂತರಂ ಗಂಧಲೇಖಾಮಿವ ವನಾನ್ನಯೇ || ೨೫ ||

ಅನ್ಯ ಏವ ಹಿ ಸಂಸಾರಃ ಸೋಽನ್ಯೋ ಬ್ರಹ್ಮಾಂಡಮಂಡಪಃ |
ಅನ್ಯಾ ಏವ ತತಾ ವತ್ಸೇ ವ್ಯವಹಾರಪರಂಪರಾಃ || ೨೬ ||

ಸಂಸಾರಮಂಡಲಾನೀಹ ತಾನಿ ಪಾರ್ಶ್ವೇ ಸ್ಥಿತಾನ್ಯಪಿ |
ದೂರಂ ಯೋಜನಕೋಟೀನಾಂ ಕೋಟಯಸ್ತೇಷ್ವಿಹಾಂತರಂ || ೨೭ ||

ಆಕಾಶಮಾತ್ರಮೇತೇಷಾಮಿದಂ ಪಶ್ಯ ವಪುಃ ಪುನಃ |
ಮೇರುಮಂದರ ಕೋಟೀನಾಂ ಕೋಟಯಸ್ತೇಷ್ವವಸ್ಥಿತಾಃ || ೨೮ ||

ಪರಮಾಣೌ ಪರಮಾಣೌ ಸರ್ಗವರ್ಗಾನಿರರ್ಗಲಂ |
ಮಹಾಚಿತೇಃ ಸ್ಫುರಂತ್ಯರ್ಕರುಚೀವ ತ್ರಸರೇಣವಃ || ೨೯ ||

ಮಹಾರಂಭಗುರೂಣ್ಯೇವಮಪಿ ಬ್ರಹ್ಮಾಂಡಕಾನಿ ಹಿ |
ತುಲಯಾ ಧಾನಕಾಮಾತ್ರಮಪಿ ತಾನಿ ಭವಂತಿ ನೋ || ೩೦ ||

---

೨೫. ಅದರಿಂದ, ಎಲೆ ಲಕ್ಷಣವತಿಯೆ! ವನದಿಂದ ವನಕ್ಕೆ ಗಂಧವನ್ನು ಹೊತ್ತುಕೊಂಡು ಹೋಗುವ ಗಾಳಿಯಂತೆ, ನಿನ್ನನ್ನು ಯಾವ ಗಂಡನ ಬಳಿಗೆ ಕರೆದುಕೊಂಡು ಹೋಗಲಿ?

೨೬. ಸಂಸಾರವೆಂಬುದೇ ಒಂದು: ಬ್ರಹ್ಮಾಂಡ ಮಂಡಪವೇ ಒಂದು: ವತ್ಸೆ! ಅಲ್ಲಿ ವಿಸ್ತಾರವಾಗಿ ಹರಡಿರುವ ವ್ಯವಹಾರ ಪರಂಪರೆಗಳೇ ಬೇರೆ.

೨೭. ಸಂಸಾರ ಮಂಡಲಗಳು ಮಗ್ಗುಲು ಮಗ್ಗುಲಲ್ಲಿಯೇ ಇದ್ದರೂ ಒಂದಕ್ಕೊಂದಕ್ಕೆ ಕೋಟಿ ಕೋಟಿ ಯೋಜನೆಗಳ ದೂರವುಂಟು.

೨೮. ಈ ಸಂಸಾರ ಮಂಡಲಗಳ ಸ್ವರೂಪವು ಆಕಾಶಮಾತ್ರವೆಂಬುದನ್ನು ಮತ್ತೆ ನೋಡು. ಈ ಆಕಾಶದಲ್ಲಿ ಮೇರುಮಂದರಗಳು ಕೋಟಿಗಟ್ಟಲೆಯಾಗಿ ಕುಳಿತಿರುವುವು ಎಂಬುದನ್ನು ನೋಡು.

೨೯-೩೦ ಪರಮಾಣು ಪರಮಾಣುವಿನಲ್ಲಿಯೂ, ಯಾವುದೊಂದು ತಡೆಯೂ ಇಲ್ಲದೆ, ಬಿಸಿಲುಕೋಲಿನಲ್ಲಿ ತ್ರಸರೇಣುಗಳು ಹಾರಾಡುವಂತೆ, ಮಹಾಚಿತ್ತಿನಿಂದ, ಸಮುದ್ರ ಪರ್ವತಾದಿಗಳಿಂದ ಮಹಾ ಗುರುಗಳಾಗಿ ತೋರುವ ಬ್ರಹ್ಮಾಂಡಗಳು

ನಾನಾರತ್ನಾಮಲೋದ್ಯೋತೋ ವನವದ್ಭಾತಿ ಖೇ ಯಥಾ |
ಪೃಥ್ವ್ಯಾದಿಭೂತರಹಿತಾ ಜಗಚ್ಚಿದ್ಭಾತಿ ಚಿಂತಯಾ || ೩೧ ||

ಕಚತಿ ಜ್ಞಪ್ತಿರೇವೇದಂ ಜಗದಿತ್ಯಾದಿನಾತ್ಮನಿ |
ನತು ಪೃಥ್ವ್ಯಾದಿ ಸಂಪನ್ನಂ ಸರ್ಗಾದಾವೇವ ಕಿಂಚನ || ೩೨ ||

ಯಥಾ ತರಂಗಃ ಸರಸಿ ಭೂತ್ವಾ ಭೂತ್ವಾ ಪುನರ್ಭವೇತ್ |
ವಿಚಿತ್ರಾಕಾರಕಾಲಾಂಗದೇಶಾ ಜ್ಞಪ್ತಾವಲಂ ತಥಾ || ೩೩ ||

ಲೀಲೋವಾಚ :—

ಏವಮೇತಜ್ಜಗನ್ಮಾತರ್ಮಯಾ ಸ್ಮೃತಮಿಹಾಧುನಾ |
ಮಮೇದಂ ರಾಜಸಂ ಜನ್ಮ ನ ತಮೋ ನ ಚ ಸಾತ್ವಿಕಂ || ೩೪ ||

ಬ್ರಹ್ಮಣಸ್ತ್ವವತೀರ್ಣಾಯಾ ಅಷ್ಟೌ ಜನ್ಮಶತಾನಿ ಮೇ |
ನಾನಾಯೋನೀನ್ಯತೀತಾನಿ ಪಶ್ಯಾಮೀವಾಧುನಾ ಪುನಃ || ೩೫ ||

ಹುಟ್ಟಿಬರುವುವು. ಅವನ್ನು ಆ ಚಿತ್ತಿಗೆ ಹೋಲಿಸಿದರೆ ಅವು ಧಾನ್ಯ ಬೀಜದಷ್ಟಾದರೂ ಆಗುವುವೋ ಇಲ್ಲವೋ ?

೩೧. ನಿರ್ಮಲವಾದ ನಾನಾ ರತ್ನಗಳ ಕಾಂತಿಯಿಂದ ಕೂಡಿರುವ ವನವು ಆಕಾಶದಲ್ಲಿ ಕಾಣುವಂತೆ, ಚಿತ್ತು ಪೃಥ್ವ್ಯಾದಿಭೂತರಹಿತವಾಗಿದ್ದೂ (ಅನಾದಿ ಅವಿದ್ಯಾ) ವಾಸನೆಯಿಂದ ಜಗತ್ತಾಗಿ ಕಾಣುವುದು.

೩೨. ಜ್ಞಪ್ತಿಯೇ ಜಗತ್ತು ಮೊದಲಾದ ಹೆಸರುಗಳಿಂದ ತನ್ನಲ್ಲಿಯೇ ಹೊಳೆಯುವುದು. ಸೃಷ್ಟ್ಯಾದಿಯಲ್ಲಿಯೂ ಪೃಥಿವ್ಯಾದಿ ಭೂತಗಳಿರುವುದಿಲ್ಲ.

೩೩. ಕೊಳದಲ್ಲಿ ತರಂಗಗಳು ಮೂಡಿ ಮೂಡಿ ಮತ್ತೆ ಮೂಡುವಂತೆ ಜ್ಞಪ್ತಿಯಲ್ಲಿ ವಿಚಿತ್ರಾಕಾರವಾದ ದಿನರಾತ್ರಿಗಳೆಂಬ ಕಾಲವೂ, ಭುವನ ಭುವನಾಂತರಗಳೆಂಬ ದೇಶವೂ ಉಳ್ಳ ಜಗತ್ತು ಮೂಡುವುದು.

೩೪. ಲೀಲೆಯು ಕೇಳಿದಳು :—ಎಲೌ ಜಗನ್ಮಾತೆಯೇ, ಈಗ ನನಗೆ ನೆನಪು ಬಂದಿತು. ಈ ನನ್ನ ಜನ್ಮವು ರಾಜಸವು: ತಾಮಸವೂ ಅಲ್ಲ ಸಾತ್ವಿಕವೂ ಅಲ್ಲ.

೩೫. ಬ್ರಹ್ಮನಿಂದ ಬಂದ ನನಗೆ ಇದುವರೆಗೆ ಎಂಟುನೂರು ಜನ್ಮಗಳು ನಾನಾ ಯೋನಿಗಳಲ್ಲಿ ಆದುವು. ಅವೆಲ್ಲವನ್ನೂ ಮತ್ತೆ ಈಗ ಕಾಣುತ್ತಿರುವೆನು.

ಸಂಸಾರಮಂಡಲೇ ದೇವಿ ಕಸ್ಮಿಂಶ್ಚಿದಭವಂ ಪುರಾ |
ಲೋಕಾಂತರಾಬ್ಜಭ್ರಮರೀ ವಿದ್ಯಾಧರವರಾಂಗನಾ || ೩೬ ||

ದುರ್ವಾಸನಾಕಲುಷಿತಾ ತತೋಽಹಂ ಮಾನುಷೀ ಸ್ಥಿತಾ |
ಸಂಸಾರಮಂಡಲೇಽನ್ಯಸ್ಮಿನ್ ಪನ್ನಗೇಶ್ವರಕಾಮಿನೀ || ೩೭ ||

ಕದಂಬಕುಂದ ಜಂಬೀರಕರಂಜವನವಾಸಿನೀ |
ಪತ್ರಾಂಬರಧರಾ ಶ್ಯಾಮಾ ಶಬರ್ಯಹಮಥಾಭವಂ || ೩೮ ||

ವನವಾಸನಯಾ ಮುಗ್ಧಾ ಸಂಪನ್ನಾಹಮಥೋದ್ಧತಾ |
ಗುಲುಚ್ಛನಯನಾ ಪತ್ರಹಸ್ತಾ ವನವಿಲಾಸಿನೀ || ೩೯ ||

ಪುಣ್ಯಾಶ್ರಮಲತಾ ಸಾಹಂ ಮುನಿಸಂಗಪವಿತ್ರಿತಾ |
ವನಾಗ್ನಿದಗ್ಧಾ ತಸ್ಯೈವ ಕನ್ಯಾಭೂವಂ ಮಹಾಮುನೇಃ || ೪೦ ||

---

೩೬. ಯಾವುದೋ ಒಂದು ಸಂಸಾರ ಮಂಡಲದಲ್ಲಿ ಹಿಂದೆ ಹುಟ್ಟಿದೆನು. ಲೋಕಾಂತರವೆಂಬ ಕಮಲದ ದುಂಬಿಯಾಗಿ ಒಬ್ಬ ವಿದ್ಯಾಧರಿಯಾದೆನು.

೩೭. ಆಗ ಅಶುಭವಾಸನೆಗಳು ಬಲಿತುದರ ಫಲವಾಗಿ ನಾನು ಮಾನುಷಿಯಾದೆನು. ಇನ್ನೊಂದು ಸಂಸಾರ ಮಂಡಲದಲ್ಲಿ ಸರ್ಪರಾಜನ ಹೆಂಡಿತಿಯಾದೆನು.

೩೮. ಅನಂತರ ಕದಂಬ, ಕುಂದ, ಜಲವೀರ, ಕರಂಜ ವನಗಳಲ್ಲಿ ವಾಸಮಾಡುತ್ತ ಸೊಪ್ಪುಸೆದೆಗಳನ್ನು ಕಟ್ಟಿಕೊಂಡು ತಿರುಗುವ ಶ್ಯಾಮಾಶಬರಿಯಾಗಿದ್ದೆನು.

೩೯. ವನವಾಸನೆಯಿಂದ ಏನೂ ಅರಿಯದ ಮುಗ್ಧಳಾಗಿ, ದುಷ್ಕರ್ಮ ಸಂಚಯದಿಂದ, ಪತ್ರಹಸ್ತಳೂ, ಪುಷ್ಪಗುಚ್ಛಲೋಚನಗಳೂ ಆದ ವನಲತೆಯಾದೆನು.

೪೦. ಪುಣ್ಯಾಶ್ರಮದ ಲತೆಯಾಗಿ ಮುನಿಸಂಗದಿಂದ ಪವಿತ್ರಿತವಾಗಿ, ದವಾಗ್ನಿಗೆ ಸಿಕ್ಕಿ ದಗ್ಧವಾಗಿ ಯಾರ ಆಶ್ರಮದಲ್ಲಿ ಲತೆಯಾಗಿದ್ದೆನೋ ಅದೇ ಮುನಿಯ ಮಗಳಾದೆನು.

ಅಸ್ತ್ರೀತ್ವಫಲದಾತೃಣಾಂ ಕರ್ಮಣಾಂ ಪರಿಣಾಮತಃ |
ರಾಜಾಹಮಭವಂ ಶ್ರೀಮಾನ್ ಸುರಾಷ್ಟ್ರೇಷು ಸಮಾಃ ಶತಂ || ೪೧ ||

ತಾಲೀನಾಂ ತಲಕಚ್ಛೇಷು ರಾಜದುಷ್ಕೃತದೋಷತಃ |
ನಕುಲೀ ನವವರ್ಷಾಣಿ ಕುಷ್ಠನಷ್ಟಾಂಗಿಕಾಭವಂ || ೪೨ ||

ವರ್ಷಾಣ್ಯಷ್ಟೌ ಸುರಾಷ್ಟ್ರೇಷು ದೇವಿ ಗೋತ್ವಂ ಕೃತಂ ಮಯಾ |
ಮೋಹಾದ್ದುರ್ಜನದುಷ್ಟಾಜ್ಞ ಬಾಲಗೋಪಾಲಲೀಲಯಾ || ೪೩ ||

ವಿಹಂಗ್ಯಾ ವ್ಯೆರವಿನ್ಯಸ್ತಾ ವಾಗುರಾ ವಿಪಿನಾವನೌ |
ಕ್ಲೇಶೇನ ಮಹತಾಚ್ಛಿನ್ನಾ ಅಧಮಾ ವಾಸನಾ ಇವ || ೪೪ ||

ಕರ್ಣಿಕಾಕ್ರೋಡಶಯ್ಯಾಸು ವಿಶ್ರಾಂತಮಲಿನಾ ಸಹ |
ಪದ್ಮಕುಡ್ಮಲಕೋಶೇಷು ಭುಕ್ತಕಿಂಜಲ್ಕಯಾ ರಹಃ || ೪೫ ||

---

೪೧. ಪುಂಸ್ತ್ವವನ್ನು ಕೊಡುವ ಕರ್ಮಗಳ ಫಲವಾಗಿ ನಾನು ಸುರಾಷ್ಟ್ರದ ರಾಜನಾಗಿ ಒಂದುನೂರು ವರ್ಷ ಇದ್ದೆನು.

೪೨. ತಾಲವೃಕ್ಷಗಳು ತುಂಬಿದ್ದ ಕಚ್ಛಪ್ರದೇಶದಲ್ಲಿ ನಡೆದ ರಾಜಪಾಪದ ಫಲವಾಗಿ ಕುಷ್ಟದಿಂದ ಕೆಟ್ಟ ದೇಹವುಳ್ಳ ಹೆಣ್ಣು ಮುಂಗುಸಿಯಾಗಿ ಒಂಭತ್ತು ವರ್ಷವಿದ್ದೆನು.

೪೩. ಎಲೌ ದೇವಿಯೆ! ಸುರಾಷ್ಟ್ರದಲ್ಲಿ ಎಂಟುವರ್ಷ ಹಸುವಾಗಿ ದುರ್ಜನರು, ದುಷ್ಟರು, ಅಜ್ಞರು, ಬಾಲರು, ಗೋಪಾಲರು ಇವರೊಡನೆ ಲೀಲೆಯಾಡುತ್ತ ಇದ್ದೆನು.

೪೪. ಮುಂದೆ ನಾನು ವಿಹಂಗಿ (ಹಕ್ಕಿ)ಯಾದಾಗ ವ್ಯಾಧರು ಕಾಡಿನಲ್ಲಿ ಬಲೆಹಾಕಿ ಹಿಡಿದರು. ಅದನ್ನು ನಾನು ಬಹು ಕಷ್ಟದಿಂದ, ಅಧಮವಾಸನೆಯನ್ನು ಕಡಿಯುವಂತೆ ಕಡಿದುಹಾಕಿದೆನು.

೪೫. ಹೆಣ್ಣುದುಂಬಿಯಾಗಿ ಕಮಲ ಕೇಸರಗಳ ಶಯ್ಯೆಯಲ್ಲಿ, ಪದ್ಮಗಳ ಮೊಗ್ಗುಗಳೆಂಬ ಕೋಶಗಳಲ್ಲಿ, ಕಿಂಜಲ್ಕ ಭೋಜನಮಾಡಿ ರಹಸ್ಯವಾಗಿ ದುಂಬಿಯೊಡನೆ ವಿಶ್ರಾಂತಿಪಡೆದೆನು.

ಭ್ರಾಂತಮುತ್ತುಂಗಶೃಂಗಾಸು ಹರಿಣ್ಯಾ ಹಾರಿನೇತ್ರಯಾ |
ವನಸ್ಥಲೀಷು ರಮ್ಯಾಸು ಕಿರಾತಾಹತಮರ್ಮಯಾ || ೪೬ ||

ದೃಷ್ಟಂ ನಷ್ಟಾಸು ದಿಕ್ಷ್ವಬ್ಧಿಕಲ್ಲೋಲೈರುಹ್ಯಮಾನಯಾ |
ಮತ್ಸ್ಯಂಬುಕಚ್ಛಪಾಚ್ಛೋಡೇ ಮೋಘಮಾನನತಾಡನಂ || ೪೭ ||

ಪೀತಂ ಚರ್ಮಣ್ವತೀತೀರೇ ಗಾಯಂತ್ಯಾ ಮಧುರಸ್ವರಂ |
ಪುಲಿಂದ್ಯಾ ಸುರತಾಂತೇಷು ನಾಲಿಕೇರರಸಾಸವಂ || ೪೮ ||

ಸಾರಸೀ ಸರಸಾಲಿನ್ಯಾ ಸೀತ್ಕಾರಮಧುರಸ್ವರಂ |
ಸಾರಸಃ ಸುರತೈಃ ಸ್ವೈರಂ ಸಾಮಂತಶ್ಚಾರುರಂಜಿತಃ || ೪೯ ||

ತಾಲೀತಮಾಲಕುಂಜೇಷು ತರಲಾನನನೇತ್ರಯಾ |
ಕ್ಷೀಬಪ್ರೇಕ್ಷಣವಿಕ್ಷೋಭೈಃ ಕೃತಂ ಕಾಂತಾವಲೋಕನಂ || ೫೦ ||

---

೪೬. ಹರಿಣವಾಗಿ, ಉತ್ತುಂಗ ಶೃಂಗಗಳಲ್ಲಿಯೂ ರಮ್ಯಗಳಾದ ವನಸ್ಪತಿಗಳಲ್ಲಿಯೂ ಮನೋಹರವಾದ ಕಣ್ಣುಗಳುಳ್ಳ, ಕಿರಾತರಿಂದ ಏಟುತಿಂದು ನೊಂದ ಹರಿಣಿಯೊಡನೆ ತಿರುಗಿದೆನು.

೪೭. ಸಮುದ್ರದಲ್ಲಿ ಹೆಣ್ಣು ಮೀನಾಗಿ, ಅಲ್ಲಿನ ಜಲಪ್ರವಾಹಗಳಿಗೆ ಸಿಕ್ಕಿ ಕೊಚ್ಚಿಹೋಗುತ್ತ, ದಿಗ್ಭ್ರಾಂತಿಪಟ್ಟು, ಗಾಳಕ್ಕೆಸಿಕ್ಕಿ ಬೆಸ್ತರಿಂದ ಆಮೆಯ ಬೆನ್ನುಮೂಳೆಯಿಂದ ಮುಖದಮೇಲೆ ಹೊಡೆಸಿಕೊಂಡೆನು.

೪೮. ಚರ್ಮಣ್ವತೀ ತೀರದಲ್ಲಿ ಪುಳಿಂದಿಯಾಗಿದ್ದು ಮಧುರಸ್ವರದಿಂದ ದಿಂದ ಹಾಡುತ್ತ ಸುರತಾಂತದಲ್ಲಿ ನಾಲಿಕೇರರಸಾಸವ (ತೆಂಗಿನ ಹೆಂಡ) ವನ್ನು ಕುಡಿದೆನು.

೪೯. ಸಾರಸಿಯಾಗಿ ನನ್ನ ಪತಿಯಾಗಿದ್ದ ಸಾರಸವನ್ನು ಸಸೀತ್ಕಾರ ಮಧುರಸ್ವರ ಸುರತಗಳಿಂದ ಯಥೇಚ್ಛವಾಗಿ ಸತ್ಕರಿಸಿದೆನು.

೫೦. ತಾಲತಮಾಲ ಕುಂಜಗಳಲ್ಲಿ ಸುಂದರ ನೇತ್ರಮುಖಗಳುಳ್ಳವಳಾಗಿ ಕುಡಿದು ಮತ್ತಳಾಗಿ ಅಲೆಯುತ್ತಿರುವ ನೋಟಗಳಿಂದ ಕಾಂತಾವಲೋಕನವನ್ನು ಮಾಡುತ್ತಿದ್ದೆನು:

ಕನಕಸ್ಯಂದ ಸಂದೋಹ ಸುಂದರೈರಂಗಪಂಜರೈಃ |
ಸ್ವರ್ಗೇಽಪ್ಸರೋಂಬುಜಿನ್ಯಾಶು ತೋಷಿತಾಃ ಸುರಷಟ್ಪದಾಃ || ೫೧ ||

ಮಣಿಕಾಂಚನಮಾಣಿಕ್ಯ ಮುಕ್ತಾನಿಕರಭೂತಲೇ |
ಕಲ್ಪದ್ರುಮವನೇ ಮೇರೌ ಯೂನಾ ಸಹ ರತಂ ಕೃತಂ || ೫೨ ||

ಕಲ್ಲೋಲಾಕುಲಕಚ್ಛಾಸು ಲಸದ್ಗುಚ್ಛಲತಾಸು ಚ |
ವೇಲಾವನ ಗುಹಾಸ್ವಬ್ಧೇಶ್ಚಿರಂ ಕೂರ್ಮತಯಾ ಸ್ಥಿತಂ || ೫೩ ||

ತರತ್ತಾರತರಂಗಾಸು ದೋಲನಂ ಸರಸಾಲಿನಾಂ |
ಚಲಚ್ಛದ ಪಟಾಲೀಷು ರಾಜಹಂಸ್ಯಂ ಮಯಾ ಕೃತಂ || ೫೪ ||

ಶಾಲ್ಮಲೀದಳಲೋಲನಾಮಾಂದೋಲನ ದರಿದ್ರತಾಂ |
ಮಶಕಸ್ಯ ಮಯಾಲೋಕ್ಯ ದೀನಂ ಮಶಕಯಾ ಸ್ಥಿತಂ || ೫೫ ||

ತರತ್ತಾರತರಂಗಾಸು ಚಂಚದ್ವೀಚ್ಯಗ್ರಚುಂಬನೈಃ |
ಭ್ರಾಂತಂ ಶೈಲಸ್ರವಂತೀಷು ಜಲವಂಜುಲಲೀಲಯಾ || ೫೬ ||

---

೫೧. ಕರಗಿದ ಚಿನ್ನದಂತೆ ಸುಂದರವಾದ ದೇಹವುಳ್ಳ ಅಪ್ಸರೆಯಾಗಿ ಸ್ವರ್ಗದಲ್ಲಿ ಅಬ್ಜಿನಿಯು ಷಟ್ಪದಗಳನ್ನು ಆರಾಧಿಸುವಂತೆ ಎಷ್ಟೋ ಜನ ಸುರರನ್ನು ಆರಾಧಿಸಿದೆನು.

೫೨. ಮಣಿ, ಕಾಂಚನ, ಮಾಣಕ್ಯ, ಮುಕ್ತಾನಿಕರಗಳುಳ್ಳ ಭೂತಲದಲ್ಲಿ, ಕಲ್ಪವೃಕ್ಷಗಳ ತೋಪುಗಳಲ್ಲಿ, ಮೇರು ಪರ್ವತದಲ್ಲಿ ತರುಣರೊಡನೆ ಕ್ರೀಡಿಸಿದೆನು.

೫೩. ನೀರು ನಿಂತಿರುವ ಕಚ್ಛ ದೇಶಗಳಲ್ಲಿ, ಚೆನ್ನಾಗಿ ಬೆಳೆದಿರುವ ಪೊದರುಗಳಲ್ಲಿ, ಸಮುದ್ರತೀರದ ಗುಹೆಗಳಲ್ಲಿ ಆಮೆಯಾಗಿದ್ದೆನು.

೫೪. ಅಲೆಗಳಿಂದ ಚಂಚಲವಾದ ಸರಸಿಗಳಲ್ಲಿ ವಿಹರಿಸುತ್ತ, ಗಾಳಿಗೆ ಅಲೆಯುತ್ತಿರುವ ರೆಕ್ಕೆ ಪುಕ್ಕಗಳಲ್ಲಿ ಕಮಲ ಭ್ರಾಂತಿಯಿಂದ ಬಂದು ಕುಳಿತ ದುಂಬಿಗಳನ್ನು ತೂಗುವ ರಾಜಹಂಸಿಯಾಗಿದ್ದೆನು.

೫೫. ಶಾಲ್ಮಲೀದಲದಲ್ಲಿ ಸೇರಿಕೊಂಡು ಆಂದೋಲನ ದರಿದ್ರತೆಯನ್ನು ಅನುಭವಿಸುತ್ತಿರುವ ಮಶಕವನ್ನು ಕಂಡು ನಾನೂ ದೀನಳಾದ ಮಶಕವಾಗಿ ಕುಳಿತಿದ್ದೆನು.

೫೬. ಹಾರುತ್ತಿರುವ ನೀರಿನ ತೆರೆಗಳುಳ್ಳ ಗಿರಿನದಿಗಳಲ್ಲಿ ಬಳಕುತ್ತ ತಲೆಗೆ ತಲೆ ಸೋಕಿಸಿಕೊಳ್ಳುವ ವೇತಸವಾಗಿ ಇದ್ದೆನು.

ಗಂಧಮಾದನ ಮಂದಾರ ಮಂದಿರೇ ಮದನಾತುರಾಃ |
ಪಾತಿತಾಃ ಪಾದಯೋಃ ಪೂರ್ವಂ ವಿದ್ಯಾಧರಕುಮಾರಕಾಃ || ೫೭ ||
ಕೇರ್ಣಕರ್ಪೂರಪೂರೇಷು ತಲ್ಪೇಷು ವ್ಯಸನಾತುರಾ |
ಚಿರಂ ವಿಲುಲಿತಾಸ್ಮೀಂದು ಬಿಂಬೇಷ್ವಿವ ಶಶಿಪ್ರಭಾ || ೫೮ ||

ಯೋನಿಷ್ವನೇಕವಿಧದುಃಖಶತಾನ್ವಿತಾಸು
ಭ್ರಾಂತಂ ಮಯೋನ್ನಮನಸನ್ನಮನಾಕುಲಾಂಗ್ಯಾ |
ಸಂಸಾರದೀರ್ಘಸರಿತಶ್ಚಲಯಾ ಲಹರ್ಯಾ
ದುರ್ವಾರವಾತಹರಿಣೀಸರಣಕ್ರಮೇಣ || ೫೯ ||

ಇತ್ಯಾರ್ಷೇ ಶ್ರೀ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
“ ಜನ್ಮಾಂತರವರ್ಣನಂ ” ನಾಮ ಸಪ್ತವಿಂಶಃ ಸರ್ಗಃ

---

೫೭. ವಿದ್ಯಾಧರಿಯಾಗಿ ಗಂಧಮಾದನ, ಮಂದಾರ (ಪರ್ವತ) ಮಂದಿರಗಳಲ್ಲಿ ಮದನಾತುರರಾದ ವಿದ್ಯಾಧರ ಕುಮಾರಕನೇಕರು ನನ್ನ ಕಾಲಿಗೆ ಬೀಳುವಂತೆ ಮಾಡಿದ್ದೆನು.

೫೮. ಕರ್ಪೂರದಿಂದ ಇಟ್ಟಡಿಗಿರುವ ಹಾಸುಗೆಗಳಲ್ಲಿ ವಿಯೋಗವ್ಯಸನದಿಂದ ಅಳುತ್ತ, ಇಂದುಬಿಂಬಗಳಲ್ಲಿ ಶಶಿಪ್ರಭೆಯು ಹೊರಳಾಡುವಂತೆ, ಬಿದ್ದು ಎಷ್ಟೋ ಕಾಲ ಹೊರಳಾಡುತ್ತಿದ್ದೆನು.

೫೯. ಹಲವು ತೆರದ ದುಃಖಗಳಿಂದ ಕೂಡಿದ ನಾನಾ ಜನ್ಮಗಳಲ್ಲಿ, ತಪ್ಪಿಸಿಕೊಳ್ಳಲಾರದೆ ಗಾಳಿಯ ಜಾಡನ್ನು ಹಿಡಿದು ಸಂಚರಿಸುವ ವಾತಹರಣಿಯಂತೆ, ಸಂಸಾರವೆಂಬ ದೀರ್ಘತರಂಗಿಣಿಯ ಲಹರಿಗೆ ಸಿಕ್ಕಿ ಊರ್ಧ್ವಗತಿ ಅಧೋಗತಿಗಳಲ್ಲಿ ಒದ್ದಾಡಿದೆನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ “ ಜನ್ಮಾಂತರ ವರ್ಣನ ”
ಎಂಬ ಇಪ್ಪತ್ತೇಳನೆಯ ಸರ್ಗವು.

ಅಷ್ಟಾವಿಂಶಃ ಸರ್ಗಃ

ಶ್ರೀ ರಾಮ ಉವಾಚ—

ವಜ್ರಾಂಗಸಾರಾದ್ಬ್ರಹ್ಮಾಂಡಕುಡ್ಯಾನ್ನಿಬಿಡಮಂಡಲಾತ್ |
ಕೋಟಿಯೋಜನಸಂಪುಷ್ಟಾತ್ಕಥಂ ತೇ ನಿರ್ಗತೇಽಬಲೇ || ೧ ||

ಶ್ರೀ ವಸಿಷ್ಠ ಉವಾಚಃ—

ಕ್ವ ಬ್ರಹ್ಮಾಂಡಂ ಕ್ವ ತದ್ಭಿತ್ತಿಃ ಕ್ವಾತ್ರಾಸೌ ವಜ್ರಸಾರತಾ |
ಕಿಲಾವಶ್ಯಂ ಸ್ಥಿತೇ ದೇವ್ಯಾವಂತಃಪುರವರಾಂಬರೇ || ೨ ||

ತಸ್ಮಿನ್ನೇವ ಗಿರಿಗ್ರಾಮೇ ತಸ್ಮಿನ್ನೇವಾಲಯಾಂಬರೇ |
ಬ್ರಾಹ್ಮಣಃ ಸ ವಸಿಷ್ಠಾಖ್ಯ ಆಸ್ವಾದಯತಿ ರಾಜತಾಂ || ೩ ||

ತಮೇವ ಮಂಡಪಾಕಾಶಕೋಣಕಂ ಶೂನ್ಯಮಾತ್ರಕಂ |
ಚತುಃಸಮುದ್ರಪರ್ಯಂತಂ ಭೂತಲಂ ಸೋಽನುಭೂತವಾನ್ || ೪ ||

ಇಪ್ಪತ್ತೆಂಟನೆಯ ಸರ್ಗ

೧. ಶ್ರೀ ರಾಮನು ಕೇಳಿದನು :—ವಜ್ರಸಾರವೂ ನಿಬಿಡಮಂಡಲವೂ ಕೋಟಿಯೋಜನದ ದಪ್ಪವೂ ಇದ್ದ ಬ್ರಹ್ಮಾಂಡದ ಗೋಡೆಯನ್ನು ಆ ಅಬಲೆಯರು ಹೇಗೆ ದಾಟಿದರು ?

೨. ಶ್ರೀ ವಸಿಷ್ಠನು ಹೇಳಿದನು :—ಬ್ರಹ್ಮಾಂಡವೆಲ್ಲಿ ? ಅದರ ಭಿತ್ತಿಯೆಲ್ಲಿ ? ಅದರ ವಜ್ರಸಾರತೆಯೆಲ್ಲಿ? ಆ ದೇವಿಯರು ಅಂತಃಪುರಾಕಾಶದಲ್ಲಿಯೇ ಇದ್ದರಲ್ಲವೆ ?

೩. ಆ ಗಿರಿಗ್ರಾಮದಲ್ಲಿಯೇ, ಅದೇ ಮನೆಯ ಆಕಾಶದಲ್ಲಿಯೇ, ವಸಿಷ್ಠನೆಂಬ ಬ್ರಾಹ್ಮಣನೂ ರಾಜತೆಯನ್ನು ಅನುಭವಿಸುವನು.

೪. ಮಂಡಪದ ಆಕಾಶದ ಒಂದು ಮೂಲೆಯಲ್ಲಿಯೇ ಚತುಸ್ಸಮುದ್ರ ಮುದ್ರಿತವಾದ ಭೂತಲದ ಸಾಮ್ರಾಜ್ಯವನ್ನು ಅವನು ಅನುಭವಿಸಿದನು.

ಆಕಾಶಾತ್ಮನಿ ಭೂಪೀಠಂ ತಸ್ಮಿಂಸ್ತದ್ರಾಜಪತ್ತನಂ |
ರಾಜಸದ್ಮಾನುಭವತಿ ಸ ಚ ಸಾ ಚಾಪ್ಯರುಂಧತೀ || ೫ ||

ಲೀಲಾಭಿಧಾನಾ ಸಾ ಜಾತಾ ತಯಾ ಚ ಜ್ಞಪ್ತಿರರ್ಚಿತಾ |
ಜ್ಞಪ್ತ್ಯಾ ಸಹ ಸಮುಲ್ಲಂಘ್ಯ ಖಮಾಶ್ಚರ್ಯಮನೋಹರಂ || ೬ ||

ಪ್ರಾದೇಶಮಾತ್ರೇ ನಭಸಿ ಸಾ ತತ್ರೈವ ಗೃಹೋದರೇ |
ಬ್ರಹ್ಮಾಂಡಾಂತರಮಾಸಾದ್ಯ ಗಿರಿಗ್ರಾಮಕಮಂದಿರೇ || ೭ ||

ಬ್ರಹ್ಮಾಂಡಾತ್ಪರಿನಿರ್ಗತ್ಯ ಸ್ವಗೃಹೇ ಸ್ಥಿತಿಮಾಯಯೌ |
ಸ್ವಪ್ನಾತ್ಸ್ವಪ್ನಾಂತರಂ ಪ್ರಾಪ್ಯ ಯಥಾ ತಲ್ಪಗತಃ ಪುಮಾನ್ || ೮ ||

ಪ್ರತಿಭಾಮಾತ್ರಮೇವೈತತ್ ಸರ್ವಮಾಕಾಶಮಾತ್ರಕಂ |
ನ ಬ್ರಹ್ಮಾಂಡಂ ನ ಸಂಸಾರೋ ನ ಕುಡ್ಯಾದಿನ ದೂರತಾ || ೯ ||

ಸ್ವಚಿತ್ತಮೇವ ಕಚತಿ ತಯೋಸ್ತಾದೃಂಗ್ಮನೋಹರಂ |
ವಾಸನಾಮಾತ್ರಸೋಲ್ಲೇಖಂ ಕ್ವ ಬ್ರಹ್ಮಾಂಡಂ ಕ್ವ ಸಂಸೃತಿಃ || ೧೦ ||

---

೫. ಆಕಾಶಾತ್ಮದಲ್ಲಿ ಭೂಪೀಠವನ್ನೂ ಅದರಲ್ಲಿ ಆ ರಾಜಧಾನಿಯನ್ನೂ ಅರಮನೆಯನ್ನೂ ಆ ವಸಿಷ್ಠನೂ ಆ ಅರುಂಧತಿಯೂ ಅನುಭವಿಸಿದರು.

೬-೮. ಆ ಅರುಂಧತಿಯೇ ಲೀಲೆಯಾಗಿ ಹುಟ್ಟಿದುದೂ: ಜ್ಞಪ್ತಿ ದೇವಿಯನ್ನು ಅರ್ಚಿಸಿದುದೂ: ಆ ದೇವಿಯೊಡನೆ ಆಶ್ಚರ್ಯ ಮನೋಹರವಾಗುವಂತೆ ಆಕಾಶಮಂಡಲವನ್ನು ದಾಟಿದುದೂ ಗೇಣುದ್ದದ ಆ ಮನೆಯ ಒಳಗಿರುವ ಆಕಾಶದಲ್ಲಿಯೇ! ಮತ್ತೊಂದು ಬ್ರಹ್ಮಾಂಡಕ್ಕೆ ಹೋದುದೂ ಗಿರಿಗ್ರಾಮಕ ಮಂದಿರದಲ್ಲಿಯೇ! ಆ ಬ್ರಹ್ಮಾಂಡದಿಂದ ಹಿಂತಿರುಗಿ ಬಂದು ನಿಂತುದೂ ಸ್ವಗೃಹದಲ್ಲಿಯೇ! (ಅದು ಹೇಗೆಂದರೆ) ತನ್ನ ಮಂಚದಲ್ಲಿಯೇ ಮಲಗಿದ್ದ ಪುರುಷನು ಮಾತ್ರ ಕನಸಿನಿಂದ ಕನಸಿಗೆ ಹೋಗಿ ಸುತ್ತಿಬಂದಂತೆ.

೯. ಇದೆಲ್ಲವೂ ಪ್ರತಿಭಾಮಾತ್ರಕವಾದುದು. ಎಲ್ಲವೂ ಆಕಾಶಾತ್ಮಕವು. ಬ್ರಹ್ಮಾಂಡವೂ ಇಲ್ಲ: ಸಂಸಾರವೂ ಇಲ್ಲ: ಗೋಡೆಯೂ ತಲ್ಲ: ದೂರವೂ ಇಲ್ಲ.

೧೦. ಆ ದೇವಿಯರ ಚಿತ್ತವೇ ಒಂದು 'ಝೋಕು' ಹೊಡೆದು, ಹಾಗೆಲ್ಲ

(ಪ್ರತಿಭಾ-ಭ್ರಾಂತಿಃ-ತನ್ಮಾತ್ರಂ-ತಾ. ಪ್ರ.)

ನಿರಾವರಣಮೇವೇದಂ ಜ್ಞಪ್ತ್ಯಾಕಾಶಮನಂತಕಂ |
ಕಿಂಚಿತ್ ಸ್ವಚಿತ್ತೇನೋನ್ನೀತಂ ಸ್ಪಂದಯುಕ್ತ್ಯೇವ ಮಾರುತಃ ‖ ೧೧ ‖

ಚಿದಾಕಾಶಮಜಂ ಶಾಂತಂ ಸರ್ವತ್ರೈವ ಹಿ ಸರ್ವದಾ |
ಚಿತ್ತ್ವಾಜ್ಜಗದಿವಾಭಾತಿ ಸ್ವಯಮೇವಾತ್ಮನಾತ್ಮನಿ ‖ ೧೨ ‖

ಯೇನ ಬುದ್ಧಂ ತು ತಸ್ಯೈತದಾಕಾಶಾದಪಿ ಶೂನ್ಯಕಂ |
ನ ಬುದ್ಧಂ ಯೇನ ತಸ್ಯೈತದ್ವಜ್ರಸಾರಾಚಲೋಪಮಂ ‖ ೧೩ ‖

ಗೃಹ ಏವ ಯಥಾ ಸ್ವಪ್ನೇ ನಗರಂ ಭಾತಿ ಭಾಸುರಂ |
ತಥೈತದಸದೇವಾಂತಶ್ಚಿದ್ಧಾತೌ ಭಾತಿ ಭಾಸ್ವರಂ ‖ ೧೪ ‖

ಯಥಾ ಮರೌ ಜಲಂ ಬುದ್ಧಂ ಕಟಕತ್ವಂ ಚ ಹೇಮನಿ |
ಅಸತ್ಸದಿವ ಭಾತೀದಂ ತಥಾ ದೃಶ್ಯತ್ವಮಾತ್ಮನಿ ‖ ೧೫ ‖

ಹೊಳೆಯಿತು. ವಾಸನಾಬಲದಿಂದ ಆಯಾ ಪದಾರ್ಥದ ರೂಪವಾಗಿ ಚಮಕಿಸಿತು. ಬ್ರಹ್ಮಾಂಡವೆಲ್ಲಿ? ಸಂಸಾರವೆಲ್ಲಿ?

೧೧ ಅನಂತವಾಗಿರುವ ಚಿದಾಕಾಶವು ನಿರಾವರಣವೇ, ಆಗಿರುವುದು. ಆಕಾಶದಸ್ಪಂದವೇ ಮಾರುತವಾದಂತೆ, ಅದೇ ಚಿದಾಕಾಶವೇ ಈ ಎಲ್ಲ ರೂಪ ಗಳಲ್ಲಿ ಕಂಡಿತು. ಅಲ್ಲದೆ ಅವರೂ ಸ್ವಚಿತ್ತದಿಂದ ಅದನ್ನು ಸೃಷ್ಟಿಸಲಿಲ್ಲ.

೧೨. ಅಜವೂ ಶಾಂತವೂ ಆಗಿರುವ ಚಿದಾಕಾಶವು ಯಾವಾಗಲೂ, ಎಲ್ಲೆಲ್ಲೂ, ಸ್ವಯಂ, ತಾನೇ, ತನ್ನಲ್ಲಿಯೇ, ತನ್ನ ಚಿತ್ತ್ವದಿಂದಲೇ ಜಗದ್ರೂಪ ವಾಗಿ ತೋರುವುದು.

೧೩. ಚಿತ್ತು ಆಕಾಶಕ್ಕಿಂತಲೂ ಶೂನ್ಯವೆಂಬುದು ಯಾರಿಗೆ ಗೊತ್ತೋ ಆವನಿಗೆ "ಬ್ರಹ್ಮಾಂಡವು ವಜ್ರಸಾರವು ಪರ್ವತದಂತಿರುವುದು ಎಂಬುದು ಯಾವುದೂ ಇಲ್ಲ"ವೆಂಬುದು ಗೊತ್ತು.

೧೪. ಮನೆಯಲ್ಲಿ ಮಲಗಿ ಕನಸು ಕಾಣುತ್ತಿರುವವನಿಗೆ ಸುಂದರವಾದ ನಗರವು ಕಾಣಿಸುವಂತೆ, ಆ ಚಿದ್ಧಾತುವಿನಲ್ಲಿ ಅಸತ್ತಾಗಿದ್ದರೂ ಸತ್ ಆಗಿರುವಂತೆ ಈ ಬ್ರಹ್ಮಾಂಡದ ಸುಂದರ ದೃಶ್ಯವು ಕಾಣುವುದು.

೧೫. ಮರುಭೂಮಿಯಲ್ಲಿ ಜಲವು ಕಾಣುವಂತೆ, ಚಿನ್ನದಲ್ಲಿ ಕಟಕತ್ವವು ಕಾಣುವಂತೆ, ಆತ್ಮನಲ್ಲಿಯೇ ದೃಶ್ಯತ್ವವು, ಅಸತ್ತಾಗಿದ್ದರೂ ಸತ್ತಾಗಿರುವಂತೆ ಕಾಣುವುದು.

ಏವಮಾಕಥಯಂತ್ಯೌ ತೇ ಲಲನೇ ಲಲಿತಾಕೃತೀ |
ಗೃಹಾನ್ನಿರ್ಯಯತುರ್ಬಾಹ್ಯಂ ಚಾರುಚಂಕ್ರಮಣಕ್ರಮೈಃ || ೧೬ ||

ಅದೃಶ್ಯೇ ಗ್ರಾಮಲೋಕೇನ ಪ್ರೇಕ್ಷಮಾಣೇ ಪುರೋಗಿರಿಂ |
ಚುಂಬಿತಾಕಾಶಕುಹರಂ ಸಂಸ್ಪೃಷ್ಟಾದಿತ್ಯಮಂಡಲಂ || ೧೭ ||

ನಾನಾವರ್ಣಾಖಿಲೋತ್ಫುಲ್ಲವಿಚಿತ್ರವನನಿರ್ಮಲಂ |
ನಾನಾನಿರ್ಝರ ನಿರ್ಹ್ರಾದ ಕೂಜದ್ವನವಿಹಂಗಮಂ || ೧೮ ||

ವಿಚಿತ್ರಮಂಜರೀಪುಂಜ ಪಿಂಜರಾಂಬುದಮಂಡಲಂ |
ಸ್ವಭ್ರಮುಚ್ಛಗುಲುಚ್ಛಾಗ್ರವಿಶ್ರಾಂತಖಗಸಾರಸಂ || ೧೯ ||

ಸಾರವಂಜುಲವಿಸ್ತಾರ ಗುಪ್ತಾಖಿಲಸರಿತ್ತಟಂ |
ಅಸಮಾಪ್ತಶಿಲಾಶ್ವಭ್ರಲತಾವರ್ತನ ಮಾರುತಂ || ೨೦ ||

---

೧೬. ಹೀಗೆ ಮಾತನಾಡಿಕೊಳ್ಳುತ್ತ ಲಲಿತಾಕೃತಿಯರಾದ ಆ ಲಲನೆಯರು ಚಾರುಗಮನದಿಂದ ಆ ಮನೆಯ ಹೊರಗೆ ಬಂದರು.

೧೭. ಗ್ರಾಮದಲ್ಲಿರುವ ಜನರಿಗೆ ಅದೃಶ್ಯರಾಗಿಯೇ ಅವರು ಅಲ್ಲಿಂದ ಹೊರಟರು. ಎದುರಿಗಿದ್ದ ಪರ್ವತವು ಆದಿತ್ಯಮಂಡಲವನ್ನು ಮುಟ್ಟುವುದೋ ಎಂಬಂತೆ ಆಕಾಶದಷ್ಟೇ ಎತ್ತರವಾಗಿ ನಿಂತಿತ್ತು.

೧೮. ಅಲ್ಲಿ ಮರಗಳು ನಾನಾ ವರ್ಣವಾದ ಹೂಗಳನ್ನು ಬಿಟ್ಟಿರಲು ಆ ವನಭೂಮಿಯು ವಿಚಿತ್ರವಾಗಿತ್ತು. ನಿರ್ಝರಗಳು ಹರಿಯುತ್ತಿದ್ದುವು. ವನ ಪಕ್ಷಿಗಳು ಆನಂದದಿಂದ ಹಾಡುತ್ತಿದ್ದುವು.

೧೯. ಮೋಡವು ಕೆಳಗೆ ಇಳಿದು ಮರಗಳ ಹೂಗೊಂಚಲುಗಳಿಂದ ವಿಚಿತ್ರವಾಗಿ ಅಲಂಕರಿಸಿಕೊಂಡಿರುವಂತಿತ್ತು. ಆಕಾಶವು ನಿರ್ಮಲವಾಗಿತ್ತು. ಲತಾಗುಲ್ಮಗಳಲ್ಲಿ ಹಕ್ಕಿಗಳು ಕುಳಿತು ವಿಶ್ರಮಿಸಿಕೊಳ್ಳುತ್ತಿದ್ದುವು.

೨೦. ನೀರಿನ ದಡದಲ್ಲಿ ದಡವನ್ನು ಕಾಯುವುದಕ್ಕೋ ಎಂಬಂತೆ ಜೊಂಡು ಬೆಳೆದಿತ್ತು. ಬಂಡೆಗಳ ಪೊಟ್ಟರೆಗಳಲ್ಲಿ ಬೆಳೆದ ಲತೆಗಳು ಗಾಳಿಯಿಂದ ಒಂದೇ ಸಮನಾಗಿ ಕುಣಿಯುತ್ತಿದ್ದುವು.

ಪುಷ್ಪಾಗ್ರಪಿಹಿತಾಕಾಶಕೋಶಕುಡ್ಯಕವಾರಿದಂ |
ಪತದ್ದೀರ್ಘಸರಿತ್ ಸ್ರೋತಃಸ್ಫುರನ್ಮುಕ್ತಾಕಲಾಪಕಂ || ೨೧ ||

ಚಲದ್ವೃಕ್ಷವನವ್ಯೂಹವಾತವೇಲ್ಲಿಸರಿತ್ತಟಂ |
ನಾನಾವನಾಕುಲೋಪಾಂತಚ್ಛಾಯಾ ಸತತಶೀತಲಂ || ೨೨ ||

ಅಥ ತೇ ಲಲನೇ ತತ್ರ ತದಾ ದದೃಶತುಃ ಸ್ವಯಂ |
ತಂ ಗಿರಿಗ್ರಾಮಕಂ ವ್ಯೋಮ್ನಃ ಸ್ವರ್ಗಖಂಡಮಿವ ಚ್ಯುತಂ || ೨೩ ||

ರಟತ್ತೃಣಾಲೀಪಟಲಂ ಪೂರ್ಣಪುಷ್ಕರಿಣೀಗಣಂ |
ದ್ವಿಜೈಃ ಕುಚಕುಚೈಃ ಕೂಜತ್ ಸ್ವಲೀಲಾಶ್ವಭ್ರಕಚ್ಛಕಂ || ೨೪ ||

ಗಚ್ಛದ್ಗೋವೃಂದಹುಂಕಾರ ಕರಾಲಾಖಿಲಕುಂಜಕಂ|
ಕುಂಜಗುಲ್ಮಕಖಂಡಾಢ್ಯಂ ಸಚ್ಛಾಯಘನಶಾದ್ವಲಂ || ೨೫ ||

---

೨೧. ಎತ್ತರವಾದ ಮರಗಳ ತುದಿಯಲ್ಲಿರುವ ಹೂ ಗೊಂಚಲುಗಳಲ್ಲಿ ಮೋಡ(ದ ಚೂರು) ಗಳು ಸಿಕ್ಕಿಕೊಂಡಿರಲು, ಆಕಾಶದ ಗೋಡೆಗಳೋ ಎನ್ನುವಂತಿತ್ತು. ಗಿರಿನದಿಗಳು ಮೇಲಿನಿಂದ ಕೆಳಕ್ಕೆ ಇಳಿಯುತ್ತಿರಲು ಹೊಳೆಯುತ್ತಿರುವ ಮುತ್ತಿನ ಕುಚ್ಚೋ ಎಂಬಂತಿತ್ತು.

೨೨. ನದಿಗಳ ದಡದಲ್ಲಿ ವೃಕ್ಷಗಳು ತಂಡತಂಡವಾಗಿ ವನವನವಾಗಿ ಬೆಳೆದಿದ್ದುವು. ಅವುಗಳ ನೆರಳು ಆ ನೀರಿನ ಮೇಲೆ ಬಿದ್ದು ಅದು ತಣ್ಣಗೆ ಕೊರೆಯುತ್ತಿತ್ತು.

೨೩. ಅಲ್ಲಿ ಸ್ವರ್ಗದ ಒಂದು ತುಂಡೋ ಎಂಬಂತಿರುವ ಗಿರಿಗ್ರಾಮವನ್ನು ಆ ಲಲನೆಯರು ಕಂಡರು.

೨೪. ಅಲ್ಲಿ ರಾಟೆಗಳು ರಟರಟ ಎನ್ನುತ್ತಿರುವುವು. ಕೊಳಗಳು ಪೂರ್ಣವಾಗಿ ತುಂಬಿರುವುವು. ಕೊಚ್ಚೆಯ ಪ್ರದೇಶಗಳಲ್ಲೂ ಕಿಚಕಿಚ ಎನ್ನುತ್ತ ಸಾರಸಾದಿ ಪಕ್ಷಿಗಳು ತುಂಬಿರುವುವು.

೨೫. ಅಲ್ಲಲ್ಲಿ ಪೊದೆಗಳು, ಒಳ್ಳೆಯ ನೆರಳು, ಚೆನ್ನಾಗಿ ಬೆಳೆದ ಹುಲ್ಲೂ ಇರುವುವು. ಅಲ್ಲಿ ಗೋ ಸಮೂಹವು ಹೋಗುಹೋಗುತ್ತ ಹುಂಕಾರಮಾಡಿ ಸುತ್ತಮುತ್ತಲಿನ ಪೊದೆಗಳನ್ನೆಲ್ಲ ಮೊಳಗಿಸುವುವು.

ದುಷ್ಪ್ರವೇಶಾರ್ಕಕಿರಣಂ ವೃಷನ್ನೀಹಾರಧೂಸರಂ |
ಉದಗ್ರಮಂಜರೀಪುಂಜ ಜಟಾಲಂ ವಿಶಿಖಾಂತರಂ || ೨೬ ||

ಶಿಲಾಕುಹರವಾಃಸ್ಫಲ ಪ್ರೋಚ್ಛಲನ್ಮುಕ್ತನಿರ್ಝರೈಃ |
ಸ್ಮಾರಿತಾಚಲನಿರ್ಧೂತ ಕ್ಷೀರೋದಕಜಲಶ್ರಿಯಂ || ೨೭ ||

ಫಲಮಾಲ್ಯಮಹಾಭಾರ ಭಾಸುರೈರಜಿರದ್ರುಮೈಃ |
ಆನೀಯ ಪುಷ್ಪಸಂಭಾರಂ ತಿಷ್ಠದ್ಭಿರಿವ ಸಂಕುಲಂ || ೨೮ ||

ತರತ್ತರಂಗ ಝುಂಕಾರಕಾರಿ ಮಾರುತಕಂಪಿತೈಃ |
ಕೀರ್ಣಪುಷ್ಪಸಮಾವೃಷ್ಟಂ ದ್ರುಮೈರಪಿ ರಸಾಕುಲೈಃ || ೨೯ ||

ಅಶಂಕಿತಶಿಲಾಕೂಟ ಸ್ರವದಬ್ಬಿಂದುಟಂಕೃತೈಃ |
ಕಿಂಚಿತ್ಕೃತರವಂ ಗುಪ್ತೈರಶಂಕೈಃ ಶಂಕಿತೈಃ ಖಗೈಃ || ೩೦ ||

---

೨೬. ಆ ಗ್ರಾಮದಲ್ಲಿ ಸೂರ್ಯನ ಕಿರಣವೂ ಪ್ರವೇಶಿಸಲಾರದು. ಅಲ್ಲಿ ಮಂಜು ಮುಸುಕಿರುವುದು. ಹೂವಿನ ಗೊಂಚಲುಗಳು ಇಳಿದು ಬಿದ್ದಿರುವ ಕೊಂಬೆಗಳು ಜಟೆಯನ್ನು ಧರಿಸಿದಂತಿರುವುವು.

೨೭. ಶಿಲಾಛಿದ್ರಗಳಲ್ಲಿ ನೀರು ಧುಮುಕಿ, ಸಿಡಿದು ಮುತ್ತು ಚೆಲ್ಲುವಂತಿರುವುದು. ಅದನ್ನು ಕಂಡರೆ ಮಂದರವನ್ನು ಹಾಕಿ ಕ್ಷೀರ ಸಮುದ್ರವನ್ನು ಕಡೆಯುತ್ತಿದ್ದುದು ನೆನೆಪಾಗುವುದು.

೨೮. ಫಲ ಪುಷ್ಪ ಮಹಾಭಾರಗಳಿಂದ ಭಾಸುರವಾಗಿರುವ ಅಜಿರದ್ರುಮಗಳು ಎಲ್ಲಿಂದಲೋ ಪುಷ್ಪ ಸಂಭಾರವನ್ನು ತಂದು ಹೊತ್ತು ನಿಂತಿರುವುವೋ ಎಂಬಂತಿರುವುದು.

೨೯. ಅಲೆಗಳನ್ನೆಬ್ಬಿಸಿ ಝುಂಕಾರಮಾಡುತ್ತ ಬೀಸುವ ಮಾರುತನು ತಮ್ಮನ್ನು ಅಲ್ಲಾಡಿಸುತ್ತಿರಲು ಮರಗಳು ಪುಷ್ಪಗಳನ್ನೂ (ಮಕರಂದ) ರಸವನ್ನೂ ಚೆಲ್ಲುತ್ತಿರುವುವು.

೩೦. ಶಿಲಾಕೂಟಗಳಿಂದ ತೊಟ್ಟಿಕ್ಕುತ್ತಿರುವ ನೀರಿನ ಬಿಂದುಗಳು ಸಣ್ಣದಾಗಿ ಮಾಡುವ ಟಂಕಾರವನ್ನು ಕೇಳಿ ಹಕ್ಕಿಗಳು ಹೆದರಿ ಅವಿತುಕೊಂಡಿರುವುವು.

ಉತ್ಫಾಲಲಹರೀಶ್ರಾಂತಸೀಕರಾಸ್ವಾದನಾಕುಲೈಃ |
ನದ್ಯಾಮುಡುಪರಾವರ್ತವೃತ್ತಿಭಿರ್ವಿಹಗೈರ್ವೃತಂ || ೩೧ ||

ಉತ್ತಾಲತಾಲವಿಶ್ರಾಂತ ಕಾಕಾಲೋಕನಶಂಕಿತೈಃ |
ಬಾಲೈಃ ಪ್ರಗೋಪಿತಾಮಿಕ್ಷಾಖಂಡಂ ಜೀರ್ಣಸ್ವಭುಕ್ತಕೈಃ || ೩೨ ||

ಪುಷ್ಪಶೇಖರಸಂಭಾರವಸನಗ್ರಾಮಬಾಲಕಂ |
ಖರ್ಜೂರನಿಂಬಜಂಬೀರಗಹನೋಪಾಂತ ಶೀತಲಂ || ೩೩ ||

ಕ್ಷೌಮಾಗ್ರಹಸ್ತಾಂಬರಯಾ ಮಂಜರೀಪೂರ್ಣಕರ್ಣಯಾ |
ಕ್ಷುತ್ ಕ್ಷೀಣಯಾಕ್ರಾಂತರಥ್ಯಂ ಗ್ರಾಮಕೀಟಕಕಾಂತಯಾ || ೩೪ ||

ಸರಿತ್ತರಂಗಸಂಘಟ್ಟ ಸಂರಾವಾಶ್ರುತಸಂಕಥಂ|
ಕರ್ಮಜಾಡ್ಯಘನತ್ರಾಸ ವಾಂಛಿತೈಕಾಂತಸಂಸ್ಥಿತಂ || ೩೫ ||

---

೩೧. ನದಿಯಲ್ಲಿ ಹಕ್ಕಿಗಳು ಪ್ರವಾಹಗಳನ್ನು ಹಾರಿ .ದಾಟಿ ಆಯಾಸಪಟ್ಟು ನೀರು ಕುಡಿಯಲು ಹನಿಗಳಿಗಾಗಿ ತಿರುಗಿತಿರುಗಿ ಬರುತ್ತಿರುವುವು.

೩೨. ಎತ್ತರವಾದ ಮರಗಳ ಮೇಲೆ ಕುಳಿತಿರುದ ಕಾಗೆಗಳು ಎಲ್ಲಿ ನೋಡು ವುವೋ ಎಂದು ಶಂಕೆಪಡುತ್ತ ಹುಡುಗರು ತಾವು ತಿಂದು ಮಿಕ್ಕಿದ್ದ ಹಾಲಿನ ಮುದ್ದೆಯನ್ನು ಮುಚ್ಚಿಡುವರು.

೩೩. ಆ ಹಳ್ಳಿಯ ಹುಡುಗರು ಹೂವಿನಿಂದಲೇ ಒಡವೆಗಳನ್ನೂ ಉಡೆ ಗಳನ್ನೂ ಮಾಡಿಕೊಳ್ಳುವರು. (ಆ ಗ್ರಾಮದ ತೋಪುಗಳು) ಖರ್ಜೂರ, ನಿಂಬ, ಜಂಬೀರಗಳಿಂದ ದಟ್ಟವಾಗಿ ತಂಪಾಗಿರುವುವು.

೩೪. ಸೊಪ್ಪುಸೆದೆಗಳ ಉಡೆಯುಟ್ಟು ಹೂವಿನ ಗೊಂಚಲನ್ನು ಕಿವಿಗೆ ಸೆಕ್ಕಿಕೊಂಡು, ಹಸಿವಿನಿಂದ ಬಳಲಿರುವ ಬಡ ಹೆಣ್ಣುಗಳು ಆ ಗ್ರಾಮದ ದಾರಿ ಯಲ್ಲಿ ತಿರುಗುತ್ತಿರುವುವು. *

೩೫. ನದಿಯ ಮೊರೆತದಿಂದ ಆಡಿದ ಮಾತು ಯಾವುದೂ ಕೇಳದ ಏಕಾಂತ ಸ್ಥಳಗಳನ್ನು ಆ ಗ್ರಾಮದ ವೈಗಳ್ಳರೆಲ್ಲರೂ ಹಿಡಿದಿರುವರು.

---

* ಗ್ರಾಮೇ ಕೀಟಕಾ ಇವ ಉಪೇಕ್ಷ್ಯಾಃ ದರಿದ್ರ ನೀಚ ಆಲಸಾಃ ತೇಷಾಂ ಕಾಂತಯಾ ವಧೂಜನೇನ| ತಾ. ಪ್ರ.

ದಧಿಲಿಪ್ತಾಸ್ಯ ಹಸ್ತಾಂಸೈಃ ಸ್ನಿಗ್ಧ ಪುಷ್ಪಲತಾಧರೈಃ |
ನಗ್ನೈರ್ಗೋಮಯಪಂಕಾಂಕೈಃ ಬಾಲೈರಾಕುಲಚತ್ವರಂ || ೩೬ ||

ತೀರಶಾದ್ವಲವಲ್ಲೀನಾಂ ದೋಲಾಂದೋಲನಕಾರಿಭಿಃ |
ತರಂಗೈರ್ವಾಹ್ಯಮಾನಸ್ಯ ಲೇಖಿಕಾಂಕಿತಸೈಕತಂ || ೩೭ ||

ದಧಿಕ್ಷೀರಘನಾಮೋದಮತ್ತಮಂಥರಮಕ್ಷಿಕಂ |
ಕಾಮಭುಕ್ತಾರ್ಥತೋದ್ಬಾಷ್ಪಜರ್ಜರಾಬಲಬಾಲಕಂ || ೩೮ ||

ಗೋಮಯಾಸಿಕ್ತವಲಯಕರನಾರೀಕೃತಕ್ರುಧಂ |
ಧಮ್ಮಿಲ್ಲವಲನಾವ್ಯಗ್ರತ್ರಸ್ತಸ್ತ್ರೀವಿಹಸಜ್ಜನಂ || ೩೯ ||

ದಾಂತಪುಷ್ಪಚ್ಛದೋತ್ಸನ್ನಪತತ್ಕಕುದವಾಯಸಂ |
ಗೃಹರಥ್ಯಾಗಣದ್ವಾರ ಕೀರ್ಣಕ್ರೂರಕುರಂಟಕಂ || ೪೦ ||

---

೩೬. ಆ ಗ್ರಾಮದ ಚೌಕಗಳಲ್ಲಿ ಬಾಯಿ ಕೈ ತೋಳುಗಳವರೆಗೂ ಮೊಸರು ಮೆತ್ತಿಕೊಂಡು, ಮುದ್ದಾದ ಹೂವು ಬಳ್ಳಿಗಳನ್ನು ಕಟ್ಟಿಕೊಂಡು, ಸಗಣಿಯ ಕೆಸರನ್ನು ಬೊಳಿದುಕೊಂಡು ಬೆತ್ತಲೆಯಾಗಿರುವ ಹುಡುಗರು ತುಂಬಿರುವರು.

೩೭ ತೀರದಲ್ಲಿ ಬೆಳೆದಿರುವ ಹುಲ್ಲಿನ ಬಳ್ಳಿಗಳನ್ನು ಕುಣಿಸುತ್ತ ಹೋಗುವ ಅಲೆಗಳು ಮರಳಿನ ಮೇಲೆ ಗುರುತು ಬಿಟ್ಟಿರುವುವು.

೩೮. ಹಾಲು ಮೊಸರುಗಳ ಸುವಾಸನೆಯಿಂದಲೇ ಮದಿಸಿ ಹೋಗಿರುವ ನೊಣಗಳು ಯಥೇಚ್ಛವಾಗಿ ಮುತ್ತಿಕೊಂಡಿರಲು ಅವುಗಳನ್ನು ಓಡಿಸಲಾರದೆ ಬಾಲಕರು ಕಣ್ಣೀರು ಕರೆಯುವರು.

೩೯. ಕೈಯೂ ಬಳೆಯೂ ಸಗಣಿಯಾಗಿರಲು, ಬಿಚ್ಚಿ ಹೋಗಿರುವ ತಲೆಯ ಗಂಟನ್ನು ಸುತ್ತಿಕೊಳ್ಳಲು ಯತ್ನಿಸಿದ ತನ್ನನ್ನು ಕಂಡು ನಗುವ ಇತರರನ್ನು ನೋಡಿ ಹೆಂಗುಸೊಬ್ಬಳು ಕೋಪವಮಾಡಿಕೊಳ್ಳುವಳು.

೪೦. ಕಾಗೆಗಳು ತಿಂಡಿಗೋಸ್ಕರ ಎತ್ತರವಾದ ಕಡೆಯಿಂದ ಇಳಿಯುವುವು. ಅವನ್ನು (ಹೊಡೆಯಬಾರದೆಂದು) ಜಿತಕ್ರೋಧರಾದವರು ಹೂವನ್ನು ಅವುಗಳ ಮೇಲೆ ಎಸೆಯುವರು. ಮನೆ, ಬೀದಿ, ಬಾಗಿಲುಗಳಲ್ಲೆಲ್ಲಾ ಮುಳ್ಳಿರುವ ಗೋರಂಟಿಯು ಬೆಳೆದಿರುವುದು.

ಗೃಹಪಾರ್ಶ್ವಸ್ಥಿತಶ್ವಭ್ರಕುಂಜೈಃ ಕುಸುಮಿತಪ್ರಭೈಃ |
ಪ್ರತ್ಯಹಂ ಪ್ರಾತರಾಗುಲ್ಫಮಾಕೀರ್ಣಕುಸುಮಾಜಿರಂ || ೪೧ ||

ಚರಚ್ಚಮರಸಾರಂಗಜಾಲಜಂಗಲಖಂಡಕಂ |
ಗುಂಜಾನಿಕುಂಜಸಂಜಾತಶಷ್ಪಸುಪ್ತಮೃಗಾರ್ಭಕಂ || ೪೨ ||

ಏಕಾಂತಸುಪ್ತವತ್ಸೈಕಕರ್ಣಸ್ಪಂದಾಸ್ತಮಕ್ಷಿಕಂ |
ಗೋಪೋಚ್ಛಿಷ್ಟೀಕೃತದಧಿಸ್ವಸೃಕ್ಕಿಸ್ಪಂದಿಮಕ್ಷಿಕಂ || ೪೩ ||

ಸಮಸ್ತಸದ್ಮಸಂಕ್ಷೀಣಮಕ್ಷಿಕಾಕ್ಷಿಪ್ತಮಾಕ್ಷಿಕಂ |
ಫುಲ್ಲಾಶೋಕದ್ರುಮೋದ್ಯಾನಕೃತಲಾಕ್ಷಿಕಮಂದಿರಂ || ೪೪ ||

ಸೀಕರಾಸಾರಮರುತಾ ನಿತ್ಯಾರ್ದ್ರವಿಕಚದ್ರುಮಂ |
ಕದಂಬಮುಕುಲಪ್ರೋತಸಮಸ್ತಚ್ಛಾದನತೃಣಂ || ೪೫ ||

---

೪೧. ಮನೆಯ ಮಗ್ಗುಲಲ್ಲಿ ಒಂದು ಹೂವಿನ ಪೊದೆಯಿರುವುದು. ಅದರಲ್ಲಿ ಬೇಕಾದ ಹಾಗೆ ಹೂವು ಬಿಟ್ಟಿರುವುದು. ಅನು ದಿನವೂ ಬೆಳಗಾಗುವ ವೇಳೆಗೆ ಹಿಮ್ಮಡಿ ಮುಚ್ಚುವಷ್ಟು ಹೂವನ್ನು ಅಂಗಳದಲ್ಲಿ ಸುರಿಯುವುದು.

೪೨. ಗ್ರಾಮದ ಪಕ್ಕದಲ್ಲಿಯೇ ಚಮರ, ಸಾರಂಗ ಮೊದಲಾದ ಮೃಗಗಳು ತಿರುಗುವ ಪುಟ್ಟ ಗ್ರಾಮಾರಣ್ಯವಿರುವುದು. ಅಲ್ಲಿರುವ ಗುಲಗುಂಜಿಯ ಪೊದೆಗಳಲ್ಲಿ ಇರುವ ಎಳೆಯ ಹುಲ್ಲಿನ ಮೇಲೆ ಮರಿಗಳು ಮಲಗಿರುವುವು.

೪೩. ಒಂದು ಕರುವು ಏಕಾಂತವಾಗಿ ಮಲಗಿರುವುದು. ಒಂದು ಕಿವಿಯನ್ನು ಅಲ್ಲಾಡಿಸುತ್ತ ಅಲ್ಲಿ ಕುಳಿತ ನೊಣಗಳನ್ನದು ನಿವಾರಿಸಿಕೊಳ್ಳುತ್ತಿರುವುದು. ಗೋಪಬಾಲಕರು ತಿಂದು ಮಿಕ್ಕ ಮೊಸರನ್ನು ಇದೂ ತಿಂದಾಗ ಅದು ಕೊಂಚ ಕಟವಾಯಿಗೆ ಹತ್ತಿಕೊಂಡಿರುವುದು. ಅದಕ್ಕಾಗಿ ನೊಣಗಳು ಸುತ್ತಿ ಸುತ್ತಿ ಬರುವುವು.

೪೪. ಮನೆಗಳಲ್ಲಿ ಕಟ್ಟಿದ್ದ ಜೇನು ಗೂಡುಗಳನ್ನೆಲ್ಲ ಅಳಿಯಲು ಜೇನೆಲ್ಲವೂ ಎಲ್ಲಿಯೋ ಹೊರಟುಹೋಗಿರುವುವು. ಫುಲ್ಲಾಶೋಕದ್ರುಮಗಳಿಂದ ಉದ್ಯಾನ ಮಂದಿರಗಳೆಲ್ಲ ಕೆಂಪಾಗಿರುವುವು.

೪೫, ನೀರು ಹನಿಗಳಿಂದ ನೆನೆದಿರುವ ಗಾಳಿಯು ಬೀಸುವುದರಿಂದ ಮರಗಳು ಯಾವಾಗಲೂ ತಂಪಾಗಿ ಸೊಂಪಾಗಿರುವುವು. ಕದಂಬ ಮುಕುಲಗಳಿಂದ ಅಲ್ಲಿರುವ ಹುಲ್ಲೆಲ್ಲವೂ ಮುಚ್ಚಿಹೋಗಿರುವುದು.

ಪ್ರತಿಕೃತ್ತಲತಾಪುಲ್ಲಕೇತಕೋತ್ಕರ ಪಾಂಡುರಂ |
ವಹತ್ಪ್ರಣಾಲಪಟಲೀರಣದ್ಗುರುಗುರಾರವಂ || ೪೬ ||

ವಾತಾಯನಗುಹಾನಿರ್ಯತ್ಸೌಧವಿಶ್ರಾಂತವಾರಿದಂ |
ಪೂರ್ಣಪುಷ್ಕರಿಣೀಪಂಕ್ತಿಪೂರ್ಣರಾಜಪೃಥೂತ್ತರಂ || ೪೭ ||

ನೀರಂಧ್ರವಿಟಪಿಚ್ಛಾಯಾಶೀತಲಾಮಲಶಾದ್ವಲಂ |
ಸರ್ವಶಷ್ಪಾಗ್ರವಾರ್ಬಿಂದು ಪ್ರತಿಬಿಂಬಿತತಾರಕಂ || ೪೮ ||

ಅನಾರತಪತತ್ಫುಲ್ಲ ಹಿಮವರ್ಷಸಿತಾಲಯಂ |
ವಿಚಿತ್ರಮಂಜರೀ ಪುಷ್ಪಪತ್ರ ಸತ್ಫಲ ಪಾದಪಂ || ೪೯ ||

ಗೃಹಕಕ್ಷಾಂತರಾಲೀನ ಮೇಘಸುಪ್ತ ಚಿರಂಟಿಕಂ |
ಸೌಧಸ್ಥಮೇಘವಿದ್ಯುದ್ಭಿರನಾದೇಯ ಪ್ರದೀಪಕಂ || ೫೦ ||

---

೪೬. ತಾಳೆಯ ಮರಗಳಿಗೆ ಹಬ್ಬಿದ್ದ ಲತೆಗಳನ್ನೆಲ್ಲಾ ಕಿತ್ತು ಹಾಕಿರಲು ಅರಳಿದ ತಾಳೆಯ ಹೂಗಳು ಎಲ್ಲವನ್ನೂ ಬೆಳ್ಳಗೆ ಮಾಡಿರುವುವು. "ಪ್ರಣಾಲ ಪಟಲಿ" (?) ಯು ಮಾಡುವ ಗುರಗುರು ಶಬ್ದವು ತುಂಬಿರುವುದು.

೪೭. ಸೌಧಗಳಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದ ಮೋಡವು ವಾತಾಯನಗಳಿಂದ ಈಚೆಗೆ ಬರುತ್ತಿರುವುದು. ತುಂಬಿರುವ ಕಮಲದ ಕೊಳಗಳಲ್ಲಿ ಪೂರ್ಣ ಚಂದ್ರನಂತೆ ಇರುವ ಉತ್ಕೃಷ್ಟ ಕಮಲಗಳಿರುವುವು.

೪೮. ದಟ್ಟವಾಗಿರುವ ಮರದ ನೆರಳಲ್ಲಿ ತಂಪಾಗಿ ಚೊಕ್ಕಟವಾಗಿ ಹುಲ್ಲು ಬೆಳೆದಿರುವುದು. ಆ ಹುಲ್ಲಿನ ಗರಿಗಳ ಕೊನೆಯಲ್ಲಿರುವ ವಾರಿಬಿಂದುಗಳಲ್ಲಿ ನಕ್ಷತ್ರಗಳು ಪ್ರತಿಬಿಂಬಿಸುವುವು.

೪೯. ಹಿಮವು ಒಂದೇ ಸಮನಾಗಿ ಸುರಿಯುವುದರಿಂದ ಮನೆಗಳೆಲ್ಲವೂ ಬೆಳ್ಳಗಿರುವುವು. ಪುಷ್ಪ, ಫಲ, ಪತ್ರಗಳನ್ನು ಕೊಡುವ ವಿಚಿತ್ರ ವೃಕ್ಷಗಳಿರುವುವು.

೫೦. ಗೃಹ ಕಕ್ಷ್ಯಗಳಲ್ಲಿರುವ ಚಿರಂಟಿಕೆ (ಸುವಾಸನೆಯ ಗಿಡಗಳು) ಗಳಲ್ಲಿ ಮೇಘಗಳು ಮಲಗಿರುವುವು. ಮಹಡಿಗಳಲ್ಲಿರುವ ಮೇಘಗಳು ಮಿಂಚುತ್ತಿರುವುದರಿಂದ ಅಲ್ಲಿ ದೀಪಗಳೇ ಬೇಡವಾಗಿರುವುದು.

ಕಂದರಾನಿಲಭಾಂಕಾರ ಘನ ಘುಂಘುಮ ಮಂಡಪಂ |
ಚರಚ್ಚಕೋರಹಾರೀತಹರಿಣೀಹಾರಿಮಂದಿರಂ || ೫೧ ||

ಉನ್ನಿದ್ರಕಂದಲೋದ್ವಾಂತಮಾಂಸಲಾಮೋದಮಂಥರೈಃ |
ಮರುದ್ಭಿರ್ಮಂದಮಾಯಾತುಮಾರಬ್ಧೈರ್ಲೋಲಪಲ್ಲವಂ || ೫೨ ||

ಲಾವಕಾಲಾಪಲೀಲಾಯಾಮಾಲೀನಲಲನಾ ಗಣಂ |
ಕೋಕಕೋಕಿಲಕಾಕೋಲಕೋಲಾಹಲಸಮಾಕುಲಂ || ೫೩ ||

ಶಾಲತಾಲತಮಾಲಾಬ್ಜನೀಲತತ್ಫಲಮಾಲಿನಂ |
ವಲ್ಲೀವಲಯವಿನ್ಯಾಸವಿಲಾಸವಲಿತದ್ರುಮಂ || ೫೪ ||

ಆಲೋಲಪಲ್ಲವಲತಾವಲಿತಾಯನಾನಾ-
ಮುತ್ಫುಲ್ಲಕಂದಲಶಿಲೀಂಧ್ರಸುಗಂಧಿತಾನಾಂ |
ತಾಲೀತಮಾಲದಲತಾಂಡವಮಂಡಪಾನಾ-
ಮಾರಾಮಪ್ರಫುಲ್ಲಕುಸುಮದ್ರುಮಶೀತಲಾನಾಂ || ೫೫ ||

---

೫೧. ಕಂದರಗಳಲ್ಲಿರುವ ಗಾಳಿಯು ಭಾಂಕಾರಮಾಡುವುದು. ಮೋಡಗಳ ಪ್ರತಿಧ್ವನಿಯು ಮಂಡಪವನ್ನು ತುಂಬುವುದು. ಚಕೋರ, ಹಾರೀತ, ಹರಿಣೀ ಇವುಗಳ ಸಂಚಾರದಿಂದ ಮಂದಿರವು ಮನೋಹರವಾಗಿರುವುದು.

೫೨. ಕಂದಲೀ (ನೆಲಬಾಳೆ) ಪುಷ್ಪವು ಅರಳಿ ತನ್ನ ಸುವಾಸನೆಯಿಂದ, (ಗಾಳಿಯೆಲ್ಲವೂ) ಘಮಘಮಿಸುವಂತೆ ಮಾಡಿರುವುದು. ಆ ಗಾಳಿಯು ಚಿಗುರುಗಳನ್ನು ಅಲ್ಲಾಡಿಸಿ, ಮೆಲ್ಲಗೆ ಬರಲು ಆರಂಭಿಸುತ್ತಿರುವುದು.

೫೩. ಲಾವಕ ಪಕ್ಷಿಯ ಆಲಾಪಗಳನ್ನು ಕೇಳುವ ಆಟದಲ್ಲಿ ಲಲನಾಗಣವು ಮಗ್ನವಾಗಿರುವುದು, ಕೋಕ, ಕೋಕಿಲ, ಕಾಕೋಲ, ಪಕ್ಷಿಗಳ ಕೋಲಾಹಲವು ತುಂಬಿರುವುದು.

೫೪. ಶಾಲ, ತಾಲ, ತಮಾಲ, ಅಬ್ಜನೀಲ(?) ವೃಕ್ಷಗಳು ಫಲಗಳ ಮಾಲೆಯನ್ನು ಧರಿಸಿರುವುವು. ಬಳ್ಳಿಗಳು ಮುದ್ದಾಗಿ ಮರಗಳನ್ನು ಸುತ್ತಿಕೊಂಡು ಆಟವಾಡುವಂತಿರುವುವು.

೫೫. ಕುಣಿಯುತ್ತಿರುವ ಚಿಗುರುಳ್ಳ ಲತೆಗಳು ದಾರಿಗಳಿಗೆ ಅಡ್ಡವಾಗಿರು

ಸಾರಾವವಾರಿಚಲನಾಕುಲಗೋಕುಲಾನಾ-
ಮಾನೀಲಸಸ್ಯ ಕುಸುಮಸ್ಥಲಶೋಭಿತಾನಾಂ |
ತೀರದ್ರುಮಪ್ರಕರಗುಪ್ತ ಸರಿದ್ರಯಾಣಾಂ
ನೀರಂಧ್ರಪುಷ್ಪಿತಲತಾಗ್ರವಿತಾನಕಾನಾಂ || ೫೬ ||

ಉದ್ಯಾನಕುಂದ ಮಕರಂದ ಸುಗಂಧಿತಾನಾಂ
ಗಂಧಾಂಧಷಟ್ಪದಕುಲಾಂತರಿತಾಂಬುಜಾನಾಂ |
ಸೌಂದರ್ಯತರ್ಜಿತಪುರಂದರ ಮಂದಿರಾಣಾಂ
ರಾಜೀವರಾಜಿರಜಸಾರುಣಿತಾಂಬರಾಣಾಂ || ೫೭ ||

ರಂಹೋವಹದ್ಗಿರಿನದೀರವಘರ್ಘರಾಣಾಂ
ಕುಂದಾವದಾತಜಲದದ್ಯುತಿಭಾಸುರಾಣಾಂ |
ಸೌಧಸ್ಥಿತೋಲ್ಲಸಿತಫುಲ್ಲಲತಾಲಯಾನಾಂ
ಲೀಲಾವಲೋಲಕಲಕಂಠವಿಹಂಗಮಾನಾಂ || ೫೮ ||

ವುವು. ಕಂದಲ ಶಿಲೀಂಧ್ರದ ಹೂಗಳು ಅರಳಿ ಗಮ್ಮೆನ್ನುತ್ತಿರುವುವು. ತಾಲ, ತಮಾಲ ವೃಕ್ಷಗಳ ದಳಗಳು ಮಂಡಪದಲ್ಲಿ ತಾಂಡವಾಡುತ್ತಿರುವುವು. ಮರಗಳಲ್ಲಿ ಕುಸುಮಗಳು ಅರಳಿ ವನವೆಲ್ಲವೂ ತಂಪಾಗಿರುವುದು.

೫೬. ಹಂಭಾ ಎಂದು ಕೂಗುತ್ತ ಗೋಕುಲಗಳು ನೀರನ್ನು ದಾಟುತ್ತಿರುವುವು. ನೀಲಿಯಬಣ್ಣವಾಗಿರುವ ಸಸ್ಯಗಳಿಂದಲೂ ಅವುಗಳ ಕುಸುಮಗಳಿಂದಲೂ ವನಸ್ಥಲವೆಲ್ಲವೂ ಶೋಭಿಸುತ್ತಿರುವುದು. ತೀರದಲ್ಲಿರುವ ಮರಗಳ ಗುಂಪಿನಲ್ಲಿ ನದಿಯು ಅವಿತುಕೊಂಡು ಹರಿಯುತ್ತಿರುವುದು. ಎಡೆಬಿಡದೆ ಹೂಬಿಟ್ಟರುವ ಲತೆಗಳು ಕೊನೆಯಲ್ಲಿ ಹರಡಿಕೊಂಡಿರುವುವು.

೫೭. ಕುಂದ, ಮಕರಂದ ಸುಗಂಧದಿಂದ ಉದ್ಯಾನವು ತುಂಬಿರುವುದು. ಸುಗಂಧದಿಂದ ಮತ್ತವಾಗಿ ಕಣ್ಣುಕಾಣದ ದುಂಬಿಗಳ ಕುಲವು ಕಮಲವನ್ನು ಮುಚ್ಚಿರುವುದು. ಅಲ್ಲಿನ ಮಂದಿರಗಳು ತಮ್ಮ ಸೌಂದರ್ಯದಿಂದ ಇಂದ್ರನ ಅರಮನೆಗಳನ್ನೂ ಮೀರಿರುವುವು. ಅಲ್ಲಿರುವ ಕಮಲಗಳ ಧೂಳಿನಿಂದ ಆಕಾಶವೆಲ್ಲವೂ ಕೆಂಪಾಗಿರುವುದು.

೫೮. ಗಿರಿನದಿಗಳು ವೇಗವಾಗಿ ಹೋಗುತ್ತ ಘರ್ಘರ ಶಬ್ದಮಾಡುತ್ತಿರುವುವು. ಕುಂದ ಪುಷ್ಪದಂತೆ ಶುಭ್ರವಾದ ಮೋಡಗಳ ಕಾಂತಿಯಿಂದ ಭಾಸುರ

ಉಲ್ಲಾಸಿಕೌಸುಮದಲಾಸ್ತರಣಸ್ಥಯೂನಾ-
ಮಾಪಾದಮಾವಲಿತಮಾಲ್ಯವಿಲಾಸಿನೀನಾಂ |
ಸರ್ವತ್ರ ಸುಂದರನವಾಂಕುರದಂತುರಾಣಾಂ
ಶೋಭೋಲ್ಲಸದ್ವರಲತಾಕುಲಮಾರ್ಗಣಾನಾಂ ॥ ೫೯ ॥

ಸಂಜಾತಕೋಮಲಲತೋತ್ಪಲಸಂಕುಲಾನಾಂ
ತಿಷ್ಠತ್ಪಯೋದಪಟಸಂವಲಿತಾಲಯಾನಾಂ |
ನೀಹಾರಹಾರಹರಿತಸ್ಥಲ ವಿಶ್ರುತಾನಾಂ
ಸೌಧಸ್ಥಮೇಘತಡಿದಾಕುಲಿತಾಂಗನಾನಾಂ ॥ ೬೦ ॥

ನೀಲೋತ್ಪಲೋಲ್ಲಸಿತ ಸೌರಭ ಸುಂದರಾಣಾಂ
ಹುಂಕಾರಹಾರಿಹರಿತೋನ್ಮುಖಗೋಕುಲಾನಾಂ |
ವಿಶ್ರಬ್ಧಮುಗ್ಧಮೃಗಸಾರಗೃಹಾಜಿರಾಣಾ-
ಮುನ್ನೃತ್ಯಬರ್ಹಿಘನಸೀಕರ ನಿರ್ಝರಾಣಾಂ ॥ ೬೧ ॥

ವಾಗಿರುವುದು. ಉಪ್ಪರಿಗೆಯ ಮನೆಗಳಲ್ಲಿ ಚೆನ್ನಾಗಿ ಬೆಳೆದಿರುವ ಲತೆಗಳ ಗೂಡುಗಳಿರುವುವು. ನವಿಲು ಮೊದಲಾದ ಹಕ್ಕಿಗಳು ಅಲ್ಲಿ ಲೀಲೆಯಿಂದ ಆಡುತ್ತಿರುವುವು.

೫೯. ಅಲ್ಲಿ ಉಲ್ಲಾಸಿಗಳಾದ ತರುಣರು ಕುಸುಮದಳಗಳ ಆಸ್ತರಣದಲ್ಲಿ ಕೂಡುವರು. ವಿಲಾಸಿನಿಯರು ಕಾಲಿಂದ ತಲೆಯವರೆಗೆ ಹೂವನ್ನು ಶೇಖರಿಸಿರುವರು. ಎಲ್ಲೆಲ್ಲೂ ಸುಂದರವಾದ ಹೊಸ ಹುಲ್ಲು ತುಂಬಿರುವುದು. ಒಳ್ಳೆಯ ಲತೆಗಳು ಇಟ್ಟಣಿಸಿರಲು ಮಾರ್ಗವು ಶೋಭಿಸುತ್ತಿರುವುದು.

೬೦. ಉತ್ಪಲ ಲತೆಗಳ ಗುಂಪು ಅಲ್ಲಿ ಹುಟ್ಟುತ್ತಿರುವುದು. ಅಲ್ಲಿ ಬಂದು ಕುಳಿತಿರುವ ಮೋಡವು ಪಟವಾಗಿ ಮನೆಗಳನ್ನು ಮರೆಮಾಡಿರುವುದು. ಮಂಜು ಹಿಡಿಯುವುದರಿಂದ (ಶೀತಹಿಡಿದು ಪಾಚಿಯು ಬೆಳೆದು) ಸ್ಥಲಗಳೆಲ್ಲವೂ ಹಸುರಾಗಿರುವುವು. ಆ ಮನೆಯಲ್ಲಿರುವ ಹೆಂಗುಸರು ಮೇಘದ ಮಿಂಚನ್ನು ನೋಡಿ ಕೊಂಚ ಗಾಬರಿಯಾಗುವರು.

೬೧. ನೀಲೋತ್ಪಲದ ಸುಗಂಧದಿಂದ ಎಲ್ಲವೂ ಸುಂದರವಾಗಿರುವುದು: ಹುಂ ಎಂದು ಶಬ್ದಮಾಡುತ್ತ ಮನೋಹರವಾದ ಹಸುರು ಬಯಲುಗಳ ಕಡೆಗೆ

ಸೌಗಂಧ್ಯಮತ್ತಪವನಾಹತವಿಕ್ಲವಾನಾಂ
ವಪ್ರೌಷಧಿಜ್ವಲನವಿಸ್ಮೃತದೀಪಕಾನಾಂ |
ಕೋಲಾಹಲಾಕುಲಕುಲಾಯಕುಲಾಕುಲಾನಾಂ
ಕುಲ್ಯಾಕುಲಾಕಲಕಲಾಶ್ರುತಸಂಕಥಾನಾಂ || ೬೨ ||

ಮುಕ್ತಾಫಲಪ್ರಕರಸುಂದರಬಿಂದುಪಾತ–
ಶೀತಾಖಿಲದ್ರುಮಲತಾತೃಣಪಲ್ಲವಾನಾಂ |
ಲಕ್ಷ್ಮೀಮನಸ್ತಮಿತಪುಷ್ಪವಿಕಾಸಭಾಜಾಂ
ಶಕ್ನೋತಿ ಕಃ ಕಲಯಿತುಂ ಗಿರಿಮಂದಿರಾಣಾಂ || ೬೩ ||

ಇತ್ಯಾರ್ಷೇ ಶ್ರೀ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿಪ್ರಕರಣೇ
"ಗಿರಿಗ್ರಾಮವರ್ಣನಂ" ನಾಮ ಅಷ್ಟಾವಿಂಶಃ ಸರ್ಗಃ

ಗೋಕುಲಗಳು ಹೋಗುತ್ತಿರುವುವು. ಮನೆಗಳ ಅಂಗಳದಲ್ಲಿ ಸಾಕಿರುವ ಜಿಂಕೆ ಸಾರಂಗ ಮುಂತಾದ ಮುಗ್ಧ ಜಂತುಗಳಿರುವವು. ಅಲ್ಲಿರುವ ನವಿಲುಗಳು ಮೋಡದ ಹನಿಗಳನ್ನು ಮಳೆಯೆಂದು ತಿಳಿದು ನರ್ತಿಸುತ್ತಿರುವುವು.

೬೨. ಸುಗಂಧದಿಂದ ಉನ್ಮತ್ತನಾದ ಪವನನು ಅಲ್ಲಿರುವ ಜನರ ಶ್ರಮವನ್ನೆಲ್ಲ ಪರಿಹರಿಸುವನು. ಜ್ಯೋತಿರ್ಲತೆಗಳ ಪ್ರಕಾಶವನ್ನು ಬಲ್ಲ ಅಲ್ಲಿನವರು ದೀಪಗಳನ್ನು ಮರೆತಿರುವರು. ಪಕ್ಷಿಗಳ ಕೋಲಾಹಲದಿಂದ ಗೂಡು ಗೂಡೂ ತುಂಬಿರುವುದು. ನಿರ್ಝರಿಣಿಯ ಗದ್ದಲದಿಂದ ಆ ಪಕ್ಷಿಗಳ ಕೋಲಾಹಲವೂ ಕೇಳಿಸದಾಗಿರುವುದು.

೬೩. ಮುಕ್ತಾಫಲಗಳ ಗೊಂಚಲುಗಳಂತೆ ಸುಂದರವಾಗಿರುವ ಜಲಬಿಂದುಗಳ ಪತನದಿಂದ ಅಲ್ಲಿರುವ ದ್ರುಮ, ಲತಾ, ತೃಣ, ಪಲ್ಲವಗಳೆಲ್ಲವೂ ತಂಪಾಗಿರುವುವು. ಅರಳಿರುವ ಹೂಗಳ ಕಾಂತಿಯಿಂದ ಬಂಧುರವಾಗಿರುವುವು. ಇಂತಹ ಆ ಗಿರಿಮಂದಿರಗಳ ಸೌಭಾಗ್ಯವನ್ನು ಹೇಳುವುದಕ್ಕೆ ಯಾರು ತಾನೇ ಶಕ್ತರು ?

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಗಿರಿಗ್ರಾಮವರ್ಣನ" ಎಂಬ
ಇಪ್ಪತ್ತೆಂಟನೆಯ ಸರ್ಗವು.

ಏಕೋನತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ —

ತತ್ರ ತೇ ಪೇತತುರ್ದೇವ್ಯೌ ಗ್ರಾಮೇಽಂತಃಶೀತಲಾತ್ಮನಿ |
ಭೋಗಮೋಕ್ಷಶ್ರಿಯೌ ಶಾಂತೇ ಪುಂಸೀವ ವಿದಿತಾತ್ಮನಿ ‖ ೧ ‖

ಕಾಲೇನೈತಾವತಾ ಲೀಲಾ ತೇನಾಭ್ಯಾಸೇನ ಸಾಽಭವತ್ |
ಶುದ್ಧಜ್ಞಾನೈಕದೇಹತ್ವಾತ್ತ್ರಿಕಾಲಾಮಲದರ್ಶಿನೀ ‖ ೨ ‖

ಅಥ ಸಸ್ಮಾರ ಸರ್ವಾಸ್ತಾಃ ಪ್ರಾಕ್ತನೀಃ ಸಂಸೃತೇರ್ಗತೀಃ |
ಸಾ ಸ್ವಯಂ ಸ್ವರಸೇನೈವ ಪ್ರಾಗ್ಜನ್ಮಮರಣಾದಿಕಾಃ ‖ ೩ ‖

ಲೀಲೋವಾಚ :—

ದೇವಿ ದೇಶಮಿಮಂ ದೃಷ್ಟ್ವಾ ತ್ವತ್ಪ್ರಸಾದಾತ್ಸ್ಮರಾಮ್ಯಹಂ |
ಇಹ ತತ್ಪ್ರಾಕ್ತನಂ ಸರ್ವಂ ಚೇಷ್ಟಿತಂ ಚೇಷ್ಟಿತಾಂತರಂ ‖ ೪ ‖

ಇಪ್ಪತ್ತೊಂಭತ್ತನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :—ಶಾಂತನಾಗಿ ಆತ್ಮಜ್ಞಾನಿಯಾಗಿರುವವನಿಗೆ ಭೋಗಲಕ್ಷ್ಮಿಯೂ ಮೋಕ್ಷಲಕ್ಷ್ಮಿಯೂ ಬರುವ ಹಾಗೆ, ಅವರಿಬ್ಬರು ದೇವಿಯರೂ ಆ ಗ್ರಾಮಕ್ಕೆ ಬಂದರು.

೨. ಆ ವೇಳೆಗೆ ಲೀಲೆಯು ಜ್ಞಾನಾಭ್ಯಾಸದಿಂದ ಶುದ್ಧ ಜ್ಞಾನೈಕದೇಹವನ್ನು ಪಡೆದು ತ್ರಿಕಾಲದರ್ಶಿನಿಯಾಗಿದ್ದಳು.

೩. ಹಿಂದೆ ಬಂದಿದ್ದ ನಾನಾ ಜನ್ಮಗಳೆಲ್ಲವೂ ಅವಳ ನೆನೆಪಿಗೆ ಬಂತು. ಯಾವ ಪ್ರಯತ್ನವೂ ಇಲ್ಲದೆ ಹಿಂದಿನ ಜನ್ಮಗಳ ಜನನ ಮರಣಗಳೆಲ್ಲವೂ ಸ್ಮೃತಿಗೆ ಬಂದುವು.

೪. ಲೀಲೆಯು ಹೇಳಿದಳು ;—ದೇವಿ, ಈ ದೇಶವನ್ನು ನೋಡಿ, ನಾನು ಇಲ್ಲಿ ಏನೇನು ಮಾಡಿದ್ದೆನೋ ಅದೆಲ್ಲವನ್ನೂ ನಿನ್ನ ಪ್ರಸಾದದಿಂದ ಸ್ಮರಿಸಿಕೊಂಡೆನು.

ಇಹಾಭೂವಮಹಂ ಜೀರ್ಣಾ ಶಿರಾಲಾಂಗೀ ಕೃಶಾ ಸಿತಾ |
ಬ್ರಾಹ್ಮಣೀ ಶುಷ್ಕದರ್ಭಾಗ್ರಭೇದರೂಕ್ಷಕರೋದರಾ || ೫ ||

ಭರ್ತುಃ ಕುಲಕರೀ ಭಾರ್ಯಾ ದೋಹಮಂಥಾನ ಶಾಲಿನೀ |
ಮಾತಾ ಸಕಲಪುತ್ರಾಣಾಮತಿಥೀನಾಂ ಪ್ರಿಯಂಕರೀ || ೬ ||

ದೇವದ್ವಿಜಸತಾಂ ಭಕ್ತಾ ಸಿಕ್ತಾಂಗೀ ಘೃತಗೋರಸೈಃ |
ಭರ್ಜನೀ ಚರುಕುಂಭಾದಿ ಭಾಂಡೋಪಸ್ಕರಶೋಧಿನೀ || ೭ ||

ನಿತ್ಯಮನ್ನಲವಾಕ್ತೈಕಕಾಚಕಂಬುಪ್ರಕೋಷ್ಠಕಾ |
ಜಾಮಾತೃದುಹಿತೃ ಭ್ರಾತೃ ಪಿತೃ ಮಾತೃ ಪ್ರಪೂಜನೀ || ೮ ||

ಆದೇಹಂ ಸದ್ಮ ಭೃತ್ಯೈವ ಪ್ರಕ್ಷೀಣದಿನಯಾಮಿನೀ |
ವಾಚಂ ಚಿರಂ ಚಿರಮಿತಿ ವಾದಿನ್ಯನಿಶಮಾಕುಲಾ || ೯ ||

---

೫. ಇಲ್ಲಿ ನಾನು ಬ್ರಾಹ್ಮಣಿಯಾಗಿದ್ದೆನು. ಮುದುಕಿಯಾಗಿ ನರಗಳೆಲ್ಲವೂ ಎದ್ದುಕೊಂಡು ಕೃಶವಾಗಿ ಬಿಳಿಚಿಕೊಂಡು ಇದ್ದೆನು. ಒಣಗಿದ ದರ್ಭೆಯನ್ನು ಸೀಳುವುದರಲ್ಲಿ ನನ್ನ ಅಂಗೈಗಳೆಲ್ಲ ಗಾಯವಾಗಿದ್ದುವು.

೬. ಆ ಬ್ರಾಹ್ಮಣಿಯು ಗಂಡನ ಹೆಂಡಿತಿಯಾಗಿ ಮನೆತುಂಬ ಮಕ್ಕಳನ್ನು ಪಡೆದು, ಹಾಲು ಮೊಸರು ಬೆಣ್ಣೆ ಮಾಡುತ್ತ, ಎಲ್ಲ ಮಕ್ಕಳನ್ನೂ ಪ್ರೀತಿಯಿಂದ ಪಾಲಿಸುತ್ತ, ಅತಿಥಿಗಳಿಗೆ ಪ್ರಿಯವನ್ನು ಆಚರಿಸುತ್ತ,

೭. ದೇವದ್ವಿಜ ಸತ್ಪುರುಷರಲ್ಲಿ ಭಕ್ತಿಯನ್ನಿಟ್ಟುಕೊಂಡು ಹಾಲು ತುಪ್ಪಗಳ ಜಿಡ್ಡುಳ್ಳ ಮೈಯುಳ್ಳವಳಾಗಿ, ಉಪಕರಣಗಳನ್ನು ತೊಳೆಯುತ್ತ, (ಆಳುಗಳನ್ನು) ಗದರಿಸುತ್ತ ಇರುವಳು.

೮. ತೊಟ್ಟಿರುವ ಒಂದೇ ಹಿಂದು ಬಳೆಯ ಮೇಲೆ ಮುಸುರೆಯು ಕೊಂಚವಾದರೂ ಇದ್ದೇ ಇರುವುದು. ಅಳಿಯ, ಮಗಳು, ಅಣ್ಣತಮ್ಮಂದಿರು, ತಂದೆ ತಾಯಿಯರು ಎಲ್ಲರನ್ನೂ ಆದರಿಸುವಳು.

೯. ಬೆಳಗಿನಿಂದ ಸಂಜೆಯವರೆಗೂ ಮನೆಗಾಗಿ ದುಡಿಯುತ್ತಿರುವಳು. ಯಾವಾಗಲೂ ಏನೋ ಒದ್ದಾಡುತ್ತ, ಹೊತ್ತಾಯಿತು, ಹೊತ್ತಾಯಿತು, ಎನ್ನುತ್ತಿರುವಳು.

ಕಾಹಂ ಕ ಇವ ಸಂಸಾರ ಇತಿ ಸ್ವಪ್ನೇಽಪ್ಯಸಂಕಥಾ |
ಜಾಯಾ ಶ್ರೋತ್ರಿಯಮೂಢಸ್ಯ ತಾದೃಶಸ್ಯೈವ ದುರ್ಧಿಯಃ || ೧೦ ||

ಏಕನಿಷ್ಠಾ ಸಮಿಚ್ಛಾಕಗೋಮಯೇಂಧನಸಂಚಯೇ |
ಮ್ಲಾನಕಂಬಲಿಸಂವೀತಶಿರಾಲಕೃಶಗಾತ್ರಿಕಾ || ೧೧ ||

ತರ್ಣಕೀಕರ್ಣಜಾಹಸ್ಥ ಕೃಮಿನಿಷ್ಕಾಸತತ್ಪರಾ |
ಗೃಹಶಾಕಾಯನಾಸೇಕ ಸತ್ವರಾಹೂತಕರ್ಪರಾ || ೧೨ ||

ನೀಲನೀರತರಂಗಾಂತ ತೃಣತರ್ಪಿತತರ್ಣಕಾ |
ಪ್ರತಿಕ್ಷಣಂ ಗೃಹದ್ವಾರಕೃತಲೇಪನವರ್ಣಕಾ || ೧೩ ||

ನೀತ್ಯರ್ಥಂ ಗೃಹಭೃತ್ಯಾನಾಮಾದೀನಕೃತವಾಚ್ಯತಾ |
ಮರ್ಯಾದಾನಿಯಮಾದಬ್ಧೇರ್ವೇಲೇವಾನಿಶಮಚ್ಯುತಾ || ೧೪ ||

---

೧೦. ನಾನು ಯಾರು ? ಈ ಸಂಸಾರವು ಯಾವುದು ? ಎಂದು ಅವಳು ಕನಸಿನಲ್ಲಿಯೂ ಕೇಳಲಿಲ್ಲ. ಶ್ರೋತ್ರಿಯನಾಗಿ (ಕರ್ಮ) ಮೂಢನಾದ, ಅಂತಹ ಅವಿಚಾರಿಯೇ ಆದ ದುರ್ಬುದ್ಧಿಯು ಅವಳ ಗಂಡನಾಗಿದ್ದನು.

೧೧. ಸಮಿತ್ತು, ಶಾಕ, ಗೋಮಯ, ಇಂಧನಗಳನ್ನು ಸಂಗ್ರಹಿಸುವುದೇ ಮುಖ್ಯವಾದ ವೃತ್ತಿಯಾಗಿ ಹಳೆಯ ಕಂಬಳಿಯೊಂದನ್ನು ಆ ಕಡ್ಡಿಯಂತಹ ಮೈಗೆ ಸುತ್ತಿಕೊಂಡು ಅಲೆಯುತ್ತಿದ್ದಳು.

೧೨. ಕರುವಿನ ಕಿವಿಯ ಬಳಿಯಲ್ಲಿ ಸೇರಿಕೊಂಡಿರುವ ಕ್ರಿಮಿಗಳನ್ನು ಕೀಳುವುದೊಂದು ಕೆಲಸವಾಗಿ " ಮನೆಯ ಸೊಪ್ಪಿನ ತೋಟಕ್ಕೆ ನೀರು ಹುಯ್ಯುವುದಕ್ಕೆ ಮಡಿಕೆಯನ್ನು ತಾ " ಎಂದು ಕೂಗುತ್ತ,

೧೩. ನೀಲಿಯ ಬಣ್ಣದ ನೀರಿನ ತಡಿಯಲ್ಲಿ ಬೆಳೆದ ಹುಲ್ಲು ತಂದು ಕರುಗಳಿಗೆ ಹಾಕುತ್ತ, ಮಾತೆತ್ತಿದರೆ ಬಾಗಿಲು ಸಾರಿಸಿ ರಂಗವಲ್ಲಿ ಹಾಕುತ್ತ,

೧೪. ಮರ್ಯಾದೆ ಕೆಡಿಸಬೇಡಿರೆಂದು ಮನೆಯಾಳುಗಳನ್ನು ಕೇಳಿಕೊಳ್ಳುತ್ತಾ, ತಾನು ಸಮುದ್ರದ ಅಂಚಿನಂತೆ ಮರ್ಯಾದೆಯನ್ನು ಪಾಲಿಸುತ್ತ,

ಜೀರ್ಣಪರ್ಣಸವರ್ಣೈಕ ಕರ್ಣದೋಲಾಧಿರೂಢಯಾ |
ಕಾಷ್ಠತಾಡ್ಯಜರಾಭೀತ ಜೀವವೃತ್ತ್ಯೈವ ಚಿಹ್ನಿತಾ || ೧೫ ||

ಶ್ರೀ ವಸಿಷ್ಠ ಉವಾಚ:—

ಇತ್ಯುಕ್ತ್ವಾ ಸಂಚರಂತೀ ಸಾ ಶಿಖರಿಗ್ರಾಮಕೋಟರೇ |
ಸಂಚರಂತ್ಯಾಃ ಸರಸ್ವತ್ಯಾ ದರ್ಶಯಾಮಾಸ ಸಸ್ಮಯಂ || ೧೬ ||

ಇಯಂ ಮೇ ಪಾಟಲಾಖಂಡಮಂಡಿತಾ ಪುಷ್ಪವಾಟಿಕಾ |
ಇಯಂ ಮೇ ಪುಷ್ಪಿತೋದ್ಯಾನಮಂಡಪಾಶೋಕವಾಟಿಕಾ || ೧೭ ||

ಇಯಂ ಪುಷ್ಕರಿಣೀತೀರದ್ರುಮಾ ಗ್ರಂಥಿತತರ್ಣಕಾ |
ಇಯಂ ಸಾ ಕರ್ಣಿಕಾನಾಮ್ನಾ ತರ್ಣಿಕಾ ಮುಕ್ತಪರ್ಣಿಕಾ || ೧೮ ||

ಇಯಂ ಸಾ ಮೇಽಲಸಾಕೀರ್ಣಾ ವರಾಕೀ ಜಲಹಾರಿಕಾ |
ಅದ್ಯಾಷ್ಟಮಂ ದಿನಂ ಬಾಷ್ಪಕ್ಲಿನ್ನಾಕ್ಷೀ ಪರಿರೋದಿತಿ || ೧೯ ||

---

೧೫. ಜೀರ್ಣಪರ್ಣ ಸಮಾನಳಾಗಿ ಕಿವಿಯೂ ಕೋಲು ಹಿಡಿದಿರುವ ಕೈಯೂ ಹತ್ತಿರ ಹತ್ತಿರ ಬರುವಷ್ಟು ಮುದುಕಿಯಾಗಿ, ಜೀವ ಮಾತ್ರಾ ವಶಿಷ್ಟಳಾಗುವವರೆಗೂ (ಬದುಕಿದ್ದೆನು.)

೧೬. ಶ್ರೀ ವಸಿಷ್ಠನು ಹೇಳಿದನು:—ಹೀಗೆ ಹೇಳಿ ಆ ಗಿರಿಗ್ರಾಮದಲ್ಲಿ ಸಂಚರಿಸುತ್ತ ಆ ಲೀಲೆಯು ನಗು ನಗುತ್ತಾ ಸರಸ್ವತೀದೇವಿಗೆ (ಆ ಗ್ರಾಮದಲ್ಲಿ ತಾನು ಇದ್ದ ಸ್ಥಳಸ್ಥಳವನ್ನೂ) ತೋರಿಸಿದಳು.

೧೭. ಇದೆಯೇ ಪಾದರಿಯ ಮರಗಳಿದ್ದ ಪುಷ್ಪವಾಟಿಕೆ: ಇದು ನನ್ನ ಪುಷ್ಪೋದ್ಯಾನದ ಅಶೋಕವಾಟಿಕೆ,

೧೮. ಇದೇ ನಾನು ಕರುಕಟ್ಟುತ್ತಿದ್ದ ಪುಷ್ಕರಿಣೀ ತೀರದ ಮರ. ಇದೇ ನಾನು ಕರ್ಣಿಕೆಯೆಂದು ಹೆಸರಿಟ್ಟಿದ್ದ ಮುಕ್ತಪರ್ಣಿಕೆಯಾದ ಕರು-

೧೯. ಈ ಹುಡುಗಿಯೇ ನಮ್ಮ ಮನೆಗೆ ನೀರು ಹೊರುತ್ತಿದ್ದ ಸೋಮಾರಿ ಸತ್ತು ಇಂದಿಗೆ ಎಂಟು ದಿನವಾದರೂ ಇವಳು ಇನ್ನೂ ಅಳುತ್ತಿರುವಳು.

---

*ಯಸ್ಯಾಃ ಮುಕ್ತಪರ್ಣಿಕಾ ಮದ್ವಿಯೋಗ ದುಃಖಾದಿತಿ ಅರ್ಥಿಕಂ ಲಭ್ಯತೇ—ತಾ. ಪ್ರ.

ಇಹ ದೇವಿ ಮಯಾ ಭುಕ್ತಮಿಹೋಷಿತಮಿಹ ಸ್ಥಿತಂ |
ಇಹ ಸುಪ್ತಮಿಹಾಪೀತಮಿಹ ದತ್ತಮಿಹಾಹೃತಂ || ೨೦ ||

ಏಷ ಮೇ ಜ್ಯೇಷ್ಠಶರ್ಮಾಖ್ಯಃ ಪುತ್ರೋ ರೋದಿತಿ ಮಂದಿರೇ |
ಏಷಾ ಮೇ ಜಂಗಲೇ ಧೇನುರ್ದೋಗ್ಧ್ರೀ ಚರತಿ ಶಾದ್ವಲಂ || ೨೧ ||

ಗೃಹೇ ವಸಂತದಾಹಾಯ ರೂಕ್ಷಕ್ಷಾರವಿಧೂಸರಂ |
ಸ್ವದೇಹಮಿವ ಪಂಚಾಕ್ಷಂ ಪಶ್ಯೇಮಂ ಪ್ರಘಣಂ ಮಮ || ೨೨ ||

ತುಂಬೀಲತಾಭಿರುಗ್ರಾಭಿಃ ಪುಷ್ಪಾಭಿರಿವ ವೇಷ್ಟಿತಂ |
ಮಹಾನಸಸ್ಥಾನಮಿದಂ ಮಮ ದೇಹಮಿವಾಪರಂ || ೨೩ ||

ಏತೇ ರೋದನತಾಮ್ರಾಕ್ಷಾ ಬಂಧವೋ ಭುವಿ ಬಂಧನಂ |
ಅಂಗದಾರ್ಪಿತರುದ್ರಾಕ್ಷಾ ಆಹರಂತ್ಯನಲೇಂಧನಂ || ೨೪ ||

ಅನಾರತಂ ಶಿಲಾಕಚ್ಛೇ ಗುಚ್ಛಾಚ್ಛೋಟನಕಾರಿಭಿಃ |
ತರಂಗೈಃ ಸ್ಥಗಿತಾಕಾರಂ ಸ್ಪೃಷ್ಟತೀರಲತಾದಲೈಃ || ೨೫ ||

---

೨೦. ಇಲ್ಲಿ ನಾನು ಊಟಮಾಡುತ್ತಿದ್ದೆನು: ಇಲ್ಲಿ ಮಲಗುತ್ತಿದ್ದೆನು: ಇಲ್ಲಿ ಕುಳಿತುಕೊಳ್ಳುತ್ತಿದ್ದೆನು.

೨೧. ಮನೆಯಲ್ಲಿ ಅಳುತ್ತಿರುವ ಇವನೇ ನನ್ನ ಮಗನಾದ ಜ್ಯೇಷ್ಠಶರ್ಮನು. ಗ್ರಾಮಾರಣ್ಯದಲ್ಲಿ ಹುಲ್ಲು ಮೇಯುತ್ತಿರುವುದಲ್ಲಾ ಇದೇ ನಮ್ಮ ಕರೆಯುವ ಹಸು.

೨೨. ಕಾಮನನ್ನು ಸುಟ್ಟಾಗ ಬಿದ್ದ ಬೂದಿಯು ಇನ್ನೂ ಹೊರವಳಯದಲ್ಲಿ ಹಾಗೆಯೇ ಇರುವುದು. ಪಂಚಾಕ್ಷವಾದ ದೇಹದಂತೆ ಇದೂ ಪಂಚದ್ವಾರ ವಾಗಿರುವುದು.

೨೩. ಸೋರೆಬಳ್ಳಿಗಳು ಚೆನ್ನಾಗಿ ಬೆಳೆದು, ನನ್ನ ಇನ್ನೊಂದು ದೇಹವೋ ಎಂಬಂತಿದ್ದ ಈ ಒಲೆಯನ್ನೂ ಆಕ್ರಮಿಸಿರುವುವು.

೨೪. ರುದ್ರಾಕ್ಷಿಗಳನ್ನು ಧರಿಸಿಕೊಂಡು ಸೌದೆಯನ್ನು ತರುತ್ತಿರುವ ಅತ್ತು ಅತ್ತು ಕೆಂಪಾದ ಕಣ್ಣಿನ, ಈ ಬಂಧುಗಳೆಲ್ಲರೂ ಭೂಮಿಯಲ್ಲಿ ನನ್ನನ್ನು ಸರಪಳಿ ಗಳಂತೆ ಅಭಿಮಾನದಿಂದ ಕಟ್ಟಿದರು.

೨೫. ಶಿಲೆಗಳಿರುವ ಕಚ್ಛ (ನೀರುನಿಂತ) ಪ್ರದೇಶದಲ್ಲಿ ಇರುವ ಗುಲ್ಮ

ಸೀಕರಾಕೀರ್ಣಪರ್ಯಂತ ಶಾದ್ವಲಸ್ಥಲಸಲ್ಲತೈಃ |
ಶಿಲಾಫಲಹಕಾಸ್ಫಾಲಫೇನಿಲೋತ್ಪಲಸೀಕರೈಃ || ೨೬ ||

ತುಷಾರೀಕೃತಮಧ್ಯಾಹ್ನದಿವಾಕರಕರೋತ್ಕರೈಃ |
ಫುಲ್ಲಪುಷ್ಪೋತ್ಕರಾಸಾರ ಪ್ರಣಾದೋತ್ಕತಟದ್ರುಮೈಃ || ೨೭ ||

ವಿದ್ರುಮೈರಿವ ಸಂಕ್ರಾಂತಫುಲ್ಲಕಿಂಶುಕಕಾಂತಿಭಿಃ |
ವ್ಯಾಪ್ತಯಾ ಪುಷ್ಪರಾಶೀನಾಂ ಸಮುಲ್ಲಾಸನಕಾರಿಭಿಃ || ೨೮ ||

ಉಹ್ಯಮಾನಫಲಾಪೂರಸುವ್ಯಗ್ರ ಗ್ರಾಮಬಾಲಯಾ |
ಮಹಾಕಲಕಲಾವರ್ತಮತ್ತಯಾ ಗ್ರಾಮಕುಲ್ಯಯಾ || ೨೯ ||

ವೇಷ್ಟಿತಸ್ತರಲಾಸ್ಫಾಲಜಲಧೌತತಲೋಪಲಃ |
ಘನಪತ್ರತರುಚ್ಛನ್ನಚ್ಛಾಯಯಾಸತತಶೀತಲಂ || ೩೦ ||

ಗಳನ್ನು ಹೊಡೆದು, ತೀರದಲ್ಲಿರುವ ಲತಾದಳಗಳನ್ನು ಮುಟ್ಟಿ ಬರುವ ತರಂಗಗಳಿಂದ ಮುಚ್ಚಿಹೋಗಿರುವ,

೨೬. ತುಂತುರುಗಳಿಂದ ತುಂಬಿದ ತೀರ ಪ್ರದೇಶದ ಹುಲ್ಲು ಬೆಳೆದ ಸ್ಥಲಗಳಲ್ಲಿರುವ ಲತೆಗಳಿಂದಲೂ ಕಲ್ಲುಗಳ ಮೇಲೆ ಬಡಿದು ನೊರೆಹಿಡಿದು ಹಾರುವ ತುಂತುರುಗಳಿಂದಲೂ

೨೭. ಮಧ್ಯಾಹ್ನದ ಸೂರ್ಯನ ಕಿರಣಗಳನ್ನು ತಡೆದು ಎಲೆಗಳ ಮೂಲಕ ಬಿಡುವಾಗ ತುಂಡುತುಂಡುಮಾಡಿ ಹಿಮವರ್ಷವೋ ಎಂಬ ಭ್ರಾಂತಿಯನ್ನುಂಟುಮಾಡುವ, ಅರಳಿದ ಹೂಗಳಿಗೆ ಮುತ್ತಿಕೊಂಡು ಜೇಂಕರಿಸುತ್ತಿರುವ ತುಂಬಿಗಳುಳ್ಳ ತಟದ್ರುಮಗಳಿಂದಲೂ,

೨೮. ಹವಳಗಳೋ ಎಂಬಂತೆ ಇರುವ ಹೂವು ಬಿಟ್ಟ ಮುತ್ತುಗದ ಗಿಡಗಳ ಕೆಂಪಿನಿಂದ ಕೂಡಿ, ಸಂತೋಷವಾಗುವಂತೆ ತುಂಬಿರುವ ಪುಷ್ಪರಾಶಿಗಳುಳ್ಳದಾಗಿ, ಇರುವುದು.

೨೯. ಮಹಾಕಲಕಲದಿಂದ ಸುತ್ತಿಕೊಂಡು ಸುತ್ತಿಕೊಂಡು ಹರಿಯುತ್ತಿರುವ ಕಾಲುವೆಯಲ್ಲಿ ಹಣ್ಣುಗಳು ಕೊಚ್ಚಿಕೊಂಡು ಬರುವುವು. ಅವುಗಳನ್ನು ಹಿಡಿಯಬೇಕೆಂದು ಆ ಪ್ರಯತ್ನಪಡುತ್ತಿರುವ ಬಾಲೆಯರು ಇರುವರು.

೩೦. ಬಂದು ಬಂದು ಹೊಡೆಯುತ್ತಿರುವ ನೀರಿನಿಂದ ಚೆನ್ನಾಗಿ ತೊಳೆ

ಅಯಮಾಲಕ್ಷ್ಯತೇ ಫುಲ್ಲಲತಾವಲನ ಸುಂದರಂ |
ದಲದ್ಗುಲುಚ್ಛಕಾಚ್ಛನ್ನಗವಾಕ್ಷೋ ಗೃಹಮಂಡಪಃ || ೩೧ ||

ಅತ್ರ ಮೇ ಸಂಸ್ಥಿತೋ ಭರ್ತಾ ಜೀವಾಕಾಶತಯಾಽಕೃತಿಃ |
ಚತುಃಸಮುದ್ರಪರ್ಯಂತಮೇಖಲಾಯಾ ಭುವಃ ಪತಿಃ || ೩೨ ||

ಆ ಸ್ಮೃತಂ ಪೂರ್ವಮೇತೇನ ಕಿಲಾಸೀದಭಿವಾಂಛಿತಂ |
ಶೀಘ್ರಂ ಸ್ಯಾಮೇವ ರಾಜೇತಿ ತೀವ್ರಸಂವೇಗಧರ್ಮಿಣಾ || ೩೩ ||

ದಿನೈರಷ್ಟಭಿರೇವಾಸೌ ತೇನ ರಾಜ್ಯಂ ಸಮೃದ್ಧಿಮತ್ |
ಚಿರಕಾಲಪ್ರತ್ಯಯದಂ ಪ್ರಾಪ್ತವಾನ್ ಪರಮೇಶ್ವರಿ || ೩೪ ||

ಅತ್ರಾಸೌ ಭರ್ತೃಜೀವೋ ಮೇ ಸ್ಥಿತೋ ವ್ಯೋಮ್ನಿ ಗೃಹೇ ನೃಪಃ |
ಅದೃಶ್ಯಃ ಖೇ ಯಥಾ ವಾಯುರಾಮೋದೋ ವಾನಿಲೇ ಯಥಾ || ೩೫ ||

ದಂತಿರುವ ಬಂಡೆಯು ದೊಡ್ಡದೊಡ್ಡ ಎಲೆಗಳುಳ್ಳ ಮರದ ನೆಳಲಿನಿಂದ ಯಾವಾಗಲೂ ತಣ್ಣಗಿರುವುದು.

೩೧. ಫುಲ್ಲಲತೆಗಳು ಸುತ್ತಿರುವುದರಿಂದ ಸುಂದರವಾಗಿ, ಅರಳಿರುವ ಹೂಗಳ ಗೊಂಚಲುಗಳು ಮುಚ್ಚಿರುವ ಕಿಟಕಿಗಳುಳ್ಳ ಗೃಹಮಂಟಪವು ಕಾಣಿಸುತ್ತಿರುವುದು.

೩೨. ಚತುಸ್ಸಮುದ್ರಗಳ ನಡುವಿನ ನೆಲವನ್ನೆಲ್ಲ ಆಳುತ್ತಿದ್ದರೂ ಜೀವಾಕಾಶವೇ ಆಕೃತಿಯಾಗುಳ್ಳ ನನ್ನ ಗಂಡನು ಇಲ್ಲಿಯೇ ಇದ್ದುದು.

೩೩. ಆಃ! ಈಗ ನೆನೆಪಾಯಿತು. ನಾನು ಶೀಘ್ರವಾಗಿ ರಾಜನಾಗಬಾರದೆ ಎಂದು ಬಹು ತೀವ್ರವಾಗಿ ಈತನು ಅಭಿವಾಂಛಿಸುತ್ತಿದ್ದನು.

೩೪. ಎಂಟು ದಿನಗಳಲ್ಲಿಯೇ ಈತನು ಸಂಪನ್ನವಾದ ರಾಜ್ಯವಾಳಿದನು! ಪರಮೇಶ್ವರಿಯೆ, ಬಹುಕಾಲ ರಾಜ್ಯವಾಳಿದೆನೆಂಬ ನಂಬಿಕೆಯೂ ಅವನಿಗೆ ಬಂತು.

೩೫. ಆಕಾಶದಲ್ಲಿ ವಾಯುವು ಅದೃಶ್ಯವಾಗಿರುವಂತೆ, ಗಾಳಿಯಲ್ಲಿ ಸುಗಂಧವಿರುವಂತೆ, ನನ್ನ ಭರ್ತೃಜೀವವು ಗೃಹಾಕಾಶದಲ್ಲಿಯೇ ರಾಜನಾಯಿತು.

ಇಹೈವಾಂಗುಷ್ಠಮಾತ್ರಾಂತೇ ತದ್ವ್ಯೋಮ್ನ್ಯೇವ ಪದಂ ಸ್ಥಿತಂ |
ಮದ್ಭರ್ತೃರಾಜ್ಯಂ ಸಮವಗತಂ ಯೋಜನಕೋಟಿಭಾಕ್ || ೩೬ ||

ಆವಾಂ ಖಮೇವ ಖಸ್ಥಂ ಚ ಭರ್ತೃರಾಜ್ಯಂ ಮಮೇಶ್ವರಿ |
ಪೂರ್ಣಂ ಸಹಸ್ರೈಃ ಶೈಲಾನಾಂ ಮಹಾಮಾಯೇಯಮಾತತಾ || ೩೭ ||

ತದ್ದೇವಿ ಭರ್ತೃನಗರಂ ಪುನರ್ಗಂತುಂ ಮಮೇಪ್ಸಿತಂ |
ತದೇಹಿ ತತ್ರ ಗಚ್ಛಾವಃ ಕಿಂ ದೂರಂ ವ್ಯವಸಾಯಿನಾಂ || ೩೮ ||

ಶ್ರೀ ವಸಿಷ್ಠ ಉವಾಚ—

ಇತ್ಯುಕ್ತ್ವಾ ಪ್ರಣತಾ ದೇವೀಂ ಸಾ ಪ್ರವಿಶ್ಯಾಶು ಮಂಡಪಂ |
ವಿಹಂಗೀವ ತಯಾ ಸಾಕಂ ಪುಪ್ಲುವೇ ಸಿತಿಭಂ ನಭಃ || ೩೯ ||

---

೩೬. ಇಲ್ಲಿಯೇ ಅಂಗುಷ್ಠ ಮಾತ್ರದ ಆಕಾಶದಲ್ಲಿಯೇ ಆ ರಾಜ್ಯ ಪದವೆಲ್ಲವೂ, ಒಂದು ಕೋಟಿ ಯೋಜನ ವಿಸ್ತೀರ್ಣವಾದ ನನ್ನ ಭರ್ತೃರಾಜ್ಯವೆಲ್ಲವೂ ಇತ್ತು.

೩೭. ನಾನೂ ನನ್ನ ಗಂಡ ಇಬ್ಬರೂ ಚಿದಾಕಾಶವೇ! ನನ್ನ ಭರ್ತೃರಾಜ್ಯವೂ, ಈಶ್ವರಿಯೆ, ಸಾವಿರಾರು ಶೈಲಗಳಿಂದ ಪೂರ್ಣವಾಗಿದ್ದರೂ ಅದು ಇದ್ದುದು ಆಕಾಶದಲ್ಲಿಯೇ! ಇದೆಲ್ಲವೂ ಆ ಮಹಾಮಾಯೆಯ ಹರಡುವಿಕೆಯು.

೩೮. ದೇವಿ, ಮತ್ತೆ ಗಂಡನ ರಾಜಧಾನಿಗೆ ಹೋಗಬೇಕೆನ್ನಿಸಿತು. ಅದರಿಂದ, ಬಾ, ಹೋಗೋಣ, ವ್ಯವಸಾಯಿಗಳಿಗೆ ದೂರವೆಲ್ಲಿಯದು ?

(ವ್ಯವಸಾಯ=ಈ ಶಬ್ದವನ್ನು ಬ್ರಹ್ಮ ಜ್ಞಾನಾಭ್ಯಾಸ ಎಂಬ ಅರ್ಥದಲ್ಲಿ ತೆಗೆದುಕೊಳ್ಳುವುದು ಸರಿಯೆಂದು ತೋರುತ್ತದೆ--ಚಿಂತಿಸಿ :--ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ || ಬಹುಶಾಖಾಹ್ಯನಂತಾಶ್ಚ ಬುದ್ಧಯೋಽ ವ್ಯವಸಾಯಿನಾಂ ಗೀತಾ. ಅ. ೨ ಶ್ಲೋ. ೪೧.)

೩೯. ಶ್ರೀವಸಿಷ್ಠನು ಹೇಳಿದನು :—ಹೀಗೆ ಹೇಳಿ ಲೀಲೆಯು ದೇವಿಗೆ ನಮಸ್ಕಾರಮಾಡಿ, ಅವಳೊಡನೆ ಗೃಹಮಂಡಪವನ್ನು ಪ್ರವೇಶಿಸಿ ಹಕ್ಕಿಯಂತೆ ಆಕಾಶದಲ್ಲಿ ಹಾರಿದಳು.

ಸಿನಿಭಂನಭಃ=ಎಂದು ಮೂಲದಲ್ಲಿದೆ ಆದಕ್ಕೆ ಸಿತಿಭಂ ಎಂದು ಪಾಠಾಂತರವೂ ಇದೆ. ವ್ಯಾಖ್ಯಾನದಲ್ಲಿ ನಭೋಮಂಡಪಾತಃ ಕಲ್ಪಿತಂ ಮಹಾಕಾಶಂ

ಭಿನ್ನಾಂಜನಚಯಪ್ರಖ್ಯಂ ಸೌಮ್ಯೈಕಾರ್ಣವಸುಂದರಂ |
ನಾರಾಯಣಾಂಗಸದೃಶಂ ಭೃಂಗಪೃಷ್ಠಾಮಲಚ್ಛವಿ ॥ ೪೦ ॥

ಮೇಘಮಾರ್ಗಮತಿಕ್ರಮ್ಯ ವಾತಸ್ಕಂಧಾವನಿಂ ತಥಾ |
ಸೌರಮಾರ್ಗಮಥಾಕ್ರಮ್ಯ ಚಂದ್ರಮಾರ್ಗಮತೀತ್ಯ ಚ ॥ ೪೧ ॥

ಧ್ರುವಮಾರ್ಗೋತ್ತರಂ ಗತ್ವಾ ಸಾಧ್ಯಾನಾಂ ಮಾರ್ಗಮೇತ್ಯ ಚ |
ಸಿದ್ಧಾನಾಂ ಸಮತೀತ್ಯೋರ್ವೀಮುಲ್ಲಂಘ್ಯ ಸ್ವರ್ಗಮಂಡಲಂ ॥ ೪೨ ॥

ಬ್ರಹ್ಮಲೋಕೋತ್ತರಂ ಗತ್ವಾ ತುಷಿತಾನಾಂ ಚ ಮಂಡಲಂ |
ಗೋಲೋಕಂ ಶಿವಲೋಕಂ ಚ ಪಿತೃಲೋಕಮತೀತ್ಯ ಚ ॥ ೪೩ ॥

ವಿದೇಹಾನಾಂ ಸದೇಹಾನಾಂ ಲೋಕಾನುತ್ತೀರ್ಯ ದೂರಗಂ |
ದೂರಾದ್ದೂರಮಥೋ ಗತ್ವಾ ಕಿಂಚಿದ್ಬುದ್ಧಾ ಬಭೂವ ಸಾ ॥ ೪೪ ॥

ಪಶ್ಚಾದಾಲೋಕಯಾಮಾಸ ಸಮತೀತಂ ನಭಸ್ಥಲಂ |
ಯಾವನ್ನ ಕಿಂಚಿಚ್ಚಂದ್ರಾರ್ಕತಾರಾದ್ಯಾ ಲಕ್ಷ್ಯತೇ ಹ್ಯಧಃ ॥ ೪೫ ॥

ಎಂದಿದೆ. 'ಸಿನಿ' ಎಂದರೆ ಬೆಳ್ಳಗಿರುವ ಎಂಬರ್ಥವಿದೆ. ಸಿನಿಭಂ ನಭಃ ಎಂದರೆ ಪ್ರಕಾಶಮಯವಾದ ಆಕಾಶ ಎಂದು ಅರ್ಥಮಾಡಿಕೊಳ್ಳಬಹುದು. ಆದರೆ, ಮುಂದಿನ ಶ್ಲೋಕ ಅದಕ್ಕೆ ಅನುಕೂಲವಾಗಿಲ್ಲ.

೪೦–೪. ಚೆನ್ನಾಗಿ ಅರೆದಿರುವ ಕಾಡಿಗೆಯ ಮುದ್ದೆಯಂತೆ ಸೌಮ್ಯವಾಗಿ, ತಾನೇ ತಾನಾಗಿರುವ ಸುಂದರ ಸಮುದ್ರದಂತೆ, ನಾರಾಯಣನ ದೇಹದಂತೆ, ದುಂಬಿಗಳ ಬೆನ್ನಿನಂತೆ ಕಾಂತಿಯುಳ್ಳ ಮೇಘಮಾರ್ಗವನ್ನು ಅತಿಕ್ರಮಿಸಿ ವಾತಸ್ಕಂಧ ಭೂಮಿಯನ್ನೂ ಸೌರಮಾರ್ಗವನ್ನೂ ಚಂದ್ರಮಾರ್ಗವನ್ನೂ ದಾಟಿ, ಧ್ರುವಮಾರ್ಗದ ಆಚೆಹೋಗಿ, ಸಾಧ್ಯ, ಸಿದ್ಧ, ಮಾರ್ಗಗಳನ್ನು ಕಳೆದು, ಉರ್ವೀ ಮಂಡಲವನ್ನು ಬಿಟ್ಟು, ಸ್ವರ್ಗಮಂಡಲ ಬ್ರಹ್ಮಲೋಕವನ್ನೂ ತುಷಿತಲೋಕ, ಗೋಲೋಕ, ಶಿವಲೋಕ, ಪಿತೃಲೋಕಗಳನ್ನೂ ದಾಟಿ, ದೇಹಮುಕ್ತ ಸದೇಹಮುಕ್ತರ ಲೋಕಗಳನ್ನೂ ದಾಟಿ ದೂರ ದೂರ ದೂರ ಹೋಗಿ ಮತ್ತೆ ಎಚ್ಚರಗೊಂಡಳು. *

೪೫. ಹಿಂದೆ ಕಳೆದುಹೋಗಿರುವ ನಭಸ್ಥಲವನ್ನು ನೋಡಿದಳು: ಚಂದ್ರ, ಸೂರ್ಯ, ನಕ್ಷತ್ರಗಳೊಂದೂ ಕಾಣಿಸಲಿಲ್ಲ.

---

* ಅಪರಿಚ್ಛಿನ್ನ ಸ್ವರೂಪ ವಿಸ್ಮರಣಾತ್ ಕಿಂಚಿದ್ಬುದ್ಧಾ—ತಾ. ಪ್ರ.

ತಮಸ್ತಿಮಿತಗಂಭೀರಮಾಶಾಕುಹರಪೂರಕಂ |
ಏಕಾರ್ಣವೋದರಪ್ರಖ್ಯಂ ಶಿಲೋದರಘನಂ ಸ್ಥಿತಂ || ೪೬ ||

ಲೀಲೋವಾಚ:—

ತದ್ದೇವಿ ಭಾಸ್ಕರಾದೀನಾಂ ಕ್ವಾಧಸ್ತೇಜೋ ಗತಂ ವದ |
ಶಿಲಾಜಠರನಿಷ್ಪಂದಂ ಮುಷ್ಟಿಗ್ರಾಹ್ಯಂ ತಮಃ ಕುತಃ || ೪೭ ||

ಶ್ರೀ ದೇವ್ಯುವಾಚ:—

ಏತಾವತೀಮಿಮಾಂ ವ್ಯೋಮ್ನಃ ಪದವೀಮಾಗತಾಸಿ ಭೋಃ |
ಅರ್ಕಾದೀನ್ಯಪಿ ತೇಜಾಂಸಿ ಯತೋ ದೃಶ್ಯಂತ ಏವ ನೋ || ೪೮ ||

ಯಥಾ ಮಹಾಂಧಕೂಪಾಧಃ ಖದ್ಯೋತೋ ನಾವಲೋಕ್ಯತೇ |
ಪೃಷ್ಠಗೇನ ತಥೇಹಾತೋ ನಾಧಃ ಸೂರ್ಯೋಽವಲೋಕ್ಯತೇ || ೪೯ ||

ಲೀಲೋವಾಚ :—

ಅಹೋ ನು ಪದವೀಂ ದೂರಮಾವಾಮೇತಾಮುಪಗತೇ |
ಸೂರ್ಯೋಽಪ್ಯಧೋಽಣುಕಣವನ್ನ ಮನಾಗಪಿ ಲಕ್ಷ್ಯತೇ || ೫೦ ||

---

೪೬. ಕತ್ತಲೆಯಿಂದ ಗಂಭೀರವಾಗಿ, ದಿಕ್ಕುಹರಗಳೂ ಕಾಣಿಸದೆ ಸಮುದ್ರ ಮಧ್ಯಪ್ರಾಯವಾಗಿ, ಶಿಲೋದರದಂತೆ ಘನವಾಗಿತ್ತು ಆ ಪ್ರದೇಶ.

೪೭. ಲೀಲೆಯು ಕೇಳಿದಳು :—ದೇವಿ, ಭಾಸ್ಕರಾದಿಗಳ ತೇಜಸ್ಸು ಎಲ್ಲಿ ಹೋಯಿತು ? ಶಿಲೋದರದಂತೆ ನಿಶ್ಚಲವಾಗಿರುವ ಇಲ್ಲಿ ತಮಸ್ಸು ಮುಷ್ಟಿಗ್ರಾಹ್ಯವಾಗಿರುವುದಲ್ಲ !

೪೮-೪೯. ಶ್ರೀ ದೇವಿಯು ಹೇಳಿದಳು :—ಆಕಾಶದ ಈ ಪದವಿ (ಪದರ) ಯಲ್ಲಿ ಸೂರ್ಯಾದಿಗಳ ತೇಜಸ್ಸು ಕಾಣಿಸುವುದಿಲ್ಲ. ಮಹಾ ಕೂಪದ ಕೆಳಗೆ ನಿಂತಿರುವವನಿಗೆ ಸೂರ್ಯನು ಕಾಣಿಸುವನೆ ? ಅದರಂತೆ ಇಲ್ಲಿಂದ ಕೆಳಗೆ ಸೂರ್ಯನು ಕಾಣಿಸುವುದಿಲ್ಲ.

೫೦. ಲೀಲೆಯು ಕೇಳಿದಳು :—ಅಹೋ ! ದೂರದಲ್ಲಿರುವ ಈ ಸ್ಥಾನಕ್ಕೆ ಬಂದಿರುವೆವು. ಸೂರ್ಯನು ಕೂಡ ಇಲ್ಲಿ ಒಂದು ಅಣುಕದಷ್ಟಾಗಿ ಕೂಡ ಕಾಣಿಸುವುದಿಲ್ಲ.

ಇತ ಉತ್ತರಮನ್ಯಾ ಸ್ಯಾತ್ಪದವೀ ಕಾನು ಕೀದೃಶೀ |
ಕಥಂ ಚ ಮಾತರೇತವ್ಯಾ ಕಥ್ಯತಾಮಿತಿ ದೇವಿ ಮೇ || ೫೧ ||

ಶ್ರೀದೇವ್ಯುವಾಚ :—

ಇತ ಉತ್ತರಮಗ್ರೇ ತೇ ಬ್ರಹ್ಮಾಂಡಪುಟಕರ್ಪರಂ |
ಯಸ್ಯ ಚಂದ್ರಾದಯೋ ನಾಮ ಧೂಲಿಲೇಶಾಃ ಸಮುತ್ಥಿತಾಃ || ೫೨ ||

ಶ್ರೀ ವಸಿಷ್ಠ ಉವಾಚ—

ಇತಿ ಪ್ರಕಥಯಂತ್ಯೌ ತೇ ಪ್ರಾಪ್ತೇ ಬ್ರಹ್ಮಾಂಡಕರ್ಪರಂ |
ಭ್ರಮರ್ಯಾವಿವ ಶೈಲಸ್ಯ ಕುಡ್ಯಂ ನಿಬಿಡಮಂಡಪಂ || ೫೩ ||

ಅಕ್ಲೇಶೇನೈವ ತೇ ತಸ್ಮಾನ್ನಿರ್ಗತೇ ಗಗನಾದಿವ |
ನಿಶ್ಚಯಸ್ಥಂ ಹಿ ಯದ್ವಸ್ತು ತದ್ವಜ್ರಗುರು ನೇತರತ್ || ೫೪ ||

---

೫೧. ಇಲ್ಲಿಂದಾಚೆಗೆ ಇರುವ ಸ್ಥಾನವು ಯಾವುದು? ಅದು ಎಂಥದು? ಅಲ್ಲಿಗೆ ಹೋಗುವುದೆಂತು? ಎಲೈ ತಾಯೇ, ದೇವಿಯೆ, ಹೇಳು,

೫೨. ಶ್ರೀ ದೇವಿಯು ಹೇಳಿದಳು :—ಇಲ್ಲಿಂದಾಚೆಗೆ ಬ್ರಹ್ಮಾಂಡ ಪುಟ ಕರ್ಪರವು: ಚಂದ್ರಾದಿಗಳೆಲ್ಲರೂ ಅದರ ಧೂಳಿನ ಕಣಗಳಾಗಿ ಹಾರಿ ಬಂದವರು *

೫೩. ಶ್ರೀ ವಸಿಷ್ಠನು ಹೇಳಿದನು :—ಬೆಟ್ಟದ ಹೊಟ್ಟೆಯನ್ನು ಹೊಗುವ ದುಂಬಿಗಳಂತೆ ಅವರಿಬ್ಬರೂ ಮಾತನಾಡಿಕೊಳ್ಳುತ್ತ ಬ್ರಹ್ಮಾಂಡ ಕರ್ಪರವನ್ನು ಸೇರಿದರು.

೫೪. ಹಾಗೆಯೇ ಏನೂ ಕಷ್ಟವಿಲ್ಲದೆ, ಅಲ್ಲಿಂದ ಹೊರಕ್ಕೂ ಹೊರಟು ಹೋದರು. ಯಾರು ಯಾವುದನ್ನು ದಿಟವೆಂದು ನಂಬುವರೋ ಅವರಿಗೆ ಅದು ವಜ್ರದಂತೆ ಗುರುವಾಗಿರುವುದು. ನಂಬದಿದ್ದುದು ಹಾಗಿರುವುದಿಲ್ಲ.

---

* ಪುಟಸ್ಯ ಸಂಪುಟಸ್ಯ, ಕರ್ಪರಂ ಊರ್ಧ್ವಖರ್ಪರಂ ತಾ. ಪ್ರ.

ನಿರಾವರಣವಿಜ್ಞಾನಾ ಸಾ ದದರ್ಶ ತತಸ್ತತಂ |
ಜಲಾದ್ಯಾವರಣಂ ಪಾರೇ ಬ್ರಹ್ಮಾಂಡಸ್ಯಾತಿಭಾಸುರಂ || ೫೫ ||

ಬ್ರಹ್ಮಾಂಡಾದ್ದಶಗುಣತಸ್ತೋಯಂ ತತ್ರ ವ್ಯವಸ್ಥಿತಂ |
ಆಸ್ಥಿತಂ ವೇಷ್ಟಯಿತ್ವಾ ತು ತ್ವಗಿವಾಕ್ಷೋಟಪೃಷ್ಠಗಾ || ೫೬ ||

ತಸ್ಮಾದ್ದಶಗುಣೋ ವಹ್ನಿಸ್ತಸ್ಮಾದ್ದಶಗುಣೋಽನಿಲಃ |
ತತೋ ದಶಗುಣಂ ವ್ಯೋಮ ತತಃ ಪರಮಮಂಬರಂ || ೫೭ ||

ತಸ್ಮಿನ್ ಪರಮಕೇ ವ್ಯೋಮ್ನಿ ಮಧ್ಯಾದ್ಯಂತವಿಕಲ್ಪನಾಃ |
ನ ಕಾಶ್ಚನ ಸಮುದ್ಯಂತಿ ವಂಧ್ಯಾಪುತ್ರಕಥಾ ಇವ || ೫೮ ||

ಕೇವಲಂ ವಿತತಂ ಶಾಂತಂ ತದನಾದಿ ಗತಭ್ರಮಂ |
ಆದ್ಯಂತಮಧ್ಯರಹಿತಂ ಮಹತ್ಯಾತ್ಮನಿ ತಿಷ್ಠತಿ || ೫೯ ||

---

೫೫. ಲೀಲೆಯು ನಿರಾವರಣ ವಿಜ್ಞಾನವುಳ್ಳವಳಾದುದರಿಂದ (ಅವಳ ಜ್ಞಾನಕ್ಕೆ ಯಾವ ಅಡ್ಡಿಯೂ ಇಲ್ಲದಿದ್ದುದರಿಂದ) ಅವಳು ಅಲ್ಲಿಂದಾಚೆಗೆ ಹರಡಿರುವ ಜಲಾವರಣವನ್ನು ಕಂಡಳು. ಅದು ಬ್ರಹ್ಮಾಂಡದ ಹೊರಗೆ ಇದ್ದು ಬಲು ಮುದ್ದಾಗಿತ್ತು.

೫೬. ಆ ಜಲಾವರಣವು ಬ್ರಹ್ಮಾಂಡ ಮಂಡಲಕ್ಕಿಂತ ದಶಗುಣವಾಗಿ ಅಕ್ರೋಟದ ಹಣ್ಣನ್ನು ಸುತ್ತಿಕೊಂಡಿರುವ ಸಿಪ್ಪೆಯಂತಿತ್ತು.

೫೭. ಅದರ ಸುತ್ತಲೂ ಅಗ್ನಿ, ವಾಯು, ಆಕಾಶಮಂಡಲಗಳು ಒಂದಕ್ಕಿಂತ ಒಂದು ದಶಗುಣಾಧಿಕವಾಗಿ ನೆಲಸಿದ್ದುವು. ಅದರಿಂದಾಚೆ ಪರಮಾಕಾಶವಿತ್ತು.

೫೮. ಆ ಪರಮಾಕಾಶದಲ್ಲಿ ಮಧ್ಯ, ಆದಿ, ಅಂತಗಳೆಂಬ ಕಲ್ಪನೆಗಳು ಯಾವುದೂ, ವಂಧ್ಯಾಪುತ್ರನುಂಟೆಂಬ ಮಾತು ಹೇಗೋ (ಅತ್ಯಂತಾಭಾವವೋ) ಹಾಗೆ ಇಲ್ಲವೇ ಇಲ್ಲ.

೫೯. ಆ ಪರಮಾಕಾಶವು ಕೇವಲವು (ಅದ್ವಿತೀಯವು): ಶಾಂತವು (ಕಲ್ಪನಾರಹಿತವು); ವಿತತವು (ಹರಡಿರುವುದು) ಆದಿಯಿಲ್ಲದ್ದು: ಅಲ್ಲಿ ಭ್ರಮಾದಿಗಳು ಯಾವುವೂ ಇಲ್ಲ, ಅಲ್ಲಿ ಆದಿ, ಮಧ್ಯ, ಅಂತಗಳೂ ಕೂಡ ಇಲ್ಲ, (ಇಂತಹ ಆ ಪರಮಾಕಾಶವು) ಮಹತ್ತಾದ ಆತ್ಮನಲ್ಲಿ ಇರುವುದು.*

---

* ಆದಿ, ಮಧ್ಯ, ಅಂತ ಎಂಬ ಪರಿಚ್ಛೇದಗಳು ದಿಕ್ಕು, ಕಾಲ, ಎರಡಕ್ಕೂ ಅನ್ವಯಿಸುವುವು. ಮಹತ್ಯಾತ್ಮನಿತಿಷ್ಠತಿ–"ಸ್ವೇಮಹಿಮ್ನಿ ತಿಷ್ಠತಿ" ಇತಿ ಶ್ರುತಿಃ—ತಾ. ಪ್ರ.

ಆಕಲ್ಪಮುತ್ತಮಬಲೇನ ಶಿಲಾ ಪತೇಚ್ಚೇ-
ತ್ತಸ್ಮಿನ್ ಬಲಾತ್ಪತಗರಾಡಪಿ ಚೋತ್ಪತೇಚ್ಚೇತ್ |
ತದ್ಯೋಜನಂ ನ ಲಭತೇ ವಿಮಲೇಂಬರೇಂತ
ರ್ವಾಕಲ್ಪಮೇಕಜವಗೋಽಪ್ಯಥ ಮಾರುತೋಽಪಿ || ೬೦ ||

ಇತ್ಯಾರ್ಷೇ ಶ್ರೀ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿಪ್ರಕರಣೇ
"ಪರಮಾಕಾಶವರ್ಣನಂ" ನಾಮ ಏಕೋನತ್ರಿಂಶಃ ಸರ್ಗಃ

---

೬೦. ಒಂದು ಶಿಲೆಯು ಒಂದು ಕಲ್ಪದವರೆಗೂ ಬೀಳುತ್ತಲೇ ಇದ್ದರೆ, ಗರುಡನೂ ಅದೇ ಆಕಾಶದಲ್ಲಿ ತನ್ನ ಬಲವನ್ನೆಲ್ಲಾ ಪ್ರಯೋಗಿಸಿ ಹಾರುತ್ತಿದ್ದರೆ, ಅದೇ ವೇಗದಿಂದ ಮಾರುತನೂ ಇನ್ನೊಂದುಕಡೆ ಹಾರಿಬರುತ್ತಿದ್ದರೂ ಒಂದು ಕಡೆಯಿಂದಾದರೂ ಅವರು ಮೂವರು ಒಬ್ಬರನ್ನೊಬ್ಬರು ಸೇರಲಾರರು.

ಇಂತಿಪ್ಪ ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಪರಮಾಕಾಶ ವರ್ಣನ"
ಎಂಬ ಇಪ್ಪತ್ತೊಂಭತ್ತನೆಯ ಸರ್ಗವು.

ತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಪೃಥಿವ್ಯಪ್ತೇಜಸಾಂ ತತ್ರ ನಭಸ್ವನ್ನಭಸೋರಪಿ |
ಯಥೋತ್ತರಂ ದಶಗುಣಾನತೀತ್ಯಾವರಣಾನ್ ಕ್ಷಣಾತ್ ‖ ೧ ‖

ದದರ್ಶ ಪರಮಾಕಾಶಂ ತತ್ಪ್ರಮಾಣವಿವರ್ಜಿತಂ |
ತಥಾ ತತಂ ಜಗದಿದಂ ಯಥಾ ತತ್ರಾಂಡಮಾತ್ರಕಂ ‖ ೨ ‖

ತಾದೃಶಾವರಣಾನ್ ಸರ್ಗಾನ್ ಬ್ರಹ್ಮಾಂಡೇಷು ದದರ್ಶ ಸಾ |
ಕೋಟಿಶಃ ಸ್ಫುರಿತಾನ್ ವ್ಯೋಮ್ನಿ ತ್ರಸರೇಣೂನಿವಾತಪೇ ‖ ೩ ‖

ಮಹಾಕಾಶಮಹಾಂಭೋಧೌ ಮಹಾಶೂನ್ಯತ್ವವಾರಿಣಿ |
ಮಹಾಚಿದ್ದ್ರವಭಾವೋತ್ಥಾನ್ ಬುದ್ಬುದಾನರ್ಬುದಪ್ರಭಾನ್ ‖ ೪ ‖

ಮೂವತ್ತನೆಯ ಸರ್ಗ

೧-೨. ಶ್ರೀ ವಸಿಷ್ಠನು ಹೇಳಿದನು :—ಒಂದಕ್ಕಿಂತ ಒಂದು ಹತ್ತರಷ್ಟು ಹತ್ತರಷ್ಟು ಹೆಚ್ಚಾಗಿರುವ ಪಂಚಭೂತ ಮಂಡಲಗಳನ್ನೂ ಒಂದು ಕ್ಷಣದಲ್ಲಿ ದಾಟಿ, ಇಷ್ಟು ಎಂಬ ಪ್ರಮಾಣವಿಲ್ಲದೆ, ತಾನೇ ತಾನಾಗಿ ಇರುವ ಪರಮಾಕಾಶಕ್ಕೆ ಬಂದರು. ಆ ಪರಮಾಕಾಶದಲ್ಲಿ ಇಷ್ಟು ವಿಸ್ತಾರವಾದ ಈ ಜಗತ್ತೆಲ್ಲವೂ ಒಂದು ಮೊಟ್ಟೆಯಷ್ಟು ಮಾತ್ರವಾಗಿತ್ತು.

೩. ಬ್ರಹ್ಮಾಂಡಗಳಲ್ಲಿ ಅಂತಹ ಪಂಚಭೂತಗಳ ಆವರಣಗಳೂ ಜಗತ್ತುಗಳೂ ಬಿಸಿಲುಕೋಲಿನಲ್ಲಿ ಹಾರಾಡುವ ತ್ರಸರೇಣುಗಳಂತೆ, ಪರಮಾಕಾಶದಲ್ಲಿ ಚಿತ್ತಿನಿಂದ ಸ್ಫುರಿಸುತ್ತಿರುವುದನ್ನು ಕಂಡಳು.

೪. ಮಹಾಶೂನ್ಯತ್ವ (ಅವಿದ್ಯೆ) ವೇ ನೀರಾಗಿರುವ ಆ ಮಹಾಕಾಶ ಮಹಾಂಬೋಧಿಯಲ್ಲಿ ಮಹಾಚಿತ್ತಿನ ದ್ರವಾಂಶದಿಂದ ಬುದ್ಬುದಗಳಂತೆ ಬ್ರಹ್ಮಾಂಡಗಳು ಅರ್ಬುದ ಸಂಖ್ಯೆಯಿಂದ ಏಳುತ್ತಿದ್ದುವು.

ಕಾಂಶ್ಚಿದಾಪತತೋಽಧಸ್ತಾತ್ಕಾಂಶ್ಚಿಚ್ಚೋಪರಿ ಗಚ್ಛತಃ |
ಕಾಂಶ್ಚಿತ್ತಿರ್ಯಗ್ಗತೀನನ್ಯಾನ್ ಸ್ಥಿತಾಂಸ್ತತ್ರಾರ್ಥ ಸ್ವಸಂವಿದಾ || ೫ ||

ಯತ್ರ ಯತ್ರೋದಿತಾ ಸಂವಿದ್ಯೇಷಾಂ ಯೇಷಾಂ ಯಥಾ ಯಥಾ |
ತತ್ರ ತತ್ರೋದಿತಂ ರೂಪಂ ತೇಷಾಂ ತೇಷಾಂ ತಥಾ ತಥಾ || ೬ ||

ನೇಹೈವ ತತ್ರ ನಾಮೋರ್ಧ್ವಂ ನಾಧೋ ನಚ ಗಮಾಗಮಾಃ |
ಅನ್ಯದೇವ ಪದಂ ಕಿಂಚಿತ್ತಸ್ಮಾದ್ದೇಹಾಗಮಂ ಹಿ ತತ್ || ೭ ||

ಉತ್ಪದ್ಯೋತ್ಪದ್ಯತೇ ತತ್ರ ಸ್ವಯಂ ಸಂವಿತ್ಸ್ವಭಾವತಃ |
ಸ್ವಸಂಕಲ್ಪೈಃ ಶಮಂ ಯಾತಿ ಬಾಲಸಂಕಲ್ಪಜಾಲವತ್ || ೮ ||

ಶ್ರೀ ರಾಮ ಉವಾಚ :—

ಕಿಮಧಃ ಸ್ಯಾತ್ಕಿಮೂರ್ಧ್ವಂ ಸ್ಯಾತ್ಕಿಂ ತಿರ್ಯಕ್ತತ್ರ ಭಾಸುರೇ |
ಇತಿ ಬ್ರೂಹಿ ಮಮ ಬ್ರಹ್ಮನ್ನಿಹೈವ ಯದಿ ನ ಸ್ಥಿತಂ || ೯ ||

---

೫. ಆಯಾ ಬ್ರಹ್ಮಾಂಡಗಳಲ್ಲಿ ತತ್ತದಭಿಮಾನಿ ಜೀವನ ಸಂವಿತ್ತಿಗನುಸಾರವಾಗಿ, ಕೆಲವು ಕೆಳಕ್ಕೆ ಬೀಳುತ್ತಿದ್ದವು: ಇನ್ನು ಕೆಲವು ಅಡ್ಡವಾಗಿ ಹೋಗುತ್ತಿದ್ದವು: ಮತ್ತೆ ಕೆಲವು ಇದ್ದ ಕಡೆಯೇ ಇರುತ್ತಿದ್ದವು.

೬. ಯಾವ ಯಾವ ಜೀವನಿಗೆ ಸಂವಿತ್ತು ಯಾವ ಯಾವ ರೂಪವಾಗಿ ಎಲ್ಲೆಲ್ಲಿ ಉದಿಸುವುದೋ ಅಲ್ಲಲ್ಲಿಯೇ ಅದದೇ ರೂಪವಾಗಿ ಅವನಿಗಾಗಿ ಒಂದೊಂದು ರೂಪ (ಬ್ರಹ್ಮಾಂಡ)ವು ಹುಟ್ಟುವುದು.

೭. ಈ ಪರಮಾಕಾಶದಲ್ಲಿ ಊರ್ಧ್ವ, ಅಧಃ, ಗಮನ, ಆಗಮನ ಎಂಬ ಯಾವುದೂ ಇಲ್ಲದಿದ್ದರೂ ಅದನ್ನು ಅನುಭವಿಸುವ ಜೀವನನ್ನು ಲಕ್ಷಿಸಿ ಈ ವಿಭಾಗವನ್ನು ಹೇಳಬೇಕಲ್ಲದೆ, ಆ ಪರಮಾಕಾಶವು ಇವೆಲ್ಲಕ್ಕಿಂತ ವಿಲಕ್ಷಣವಾಗಿಯೇ ಇರುವುದು.

೮. ಆ ಸಂವಿತ್ತಿನ ಸ್ವಭಾವವೇ ಇಂತಹುದು. ಹುಡುಗರಂತೆ ಸಂಕಲ್ಪಗಳನ್ನು ಮಾಡುತ್ತಲೇ ಇರುವುದು. ಅವುಗಳಿಂದ ಉತ್ಪತ್ತಿ ಲಯಗಳು ಆಗುತ್ತಲೇ ಇರುವುವು.

೯. ಶ್ರೀರಾಮನು ಕೇಳಿದನು :—ಆ ಪರಮಾಕಾಶದಲ್ಲಿಯೇ ಊರ್ಧ್ವ

ಶ್ರೀ ವಸಿಷ್ಠ ಉವಾಚ :—

ಸಸರ್ವಾವರಣಾ ಏತೇ ಮಹತ್ಯಂತವಿವರ್ಜಿತೇ |
ಬ್ರಹ್ಮಾಂಡಾ ಭಾಂತಿ ದುರ್ದೃಷ್ಟೇರ್ವ್ಯೋಮ್ನಿ ಕೇಶೋಂಡ್ರಕೋ ಯಥಾ||೧೦||

ಅಸ್ವಾತಂತ್ರ್ಯಾತ್ಪ್ರಧಾವಂತಿ ಪದಾರ್ಥಾಃ ಸರ್ವ ಏವ ಯತ್ |
ಬ್ರಹ್ಮಾಂಡೇ ಪಾರ್ಥಿವೋ ಭಾಗಸ್ತದಧಸ್ತೂರ್ಧ್ವಮನ್ಯಥಾ || ೧೧ ||

ಪಿಪೀಲಿಕಾನಾಂ ಮಹತಾಂ ವ್ಯೋಮ್ನಿ ವರ್ತುಲಲೋಷ್ಟಕೇ |
ದಶದಿಕ್ಕಮಧಃ ಪಾದಾಃ ಪೃಷ್ಠಮೂರ್ಧ್ವಮುದಾಹೃತಂ || ೧೨ ||

ವೃಕ್ಷವಲ್ಮೀಕಜಾಲೇನ ಕೇಷಾಂಚಿದ್ಧೃದಿ ಭೂತಲಂ |
ಸಸುರಾನರದೈತ್ಯೇನ ವೇಷ್ಟಿತಂ ವ್ಯೋಮ ನಿರ್ಮಲಂ || ೧೩ ||

ಅಧೋಭಾಗಗಳೆಂಬ ದಿಗ್ವಿವೇಕವಿಲ್ಲದ ಮೇಲೆ ಅದರಿಂದಹುಟ್ಟಿ ಬಂದ ಬ್ರಹ್ಮಾಂಡಗಳಲ್ಲಿ ಈ ದಿಗ್ವಿಭಾಗವು ಬರುವುದೆಂತು? ಎಲೈ ಬ್ರಹ್ಮನೆ, ಇದನ್ನು ನನಗೆ ತಿಳಿಯುವಂತೆ ಹೇಳು.

೧೦. ಶ್ರೀ ವಸಿಷ್ಠನು ಹೇಳಿದನು :—ತಿಮಿರ ಜಾಡ್ಯವುಳ್ಳ ದೃಷ್ಟಿಗೆ ಕೋಶೊಂಡ್ರಕಗಳು ಕಾಣಿಸುವಂತೆ, ಅನಂತವಾದ ಮಹತ್ತಿನಲ್ಲಿ ಪಂಚಭೂತಾವರಣ ಸಹಿತವಾದ ಬ್ರಹ್ಮಾಂಡಗಳು ಕಾಣಿಸುವುವು.

೧೧, ಹೀಗೆ ಹುಟ್ಟಿದ ಈ ಬ್ರಹ್ಮಾಂಡಗಳೆಲ್ಲವೂ ಅಸ್ವತಂತ್ರವಾದವು. ಅದರಿಂದ ಎತ್ತಕಡೆಯೆಂದರೆ ಅತ್ತ ಕಡೆ ನುಗ್ಗುವುವು. ಬ್ರಹ್ಮಾಂಡದಲ್ಲಿ ಪಾರ್ಥಿವವಾದ ಭಾಗವು ಯಾವುದೋ ಅದೇ ಅಧಃ ಪ್ರದೇಶವು: ಅಪಾರ್ಥಿವವಾದುದು ಊರ್ಧ್ವವು.

೧೨. ಗುಂಡಗಿರುವ ಮಣ್ಣುಂಡೆಯ ಮೇಲೆ ದೊಡ್ಡ ಇರುವೆಗಳು ಇದ್ದರೆ ಅವಕ್ಕೆ ಹೇಗೆ ಕಾಲಿನ ಕಡೆ ಕೆಳಗೆ, ಬೆನ್ನಿನ ಕಡೆ ಮೇಲೆ, ಎಂದು ಆಗುವುದೋ ಹಾಗೆಯೇ ಆಕಾಶದಲ್ಲಿ ದಶದಿಗ್ವ್ಯವಸ್ಥೆಯು.

೧೩. ಕೆಲವು ಬ್ರಹ್ಮಾಂಡಗಳಲ್ಲಿ ವೃಕ್ಷ, ವಲ್ಮೀಕಗಳು ಮಾತ್ರ ಇರುವುವು. ಇನ್ನು ಕೆಲವು ಸುರ, ಅನರ, ದೈತ್ಯ, ಗಣಗಳಿಂದ ಕೂಡಿರುವುವು. ಇನ್ನು ಕೆಲವು ನಿರ್ಮಲವಾದ ಆಕಾಶಮಂಡಲದಂತಿರುವುವು.*

---

* ಇಲ್ಲಿ ತಾತ್ಪರ್ಯ ಪ್ರಕಾಶವು ಅನರ ಎಂದರೆ ಕಿಂಪುರುಷರು ಎಂದು ಹೇಳಿದೆ. ಬಹುಶಃ ಸುರಾ, ನರ, ದೈತ್ಯ ಎಂದು ಮಾಡುವುದು ಸರಿ.

ಸಂಭೂತಂ ಸಹ ಭೂತೇನ ಸಗ್ರಾಮಪುರಪರ್ವತಂ |
ಇದಂ ಕಲ್ಪನಭೂತೇನ ಪಕ್ವಾಕ್ಷೋಟಮಿವ ತ್ವಚಾ || ೧೪ ||

ಯಥಾ ವಿಂಧ್ಯವನಾಭೋಗೇ ಪ್ರಸ್ಫುರಂತಿ ಕರೇಣವಃ |
ತಥಾ ತಸ್ಮಿನ್ ಪರಾಭೋಗೇ ಬ್ರಹ್ಮಾಂಡತ್ರಸರೇಣವಃ || ೧೫ ||

ತಸ್ಮಿನ್ ಸರ್ವಂ ತತಃ ಸರ್ವಂ ತತ್ಸರ್ವಂ ಸರ್ವತಶ್ಚ ಯತ್ |
ತಚ್ಚ ಸರ್ವಮಯೋ ನಿತ್ಯಂ ತಥಾ ತದಣುಕಂ ಪ್ರತಿ || ೧೬ ||

ಶುದ್ಧಬೋಧಮಯೇ ತಸ್ಮಿನ್ ಪರಮಾಲೋಕವಾರಿಧೌ |
ಅಜಸ್ರಮೇತ್ಯ ಗಚ್ಛಂತಿ ಬ್ರಹ್ಮಾಂಡಾಖ್ಯಾಸ್ತರಂಗಕಾಃ || ೧೭ ||

ಅಂತಃಶೂನ್ಯಾಃ ಸ್ಥಿತಾಃ ಕೇಚಿತ್ಸಂಕಲ್ಪಕ್ಷಯರಾತ್ರಯಃ |
ತರಂಗಾ ಇವ ತೋಯೇಽಬ್ಧೌ ಪ್ರೋಹ್ಯಂತೇ ಶೂನ್ಯತಾರ್ಣವೇ || ೧೮ ||

---

೧೪. ಇದಂಕಲ್ಪವಾದ ಈ ಬ್ರಹ್ಮಾಂಡವು ಸಪ್ರಾಣಿ ವರ್ಗ ಗ್ರಾಮ ಪುರ ಪರ್ವತವಾಗಿಯೇ ಸಿಪ್ಪೆಯಿರುವ ಅಕ್ರೋಟದ ಹಣ್ಣಿನಂತೆ, ಹುಟ್ಟುವುದು.*

೧೫. ವಿಸ್ತಾರವಾದ ವಿಂಧ್ಯಾರಣ್ಯದಲ್ಲಿ ಆನೆಗಳಂತೆ, ಆ ಪರಾಭೋಗದಲ್ಲಿ ಬ್ರಹ್ಮಾಂಡಗಳೆಂಬ ತ್ರಸರೇಣುಗಳು ಹಾರಾಡುತ್ತಿರುವುವು.†

೧೬. ಅದರಲ್ಲಿ ಎಲ್ಲವೂ (ಪ್ರತಿಷ್ಠಿತವಾಗಿರುವುದು): ಅದರಿಂದ ಎಲ್ಲವೂ (ಹುಟ್ಟ ಬರುವುದು): ಅದೇ ಸರ್ವವು. (ಎಲ್ಲವೂ ಅದರಲ್ಲಿ ಲೀನವಾಗುವುದು) ಹೀಗೆ ಸರ್ವತ್ರ ತಾನೇ ತಾನಾಗಿರುವುದರಿಂದ ಅದೇ ಸರ್ವಮಯವು. ಹೀಗೆ ನಿತ್ಯವಾಗಿರುವ ಅದನ್ನು (ಆತ್ಮ, ಬ್ರಹ್ಮ) ಯಾವುದಕ್ಕೆ ಹೋಲಿಸಿ ಅಣು ವೆನ್ನುವುದು ?‡

೧೭. ಶುದ್ಧಬೋಧಮಯವಾಗಿ, ಪರಪ್ರಕಾಶ ಸಮುದ್ರವಾಗಿರುವ ಆ ಚಿತ್ತಿನಲ್ಲಿ ಬ್ರಹ್ಮಾಂಡಗಳೆಂಬ ತರಂಗಗಳು ಒಂದೇ ಸಮನಾಗಿ ಬಂದು ಬಂದು ಹೋಗುತ್ತಿರುವುವು.

೧೮. ತಮ್ಮ ಜನ್ಮಕ್ಕೆ ಕಾರಣವಾಗಿದ್ದ ಅಭಿಮಾನಿ ಜೀವ ಸಂಕಲ್ಪವು

---

* ಅಹಂ ಎಂಬುದಕ್ಕೆ ಪ್ರತಿಯಾಗಿ ಇದಂ.

†ಪರಾಭೋಗ=ಅಹಂ ಇದಂ ಎರಡಕ್ಕೂ ಹಿಂದೆ ಮಹತ್ತಿಗೂ ಆಚೆ ಇರುವ ಚಿತ್.

‡ತದ್ಯದಿದಂ ಮಯೋಽದೋಮಯಸ್ಸರ್ವಮಯಃ ಶ್ರುತಿ.

ಕೇಷಾಂಚಿದಂತಃಕಲ್ಪಾಂತಃ ಪ್ರವೃತ್ತೋ ಘರ್ಘರಾರವಃ |
ನ ಶ್ರುತೋಽನ್ಯೈರ್ನ ಚ ಜ್ಞಾತಃ ಸ್ವಭಾವೇನ ರಸಾಕುಲೈಃ || ೧೯ ||

ಅನ್ಯೇಷಾಂ ಪ್ರಥಮಾರಂಭೇ ಶುದ್ಧಭೂಷು ವಿಜೃಂಭತೇ |
ಸರ್ಗಃ ಸಂಸಿಕ್ತಬೀಜಾನಾಂ ಕೋಶೇಂಕುರಕಲಾ ಯಥಾ || ೨೦ ||

ಮಹಾಪ್ರಳಯಸಂಪತ್ತೌ ಸೂರ್ಯಾರ್ಚಿರ್ವಿದ್ಯುತೋಽದ್ರಯಃ |
ಪ್ರವೃತ್ತಾ ಗಲಿತುಂ ಕೇಚಿತ್ತಾಪೇ ಹಿಮಕಣಾ ಇವ || ೨೧ ||

ಕ್ಷಯವಾಗಿರುವುದರಿಂದ ಕೆಲವು ಬ್ರಹ್ಮಾಂಡಗಳು ಅಂತಶ್ಶೂನ್ಯಗಳಾಗಿರುವುವು. ಹಾಗಿದ್ದರೂ ಶೂನ್ಯತೆಯೆಂಬ ಸಮುದ್ರದಲ್ಲಿ, ಕಡಲಿನಲ್ಲಿ ಅಲೆಗಳು ಇರುವಂತೆ ಇರುವುವು.

(ಇಲ್ಲಿ ತಾತ್ಪರ್ಯ ಪ್ರಕಾಶವು "ಕೇಚಿದ್ಬ್ರಹ್ಮಾಂಡಾ ಅವ್ಯಾಕೃತ ಏವ ಅಂತಸ್ಸಂತೀತ್ಯಾಹ ಅಂತರಿತಿ | ಪೂರ್ವಕಲ್ಪೀಯ ಸರ್ವಸಂಕಲ್ಪ ಬೀಜ ಲಿಂಗೋಪಾಧಿಕ್ಷಯೇ ಸತಿ ರಾತ್ರಯಃ ತಮೋರೂಪಾಃ ಸುಷುಪ್ತ ಇವೇತಿ ಯಾವತ್ | ಅಸದ್ವಾ ಇದಮಗ್ರ ಆಸೀತ್, ಇತಿ ಶ್ರುತೌ ಅಸಚ್ಛಬ್ದೇನ ಶೂನ್ಯತಾ ಶಬ್ದೇನ ಅವ್ಯಾಕೃತಮುಚ್ಯತೇ | ತಲ್ಲಕ್ಷಣೇ ಅರ್ಣವೇ ಅಂಬುಧೌ ಪ್ರಕರ್ಷೇಣೋ ಊಹ್ಯಂತೇ ತರ್ಕ್ಯಂತೇ | ಕಥಮಸತಃ ಸಜ್ಜಾಯೇತ ಇತಿ ಶ್ರುತ್ಯುಕ್ತಯುಕ್ತ್ಯಾ ಸಂತೀತಿ ತರ್ಕ್ಯಂತೆ ಇತ್ಯರ್ಥಃ" ಎಂದು ಹೇಳಿದೆ.

ನಾವು ಉತ್ತರ ಶ್ಲೋಕದೊಡನೆ ಸಮನ್ವಯ ಮಾಡಿ ಆ ಬ್ರಹ್ಮಾಂಡವು ಪ್ರಲಯೋನ್ಮುಖವೆಂಬ ಅರ್ಥವನ್ನು ಗ್ರಹಿಸಿದ್ದೇವೆ.)

೧೯. ಕೆಲವು ಬ್ರಹ್ಮಾಂಡಗಳಲ್ಲಿ ಕಲ್ಪಾಂತ ಕಾಲದ ಘರ್ಘರಾರವವು ಹುಟ್ಟಿರುವುದು. ಈ ಶಬ್ದವನ್ನು ಇತರ ಬ್ರಹ್ಮಾಂಡಗಳು ಕೇಳುವುದಿಲ್ಲ. ಒಂದು ವೇಳೆ ಕೇಳಿದರು ಪ್ರಲಯಘರ್ಘರವೆಂಬುದು, ತಮ್ಮ ತಮ್ಮ ಸ್ವಭಾವಾನುಸಾರವಾಗಿ ರಾಗ (ಬೇಕು) ದ್ವೇಷ (ಬೇಡ) ಗಳಲ್ಲಿ ಅವವು ಪ್ರವೃತ್ತವಾಗಿರುವುದರಿಂದ ಅವಕ್ಕೆ ತಿಳಿಯುವುದೂ ಇಲ್ಲ.

೨೦. ಇನ್ನು ಕೆಲವು ಬ್ರಹ್ಮಾಂಡಗಳಲ್ಲಿ (ಸಂಸ್ಕಾರದಿಂದ) ಶುದ್ಧವಾದ ಭೂಮಿಗಳಲ್ಲಿ, ನೆನೆದ ಬೀಜಕೋಶಗಳಲ್ಲಿ ಮೊಳಕೆಯು ತಲೆದೋರುವಂತೆ ಸೃಷ್ಟಿಯು ಇನ್ನೂ ಆರಂಭವಾಗುತ್ತಿರುವುದು.

೨೧. ಇನ್ನು ಕೆಲವು ಬ್ರಹ್ಮಾಂಡಗಳಲ್ಲಿ ಮಹಾ ಪ್ರಳಯವು ಆರಂಭಿಸಿರು

ಆಕಲ್ಪಂ ನಿಪತಂತ್ಯೇವ ಕೇಚಿದಪ್ರಾಪ್ತಭೂಮಯಃ |
ಯಾವದ್ವಿಶೀರ್ಯ ಜಾಯಂತೇ ತಥಾ ಸಂವಿನ್ಮಯಾಃ ಕಿಲ || ೨೨ ||

ಸ್ತಬ್ಧಾ ಇವ ಸ್ಥಿತಾಃ ಕೇಚಿತ್ ಕೇಶೋಂಡ್ರಕಮಿವಾಂಬರೇ |
ವಾಯೋಃ ಸ್ಪಂದಾ ಇವಾ ಭಾಂತಿ ತಥಾ ಪ್ರೋದಿತಸಂವಿದಃ || ೨೩ ||

ಆಚಾರಾದ್ವೇದಶಾಸ್ತ್ರಾಣಾಮಾದ್ಯ ಏವಾನ್ಯಥೋದಿತೇ |
ಆರಂಭೋಪಿ ತಥಾನ್ಯೇಷಾಮನಿತ್ಯಃ ಸಂಸ್ಥಿತಃ ಕ್ರಮಃ || ೨೪ ||

ವುದು. (ಅದರಿಂದ) ಬಿಸಿಲು ಬಲಿತಾಗ ಹಿಮಕಣಗಳು ಕರಗುವಂತೆ, ಸೂರ್ಯ ಪ್ರಕಾಶಗಳೂ ಮಿಂಚುಗಳು ಬೆಟ್ಟಗಳೂ ಸಹ ಗಳಿತವಾಗಲು ಆರಂಭ ವಾಗಿರುವುದು.

೨೨. ಇನ್ನು ಕೆಲವು ಬ್ರಹ್ಮಾಂಡಗಳು (ನೆಲೆಸಲು) ಆಧಾರವು ಸಿಕ್ಕದಿರು ವುದರಿಂದ, ಕಲ್ಪಾಂತದವರೆಗೂ ಬೀಳುತ್ತಲೇ ಇರುವುವು. ಹಾಗೆಯೇ ಇಳಿಯು ತ್ತಲೇ ಹುಟ್ಟುವುದೂ ಹಾಗೆಯೇ ಇಳಿಯುತ್ತಲೇ ಒಡೆದು ಹೋಗುವುದೂ ಅವುಗಳ ಸ್ವಭಾವವು. ಏಕೆಂದರೆ, ಆ ಬ್ರಹ್ಮಾಂಡಕ್ಕೆ ಕಾರಣವಾಗಿದ್ದ ಸಂವಿತ್ತು ಅಂಥದು.

೨೩. ಕೋಶೋಂಡ್ರಕಗಳಂತೆ ಆಕಾಶದಲ್ಲಿ ಸ್ತಬ್ಧಗಳಾಗಿರುವಂತೆ ಇರು ವುವು ಕೆಲವು; ವಾಯುವಿನಲ್ಲಿ ಚಲನವಿರುವಂತೆ ಚಲಿಸುತ್ತಿರುವುವು ಕೆಲವು ; ಅವುಗಳಿಗೆ ಕಾರಣವಾದ ಸಂವಿತ್ತು ಅಂಥದು.

೨೪. ವೇದಶಾಸ್ತ್ರಗಳಲ್ಲಿ ಹೇಳಿರುವ ಸದಾಚಾರವನ್ನು ಅನುಷ್ಠಾನಮಾಡಿ ಬ್ರಹ್ಮನಾಗಿರುವವನು ತಾನು ಮಾಡಿದ ಪ್ರಥಮ ಸೃಷ್ಟಿಯೇ ಹಿಂದಿನ ಸೃಷ್ಟಿ ಗಳಿಗಿಂತ ಬೇರೆಯಾಗಿರುವುದು. ಅದರಿಂದ ಎಲ್ಲಾ ಸೃಷ್ಟಿಗಳೂ ಒಂದೇ ರೀತಿ ಯಾಗಿರಬೇಕೆಂಬ ಕ್ರಮವಿಲ್ಲ.*

---

* ಪ್ರತಿಯೊಂದರಲ್ಲಿಯೂ ಸಾಮಾನ್ಯ ವಿಶೇಷ ಗುಣಗಳುಂಟು. ಸಾಮಾನ್ಯ ಗುಣ ದಿಂದ ಎರಡೂ ಸಮಾನವಾಗಿ, ವಿಶೇಷ ಗುಣದಿಂದ ಭಿನ್ನವಾಗುವುವು.

ಕೇಚಿದ್ಬ್ರಹ್ಮಾದಿಪುರುಷಾಃ ಕೇಚಿದ್ವಿಷ್ಣ್ವಾದಿಸರ್ಗಪಾಃ |
ಕೇಚಿಚ್ಚಾನ್ಯಪ್ರಜಾನಾಥಾಃ ಕೇಚಿನ್ನಿರ್ನಾಥಜಂತವಃ || ೨೫ ||

ಕೇಚಿದ್ವಿಚಿತ್ರಸರ್ಗೇಶಾಃ ಕೇಚಿತ್ತಿರ್ಯಙ್ಗ್ಮಯಾಂತರಾಃ |
ಕೇಚಿದೇಕಾರ್ಣವಾಪೂರ್ಣಾ ಇತರೇ ಜನಿವರ್ಜಿತಾಃ || ೨೬ ||

ಕೇಚಿಚ್ಛಿಲಾಂಗನಿಷ್ಪಿಂಡಾಃ ಕೇಚಿತ್ಕ್ರಿಮಿಮಯಾಂತರಾಃ |
ಕೇಚಿದ್ದೇವಮಯಾ ಏವ ಕೇಚಿನ್ನರಮಯಾಂತರಾಃ || ೨೭ ||

ಕೇಚಿನ್ನಿತ್ಯಾಂಧಕಾರಾಢ್ಯಾಸ್ತಥಾ ಶೀಲಿತಜಂತವಃ |
ಕೇಚಿನ್ನಿತ್ಯಪ್ರಕಾಶಾಢ್ಯಾಸ್ತಥಾ ಶೀಲಿತಜಂತವಃ || ೨೮ ||

ಕೇಚಿನ್ಮಶಕಸಂಪೂರ್ಣಾ ಉದುಂಬರಫಲಶ್ರಿಯಃ |
ನಿತ್ಯಂ ಶೂನ್ಯಾಂತರಾಃ ಕೇಚಿಚ್ಛೂನ್ಯಸ್ಪಂದಾತ್ಮಜಂತವಃ || ೨೯ ||

---

೨೫ ಕೆಲವು ಬ್ರಹ್ಮಾಂಡಗಳು ಚತುರ್ಮುಖ ಬ್ರಹ್ಮನೇ ಆದಿಪುರುಷನಾಗಿ ಉಳ್ಳವು. ಕೆಲವು ವಿಷ್ಣ್ವಾದಿಗಳಿಂದ ಆದವು. ಕೆಲವು ಇತರ ಪ್ರಜೇಶ್ವರರಿಂದ ಆದವು. ಕೆಲವು ನಿರ್ನಾಥರಾಗಿ ಹುಟ್ಟಿದವು.

೨೬. ಕೆಲವು ವಿಚಿತ್ರರಾದ ಸರ್ಗಾಧಿಪತಿಗಳುಳ್ಳವು. ಕೆಲವು ತಿರ್ಯಕ್ಪ್ರಾಣಿಗಳಿಂದ ತುಂಬಿದವು. ಕೆಲವು ಏಕಾರ್ಣವ ಪೂರ್ಣಗಳು. ಕೆಲವು ಪ್ರಾಣಿಗಳೇ ಇಲ್ಲದವು.

೨೭. ಕೆಲವು ಶಿಲಾಗರ್ಭದಂತೆ ಏಕಾಂಡವಾಗಿರುವುವು. ಕೆಲವು ಕೇವಲ ಕ್ರಿಮಿಗಳಿಂದಲೂ ಕೆಲವು ದೇವತೆಗಳಿಂದಲೂ ಇನ್ನು ಕೆಲವು ನರರಿಂದಲೂ ತುಂಬಿರುವುವು.

೨೮. ಕೆಲವು ಯಾವಾಗಲೂ ಕತ್ತಲಿನಿಂದ ತುಂಬಿರುವುವು. ಕೆಲವು ನಿತ್ಯ ಪ್ರಕಾಶಯುಕ್ತಗಳಾಗಿರುವುವು. ಅಲ್ಲಲ್ಲಿರುವ ಜಂತುಗಳೂ ಅದಕ್ಕದಕ್ಕೆ ತಕ್ಕಂತೆ ಇರುವುವು.

೨೯. ಕೆಲವು ಅತ್ತಿಯ ಹಣ್ಣಿನಂತೆ ಸೊಳ್ಳೆಗಳಿಂದ ತುಂಬಿರುವುವು. ಇನ್ನು ಕೆಲವು ಶೂನ್ಯಸ್ಪಂದಗಳಾಗಿ ನಿಶ್ಚೇಷ್ಟ ಸ್ವಭಾವವುಳ್ಳ ಪ್ರಾಣಿಗಳಿಂದ ತುಂಬಿರುವುವು.

ಸರ್ಗೇಣ ತಾದೃಶೇನಾನ್ಯೇ ಪೂರ್ಣಾ ಯೇಽಂತರ್ಧಿಯಾಮಿಹ |
ಕಲ್ಪನಾಮಪಿ ನಾಯಾಂತಿ ವ್ಯೋಮಪೂರ್ಣಾಚಲೋ ಯಥಾ || ೩೦ ||

ತಾದೃಗಂಬರವೇತೇಷಾಂ ಮಹಾಕಾಶಂ ತತಂ ಸ್ಥಿತಂ |
ಆಜೀವಿತಂ ಪ್ರಗಚ್ಛದ್ಭಿರ್ವಿಷ್ಣ್ವಾದ್ಯೈರ್ಯನ್ನ ವಿಾಯತೇ || ೩೧ ||

ಪ್ರತ್ಯೇಕಸ್ಯಾಂಡಗೋಲಸ್ಯ ಸ್ಥಿತಃ ಕಟಕರತ್ನವತ್ |
ಭೂತಾಕೃಷ್ಟಿಕರೋ ಭಾವಃ ಪಾರ್ಥಿವಃ ಸ್ವಸ್ವಭಾವತಃ || ೩೨ ||

ಯಃ ಸರ್ವವಿಭವೋಽಸ್ಮಾಕಂ ಧಿಯಾಂ ನ ವಿಷಯಂ ತತಃ |
ತಜ್ಜಗತ್ಕಥನೇ ಶಕ್ತಿರ್ನ ಮಮಾಸ್ತಿ ಮಹಾಮತೇ || ೩೩ ||

೩೦-೩೧. ವ್ಯೋಮಪೂರ್ಣಾಚಲದಂತೆ ಇನ್ನು ಕೆಲವು ಬ್ರಹ್ಮಾಂಡಗಳು, ಅಂತರ್ಮುಖಿಗಳಾದವರ ಕಲ್ಪನೆಗೂ ಬರದಂತಹ ಸೃಷ್ಟಿಯಿಂದ ತುಂಬಿರುವುವು. ಈ ಬ್ರಹ್ಮಾಂಡಗಳಲ್ಲಿ ಇರುವ ಆಕಾಶವು ಬಹಳವಾಗಿ ಹರಡಿರುವುದು. ವಿಷ್ಣ್ವಾದಿಗಳು ಆ ಜೀವಿತವೆಲ್ಲ ಹೋದರೂ ಅದರ ಕೊನೆಯನ್ನು ಮುಟ್ಟಲಾರರು

೩೨. ಪ್ರತ್ಯೇಕವಾದ ಅಂಡಗೋಳದಲ್ಲಿಯೂ ಕಡಗದಲ್ಲಿರುವ ರತ್ನವನ್ನು ಹಿಡಿಯಲು ಚಿನ್ನವಿರುವಂತೆ, ಅದರದರ ಸ್ವಭಾವಕ್ಕನುಗುಣವಾಗಿ ಪ್ರಾಣಿಗಳ ಆವಿರ್ಭಾವಕ್ಕೆ ಅನುಕೂಲವಾಗಿರುವ ಪಾರ್ಥಿವಾಂಶವು ಇದ್ದೇ ಇರುವುದು. *

೩೩. ಎಲೈ ಮಹಾಮತಿಯೆ, ನಮ್ಮ ಬುದ್ಧಿಗೆ ಗೋಚರವಾದಷ್ಟು ಈ ಜಗತ್ತನ್ನು ವರ್ಣಿಸಿಯಾಯಿತು. ಆದರೆ, ಈ ಸೃಷ್ಟಿಯೆಲ್ಲವೂ ನಮಗೆ ತಿಳಿಯದು. ಇದನ್ನು ವರ್ಣಿಸುವುದರಲ್ಲಿ ನನಗೆ ಶಕ್ತಿಸಾಲದು.

---

* ಪರಿಶಿಷ್ಟದಲ್ಲಿ ಶರೀರಭೇದ ಎಂಬ ಪ್ರಕರಣವನ್ನು ನೋಡಿ.

ಭೀಮಾಂಧಕಾರಗಹನೇ ಸುಮಹತ್ಯರಣ್ಯೇ
ನೃತ್ಯಂತ್ಯದರ್ಶಿತಪರಸ್ಪರಮೇವ ಮತ್ತಾಃ |
ಯಕ್ಷಾ ಯಥಾ ಪ್ರವಿತತೇ ಪರಮಾಂಬರೇಽಂತ–
ರೇವಂ ಸ್ಫುರಂತಿ ಸುಬಹೂನಿ ಮಹಾಜಗಂತಿ || ೩೪ ||

ಇತ್ಯಾರ್ಷೇ ಶ್ರೀ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
“ ವಿಚಿತ್ರಬ್ರಹ್ಮಾಂಡಕೋಟಿವರ್ಣನಂ ” ನಾಮ ತ್ರಿಂಶಃ ಸರ್ಗಃ

---

೩೪. ಭಯಂಕರವಾದ ಕತ್ತಲಿನಿಂದ ಗಹನವಾಗಿ ವಿಸ್ತಾರವಾದ ಅರಣ್ಯದಲ್ಲಿ ಒಬ್ಬರನ್ನೊಬ್ಬರು ಕಾಣದೆ ಕುಣಿಯುತ್ತಿರುವ ಮತ್ತರಾದ ಯಕ್ಷರಂತೆ, ಯದ್ವಾತದ್ವಾ ಹರಡಿರುವ ಪರಮಾಕಾಶದಲ್ಲಿ ಮಹಾ ಬ್ರಹ್ಮಾಂಡಗಳು ಬಹು ಬಹುವಾಗಿ ಹುಟ್ಟುವುವು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ “ ವಿಚಿತ್ರಬ್ರಹ್ಮಾಂಡಕೋಟಿ ವರ್ಣನ ”
ಎಂಬ ಮೂವತ್ತನೆಯ ಸರ್ಗವು.

ಏಕತ್ರಿಂಶಃ ಸರ್ಗಃ

ಶ್ರೀವಸಿಷ್ಠ ಉವಾಚ

ಏವಮಾಕಲಯಂತ್ಯೌ ತೇ ನಿರ್ಗತ್ಯ ಜಗತೋ ನಿಜಾತ್ |
ಅಂತಃಪುರಂ ದದೃಶತುರ್ಝಟಿತ್ಯೇವ ವಿನಿರ್ಗತೇ || ೧ ||

ಸ್ಥಿತಪುಷ್ಪಭರಾಪೂರ್ಣ ಮಹಾರಾಜ ಮಹಾಶವಂ |
ಶವಪಾರ್ಶ್ವೋಪವಿಷ್ಟಾಂತಶ್ಚಿತ್ತ ಲೀಲಾಶರೀರಕಂ || ೨ ||

ಘನರಾತ್ರಿತಯಾಲ್ಪಾಲ್ಪಮಹಾನಿದ್ರಾಜನಾಕುಲಂ |
ಧೂಪಚಂದನ ಕರ್ಪೂರ ಕುಂಕುಮಾಮೋದಮಂಥರಂ || ೩ ||

ತಮಾಲೋಕ್ಯಾಪರಂ ಭರ್ತುಃ ಸಂಸಾರಂ ಗಂತುಮಾದೃತಾ |
ಪಪಾತ ಲೀಲಾ ಸಂಕಲ್ಪದೇಹೇನಾತ್ಮೈವ ತನ್ನಭಃ || ೪ ||

ಮೂವತ್ತೊಂದನೆಯ ಸರ್ಗ

೧. ಹೀಗೆ ಎಲ್ಲವನ್ನೂ ನೋಡಿದ ಆ ಲೀಲಾ ಸರಸ್ವತಿಯರು ತಾವಿದ್ದ ಜಗತ್ತಿನಿಂದ ಹೊರಟು, ಅಂತಃಪುರಕ್ಕೆ ಹೋಗಿ, ಅಲ್ಲಿಂದಲೂ ಕೂಡಲೇ ಹೊರಟರು.

೨. ಆ ಅಂತಃಪುರದಲ್ಲಿ ಮಹಾರಾಜನ ಶರೀರವು ಪುಷ್ಪರಾಶಿಯಲ್ಲಿತ್ತು. ಅದರ ಮಗ್ಗುಲಲ್ಲಿಯೇ ಲೀಲಾದೇವಿಯ ಶರೀರವೂ ಅಂತಶ್ಚಿತ್ತವಾಗಿ ಕುಳಿತಿತ್ತು. *

೩. ಘನರಾತ್ರಿಯಾದುದರಿಂದ ಪರಿಜನರೆಲ್ಲರೂ ನಿದ್ರಾವಶರಾಗಿದ್ದರು. ಚಂದನ, ಕರ್ಪೂರ, ಕುಂಕುಮಗಳ ಧೂಪದ ಗಂಧವು ಮನೋಹರವಾಗಿತ್ತು.

೪. ಅದನ್ನೆಲ್ಲ ನೋಡಿ, ಮೂರನೆಯ ಗಂಡನ ಸಂಸಾರವನ್ನು ನೋಡಬೇಕೆಂದು ಆಶಿಸಿ, ಲೀಲೆಯು ಸಂಕಲ್ಪ ದೇಹದಿಂದ ಆಕಾಶಕ್ಕೆ ಹಾರಿದಳು.

---

* ಅಂತಶ್ಚಿತ್ತ = ಚಿತ್ತವು ಸಮಾಧಿಗೇರಿರುವಿಕೆ.

ವಿವೇಶ ಭರ್ತುಃ ಸಂಕಲ್ಪಸಂಸಾರಂ ಕಿಂಚಿದಾತತಂ |
ಸಂಸಾರಾವರಣಂ ಭಿತ್ತ್ವಾ ಭಿತ್ತ್ವಾ ಬ್ರಹ್ಮಾಂಡಕರ್ಪರಂ || ೫ ||

ಪ್ರಾಪ ಸಾರ್ಧಂ ತಯಾ ದೇವ್ಯಾ ಪುನರಾವರಣಾನ್ವಿತಂ |
ಬ್ರಹ್ಮಾಂಡಮಂಡಪಂ ಸ್ಫಾರಂ ತಂ ಪ್ರವಿಶ್ಯ ತಥಾ ಜವಾತ್ || ೬ ||

ದದರ್ಶ ಭರ್ತುಃ ಸಂಕಲ್ಪಜಗಜ್ಜಂಬಾಲಪಲ್ವಲಂ |
ಸಿಂಹೀವ ಶೈಲಕುಹರಂ ತಮೋ ಜಲದಪಂಕಿಲಂ || ೭ ||

ದೇವ್ಯೌ ವಿವಿಶತುಸ್ತತ್ರ ವ್ಯೋಮ ವ್ಯೋಮಾತ್ಮಿಕೇ ಜಗತ್ |
ಬ್ರಹ್ಮಾಂಡೇಽಂತರ್ಯಥಾ ಪಕ್ವಂ ಮೃದುಬಿಲ್ವಂ ಪಿಪೀಲಿಕೇ || ೮ ||

ತತ್ರ ಲೋಕಾಂತರಾಣ್ಯದ್ರೀನಂತರಿಕ್ಷಮತೀತ್ಯ ತೇ |
ಪ್ರಾಪತುರ್ಭೂತಲಂ ಶೈಲಮಂಡಲಾಂಭೋಧಿಸಂಕುಲಂ || ೯ ||

---

೫. ತನ್ನ ಎರಡನೆಯ ಗಂಡನ ಸಂಸಾರಾರ್ಣವವನ್ನೂ ಬ್ರಹ್ಮಾಂಡ ಕರ್ಪರವನ್ನೂ ಭೇದಿಸಿಕೊಂಡು ತನ್ನ ಮೂರನೆಯ ಗಂಡನ ಅಲ್ಪ ವಿಸ್ತಾರವುಳ್ಳ ಸಂಕಲ್ಪ ಸಂಸಾರ (ಆವರಣ)ವನ್ನು ಸೇರಿದಳು.

೬. ಹಾಗೆ ಆ ಲೀಲೆಯು ಸರಸ್ವತೀದೇವಿಯೊಡನೆ (ಪಂಚಭೂತ) ಆವರಣ ದಿಂದ ಕೂಡಿರುವ ಆ ಬ್ರಹ್ಮಾಂಡ ಮಂಡಪವನ್ನು ಸೇರಿದಳು.

೭. ಕತ್ತಲೆಯಿಂದಲೂ ನೀರಿನ ಆವಿಯಿಂದಲೂ ಕೆಸರಿಂದಲೂ ಕೂಡಿರುವ ಪರ್ವತ ಗುಹೆಯನ್ನು ಸಿಂಹಿಯು ಪ್ರವೇಶಿಸುವಂತೆ, ತನ್ನ ಗಂಡನ ಸಂಕಲ್ಪ ದಿಂದ ಆಗಿರುವ ಜಗತ್ತೆಂಬ ಕೆಸರು ಹಿಡಿದ ಕೊಳವನ್ನು ಪ್ರವೇಶಿಸಿದಳು.

೮. ಆ ಆಕಾಶರೂಪ ಜಗತ್ತನ್ನು ಆಕಾಶಾತ್ಮೆಯರಾದ ಆ ದೇವಿಯರು, ಹಣ್ಣಾಗಿ ಮೆತ್ತಗಿರುವ ಬಿಲ್ವಫಲವನ್ನು ಇರುವೆಗಳು ಹೊಗುವಂತೆ ಹೊಕ್ಕರು.

೯. ಅಲ್ಲಿ ಲೋಕಾಂತರಗಳನ್ನೂ ಕುಲಾಚಲಗಳನ್ನೂ ಅಂತರಿಕ್ಷವನ್ನೂ ದಾಟಿ, ಶೈಲ, ಮಂಡಲ, ಸಮುದ್ರಾದಿಗಳಿಂದ ಕೂಡಿದ ಭೂಭಾಗವನ್ನು ಸೇರಿದರು.

ಮೇರುಣಾಲಂಕೃತಂ ಜಂಬೂದ್ವೀಪಂ ನವದಲೋದರಂ |
ಗತ್ವಾಥ ಭಾರತೇ ವರ್ಷೇ ಲೀಲಾನಾಥಸ್ಯ ಮಂಡಲಂ || ೧೦ ||

ಏತಸ್ಮಿನ್ನಂತರೇ ತಸ್ಮಿನ್ಮಂಡಲೇ ಮಂಡಿತಾವನೌ |
ಚಕ್ರೇಽವಸ್ಕಂದನಂ ಕಶ್ಚಿತ್ ಸಾಮಂತೋದ್ರಿಕ್ತಭೂಮಿಪಃ || ೧೧ ||

ತೇನ ಸಂಗ್ರಾಮಸಂರಂಭೇ ಪ್ರೇಕ್ಷಾರ್ಥಂ ಸಮುಪಾಗತೈಃ|
ತ್ರೈಲೋಕ್ಯಭೂತೈಸ್ತದ್ವ್ಯೋಮ ಬಭೂವಾತ್ಯಂತಸಂಕಟಂ || ೧೨ ||

ಅಶಂಕಿತಾಗತೇ ತತ್ರೇ ದೇವ್ಯೌ ದದೃಶತುರ್ನಭಃ |
ನಭಶ್ಚರಗಣಾಕ್ರಾಂತಮಂಬುದೈರಿವ ಮಾಲಿತಂ || ೧೩ ||

ಸಿದ್ಧಚಾರಣಗಂಧರ್ವಗಣವಿದ್ಯಾಧರಾನ್ವಿತಂ |
ಶೂರಗ್ರಹಣಸಂರಬ್ಧಸ್ವರ್ಗಲೋಕಾಪ್ಸರೋ ವೃತಂ || ೧೪ ||

ರಕ್ತಮಾಂಸೋನ್ಮುಖೋನ್ಮತ್ತಭೂತರಕ್ಷಃ ಪಿಶಾಚಕಂ |
ಪುಷ್ಪವೃಷ್ಟಿಭಿರಾಪೂರ್ಣಹಸ್ತವಿದ್ಯಾಧರಾಂಗನಂ || ೧೫ ||

---

೧೦. ಮೇರುವಿನಿಂದ ಅಲಂಕೃತವಾಗಿ ನವಖಂಡವುಳ್ಳ ಜಂಬೂದ್ವೀಪಕ್ಕೆ ಹೋಗಿ ಅಲ್ಲಿಂದ ಭರತವರ್ಷದಲ್ಲಿ ಲೀಲೆಯ ಪತಿಯಿರುವ ದೇಶವನ್ನು ಸೇರಿದರು.

೧೧. ಅಷ್ಟರೊಳಗೆ ಭೂಮಂಡಲ ಮಂಡನವಾದ ಆ ದೇಶವನ್ನು ಸಾಮಂತರ ಬಲದಿಂದ ಕೊಬ್ಬಿದ ರಾಜನೊಬ್ಬನು ಮುತ್ತಿದ್ದನು.

೧೨. ಆ ಯುದ್ಧವನ್ನು ನೋಡುವುದಕ್ಕೆಂದು ಮೂರು ಲೋಕದವರು ಬಂದಿದ್ದರು. ಅದರಿಂದ ಅಂತರಿಕ್ಷವೆಲ್ಲವೂ ತುಂಬಿಹೋಗಿತ್ತು.

೧೩. ಮೇಘಗಳ ಹಾರವನ್ನು ಧರಿಸಿದೆಯೋ ಎಂಬಂತೆ, ಆಕಾಶ ಸಂಚಾರಿಗಳಿಂದ ತುಂಬಿಹೋಗಿರುವ ಆ ಅಂತರಿಕ್ಷವನ್ನು ಹಠಾತ್ತಾಗಿ ಬಂದ ಆ ದೇವಿಯರು ನೋಡಿದರು.

೧೪. ಅಲ್ಲಿ ಸಿದ್ಧ, ಚಾರಣ, ಗಂಧರ್ವ, ವಿದ್ಯಾಧರ ಗಣಗಳೂ, (ಯುದ್ಧದಲ್ಲಿ ಮಡಿಯುವ) ಶೂರನನ್ನು ಎದುರುಗೊಂಡು ಸ್ವರ್ಗಕ್ಕೊಯ್ಯುವುದಕ್ಕಾಗಿ ಬಂದು ಕಾದಿರುವ ಅಪ್ಸರೋಗಣವು ಇದ್ದುವು.

೧೫. ರಕ್ತಮಾಂಸಗಳು ಸಿಕ್ಕುವುವೆಂದು ಸಂತೋಷದಿಂದ ಭೂತಗಳೂ

ವೇತಾಲಯಕ್ಷಕೂಶ್ಮಾಂಡೈಃ ದ್ವಂದ್ವಾಲೋಕನಸಾದರೈಃ |
ಆಯುಧಾಪಾತರಕ್ಷಾರ್ಥಂ ಗೃಹೀತಾದ್ರಿತಟೈರ್ವೃತಂ || ೧೬ ||

ಅಸ್ತ್ರಮಾರ್ಗನಭೋ ಭಾಗವಿದ್ರವದ್ಭೂತಮಂಡಲಂ |
ಅಹೋಪುರುಷಿಕಾಕ್ಷುಬ್ಧ ಪ್ರೇಕ್ಷಕಾಮೋದನೋದ್ಭಟಂ || ೧೭ ||

ಆಸನ್ನಭೀಮಸಂಗ್ರಾಮಕಿಂವದಂತೀ ಪರಸ್ಪರಂ |
ಲೀಲಾಹಾಸವಿಲಾಸೋತ್ಕ ಸುಂದರೀಧೃತಚಾಮರಂ || ೧೮ ||

ಧರ್ಮಾಪ್ರೇಕ್ಷ್ಯಪ್ರಯುಕ್ತಾಗ್ರ್ಯ ಮುನಿಸ್ವಸ್ತ್ಯಯನಸ್ತವಂ |
ಸಂಪನ್ನಾನೇಕಲೋಕೇಶವನಿತಾವಸರಸ್ತವಂ || ೧೯ ||

ಸ್ವರ್ಗಾರ್ಹಶೂರಾನಯನವ್ಯಗ್ರೇಂದ್ರಭಟಭಾಸುರಂ |
ಶೂರಾರ್ಥಾಲಂಕೃತೋತ್ತುಂಗ ಲೋಕಪಾಲಾಖ್ಯವಾರಣಂ || ೨೦ ||

ರಕ್ಷೋಗಣಗಳೂ ಪಿಶಾಚಗಳೂ ಕುಣಿಯುತ್ತಿದ್ದುವು. ವಿದ್ಯಾಧರಾಂಗನೆಯರು ಪುಷ್ಪವೃಷ್ಟಿ ಕರೆಯಲು ಪುಷ್ಪಹಸ್ತರಾಗಿ ಸಿದ್ಧವಾಗಿದ್ದರು.

೧೬. ಯುದ್ಧವನ್ನು ನೋಡುವುದಕ್ಕೆಂದು ಬಂದ ಭೇತಾಳ, ಯಕ್ಷ, ಕೂಶ್ಮಾಂಡಾದಿ ಕ್ಷುದ್ರದೇವತೆಗಳು ತಮ್ಮ ಮೇಲೆ ಬೀಳಬಹುದಾದ ಆಯುಧಗಳಿಂದ ಆತ್ಮರಕ್ಷಣೆ ಮಾಡಿಕೊಳ್ಳಲು ಅದ್ರಿಖಂಡಗಳನ್ನು ಧರಿಸಿದ್ದರು.

೧೭. ಅಸ್ತ್ರಮಾರ್ಗವಾದ ನಭೋಭಾಗದಲ್ಲಿದ್ದ ಭೂತಮಂಡಲವು ದಾರಿಬಿಟ್ಟು ಓಡುತ್ತಿತ್ತು. ತಮ್ಮತಮ್ಮ ಪೌರುಷವನ್ನು ಪ್ರೇಕ್ಷಕರು ನೋಡಲೆಂದು ಭಟರು ಪ್ರದರ್ಶಿಸುತ್ತಿರಲು ಯುದ್ಧಭೂಮಿಯು ಕ್ಷುಬ್ಧವಾಗಿತ್ತು.

೧೮. ಯುದ್ಧವು ಹಾಗಾಗುವುದು ಹೀಗಾಗುವುದು ಎಂದುಕೊಳ್ಳುತ್ತ ಚಾಮರ ಧಾರಿಣಿಯರಾದ ಸ್ತ್ರೀಯರು ಲೀಲಾ ಹಾಸ ವಿಲಾಸಗಳ ಮಗ್ನರಾಗಿದ್ದರು.

೧೯. ತಮ್ಮ ಪ್ರಭಾವದಿಂದ ಇತರರಿಗೆ ಅದೃಶ್ಯರಾಗಿರುವ ಮುನಿಶ್ರೇಷ್ಠರು ಲೋಕಕ್ಷೇಮವಾಗಲೆಂದು ಸ್ವಸ್ತಿಗಳನ್ನು ಹೇಳುತ್ತಿದ್ದರು. ಅಲ್ಲಿ ಸೇರಿದ್ದ ದಿಕ್ಪಾಲಕ ವನಿತೆಯರು ಸಂದರ್ಭೋಚಿತವಾಗಿ ಸ್ತೋತ್ರಮಾಡುತ್ತಿದ್ದರು.

೨೦. (ವೀರಮರಣದಿಂದ) ಸ್ವರ್ಗಾರ್ಹರಾಗಿ ಬರುವ ಶೂರರನ್ನು

ಆಗಚ್ಛಚ್ಛೂರಸನ್ಮಾನೋನ್ಮುಖಗಂಧರ್ವಚಾರಣಂ |
ಶೂರೋನ್ಮುಖಾಮರಸ್ತ್ರೈಣಕಟಾಕ್ಷೇಕ್ಷಿತಸದ್ಭಟಂ || ೨೧ ||

ವೀರದೋರ್ದಂಡಕಾಶ್ಲೇಷ ಲಂಪಟಸ್ತ್ರೀಗಣಾಕರಂ |
ಶುಕ್ಲೇನ ಶೂರಯಶಸಾ ಚಂದ್ರೀಕೃತದಿವಾಕರಂ || ೨೨ ||

ಶ್ರೀ ರಾಮ ಉವಾಚ—

ಭಗವನ್ ಶೂರಶಬ್ದೇನ ಕೀದೃಶಃ ಪ್ರೋಚ್ಯತೇ ಭಟಃ |
ಸ್ವರ್ಗಾಲಂಕರಣಂ ಕಃ ಸ್ಯಾತ್ಕೋ ವಾ ಡಿಂಭಾಹವೋ ಭವೇತ್ || ೨೩ ||

ಶ್ರೀ ವಸಿಷ್ಠ ಉವಾಚ—

ಶಾಸ್ತ್ರೋಕ್ತಾಚಾರಯುಕ್ತಸ್ಯ ಪ್ರಭೋರರ್ಥೇನ ಯೋ ರಣೇ |
ಮೃತೋ ವಾಥ ಜಯೀ ವಾ ಸ್ಯಾತ್ಸ ಶೂರಃ ಶೂರಲೋಕಭಾಕ್ || ೨೪ ||

ಕರೆದೊಯ್ಯಲು ಇಂದ್ರಭಟರು ಅವರಿಗಾಗಿ ದೊಡ್ಡದೊಡ್ಡ (ಐರಾವತಾದಿ) ಲೋಕಪಾಲ ವೆಂಬ ಹೆಸರುಳ್ಳ ಆನೆಗಳನ್ನು ಸಿಂಗರಿಸಿಕೊಂಡು ಸಿದ್ಧವಾಗಿದ್ದರು.

೨೧. ಬರುವ ಶೂರರ ಸನ್ಮಾನಕ್ಕಾಗಿ ಗಂಧರ್ವಚಾರಣರು ಸಿದ್ಧರಾಗಿದ್ದರು. ಶೂರರನ್ನು ನಿರೀಕ್ಷಿಸುತ್ತಿರುವ ದೇವತಾಸ್ತ್ರೀಯರು ವೀರಭಟರನ್ನು ಕಟಾಕ್ಷಿಸುತ್ತಿದ್ದರು.

೨೨. ಮಹಾವೀರರ ಮಹಾಬಾಹುಗಳಿಂದ ಆಲಿಂಗನವನ್ನು ಪಡೆಯಬೇಕೆಂಬ ಹಂಬಲವುಳ್ಳ ಸ್ತ್ರೀಗಣವಲ್ಲಿತ್ತು. ಆ ಶೂರರ ಯಶಸ್ಸೆಂಬ ಧಾವಳ್ಯವು ಎಲ್ಲೆಲ್ಲೂ ಪ್ರಸರಿಸಲು ಸೂರ್ಯನೂ ಚಂದ್ರನಾಗಿ ಹೋದನು.

೨೩. ಶ್ರೀರಾಮನು ಕೇಳಿದನು :—ಎಲೈ ಭಗವಂತನೇ, ಯಾವ ಭಟನನ್ನು ಶೂರನೆನ್ನುವರು ? ಯಾವನು ಸ್ವರ್ಗಕ್ಕೆ ಅಲಂಕಾರಪ್ರಾಯನಾಗುವನು ? ಯಾವನು ಡಿಂಭಾಹವನೆನ್ನಿಸಿಕೊಳ್ಳುವನು ?

೨೪. ಶ್ರೀ ವಸಿಷ್ಠನು ಹೇಳಿದನು :—ಶಾಸ್ತ್ರೋಕ್ತವಾದ ಆಚರಣವುಳ್ಳ ಪ್ರಭುವಿನ ಪ್ರಯೋಜನಕ್ಕಾಗಿ ಯಾವನು ರಣದಲ್ಲಿ ಹೋರಾಡಿ ಮರಣವನ್ನೋ ವಿಜಯವನ್ನೋ ಸಾಧಿಸುವನೋ ಅವನೇ ಶೂರನು : ಶೂರರಿಗೆ ಪ್ರಾಪ್ತವಾಗುವ ಲೋಕಗಳನ್ನು ಪಡೆಯುವವನು.

ಅನ್ಯಥಾ ಪ್ರಾಣಿಕೃತ್ತಾಂಗೋ ರಣೇ ಯೋ ಮೃತಿಮಾಪ್ನುಯಾತ್ |
ಡಿಂಭಾಹವಹತಃ ಪ್ರೋಕ್ತಃ ಸ ನರೋ ನರಕಾಸ್ಪದಂ || ೨೫ ||

ಅಯಥಾಶಾಸ್ತ್ರಸಂಚಾರವೃತ್ತೇರರ್ಥೇನ ಯುಧ್ಯತೇ |
ಯೋ ನರಸ್ತಸ್ಯ ಸಂಗ್ರಾಮೇ ಮೃತಸ್ಯ ನಿರಯೋಽಕ್ಷಯಃ || ೨೬ ||

ಯಥಾಸಂಭವಶಾಸ್ತ್ರಾರ್ಥಲೋಕಾಚಾರಾನುವೃತ್ತಿಮಾನ್ |
ಯುಧ್ಯತೇ ತಾನೃಶಶ್ಚೈವ ಭಕ್ತಃ ಶೂರಃ ಸ ಉಚ್ಯತೇ || ೨೭ ||

ಗೋರರ್ಥೇ ಬ್ರಾಹ್ಮಣಸ್ಯಾರ್ಥೇ ಮಿತ್ರಸ್ಯಾರ್ಥೇ ಚ ಸನ್ಮತೇ |
ಶರಣಾಗತಯತ್ನೇನ ಸ ಮೃತಃ ಸ್ವರ್ಗಭೂಷಣಂ || ೨೮ ||

ಪರಿಪಾಲ್ಯ ಸ್ವದೇಶೈಕಪಾಲನೇ ಯಃ ಸ್ಥಿತಃ ಸದಾ |
ರಾಜಾ ಮೃತಾಸ್ತದರ್ಥಂ ಯೇ ತೇ ವೀರಾ ವೀರಲೋಕಿನಃ || ೨೯ ||

---

೨೫. ಹಾಗಿಲ್ಲದೆ, ಶತ್ರುವಿನ ಆಯುಧಕ್ಕೆ ಸಿಕ್ಕಿ ರಣದಲ್ಲಿ ಸಾಯುವವನು ಡಿಂಭಾವಹನು : ಅವನು ನರಕಕ್ಕೆ ಹೋಗುವನು.

೨೬. ಯಾವನು ಶಾಸ್ತ್ರವಿಹಿತವಲ್ಲದ ಆಚಾರಗಳುಳ್ಳವನಿಗೋಸ್ಕರ ಯುದ್ಧ ಮಾಡಿ ರಣದಲ್ಲಿ ಸಾಯುವನೋ ಅವನಿಗೆ ನರಕವೇ ಮನೆಯಾಗುವುದು.

೨೭. ಶಾಸ್ತ್ರಾರ್ಥ ಸಮ್ಮತವಾದ ಲೋಕಾಚಾರವುಳ್ಳವನಾಗಿ, ಅಂತಹವನೇ ಆದ ಪ್ರಭುವಿನ ಭಕ್ತನಾಗಿ ಯುದ್ಧಮಾಡುವನೋ ಅವನು ಶೂರನು.

೨೮. ಯಾವನು ಗೋಬ್ರಾಹ್ಮಣರಿಗೋಸ್ಕರವಾಗಿಯೂ ಸತ್ಪುರುಷರಿಗೋಸ್ಕರವಾಗಿಯೂ ಶರಣಾಗತರನ್ನು ಕಾಪಾಡುವುದಕ್ಕಾಗಿಯೂ ಸಾಯುವನೋ ಅವನು ಸ್ವರ್ಗಭೂಷಣನಾಗುವನು.

೨೯. ತನ್ನ ಪಾಲನಕ್ಕೆ ಒಳಪಟ್ಟಿರುವ ದೇಶವನ್ನು ಪಾಲಿಸುವುದರಲ್ಲಿದ್ದು ಆ ಕಾರ್ಯದಲ್ಲಿ ಮೃತನಾಗುವ ರಾಜನೂ ಅವನಿಗಾಗಿ ಸಾಯುವ ಭಟರೂ ಸಹ ವೀರರು : ಅಂಥವರಿಗೆ ವೀರಲೋಕವು ಲಭಿಸುವುದು.

ಪ್ರಜೋಪದ್ರವನಿಷ್ಕೃಸ್ಯ ರಾಜ್ಞೋಽರಾಜ್ಞೋಽಥ ವಾ ಪ್ರಭೋಃ |
ಅರ್ಥೇನ ಯೇ ಮೃತಾ ಯುದ್ಧೇ ತೇ ವೈ ನಿರಯಗಾಮಿನಃ ॥ ೩೦ ॥

ಯೇ ಹಿ ರಾಜ್ಞಾಮರಾಜ್ಞಾಂ ವಾಪ್ಯಯಥಾಶಾಸ್ತ್ರಕಾರಿಣಾಂ |
ರಣೇ ಮ್ರಿಯಂತೇ ಭಿನ್ನಾಂಗಾಸ್ತೇ ವೈ ನಿರಯಗಾಮಿನಃ ॥ ೩೧ ॥

ಧರ್ಮ್ಯಂ ಯಥಾ ತಥಾ ಯುದ್ಧಂ ಯದಿ ಸ್ಯಾತ್ತರ್ಹಿ ಸಂಸ್ಥಿತಿಃ |
ನಾಶಯೇಯುರಲಂ ಮತ್ತಾಃ ಪರಲೋಕಭಯೋಜ್ಝಿತಾಃ ॥ ೩೨ ॥

ಯತ್ರ ಯತ್ರ ಹತಃ ಶೂರಃ ಸ್ವರ್ಗ ಇತ್ಯವಶೋಕ್ತಯಃ |
ಧರ್ಮ್ಯೇ ಯೋದ್ಧಾ ಭವೇಚ್ಛೂರ ಇತ್ಯೇವಂ ಶಾಸ್ತ್ರನಿಶ್ಚಯಃ ॥ ೩೩ ॥

ಸದಾಚಾರವತಾಮರ್ಥೇ ಖಡ್ಗಧಾರಾಂ ಸಹಂತಿ ಯೇ |
ತೇ ಶೂರಾ ಇತಿ ಕಥ್ಯಂತೇ ಶೇಷಾ ಡಿಂಭಾಹವಾ ಹತಾಃ ॥ ೩೪ ॥

---

೩೦. ಪ್ರಜೆಗಳನ್ನು ಕಾಡುವ ರಾಜನಿಗೋಸ್ಕರವೂ ರಾಜನಲ್ಲದ ಪ್ರಭುವಿಗೋಸ್ಕರವೂ ಯುದ್ಧಮಾಡಿ ಸಾಯುವವನು ನರಕಭಾಜನವಾಗುವನು.

೩೧. ರಾಜರಾಗಲಿ ರಾಜರಾಗದಿರಲಿ, ಅಯಥಾಶಾಸ್ತ್ರಕಾರಿಗಳಾದವರಿಗೋಸ್ಕರ ಮಡಿದವರು ನರಕಭಾಜನರಾಗುವರು.

೩೨. ಧರ್ಮಸಮ್ಮತವಾದ ಯುದ್ಧದಿಂದ ಲಭಿಸುವ ಸದ್ಗತಿಯು ಅಧರ್ಮಯುದ್ಧದಿಂದಲೂ ಲಭಿಸುವುದಾಗಿದ್ದರೆ, ಪರಲೋಕಭಯವಿಲ್ಲದ ಮತ್ತರು ಇತರರನ್ನು ನಾಶಮಾಡಿಬಿಟ್ಟಾರು.

೩೩. ಶೂರರಾಗಿ ಸತ್ತವರಿಗೆಲ್ಲ ಸ್ವರ್ಗವುಂಟೇ ಉಂಟೆಂಬ ಮಾತು ಶಾಸ್ತ್ರದ ಮಾತಲ್ಲ. ಧರ್ಮಯುದ್ಧಮಾಡುವವನೇ ಶೂರನೆಂಬದೇ ಶಾಸ್ತ್ರನಿಶ್ಚಯವು.

೩೪. ಸದಾಚಾರ ಸಂಪನ್ನರಾದವರಿಗೋಸ್ಕರವಾಗಿ ಯಾರು ಖಡ್ಗಧಾರೆಯನ್ನು ಸಹಿಸುವರೋ ಅವರೇ ಶೂರರು. ಮಿಕ್ಕವರೆಲ್ಲ ವೃಥಾ ಸಾಯುವ ಡಿಂಭಾಹವರು.

ತೇಷಾಮರ್ಥೇ ರಣೇ ವ್ಯೋಮ್ನಿ ತಿಷ್ಠಂತ್ಯುತ್ಕಂಠಿತಾಶಯಾಃ |
ಶೂರೀಭೂತಮಹಾಸತ್ವ ದಯಿತೋಕ್ತಿಸುರಾಂಗನಾಃ || ೩೫ ||

ವಿದ್ಯಾಧರೀಮಧುರಮಂಥರಗೀತಿಗರ್ಭಂ
ಮಂದಾರಮಾಲ್ಯವಲನಾಕುಲಕಾಮಿನೀಕಂ |
ವಿಶ್ರಾಂತಕಾಂತಸುರಸಿದ್ಧವಿಮಾನಪಂಕ್ತಿ
ವ್ಯೋಮೋತ್ಸವೋಚ್ಚರಿತಶೋಭಮಿವೋಲ್ಲಲ್ಲಾಸ || ೩೬ ||

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
“ಯುದ್ಧಪ್ರೇಕ್ಷಿಕಾಸ್ಥಿತಾಂಬರವರ್ಣನಂ” ನಾಮ ಏಕತ್ರಿಂಶಃ ಸರ್ಗಃ

---

೩೫. ಅಂತಹ ಶೂರರು ಬಂದಾರೇ ಎಂದು, ಶೂರರಾದ ಮಹಾ ಸತ್ವಶಾಲಿಗಳ ಕಾಂತೆಯರೆಂದು ಹೇಳಿಸಿಕೊಳ್ಳುವೆವೇ ಎಂದು, ಸುರಾಂಗನೆಯರು ಹಂಬಲಿಸುತ್ತ ರಣಭೂಮಿಯಲ್ಲಿ ಕಾದು ನಿಂತಿರುವರು.

೩೬. ವಿದ್ಯಾಧರಿಯರ ಮಧುರವೂ ಸುಂದರವೂ ಆದ ಗೀತಿಗಳೂ, ಮಂದಾರಪುಷ್ಪಗಳಿಂದ ಮಾಲಿಕೆಗಳನ್ನು ಕಟ್ಟುತ್ತಿರುವ ಕಾಮಿನಿಯರೂ, ಯುದ್ಧಮಾಡುವುದನ್ನು ನೋಡುವುದಕ್ಕೆಂದು ಸಮಾಧಾನವಾಗಿ ಬಂದಿರುವ ಸುರ ಸಿದ್ಧ ಗಣಗಳು ನಿಲ್ಲಿಸಿರುವ ವಿಮಾನಪಂಕ್ತಿಗಳೂ ತುಂಬಿ ಆ ಆಕಾಶವು ಉತ್ಸವದಿಂದ ಶೋಭಾತಿಶಯವುಳ್ಳುದಾಯಿತು ಎಂಬಂತೆ ಮೆರೆಯಿತು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ “ಯುದ್ಧಪ್ರೇಕ್ಷಿಕಾಸ್ಥಿತಾಂಬರವರ್ಣನ”
ಎಂಬ ಮೂವತ್ತೊಂದನೆಯ ಸರ್ಗವು.

ದ್ವಾತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಅಥ ವೀರವರೋತ್ಕಂಠನೃತ್ಯದಪ್ಸರಸಿ ಸ್ಥಿತಾ |
ಲೀಲಾವಲೋಕಯಾಮಾಸ ವ್ಯೋಮ್ನಿ ವಿದ್ಯಾನ್ವಿತಾವನೌ || ೧ ||

ಸ್ವರಾಷ್ಟ್ರಮಂಡಲೇ ಭರ್ತೃಪಾಲಿತೇ ಬಲಮಾಲಿತೇ |
ಕಸ್ಮಿಂಶ್ಚಿದ್ವಿತತಾರಣ್ಯೇ ದ್ವಿತೀಯಾಕಾಶಭೀಷಣೇ || ೨ ||

ಸೇನಾದ್ವಿತಯಮಾಕ್ಷುಬ್ಧಂ ಸೌಮ್ಯಾಬ್ಧಿದ್ವಿತಯೋಪಮಂ |
ಮಹಾರಂಭಘನಂ ಮತ್ತಂ ಸ್ಥಿತಂ ರಾಜದ್ವಯಾನ್ವಿತಂ || ೩ ||

ಯುದ್ಧಸಜ್ಜಂ ಸುಸಂನದ್ಧಮಿದ್ಧಮಗ್ನಿಮಿವಾದ್ಭುತಂ |
ಪೂರ್ವಪ್ರಹಾರಸಂಪಾತ ಪ್ರೇಕ್ಷಾಕ್ಷುಬ್ಧಾಕ್ಷಿಲಕ್ಷಿತಂ || ೪ ||

ಮೂವತ್ತೆರಡನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :— ಅನಂತರದಲ್ಲಿ ವೀರವರರನ್ನು ಎದುರುಗೊಳ್ಳುವ ಸಂಭ್ರಮದಿಂದ ಉತ್ಕಂಠೆಯುರಾಗಿ ಕುಣಿಯುತ್ತಿರುವ ಅಪ್ಸರೆಯರುಳ್ಳ ಅಂತರಿಕ್ಷದಲ್ಲಿ ಸರಸ್ವತಿಯೊಡನೆ ನಿಂತು ಲೀಲೆಯು ಭೂಮಿಯಲ್ಲಿ ನೋಡಿದಳು.

೨. ತನ್ನ ಗಂಡನು ಆಳುತ್ತಿರುವ ದೇಶದಲ್ಲಿ, ಎರಡನೆಯ ಆಕಾಶವೋ ಎಂಬಂತೆ ಭಯಂಕರವಾಗಿ ಹರಡಿರುವ ಅರಣ್ಯದಲ್ಲಿ ಸೈನ್ಯವು (ತುಂಬಿತ್ತು).

೩. ಎರಡು ಸೇನೆಗಳಿಂದ ಕಿಕ್ಕಿರಿದು, ಸೌಮ್ಯವಾಗಿ ಎರಡು ಸಮುದ್ರಗಳೋ ಎಂಬಂತಿತ್ತು. ಮತ್ತರಾದ ಇಬ್ಬರು ರಾಜರು ಉಗ್ರಕಾರ್ಯವನ್ನು ಮಾಡುವುದಕ್ಕೆ ಸಿದ್ಧರಾಗಿದ್ದರು.

೪. ಆ ಸೈನ್ಯವು ಯುದ್ಧಕ್ಕೆ ಸಿದ್ಧವಾಗಿ, ಹೊತ್ತುತ್ತಿರುವ ಬೆಂಕಿಯಂತೆ ಅದ್ಭುತವಾಗಿತ್ತು. ಯಾರು ಮೊದಲು ಹೊಡೆಯುವುದು ಎಂದು ನೋಡುತ್ತ ಅವರ ಕಣ್ಣುಗಳು ಕ್ಷುಬ್ಧಗಳಾಗಿದ್ದುವು.

ಉದ್ಯತಾಮಃನಿಸ್ತ್ರಿಂಶಧಾರಾಸಾರವಹಜ್ಜವಂ |
ಕಚತ್ಪರಶ್ವಧಪ್ರಾಸಭಿಂದಿಪಾಲರ್ಷ್ಟಿಮುದ್ಗರಂ ॥ ೫ ॥

ಗರುತ್ಮತ್ಪಕ್ಷವಿಕ್ಷುಬ್ಧವನಸಂಪಾತಕಂಪಿತಂ |
ಉದ್ಯದ್ದಿನಕರಾಲೋಕ ಚಂಚತ್ಕನಕಕಂಕಟಂ ॥ ೬ ॥

ಪರಸ್ಪರಮುಖಾಲೋಕ ಕೋಪಪ್ರೋದ್ದಾಮಿತಾಯುಧಂ |
ಅನ್ಯೋನ್ಯ ಬದ್ಧದೃಷ್ಟಿತ್ವಾಚ್ಚಿತ್ರಂ ಭಿತ್ತಾವಿವಾರ್ಪಿತಂ ॥ ೭ ॥

ಲೇಖಾಮರ್ಯಾದಯಾ ದೀರ್ಘಬದ್ಧಯಾ ಸ್ಥಾಪಿತಸ್ಥಿತಿ |
ಆನಿವಾರ್ಯಮಹಾಸೈನ್ಯ ಝಾಂಕಾರಾಶ್ರುತಸಂಕಥಂ ॥ ೮ ॥

ಪೂರ್ವಪ್ರಹಾರಸ್ಮಯತಶ್ಚಿರಂ ಸಂಶಾಂತದುಂದುಭಿ |
ನಿಬದ್ಧಯೋಧಸಂಸ್ಥಾನ ನಿಖಿಲಾನೀಕಮಂಥರಂ ॥ ೯ ॥

---

೫. ಸೈನಿಕರು ಥಳಿಥಳಿಸುವ ಅಲಗುಳ್ಳ ಭಾರಿಯ ಕತ್ತಿಗಳನ್ನು ಪರಶು ಪ್ರಾಸ, ಭಿಂದಿವಾಳ, ಅರ್ಷ್ಟಿ, ಮುದ್ಗರ ಮುಂತಾದ ಆಯುಧಗಳನ್ನೂ ಧರಿಸಿದ್ದರು.

೬. ಗರುಡನ ರೆಕ್ಕೆಗಳ ಬಡಿತದಿಂದ ಅಲ್ಲಾಡುತ್ತಿರುವ ವನದಂತೆ, ಆ ಸೈನ್ಯಗಳು ಕಂಪಿಸುತ್ತಿದ್ದವು: ಉದಯವಾಗುತ್ತಿರುವ ಸೂರ್ಯನ ಕಿರಣಗಳಿಂದ ಸೈನಿಕರ ಚಿನ್ನದ ಕವಚಗಳು ಥಳಥಳಿಸುತ್ತಿದ್ದುವು.

೭. ಅವರು ಒಬ್ಬರ ಮುಖವನ್ನೊಬ್ಬರು ನೋಡಿ ಕೋಪಗೊಂಡು ಆಯುಧಗಳನ್ನೆತ್ತುತ್ತಿದ್ದರು. ನೆಟ್ಟದಿಟ್ಟಿಗಳಿಂದ ನೋಡುವ ಆ ಸೇನೆಯು ಗೋಡೆಯಲ್ಲಿ ಬರೆದ ಚಿತ್ರದಂತೆ ಇತ್ತು.

೮. ದೀರ್ಘವಾಗಿ ಸೀಮಾರೇಖೆಯನ್ನು ಎಳೆಯಲಾಗಿತ್ತು. ಅದರ ಎರಡು ಪಕ್ಕಗಳಲ್ಲಿ ಸೇನೆಯು ಝುಂಕಾರ ಮಾಡುತ್ತಿರಲು, ಒಬ್ಬರ ಮಾತು ಇನ್ನೊಬ್ಬರಿಗೆ ಕೇಳಿಸುತ್ತಿರಲಿಲ್ಲ.

೯. ಸೈನಿಕರಿಗೆ ಯಥೋಚಿತವಾಗಿ ಸ್ಥಾನಗಳನ್ನು ಏರ್ಪಡಿಸಿದ್ದರು. ದುಂದುಭಿಗಳನ್ನು ಬಾರಿಸುವುದಕ್ಕೆ ಇಬ್ಬರೂ ಸಿದ್ಧರಾಗಿದ್ದರು.

ಧನುರ್ದ್ವಿತೀಯಮಾತ್ರಾತ್ಮಶೂನ್ಯಮಧ್ಯೈಕಸೇತುನಾ |
ವಿಭಕ್ತಂ ಕಲ್ಪವಾತೇನ ಮತ್ತಮೇಕಾರ್ಣವಂ ಯಥಾ || ೧೦ ||

ಕಾಯೇ ಸಂಕಟಸಂರಂಭ ಚಿಂತಾಪರವಶೇಶ್ವರಂ ।
ವಿರಟದ್ಭೇಕಕಂಠತ್ವ ಭಂಗುರಾತುರಹೃದ್ಗುಹಂ || ೧೧ ||

ಪ್ರಾಣಸರ್ವಸ್ವಸಂತ್ಯಾಗ ಸೋದ್ಯೋಗಾಸಂಖ್ಯಸೈನಿಕಂ|
ಕರ್ಣಾಕೃಷ್ಟಶರೌಘೌಘ ತ್ಯಾಗೋನ್ಮುಖಧನುರ್ಧರಂ || ೧೨ ||

ಪ್ರಹಾರಪಾತಸಂಪ್ರೇಕ್ಷಾನಿಷ್ಪಂದಾಸಂಖ್ಯಸೈನಿಕಂ |
ಅನ್ಯೋನ್ಯೋತ್ಕಂಠಕಾಠಿನ್ಯಭರಭ್ರುಕುಟಿಸಂಕಟಂ || ೧೩ ||

ಪರಸ್ಪರಸುಸಂಘಟ್ಟ ಕಟುಟಂಕಾರಕಂಕಟಂ ।
ವೀರಯೋಧಮುಖಾದಗ್ಧ ಭೀರುಪ್ರೇಪ್ಸಿತಕೋಟರಂ || ೧೪ ||

---

೧೦. ಎರಡು ಸೇನೆಗಳ ನಡುವೆ ಎರಡು ಬಿಲ್ಲಿನ ಅಳತೆ ನೆಲವನ್ನು ನಿರ್ಜನವಾಗಿ ಬಿಟ್ಟಿದ್ದರು. ಅದು ಪ್ರಳಯಕಾಲದ ವಾಯುವು ಆಗಿನ ಏಕಾರ್ಣವವನ್ನು ಒಡೆದು ಎರಡುಪಾಲು ಮಾಡಿತ್ತೊ ಎನ್ನುವಂತಿತ್ತು.

೧೧. ಆ ಸೈನ್ಯಾಧಿಪತಿಗಳು ಕ್ರೂರಕರ್ಮವನ್ನು ಆರಂಭಿಸಬೇಕಲ್ಲಾ ಎಂದು ಚಿಂತಾಪರವಶರಾಗಿದ್ದರು. ಆ ಸೈನ್ಯಗಳಲ್ಲಿ ಹೆದರಿದವರ ಎದೆಗಳು ಡವಡವ ಎಂದು ಹಾರುತ್ತ, ಅರಚಿಕೊಳ್ಳುವ ಕಪ್ಪೆಗಳ ಕತ್ತಿನ ಚರ್ಮದಂತೆ ಭಂಗುರ (ಶಿಥಿಲ)ವಾಗಿದ್ದುವು.

೧೨. ಆ ಸೇನೆಗಳ ಅಸಂಖ್ಯಾಕ ಸೈನಿಕರು ಪ್ರಾಣಗಳನ್ನೂ ಸರ್ವಸ್ವವನ್ನೂ ತ್ಯಾಗಮಾಡಲೂ ಹಾಗೆಯೇ ಕಿವಿಯವರೆಗೆ ಎಳೆದಿರುವ ಬಾಣಗಳನ್ನು ಬಿಡಲೂ ಸಿದ್ಧವಾಗಿದ್ದರು.

೧೩. ಪ್ರಹಾರವು ಆರಂಭವಾಗುವುದೆಂಬ ನಿರೀಕ್ಷೆಯಲ್ಲಿ ಆ ಅಸಂಖ್ಯ ಸೈನಿಕರೆಲ್ಲರೂ ನಿಶ್ಚೇಷ್ಟರಾಗಿ ನಿಂತಿದ್ದರು. ಉತ್ಕಂಠರಾಗಿ ಎರಡು ಸೇನೆಯವರೂ ಎದೆಯನ್ನು ಕಲ್ಲುಮಾಡಿಕೊಂಡು ಹುಬ್ಬು ಗಂಟಿಕಟ್ಟಿಕೊಂಡು ನಿಂತಿದ್ದರು.

೧೪. ಆ ಸೈನಿಕರ ಕವಚಗಳು ಒಂದಕ್ಕೊಂದು ತಗಲಿ ಭಯಂಕರವಾದ ಶಬ್ದವಾಗುತ್ತಿತ್ತು. ವೀರಯೋಧರ ಮುಖವನ್ನು ಕಂಡು (ಅವರ ನೋಟ

ಮಿಥಃಸಂಸ್ಥಾನಕಾಲೋಕಮಾತ್ರಾಸಂದಿಗ್ಧಜೀವಿತಂ |
ಸಮಸ್ತಾಂಗರುಹಾಸಕ್ತಪ್ರಾಂಶುವೃದ್ಧೀಭಮಾನವಂ || ೧೫ ||

ಪೂರ್ವಪ್ರಹಾರಸಂಪ್ರೇಕ್ಷಾ ವ್ಯಗ್ರಪ್ರಾಣತಯಾ ತಯಾ |
ಸಂಶಾಂತಕಲ್ಲೋಲರವಂ ನಿದ್ರಾಮುದ್ರಪುರೋಪಮಂ || ೧೬ ||

ಸಂಶಾಂತಶಂಖಸಂಘಾತ ತೂರ್ಯನಿರ್ಹ್ರಾದದುಂದುಭಿ|
ಭೂತಲಾಕಾಶಸಂಲೀನ ಸರ್ವಪಾಂಸುಪಯೋಧರಂ || ೧೭ ||

ಪಲಾಯನಪರೈಃ ಪಶ್ಚಾತ್ತ್ಯಕ್ತಮಂಗುಲಮಂಡಲಂ |
ವಿಸಾರಿಮಕರವ್ಯೂಹ ಮತ್ಸ್ಯಸಂಖ್ಯಾಬ್ಧಿಭಾಸುರಂ || ೧೮ ||

ಪತಾಕಾಮಂಜರೀಪುಂಜ ವಿಜಿತಾಕಾಶತಾರಕಂ |
ಹಾಸ್ತಿಕೋತ್ತಂಭಿತಕರಕಾನನೀಕೃತಖಾಂತರಂ || ೧೯ ||

ದಿಂದಲೇ) ದಗ್ಧರಾಗಿ ಭೀರುಗಳು ಎಲ್ಲಾದರೂ ಗುಹೆಗಳನ್ನು ಹುಡುಕಿಕೊಳ್ಳೋಣವೆಂದುಕೊಳ್ಳುತ್ತಿದ್ದರು.

೧೫. ಆ ಸೈನ್ಯಗಳು ನಿಂತಿರುವುದನ್ನು ನೋಡಿಯೇ ಜೀವಿತದಲ್ಲಿ ಸಂಶಯವಾಗುತ್ತಿತ್ತು. ಅಲ್ಲಿರುವ ಆನೆಗಳಿಗೂ ಮನುಷ್ಯರಿಗೂ ರೋಮಾಂಚವಾಗಿ ಅವರು ಉಬ್ಬಿದಂತೆ ಕಾಣುತ್ತಿದ್ದರು.

೧೬. ಯುದ್ಧಾರಂಭವನ್ನು ನಿರೀಕ್ಷಿಸುತ್ತಾ ಮನಸ್ಸು ಏಕಾಗ್ರವಾಗಿದ್ದುದರಿಂದ, ಸೇನೆಯೆಲ್ಲವೂ ನಿಶ್ಶಬ್ದವಾಗಿ, ನಿದ್ರಾಮುದ್ರೆಯಲ್ಲಿರುವ ಪುರದಂತಿತ್ತು.

೧೭. ಶಂಖ, ತೂರ್ಯ, ದುಂದುಭಿಗಳ ಸಂಘಾತರವವು ಇನ್ನೂ ಆಗುತ್ತಿರಲಿಲ್ಲ. ಧೂಳಿಯ ಮೋಡಗಳು ಇನ್ನೂ ಭೂಮಿಯ ಆಕಾಶದಲ್ಲಿಯೇ ಅಡಗಿದ್ದುವು.

೧೮. ಯುದ್ಧಕ್ಕೆ ಹೆದರಿ ಓಡುತ್ತಿದ್ದವರು ಅಂಗುಲ ಮಂಡಲವನ್ನೂ ಬಿಟ್ಟು ಓಡುತ್ತಿದ್ದರು. ಮಕರಗಳಿಗೂ ಮತ್ಸ್ಯಗಳಿಗೂ ನಡೆಯುವ ಭಾರಿ ಯುದ್ಧವಿರುವ ಸಮುದ್ರದಂತೆ ಆ ರಣಭೂಮಿಯಿತ್ತು.

೧೯. ಪತಾಕೆಗಳೆಂಬ ಪುಷ್ಪಮಂಜರಿಗಳು ಆಕಾಶದ ತಾರೆಗಳನ್ನು ಗೆದ್ದುವು. ಮಾವಟಿಗರೆತ್ತಿದ ಕೈಗಳಿಂದ ಅಂತರಿಕ್ಷವೆಲ್ಲವೂ ಮರದ ತೋಪಿನಂತೆ ಕಾಣಿಸುತ್ತಿತ್ತು.

ತರತ್ತರಳಭಾಪೂರ ಸಪಕ್ಷಸಕಲಾಯುಧಂ |
ಧಮದ್ಧಮಿತಿಶಬ್ದೈಲಿಷ್ಟ ಶ್ವಾಸೋತ್ಥೈರ್ಧ್ಮಾತಖಾಂತರಂ || ೨೦ ||

ಚಕ್ರವ್ಯೂಹಕರಾಕಾಂತ ದುರ್ವೃತ್ತಸುರಭಾಸುರಂ |
ಗರುಡವ್ಯೂಹಸಂರಂಭ ವಿದ್ರವನ್ನಾಗ ಸಂಚಯಂ || ೨೧ ||

ಶ್ಯೇನವ್ಯೂಹವಿಭಿನ್ನಾಗ್ರ ಸಂನಿವೇಶೋತ್ತಮಧ್ವನಿ |
ಅನ್ಯೋನ್ಯಾಸ್ಫೋಟನಿಃಶೇಷ ಪ್ರಪತದ್ಭೂರಿವೃಂದಕಂ || ೨೨ ||

ವಿವಿಧವ್ಯೂಹ ವಿನ್ಯಾಸವಾಂತವೀರವರಾರವಂ !
ಕರಪ್ರತೋಲನೋಲ್ಲಾಸ ಮತ್ತಮುದ್ಗರಮಂಡಲಂ || ೨೩ ||

ಕೃಷ್ಣಾಯುಧಾಂಶುಜಲದ ಶ್ಯಾಮೀಕೃತ ದಿವಾಕರಂ ।
ಅನಿಲಾಧೂತಪಲ್ಯೂಲಸೂತ್ಕೃತಾಭಶರಧ್ವನಿ || ೨೪ ||

---

೨೦. ಹೊಳೆಹೊಳೆಯುತ್ತಿರುವ ಕಾಂತಿಯು ಆಯುಧಗಳಿಗೆ ಮೊಳೆತಿರುವ ರೆಕ್ಕೆಯೋ ಎಂಬಂತಿತ್ತು. ಊದುವ ವಾದ್ಯಗಳ ಧಮುಧಮು ಶಬ್ದವು ಅಂತರಿಕ್ಷ ವನ್ನೆಲ್ಲಾ ತುಂಬಿತ್ತು.

೨೧. ಚಕ್ರವ್ಯೂಹವು ದುರ್ವೃತ್ತರನ್ನು ಬಿಡದೆ ಹಿಡಿಯಲು, ವಿಷ್ಣುವು ರಾಕ್ಷಸರನ್ನುಗೆದ್ದಾಗ ಮೆರೆಯುವ ಸುರರಂತೆಯೂ, ಗರುಡರ ಗುಂಪನ್ನು ಕಂಡು ಹೆದರಿ ಓಡುವ ನಾಗರಂತೆಯೂ ಆ ಸೇನೆಗಳಿದ್ದುವು.

೨೨. ಶ್ಯೇನವ್ಯೂಹದಿಂದ ಮುಂಚೂಣಿಯನ್ನು ಮುರಿಯಲು ದೊಡ್ಡ ಗದ್ದಲವಾಯಿತು. ಒಬ್ಬರನ್ನೊಬ್ಬರು ಹೊಡೆಯುತ್ತ ಗುಂಪುಗುಂಪಾಗಿ ಬೀಳುತ್ತಿದ್ದರು.

೨೩. ವೀರವರರು ವಿವಿಧ ವ್ಯೂಹಗಳನ್ನು ರಚಿಸಿಕೊಂಡು ಸಿಂಹನಾದ ಗಳನ್ನು ಮಾಡುತ್ತಿದ್ದರು. ಮುದ್ಗರ ಧಾರಿಗಳು ಕೈಯಲ್ಲಿರುವ ಆಯುಧಗಳನ್ನು ತೂಗುತ್ತ ಉಲ್ಲಾಸಮತ್ತರಾಗುತ್ತಿದ್ದರು.

೨೪. ಆಯುಧಗಳ ಕೃಷ್ಣಕಾಂತಿಯೆಂಬ ಮೇಘವು ಮುಚ್ಚಿ ದಿವಾಕರನೂ ಕಪ್ಪಾದನು. ಬಾಣಗಳು ಸಿಳ್ಳೆಂದು ಹೊರಡುತ್ತಿರಲು, ಗಾಳಿಯು ಹುಲ್ಲಿನ ಬಯಲಿನಲ್ಲಿ ಬೀಸುವಂತಿತ್ತು.

ಅನೇಕಕಲ್ಪಕಲ್ಪಾಗ್ರ ಸವೃಂದಮಿವ ಸಂಸ್ಥಿತಂ |
ಪ್ರಲಯಾನಿಲಸಂಕ್ಷುಬ್ಧಮೇಕಾರ್ಣವಮಿವೋತ್ಥಿತಂ || ೨೮ ||

ಸದ್ಯಚ್ಛಿನ್ನಂ ಮಹಾಮೇರೋಃ ಪಕ್ಷದ್ವಯಮಿವ ಸ್ಫುರತ್ |
ಕ್ಷುಬ್ಧಮಾರುತನಿರ್ಧೂತಮಿವ ಕಜ್ಜಲಪರ್ವತಂ || ೨೯ ||

ಪಾತಾಲಕುಹರಾತ್ ಕ್ಷುಬ್ಧಮಂಧಕಾರಮಿವೋತ್ಥಿತಂ |
ಲೋಕಾಲೋಕಮಿವೋನ್ಮತ್ತ ನೃತ್ಯಲೋಲಲಸತ್ತಟಂ ||
ಮಹಾನರಕಸಂಘಾತಂ ಭಿತ್ವಾಽವನಿಮಿವೋತ್ಥಿತಂ || ೩೦ ||

ಆಲೋಲ ಕುಂತ ಮುಸಲಾಸಿಪರಶ್ವಧಾಂಶು-
ಶ್ಯಾಮಾಯಮಾನ ದಿವಸಾತಪ ವಾರಿಪೂರೈಃ |

---

೨೮. ಪ್ರಳಯಕಾಲದ ಮೇಘಗಳು ಗುಂಪು ಕಟ್ಟಿಕೊಂಡು ಬಂದಿರುವುವೋ ಪ್ರಳಯ ಮಾರುತದಿಂದ ಸಂಕ್ಷುಬ್ಧವಾಗಿ ಪ್ರಳಯ ಸಮುದ್ರವೇ ಮೇಲಕ್ಕೆದ್ದಿತೋ ಎಂಬಂತಿತ್ತು ಆ ಸೇನೆಗಳು.

೨೯. ಮಹಾಮೇರುವಿನ ಎರಡು ರೆಕ್ಕೆಗಳನ್ನು ಈಗ ತಾನೇ ಕತ್ತರಿಸಿ ಇಲ್ಲಿ ಹಾಕಿರುವರೋ, ವೇಗವಾಗಿ ಬೀಸುತ್ತಿರುವ ವಾಯುವು ಅಲ್ಲಾಡಿಸಿದ ಕಾಡಿಗೆಯ ಬೆಟ್ಟವೋ ಎಂಬಂತೆ ಇತ್ತು ಆ ಸೇನೆಗಳು.

೩೦. ರೇಗಿ ಪಾತಾಳ ಕುಹರದಿಂದ ಈಚೆಗೆ ಬಂದಿರುವ ಅಂಧಕಾರವೋ, ಹುಚ್ಚೆದ್ದು ಕುಣಿಯುತ್ತಿರುವ ಲಸತ್ತಟವಾದ ಲೋಕಾಲೋಕ ಪರ್ವತವೋ, ಮಹಾ ನರಕ ಸಂಘಾತವೇ ಭೂಮಿಯನ್ನು ಭೇದಿಸಿಕೊಂಡು ಈಚೆಗೆ ಬಂತೋ ಎಂಬಂತೆ ಆ ಸೈನ್ಯಗಳು ಇದ್ದುವು.

೩೧. ಝಳಪಿಸುತ್ತಿರುವ ಕುಂತ, ಮುಸಲ, ಅಸಿ, ಪರಶುಗಳ ಕಾಂತಿ ಯಿಂದ ಕಪ್ಪಾಗುತ್ತಿರುವ ದಿವಸದ ಬಿಸಿಲೆಂಬ ನೀರಿನ ಪ್ರವಾಹಗಳಿಂದ, ಬಲು

ಏಕಾರ್ಣವಂ ಭುವನಕೋಶಮಿವಾಚಿರೇಣ
ಕರ್ತುಂ ಸಮುದ್ಯತಮಗಾಧಮನಂತಪೂರ್ವೈಃ ॥ ೨೮ ॥

ಇತ್ಯಾರ್ಷೇ ಶ್ರೀವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಉತ್ಪತ್ತಿಪ್ರಕರಣೇ
“ ಆಹವಾರಂಭಣಂ ” ನಾಮ ದ್ವಾತ್ರಿಂಶಃ ಸರ್ಗಃ

ಬೇಗ ಭುವನಕೋಶವನ್ನೇ ಪ್ರಳಯ ಜಲಧಿಯನ್ನು ಮಾಡಲು ಸಿದ್ಧರಾಗಿರುವರೋ ಎಂಬಂತೆ ಆ ಸೈನ್ಯವು ಕಾಣುತ್ತಿತ್ತು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ “ ಆಹವಾರಂಭಣಂ ”
ಎಂಬ ಮೂವತ್ತೆರಡನೆಯ ಸರ್ಗವು.

ತ್ರಯಸ್ತ್ರಿಂಶಃ ಸರ್ಗಃ

ಶ್ರೀರಾಮ ಉವಾಚ—

ಭಗವನ್ಯುದ್ಧಮೇತನ್ಮೇ ಸಮಾಸೇನ ಮನಾಗ್ವದ ।
ಶ್ರುತಿರಾಹ್ಲಾದ್ಯತೇ ಶ್ರೋತುರ್ಯಸ್ಮಾದೇತಾಭಿರುಕ್ತಿಭಿಃ ॥ ೧ ॥

ಶ್ರೀ ವಸಿಷ್ಠ ಉವಾಚ—

ಅಥ ತತ್ರೈವ ತೇ ದೇವ್ಯೌ ಸಂಗ್ರಾಮಂ ತಮವೇಕ್ಷಿತುಂ ।
ವಿಮಾನೇ ಕಲ್ಪಿತೇ ಕಾಂತೇ ರುದ್ಧೇ ರುರುಹತಃ ಸ್ಥಿರೇ ॥ ೨ ॥
ಏತಸ್ಮಿನ್ನಂತರೇ ತತ್ರ ಲೀಲೇಶಃ ಪ್ರತಿಪಕ್ಷತಃ ।
ತಮುತ್ಸೋಢುಮಶಕ್ತೇಃ ಸನ್ಮುಖವ್ಯತಿಕರೇ ರಣೇ ॥ ೩ ॥
ಪ್ರಲಯಾರ್ಣವಕಲ್ಲೋಲ ಇವೋತ್ಪತ್ಯೋದ್ಭಯೋ ಭಟೇ ।
ಜಹೌ ಸಾನಾವಿವ ಶಿಲಾಂ ಭಟಸ್ಯೋರಸಿ ಮುದ್ಗರಂ ॥ ೪ ॥

ಮೂವತ್ತ ಮೂರನೆಯ ಸರ್ಗ

೧. ಶ್ರೀರಾಮನು ಹೇಳಿದನು:—ಭಗವನ್! ಯುದ್ಧವನ್ನು ನನಗೆ ಸಂಕ್ಷೇಪವಾಗಿ ತಿಳಿಯಹೇಳಿ. ಈ ಮಾತುಗಳು ಕೇಳುವವರಿಗೆ ಸಂತೋಷವನ್ನು ಉಂಟುಮಾಡುವುವು.

೨. ಶ್ರೀ ವಸಿಷ್ಠನು ಹೇಳಿದನು:—ಎಲೈ ರಾಮನೇ! ಅನಂತರ ಲೀಲೆ ಸರಸ್ವತಿಯರು ಆ ಯುದ್ಧವನ್ನು ನೋಡಲು, ತಮ್ಮ ಸಂಕಲ್ಪದಿಂದ ಸೃಷ್ಟಿ ಪಡೆದು, ಮನೋಹರವಾಗಿ ಆಕಾಶದಲ್ಲಿ ಚಲಿಸದೆ ನಿಂತಿರುವ ವಿಮಾನಗಳನ್ನು ಏರಿದರು.

೩–೪. ಇಷ್ಟರಲ್ಲಿ ಎರಡು ಸೈನ್ಯಗಳೂ ಮುಂದೆ ಒಟ್ಟುಗೂಡಿದುವು. ಆಗ ಶತ್ರು ಸೈನ್ಯದಿಂದ ಪ್ರಳಯಕಾಲದ ಸಮುದ್ರದಲ್ಲಿ ಬರುವ ಅಲೆಯಂತೆ, ಹೆದರಿಕೆಯೇ ಇಲ್ಲದೆ, ಭಟನೊಬ್ಬನು ಹಾರಿಬಂದು ಹೊಡೆಯಲು ಯತ್ನಿಸಿದನು.

ಅಥ ಪ್ರವೃತ್ತಃ ಪ್ರಸಭಂ ಪ್ರಲಯಾರ್ಣವರಂಹಸಾ |
ಸೇನಯೋಃ ಶಸ್ತ್ರಸಂಪಾತಃ ಕಿರನ್ನನಲವಿದ್ಯುತಃ ‖ ೫ ‖

ತರತ್ತರಳಧಾರಾಗ್ರ ರೇಖಾಂಕಿತನಭಸ್ತಲಃ |
ಧ್ವನತ್ಕಣಕಣಾಶಬ್ದ ಮಧ್ಯಲಕ್ಷಿತ ಟಾಂಕೃತಿಃ ‖ ೬ ‖

ಧೀರಹುಂಕಾರಮಿಶ್ರೋಷ್ಮ ಘರ್ಘರಾರವಘಸ್ಮರಃ |
ಪ್ರವೃತ್ತಶರಧಾರಾಗ್ರ ಭಾಸ್ಕರಾರ್ಚಿರ್ವಿತಾನಕಃ ‖ ೭ ‖

ನದತ್ಕಂಕಟಟಂಕಾರ ಪ್ರೋಡ್ಡೀನಕಣಪಾವಕಃ |
ಪರಸ್ಪರಾಹತಿಚ್ಛಿನ್ನ ಹೇತಿಖಂಡಖಗಾಂಬರಃ ‖ ೮ ‖

ಆ ಸಮಯದಲ್ಲಿ ವಿದೂರಥನೆಂಬ ಹೆಸರಿನಿಂದ ಹುಟ್ಟಿದ್ದ ಲೀಲೆಯ ಗಂಡನು, ಆ ಭಟನ ವೇಗವನ್ನು ಸಹಿಸಲಾರದೆ ಪರ್ವತ ತಪ್ಪಲಿನಮೇಲೆ ಬೀಳುವ ಬಂಡೆಯಂತೆ ಆ ಭಟನ ಎದೆಯಮೇಲೆ ಮುದ್ಗರದಿಂದ ಹೊಡೆದನು.

೫. ಅನಂತರ ಎರಡು ಸೈನ್ಯಗಳಿಗೂ ಪ್ರಳಯಕಾಲದ ಸಮುದ್ರದಂತೆ ಬಹು ವೇಗದಿಂದ, ಬಲಯುತವಾದಂತಹ, ಅಗ್ನಿಯನ್ನೂ ಮಿಂಚನ್ನೂ ಎರಚುವ ಶಸ್ತ್ರಗಳ ಎಸೆದಾಟಕ್ಕೆ ಮೊದಲಾಯಿತು.

೬. ಆಗ ಮೇಲುಗಡೆ ಹಾರಿಹೋಗುತ್ತಿರುವ ಶಸ್ತ್ರಗಳ ಅಲಗುಗಳಿಂದ ಆಕಾಶದಲ್ಲಿ ಗೆರೆ ಎಳೆದಂತೆ ತೋರುತ್ತಿದ್ದಿತು. ಆಗಾಗ ಅವುಗಳ ಕಣ ಕಣ ಧ್ವನಿಯ ನಡುವೆ ಧನುಷ್ಟಂಕಾರವೂ ಕೇಳಿಸುತ್ತಿತ್ತು.

೭. ಧೀರವಾದ ಹುಂಕಾರದೊಡನೆ ಸೇರಿದ್ದುದರಿಂದ, ಬೇಸಿಗೆಯಾದ ಮೇಲೆ ಗುಡುಗುವ ಮೋಡಗಳ ಘರ್ಘರಧ್ವನಿಯನ್ನು ಅದು ತಿರಸ್ಕರಿಸುತ್ತಿತ್ತು. ಬಾಣಸಮೂಹದ ತುದಿಯಲ್ಲಿ ಸೂರ್ಯನ ಕಿರಣಗಳು ಸೇರಿದ್ದುದರಿಂದ ಮೇಲು ಕಟ್ಟು ಕಟ್ಟಿದಂತೆ ಕಾಣುತ್ತಿತ್ತು.

೮. ಶೂರರು ಹಾಕಿಕೊಂಡಿದ್ದ ಕಬ್ಬಿಣದ ಕವಚಗಳ ಮೇಲೆ ಆಯುಧಗಳ ಏಟು ಬೀಳಲು, ಟಂಕಾರವೂ ಅಗ್ನಿಕಣಗಳೂ ಹೊರಡುತ್ತಿದ್ದುವು. ಒಬ್ಬರನ್ನೊಬ್ಬರು ಹೊಡೆಯುವುದರಿಂದ ಆಯುಧಗಳು ತುಂಡಾಗಿ ಹೋಗಿ, ಚೂರುಗಳು ಆಕಾಶಕ್ಕೆ ಹಾರಿ, ಅಲ್ಲಿ ಹಕ್ಕಿಗಳ ಗುಂಪಿನಂತೆ ಕಂಡುಬರುತ್ತಿದ್ದುವು.

ವೀರದೋರ್ದ್ರುಮಸಂಚಾರ ವಹದ್ವನನಭಸ್ಥಲಃ |
ಕೋದಂಡಚಕ್ರಕ್ರೇಂಕಾರ ದ್ರವದ್ವೈಮಾನಿಕಾಂಗನಃ ‖ ೯ ‖

ಮಹಾಹಲಹಲಾರಾವ ಭೃಂಗೀಕೃತವನಧ್ವನಿಃ |
ನಿರ್ವಿಕಲ್ಪಸಮಾಧಿಸ್ಥ ಇವೈಕಘನತಾವಶಾತ್ ‖ ೧೦ ‖

ನಾರಾಚಾಸಾರಧಾರಾಗ್ರಲೂನಶೂರಶಿರಸ್ಕರಃ |
ಪರಸ್ಪರಾಂಸಸಂಘಟ್ಟ ರಣತ್ಕಂಕಟಸಂಕಟಃ ‖ ೧೧ ‖

ಹುಂಕಾರಹತಹೇತ್ಯಗ್ರಸಂಘಟ್ಟಕಟುಟಾಂಕೃತಃ |
ತರದ್ಧಾರಾತರಂಗಾಭ್ರ ದಂತುರಾಶೇಷದಿಂಗ್ಮುಖಃ ‖ ೧೨ ‖

ಹೇತಿಸಂಘಟ್ಟವಿಕ್ಷೋಭ ಮುಷ್ಟಿಗ್ರಾಹ್ಯರ್ಝಣಜ್ಝಣಃ |
ಚಿರಮಾಸ್ಫೋಟಕಾಸ್ಫೋಟ ಲುಠಚ್ಚಟಚಟಾರವಃ ‖ ೧೩ ‖

---

೯. ಶೂರರ ಬಾಹುಗಳೆಂಬ ವೃಕ್ಷಗಳು ಓಡಾಡುತ್ತಿದ್ದುದರಿಂದ ಆಕಾಶದಲ್ಲಿ ಒಂದು ವನವು ಸಂಚರಿಸುತ್ತಿರುವಂತೆ ತೋರುತ್ತಿತ್ತು. ಬಿಲ್ಲಿನ ಗುಂಪಿನ ಟಂಕಾರ ಧ್ವನಿಯನ್ನು ಕೇಳಿ ವಿಮಾನದಲ್ಲಿ ಕುಳಿತು ಹಾರಾಡುತ್ತಿದ್ದ ದೇವ ಸ್ತ್ರೀಯರು ಹೆದರಿ ಓಡಿಹೋಗುತ್ತಿದ್ದರು.

೧೦. ಆ ಕಾಳಗದ ಮಹಾಶಬ್ದವು ಗುಡುಗುತ್ತಿರುವ ಮೋಡದ ಘರ್ಘರ ಧ್ವನಿಯನ್ನೂ ದುಂಬಿಯ ಝೇಂಕಾರದಂತೆ ಮಾಡಿತು. ನಿರ್ವಿಕಲ್ಪ ಸಮಾಧಿ ಯಲ್ಲಿರುವವನಿಗೆ ಪರಮಾತ್ಮನೊಬ್ಬನೇ ಕಾಣುತ್ತ ಬೇರೆ ಯಾವುದೂ ಗೋಚರ ವಾಗದೆ ಇರುವಂತೆ ಯುದ್ಧ ನಡೆಯುತ್ತಿದ್ದಾಗ ಬೇರೆ ಯಾವ ಧ್ವನಿಯೂ ಕೇಳುತ್ತಿರಲಿಲ್ಲ.

೧೧. ಬಾಣಸಮೂಹಗಳೂ ಅಲಗುಗಳೂ ಕತ್ತರಿಸಿದ ಶೂರರ ಶಿರಗಳೂ ಹರಡುತ್ತಿದ್ದುವು. ಯುದ್ಧಮಾಡುತ್ತಿರುವಾಗ ಒಬ್ಬರೊಬ್ಬರಿಗೆ ಹೆಗಲು ತಗಲು ವುದರಿಂದ ಹಾಕಿಕೊಂಡಿದ್ದ ಕವಚಗಳು ಶಬ್ದಮಾಡುತ್ತಿದ್ದುವು.

೧೨. ಶೂರರ ಹುಂಕಾರಗಳು, ಆಯುಧಗಳ ಟಾಂಕಾರಗಳನ್ನು ಕೇಳದಂತೆ ಮಾಡುತ್ತಿದ್ದುವು. ಹಾರಿಬೀಳುತ್ತಿದ್ದ ಶಸ್ತ್ರಧಾರೆಗಳ ಗುಂಪುಗಳು ಮೋಡ ಗಳಂತೆ ಎಲ್ಲ ದಿಕ್ಕುಗಳಲ್ಲಿಯೂ ಹರಡಿಕೊಂಡಿದ್ದುವು.

೧೩. ಆಯುಧಗಳು ತಗುಲುವುದರಿಂದ ಆಗುತ್ತಿದ್ದ ಶಬ್ದವು ಕೈಯಿಂದ

ಪ್ರವಹತ್ಖಡ್ಗಸೀತ್ಕಾರ ಜ್ವಲತ್ಕಣಸಣಧ್ವನಿಃ
ಸರಚ್ಛರಭರಾಧ್ಮಾಂತಶರತ್ಖರಖರಾರವಃ || ೧೪ ||

ಧಗದ್ಧಗಿತಿವಿಚ್ಛಿನ್ನ ಕಂಠೋತ್ಥಪ್ರಾಣಲೋಹಿತಃ |
ಛಿನ್ನಬಾಹುಶಿರಃಖಡ್ಗ ಖಂಡನಿರ್ವಿವರಾಂಬರಃ || ೧೫ ||

ಕಂಕಟೋತ್ಥಸ್ಫುರದ್ವಹ್ನಿ ಸಟಾಸ್ಪೃಷ್ಟಶಿರೋರುಹಃ|
ರಣತ್ಪತದಸಿವ್ರಾತ ಮತ್ತಪೀನಝುಣಜ್ಝುಣಃ || ೧೬ ||

ಕುಂತಕುಂಠಿತಮಾತಂಗ ತರಂಗೋತ್ತುಂಗಲೋಹಿತಃ |
ದಂತಿದಂತವಿನಿಷ್ಪೇಷ ತಾರಚೀತ್ಕಾರಕರ್ಕಶಃ || ೧೭ ||

ಹಿಡಿಯಲು ಸಾಧ್ಯವಿದೆಯೆನ್ನುವವುಟ್ಟಿಗೆ ಘನವಾಗಿ ಹರಡಿತ್ತು. ಶೂರರು ತೋಳು ತಟ್ಟಿಕೊಳ್ಳುವ ಚಟಚಟ ಶಬ್ದವು ಆ ರಣಭೂಮಿಯಲ್ಲೆಲ್ಲ ಹೊರಳಾಡುವಂತಿತ್ತು.

೧೪. ಕತ್ತಿಗಳನ್ನು ಒರೆಗಳಿಂದ ಹಿರಿದಾಗ ಸಣ್ಣ ಕಿಡಿಗಳು ಹುಟ್ಟಿ, ಧ್ವನಿಯಾಗುತ್ತಿತ್ತು. ಬಾಣಗಳು ಗುರಿಯನ್ನು ಸೇರಿದಾಗ, ಸೀಳಿಹೋದವರು ಖರ ಖರ ಧ್ವನಿಮಾಡುತ್ತಿದ್ದರು.

೧೫. ಕತ್ತು ಕತ್ತರಿಸಿದಂತಹ ಪ್ರಾಣಿಗಳ ಕತ್ತಿನಿಂದ, ಧಗ ಧಗ ಧ್ವನಿಯಾಗುತ್ತಿತ್ತು. ಅದರೊಡನೆ ರಕ್ತವೂ, ಪ್ರಾಣವೂ ಹೊರಡುತ್ತಿತ್ತು. ಕತ್ತರಿಸಿದ ತೋಳುಗಳು, ತಲೆಗಳು, ಖಡ್ಗಗಳು ಚೂರುಚೂರಾಗಿ ಆಕಾಶವನ್ನು ಎಡೆಬಿಡದೆ ಆವರಿಸಿಕೊಂಡಿದ್ದುವು.

೧೬. ಕಬ್ಬಿಣದ ಕವಚಗಳಮೇಲೆ ಖಡ್ಗಗಳ ಏಟು ಬಿದ್ದಾಗ ಹುಟ್ಟಿದ ಬೆಂಕಿಯು ಕೂದಲನ್ನು ಸುಡುತ್ತಿತ್ತು. ಧ್ವನಿಮಾಡುತ್ತ ಬೀಳುತ್ತಿದ್ದ ಖಡ್ಗಗಳ ಗುಂಪುಗಳ ಝುಣ ಝುಣ ಶಬ್ದವು ಯುದ್ಧಮಾಡುತ್ತಿದ್ಧ ಮಹಾ ಶೂರರನ್ನು ಮತ್ತರನ್ನಾಗಿಯೂ ಉಬ್ಬಿದವರನ್ನಾಗಿಯೂ ಮಾಡುತ್ತಿತ್ತು.

೧೭. ಕುಂತದಿಂದ ಕತ್ತರಿಸಿದ ಆನೆಗಳ ದೇಹದಿಂದ ಅಲೆಯುಲೆಯಾಗಿ ನೆತ್ತರ ಹೊಳೆಯು ಹರಿಯುತ್ತಿತ್ತು. ಆನೆಗಳ ಕೊಂಬುಗಳಿಂದ ಹತರಾದವರ ಧ್ವನಿಯು, ಆನೆಗಳ ಚೀತ್ಕಾರ ಧ್ವನಿಯೊಡನೆ ಸೇರಿ ಬಹಳ ಕರ್ಕಶವಾಗಿದ್ದಿತು.

ಮಹಾಮುಸಲಸಂಪಾತ ಪಿಷ್ಟಕಷ್ಟೋದ್ಧುರಸ್ವರಃ |
ತರಚ್ಛೂರಶಿರಃ ಪದ್ಮಪ್ರಕರಾಚ್ಛಾದಿತಾಂಬರಃ ‖ ೧೮ ‖

ವ್ಯೋಮನ್ಯಸ್ತಭುಜಾಹೀಂದ್ರಃ ಪೂರ್ಣಧೂಲಿಮಯಾಂಬುದಃ |
ಛಿನ್ನಹೇತಿನರಾರಬ್ಧಕೇಶಾಕೇಶಿ ಪ್ರತಿಕ್ರಿಯಃ ‖ ೧೯ ‖

ನಖಾನಖಿ ನಿಕೃತ್ತಾಕ್ಷಿ ಕರ್ಣನಾಸೋಷ್ಠಕಂಧರಃ |
ಛಿನ್ನಾಯುಧಮಹಾಮಲ್ಲ ಹೇಲೋಲ್ಲಾಲನಲಬ್ಧಭೂಃ ‖ ೨೦ ‖

ಪತತ್ಸಮದ ಮಾತಂಗ ಕಂಪಿತೋರ್ವೀಲುಠದ್ರಯಃ |
ರಣದ್ರಥರಯೋತ್ಪನ್ನ ಕ್ಷರದ್ರಕ್ತಸರಿತ್ಪಥಃ | ‖ ೨೧ ‖

ರಜೋರಚಿತನೀಹಾರಃ ಕಚತ್ಪ್ರವಹದಾಯುಧಃ |
ಏಕೀಕೃತಘನಕ್ಷೋಭ ಸೈನ್ಯಸಾಗರಗರ್ಜಿತಃ ‖ ೨೨ ‖

---

೧೮. ದೊಡ್ಡ ಮುಸಲಗಳಿಂದ ಏಟು ತಿಂದವರು ಕಷ್ಟದಿಂದ ಗಟ್ಟಿಯಾಗಿ ಕಿರಿಚುತ್ತಿದ್ದರು. ವೀರ ಪುರುಷರ ತಲೆಗಳೆಂಬ ಕಮಲಗಳ ಗುಂಪುಗಳು ಮೇಲಕ್ಕೆ ಹಾರಿ ಆಕಾಶವನ್ನು ಮುಚ್ಚುತ್ತಿದ್ದುವು.

೧೯. ಖಡ್ಗಗಳ ಏಟಿನಿಂದ ಕತ್ತರಿಸಿ ಹೋದಂತಹ ತೋಳುಗಳು, ಆಕಾಶದಲ್ಲಿ ದೊಡ್ಡ ಹಾವುಗಳಂತೆ ಕಾಣಿಸುತ್ತಿದ್ದುವು. ಮೋಡಗಳೆಲ್ಲ ಧೂಳಿನಿಂದ ತುಂಬಿದ್ದುವು. ಸೈನಿಕರ ಕೈಯಲ್ಲಿದ್ದ ಆಯುಧಗಳನ್ನು ಶತ್ರು ಸೈನಿಕರು ಕತ್ತರಿಸಲು, ಒಬ್ಬರ ಜುಟ್ಟನ್ನು ಮತ್ತೊಬ್ಬರು ಹಿಡಿದು ಯುದ್ಧ ಮಾಡುತ್ತ ಪ್ರತೀಕಾರ ಮಾಡುತ್ತಿದ್ದರು.

೨೦. ಉಗುರುಗಳಿಂದ ಯುದ್ಧ ಮಾಡುವಾಗ, ಕಣ್ಣು, ಕಿವಿ, ಮೂಗು, ತುಟಿ, ಕುತ್ತಿಗೆಗಳನ್ನು ಕತ್ತರಿಸುತ್ತಿದ್ದರು. ಖಡ್ಗ ಮುರಿದ ಭಟರು ಪ್ರತಿಭಟರನ್ನು ಸುಲಭವಾಗಿ ಮೇಲಕ್ಕೆ ಎಸೆದು ಜಯಸ್ಥಾನವನ್ನು ಆಕ್ರಮಿಸುತ್ತಿದ್ದರು.

೨೧. ಮದಿಸಿದ ಆನೆಗಳು ಬಿದ್ದು ನಡುಗಿಸುತ್ತಿದ್ದ ಭೂಮಿಯ ಮೇಲೆ ಏಟು ತಿಂದು ಬಿದ್ದವರು ಹೊರಳಾಡುತ್ತಿದ್ದರು. ರಥಗಳು ಧ್ವನಿ ಮಾಡುತ್ತ ವೇಗವಾಗಿ ಓಡುತ್ತಿರಲು ನೆತ್ತರ ಹೊಳೆಯು ಆ ದಾರಿಯನ್ನು ತುಂಬಿದ್ದಿತು.

೨೨. ಧೂಳು ರಣಭೂಮಿಯಲ್ಲಿ ಮಂಜಿನಂತೆ ದಟ್ಟವಾಗಿ ಆವರಿಸಿತ್ತು.

ಮತ್ತಹಾಸವಿಲಾಸೇನ ಮೃತ್ಯುನಾ ಪರಿಚರ್ವಿತಃ |
ಗರ್ವಿತಾದ್ರೀಂದ್ರನಾಗೇಂದ್ರ ಖರ್ವಿತಾಂಭೋದಗರ್ಜಿತಃ || ೨೩ ||

ವೃಕ್ಷಶ್ವಭ್ರತಟೀಚ್ಛನ್ನ ಚಕ್ರಶಕ್ತ್ಯೃಷ್ಟಿಮುದ್ಗರಃ |
ಶರೋರ್ಣಾತಂತುನೀರಂಧ್ರಘೃಷ್ಟಿಯೋಧಾದ್ರಿಮೇಖಲಃ || ೨೪ ||

ಮೇಘವಿಶ್ರಾಂತವಿಚ್ಛಿನ್ನ ಪತಾಕಾಪಟಚಾಮರಃ |
ಯಂತ್ರಪಾಷಾಣಚಕ್ರೌಘ ದೂರವಿದ್ರುತಖೇಚರಃ || ೨೫ ||

ಮರಣವ್ಯಗ್ರಕೃತ್ತಾಂಗ ಯೋಧಾಕ್ರಂದಾತಿಘರ್ಘರಃ |
ಕುಠಾರಾಘಾತಸಂಘಾತ ವಿದಲನ್ಮಸ್ತಕವ್ರಜಃ || ೨೬ ||

ಆಯುಧಗಳು ಹಾರಾಡುತ್ತಿದ್ದುವು. ಸೈನ್ಯವೆಂಬ ಸಾಗರದ ಗರ್ಜನೆಯು ಸುತ್ತಮುತ್ತಲೆಲ್ಲ ಆವರಿಸಿಕೊಂಡಿತ್ತು.

೨೩. ರಣಭೂಮಿಯಲ್ಲಿ ಮೃತ್ಯುವು ಮತ್ತನಾಗಿ ನಗುತ್ತ ವಿಲಾಸದಿಂದ ತಿನ್ನುತ್ತಿದ್ದನು. ಪರ್ವತಗಳಂತಿದ್ದ ಮದ್ದಾನೆಗಳು ಗರ್ಜಿಸುತ್ತ ಮೇಘ ಗರ್ಜನೆಯನ್ನು ತಿರಸ್ಕರಿಸುತ್ತಿದ್ದುವು.

೨೪. ಮರ, ಹಳ್ಳ ಮುಂತಾದ ಕಡೆಯಲ್ಲಿ ನಿಂತು ಯುದ್ಧ ಮಾಡುವವರನ್ನು ಹೊಡೆಯಲು ಸೈನಿಕರು ಚಕ್ರ, ಶಕ್ತಿ, ಋಷ್ಟಿ, ಮುದ್ಗರ ಮೊದಲಾದ ಆಯುಧಗಳನ್ನು ಬಿಡಲು, ಅವು ಮರ, ಹಳ್ಳಗಳಲ್ಲಿ ಸಿಕ್ಕಿಕೊಳ್ಳುತ್ತಿದ್ದುವು, ಬೆಟ್ಟದ ತಪ್ಪಲನ್ನೂ ಮುತ್ತುವ ಜೇಡನ ಪೊರೆಗಳಂತೆ ಸೈನಿಕರನ್ನು ಬಾಣಗಳು ಎಡೆಬಿಡದೆ ಮುತ್ತುತ್ತಿದ್ದುವು.

೨೫. ರಥಗಳ ಪತಾಕೆಗಳ ಪಟಗಳಲ್ಲಿ ಕಟ್ಟಿದ ಚಾಮರಗಳ ಮೇಲೆ ಮೋಡಗಳು ವಿಶ್ರಾಂತಿ ಹೊಂದುತ್ತಿದ್ದುದರಿಂದ ಅವು ಮುರಿದುಹೋಗುತ್ತಿದ್ದುವು. ಕವಣೆಯ ಕಲ್ಲುಗಳನ್ನು ಬೀಸಿ ಎಸೆಯುತ್ತಿದ್ದುದರಿಂದ, ಆಕಾಶದಲ್ಲಿ ಹಾರಾಡುವ ಪಕ್ಷಿಗಳೆಲ್ಲವೂ ದೂರವಾಗಿ ಓಡುತ್ತಿದ್ದುವು.

೨೬. ಕತ್ತರಿಸಿಹೋದ ಅಂಗಗಳನ್ನುಳ್ಳ ಯೋಧರು, ಮರಣವನ್ನೇ ಎದುರು ನೋಡುತ್ತ ಅಳುತ್ತಿದ್ದರು. ಅದರಿಂದ ಆ ಯುದ್ಧರಂಗವೆಲ್ಲವೂ ಘರ್ಘರ ಧ್ವನಿಯಿಂದ ಕೂಡಿತ್ತು. ಪದೇ ಪದೇ ಬೀಳುತ್ತಿದ್ದ ಕೊಡಲಿಯ ಏಟುಗಳಿಂದ ತಲೆಗಳ ಗುಂಪು ಗುಂಪುಗಳೇ ಸೀಳಿಹೋಗುತ್ತಿದ್ದುವು.

ದೂರೋಡ್ಡೀನಕಚತ್ಛಡ್ಗ ಖಂಡತಾರಕಿತಾಂಬರಃ |
ಶಕ್ತಿನಿರ್ಮುಕ್ತಶಕ್ತ್ರೌಘವಿಭಿನ್ನೇಭಾವೃತಾವನಿಃ || ೨೭ ||

ಸೈನ್ಯವ್ಯಾಕುಲವೇತಾಲ ಲಲನೋನ್ಮುಕ್ತಮುದ್ಗರಃ |
ಗಗನೋತ್ತಂಭಿತೋತ್ತುಂಗ ಶೂರತೋಮರತೋರಣಃ || ೨೮ ||

ಭುಶುಂಡೀಭಗ್ನಖಡ್ಗೌಘ ಖಂಡಾಲೀವ್ಯೋಮಕುಂತಲಃ |
ಕುಂತವೇಣುವನನ್ಯಸ್ತ ತಾಪಾಂಬರಕಚಚ್ಛವಿಃ || ೨೯ ||

ಖಡ್ಗಷ್ಟಿರ್ವೃಷ್ಟಿಸಂಪುಷ್ಟರಾಜಪೂಜಿತಸೈನಿಕಃ |
ಶೂಲೋತ್ತಂಭಿತಸಚ್ಛೂರ ಗ್ರಹಣೋದ್ಯಮಿತಾಪ್ಸರಾಃ || ೩೦ ||

ಗದಾತುಷಾರವಿಗಲತ್ ಸ್ಫುರಿತಾಂಗದದಿಂಗ್ಮುಖಃ |
ಪ್ರಾಸಪ್ರಸಭಸಂಪಿಷ್ಟ ಕಷ್ಟಚೇಷ್ಟತಯೋತ್ಕಟಃ || ೩೧ ||

---

೨೭. ಕತ್ತಿಯ ಚೂರುಗಳು ಹಾರಿ ಹೊಳೆಯುತ್ತಿದ್ದುದರಿಂದ, ಆಕಾಶದಲ್ಲಿ ನಕ್ಷತ್ರಗಳು ಹುಟ್ಟಿದಂತೆ ಕಾಣುತ್ತಿತ್ತು. ಬಲಪ್ರಯೋಗದಿಂದ ಬಿಟ್ಟ ಶಕ್ತ್ರ್ಯಾಯುಧಗಳ ಗುಂಪುಗಳು ಆನೆಗಳನ್ನು ತುಂಡುಮಾಡಿ ಭೂಮಿಯ ಮೇಲೆ ಹರಡುತ್ತಿದ್ದುವು.

೨೮. ಹೆಣ್ಣುಭೇತಾಳಗಳು ಯುದ್ಧರಂಗದಲ್ಲಿ ಓಡಾಡುತ್ತಿರುವಾಗ, ಸೈನಿಕರು ಎಸೆದ ಮುದ್ಗರಗಳು ಅವುಗಳ ಮೇಲೆ ಬೀಳುತ್ತಿದ್ದುವು. ವೀರರಾದವರು ತೋಮರಾಯುಧವನ್ನು ಎತ್ತಿಹಿಡಿದಿರುವುದು ಆಕಾಶಕ್ಕೆ ತೋರಣಕಟ್ಟಿದಂತೆ ತೋರುತ್ತಿದ್ದಿತು.

೨೯. ಭ್ರುಶುಂಡಿಯೆಂಬ ಆಯುಧಗಳಿಂದ ಕತ್ತರಿಸಿಹೋದ ಖಡ್ಗಗಳ ತುಂಡುಗಳು ಆಕಾಶದ ಕೂದಲರಾಶಿಯಂತೆ ಕಾಣುತ್ತಿದ್ದುವು. ಕುಂತಾಯುಧಗಳನ್ನು ಆಕಾಶದಲ್ಲಿ ಬೀಸುತ್ತಿರಲು ಅವು ಥಣಥಣಗುಟ್ಟುತ್ತಾ, ಬಿದಿರುಮೆಳೆಯಲ್ಲಿ ಉರಿಯುವ ಕಾಳ್ಕಿಚ್ಚಿನಂತೆ ತೋರುತ್ತಿತ್ತು.

೩೦. ಖಡ್ಗ, ಋಷ್ಟಿ ಮೊದಲಾದ ಆಯುಧಗಳನ್ನು ಮಳೆಗರೆದ ಸೈನಿಕರಿಗೆ, ಅವರ ರಾಜರು ಬಹುಮಾನಗಳನ್ನು ಕೊಡುತ್ತಿದ್ದರು. ಭಟನೊಬ್ಬನು ಶೂಲದ ತುದಿಯಲ್ಲಿ ಒಬ್ಬ ಶೂರನನ್ನು ಸಿಕ್ಕಿಸಿಕೊಂಡು ಎತ್ತಿದಾಗ ಅಪ್ಸರೆಯರು ಅವನನ್ನು ಸೇರಲು ತವಕಪಡುತ್ತಿದ್ದರು.

೩೧. ಗದೆಯ ಏಟನಿಂದ ಭಟರ ಬಾಹುಗಳ ಆಭರಣಗಳು ಒಡೆದುಹಾರಿ,

ಚಕ್ರಕ್ರಕಚಸಂಚಾರ ಚ್ಛಿನ್ನಾಶ್ವನರವಾರಣಃ |
ಪರಶುವ್ರಾತಸಂತಾಪ ಪತತ್ಸಮದವಾರಣಃ || ೩೨ ||

ಲಕುಟೋಲ್ಲೋಡನೋಡ್ಡೀನಪ್ರೋಡ್ಡಾಮುರಚಟದ್ಭಟಃ |
ಯಂತ್ರಪಾಷಾಣ ಸಂಪಾತಪಿಷ್ಟಕೇತುರಥದ್ರುಮಃ || ೩೩ ||

ಕರವಾಲವಿಲೂನಾಗ್ರಚ್ಛತ್ರ ಪಂಕಜಪಾಂಡುರಃ |
ಕ್ಷೇಪಣಕ್ಷೋಭ ಸಂಕ್ಷೀಣ ಸೈನ್ಯಕ್ಷೋಭೋಽಪ್ಯಲಕ್ಷಣಃ || ೩೪ ||

ಕಬಂಧಬಂಧ ಸಂನೇತೃಪಾತ ಸಂಪಿಷ್ಟಪಾರ್ಶ್ವಗಃ |
ಸಾಂಕುಶಾಂಕಿತ ಸಖ್ಯಸ್ಥ ವೀರವಾರಿತವಾರಣಃ || ೩೫ ||

ದಿಕ್ಕು ದಿಕ್ಕುಗಳಲ್ಲಿ ಹೊಳೆಯುತ್ತಿದ್ದುವು. ಪ್ರಾಸವೆಂಬ ಆಯುಧದಿಂದ ಏಟುತಿಂದ ಸೈನಿಕರು ಕಷ್ಟದಿಂದ ಹೊರಳಾಡುತ್ತಿದ್ದರು.

೩೨. ಗರಗಸಗಳಂತಿದ್ದ ಚಕ್ರಾಯುಧಗಳು ಹಾರಾಡುತ್ತಿರಲು, ಆನೆ, ಕುದುರೆ ಸೈನಿಕರು ಕತ್ತರಿಸಿಹೋಗುತ್ತಿದ್ದರು. ಕೊಡಲಿಗಳು ರಾಶಿರಾಶಿಯಾಗಿ ಬೀಳುತ್ತಿರಲು ಮದ್ದಾನೆಗಳು ನೆಲದ ಮೇಲೆ ಉರುಳುತ್ತಿದ್ದುವು.

೩೩. ದೊಣ್ಣೆಗಳನ್ನು ತಿರುಗಿಸುತ್ತಿದ್ದುದರಿಂದ ಭಯದಿಂದ ಓಡಿದ ಭಟರು ತಮ್ಮನ್ನು ಮರೆಮಾಡಿಕೊಳ್ಳುತ್ತಿದ್ದರು. ಕವಣೆಕಲ್ಲುಗಳು ಬಿದ್ದು ಹೆಮ್ಮರದಂತೆ ಎತ್ತರವಾಗಿದ್ದ ರಥಗಳ ಪತಾಕೆಗಳು ಪುಡಿಪುಡಿಯಾಗುತ್ತಿದ್ದುವು.

೩೪. ಕತ್ತಿಗಳ ಏಟಿನಿಂದ ಬೆಳುಗೊಡೆಗಳ ತುದಿಗಳು ಕತ್ತರಿಸಿಹೋಗಿ, ಬಿದ್ದು, ಬಿಳಿದಾವರೆ ಹೂಗಳನ್ನು ಹರಡಿದಂತೆ ಬೆಳ್ಳಗೆ ಕಾಣಿಸುತ್ತಿದ್ದಿತು. ಕವಣೆ ಕಲ್ಲುಗಳ ಏಟಿನಿಂದ ಹೆದರಿ ಸೇನೆಯು ಕರಗಿಹೋಗುತ್ತಿದ್ದರೂ, ಯಾರೂ ಲಕ್ಷಿಸುತ್ತಲೇ ಇರಲಿಲ್ಲ.

೩೫. ರಥಿಕರು ಪದಾತಿಗಳ ತಲೆಗಳನ್ನು ಕತ್ತರಿಸಿದರೂ, ಆ ಪದಾತಿಗಳ ಮುಂಡಗಳೇ ರಥಿಕರ ಮೇಲೆ ಬಿದ್ದು ಪಕ್ಕದಲ್ಲಿದ್ದವರಿಗೆ ತೊಂದರೆಯನ್ನುಂಟು ಮಾಡುತ್ತಿದ್ದುವು. ಆನೆಯ ಮೇಲೆ ಕುಳಿತು ಯುದ್ಧಮಾಡುತ್ತ ಅಂಕುಶದಿಂದ ಹೊಡೆದರೂ ಅದನ್ನು ಲಕ್ಷ್ಯಮಾಡದೆ, ಹೆದರದೆ, ಎದುರಾಳುಗಳು ಆನೆಗಳನ್ನು ತಡೆಯುತ್ತಿದ್ದರು.

ಪರಶುವ್ರಾತ ಸಂಪಾತ ಪತತ್ಸಮದವಾರಣಃ |
ಪಾಶಾಪಾಶಿ ವಿಶೇಷಜ್ಞವೀರಾತಿಪರಿದೇವನಃ || ೩೬ ||

ಕ್ಷುರಿಕಾಕುಕ್ಷಿನಿರ್ಭೇದ ಗಲತ್ಪದ್ಮಪತಜ್ಜನಃ |
ತ್ರಿಶೂಲವಲನೋನ್ಮತ್ತ ಶೂರಸಂಕರನರ್ತನಃ || ೩೭ ||

ಧಾವದ್ಧಾನುಷ್ಕಸಂಪೂರ್ಣ ಕುಲಕೂಜಿತಕಾಕಲಿಃ |
ಭಿಂದಿಪಾಲಸಟಾಟೋಪ ಹುಂಕಾರಾರಭಟೀನಟಃ || ೩೮ ||

ವಜ್ರಮುಷ್ಟಿವಿನಿಷ್ಪಿಷ್ಟಪಿಷ್ಟಸದ್ಭಟಸಂಕಟಃ |
ಶ್ಯೇನವದ್ವ್ಯೋಮಪದವೀಪ್ರೋತ್ಪತತ್ಪಟುಪಟ್ಟಿಶಃ || ೩೯ ||

ಅಂಕುಶಾಕೃಷ್ಟಶೂರೇಶ ರಥೇಭ ಹಯ ಕೇತನಃ |
ಹಲಾಹಲಿಹತಾಲೂನಹೇಲಾಕುಲಕುಲಾಚಲಃ || ೪೦ ||

---

೩೬. ಹಿಂದೆ ಹೇಳಿದಂತೆ, ಕೊಡಲಿಗಳ ಗುಂಪುಗಳ ಏಟುಗಳಿಂದ ಮದ್ದಾನೆಗಳು ಕೆಳಗೆ ಬೀಳುತ್ತಿದ್ದುವು. ಪಾಶಯುದ್ಧದಲ್ಲಿ ನಿಪುಣರಾದ ಭಟರು ತಮ್ಮ ಪ್ರಾಣಗಳನ್ನೇ ಪಣವಾಗಿ ಒಡ್ಡುತ್ತಿದ್ದರು.

೩೭. ಕಠಾರಿಯಿಂದ ಹೊಟ್ಟೆಯನ್ನು ಸೀಳಲು ಹೃತ್ಪದ್ಮಗಳು ಹೊರಗೆ ಬಂದು ಭಟರು ಕೆಳಗೆಬೀಳುತ್ತಿದ್ದರು. ತ್ರಿಶೂಲವನ್ನು ತಿರುಗಿಸುತ್ತ ಮತ್ತರಾಗಿ ವೀರರು ಕುಣಿಯುತ್ತಿದ್ದರು.

೩೮. ಬಿಲ್ಲುಗಾರರು ಓಡಿ ಗುಂಪುಸೇರುತ್ತಿದ್ದರು. ಅವರ ಧನುಷ್ಟಂಕಾರ ಧ್ವನಿಯು ಅಲ್ಲೆಲ್ಲ ಹರಡಿತ್ತು. ಭಿಂದಿಪಾಲಗಳೆಂಬ ಸಿಂಹದ ಸಗಟೆಳ ಆಟೋಪದಿಂದಲೂ, ಹುಂಕಾರಗಳಿಂದಲೂ, ಯುದ್ಧ ಮಾಡುತ್ತಿದ್ದ ಭಟರು ನರಸಿಂಹಾವತಾರವನ್ನು ನಟಿಸುತ್ತಿದ್ದಂತೆ ತೋರುತ್ತಿತ್ತು.

೩೯. ವಜ್ರಮುಷ್ಟಿಯ ಏಟುಗಳಿಂದ ಭಟರು ಚೂರ್ಣಿತರಾಗಿ, ರಣಭೂಮಿಯಲ್ಲಿ ಎಡಬಿಡದೆ ತುಂಬಿದ್ದರು. ಚೂಪಾದ ಪಟ್ಟಿಶಾಯುಧಗಳು ಗಿಡುಗ ಪಕ್ಷಿಗಳಂತೆ ಆಕಾಶಕ್ಕೆ ಹಾರುತ್ತಿದ್ದವು.

೪೦. ಶೂರರು, ಸೇನಾಪತಿಗಳು, ರಥಗಳು, ಆನೆಗಳು, ಕುದುರೆಗಳು, ಬಾವುಟಗಳು—ಇವು ಅಂಕುಶಗಳಿಂದ ಎಳೆದುದರಿಂದ ಕೆಳಗೆ ಬೀಳುತ್ತಿದ್ದುವು. ಕುಲಾಚಲಗಳಂತೆ ದೃಢರಾದ ವೀರರು ನೇಗಿಲಿನಿಂದ ಹೊಡೆದಾಡು

ಸುತಾಲೋತ್ತಾಲಕುದ್ದಾಲ ನಿಖಾತವನಭೂತಲಃ|
ಧನುರ್ದ್ವಿಗುಣಮಾತ್ರಾಸ್ತ ಲೂನಲೋಕಶಿಲಾವಲಿಃ ||೪೧||

ಕ್ರಕಚೋಭಯಪಾರ್ಶ್ವೇಭಚ್ಛಿನ್ನಮತ್ತಮತಂಗಜಃ |
ಸಂಗ್ರಾಮೋಲೂಖಲಕ್ಷುಣ್ಣಲೋಕತಂಡುಲಮೌಸಲೀ ||೪೨||

ಅಸ್ತ್ರಾಭಾಶೃಂಖಲಾಜಾಲಬದ್ಧ ಸೇನಾವಿಹಂಗಮಃ |
ಲೋಲಾಸಿವೀರನಿಸ್ತ್ರಿಂಶ ನೀತವಾದಿಗೃಹಾಂಗಣಃ ||೪೩||

ಗಣಶೋ ನೀಯಮಾನಾಗ್ರ್ಯಶ್ವಾಪದಾರಾವನಿರ್ಘರಃ |
ನಖಾಂಗುಷ್ಠಖನತ್ಪುಂಖಪ್ರೇಂಖಾರಣರಣಾರವೈಃ |
ಮರಿಚೈರ್ವ್ಯಂಜನಾನೀವ ರಂಜಯನ್ಸಕಲಾರವಾನ್ ||೪೪||

ವಾಗ ಪೆಟ್ಟು ತಿಂದು, ಅಂಗಗಳು ಕತ್ತರಿಸಿ ಹೋದರೂ ಲೆಕ್ಕಿಸದೆ ಯುದ್ಧ ಮಾಡುತ್ತಿದ್ದರು.

೪೧. ತಾಳೆಯ ಮರದಂತೆ ಎತ್ತರವಾಗಿದ್ದ ಭಟರು ಗುದ್ದಲಿಗಳಿಂದ ಯುದ್ಧ ಮಾಡುತ್ತ ಅವುಗಳನ್ನು ಮೇಲಿಂದ ಬಿಡುವಾಗ ಭೂಮಿಯು ಅಗೆದು ಹೋಗುತ್ತಿತ್ತು.ಜನರನ್ನೂ ಕಲ್ಲುಗಳನ್ನೂ ಎರಡು ಬಿಲ್ಲುದ್ದ ಮೇಲಕ್ಕೆ ಎಸೆಯುತ್ತಿದ್ದುದರಿಂದ ಅವು ಸೀಳಿ ಕೆಳಕ್ಕೆ ಬೀಳುತ್ತಿದ್ದುವು.

೪೨. ಎರಡು ಪಕ್ಕಗಳಿಗೂ ಗರಗಸಗಳನ್ನು ಕಟ್ಟಿದ ಆನೆಗಳು ಮದ್ದಾನೆಗಳ ಗುಂಪಿನಲ್ಲಿ ನುಗ್ಗಿ ಅವನ್ನು ಕತ್ತರಿಸುತ್ತಿದ್ದುವು. ಮುಸಲ ಯುದ್ಧವೆಂಬ ಒನಕೆಯು, ಸೈನಿಕರೆಂಬ ಅಕ್ಕಿಯನ್ನು ಯುದ್ಧವೆಂಬ ಒರಳಿನಲ್ಲಿ ನುಚ್ಚುನುಚ್ಚಾಗಿ ಮಾಡುತ್ತಿತ್ತು.

೪೩-೪. ಅಸ್ತ್ರಕಾಂತಿಗಳೆಂಬ ಸರಪಳಿಯ ಬಲೆಗಳು, ಸೈನ್ಯಗಳೆಂಬ ಪಕ್ಷಿಗಳನ್ನು ಕಟ್ಟುತ್ತಿದ್ದುವು. ಕತ್ತಿಯನ್ನು ಝಳಪಿಸುತ್ತಿರುವ ವೀರರು ತಮ್ಮ ಕತ್ತಿಗಳಿಂದ ಯಮನೆಂಬ ಬೇಡರ ಒಡೆಯನ ಮನೆಯ ಅಂಗಳಕ್ಕೆ ಸೇರಿಸುತ್ತಿದ್ದರು. ದುಷ್ಟ ಮೃಗಗಳು ವೀರರ ಹೆಣಗಳನ್ನು ಹೊತ್ತುಕೊಂಡು ಹೋಗುತ್ತ ಕೂಗುತ್ತಿದ್ದ ವಿಕಾರವಾದ ಕೂಗು ಸುತ್ತಲಿನ ರಣಭೂಮಿಯನ್ನೆಲ್ಲ ತುಂಬಿತ್ತು. ನಡು ನಡುವೆ, ಮೇಲಕ್ಕೆ ಹಾರುತ್ತಿದ್ದ ಬಾಣಗಳ ಹಿಂದೆ, ಹೆಬ್ಬೆಟ್ಟಿನ ಉಗುರುಗಳ ಶಬ್ದವಾಗುತ್ತಿತ್ತು. ಮೆಣಸು ಇತರ ವ್ಯಂಜನಗಳನ್ನು ರುಚಿಪಡಿಸುವಂತೆ, ಅದು ಇತರ ಧ್ವನಿಗಳೆಲ್ಲ ಹಿತವಾಗುವಂತೆ ಮಾಡುತ್ತಿದ್ದಿತು.

ಸೈನ್ಯನಿಕ್ಷಿಪ್ತಕುಂಭಾಗ್ನಿದಗ್ಧಯೋಧೇರಿತಾಯುಧಃ |
ಸೈನ್ಯನಿಕ್ಷಿಪ್ತಕುಂಭಾಗ್ನಿದಗ್ಧಯೋಧೋಜ್ಝಿತಾಯುಧಃ || ೪೫ ||

ಸೈನ್ಯನಿಕ್ಷಿಪ್ತಕುಂಭಸ್ಥತಪ್ತಾಂಗಾರ ಹತೇಕ್ಷಣಃ |
ಸೈನ್ಯನಿಕ್ಷಿಪ್ತಕುಂಭಸ್ಥ ವಿಷವಾರಿದಲಜ್ಜನಃ || ೪೬ ||

ನಾರಾಚವರ್ಷವರವಾರಿದವೀರಪೂರ
ಮತ್ತಾಭ್ರಸಂಭ್ರಮಸನೃತ್ತಕಬಂಧಬರ್ಹೀ ।
ಕಲ್ಪಾಂತಕಾಲ ಇವ ವೇಗವಿವರ್ತಮಾನ
ಮಾತಂಗಶೈಲವಲಿತೋ ರಣಸಂಭ್ರಮೋಽಭೂತ್ || ೪೭ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
"ಸೇನಯೋಃ ಪ್ರಥಮಪಾತವರ್ಣನಂ" ನಾಮ ತ್ರಯಸ್ತ್ರಿಂಶಃ ಸರ್ಗಃ

---

೪೫. ಸೈನ್ಯದೊಳಕ್ಕೆ ಎಸೆದ ಕುಂಭಾಗ್ನಿಯಿಂದ ಸತ್ತ ಸೈನಿಕರು, ಆಯುಧಗಳನ್ನು ಹಿಡಿದುಕೊಂಡಿದ್ದ ಹಾಗೆಯೇ ಎಸೆಯುತ್ತಿದ್ದರು. ಕುಂಭಾಗ್ನಿಯಿಂದ ಸುಟ್ಟು ಹೋದ ಸೈನಿಕರು ಕೈಯಲಿದ್ದ ಆಯುಧಗಳನ್ನು ಹಾಗೆಯೇ ಕೆಳಕ್ಕೆ ಬಿಡುತ್ತಿದ್ದರು.

೪೬. ಆ ಕುಂಭದಲ್ಲಿದ್ದ ಕಾದ ಕೆಂಡಗಳಿಂದ ಸೈನಿಕರ ಕಣ್ಣುಗಳು ಸುಟ್ಟು ಹೋಗುತ್ತಿದ್ದುವು. ಕುಂಭದಲ್ಲಿದ್ದ ವಿಷ ಜಲದಿಂದ ಸೈನಿಕರು ಸೀಳಿ ಹೋಗಿ ಕೆಳಗೆ ಬೀಳುತ್ತಿದ್ದರು.

೪೭. ಬಾಣಗಳ ಮಳೆಯೆಂಬ ಉತ್ತಮವಾದ ನೀರನ್ನು ಮಳೆಗರೆಯುತ್ತಿರುವ ವೀರರ ಸಮೂಹವೆಂಬ ಮಹಾ ಮೇಘಗಳ ಆಡಂಬರದಿಂದ ಕಬಂಧಗಳೆಂಬ ನವಿಲುಗಳು ಕೇಕೆ ಹಾಕುತ್ತ ಕುಣಿಯುತ್ತಿದ್ದುವು. ದೊಡ್ಡ ಮದ್ದಾನೆಗಳೆಂಬ ಬೆಟ್ಟಗಳು ವೇಗದಿಂದ ಓಡಾಡುತ್ತಿದ್ದ ರಣಸಂಭ್ರಮವು ಪ್ರಳಯ ಕಾಲದಂತೆ ಇತ್ತು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಸೇನಯೋಃ ಪ್ರಥಮಪಾತ ವರ್ಣನ"
ಎಂಬ ಮೂವತ್ತಮೂರನೆಯ ಸರ್ಗವು.

ಚತುಸ್ತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಅಥ ರಾಜ್ಞಾಂ ಯುಯುತ್ಸೂನಾಂ ಭಟಾನಾಂ ಮಂತ್ರಿಣಾಮಪಿ |
ನಭಸಃ ಪ್ರೇಕ್ಷಕಾಣಾಂ ಚ ತತ್ರೇಮಾಃ ಪ್ರೋದಗುರ್ಗಿರಃ || ೧ ||

ಚಲತ್ಪದ್ಮಂ ಸರ ಇವ ವಹದ್ವಿಹಗಮೇವ ಚ |
ನಭಃ ಶೂರಶಿರಃಕೀರ್ಣಂ ಭಾತಿ ತಾರಕಿತಾಕೃತಿ || ೨ ||

ಪಶ್ಯ ರಕ್ತಪೃಷತ್ಪೂರಸಿಂದೂರಾರುಣಮಾರುತೈಃ |
ಸಾಂಧ್ಯಾ ಇವ ವಿಭಾಂತ್ಯೇತೇ ಮಧ್ಯಾಹ್ನೇಽಂಬುದಭಾನವಃ || ೩ ||

ಕಿಮಿದಂ ಭಗರ್ವ ವ್ಯೋಮ ಪಲಾಲಭರಿತಂ ಸ್ಥಿತಂ |
ನೇದಂ ಪಲಾಲಂ ವೀರಾಣಾಮೇತೇ ಶರಭರಾಂಬುದಾಃ || ೪ ||

ಮೂವತ್ತನಾಲ್ಕನೆಯ ಸರ್ಗಃ

೧. ಶ್ರೀ ವಸಿಷ್ಠನು ಹೇಳಿದನು:— ಎಲೈ ರಾಮನೆ! ಹಿಂದೆ ಹೇಳಿದಂತೆ ಯುದ್ಧ ನಡೆಯುತ್ತಿದ್ದಾಗ ರಣಭೂಮಿಯಲ್ಲಿ ರಾಜರು, ಭಟರು, ಮಂತ್ರಿಗಳು ಆಕಾಶದಲ್ಲಿ ಯುದ್ಧವನ್ನು ನೋಡುತ್ತಿದ್ದವರು, ಹೀಗೆಂದು ಹೇಳಿದರು:—

೨. ವೀರರ ತಲೆಗಳಿಂದ ತುಂಬಿ ನಕ್ಷತ್ರಗಳು ಹುಟ್ಟಿದಂತೆ ಕಾಣುವ ಆಕಾಶವು ಚಲಿಸುತ್ತಿರುವ ಕಮಲಗಳುಳ್ಳ ಸರೋವರದಂತೆಯೂ ಹಾರುತ್ತಿರುವ ಹಕ್ಕಿಗಳು ಇದ್ದಂತೆಯೂ ಪ್ರಕಾಶಿಸುತ್ತಿದೆ.

೩. ನೆತ್ತರಹನಿಗಳು ತುಂಬಿ ಸಿಂಧೂರದಂತೆ ಕೆಂಪಗಿರುವ ಗಾಳಿಗಳು ಬೀಸುತ್ತಿರುವುದರಿಂದ ಮೇಘಗಳು ಮಧ್ಯಾಹ್ನದಲ್ಲಿಯೂ ಸಾಯಂಕಾಲದ ಮೇಘಗಳಂತೆ ಪ್ರಕಾಶಿಸುತ್ತಿವೆ.

೪. "ಇದೇನು? ಆಕಾಶವು ಸಿಪ್ಪೆಗಳಿಂದೆ ತುಂಬಿದೆ?" ಎಂದೊಬ್ಬನು ಕೇಳಲು "ಇವು ಸಿಪ್ಪೆಗಳಲ್ಲ; ವೀರರ ಬಾಣಸಮೂಹಗಳೆಂಬ ಮೋಡಗಳು" ಎಂದು ಇನ್ನೊಬ್ಬನು ಉತ್ತರವನ್ನು ಕೊಟ್ಟನು.

ಯಾವಂತೋ ಭುವಿ ಸಿಚ್ಯಂತೇ ರುಧಿರೈ ರಣರೇಣವಃ |
ತಾವಂತ್ಯಬ್ದಸಹಸ್ರಾಣಿ ಭಟಾನಾಮಾಸ್ಪದಂ ದಿವಿ || ೫ ||

ಮಾ ಭೈಷ್ಟ ನೈತೇ ನಿಸ್ತ್ರಿಂಶಾ ನೀಲೋತ್ಪಲದಲತ್ವಿಷಃ |
ಅಮೀ ವೀರಾವಲೋಕಿನ್ಯಾ ಲಕ್ಷ್ಮ್ಯಾ ನಯನವಿಭ್ರಮಾಃ || ೬ ||

ವೀರಾಲಿಂಗನಲೋಲಾನಾಂ ನಿತಂಬೇ ಸುರಯೋಷಿತಾಂ |
ಮೇಖಲಾಃ ಶಿಥಿಲೀಕರ್ತುಂ ಪ್ರವೃತ್ತಃ ಕುಸುಮಾಯುಧಃ || ೭ ||

ಲಸದ್ಭುಜಲತಾಲೋಲಾ ರಕ್ತಪಲ್ಲವಪಾಣಯಃ |
ಮಂಜರೀಮತ್ತನಯನಾ ಮಧ್ವಾಮೋದಸುಗಂಧಯಃ || ೮ ||

ಗಾಯಂತ್ಯೋ ಮಧುರಾಲಾಪೈರ್ನಂದನೋದ್ಯಾನದೇವತಾಃ |
ತವಾಗಮನಮಾಶಂಕ್ಯ ಪ್ರವೃತ್ತಾಃ ಪರಿನರ್ತಿತುಂ || ೯ ||

ಪ್ರತ್ಯನೀಕಂ ಭಿನತ್ಯಂತಃ ಕುಠಾರೈಃ ಕಠಿನೈರಿಯಂ |
ಸೇನಾಽಗ್ರಾಮ್ಯೇವ ವನಿತಾ ದಯಿತಂ ದೃಷ್ಟಿಚೇಷ್ಟಿತೈಃ || ೧೦ ||

---

೫. ಭೂಮಿಯಲ್ಲಿ ರಣರಂಗದಲ್ಲಿ ತಮ್ಮ ರಕ್ತದಿಂದ ಎಷ್ಟು ಕಣಗಳು ನೆನೆಯುವುವೋ ಅಷ್ಟು ಸಾವಿರ ವರ್ಷಗಳು ವೀರರಿಗೆ ಸ್ವರ್ಗವಾಸ ಲಭಿಸುವುದು.

೬. ಹೆದರಬೇಡಿ; ಇವು ಕತ್ತಿಗಳಲ್ಲ—ವೀರರನ್ನು ನೋಡುತ್ತಿರುವ ರಣಲಕ್ಷ್ಮಿಯ ನೀಲೋತ್ಪಲದಳದ ಕಾಂತಿಯುಳ್ಳ ಕಣ್ಣುಗಳ ವಿಲಾಸವು.

೭. ಶೂರರನ್ನು ಆಲಂಗಿಸುವುದರಲ್ಲಿ ಆಸಕ್ತರಾದ ಅಪ್ಸರಸ್ತ್ರೀಯರ ಡಾಬುಗಳನ್ನು ಸಡಲಿಸುವುದರಲ್ಲಿ ಮನ್ಮಥನು ಉದ್ಯುಕ್ತನಾಗಿರುವನು.

೮. ಚಂಚಲವಾದ ಭುಜಲತೆಯುಳ್ಳ, ಕೆಂದಳಿರಿನಂತೆ ಕೈಗಳುಳ್ಳ, ಹೂವಿನ ಗೊಂಚಲಿನಂತೆ ಮತ್ತವಾದ ಕಣ್ಣುಗಳುಳ್ಳ, ಮಧುವಿನ ಕಂಪಿನಿಂದ ಸುವಾಸನೆಯುಳ್ಳ,

೯. ಮಧುರವಾದ ಸ್ವರಗಳಿಂದ ಹಾಡುತ್ತಲಿರುವ, ನಂದನೋದ್ಯಾನದ ದೇವತೆಗಳು ನಿನ್ನ ಆಗಮನವನ್ನು ನಿರೀಕ್ಷಿಸಿ ನರ್ತಿಸಲು ಉದ್ಯುಕ್ತರಾಗಿರುವರು.

೧೦. ನಗರವಾಸಿಯಾದ ಹೆಂಗುಸು ದೃಷ್ಟಿಚೇಷ್ಟೆಗಳಿಂದ ನಾಯಕನನ್ನು

ಹಾ ಪಿತುರ್ಮಮ ಭಲ್ಲೇನ ಶಿರೋ ಜ್ವಲಿತಕುಂಡಲಂ |
ಸೂರ್ಯಸ್ಯ ನಿಕಟಂ ನೀತಂ ಕಾಲೇನೇವಾಷ್ಟಮೋ ಗ್ರಹಃ || ೧೧ ||

ಆಪಾದಶೃಂಖಲಾಪ್ರೋತ ಭ್ರಮತ್ಸ್ಥೂಲೋಪಲದ್ವಯಂ |
ಭ್ರಾಮಯಂಶ್ಚಿತ್ರದಂಡಾಖ್ಯಂ ಚಕ್ರಮೂರ್ಧ್ವಭುಜೋ ಜವಾತ್ || ೧೨ ||

ಯೋಧೋ ಯಮ ಇವಾಭಾತಿ ಯಾಮ್ಯಾದಾಯಾತಿ ದಿಕ್ತಟಾತ್ |
ಸರ್ವತಃ ಸಂಹರ್ರ ಸೇನಾಮೇಹಿ ಯಾಮೋ ಯಥಾಗತಂ || ೧೩ ||

ಸದ್ಯಶ್ಛಿನ್ನಶಿರಃ ಶ್ವಭ್ರಮಜ್ಜತ್ಕಂಕಕುಲಾಕುಲಾಃ |
ಕಬಂಧಾಃ ಪರಿನೃತ್ಯಂತಿ ತಾಲೋತ್ತಾಲಾ ರಣಾಂಗಣೇ || ೧೪ ||

ಗೀರ್ವಾಣಗಣಗೋಷ್ಠೀಷು ಪ್ರವೃತ್ತಾಃ ಸಂಕಥಾ ಮಿಥಃ |
ಕದಾ ಲೋಕಾಂತರಂ ಧೀರಾಃ ಕಥಂ ಯಾಸ್ಯಂತೀ ಕೇ ಕುತಃ || ೧೫ ||

ಭೇದಿಸುವಂತೆ, ಸೈನ್ಯವು ಕಠಿಣವಾದ ಕುಠಾರಗಳಿಂದ ಶತ್ರು ಸೈನ್ಯವನ್ನು ಸೀಳುತ್ತಿರುವುದು.

೧೧. ಹಾ ! ರಾಹುವನ್ನು ಗ್ರಹಣ ಕಾಲವು ಸೂರ್ಯನ ಹತ್ತಿರಕ್ಕೆ ಒಯ್ಯುವಂತೆ, ಕುಂಡಲದಿಂದ ಹೊಳೆಯುವ ನನ್ನ ತಂದೆಯ ತಲೆಯನ್ನು ಸೂರ್ಯನ ಹತ್ತಿರಕ್ಕೆ ಭಲ್ಲೆಯುವು ಸೇರಿಸಿಬಿಟ್ಟಿತು !

೧೨. ಕಾಲಿನವರೆಗೂ ಸರಪಳಿಯಲ್ಲಿ ಪೋಣಿಸಿ, ಸುತ್ತುತ್ತಿರುವ ಎರಡು ಕಲ್ಲುಗಳುಳ್ಳ, ಚಿತ್ರದಂಡವೆಂಬ ಚಕ್ರವನ್ನು, ತೋಳು ಮೇಲೆತ್ತಿಕೊಂಡು ವೇಗವಾಗಿ ಸುತ್ತುತ್ತಿರುವ,

೧೩. ಯೋಧನು ಯಮನಂತೆ ಕಂಡುಬರುತ್ತಿರುವನು. ಎಲ್ಲ ಕಡೆಗಳಲ್ಲಿಯೂ ಸೇನೆಯನ್ನು ಸಂಹರಿಸುತ್ತ ದಕ್ಷಿಣದಿಕ್ಕಿನಿಂದಲೇ ಇವನು ಬರುತ್ತಿದ್ದಾನೆ. ನಾವು ಬಂದಹಾಗೆಯೇ ಹೊರಟುಹೋಗೋಣ ಬಾ:

೧೪. ಈಗತಾನೆ ಕತ್ತರಿಸಿದ ಕಂಠಸ್ಥಾನಗಳೆಂಬ ಹಳ್ಳಗಳಲ್ಲಿ ಮುಳುಗುತ್ತಿರುವ ಹದ್ದುಗಳಿಂದ ಕೂಡಿ, ತಾಳೆಯುಗಿಡಗಳಂತೆ ಉದ್ದವಾದ ಮುಂಡಗಳು ರಣಭೂಮಿಯಲ್ಲಿ ನರ್ತಿಸುತ್ತಿವೆ.

೧೫. ದೇವತೆಗಳ ಸಮೂಹದಲ್ಲಿ ಈ ರೀತಿಯಾಗಿ ಮಾತುಕತೆಗಳು ನಡೆದುವು—"ಧೀರರಾದವರು ಯಾವಾಗ, ಹೇಗೆ, ಏತಕ್ಕಾಗಿ ಲೋಕಾಂತರಕ್ಕೆ ಹೋಗುವರು ? ಅವರು ಯಾರು ಯಾರು ?"

ನಿಗಿರತ್ಯಾಗತಾಃ ಸೇನಾಃ ಸ್ರವಂತೀರಿವ ಸಾಗರಃ |
ಸಮುತ್ಸ್ಯಮಕರವ್ಯೂಹಾ ಅಹೋ ನು ವಿಷಮೋ ಭಟಃ || ೧೬ ||

ಕಟೇಷು ಕರಿಣಾಂ ಕೀರ್ಣಾ ಧಾರಾನಾರಾಚರಾಜಯಃ |
ಪತಿತಾ ಇವ ಸಂಪೂರ್ಣಾಃ ಶೃಂಗಸಂಘೇಷು ವೃಷ್ಟಯಃ || ೧೭ ||

ಹಾ ಕುಂತೇನ ಶಿರೋ ನೀತಂ ಮಮೇತ್ಯೇವಂ ವಿವಕ್ಷಿತಃ |
ಶಿರಸಾಽಜೀವಮಿತ್ಯೇವಂ ಖೇ ಖಗೇನೇವ ವಾಶಿತಂ || ೧೮ ||

ಯಂತ್ರಪಾಷಾಣವರ್ಷೇಣ ಯೈಷಾಸ್ಮಾನ್ಪರಿಷಿಂಚತಿ |
ಸೇನಾನುಶೃಂಖಲಾಜಾಲವಲನಾ ಕ್ರಿಯತಾಂ ಬಲಾತ್ || ೧೯ ||

ವಲೀಪಲಿತನಿರ್ಮುಕ್ತಂ ಪೂರ್ವಭಾರ್ಯಾಪ್ಸರಾಃ ಸತೀ |
ಅಂಗೀಕರೋತಿ ಭರ್ತಾರಂ ಪರಿಜ್ಞಾಯ ರಣೇ ಹತಂ || ೨೦ ||

---

೧೬. ಮತ್ಸ್ಯ, ಮಕರವ್ಯೂಹಗಳಿಂದ ಕೂಡಿ ಬರುವ ಸೈನ್ಯಗಳನ್ನೆಲ್ಲ—ಸಮುದ್ರವು ನದಿಗಳನ್ನು ಸೇರಿಸಿಕೊಳ್ಳುವಂತೆ—ಇವನು ನುಂಗುತ್ತಿರುವನಲ್ಲ ! ಆಹೋ ! ಇವನು ಕ್ರೂರನಾದ ಭಟನು !

೧೭. ಆನೆಗಳ ಗಂಡಸ್ಥಳಗಳಲ್ಲಿ ತುಂಬಿರುವ ಬಾಣಸಮೂಹಗಳ ವೃಷ್ಟಿಯು ಗಿರಿಶಿಖರ ಸಮೂಹಗಳಲ್ಲಿ ಬಿದ್ದಿರುವ ಸಂಪೂರ್ಣವಾದ ಜಲವೃಷ್ಟಿಯಂತೆ ಕಾಣಿಸುತ್ತಿರುವುದು.

೧೮. ಹಾ ! ನನ್ನ ತಲೆ ಕುಂತಾಯುಧದಿಂದ ಕತ್ತರಿಸಿ ಹೋಯಿತು ಎಂದು ಕೂಗಿಕೊಳ್ಳುವಷ್ಟರಲ್ಲಿಯೇ ಆ ತಲೆಯು ಹಕ್ಕಿಯ ಹಾಗೆ ಮೇಲಕ್ಕೆ ಹಾರಿ, ಸ್ವರ್ಗಲೋಕದ ಸುಖವನ್ನು ಕಂಡು, ಬದುಕಿದೆನು ಎಂದು ಕೂಗಿತು.

೧೯. ನಮ್ಮ ಮೇಲೆ ಕವಣೆ ಕಲ್ಲುಗಳನ್ನು ಮಳೆಗರೆಯುವಂತೆ ಎರಚುತ್ತಿರುವ ಈ ಸೈನ್ಯವನ್ನು ಬಲಾತ್ಕಾರದಿಂದ ಸರಪಳಿಯಿಂದ ಕಟ್ಟಿಹಾಕಬೇಕು.

೨೦. ವೀರನೊಬ್ಬನ ಪೂರ್ವ ಪತ್ನಿಯು ಈ ಮೊದಲೇ ಮೃತಳಾಗಿ ಅಪ್ಸರಸ್ತ್ರೀಯಾಗಿದ್ದು ಯುದ್ಧದಲ್ಲಿ ಸತ್ತು ವೀರ ಸ್ವರ್ಗ ಪಡೆದಿರುವ, ಮುದಿತನದ ನೆರೆ, ಸುಕ್ಕುಗಳು ಬಿಟ್ಟು ಹೋದ ತನ್ನ ಗಂಡನನ್ನು ಅಂಗೀಕರಿಸುತ್ತಿರುವಳು.

ಆದಿವಂ ರಚಿತಾಕಾರಾಃ ಕುಂತಕಾನನಕಾಂತಯಃ |
ವೀರಾಣಾಂ ಸ್ವರ್ಗಮಾರೋಢುಮಿವ ಸೋಪಾನಪಂಕ್ತಯಃ || ೨೧ ||

ಕಾಂತಕಾಂಚನಕಾಂತಾಂಗೇ ಭಟಸ್ಯೋರಸಿ ಕಾಮಿನೀ |
ದೃಷ್ಟ್ವಾ ದೇವಪುರಂಧ್ರೀಯಂ ಭರ್ತುರನ್ವೇಷಣಾನ್ವಿತಾ || ೨೨ ||

ಹಾ ಹತಂ ಸೈನ್ಯಮಸ್ಮಾಕಂ ಭಟೈರುದ್ಧತಮುಷ್ಟಿಭಿಃ |
ಮಹಾಪ್ರಳಯಕಲ್ಲೋಲೈಃ ಸುರಶೈಲಸ್ಥಲಂ ಯಥಾ || ೨೩ ||

ಯುಧ್ಯಧ್ವಮಗ್ರತೋ ಮೂಢಾ ನಯತಾರ್ಧಮೃತಾನ್ನರಾ |
ನಿಜಾನ್ಪಾದಪ್ರಹಾರೇಣ ಮೈತಾನ್ಮಾರಯತಾಧಮಾಃ || ೨೪ ||

ಧಮ್ಮಿಲ್ಲವಲನಾವ್ಯಗ್ರೇ ಘನೋತ್ಕಂಠೇಽಪ್ಸರೋಗಣೇ |
ಭಟೋ ದಿವ್ಯಶರೀರೇಣ ಪಾರ್ಶ್ವಪ್ರಾಪ್ತೋ ನಿರೀಕ್ಷ್ಯತಾಂ || ೨೫ ||

---

೨೧. ಸ್ವರ್ಗದವರೆಗೂ ರಚಿತವಾಗಿರುವ ಕುಂತವನಗಳ ಕಾಂತಿಗಳು ವೀರರು ಸ್ವರ್ಗವನ್ನು ಹತ್ತಲು ಮಾಡಿರುವ ಮೆಟ್ಟಿಲ ಸಾಲೋ ಎಂಬಂತೆ ಕಾಣಿಸುತ್ತಿವೆ.

೨೨. ಈಗ ತಾನೇ ನಾವು ನೋಡಿದ, ಕಾಂತಿಯುಕ್ತಗಳಾದ, ಚಿನ್ನದಿಂದ ಮನೋಹರವಾದ ಅಂಗಗಳನ್ನುಳ್ಳ ಶೂರನಾದ ಗಂಡನ ಎದೆಯ ಮೇಲೆ ಬಿದ್ದು ಮೃತಳಾದ ಹೆಂಗುಸು, ಆಗಲೇ ದೇವಸ್ತ್ರೀಯಾಗಿ ಜನಿಸಿ, ತನ್ನ ಗಂಡನನ್ನು ಹುಡುಕುತ್ತಿರುವಳು.

೨೩. (ಇಲ್ಲಿ ರಣಭೂಮಿಯಲ್ಲಿ)—ಅಯ್ಯೋ ! ಪ್ರಳಯ ಕಾಲದ ಅಲೆಗಳು ಮೇರು ಪರ್ವತ ಪ್ರದೇಶವನ್ನು ಹೊಡೆಯುವಂತೆ, ಗಟ್ಟಿಯಾಗಿ ಮುಷ್ಟಿಗಳಿಂದ ಭಟರು ನಮ್ಮ ಸೇನೆಯನ್ನು ಹೊಡೆದುಬಿಟ್ಟರು.

೨೪. ಮೂಢರೇ, ಮುಂದೆ ಹೋಗಿ ಯುದ್ಧ ಮಾಡಿ. ಅರ್ಧ ಸತ್ತಿರುವ ಮನುಷ್ಯರನ್ನು ತೆಗೆದುಕೊಂಡು ಹೋಗಿ. ಅಧಮರೇ ! ಇವರನ್ನೂ ತುಳಿದು ಕೊಂದುಹಾಕಿಬಿಡಬೇಡಿ.

೨೫. (ದೇವತೆಗಳು):—ಇಲ್ಲಿ ನೋಡು ಯುದ್ಧದಲ್ಲಿ ವೀರಸ್ವರ್ಗಪಡೆದು ದಿವ್ಯ ಶರೀರ ಹೊಂದಿರುವ ಭಟನು, ತಲೆಗಂಟು ಹಾಕಿಕೊಳ್ಳುತ್ತಾ ಉತ್ಕಂಠರಾಗಿರುವ ಅಪ್ಸರಸ್ತ್ರೀಯರ ಸಮೂಹದ ನಡುವೆ ನಿಂತಿದ್ದಾನೆ.

ಫುಲ್ಲಹೇಮಾರವಿಂದಾಸುಚ್ಛಾಯಾಶೀತಜಲಾನಿಲೈಃ |
ಸ್ವರ್ಗನದ್ಯಾಸ್ತಟೇಷ್ವೇನಂ ದೂರಾಯಾತಂ ವಿನೋದಯ || ೨೬ ||

ವಿವಿಧಾಯುಧಸಂಘಟ್ಟಖಂಡಿತೋಗ್ರಾಸ್ಥಿಕೋಟಯಃ |
ಖೇ ಕವಂತ್ಯಃ ಕಣತ್ಕಾರೈಃ ಪ್ರಸೃತಾಸ್ತಾರಕಾ ಇವ || ೨೭ ||

ವ್ಯೋಮ್ನಿ ಜೀವನದೀವಾಹೇ ವಹತ್ಸಾಯಕವಾರಿಣಿ |
ಚಕ್ರಾವರ್ತಿನಿ ಗಚ್ಛಂತಿ ಗಿರಯೋಽಪ್ಯಣುಪಂಕತಾಂ || ೨೮ ||

ಭ್ರಮದ್ಭಿಃ ಗ್ರಹಮಾರ್ಗೇಷು ಶಿರೋಭಿರ್ವೀರಭೂಭೃತಾಂ |
ಆಯುಧಾಂಶುಲತಾನಾಲಲಗ್ನಾಸಿದಲಕಂಟಕೈಃ || ೨೯ ||

ಕೇತುಪಟ್ಟಮೃಣಾಲಾಂಗದಲೈರ್ಲಬ್ಧಶಿಲೀಮುಖೈಃ |
ವಹದ್ವಾತಚಲತ್ಪದ್ಮಂ ನಭಃ ಪದ್ಮಸರಃ ಕೃತಃ || ೩೦ ||

---

೨೬. ಅರಳಿರುವ ಹೊಂದಾವರೆಗಳನ್ನುಳ್ಳ ದೇವನದಿಯ ದಡಗಳಲ್ಲಿ. ದೂರದಿಂದ ದಣಿದು ಬಂದಿರುವ ಇವನ ಆಯಾಸವನ್ನು ನೆರಳು ಬಿದ್ದು ತಣ್ಣಗಿರುವ ನೀರಿನ ಮೇಲೆ ಬೀಸುವ ಗಾಳಿಯಿಂದ ಪರಿಹರಿಸು.

೨೭. ವಿಧವಿಧವಾದ ಆಯುಧಗಳ ಏಟನಿಂದ ಕತ್ತರಿಸಿ ಹೋದ ಮೂಳೆಗಳ ತುದಿಗಳು, ಕಣ ಕಣ ಶಬ್ದ ಮಾಡುತ್ತ, ನಕ್ಷತ್ರಗಳಂತೆ ಆಕಾಶದಲ್ಲೆಲ್ಲ ಹರಡಿರುವುವು.

೨೮ ಬಾಣಗಳೆಂಬ ನೀರೂ ಚಕ್ರಗಳೆಂಬ ಸುಳಿಗಳೂ ಇರುವ ಜೀವಗಳೆಂಬ ನದಿಗಳಿಗೆ ಪ್ರವಾಹದಂತಿರುವ ಆಕಾಶದಲ್ಲಿ, ಪರ್ವತಗಳೂ ಕೊಂಚ ಕೆಸರಿನಂತೆ ಆಗಿವೆ.

೨೯–೩೦. ಆಯುಧ ಕಾಂತಿಯೆಂಬ ಲತಾನಾಲಗಳಲ್ಲಿ ಸಿಕ್ಕಿಕೊಂಡಿರುವ ಕತ್ತಿಯ ಅಲಗೆಂಬ ಮುಳ್ಳುಗಳಿರುವ, ಧ್ವಜಪಟ್ಟಗಳೆಂಬ ದಂಟುಗಳುಳ್ಳ, ಬಾಣಗಳೆಂಬ ದುಂಬಿಗಳು ಮುತ್ತಿರುವ ರಾಜವೀರರ ಶಿರಸ್ಸುಗಳು ಗ್ರಹಮಾರ್ಗದಲ್ಲಿ ತಿರುಗುತ್ತ, ಗಾಳಿ ಬೀಸಿದಾಗ ಚಲಿಸುವ ಪದ್ಮಗಳಂತೆ ಕಾಣುತ್ತ, ಆಕಾಶವನ್ನು ಕಮಲ ಸರೋವರವನ್ನು ಮಾಡಿರುವುವು.

ಮೃತಮಾತಂಗಸಂಘಾತೇ ಗಿರಾವಿವ ಪಿಪೀಲಿಕಾಃ |
ಭೀರವಃ ಪರಿಲೀಯಂತೇ ಸ್ತ್ರಿಯಃ ಪುಂವಕ್ಷಸೀವ ಚ || ೩೧ ||

ಅಪೂರ್ವೋತ್ತಮಸೌಂದರ್ಯಕಾಂತಸಂಗಮಶಂಸಿನಃ |
ವಾಂತಿ ವಿದ್ಯಾಧರಸ್ತ್ರೀಣಾಮಲಕೋಲ್ಲಾಸಿನೋಽನಿಲಾಃ || ೩೨ ||

ಛತ್ರೇಷೂಡ್ಡೀಯಮಾನೇಷು ಸ್ಥಿತೇಷು ವ್ಯೋಮ್ನಿ ಚಂದ್ರತಾ |
ಇಂದುನೇವ ಯಶೋಮೂರ್ತ್ಯಾ ಕೃತಾ ಶುಭ್ರಾತಪತ್ರತಾ || ೩೩ ||

ಭಟೋ ಮರಣಮೂರ್ಚ್ಛಾಂತೇ ನಿಮೇಷೇಣಾಮರಂ ವಪುಃ |
ಸ್ವಕರ್ಮಶಿಲ್ಪಿರಚಿತಂ ಪ್ರಾಪ್ತಃ ಸ್ವಪ್ನಪುರಂ ಯಥಾ || ೩೪ ||

ಶೂಲಶಕ್ತ್ಯೃಷ್ಟಿಚಕ್ರಾಣಾಂ ವೃಷ್ಟಯೋ ಮುಕ್ತತುಷ್ಟಯಃ |
ವ್ಯೋಮಾಬ್ಧೌ ಮತ್ಸ್ಯಮಕರಸಂಕುಲಾವಯವಾಃ ಸ್ಥಿತಾಃ || ೩೫ ||

---

೩೧. ಬೆಟ್ಟದಲ್ಲಿ ಇರುವೆಗಳೂ ಪುರುಷರ ವಕ್ಷದಲ್ಲಿ ಹೆಂಗುಸರೂ ಅಡಗುವಂತೆ, ಸತ್ತ ಆನೆಗಳ ಗುಂಪಿನಲ್ಲಿ ಹೆದರಿದವರು ಅಡಗುತ್ತಿರುವರು.

೩೨. ವಿದ್ಯಾಧರ ಸ್ತ್ರೀಯರ ಮುಂಗುರುಳುಗಳನ್ನು ಅಲುಗಿಸುವ ಹೂಗಾಳಿಗಳು ಅಪೂರ್ವವಾದ ಉತ್ತಮ ಸೌಂದರ್ಯದಿಂದ ಕೂಡಿದ ಕಾಂತನೊಡನೆ ಸೇರುವಿರೆಂದು ಹೇಳುತ್ತ ಬೀಸುತ್ತಿವೆ.

೩೩. ಛತ್ರಗಳು ಮೇಲಕ್ಕೆ ಹಾರಿಹೋಗಿರುವುದರಿಂದ, ಆಕಾಶದಲ್ಲಿ ಚಂದ್ರನನ್ನು ಮಾಡಿದಂತೆಯೂ ಯಶೋಮೂರ್ತಿಯಾದ ಚಂದ್ರನು ಬೆಳುಗೊಡೆಯನ್ನು ಮಾಡಿದಂತೆಯೂ ತೋರುತ್ತಿವೆ.

೩೪. ಭಟನು ಮರಣವೆಂಬ ಮೂರ್ಛೆಯಿಂದ ಎದ್ದಬಳಿಕ, ಕನಸಿನಲ್ಲಿ ಒಂದು ಊರಿನಿಂದ ಮತ್ತೊಂದು ಊರಿಗೆ ಹೋದಂತೆ, ತನ್ನ ಕರ್ಮವೆಂಬ ಶಿಲ್ಪಿಯಿಂದ ರಚಿತವಾದ ದೇವಶರೀರವನ್ನು ಕ್ಷಣಮಾತ್ರದಲ್ಲಿ ಹೊಂದಿದನು.

೩೫. ಶೂಲ, ಋಷ್ಟಿ, ಶಕ್ತಿ, ಚಕ್ರ ಮೊದಲಾದ ಆಯುಧಗಳು ಮಳೆಗರೆಯುವಿಕೆಯಿಂದ ತುಷ್ಟಿಯಿಲ್ಲದವುಗಳಂತೆ, ಆಕಾಶವೆಂಬ ಸಮುದ್ರದಲ್ಲಿ ಮೀನು ಮೊಸಳೆ ಮೊದಲಾದ ರೂಪಧರಿಸಿದಂತಿರುವುವು.

ಶರೋತ಼್ೃತ್ತಸಿತಚ್ಛತ್ರ ಕಲಹಂಸೈರ್ನಭಃಸ್ಥಲಂ |
ಭಾತಿ ಸಂಚಿತಪೂರ್ಣೇಂದುಬಿಂಬಲಕ್ಷೈರಿವಾವೃತಂ || ೩೬ ||

ಕ್ರಿಯತೇ ಗಗನೋಡ್ಡೀನೈಶ್ಚಾಮರೈಶ್ಚಾರುಘರ್ಘರೈಃ |
ವಾತಾವಧೂತಸಂರೋಧತರಂಗನಿಕರದ್ಯುತಿಃ || ೩೭ ||

ದೃಶ್ಯಂತೇ ಹೇತಿದಲಿತಾಶ್ಛತ್ರಚಾಮರಕೇತವಃ |
ಆಕಾಶಕ್ಷೇತ್ರವಿಕ್ಷಿಪ್ತಾ ಯಶಃಶಾಲಿಲತಾ ಇವ || ೩೮ ||

ವಹದ್ಭಿರ್ವ್ಯೋಮ್ನಿ ಸಕ್ಷೇಮ ಪಶ್ಯ ನೀತಾ ಕ್ಷಯಂ ಶರೈಃ |
ಶಕ್ತಿವೃಷ್ಟಿರುಪಾಯಾಂತೀ ಸಸ್ಯಶ್ರೀಃ ಶಲಭೈರಿವ || ೩೯ ||

ಏಷಾ ಪ್ರಸೃತದೋರ್ದಂಡ ಭಟಖಡ್ಗಚ್ಛಟಾತ್ಕೃತಿಃ |
ಕಠಿನಾತ್ಕಂಕಟಾಜ್ಜಾತಾ ಮೃತ್ಯೋರೇವೋಗ್ರಹುಂಕೃತಿಃ || ೪೦ ||

---

೩೬. ಬಾಣಗಳಿಂದ ಕತ್ತರಿಸಿಹೋದ ಬೆಳುಗೊಡೆಗಳೆಂಬ ಕಲಹಂಸಗಳಿಂದ ತುಂಬಿದ ಆಕಾಶವು, ಬಹಳ ಕಾಲದಿಂದ ಕೂಡಿಟ್ಟಿರುವ ಲೆಕ್ಕವಿಲ್ಲದಷ್ಟು ಪೂರ್ಣ ಚಂದ್ರ ಬಿಂಬಗಳಿಂದ ತುಂಬಿದಂತೆ ಕಾಣುವುದು.

೩೭. ಆಕಾಶದಲ್ಲಿ ಹಾರಿಹೋಗಿ, ಘರ್ಘರ ಧ್ವನಿಮಾಡುತ್ತಿರುವ ಚಾಮರಗಳು, ಗಾಳಿಯಿಂದ ತಡೆಬಿಟ್ಟುಹೋದ ಅಲೆಗಳ ಗುಂಪುಗಳ ಹೊಳಪನ್ನು ಪಡೆದಿರುವುವು.

೩೮. ಆಯುಧಗಳಿಂದ ಕತ್ತರಿಸಿಹೋದ ಛತ್ರಛಾಮರ ಧ್ವಜಗಳು ಆಕಾಶವೆಂಬ ಗದ್ದೆಯಲ್ಲಿ ನಾಟಿಹಾಕಿರುವ ಕೀರ್ತಿಯೆಂಬ ಬತ್ತದ ಮೊಳಕೆಗಳಂತೆ ಕಾಣಿಸುವುವು.

೩೯. ಬೆಳೆಯುತ್ತಿರುವ ಪೈರನ್ನು ಮಿಡಿತೆಗಳು ನಾಶಪಡಿಸುವಂತೆ, ಆಕಾಶದಲ್ಲಿ ಬರುತ್ತಿರುವ ಶಕ್ತ್ಯಾಯುಧಗಳ ಸಮೂಹಗಳನ್ನು ಹಾರುತ್ತಿರುವ ಬಾಣಗಳು ನಾಶಪಡಿಸಿದುವು.

೪೦. ಕಠಿಣವಾದ ಕವಚಗಳ ಮೇಲೆ, ಭಟರ ಬಾಹುದಂಡಗಳಲ್ಲಿರುವ ಖಡ್ಗಗಳು ತಗುಲಿ ಉಂಟಾಗುತ್ತಿರುವ ಛಟಾತ್ಕಾರ ಧ್ವನಿಯು ಮೃತ್ಯುವಿನ ಉಗ್ರವಾದ ಹುಂಕೃತಿಯಂತಿರುವುದು.

ಹೇತಿಕಲ್ಪಾನಿಲಕ್ಷುಣ್ಣಾ ದಂತನಿರ್ಜರವಾರಯಃ |
ಜನತಾಕ್ಷಯಕಾಲೇಽಸ್ಮಿನ್ ಭಗ್ನಾ ನಾಗಾ ನಗಾ ಇವ || ೪೧ ||

ಸಚಕ್ರನಾಥಸೂತಾಶ್ವಂ ವ್ಯೂಢಂ ರಕ್ತಮಹಾಹ್ರದೇ |
ಹಾಹಾಭಿಭೂತಗತಿಕಂ ಚೇಷ್ಟತೇ ರಥಪತ್ತನಂ || ೪೨ ||

ಕರಕಂಕಟಕುಟ್ಯಂಕ ಖಡ್ಗಸಂಘಟ್ಟಟಾಂಕೃತೈಃ |
ಕಾಲರಾತ್ರ್ಯಾ ಪ್ರನೃತ್ಯಂತ್ಯಾ ರಣವೀಣೇವ ವಾದ್ಯತೇ || ೪೩ ||

ನರೇಭಖರವಾಜಿಭ್ಯೋ ಯೇ ಚ್ಯುತಾ ರಕ್ತನಿರ್ಝರಾಃ |
ಪಶ್ಯ ತದ್ಬಿಂದುಸಿಕ್ತೇನ ವಾಯುನಾರುಣಿತಾ ದಿಶಃ || ೪೪ ||

---

೪೧. ಸೈನ್ಯದಲ್ಲಿರುವ ಆನೆಗಳು ಪ್ರಳಯಕಾಲದ ಪರ್ವತಗಳಂತೆ, ಆಯುಧಗಳೆಂಬ ಪ್ರಳಯಾಗ್ನಿಯಿಂದ ಪುಡಿ ಪುಡಿಯಾಗಿ, ಕೊಂಬುಗಳೆಂಬ ಝುರಿಗಳಿಂದ ಕೂಡಿ, ಜನರನ್ನು ನಾಶಮಾಡುವ ಈ ಯುದ್ಧವೆಂಬ ಪ್ರಳಯ ಸಮಯದಲ್ಲಿ ಮುರಿದು ಬೀಳುತ್ತಿವೆ.

೪೨. ಪಟ್ಟಣದಂತೆ ವಿಶಾಲವಾಗಿರುವ ರಥವು, ಚಕ್ರಸ್ವಾಮಿ, ಸಾರಥಿ, ಕುದುರೆ ಇವೆಲ್ಲ ಇದ್ದರೂ ನೆತ್ತರ ಮಡುವಿನಲ್ಲಿ ಕೊಚ್ಚಿಕೊಂಡು ಹೋಗುತ್ತ, ನಡುವೆ ಕೊಂಚ ಗಾಲಿಯು ಹೂತುಕೊಂಡು ಮುಂದೆ ಹೋಗಲು ಸಾಧ್ಯವಿಲ್ಲದೆ ಅಲ್ಲಿಯೇ ಒದ್ದಾಡುತ್ತಿರುವುದು ಹಾ ! ಹಾ !

೪೩. ಮೃತರಾದವರ ಕೈಗಳೂ ಕವಚಗಳೂ ಬಿದ್ದಿವೆ. ಅಕಸ್ಮಾತ್ತಾಗಿ ಖಡ್ಗಗಳಿಗೂ ಕವಚಗಳಿಗೂ ಸೇರಿ, ಶಬ್ದವಾದಾಗ ವೀಣೆಯ ತಂತಿಯನ್ನು ನುಡಿಸಿದಂತೆ ಧ್ವನಿಯುಂಟಾಗುವುದು—ಅದನ್ನು ಕೇಳಿದರೆ, ಯುದ್ಧರಂಗದಲ್ಲಿ ಕುಣಿಯುತ್ತಿರುವ ಕಾಳರಾತ್ರಿಯು ರಣವೀಣೆಯನ್ನು ಬಾರಿಸುತ್ತಿರುವಳೆಂಬಂತೆ ತೋರುವುದು.

೪೪. ಮನುಷ್ಯರು, ಆನೆಗಳು, ಕತ್ತೆಗಳು, ಕುದುರೆಗಳು ಇವುಗಳಿಂದ ಹೊರಟಿರುವ ನೆತ್ತರ ತೊರೆಗಳ ಹನಿಗಳಿಂದ ತುಂಬಿದ ಗಾಳಿಯು ದಿಕ್ಕುಗಳನ್ನೆಲ್ಲ ಕೆಂಪಗೆಮಾಡಿರುವುದು.

ಶಸ್ತ್ರಾಂಶುಜಲದೇ ವ್ಯೋಮ್ನಿ ಕಾಲೀಚಿಕುರಮೇಚಕೇ |
ಶರಕೋರಕಭಾರಸ್ರಗ್ಮೇಘೇ ವಿದ್ಯುದಿವೋದಿತಾ || ೪೫ ||

ಅನಂತರಕ್ತಸಂಸಕ್ತಸನ್ನಾವನಿತಲಾಯುಧೈಃ |
ಭುವನಂ ಭಾತ್ಯಭಿಜ್ವಾಲಮಗ್ನಿಲೋಕ ಇವಾಕುಲಂ || ೪೬ ||

ಭುಶುಂಡೀಶಕ್ತಿಶೂಲಾಸಿಮುಸಲಪ್ರಾಸವೃಷ್ಟಯಃ |
ಅನ್ಯೋನ್ಯಚ್ಛೇದಭೇದಾಭ್ಯಾಂ ಕರಪ್ರಕರತೋಽಪತನ್ || ೪೭ ||

ಅಕ್ಷೋಭ್ಯೈಕಪ್ರಹರಣಾದ್ಯಾತುಧಾನ್ಯೋನ್ಯಚೇಷ್ಟಿತಂ |
ಸಂರಂಭಾವೇಕ್ಷಣಪ್ರಜ್ಞಂ ರಣಂ ಸ್ವಪ್ನಮಿವ ಸ್ಥಿತಂ || ೪೮ ||

ಅನನ್ಯಶಬ್ದಾವಿರತ ಹತಾಹತಿರಣಜ್ಝಣೈಃ |
ಗಾಯತೀವ ಕ್ಷತಕ್ಷೋಭ ಮುದಿತೋ ರಣಭೈರವಃ || ೪೯ ||

---

೪೫. ಶಸ್ತ್ರಕಾಂತಿಗಳೆಂಬ ಮೋಡಗಳೊಡನೆ ಸೇರಿಕೊಂಡಿರುವುದರಿಂದ ಕಾಳಿಯ ಕೂದಲಿನಂತೆ ಕಪ್ಪಾಗಿರುವ ಆಕಾಶದಲ್ಲಿ ಮೇಘದಲ್ಲಿ ಮಿಂಚು ಹೊಳೆದಂತೆ ಬಾಣಗಳೆಂಬ ಮೊಗ್ಗುಗಳಿಂದ ರಚಿತವಾದ ಮಾಲೆಯು ಪ್ರಕಾಶಿಸುತ್ತಿದೆ.

೪೬. ಲೆಕ್ಕವಿಲ್ಲದಷ್ಟು ನೆತ್ತರಿಂದ ಕೂಡಿದ ಭೂಮಿಗಳಿಂದಲೂ ಮುರಿದು ಬಿದ್ದಿರುವ ಆಯುಧಗಳಿಂದಲೂ, ಲೋಕವು ಸುತ್ತಲೂ ಜ್ವಾಲೆಯಿಂದ ತುಂಬಿದಂತೆ ಕಾಣುತ್ತ ಅಗ್ನಿಲೋಕದಂತೆ ಕಾಣಿಸುತ್ತಿರುವುದು.

೪೭. ಭುಶಂಡಿ, ಶಕ್ತಿ, ಶೂಲ, ಖಡ್ಗ, ಮುಸಲ, ಪ್ರಾಸ ಮೊದಲಾದ ಆಯುಧಗಳ ಮಳೆಗರೆಯುವಿಕೆಗಳು ಒಂದನ್ನೊಂದು ಕತ್ತರಿಸುವುದರಿಂದಲೂ, ಸೀಳುವುದರಿಂದಲೂ ಸೈನಿಕರ ಕೈಗಳಿಂದ ಕೆಳಗೆ ಬೀಳುತ್ತಿವೆ.

೪೮. ಅನೇಕರು ನಿಶ್ಚೇಷ್ಟರಾಗಿ ಬಿದ್ದಿರಲು ಒಬ್ಬನು ಮಾತ್ರ ಎದ್ದು ಯುದ್ಧ ಮಾಡುತ್ತಿರುವುದನ್ನು ನೋಡಿದರೆ ರಾಕ್ಷಸನಾಯೆಯೊ ಎಂಬಂತಿರುವುದು. ರಣವು ಕೋಪಾಟೋಪದಿಂದ ನಡೆಯುತ್ತಿದ್ದರೂ (ತನ್ನಿಚ್ಛೆಯಂತೆ ನಡೆಯದೆ ಇರುವುದರಿಂದ) ಸ್ವಪ್ನದಂತೆ ಇರುವುದು.

೪೯. ಬೇರೊಂದು ಶಬ್ದವೂ ಕೇಳಿಸದಂತೆ ಒಂದೇ ಸಮನಾಗಿ ಒಬ್ಬರಿಗೊಬ್ಬರ ಹೊಡೆದಾಟದಿಂದ ಉಂಟಾದ ಝಣಝಣ ಧ್ವನಿಯನ್ನು ಕೇಳಿದರೆ,

ಅನ್ಯೋನ್ಯರಣಹೇತ್ಯುಗ್ರ ಚೂರ್ಣಪೂರ್ಣೋ ರಣಾರ್ಣವಃ |
ವಾಲುಕಾಮಯ ಏವಾಭೂಚ್ಛಿನ್ನಚ್ಛತ್ರತರಂಗಕಃ || ೫೦ ||

ಸರಭಸರಸವದ್ವಿಸಾರಿ ತೂರ್ಯ-
ಪ್ರತಿರವಪೂರಿತ ಲೋಕಪಾಲಲೋಕಃ |
ರಣಗಿರಿರಯಮುಗ್ರಪಕ್ಷದಕ್ಷ-
ಪ್ರತಿಸೃತಿವೃತ್ತ ಇವಾಂಬರೇ ಯುಗಾಂತೇ || ೫೧ ||

ಹಾಹಾ ಧಿಕ್ಕ್ರುವಿಕಟಕಂಕಟಾನನೋದ್ಯತ್
ಪ್ರೋಡ್ಡೀನ ಪ್ರಕಟ ತಡಿಚ್ಛಟಾಪ್ರತಪ್ತಾಃ |
ಕ್ರೇಂಕಾರಸ್ಫುರಿತಗುಣೇರಿತಾ ರಣಂತೋ
ನಾರಾಚಾಃ ಶಿಖರಿಶಿಲಾಗಣಂ ವಹಂತಿ || ೫೨ ||

ಏಟುತಿಂದು ಬಿದ್ದಿರುವವರ ಸಂಕಟವನ್ನು ನೋಡಿ ಅನಂದಿಸುತ್ತಿರುವ ರಣ ಭೈರವನು ಹಾಡುತ್ತಿರುವಂತೆ ತೋರುತ್ತಿರುವುದು.

೫೦. ರಣಭೂಮಿಯೆಂಬ ಸಮುದ್ರವು ಒಬ್ಬರಿಗೊಬ್ಬರು ಪ್ರಯೋಗಿಸುತ್ತಿರುವ ಆಯುಧಗಳ ಚೂರ್ಣಗಳಿಂದ ತುಂಬಿ, ಮರಳಿನಿಂದ ತುಂಬಿದಂತೆಯೇ ಕಾಣುತ್ತಿರುವುದು. ಮುರಿದುಹೋದ ಛತ್ರಗಳು ಅಲೆಗಳಂತೆ ಕಾಣುತ್ತಿರುವುವು.

೫೧ ವೇಗವಾಗಿ, ಮಧುರವಾಗಿ ಹರಡುತ್ತಿರುವ ತೂರ್ಯ ವಾದ್ಯಗಳ ಪ್ರತಿಧ್ವನಿಯಿಂದ ಲೋಕಪಾಲರ ಲೋಕವನ್ನೆಲ್ಲ ತುಂಬಿರುವ ಈ ರಣಗಿರಿಯು ಪ್ರಳಯಕಾಲದಲ್ಲಿ ಅತ್ಯುಗ್ರವಾದ ರೆಕ್ಕೆಗಳಿಂದ ಆಕಾಶದಲ್ಲಿ ಹಾರಲು ಪ್ರಯತ್ನಿಸಿದಂತೆ ತೋರುತ್ತಿರುವುದು.

೫೨. ಹಾಹಾ ! ಧಿಕ್ ! ಕ್ರೇಂಕಾರಧ್ವನಿಯಿಂದ ಕೂಡಿ ಬಿಲ್ಲಿನ ಹೆದೆಯಿಂದ ಹೊರಡುತ್ತಿರುವ ಬಾಣಗಳು, ವಿಶಾಲವಾದ ಕವಚಗಳನ್ನು ಭೇದಿಸಲಾರದೆ, ಅವುಗಳಲ್ಲಿ ಹುಟ್ಟಿದ ವಿದ್ಯುತ್ತಿನಂತಿರುವ ಅಗ್ನಿಜ್ವಾಲೆಯಿಂದ ತಪ್ತವಾಗಿ, ಅಲ್ಲಿಂದ ಪರ್ವತಗಳಮೇಲೆ ಹೊಡೆದು ಕಲ್ಲುಗಳ ರಾಶಿಯನ್ನೇ ಹೊತ್ತುಕೊಂಡು ಹೋಗುತ್ತಿರುವುವು.

ಭಿನ್ನೇಚ್ಛಾಚ್ಛಮಿತಿ ನ ಯಾವದಂಗಭಂಗಂ
ಕುರ್ವಂತೋ ಜ್ವಲದನಲೋಜ್ಜ್ವಲಾಃ ಪೃಷತ್ಕಾಃ |
ತಾವದ್ದ್ರಾಗ್ದ್ರುತಮಿತ ಏಹಿ ಮಿತ್ರ ಯಾಮೋ
ಯಾಮೋಽಯಂ ಪ್ರವಹತಿ ವಾಸರಶ್ಚತುರ್ಥಃ ‖ ೫೩ ‖

ಇತ್ಯಾರ್ಷೇ ಶ್ರೀ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
"ರಣಪ್ರೇಕ್ಷಕಜನೋಕ್ತಿವರ್ಣನಂ" ನಾಮ ಚತುಸ್ತ್ರಿಂಶಃ ಸರ್ಗಃ

---

೫೮. "ಎಲೈ ಮಿತ್ರನೇ! ಉಜ್ವಲವಾದ ಬೆಂಕಿಯಂತೆ ಪ್ರಕಾಶಿಸುತ್ತಿರುವ ಬಾಣಗಳು ನಮ್ಮ ಅಂಗಭಂಗಮಾಡುವಷ್ಟರಲ್ಲಿ ಈ ಕಡೆ ಬೇಗ ಬಂದುಬಿಡು— ಹಗಲಿನ ನಾಲ್ಕನೆಯ ಯಾಮವೂ ಕಳೆಯುತ್ತ ಬಂದಿತು." ಎಂದು ಆ ಯುದ್ಧವನ್ನು ನೋಡುತ್ತಿದ್ದವರೆಲ್ಲರೂ ಮಾತನಾಡುತ್ತಿದ್ದರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಸ್ಠರಾಮಾಯಣದ
ಉತ್ಪತ್ತಿ ಪ್ರಕರಣವಲ್ಲಿ "ರಣಪ್ರೇಕ್ಷಕಜನೋಕ್ತಿ ವರ್ಣನ"
ಎಂಬ ಮೂವತ್ತನಾಲ್ಕನೆಯ ಸರ್ಗವು.

ಪಂಚತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಅಥ ಪ್ರೋಡ್ಡಯನೋದ್ಯುಕ್ತ ತುರಂಗಮತರಂಗಕಃ |
ಉತ್ತಾಂಡವ ಇವೋನ್ಮತ್ತೋ ಬಭೂವ ಸ ರಣಾರ್ಣವಃ ||೧||

ಛತ್ರಡಿಂಡೀರವಿಶ್ರಾಂತ ಸಿತೇಷುಶಫರೋತ್ಕರಃ |
ಅಶ್ವಸೈನ್ಯೋಲ್ಲಸಲ್ಲೋಲ ಕಲ್ಲೋಲಾಕುಲಕೋಟರಃ ||೨||

ನಾನಾಯುಧನದೀನೀತ ಸೈನ್ಯಾವರ್ತವಿವೃತ್ತಿಮಾನ್ |
ಮತ್ತಹಸ್ತಿಘಟಾಪೀಠ ಚಲಾಚಲಕುಲಾಚಲಃ ||೩||

ಕಚಚ್ಚಕ್ರಶತಾವರ್ತ ವೃತ್ತಿಭ್ರಾಂತಶಿರಸ್ತೃಣಃ |
ಧೂಲೀಜಲಧರಾಪೀತ ಭ್ರಮತ್ಖಡ್ಗಪ್ರಭಾಜಲಃ ||೪||

ಮೂವತ್ತೈದನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :—ಎಲೈ ರಾಮನೇ ! ಆ ರಣಭೂಮಿಯೆಂಬ ಸಮುದ್ರವು ಕುಣಿಯುತ್ತಿರುವ ಕುದುರೆಗಳೆಂಬ ಅಲೆಗಳಿಂದ ಕೂಡಿ, ಉನ್ಮತ್ತವಾಗಿ ನರ್ತಿಸುವಂತಾಯಿತು.

೨. ಆ ಸಮುದ್ರದಲ್ಲಿ ಬೆಳುಗೊಡೆಗಳೇ ನೊರೆ, ಅದರಲ್ಲಿ ಶುಭ್ರವಾದ ಬಾಣಗಳೆಂಬ ಮೀನುಗಳ ಗುಂಪುಗಳು ವಿಶ್ರಾಂತಿಯನ್ನು ಹೊಂದುತ್ತಿದ್ದುವು. ಅಶ್ವಸೈನ್ಯಗಳೆಂಬ ಚಂಚಲವಾದ ಅಲೆಗಳ ಸಮೂಹಗಳು ತೀರದಲ್ಲಿದ್ದ ಪ್ರದೇಶವನ್ನೆಲ್ಲ ಆಕ್ರಮಿಸಿದ್ದುವು.

೩. ಬಗೆ ಬಗೆಯಾದ ಆಯುಧಗಳೆಂಬ ನದಿಗಳು ಸೈನ್ಯಗಳೆಂಬ ಸುಳಿಗಳನ್ನು ಸುತ್ತಿಸುತ್ತಿದ್ದುವು. ದೊಡ್ಡ ದೊಡ್ಡ ಆನೆಗಳ ಗುಂಪುಗಳೆಂಬ ಕುಲಾಚಲಗಳು ಅಲ್ಲಾಡದೆ ಇದ್ದುವು.

೪. ಅದರಲ್ಲಿ ಹೊಳೆಯುತ್ತಿರುವ ನೂರಾರು ಚಕ್ರಗಳೆಂಬ ಸುಳಿಗಳು

ಮಕರವ್ಯೂಹವಿಸ್ತಾರ ಭಗ್ನಾಭಗ್ನಭಟೌಘನೌ |
ಮಹಾಗುಡುಗುಡಾವರ್ತ ಪ್ರತಿಶ್ರುದ್ಘನಕಂದರಃ || ೫ ||

ಮೀನವ್ಯೂಹವಿನಿಷ್ಕ್ರಾಂತ ಶರಬೀಜೌಘಸರ್ಷಪಃ |
ಹೇತಿವೀಚೀವರಾಲೂನ ಪತಾಕಾವೀಚಿಮಂಡಲಃ || ೬ ||

ಶಸ್ತ್ರವಾರಿಕೃತಾಂಭೋದ ಸದೃಶಾವರ್ತಕುಂಡಲಃ |
ಸಂರಂಭಘನಸಂಚಾರ ಸೇನಾತಿಮಿತಿಮಿಂಗಿಲಃ || ೭ ||

ಕೃಷ್ಣಾಯಸಪರೀಧಾನ ವಲತ್ಸೇನಾಂಬುಭೀಷಣಃ |
ಕಬಂಧಾವರ್ತಲೇಖಾಂತರ್ಬದ್ಧ ಸೈನ್ಯಾದಿಭೂಷಣಃ || ೮ ||

ಸುತ್ತುತ್ತಿರುವುದರಿಂದ ಅವುಗಳ ನಡುವೆ ತಲೆಗಳೆಂಬ ತೃಣಗಳು ಸಿಕ್ಕಿಕೊಂಡು ಸುತ್ತುತ್ತಿದ್ದುವು. ಧೂಳಿಯೆಂಬ ಮೋಡಗಳು ಅಲ್ಲಾಡುತ್ತಿದ್ದ ಖಡ್ಗಗಳ ಕಾಂತಿಯೆಂಬ ಜಲವನ್ನು ಕುಡಿಯುತ್ತಿದ್ದುವು.

೫. ಮಕರವ್ಯೂಹವನ್ನು ರಚಿಸಿಕೊಂಡು ವಿಸ್ತಾರವಾಗಿರುವ ಭಟಸಮೂಹಗಳೆಂಬ ಹಡಗುಗಳಲ್ಲಿ, ಕೆಲವು ಮುರಿದಿದ್ದುವು; ಮತ್ತೆ ಕೆಲವು ಮುರಿಯದೆ ಇದ್ದುವು. ಅನೇಕ ವೀರರ ಕುತ್ತಿಗೆಗಳೆಂಬ ಸುಳಿಗಳಲ್ಲಿ ಗುಡುಗುಡು ಶಬ್ದದ ಪ್ರತಿಧ್ವನಿಯು ತುಂಬಿದ್ದಿತು.

೬. ಸತ್ತ ಜನಗಳ ಗುಂಪಿನಿಂದ ಬರುತ್ತಿದ್ದ ಬಾಣಸಮೂಹವೆಂಬ ಬೀಜಗಳು, ಸಾಸುವೆಯ ಕಾಳಿನಂತೆ, ಯುದ್ಧ ಭೂಮಿಯೆಂಬ ಸಮುದ್ರದ ದಡದಮೇಲೆ ಬೀಳುತ್ತಿದ್ದುವು. ಆಯುಧಗಳೆಂಬ ದೊಡ್ಡ ಅಲೆಗಳು ಪತಾಕೆಗಳೆಂಬ ಸಣ್ಣ ಅಲೆಗಳನ್ನು ಕತ್ತರಿಸುತ್ತಿದ್ದುವು.

೭. ಶಸ್ತ್ರಗಳೆಂಬ ನೀರಿನಿಂದಾದ ಮೋಡಗಳು ಅಲೆಯುತ್ತಿರಲು ಕುಂಡಲಗಳಂತಿದ್ದುವು. ಸೈನ್ಯಗಳೆಂಬ ತಿಮಿ ತಿಮಿಂಗಿಲಗಳು ಸಂರಂಭದಿಂದ ವಿಶೇಷವಾಗಿ ಸಂಚರಿಸುತ್ತಿದ್ದುವು.

೮. ಕವಚವನ್ನು ಹಾಕಿಕೊಂಡು ಓಡಾಡುತ್ತಿರುವ ಸೇನೆಯೆಂಬ ನೀರಿನಿಂದ ಆ ಸಮುದ್ರವು ಭಯಂಕರವಾಗಿತ್ತು. ಮುಂಡಗಳೆಂಬ ಸುಳಿಗಳಲ್ಲಿ ಸೈನ್ಯ ಮೊಲಾದ ಆಭರಣಗಳು ಮುಳುಗಿಹೋಗುತ್ತಿದ್ದುವು .

ಶರಸೀಕರನೀಹಾರ ಸಾಂಧಕಾರಕಕುಬ್ಗಣಃ |
ನಿರ್ಘೋಷಾಶೋಷಿತಾಶೇಷ ಶಬ್ದೈಕಘನಘುಂಘುಮಃ ॥ ೯ ॥

ಪತನೋತ್ಪತನ ವ್ಯಗ್ರ ಶಿರಃ ಶಕಲಸೀಕರಃ |
ಆವರ್ತಚಕ್ರವ್ಯೂಹೇಷು ಪ್ರಭ್ರಮದ್ಭಟಕಾಷ್ಠಕಃ ॥ ೧೦ ॥

ಕಷ್ಟಟಾಂಕಾರ ಕೋದಂಡ ಕುಂಡಲೋನ್ಮಥನೋದ್ಭಟಃ |
ಅಶಂಕಮೇವ ಪಾತಾಲಾದಿವೋದ್ಯತ್ಸೈನಿಕೋರ್ಮಿಮಾನ್ ॥ ೧೧ ॥

ಗಮಾಗಮಪರಾನಂತಪತಾಕಾಚ್ಛತ್ರ ಫೇನಿಲಃ |
ವಹದ್ರಕ್ತನದೀರಂಹಃ ಪ್ರೋಹ್ಯಮಾನರಥದ್ರುಮಃ ॥ ೧೨ ॥

ಗಜಪ್ರತಿಮಸಂಪನ್ನ ಮಹಾರುಧಿರಬುದ್ಬುದಃ |
ಸೈನ್ಯಪ್ರವಾಹವಿಚಲದ್ಧಯಹಸ್ತಿಜಲೇಚರಃ ॥ ೧೩ ॥

---

೯. ಬಾಣಗಳೆಂಬ ಹನಿಗಳು ದಿಕ್ಕುಗಳೆಲ್ಲ ಕತ್ತಲೆ ಕವಿಯುವಂತೆ ಮಾಡುತ್ತಿದ್ದುವು. ಘುಂಘುಮ ಧ್ವನಿಯೊಂದೇ ಮಿಕ್ಕ ಎಲ್ಲ ಧ್ವನಿಗಳನ್ನೂ ನಿಶ್ಶೇಷಮಾಡಿದ್ದಿತು.

೧೦. ತಲೆಬುರುಡೆಗಳ ಚೂರುಗಳೆಂಬ ನೀರಿನ ಹನಿಗಳು ಬೀಳುತ್ತ ಏಳುತ್ತ ಇದ್ದುವು: ಚಕ್ರವ್ಯೂಹಗಳೆಂಬ ಸುಳಿಗಳಲ್ಲಿ ಭಟರೆಂಬ ಕಡ್ಡಿಗಳು ಸಿಕ್ಕಿಕೊಂಡು ಸುತ್ತಾಡುತ್ತಿದ್ದುವು.

೧೧. ಕಷ್ಟದಿಂದ ಟಂಕಾರ ಧ್ವನಿಮಾಡುತ್ತಿರುವ ಬಿಲ್ಲೆಂಬ ಹಾವಿನ ದೇಹಗಳನ್ನು ಕತ್ತರಿಸುವುದರಲ್ಲಿ ಬಹು ಸಮರ್ಥರಾದ ವೀರ ಸೈನಿಕರೆಂಬ ಅಲೆಗಳು ಶಂಕೆಯಿಲ್ಲದೆ ಪಾತಾಳದಿಂದ ಹುಟ್ಟುವಂತೆ ಕಾಣುತ್ತಿದ್ದುವು.

೧೨. ಹೋಗುತ್ತ ಬರುತ್ತ ಇರುವ ಅನೇಕ ಧ್ವಜಗಳೂ ಛತ್ರಗಳೂ ಆ ಸಮುದ್ರದಲ್ಲಿ ನೊರೆಯಾಗಿದ್ದುವು. ಅಲ್ಲಿ ಹರಿಯುತ್ತಿರುವ ನೆತ್ತರ ತೊರೆಯಲ್ಲಿ ರಥಗಳೆಂಬ ವೃಕ್ಷಗಳು ಕೊಚ್ಚಿಕೊಂಡು ಹೋಗುತ್ತಿದ್ದುವು.

೧೩. ದೊಡ್ಡ ರಕ್ತಬುದ್ಬುದಗಳು ಆನೆಗಳಂತೆ ಸ್ಥೂಲವಾಗಿ ಹುಟ್ಟುತ್ತಿದ್ದುವು. ಸೈನ್ಯವೆಂಬ ಪ್ರವಾಹದಲ್ಲಿ ಆನೆ ಕುದುರೆಗಳೆಂಬ ಜಲಚರಗಳು ಓಡಾಡುತ್ತಿದ್ದುವು.

ಸಸಂಗ್ರಾಮೋಂಬರಗ್ರಾಮ ಇವಾಶ್ಚರ್ಯಕರೋ ನೃಣಾಂ |
ಅಭೂತ್ಪ್ರಲಯಭೂಕಂಪ ಕಂಪಿತಾಚಲಚಂಚಲಃ || ೧೪ ||

ತರತ್ತುರಂಗವಿಹಗಃ ಪತತ್ಕರಿಘಟಾತಟಃ |
ತ್ರಸ್ತಭೀರುಮೃಗಾನೀಕ ಸ್ಫೂರ್ಜದ್ಘುರುಘುರಾರವಃ || ೧೫ ||

ಸರಚ್ಛರಾಲೀಶಲಭ ಶತಭಂಗುರಸೈನಿಕಃ |
ತರತ್ತುರಂಗಶರಭಃ ಶರಭಾರವನಾವನಿಃ || ೧೬ ||

ಚಲದ್ದ್ವಿರೇಫನಿರ್ಹ್ರಾದೋ ರಸತ್ತೂರ್ಯಗುಹಾಗುರುಃ |
ಚಿರಾತ್ಸ ಸೈನ್ಯಜಲದೋ ಲುಠದ್ಭಟಮೃಗಾಧಿಪಃ || ೧೭ ||

---

೧೪. ಆ ಯುದ್ಧವು ಆಕಾಶನಗರಿಯಂತೆ ಜನರಿಗೆ ಆಶ್ಚರ್ಯವನ್ನುಂಟು ಮಾಡುತ್ತಿತ್ತು, ಪ್ರಳಯಕಾಲದಲ್ಲಿ ಭೂಮಿಯು ನಡಗುವಾಗ ಅಲ್ಲಾಡುವ ಪರ್ವತಗಳಂತೆ ಅಲ್ಲಾಡುತ್ತಿತ್ತು.

೧೫. ಅಲ್ಲಿ ಕುದುರೆಗಳೆಂಬ ಹಕ್ಕಿಗಳು ಹಾರಾಡುತ್ತಿದ್ದುವು. ಆನೆಗಳೆಂಬ ದಡಗಳು ಕುಸಿದುಬೀಳುತ್ತಿದ್ದುವು. ಸಹಜವಾಗಿ ಹೆದರಿಕೆಯುಳ್ಳ ಜಿಂಕೆಗಳಂತೆ, ಸೇನೆಗಳು ಹೆದರಿ ಕೂಗುತ್ತಿರುವುದರಿಂದ ಘುರಘುರ ಧ್ವನಿಯು ತಾನೇ ತಾನಾಗಿತ್ತು.

೧೬. ಬಿಲ್ಲಿನಿಂದ ಹೊರಡುವ ಬಾಣಸಮೂಹಗಳಿಂದ ಭಂಗಹೊಂದಿ ಬೀಳುತ್ತಿರುವ ಯೋಧರನೇಕರು. ಮಿಡತೆಗಳಾಗಿದ್ದರು. ಸಂಚರಿಸುತ್ತಿರುವ ಕುದುರೆಗಳೇ ಶರಭಮೃಗಗಳಾಗಿದ್ದುವು. ಶರಸಮೂಹಗಳೇ ವನಭೂಮಿ ಯಾಗಿತ್ತು.*

೧೭. ಅಲ್ಲಿ ದುಂಬಿಗಳ ಧ್ವನಿಯು ಸಂಚರಿಸುತ್ತಿತ್ತು. ಧ್ವನಿಮಾಡು ತ್ತಿರುವ ತೂರ್ಯವಾದ್ಯಗಳು ದೊಡ್ಡ ಗುಹೆಗಳಾಗಿದ್ದುವು ಸೈನ್ಯಗಳೇ ಮೋಡಗಳಾಗಿದ್ದುವು. ಭಟರೆಂಬ ಸಿಂಹಗಳು ಹೊರಳಾಡುತ್ತಿದ್ದುವು.

---

* ಶರ—ಬಾಣ, ಒಂದು ಜಾತಿಯ ಹುಲ್ಲು

ಪ್ರಸರದ್ಧೂಲಿಜಲದೋ ವಿಗಲತ್ ಸೈನ್ಯಸಾನುಮಾನ್ |
ಪತದ್ರಥವರಾಘ್ಯಾಂಗಃ ಪ್ರತಪತ್ಖಡ್ಗ ಮಂಡಲಃ || ೧೮ ||

ಪ್ರೋತ್ಪತತ್ಪದಪುಷ್ಪೌಘಃ ಪತಾಕಾಚ್ಛತ್ರವಾರಿದಃ |
ವಹದ್ರಕ್ತನದೀಪೂರ ಪತತ್ಸಾರಾವವಾರಣಃ || ೧೯ ||

ಸೋಽಭೂತ್ಸಮರಕಲ್ಪಾಂತೋ ಜಗತ್ಕವಲನಾಕುಲಃ |
ಪರ್ಯಸ್ತಸಧ್ವಜಚ್ಛತ್ರ ಪತಾಕಾ ರಥಪತ್ತನಃ || ೨೦ ||

ಪತದ್ವಿಮಲಹೇತ್ಯೌಘ ಭೂರಿಭಾಸ್ವರಭಾಸ್ಕರಃ |
ಕಠಿನಪ್ರಾಣಸಂತಾಪತಾಪಿತಾಖಿಲಮಾನಸಃ || ೨೧ ||

ಕೋದಂಡಪುಷ್ಕರಾವರ್ತ ಶರಧಾರಾ ನಿರಂತರಃ |
ವಹತ್ಖಡ್ಗ ಶಿಲಾಲೇಖಾ ವಿದ್ಯುಜ್ವಲಯಿತಾಂಬರಃ || ೨೨ ||

---

೧೮. ಧೂಳಿಯೆಂಬ ಮೋಡಗಳು ಮೇಲಕ್ಕೆ ಹಾರುತ್ತಿದ್ದುವು. ಸೇನೆಗಳೆಂಬ ತಪ್ಪಲುಗಳು ಜಾರಿಬೀಳುತ್ತಿದ್ದುವು. ದೊಡ್ಡ ರಥಗಳ ಅಂಗಗಳು ಬೀಳುತ್ತಿದ್ದುವು. ಖಡ್ಗಗಳೆಂಬ ಖಡ್ಗಮೃಗಗಳ ಸಮೂಹಗಳು ಕೆಳಗೆ ಬೀಳುತ್ತಿದ್ದುವು.

೧೯. ಸೈನಿಕರು ಕತ್ತರಿಸಲು ಮೇಲಕ್ಕೆ ಹಾರುತ್ತಿರುವ ಕಾಲುಗಳು, ಆ ರಣಭೂಮಿಯೆಂಬ ಪರ್ವತದಲ್ಲಿ ಹೂಗೊಂಚಲುಗಳಾಗಿದ್ದುವು. ಧ್ವಜಗಳೂ ಛತ್ರಗಳೂ ಮೋಡಗಳಾಗಿದ್ದುವು. ಹರಿಯುತ್ತಿರುವ ನೆತ್ತರ ಹೊಳೆಯಲ್ಲಿ ಆನೆಗಳು ಬಿದ್ದು ಕೂಗುತ್ತಿದ್ದುವು.

೨೦. ಆ ರಣಭೂಮಿಯು ಪ್ರಳಯಕಾಲದಂತೆ ಜಗತ್ತನ್ನು ನುಂಗುವುದರಲ್ಲಿ ಆಸಕ್ತವಾಗಿತ್ತು. ಧ್ವಜ, ಛತ್ರ, ಪತಾಕೆ, ರಥ--ಇವು ಪ್ರಳಯಕಾಲದಲ್ಲಿ ಪಟ್ಟಣಗಳು ಉರುಳುವಂತೆ ಉರುಳುತ್ತಿದ್ದುವು.

೨೧. ವಿಮಲವಾದ ಆಯುಧ ಸಮೂಹಗಳೆಂಬ ಸೂರ್ಯಮಂಡಲಗಳು ಬೀಳುತ್ತಿದ್ದುವು. ಕಠಿಣವಾದ ಪ್ರಾಣಸಂಕಟವು ಎಲ್ಲರ ಮನಸ್ಸನ್ನೂ ತಾಪಗೊಳಿಸುತ್ತಿತ್ತು.

೨೨. ಬಿಲ್ಲುಗಳೆಂಬ ಪುಷ್ಕರಾವರ್ತ ಮೇಘಗಳು, ಸಂತತವಾಗಿ ಬಾಣ ಸಮೂಹಗಳೆಂಬ ಮಳೆಯನ್ನು ಸುರಿಸುತ್ತಿದ್ದುವು. ಖಡ್ಗಗಳೆಂಬ ಮಿಂಚು, ರೇಖಾಕಾರವಾಗಿ ಆಕಾಶವನ್ನೆಲ್ಲ ಆವರಿಸಿಕೊಂಡಿತ್ತು.

ಉಚ್ಛಿನ್ನರಕ್ತ ಜಲಧಿ ಪತಿತೇಭಕುಲಾಚಲಃ |
ನಭೋ ವಿಕೀರ್ಣನಿಪತದ್ಭೃತ್ತಾರಕಣತಾರಕಃ || ೨೩ ||

ಚಕ್ರಕುಲ್ಯಾಂಬುದಾವರ್ತ ಪೂರ್ಣವ್ಯೋಮಶಿರಾಂಬುದಃ |
ಅಸ್ತ್ರಕಲ್ಪಾಗ್ನಿನಿರ್ದಗ್ಧ ಸೈನ್ಯಲೋಕಾಂತರಕ್ರಮಃ || ೨೪ ||

ಹೇತಿವರ್ಷಾಶನಿಚ್ಛನ್ನ ಭೂತಲಾಮಲಭೂಧರಃ |
ಗಜರಾಜಗಿರಿವ್ರಾತ ಪಾತಪಿಷ್ಟಜನವ್ರಜಃ || ೨೫ ||

ಶರಧಾರಾಘನಾನೀಕ ಮೇಘಚ್ಛನ್ನಮಹೀನಭಾಃ |
ಮಹಾನೀಕಾರ್ಣವಕ್ಷೋಭ ಸಂಘಟ್ಟಘಟಿತಾದ್ರವಃ || ೨೬ ||

ವ್ಯಾಪ್ತ ಉಗ್ರಾನಿಲೋದ್ಧೂತೈಃ ಜಲವ್ಯಾಲೈರಿವಾಚಲಃ |
ಅನ್ಯೋನ್ಯದಲನ ವ್ಯಗ್ರೈಃ ಶಸ್ತ್ರೋತ್ಪಾತ ಇವೋತ್ಥಿತೈಃ || ೨೭ ||

---

೨೩. ಆ ರಕ್ತ ಸಮುದ್ರದಲ್ಲಿ ಆನೆಗಳ ಸಮೂಹಗಳೆಂಬ ಕುಲಪರ್ವತಗಳು ಛಿನ್ನವಾಗಿ ಬೀಳುತ್ತಿದ್ದುವು. ಆಕಾಶದಲ್ಲಿ ಹಾರಿಹೋದ ನೆತ್ತರಹನಿಗಳು ಅಲ್ಲಿಂದ ಬೀಳುವಾಗ, ಕೆಳಗಿನಿಂದ ಹಾರಿದ ಹನಿಗಳೊಡನೆ ಸೇರಿ ದೊಡ್ಡರಕ್ತ ಬಿಂದುಗಳಾಗಿ ನಕ್ಷತ್ರಗಳಂತೆ ಆಕಾಶದಿಂದ ಬೀಳುತ್ತಿದ್ದುವು.

೨೪. ಕಾಲುವೆಯಂತೆ ಹರಿಯುತ್ತಿರುವ ಚಕ್ರಪರಂಪರೆಗಳೆಂಬ ಮೇಘಗಳು, ಆಕಾಶವನ್ನೂ, ಮೇಘಮಾರ್ಗವನ್ನೂ ತುಂಬಿದ್ದುವು. ಮಂತ್ರಾಸ್ತ್ರಗಳೆಂಬ ಪ್ರಳಯಾಗ್ನಿಯು, ಸೇನೆಗಳೆಂಬ ನಾನಾ ಲೋಕಗಳನ್ನು ಸುಡುತ್ತಿತ್ತು.

೨೫. ಆಯುಧವೃಷ್ಟಿಯೆಂಬ ವಜ್ರಾಯುಧಗಳು ಭೂಮಿಯೆಂಬ ಪರ್ವತಗಳನ್ನು ಆವರಿಸುತ್ತಿದ್ದುವು. ಮದ್ದಾನೆಗಳೆಂಬ ಪರ್ವತಗಳ ಗುಂಪು ಉರುಳುತ್ತಿದ್ದುದರಿಂದ ಜನರ ಸಮೂಹವೆಲ್ಲ ಮರ್ದಿತವಾಗುತ್ತಿತ್ತು.

೨೬. ಬಾಣಗಳ ವೃಷ್ಟಿಯೆಂಬ ಮಳೆಯಿಂದ ಕೂಡಿದ ಸೇನೆಗಳೆಂಬ ಮೋಡಗಳು, ಭೂಮಿಯೆಂಬ ಆಕಾಶವನ್ನು ಆವರಿಸುತ್ತಿದ್ದುವು. ದೊಡ್ಡ ಸೇನೆಗಳೆಂಬ ಸಮುದ್ರಗಳು ಒಂದಕ್ಕೊಂದು ಸೇರಿಕೊಂಡು ಬಹು ದೂರವಾಗಿ ಹರಿಯುತ್ತಿದ್ದುವು.

೨೭. ಸಮುದ್ರದ ನಡುವೆ ಇರುವ ಪರ್ವತದಲ್ಲಿ ಬಿರುಗಾಳಿಯು ಹೊಡೆದು ಕೊಂಡು ಬಂದ ನೀರುಹಾವುಗಳು ತುಂಬುವಂತೆ, ಪ್ರತಿಶಸ್ತ್ರಗಳನ್ನು ನಾಶ ಮಾಡುವುದಕ್ಕಾಗಿ ಎದ್ದಿರುವ ಶಸ್ತ್ರಗಳು ಇದ್ದುವು.

ಶೂಲಾಸಿಚಕ್ರಶರ ಶಕ್ತಿಗದಾಭುಶುಂಡೀ–
ಪ್ರಾಸಾದಯೋ ವಿದಲನೇನ ಮಿಥೋ ಧ್ವನಂತಃ |
ದೀಪ್ತಾ ಅಧುರ್ದಶದಿಶಃ ಶತಶೋ ಭ್ರಮಂತಃ
ಕಲ್ಪಾಂತವಾತಪರಿವೃತ್ತಪದಾರ್ಥಲೀಲಾಂ || ೨೮ ||

ಇತ್ಯಾರ್ಷೇ ಶ್ರೀ ವಾಸಿಷ್ಠಮಹಾರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿಪ್ರಕರಣೇ
"ರಣವರ್ಣನಂ" ನಾಮ ಪಂಚತ್ರಿಂಶಃ ಸರ್ಗಃ

---

೨೮. ಶೂಲ, ಕತ್ತಿ, ಚಕ್ರ, ಬಾಣ, ಶಕ್ತಿ ಗದೆ, ಭುಶುಂಡಿ, ಪ್ರಾಸ ಮೊದಲಾದ ಆಯುಧಗಳು ಒಂದನ್ನೊಂದು ಸೀಳುತ್ತ ಧ್ವನಿಮಾಡುತ್ತ ಹೊಳೆಯುತ್ತ, ಅನೇಕವೇಳೆ ಸುತ್ತುತ್ತಾ ಪ್ರಳಯ ಮಾರುತಕ್ಕೆ ಸಿಕ್ಕಿ ಸುತ್ತುವ ಪದಾರ್ಥಗಳ ವಿಲಾಸವನ್ನು ಹೊಂದುತ್ತಿದ್ದುವು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ರಣ ವರ್ಣನ" ಎಂಬ ಮೂವತ್ತೈದನೆಯ ಸರ್ಗವು.

ಷಟ್‌ತ್ರಿಂಶಃ ಸರ್ಗಃ

ಶ್ರೀವಸಿಷ್ಠ ಉವಾಚ

ಅಥ ಶೃಂಗೋಪಮಾನೇಷು ಸ್ಥಿತೇಷು ಶರರಾಶಿಷು |
ಸರ್ವಭೀರುಷು ಭಗ್ನೇಷು ವಿದ್ರುತೇಷು ದಿಶೋ ದಶ || ೧ ||

ಮಾತಂಗಶವಶೈಲೇಷು ವಿಶ್ರಾಂತಾಂಬುದಪಂಕ್ತಿಷು |
ಯಕ್ಷರಕ್ಷಃಪಿಶಾಚೇಷು ಕ್ರೀಡತ್ಸು ರುಧಿರಾರ್ಣವೇ || ೨ ||

ಮಹತಾಂ ಧರ್ಮನಿಷ್ಠಾನಾಂ ಶೀಲೌಜಃಸತ್ವಶಾಲಿನಾಂ |
ಶುದ್ಧಾನಾಂ ಕುಲಪದ್ಮಾನಾಂ ವೀರಾಣಾಮನಿವರ್ತಿನಾಂ || ೩ ||

ದ್ವಂದ್ವಯುದ್ಧಾನಿ ಜಾತಾನಿ ಮೇಘಾನಾಮಿವ ಗರ್ಜತಾಂ |
ಮಿಥೋ ನಿಗರಣೋತ್ಕಾನಿ ಮಿಲಂತ್ಯಾಪಗಪೂರವತ್ || ೪ ||

ಮೂವತ್ತಾರನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :—ಆ ರಣಭೂಮಿಯಲ್ಲಿ ಬಾಣಸಮೂಹಗಳು ದೊಡ್ಡ ಪರ್ವತದ ಶಿಖರಗಳಂತೆ ಬಿದ್ದಿರಲು ಹೆದರಿಕೊಂಡವರೆಲ್ಲರೂ ಭಗ್ನರಾಗಿ ಹತ್ತು ದಿಕ್ಕುಗಳಿಗೂ ಓಡಿಹೋದರು.

೨. ಆನೆಗಳ ಶವಗಳೆಂಬ ಪರ್ವತಗಳಲ್ಲಿ ಮೋಡಗಳ ಗುಂಪು ವಿಶ್ರಮಿಸಿಕೊಳ್ಳುತ್ತಿರಲಾಗಿ, ಯಕ್ಷ ರಕ್ಷಸ್ಸು ಪಿಶಾಚಗಳು ರಕ್ತದ ಸಮುದ್ರದಲ್ಲಿ ಆಟವಾಡುತ್ತಿದ್ದುವು.

೩. ಮಹಾತ್ಮರಾಗಿಯೂ ಧರ್ಮನಿಷ್ಠರಾಗಿಯೂ ಶೀಲ, ಓಜಸ್ಸು, ಸತ್ವ ಇವುಗಳಿಂದ ಕೂಡಿದವರಾಗಿಯೂ, ಶುದ್ಧರಾಗಿಯೂ ತಮ್ಮ ವಂಶಕ್ಕೆ ಪದ್ಮದಂತೆ ಇರುವವರಾಗಿಯೂ, ವೀರರಾಗಿಯೂ, ಯುದ್ಧದಲ್ಲಿ ಹೆದರಿ ಹಿಂದಿರುಗದೆ ಇರುವವರಾಗಿಯೂ,

೪. ಮೇಘಗಳಂತೆ ಗರ್ಜಿಸತಕ್ಕವರಾಗಿಯೂ ಇದ್ದ ವೀರರಿಗೆ ದ್ವಂದ್ವ ಯುದ್ಧವಾರಂಭವಾಯಿತು. ಆಗ ಒಬ್ಬರನ್ನೊಬ್ಬರು ನುಂಗಿ ಬಿಡಬೇಕೆಂದು

ಪಂಜರಃ ಪಂಜರೇಣೇವ ಗಜೌಘೇನ ಗಜೋಚ್ಚಯಃ |
ಸವನಃ ಸವನೇನಾದ್ರಿರದ್ರಿಣೇವಾಮಿಲದ್ಬಲಾತ್ || ೫ ||

ಅಶ್ವೌಘೋ ಮಿಲದಶ್ವಾನಾಂ ವೃಂದೇನಾರಾವಿರಂಹಸಾ |
ತರಂಗೌಘೇನ ಘೋಷೇಣ ತರಂಗೌಘ ಇವಾರ್ಣವೇ || ೬ ||

ನರಾನೀಕಂ ನರಾನೀಕಃ ಸಮಾಯುಧಮಯೋಧಯತ್ |
ವೇಣ್ವೋಘಮಿವ ವೇಣ್ವೋಘೋ ಮರುಲ್ಲೋಲೋ ಮರುದ್ಬಲಂ || ೭ ||

ರಥೌಘಶ್ಚ ರಥೌಘೇನ ನಿಷ್ಪಿಪೇಷಾಖಿಲಂ ವಪುಃ |
ನಗರಂ ನಗರೇಣೇವ ದೈವೇನೋಡ್ಡೀನಮಾಸುರಂ || ೮ ||

ಸರಚ್ಛರಭರಾಸಾರ ರಚಿತಾಪೂರ್ವವಾರಿದಂ |
ಯುಯುಧೇ ಸ್ಥಗಿತಾಕಾಶಾ ಧನುರ್ಧರಪತಾಕಿನೀ || ೯ ||

ಕುತೂಹಲಪಡುತ್ತ, ನದಿಯ ಪ್ರವಾಹಗಳು ಒಂದನ್ನೊಂದು ಸೇರುವಂತೆ ಪರಸ್ಪರವಾಗಿ ಸೇರುತ್ತಿದ್ದರು.

೫. ಪಂಜರದೊಡನೆ ಪಂಜರದಂತೆ ಗಜ ಸಮೂಹದೊಡನೆ ಗಜ ಸಮೂಹವು ಅರಣ್ಯದಿಂದ ಕೂಡಿದ ಪರ್ವತವು, ಅರಣ್ಯದಿಂದ ಕೂಡಿದ ಪರ್ವತದೊಡನೆ ಕೂಡುವಂತೆ ಬಲಾತ್ಕಾರವಾಗಿ ಸೇರಿತು.

೬, ಸಮುದ್ರದಲ್ಲಿ ಅಲೆಯ ಸಮೂಹವು ಅಲೆಯ ಸಮೂಹದೊಡನೆ ಧ್ವನಿಮಾಡುತ್ತ ಸೇರುವಂತೆ, ಧ್ವನಿಮಾಡುತ್ತ ವೇಗವಾದ ಅಶ್ವಸಮೂಹದೊಡನೆ ಅಶ್ವಸಮೂಹವು ಸೇರಿತು.

೭. ಗಾಳಿಯಿಂದ ಅಲ್ಲಾಡುತ್ತಿರುವ ಬಿದಿರುಮೆಳೆಯು ಬಿದಿರುಮಳೆಯೊಡನೆ ಸೇರುವಂತೆ, ಸಮಾನವಾದ ಆಯುಧ ಬಲವುಳ್ಳ ಕಾಲಾಳುಗಳ ಸೈನ್ಯವು ಕಾಲಾಳುಗಳ ಸೈನ್ಯದೊಂದಿಗೆ ಸೇರಿತು.

೮. ಮೇಲಕ್ಕೆ ಹಾರಿದ ರಾಕ್ಷಸರ ಪಟ್ಟಣವು ದೇವತೆಗಳ ಪಟ್ಟಣದೊಡನೆ ಸೇರಿದಂತೆ, ರಥಸಮೂಹದೊಡದೆ ಸೇರಿದ ರಥಸಮೂಹವು ಎಲ್ಲ ಶರೀರಭಾಗವನ್ನು ಚೂರುಚೂರು ಮಾಡಿತು.

೯. ಬಿಲ್ಲುಗಾರರ ಸೇನೆಯು, ಓಡುತ್ತಿರುವ ಬಾಣಸಮೂಹದ ಧಾರೆಕರೆವ ಮಳೆಯಿಂದ ಅಪೂರ್ವವಾದ ಮೇಘಮಂಡಲವನ್ನುಂಟುಮಾಡಿ ಆಕಾಶವನ್ನು ಮರೆಮಾಡುತ್ತ ಯುದ್ಧಮಾಡಿತು.

ವಿಷಮಾಯುಧಯುದ್ಧೇಷು ಯೋದ್ಧಾರಃ ಪೇಲವಾಶಯಾಃ |
ಯದಾ ಯುಕ್ತ್ಯಾ ಪಲಾಯಂತೇ ರಣಕಲ್ಪಾನಲೇ ತದಾ ‖ ೧೦ ‖

ಮಿಲಿತಾಶ್ಚಕ್ರಿಣಶ್ಚಕ್ರೈಃ ಧನುರ್ಧಾರ್ಯೈರ್ಧನುರ್ಧರಾಃ |
ಖಡ್ಗಿಭಿಃ ಖಡ್ಗಯೋದ್ಧಾರೋ ಭುಶುಂಡೀಭಿರ್ಭುಶುಂಡಯಃ ‖ ೧೧ ‖

ಮುಸಲೈರ್ಮುಸಲೋದಾರಾಃ ಕುಂತಿನಃ ಕುಂತಿಧಾರಿಭಿಃ |
ಋಷ್ಟ್ಯಾಯುಧಾ ಋಷ್ಟಿಧರೈಃ ಪ್ರಾಸಿಭಿಃ ಪ್ರಾಸಪಾಣಯಃ ‖ ೧೨ ‖

ಸಮುದ್ಗರಾ ಮುದ್ಗರಿಭಿಃ ಸರದ್ಯೈರ್ವಿಲಸದ್ಗದಾಃ |
ಶಾಕ್ತಿಕೈಃ ಶಕ್ತಿಯೋದ್ಧಾರಃ ಶೂಲೈಃ ಶೂಲವಿಶಾರದಾಃ ‖ ೧೩ ‖

ಪ್ರಾಸಾಸನವಿದಃ ಪ್ರಾಸೈಃ ಪರಶೂಕ್ತಾಃ ಪರಶ್ವಧೈಃ |
ಲಕುಟೋದ್ಯೈರ್ಲಕುಟನಶ್ಚೋಪಲೈರುಪಲಾಯುಧಾಃ ‖ ೧೪ ‖

---

೧೦. ಕ್ರೂರವಾದ ಆಯುಧಗಳಿಂದ ಯುದ್ಧ ನಡೆಯುತ್ತಿದ್ದಾಗ, ಆ ಯುದ್ಧವೆಂಬ ಕಲ್ಪಾಗ್ನಿಯಲ್ಲಿ ಯುದ್ಧಮಾಡುತ್ತಿದ್ದ ಅಧೀರರು, ಯುಕ್ತಿಯಿಂದ ತಪ್ಪಿಸಿಕೊಂಡು ಓಡಿಹೋಗುವಾಗ,

೧೧. ಚಕ್ರಧಾರಿಗಳು ಚಕ್ರಧಾರಿಗಳೊಡನೆ, ಧನುರ್ಧಾರಿಗಳು ಧನುರ್ಧಾರಿಗಳೊಡನೆ, ಖಡ್ಗಧಾರಿಗಳು ಖಡ್ಗಧಾರಿಗಳೊಡನೆ, ಭುಶುಂಡಿಯನ್ನು ಹಿಡಿದವರು ಭುಶುಂಡಿಯನ್ನು ಹಿಡಿದವರೊಡನೆ,

೧೨. ಒನಕೆಯನ್ನು ಹಿಡಿದವರು ಒನಕೆಯನ್ನು ಹಿಡಿದವರೊಡನೆ, ಕುಂತಾಯುಧವನ್ನು ಹಿಡಿದವರು ಕುಂತಾಯುಧವನ್ನು ಹಿಡಿದವರೊಡನೆ, ಋಷ್ಟಿಯನ್ನು ಹಿಡಿದವರು ಋಷ್ಟಿಯನ್ನು ಹಿಡಿದವರೊಡನೆ, ಪ್ರಾಸಾಯುಧವನ್ನು ಹಿಡಿದವರು ಪ್ರಾಸಾಯುಧವನ್ನು ಹಿಡಿದವರೊಡನೆ,

೧೩. ಮುದ್ಗರವನ್ನು ಹಿಡಿದವರು ಮುದ್ಗರವನ್ನು ಹಿಡಿದವರೊಡನೆಯೂ ಗದೆಯನ್ನು ಹಿಡಿದವರು ಗದೆಯನ್ನು ಹಿಡಿದವರೊಡನೆಯೂ ಶಕ್ತ್ಯಾಯುಧವನ್ನು ಹಿಡಿದವರು ಶಕ್ತ್ಯಾಯುಧವನ್ನು ಹಿಡಿದವರೊಡನೆಯೂ, ಶೂಲವನ್ನು ಹಿಡಿದವರು ಶೂಲವನ್ನು ಹಿಡಿದವರೊಡನೆಯೂ,

೧೪. ಪ್ರಾಸವನ್ನು ಎಸೆಯುವುದರಲ್ಲಿ ನಿಪುಣರಾದವರು ಪ್ರಾಸವನ್ನು ಹಿಡಿದವರೊಡನೆ, ಪರಶುವನ್ನು ಹಿಡಿದವರು ಪರಶುವನ್ನು ಹಿಡಿದವರೊಡನೆ,—

ಪಾಶಿಭಿಃ ಪಾಶಧಾರಿಣ್ಯಃ ಶಂಕುಭಿಃ ಶಂಕುಧಾರಿಣಃ |
ಕ್ಷುರಿಕಾಭಿಸ್ತು ಕ್ಷುರಿಕಾ ಭಿಂದಿಪಾಲೈಶ್ಚ ತದ್ಗತಾಃ || ೧೫ ||

ವಜ್ರಮುಷ್ಟಿಧರಾ ವಜ್ರೈರಂಕುಶೈರಂಕುಶೋದ್ಧತಾಃ |
ಹಲೈರ್ಹಲನಿಕಾಷಜ್ಞಾಸ್ತ್ರಿಶೂಲೈಶ್ಚ ತ್ರಿಶೂಲಿನಃ || ೧೬ ||

ಶೃಂಖಲಾಜಾಲಿನೋ ಜಾಲೈಃ ಶೃಂಖಲೈರಲಿಕೋಮಲೈಃ |
ಕ್ಷುಭಿತಾಕಲ್ಪವಿಕ್ಷುಬ್ಧಸಾಗರೋರ್ಮಿಘಟಾ ಇವ || ೧೭ ||

ಕ್ಷುಬ್ಧಚಕ್ರದಲಾವರ್ತಃ ಶರಸೀಕರಮಾರುತಃ |
ಪ್ರಭ್ರಮದ್ಧೇತಿಮಕರೋ ವ್ಯೋಮೈಕಾರ್ಣವ ಆಬಭೌ || ೧೮ ||

ಲಗುಡವನ್ನು ಹಿಡಿದವರು ಲಗುಡವನ್ನು ಹಿಡಿದವರೊಡನೆ, ಶಿಲೆಯನ್ನು ಹಿಡಿದವರು ಶಿಲಾಯುಧಧಾರಿಗಳೊಡನೆ,

೧೫. ಪಾಶವನ್ನು ಹಿಡಿದವರು ಪಾಶವನ್ನು ಹಿಡಿದವರೊಡನೆಯೂ, ಶಂಕುವನ್ನು ಹಿಡಿದವರೊಡನೆಯೂ, ಸಣ್ಣ ಕತ್ತಿಯುಳ್ಳವರು ಸಣ್ಣ ಕತ್ತಿಯುಳ್ಳವರೊಡನೆಯೂ ಭಿಂದಿಪಾಲವನ್ನು ಹಿಡಿದವರು ಭಿಂದಿಪಾಲವನ್ನು ಹಿಡಿದವರೊಡನೆಯೂ,

೧೬. ವಜ್ರಮುಷ್ಟಿಯವರು ವಜ್ರಮುಷ್ಟಿಯವರೊಡನೆಯೂ, ಅಂಕುಶವನ್ನುಹಿಡಿದವರು ಅಂಕುಶವನ್ನು ಹಿಡಿದವರೊಡನೆಯೂ, ಹಲಾಯುಧವನ್ನುಹಿಡಿದವರು ಹಲಾಯುಧವನ್ನು ಹಿಡಿದವರೊಡನೆಯೂ, ತ್ರಿಶೂಲವನ್ನು ಹಿಡಿದವರು ತ್ರಿಶೂಲವನ್ನು ಹಿಡಿದವರೊಡನೆಯೂ,

೧೭. ಕಬ್ಬಿಣದ ಸರಪಳಿಯಿಂದ ಮಾಡಿದ ಕವಚವುಳ್ಳವರು ದುಂಬಿಯಂತೆ ಹೊಳೆಯುವ,ಕವಚವುಳ್ಳವರೊಡನೆಯೂ, ಪ್ರಳಯಕಾಲದಲ್ಲಿ ಕ್ಷುಭಿತವಾದ ಸಮುದ್ರದ ಅಲೆಗಳ ಸಮೂಹದಂತೆ ತಮಗೆ ಸಮಾನರಾದವರಲ್ಲಿ ಸೇರಿಬಿಟ್ಟರು.

೧೮. ಎಲೆಗಳ ಹಾಗಿರುವ ಚಕ್ರಗಳೆಂಬ ಸುಳಿಗಳು ಸುತ್ತುತ್ತಿರುವುದಾಗಿಯೂ, ಬಾಣಗಳೆಂಬ ತುಷಾರದಿಂದ ಕೂಡಿದ ಗಾಳಿಯುಳ್ಳುದಾಗಿಯೂ, ಆಯುಧಗಳೆಂಬ ಮೊಸಳೆಗಳು ಓಡಾಡುತ್ತಿರುವುದಾಗಿಯೂ ಇರುವ ಆ ರಣಭೂಮಿಯ ಆಕಾಶವೆಂಬ ಏಕಾರ್ಣವವು ಪ್ರಕಾಶಿಸುತ್ತಿದ್ದಿತು.

ಉತ್ಫುಲ್ಲಾಯುಧಕಲ್ಲೋಲಶಿರಾಕುಲಜಲೇಚರಃ |
ರೋದೋರಂಧ್ರಸಮುದ್ರೋಽಸೌ ಬಭೂವಾಮರದುಸ್ತರಃ || ೧೯ ||

ದಿವ್ಯಾಷ್ಟಕಜನಾನೀಕಂ ಪಕ್ಷದ್ವಯತಯಾ ತಯಾ ।
ಅರ್ಧೇನಾರ್ಧೇನ ಕುಪಿತಂ ಭೂಪಾಲಾಭ್ಯಾಂ ತಥಾ ಸ್ಥಿತಂ || ೨೦ ||

ಮಧ್ಯದೇಶಾದಿಸಂಖ್ಯಾನೇ ಪ್ರಾಗ್ದಿಗ್ಭ್ಯೋಽಭ್ಯಾಗತಾನಿಮಾನ್ |
ಲೀಲಾನಾಥಸ್ಯ ಪದ್ಮಸ್ಯ ಪಕ್ಷೇ ಜನಪದಾನ್ ಶೃಣು || ೨೧ ||

ಪೂರ್ವಸ್ಯಾಂ ಕೋಸಲಾಃ ಕಾಶಿಮಾಗಧಾ ಮಿಥಿಲೋತ್ಕಲಾಃ |
ಮೇಖಲಾ: ಕರ್ಕರಾ ಮುದ್ರಾಸ್ತಥಾ ಸಂಗ್ರಾಮಶೌಂಡಕಾ: || ೨೨ ||

ಮುಖ್ಯಾ ಹಿಮಾ ರುದ್ರಮುಖ್ಯಾಸ್ತಾಮ್ರಲಿಪ್ತಾಸ್ತಥೈವ ಚ |
ಪ್ರಾಗ್ಜ್ಯೋತಿಷಾ ವಾಜಿಮುಖಾ ಅಂಬಷ್ಠಾ: ಪುರುಷಾದಕಾ: || ೨೩ ||

---

೧೯. ವಿಸ್ತಾರವಾಗಿ ಹರಡಿಕೊಂಡಿರುವ ಆಯುಧಗಳೆಂಬ ಅಲೆಗಳ ಸಾಲುಗಳಿಂದ ವ್ಯಾಕುಲಪಡುವ ಜಲಚರಗಳುಳ್ಳ ಭೂಮಿ ಆಕಾಶಗಳ ಅವಕಾಶ ವೆಂಬ ಈ ಸಮುದ್ರವು ದೇವತೆಗಳಿಗೂ ದಾಟಲಸಾಧ್ಯವಾಗಿತ್ತು.

೨೦. ಒಂದುಕಡೆ ಸಿಂಧುರಾಜನೂ ಮತ್ತೊಂದುಕಡೆ ವಿದೂರಥನೂ ನಿಂತು ಎರಡು ಪಕ್ಷಗಳಾಗಿರುವುದರಿಂದ ಆ ದೊಡ್ಡ ಸೇನೆಯಲ್ಲಿ ಒಂದೊಂದು ಕಡೆ ಅರ್ಧ ಅರ್ಧವಾಗಿ, ದಿವ್ಯಾಷ್ಟಕವನ್ನುಳ್ಳ ಜನರ ಆ ಸೈನ್ಯವು ಕೋಪದಿಂದ ನಿಂತಿತು.*

೨೧. ಮಧ್ಯದೇಶ ಮೊದಲಾದವರ ಎಣಿಕೆಯನ್ನು ಮೊದಲುಮಾಡಲಾಗಿ ಲೀಲೆಯ ಪತಿಯಾದ ಪದ್ಮರಾಜನಕಡೆ ಸಹಾಯಮಾಡಲು ಪೂರ್ವದೇಶ ಗಳಿಂದ ಬಂದ ರಾಜರನ್ನು (ಹೇಳುವೆನು) ಕೇಳು.

೨೨. ಪೂರ್ವದಿಕ್ಕಿನಲ್ಲಿ ಮುಖ್ಯವಾದ ಕೋಸಲ, ಕಾಶಿ, ಮಗಧ, ಮಿಥಿಲ, ಉತ್ಕಲ ಈ ದೇಶಗಳವರೂ ಮೇಖಲರು ಕರ್ಕರು ಮುದ್ರರು ಇವರೆಲ್ಲರೂ ಯುದ್ಧ ದಲ್ಲಿ ಶೂರರಾದವರು.

೨೩. ಮುಖ್ಯ, ಹಿಮ, ರುದ್ರಮುಖ್ಯ ತಾಮ್ರಲಿಪ್ತ, ಪ್ರಾಗ್ಜ್ಯೋತಿಷ, ವಾಜಿಮುಖ, ಅಂಬಷ್ಠ, ಪುರುಷಾದಕ, ಇವರೂ

---

*ವಿದ್ಯಾಬುದ್ಧಿರ್ಬಲಂ ಶೌರ್ಯಂ ಶಸ್ತ್ರಾಣ್ಯಶ್ವಾರಥೋ ಧನುಃ ಇತಿ ದಿವ್ಯಾಷ್ಟಕಂ-ತಾ.ಪ್ರ.

ವರ್ಣಕೋಷ್ಠಾ: ಸವಿಶ್ವೋತ್ರಾ ಆಮವಿನಾನಾಶನಾಸ್ತಥಾ |
ವ್ಯಾಘ್ರವಕ್ತ್ರಾ: ಕಿರಾತಾಶ್ಚ ಸೌವೀರಾ ಏಕಪಾದಕಾ: || ೨೪ ||

ಮಾಲ್ಯವಾನ್ನಾಮ ಶೈಲೋಽತ್ರ ಶಿಬಿರಾಂಜನ ಏವ ಚ |
ವೃಷಲಧ್ವಜಪದ್ಮಾದ್ಯಾಸ್ತಥೋದಯಕರೋ ಗಿರಿ: || ೨೫ ||

ಅಥ ಪ್ರಾಗ್ದಕ್ಷಿಣಾಯಾಂ ತು ಇಮೇ ವಿಂಧ್ಯಾದಿವಾಸಿನ: |
ಚೇದಯೋ ವತ್ಸದಾಶಾರ್ಣಾ ಅಂಗವಂಗೋಪವಂಗಕಾಃ || ೨೬ ||

ಕಲಂಗಪುಂಡ್ರಜಠರಾ ವಿದರ್ಭಾ ಮೇಖಲಾಸ್ತಥಾ |
ಶಬರಾನನವರ್ಣಾಶ್ಚ ಕರ್ಣಾತ್ರಿಪುರಪೂರಕಾಃ || ೨೭ ||

ಕಂಟಕಸ್ಥಲನಾಮಾನಃ ಪೃಥಗ್ದ್ವೀಪಕಕೋಮಲಾಃ |
ಕರ್ಣಾಂಧ್ರಾಶ್ಚೌಲಿಕಾಶ್ಚೈವ ತಥಾ ಚಾರ್ಮಣ್ವತಾ ಅಪಿ || ೨೮ ||

ಕಾಕಕಾ ಹೇಮಕುಡ್ಯಾಶ್ಚ ತಥಾ ಶ್ಮಶ್ರುಧರಾ ಅಪಿ |
ಬಲಿಗ್ರೀವಮಹಾಗ್ರೀವಾಃ ಕಿಷ್ಕಿಂಧಾ ನಾಲಿಕೇರಿಣಃ || ೨೯ ||

---

೨೪. ವರ್ಣಕೋಷ್ಠ, ವಿಶ್ವೋತ್ರ, ಆಮ ವಿನಾಶನ, ವ್ಯಾಘ್ರವಕ್ತ್ರ ಕಿರಾತ, ಸೌವೀರ, ಏಕಪಾದ ಇವರೂ

೨೫. ಮಾಲ್ಯವಂತ, ಶಿಬಿರಾಂಜನ, ವೃಷಲಧ್ವಜ, ಪದ್ಮ, ಉದಯಗಿರಿ ಮೊದಲಾದ ಪರ್ವತಗಳಲ್ಲಿದ್ದವರೂ ಬಂದು ಯುದ್ಧಕ್ಕೆ ಸೇರಿದರು.

೨೬. ಆಗ್ನೇಯ ದಿಕ್ಕಿನಲ್ಲಿ ವಿಂಧ್ಯ ಮೊಲಾದ ಪರ್ವತಗಳಲ್ಲಿ ವಾಸ ಮಾಡುವ, ಚೇದಿ ವತ್ಸ ದಶಾರ್ಣ ಅಂಗ ವಂಗ ಉಪವಂಗ ಈ ದೇಶಗಳವರೂ

೨೭. ಕಳಿಂಗ ಪುಂಡ್ರ ಜಠರ ವಿದರ್ಭ ಆಮೇಖಲ ಮೊದಲಾನ ದೇಶಗಳಲ್ಲಿದ್ದವರೂ, ಶಬರಾನನವರ್ಣರೂ, ಕರ್ಣಾತ್ರಿಪುರ ಪೂರಕರೂ

೨೮. ಕಂಟಕಸ್ಥಲ ನಾಮಕರೂ, ಬೇರೆಬೇರೆ ದ್ವೀಪಗಳ ಕೋಮಲರೂ ಕರ್ಣ, ಆಂಧ್ರ, ಚೌಳಿಕ, ಚರ್ಮಣ್ವತ ಈ ದೇಶಗಳವರೂ,

೨೯. ಕಾರಕ, ಹೇಮಕುಡ್ಯ, ಶ್ಮಶ್ರುಧರರೂ ಬಲಿಗ್ರೀವ, ಮಹಾಗ್ರೀವ, ಕಿಷ್ಕಿಂಧ, ನಾಳಿಕೇರರೂ ಸೇರಿದ್ದರು.

ಅಥ ಲೀಲಾಪತೇರಸ್ಯ ದಕ್ಷಿಣಸ್ಯಾಮಿಮೇ ನೃಪಾಃ |
ವಿಂಧ್ಯೋಽಥ ಕುಸುಮಾಪೀಡೋ ಮಹೇಂದ್ರೋ ದರ್ದುರಸ್ತಥಾ ॥ ೩೦ ॥

ಮಲಯಃ ಸೂರ್ಯವಾಂಶ್ಚೈವ ಗಣಾ ರಾಜ್ಯಸಮುದ್ಧಕಾಃ |
ಅವಂತೀರಿತಿ ವಿಖ್ಯಾತಾಸ್ತಥಾ ಶಾಂಬವತೀತಿ ಚ ॥ ೩೧ ॥

ದಶಪೂರಕಥಾಚಕ್ರಾರೇಷಿಕಾತುರಕಚ್ಛಪಾಃ |
ವನವಾಸೋಪಗಿರಯಸ್ತೇ ಭದ್ರಗಿರಯಸ್ತಥಾ ॥ ೩೨ ॥

ನಾಗರಾ ದಂಡಕಾಶ್ಚೈವ ಗಣರಾಷ್ಟ್ರನೃರಾಷ್ಟ್ರಕಾ: |
ಸಾಹಾ ಶೈವಾರ್ಯ್ಯಮೂಕಾಶ್ಚ ಕರ್ಕೋಟಾ ವನಬಿಂಬಿಲಾ: ॥ ೩೩ ॥

ಪಂಪಾನಿವಾಸಿನಶ್ಚೈವ ಕೈರಕಾ: ಕರ್ಕವೀರಕಾ: |
ಸ್ವೇರಿಕಾ ಯಾಸಿಕಾಶ್ಚೈವ ಧರ್ಮಪತ್ತನಪಂಜಿಕಾ: ॥ ೩೪ ॥

---

೩೦. ಆ ಪದ್ಮನಿಗೆ ಸಹಾಯಮಾಡಲು ದಕ್ಷಿಣದಿಂದ ಬಂದ ದೊರೆಗಳನ್ನು ಕೇಳು: ವಿಂಧ್ಯ, ಕುಸುಮಾಪೀಡ, ಮಹೇಂದ್ರ, ದರ್ದುರ, ಮೊದಲಾದ ಪರ್ವತಗಳಲ್ಲಿಯೂ,

೩೧. ಮಲಯ, ಸೂರ್ಯವಂತ ಬಿಂಬ ಪರ್ವತಗಳಲ್ಲಿಯೂ ವಾಸಮಾಡುವ ರಾಜ್ಯಸಂಪನ್ನರಾದ ರಾಜರ ಸಮೂಹಗಳು, ಅವಂತಿ, ಶಾಂಬವತಿ ಎಂದು ಹೆಸರು ಪಡೆದವರೂ,

೩೨. ದಶಪೂರ, ಕಥಾಚಕ್ರ, ರೇಷಿಕ ಆತುರಕಚ್ಛಪ, ವನವಾಸ, ಉಪಗಿರಿ, ಭದ್ರಗಿರಿ, ಮೊದಲಾದ ದೇಶಗಳ ರಾಜರೂ,

೩೩. ನಾಗರ, ದಂಡಕ, ಗಣರಾಷ್ಟ್ರ, ನೃರಾಷ್ಟ್ರ, ಸಾಹಾ, ಶೈವ, ಆರ್ಯ್ಯಮೂಕ, ಕರ್ಕೋಟ, ವನಬಿಂಬಿಲ ಈ ದೇಶಗಳ ಅರಸರೂ,

೩೪. ಪಂಪಾ, ಕೈರಕ, ಕರ್ಕವೀರಕ, ಸ್ವೇರಿಕ, ಯಾಸಿಕ, ಧರ್ಮಪತ್ತನ, ಪಂಜಿಕ ಮೊದಲಾದ ದೇಶಗಳವರೂ,

ಕಾಶಿಕಾಸ್ತೃಷ್ಣಖಲ್ಲೂಲಾ ಯಾದಾಸ್ತೇ ತಾಮ್ರಪರ್ಣಕಾಃ |
ಗೋನರ್ದಾಃ ಕನಕಾಶ್ಚೈವ ದೀನಪತ್ತನನಾಮಕಾಃ || ೩೫ ||

ತಾಮ್ರಿಕಾ ದಂಭರಾಕೀರ್ಣಾಃ ಸಹಕಾರೈಣಕಾಸ್ತಥಾ |
ವೈತುಂಡಕಾಸ್ತುಂಬವನಾಲಾಜಿನದ್ವೀಪಕರ್ಣಿಕಾಃ || ೩೬ ||

ಕರ್ಣಿಕಾಭಾಶ್ಚ ಶಿಬಯಃ ಕೌಂಕಣಾಶ್ಚಿತ್ರಕೂಟಕಾಃ |
ಕರ್ಣಾಟಮುಂಟವಟಕಾ ಮಹಾಕಟಕಿಕಾಸ್ತಥಾ || ೩೭ ||

ಆಂಧ್ರಾಶ್ಚ ಕೋಲಗಿರಯಶ್ಚಾವಂತಿಕವಿಚೇರಿಕಾಃ |
ಚಂಡಾಯತ್ತಾ ದೇವನಕಾಃ ಕ್ರೌಂಚಾ ವಾಹಾಸ್ತಥೈವ ಚ || ೩೮ ||

ಶಿಲಾಕ್ಷಾರೋದಭೋನಂದ ಮರ್ದನಾ ಮಲಯಾಭಿಧಾಃ |
ತೇ ಚಿತ್ರಕೂಟಶಿಖರಾ ಲಂಕಾರಕ್ಷೋಗಣಾಃ ಸ್ಮೃತಾ: || ೩೯ ||

ಅಥ ಪ್ರತ್ಯಗ್ದಕ್ಷಿಣಸ್ಯಾಂ ಮಹಾರಾಜ್ಯಸುರಾಷ್ಟ್ರಕಾ: |
ಸಿಂಧುಸೌವೀರಶೂದ್ರಾಖ್ಯಾ ಆಭೀರಾ ದ್ರವಿಡಾಸ್ತಥಾ || ೪೦ ||

---

೩೫. ಕಾಶಿಕ, ತೃಷ್ಣಖಲ್ಲೂಲ, ಯಾದ, ತಾಮ್ರಪರ್ಣ, ಗೋನರ್ದ, ಕನಕ, ದೀನಪತ್ತನ ಮೊದಲಾದ ದೇಶಗಳವರೂ,

೩೬. ತಾಮ್ರೀಕ, ದಂಭರಾಕೀರ್ಣ, ಸಹಕ, ರೈಣಕ, ವೈತುಂಡ, ತುಂಬವನ, ಲಾಜಿನ, ದ್ವೀಪ ಕರ್ಣಿಕ ಮೊದಲಾದ ದೇಶಗಳವರೂ,

೩೭. ಕರ್ಣಿಕಾಭ, ಶಿಬಿ, ಕೊಂಕಣ, ಚಿತ್ರಕೂಟಕ, ಕರ್ಣಾಟ, ಮುಂಟವಟಕ, ಮಹಾಕಟಕಿಕ ಮೊದಲಾದ ದೇಶಗಳವರೂ,

೩೮. ಆಂಧ್ರ, ಕೋಲಗಿರಿ, ಆವಂತಿಕ, ವಿಚೇರಿಕ, ಚಂಡಾಯತ್ತ, ದೇವನಕ, ಕ್ರೌಂಚ, ವಾಹ ಮೊದಲಾದ ದೇಶಗಳವರೂ,

೩೯. ಶಿಲಾಕ್ಷಾರೋದ, ಭೋನಂದ, ಮರ್ದನ, ಮಲಯ ಈ ದೇಶಗಳವರೂ ಚಿತ್ರಕೂಟಶಿಖರದಲ್ಲಿರುವವರೂ ಲಂಕೆಯಲ್ಲಿದ್ದ ರಾಕ್ಷಸಗಣದವರೂ, (ಪದ್ಮರಾಜನಿಗೆ ಸಹಾಯಮಾಡಲು ಬಂದು ಸೇರಿದ್ದರು.)

೪೦. ನೈಋತ್ಯ ದಿಕ್ಕಿನಲ್ಲಿ ಮಹಾರಾಜ್ಯ, ಸುರಾಷ್ಟ್ರ, ಸಿಂಧು, ಸೌವೀರ, ಶೂದ್ರ, ಆಭೀರ, ದ್ರವಿಡ ದೇಶಗಳವರೂ,

ಕೀಕಟಾಃ ಸಿದ್ಧಖಂಡಾಖ್ಯಾಸ್ತಥಾ ಕಾಲಿರುಹಾ ಅಪಿ |
ಅತ್ರ ಹೇಮಗಿರಿಃ ಶೈಲಸ್ತಥಾ ರೈವತಕೋ ಗಿರಿಃ || ೪೧ ||

ಜಯಕಚ್ಛೋ ಮಯವರೋ ಯವನಾಸ್ತತ್ರ ಜಂತವಃ |
ಬಾಹ್ಲೀಕಾ ಮಾರ್ಗಣಾವಂತಾ ಧೂಮ್ರಾಸ್ತುಂಬಕನಾಮಕಾಃ || ೪೨ ||

ತಥಾ ಲಾಜಗಣಾಶ್ಚೈವ ತಥಾತ್ರ ಗಿರಿವಾಸಿನಃ |
ತತೋಽಬ್ಧಿತೋಕನಿಯುತಾ ಏತೇ ಲೀಲಾಪತೇರ್ಜನಾಃ || ೪೩ ||

ಅಥ ತತ್ಪ್ರತಿಪಕ್ಷಸ್ಥಾನಿಮಾನ್ ಜನಪದಾನ್ ಶೃಣು |
ಪಶ್ಚಿಮಾಯಾಂ ದಿಶಿ ಪ್ರೌಢಾ ಇಮೇ ತಾವನ್ಮಹಾದ್ರಯಃ || ೪೪ ||

ಮಣಿಮಾನ್ನಾಮ ಶೈಲೇಂದ್ರಃ ಕುರಾರ್ಪಣಗಿರಿಸ್ತಥಾ |
ವನೋಽರ್ಕಹೋ ಮೇಘಭವಶ್ಚಕ್ರವಾನಸ್ತಪರ್ವತಃ || ೪೫ ||

ಜನಾಃ ಪಂಚಜನಾ ನಾಮ ಕಾಶಬ್ರಹ್ಮಚಯಾಂತಕಾಃ |
ತಥೈವ ಭಾರಕ್ಷತಥಾಃ ಪಾರಕಾಃ ಶಾಂತಿಕಾಸ್ತಥಾ || ೪೬ ||

೪೧-೨ ಕೀಕಟ, ಸಿದ್ಧಖಂಡ, ಕಾಳಿರುಹ ಈ ದೇಶಗಳವರೂ, ಹೇಮಗಿರಿ, ರೈವತಕ, ಈ ಪರ್ವತಗಳಲ್ಲಿದ್ದವರೂ, ಜಯಕಚ್ಛ, ಮಯವರ, ದೇಶಗಳ ಯವನರೂ, ಬಾಹ್ಲೀಕ, ಮಾರ್ಗಣ ಆವಂತ, ಧೂಮ್ರ, ತುಂಬಕ, ಮೊದಲಾದ ದೇಶಗಳವರೂ,

೪೩. ಲಾಜಾಗಣ, ಗಿರಿ, ಅಬ್ಧಿತೋಕ, ನಿಯುತ ಈ ದೇಶಗಳವರೂ ಪದ್ಮರಾಜನನ್ನು ಸೇರಿದರು.

೪೪. ಪದ್ಮರಾಜನ ಪ್ರತಿಪಕ್ಷದಲ್ಲಿ ಇದ್ದ ದೊರೆಗಳನ್ನು ಕೇಳು ಪಶ್ಚಿಮದಲ್ಲಿ ಪ್ರಸಿದ್ಧವಾದ ಪರ್ವತಗಳು,

೪೫. ಮಣಿಮಂತ, ಕುರಾರ್ಪಣ, ವನ, ಅರ್ಕಹ ಮೇಘಭವ, ಚಕ್ರವಂತ, ಅಸ್ತಗಿರಿ ಇವು,

೪೬. ಅಲ್ಲಿಯ ಜನರು ಪಂಚಜನರು ಎಂಬುವರು ಅವರು ಕಾಶರಿಗೂ ಬ್ರಾಹ್ಮಣರಿಗೂ ಅಂತಕನಂತಿರುವವರು; ಭಾರಕ್ಷತಥ, ಪಾರಕ, ಶಾಂತಿಕ, ಮೊದಲಾದವರು,

ಶೈಬ್ಯಾರವುರಕಾಯಾಚ್ಛಾ ಗುಹುತ್ವಾ ನಿಯವಾಸ್ತಥಾ |
ಹೈಹಯಾ: ಸುಹ್ಮಗಾಯಾಶ್ಚ ತಾಜಿಕಾ ಹೂಣಕಾಸ್ತಥಾ || ೪೭ ||

ಪಾರ್ಶ್ವೇ ಕಟಕಯೋ: ಕರ್ಕಾ ಗಿರಿಪರ್ಣಾವವಾಸ್ತಥಾ |
ಸಂತ್ಯಕ್ತಧರ್ಮಮರ್ಯಾದಾಸ್ತೇ ವರ್ಣಾ ಮ್ಲೇಚ್ಛಜಾತಯ: || ೪೮ ||

ತತೋಽಜನಪದಾ ಭೂಮಿರ್ಯೋಜನಾನಾಂ ಶತದ್ವಯಂ |
ತತೋ ಮಹೇಂದ್ರಶಿಖರೀ ಮುಕ್ತಾಮಣಿಮಯಾವನಿ: || ೪೯ ||

ಯುತೇ ಮಹೀಧರಶತೈರಥಾಶ್ವೋ ನಾಮ ಪರ್ವತ: |
ತತೋ ಮಹಾರ್ಣವೋ ಭೀಮ: ಪಾರಿಯಾತ್ರಗಿರಿಸ್ತಟೇ || ೫೦ ||

ಪಶ್ಚಿಮೋತ್ತರದಿಗ್ಭಾಗೇ ದೇಶೋ ಗಿರಿಮತಿಃ ಸ್ಥಿತ: ।
ತಥಾ ವೇಣುಪತಿಶ್ಚೈವ ತತೋ ನರಪತಿರ್ಮಹೀ || ೫೧ ||

---

೪೭. ಶೈಬ್ಯಾರ, ಮರಕಾಯಚ್ಛ, ಗುಹುತ್ವ, ನಿಯವ, ಹೈಹಯ, ಸುಹ್ಮಗಾಯ, ತಾಜಿಕ, ಹೂಣಕ, ಮೊದಲಾದವರು,

೪೮. ಕರ್ಕ, ಗಿರಿಪರ್ಣ, ವವ, ಇವರು ಸೇನೆಗಳ ಪಕ್ಕದಲ್ಲಿ ನಿಂತಿರುವವರು: ಧರ್ಮಮರ್ಯಾದೆಯನ್ನು ಬಿಟ್ಟಿರುವವರು: ಮ್ಲೇಚ್ಛ ಜಾತಿಯಲ್ಲಿ ಹುಟ್ಟಿದವರು.

೪೯. ಈ ದೇಶಗಳ ಆಚೆ, ಇನ್ನೂರು ಯೋಜನದವರೆಗೂ ಜನರಹಿತವಾದ ಭೂಮಿಯು. ಅದರ ಆಚೆ ಮಹೇಂದ್ರಪರ್ವತವು. ಅಲ್ಲಿ ಭೂಮಿಯೆಲ್ಲವೂ ಮುತ್ತು ಮಣಿಗಳಿಂದ ತುಂಬಿದೆ.

೫೦. ಅದರ ಆಚೆ, ನೂರಾರು ಬೆಟ್ಟಗಳಿಂದ ಕೂಡಿದ ಅಶ್ವವೆಂಬ ಪರ್ವತವು. ಆದರ ಆಚೆ ಭಯಂಕರವಾದ ಸಮುದ್ರವು. ಅದರ ದಡದಲ್ಲಿ ಪಾರಿಯಾತ್ರವೆಂಬ ಪರ್ವತವು.

೫೧. ವಾಯುವ್ಯದಲ್ಲಿ ಗಿರಿಮತಿ ವೇಣುಪತಿ, ನರಪತಿಯೆಂಬ ದೇಶಗಳಿವೆ.*

---

* ಮಹೀ=ನಿತ್ಯೋತ್ಸವರ್ವಾ- ತಾ. ಪ್ರ.

ತಥಾ ಫಲ್ಗುಣಕಾಶ್ಚೈವ ಮಾಂಡವ್ಯಾನೇಕನೇತ್ರಕಾ: |
ಪುರುಕುಂದಾಶ್ಚ ಪಾರಾಶ್ಚ ಭಾನುಮಂಡಲಭಾವನಾ: || ೫೧ ||

ವನ್ಮಿಲಾ ನಲಿನಾ ದೀರ್ಘಾ ದೀರ್ಘಕೇಶಾಂಗಬಾಹವ: |
ರಂಗಾಶ್ಚ ಸ್ತನಿಕಾಶ್ಚಾನ್ಯಾ ಗುರುಹಾಶ್ಚಲುಹಾಸ್ತಥಾ || ೫೩ ||

ತತ: ಸ್ತ್ರೀರಾಷ್ಟ್ರಮತುಲಂ ಗೋವೃಷಾಪತ್ಯಭೋಜನಂ |
ಅಥೋತ್ತರಸ್ಯಾಂ ಹಿಮರ್ವಾ ಕ್ರೌಂಚೋऽಥ ಮಧುಮಾನ್ಗಿರಿ: || ೫೪ ||

ಕೈಲಾಸೋ ವಸುಮಾ ಮೇರುಸ್ತತ್ಪಾದೇಷು ಜನಾ ಉಭೇ |
ಮದ್ರಾವಾರೇವಯೌಧೇಯಾ ಮಾಲವಾ: ಶೂರಸೇನಿಕಾ: || ೫೫ ||

ರಾಜನ್ಯಾಶ್ಚ ತಥಾ ಜ್ಞೇಯಾ ಅರ್ಜುನಾತನಯಸ್ತಥಾ |
ತ್ರಿಗರ್ತ ಏಕಪಾತ್ಕ್ಷುದ್ರಾಮುಬಲಾಸ್ವಸ್ತವಾಸಿನ: || ೫೬ ||

ಅಬಲಾ: ಪ್ರಖಲಾ: ಶಾಕಾ: ಕ್ಷೇಮಧೂರ್ತಯ ಏವ ಚ |
ದಶಧಾನಾಗಾವಸನ್ಯದಂಡಾಹನ್ಯಸನಾಸ್ತಥಾ || ೫೭ ||

---

೫೨. ಫಲ್ಗುಣಕ, ಮಾಂಡವ್ಯ, ಅನೇಕನೇತ್ರ, ಪುರುಕುಂದ, ಪಾರ, ಈ ದೇಶದವರು ಭಾನುಮಂಡಲವನ್ನು ಭಾವಿಸುವವರು.

೫೩. ವನ್ಮಿಲ, ನಲಿನ, ಈ ದೇಶದವರು ಉದ್ದವಾದ ಕೂದಲೂ ಅಂಗಗಳೂ ಉಳ್ಳಕಾರಣ ದೀರ್ಘವೆಂದು ಹೆಸರು ಪಡೆದಿರುವರು. ರಂಗ, ಸ್ತನಿಕ, ಗುರುಹ, ಚಲುಹ ಈ ದೇಶದವರೂ ಹಾಗೆಯೇ ಇರುವರು.

೫೪. ಅಲ್ಲಿಂದ ಆಚೆ ಅನುತುಲವಾದ ಸ್ತ್ರೀರಾಷ್ಟ್ರವಿದೆ. ಅಲ್ಲಿ ಎತ್ತುಗಳನ್ನೂ ಮಕ್ಕಳನ್ನೂ ಆಹಾರವಾಗಿ ಉಪಯೋಗಿಸುತ್ತಾರೆ. ಅನಂತರ ಉತ್ತರ ದಿಕ್ಕಿನಲ್ಲಿ ಹಿಮವಂತ, ಕ್ರೌಂಚ, ಮಧುವಂತ ಮೊದಲಾದ ಪರ್ವತಗಳೂ,

೫೫. ಕೈಲಾಸ, ವಸುಮಂತ, ಮೇರು ಮೊದಲಾದ ಪರ್ವತಗಳೂ ಇವೆ. ಅವುಗಳ ಹತ್ತಿರ ವಾಸಮಾಡುವ ಜನರೂ ಬಂದಿದ್ದರು. ಮದ್ರ, ವಾರೇವ, ಯೌಧೇಯ, ಮಾಳವ, ಶೂರಸೇನ ಈ ದೇಶಗಳವರು

೫೬. ಅರ್ಜುನಾತನಯ, ತ್ರಿಗರ್ತ, ಏಕಪಾದ, ಕ್ಷುದ್ರ ಮಬಲ, ಸ್ವಸ್ತವಾಸಿ,

೫೭. ಅಬಲ, ಪ್ರಖಲ, ಶಾಕ, ಕ್ಷೇಮಧೂರ್ತಿ, ದಶಧಾನ, ಗಾವಸನ್ಯ, ದಂಡ, ಹನ್ಯಸನ,

ಧಾನದಾಃ ಸರಕಾಶ್ಚೈವ ವಾಟಧಾನಾಸ್ತಥೈವ ಚ |
ಅಂತರದ್ವೀಪಗಾಂಧಾರಾಸ್ತಥಾವಂತಿಸುರಾಸ್ತಥಾ || ೫೮ ||

ಅಥ ತಕ್ಷಶಿಲಾ ನಾಮ ತತೋ ವೀಲವಗೋಧನೀ |
ಪುಷ್ಕರಾವರ್ತದೇಶಸ್ಯ ಯಶೋವತಿಮಹೀ ತತಃ || ೫೯ ||

ತತೋ ನಾಭಿಮತಿರ್ಭೂಮಿಸ್ತಿಕ್ಷಾ ಕಾಲವರಾಸ್ತಥಾ |
ಕಾಹಕಂ ನಗರಂ ಚೈವ ಸುರಭೂತಿಪುರಂ ತಥಾ || ೬೦ ||

ತಥೈವ ರತಿಕಾದರ್ಶಾ ಅಂತರಾದರ್ಶ ಏವ ಚ |
ತತಃ ಪಿಂಗಲಪಾಂಡವ್ಯಂ ಯಾಮುನೇ ಯಾತುಧಾನಕಾಃ || ೬೧ ||

ಮಾನವಾ ನಾಂಗನಾ ಹೇಮತಾಲಾಃ ಸ್ವಸ್ವಮುಖಾಸ್ತಥಾ |
ಹಿಮವಾನ್ವಸುಮಾರ್ ಕ್ರೌಂಚಕೈಲಾಸಾವಿತ್ಯಗಾಸ್ತಥಾ || ೬೨ ||

---

೫೮. ಧಾನದ, ಸರಕ, ವಾಟಧಾನ, ಅಂತರದ್ವೀಪ, ಗಾಂಧಾರ, ಅವಂತಿಸುರ ಮೊದಲಾದ ದೇಶಗಳೂ ಇವೆ.

೫೯. ಆಮೇಲೆ ತಕ್ಷಶಿಲೆಯೆಂಬ ಪಟ್ಟಣವಿದೆ. ಅನಂತರ ವೀಲವ ಗೋಧನಿ ಎಂಬ ದೇಶಗಳಿವೆ. ಪುಷ್ಕರಾವರ್ತವೆಂಬ ದೇಶದ ಯಶಸ್ಸನ್ನು ಭೂಮಿಯು ಪಡೆದಿದೆ.

೬೦. ಅಲ್ಲಿಂದ ಆಚೆ ನಾಭಿಮತಿ ಎಂಬ ಭೂಮಿಯಿದೆ. ಅಲ್ಲಿ ತಿಕ್ಷ, ಕಾಲವರ ಎಂಬ ಜನರಿದ್ದಾರೆ. ಅನಂತರ ಕಾಹಕ, ಸುರಭೂತಿ ಎಂಬ ನಗರಗಳಿವೆ.

೬೧. ರತಿಕಾದರ್ಶ ಅಂತರಾದರ್ಶ ಎಂಬ ದೇಶಗಳೂ, ಅಲ್ಲಿಂದ ಆಚೆ ಪಿಂಗಳ ಪಾಂಡವ್ಯ, ಯಾಮು ಯಾತುಧಾನಕ ಎಂಬ ಪರ್ವತಗಳೂ,

೬೨. ಮಾನವ ನಾಂಗನ, ಹೇಮತಾಳ, ಸ್ವಸ್ವಮುಖ ಎಂಬ ಪರ್ವತಗಳಿವೆ. ಇವುಗಳಲ್ಲಿ ಹಿಮವಂತ, ವಸುಮಂತ, ಕ್ರೌಂಚ ಕೈಲಾಸ ಎಂಬ ಪರ್ವತಗಳು ಮುಖ್ಯವಾದುವು. (ಇಲ್ಲಿರುವವರೆಲ್ಲರೂ ಪದ್ಮರಾಜನ ಪ್ರತಿಪಕ್ಷಕ್ಕೆ ಸಹಾಯ ಮಾಡಲು ಬಂದಿದ್ದರು.)

ತತೋಽಜನಪದಾ ಭೂಮಿರಶೀತಿಶತಯೋಜನಾ |
ಅಥ ಪ್ರಾಗುತ್ತರಸ್ಯಾಂ ತು ಕ್ರಮಾಜ್ಜನಪದಾ೯ ಶೃಣು || ೬೩ ||

ಕಾಲುತಾ ಬ್ರಹ್ಮಪುತ್ರಾಶ್ಚ ಕುಣಿದಾಃ ಖದಿನಾಸ್ತಥಾ |
ಮಾಲವಾ ರಂಧ್ರರಾಜ್ಯಾಶ್ಚ ವನಾ ರಾಷ್ಟ್ರಾಸ್ತಥೈವ ಚ || ೬೪ ||

ಕೇಡವಸ್ತಾಃ ಸಿಂಹಪುತ್ರಾಸ್ತಥಾ ವಾಮನತಾಂ ಗತಾಃ |
ಸಾವಾಕಚ್ಚಾಪಲವಹಾಃ ಕಾಮಿರಾ ದರದಾಸ್ತಥಾ || ೬೫ ||

ಅಭಿಸಾಸದಜಾರ್ವಾಕಾಃ ಪಲೋಲಕುವಿಕೌತುಕಾಃ |
ಕಿರಾತಾ ಯಾಮುಪಾತಾಶ್ಚ ದೇನಾಃ ಸ್ವರ್ಣಮಹೀ ತತಃ || ೬೬ ||

ದೇವಸ್ಥಲೋಪವನಭೂಸ್ತದನೂದಿತ ಶ್ರೀ-
ರ್ವಿಶ್ವಾವಸೋಸ್ತದನು ಮಂದಿರಮುತ್ತಮಂ ಚ |

---

೬೩. ಅಲ್ಲಿಂದಾಚೆಗೆ ಇರುವ ಎಂಭತ್ತು ಸಾವಿರ ಯೋಜನ ಭೂಮಿಯಲ್ಲಿ ಜನರಿಲ್ಲ. ಈಶಾನ್ಯದಿಕ್ಕಿನಲ್ಲಿ ಇರುವ ದೇಶಗಳನ್ನು ಕೇಳು.

೬೪. ಕಾಲುತ,ಬ್ರಹ್ಮಪುತ್ರ, ಕುಣಿದ, ಖದಿನ, ಮಾಳವ ರಂಧ್ರರಾಜ್ಯ, ವನರಾಷ್ಟ್ರ ಮೊದಲಾದ ದೇಶಗಳು.

೬೫. ಕೇಡವಸ್ತ, ಸಿಂಹಪುತ್ರ, ಮತ್ತು ಕುಳ್ಳರಾದ ಸಾವ, ಕಚ್ಚಾಪಲವಹ, ಕಾಮಿರ, ಸರದ,

೬೬. ಅಭಿಸಾಸದ, ಜಾರ್ವಾಕ, ಪಲೋಲುಕ, ವಿಕೌತುಕ, ಕಿರಾತ, ಯಾಮುಪಾತ, ದೀನ ಈ ದೇಶಗಳು ಇವೆ, ಅಲ್ಲಿಂದ ಆಚೆಗೆ ಚಿನ್ನದ ಭೂಮಿಯಿದೆ.

೬೭. ಅದರ ಆಚೆ, ಕಾಂತಿಮಯುವಾದ ಸ್ವರ್ಗದ ಉಪವನ ಭೂಮಿಯಿದೆ. ಅನಂತರ ವಿಶ್ವಾವಸುವಿನ ಉತ್ತಮವಾದ ಮಂದಿರವಿದೆ. ಆಮೇಲೆ ಕೈಲಾಸ

ಕೈಲಾಸಭೂಸ್ತದನು ಮಂಜುವನಶ್ಚ ಶೈಲೋ
ವಿದ್ಯಾಧರಾಮರವಿಮಾನಸಮಾನಭೂಮಿಃ || ೬೭ ||

ಇತ್ಯಾರ್ಷೇ ಶ್ರೀವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಉತ್ಪತ್ತಿಪ್ರಕರಣೇ
"ಜನಪದವರ್ಣನಂ" ನಾಮ ಷಟ್‌ತ್ರಿಂಶಃ ಸರ್ಗಃ

ಪರ್ವತ ಭೂಮಿಯೂ ಮಂಜುವನವೆಂಬ ಪರ್ವತವೂ ಇವೆ. ಇದರ ಭೂಮಿ ದೇವ ವಿದ್ಯಾಧರ ವಿಮಾನಗಳಿಗೆ ಸಮಾನವಾಗಿದೆ. (ಈ ಪ್ರದೇಶಗಳಲ್ಲಿದ್ದವರೆಲ್ಲ ಪದ್ಮರಾಜನ ಪ್ರತಿಪಕ್ಷದ ಸಹಾಯಕ್ಕಾಗಿ ಬಂದಿದ್ದರು.)

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಜನಪದ ವರ್ಣನ" ಎಂಬ ಮೂವತ್ತಾರನೆಯ ಸರ್ಗ.

ಸಪ್ತತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ರಣೇ ರಭಸನಿರ್ಲೂನನರವಾರಣದಾರುಣೇ ।
ಅಹಂಪೂರ್ವಮಹಂಪೂರ್ವಮಿತಿ ವೃಂದಾನುಪಾತಿನಿ ॥ ೧ ॥

ಏತೇ ಚಾನ್ಯೇ ಚ ಬಹವಸ್ತತ್ರ ಭಸ್ಮತ್ವಮಾಗತಾಃ ।
ಪ್ರವಿಶಂತಃ ಪ್ರಯತ್ನೇನ ಶಲಭಾ ಇವ ಪಾವಕೇ ॥ ೨ ॥

ಅತ್ರಾನ್ಯೇ ಮಧ್ಯದೇಶೀಯಾ ಜನಾ ನೋದಾಹೃತಾ ಮಯಾ ।
ತಾನಿಮಾನ್ ಶೃಣು ವಕ್ಷ್ಯಾಮಿ ಪಕ್ಷಾಂಲ್ಲೀಲಾಮಹೀಭೃತಃ ॥ ೩ ॥

ತದ್ದೇಹಿಕಾಃ ಶೂರಸೇನಾ ಗುಡಾ ಅಶ್ವೌಘನಾಯಕಾಃ ।
ಉತ್ತಮಜ್ಯೋತಿಭದ್ರಾಣಿ ಮದಮಧ್ಯಮಿಕಾದಯಃ ॥ ೪ ॥

ಸಾಲೂಕಾಕೋದ್ಯಮಾಲಾಸ್ಯಾ ದೌಜ್ಞೇಯಾಃ ಪಿಪ್ಪಲಾಯನಾಃ ।
ಮಾಂಡವ್ಯಾಃ ಪಾಂಡುನಗರಾಃ ಸೌಗ್ರೀವಾದ್ಯಾ ಗುರುಗ್ರಹಾಃ ॥ ೫ ॥

ಮೂವತ್ತೇಳನೆಯ ಸರ್ಗ

೧-೨. ಶ್ರೀವಸಿಷ್ಠನು ಹೇಳಿದನು :—ನರವಾರಣಗಳೆಲ್ಲ ಬಹು ರಭಸವಾಗಿ ಕತ್ತರಿಸಿ ಬೀಳುತ್ತಿದ್ದ ಆ ಯುದ್ಧದಲ್ಲಿ ನಾನು ಮುಂದು ನಾನು ಮುಂದು ಎಂದು ಎಲ್ಲರೂ ಗುಂಪು ಗುಂಪಾಗಿ ಬಂದು ಬೀಳುತ್ತಿದ್ದರು. ಬೇಕೆಂದು ಬಂದು ಬೆಂಕಿಯಲ್ಲಿ ಬಿದ್ದು ಪ್ರಾಣಬಿಡುವ ಶಲಭಗಳ ಹಾಗೆ ಇವರು ಅವರು ಎಲ್ಲರೂ ಬಂದು ಭಸ್ಮವಾಗುತ್ತಿದ್ದರು.

೩. ಈ ಸಂದರ್ಭದಲ್ಲಿ ಮಧ್ಯದೇಶದ ಜನರನ್ನು ನಾನು ಹೇಳಲಿಲ್ಲ. ಅವರೆಲ್ಲರೂ ಲೀಲಾನಾಥನ ಪಕ್ಷದವರು. ಅವರನ್ನು ಕುರಿತು ಹೇಳುವೆನು ಕೇಳು.

೪–೭. ದೇಹಿಕರು, ಶೂರಸೇನರು, ಅಶ್ವಸೇನೆಯುಳ್ಳ ಗೌಡರು, ಉತ್ತಮ ಜ್ಯೋತಿಭದ್ರರು, ಮದಮಧ್ಯಮಕರು, ಸಾಲೂಕರು, ಅಕೋದ್ಯಮರು,

ಪಾರಿಯಾತ್ರಾಃ ಕುರಾಷ್ಟ್ರಾಶ್ಚ ಯಾಮುನೋದುಂಬರಾ ಅಪಿ |
ರಾಜ್ಯಾಹ್ವಾ ಉಜ್ಜಿಹಾನಾಶ್ಚ ಕಾಲಕೋಟಿಕಮಾಥುರಾಃ || ೬ ||

ಪಾಂಚಾಲಾ ಧರ್ಮಾರಣ್ಯಾಶ್ಚ ತಥೈವೋತ್ತರದಕ್ಷಿಣಾಃ |
ಪಾಂಚಾಲಕಾಃ ಕುರುಕ್ಷೇತ್ರಾಸ್ತಥಾ ಸಾರಸ್ವತಾ ಜನಾಃ || ೭ ||

ಅವಂತೀಸ್ಯಂದನಶ್ರೇಣೀ ಕುಂತಿಪಾಂಚನದೇರಿತೈಃ |
ಸ್ಪಂದಮಾನಾ ವಿದ್ರವಂತೀ ನಿಪಪಾತ ಮಹಾಭೃಗೌ || ೮ ||

ಕೋಶಬ್ರಹ್ಮಾವಸಾನಾಶ್ಚ ಚ್ಛಿನ್ನಾ ವಸ್ತ್ರವತೀಜನೈಃ |
ಭೂಮೌ ನಿಪತಿತಾಃ ಸಂತೋ ಮಿಲಿತಾ ಮತ್ತವಾರಣೈಃ || ೯ ||

ಶೂರಾ ದಾಶಪುರಾಃ ಶಸ್ತ್ರನಿಕೃತ್ತೋದರಕಂಧರಾಃ |
ಬಾಣಕ್ಷಿತಿಭಿರಾಕ್ರಮ್ಯ ಯೋಜಿತಾ ಯೋಜನೇ ಹ್ರದೇ || ೧೦ ||

ದೀರ್ಣೋದರವಿನಿರ್ಯಾತಸ್ವಾಂತ್ರತಂತ್ರೀನಿಯಂತ್ರಿತಾಃ |
ಶಾಂತಿಕಾಃ ಶಾಂತಸಂಚಾರಾಃ ಪಿಶಾಚೈಶ್ಚರ್ವಿತಾ ನಿಶಿ || ೧೧ ||

ಉದ್ರವೈರ್ಭದ್ರಗಿರಿಭಿಃ ಸಂಗ್ರಾಮಾಧ್ವರದೀಕ್ಷಿತೈಃ |
ಕ್ಷೋಣಿಗರ್ತೇಷು ನಿಕ್ಷಿಪ್ತಾ ಮರಗಾಃ ಕಮಠಾ ಇವ || ೧೨ ||

ಲಾಸ್ಯರು, ದೌರ್ಜ್ಞೇಯರು, ಪಿಪ್ಪಲಾಯನರು, ಮಾಂಡವ್ಯರು, ಪಾಂಡುನಗರದವರು, ಸೌಗ್ರೀವಾದ್ಯರು, ಗುರುಗ್ರಹರು, ಪಾರಿಯಾತ್ರರು, ಕುರಾಷ್ಟ್ರರು, ಯಾಮುನರು, ಉದುಂಬರರು, ರಾಜ್ಯಾಹ್ವರು, ಉಜ್ಜಿಹಾನರು, ಕಾಲಕೋಟಿಕರು, ಮಾಥುರರು, ಪಾಂಚಾಲರು, ಧರ್ಮಾರಣ್ಯರು, ಉತ್ತರ ಪಾಂಚಾಲರು, ದಕ್ಷಿಣ ಪಾಂಚಾಲರು, ಕುರುಕ್ಷೇತ್ರರು, ಸಾರಸ್ವತರು,

೮–೧೩. ಅವಂತಿಯವರ ರಥಶ್ರೇಣಿಗಳಿಗೂ, ಕುಂತಿಗಳು ಪಾಂಚನದರು ಇವರ ಆಯುಧಗಳಿಗೂ ಹೆದರಿ ಓಡಿಹೋಗಿ ಮಹಾಭೃಗುವಿನಲ್ಲಿ ಬಿದ್ದು ಹೋದರು. ಕೋಶಬ್ರಹ್ಮಾವಸಾನರೆಲ್ಲರೂ ವಸ್ತ್ರವತೀ ಜನಗಳಿಂದ ಭಿನ್ನಭಿನ್ನರಾಗಿ ನೆಲದಲ್ಲಿ ಬಿದ್ದು, ಮತ್ತವಾರಣಗಳ ತುಳಿತಕ್ಕೆ ಗುರಿಯಾದರು. ಬಾಣಕ್ಷಿತಿಗಳು ಶೂರರಾದ ದಾಶಪುರದವರನ್ನು ಶಸ್ತ್ರಗಳಿಂದ ಉದರ ಕಂಧರಗಳಲ್ಲಿ ಹೊಡೆದು ಸೋಲಿಸಿ ಒಂದು ಯೋಜನ ದೂರ ಓಡಿಸಿಕೊಂಡು ಹೋಗಿ ಮಡುವಿನಲ್ಲಿ ನೂಕಿದರು. ಸೀಳಿದ ಹೊಟ್ಟೆಯಿಂದ ಕರುಳೆಲ್ಲ ಹೊರಬಿದ್ದು ಮೇಲಕ್ಕೇಳಲಾರದೆ ಬಿದ್ದಿದ್ದ ಶಾಂತಿಕರು ರಾತ್ರಿಯಲ್ಲಿ ಪಿಶಾಚಗಳಿಗೆ ತುತ್ತಾದರು.

ಪ್ರದ್ರುತಾ ವಿದ್ರವದ್ರಕ್ತಾ ವಿದ್ರಾವಿತಮಹಾರಯಃ |
ದಂಡಿಕಾಸ್ಥಾನಿಲೋದ್ಧೂತಾ ಹೈಹಯೈರ್ಹರಿಣಾ ಇವ || ೧೩ ||

ದಂತಿದಂತವಿನಿರ್ಭಿನ್ನಾ ದರದಾ ದಲಿತಾರಯಃ |
ನೀತಾ ರಕ್ತಮಹಾನದ್ಯಾ ದ್ರುಮಾಣಾಂ ಪಲ್ಲವಾ ಇವ || ೧೪ ||

ನಾರಾಚೈಶ್ಚರ್ವಿತಾಶ್ಚೀನಾ ಜೀರ್ಣಾ ಜರ್ಜರಜೀವಿತಾಃ |
ಜಹುರ್ಜಲನಿಧೌ ದೇಹಾನ್ ಭಾರಭೂತಾನಿವ ಸ್ಥಿತಾನ್ || ೧೫ ||

ಕರ್ಣಾಟಸುಭಟೋಡ್ಡೀನ ಕುಂತಾಕಲಿತಕಂಧರಾಃ |
ಭಗ್ನಾ ನಲದಶೂರಾಶ್ಚ ತಾರಕಾನಿಕರಾ ಇವ || ೧೬ ||

ಕರೀಂದ್ರಮಕರವ್ಯೂಹರಂಹಃಸಂಹತಹೇತಯಃ |
ಕೇಶಾಕೇಶಿಕೃತಾರಂಭಾ ವಿನೇದುರ್ದಾಶಕಾಃ ಶಕಾಃ || ೧೭ ||

ದಶಾರ್ಣಾಃ ಪಾಶನಿರ್ಮುಕ್ತಶೃಂಖಲಾ ಜಾಲಭೀರವಃ |
ನಿಲೀನಾ ರಕ್ತಜಂಬಾಲೇ ವೈತಸಾಸ್ತಿಮಯೋ ಯಥಾ || ೧೮ ||

ವೇಗಶಾಲಿಗಳೂ ಸಂಗ್ರಾಮ ಯಜ್ಞದೀಕ್ಷಿತರೂ ಆದ ಭದ್ರಗಿರಿಗಳು ಮರಗರನ್ನು ಆನೆಗಳಂತೆ ಹಳ್ಳಗಳಲ್ಲಿ ಹೂತರು. ಹೈಹಯರು ದಂಡಿಕರನ್ನು ರಕ್ತವನ್ನು ಕಾರಿಸುತ್ತ, ಗಾಳಿಯು ಜಿಂಕೆಗಳನ್ನು ಓಡಿಸುವಹಾಗೆ ಓಡಿಸಿಕೊಂಡು ಹೋದರು.

೧೪–೫. ದರದರು, ದಂತಿದಂತಗಳಿಗೆ ಸಿಕ್ಕಿ ಚೂರಾಚೂರಾಗಿ, ಶತ್ರುಗಳಿಗೆ ಸೋತು, ಮರಗಳ ಚಿಗುರುಗಳಂತೆ ರಕ್ತಮಹಾನದಿಯಲ್ಲಿ ಕೊಚ್ಚಿಹೋದರು. ಚೀನರು ಬಾಣಗಳಿಗೆ ಬಲಿಯಾಗಿ ಜೀರ್ಣರಾಗಿ ಜರ್ಜರ ಜೀವಿತರಾಗಿ, ಭೂಮಿಗೆ ಭಾರವಾಗಿದ್ದ ತಮ್ಮ ದೇಹಗಳನ್ನು ಜಲನಿಧಿಯಲ್ಲಿ ಹಾಕಿದರು.

೧೬. ಕರ್ಣಾಟ ಸುಭಟರು ತಮ್ಮ ಕುಂತಾಯುಧಗಳಿಂದ ನಲದ ಶೂರರ ಕಂಧರಗಳನ್ನು ಉದುರುವ ನಕ್ಷತ್ರಗಳ ಹಾಗೆ ಮಾಡಿ ಮುರಿದರು.

೧೭–೮. ದಾಶಕರೂ ಶಕರೂ ಆನೆಗಳೂ ಮೊಸಳೆಗಳೂ ಹೊಡೆದಾಡುವಂತೆ ಆಯುಧ ಯುದ್ಧಗಳನ್ನೂ ಕೇಶಾಕೇಶಿಯನ್ನೂ ಮಾಡುತ್ತ ಮಹಾ ಕೋಲಾಹಲಮಾಡಿದರು. ದಶಾರ್ಣರು ಪಾಶರಿಂದ ತಪ್ಪಿಸಿಕೊಂಡ ಜಾಲರಿಗೆ

ಗುರ್ಜರಾನೀಕನಾಶೇನ ಗುರ್ಜರೀಕೇಶಲುಂಚನಂ |
ವಿಹಿತಂ ತಂಗಣೋತ್ತುಂಗನಾಸಿಶಂಕುಶತ್ಯೈ ರಣೇ || ೧೯ ||

ಸಿಷಿಚುಃ ಶಸ್ತ್ರಕಣೌಘಾದ್ಬಿಂದುಭ್ಯೋ ನಿಗಡಾ ಗುಹಾನ್ |
ಶರಧಾರಾವನಾನೀವ ವೀರಹೇತಿಪ್ರಭಾಂಬುದಾಃ || ೨೦ ||

ಭುಶುಂಡೀಮಂಡಲೋದ್ಯೋತಶ್ಯಾಮಾರ್ಕೋತ್ಪಾತಭೀರುಷು |
ಆಭೀರೇಷ್ವರಯಃ ಪೇತುರ್ಗೋಗಣಾ ಹರಿತೇಷ್ವಿವ || ೨೧ ||

ಕಾಂತಕಾಂಚನಕಾಂತಾಸೀತ್ ತಾಮ್ರಸಂಗಾಮವಾಹಿನೀ |
ಭುಕ್ತಾ ಗೌಡಭಟೇನಾಂಗನಖಕೇಶನಿಕರ್ಷಣೈಃ || ೨೨ ||

ರಣೇ ನಗನಯಾಸಂಖ್ಯಕವಚ್ಚಕ್ರನಿಕೃಂತನೈಃ |
ತಂಗಣಾಃ ಕಣಶಃ ಕೀರ್ಣಾಃ ಕಂಕಗೃಧ್ರೇಷುಭಾಸಕೈಃ || ೨೩ ||

ಲಗುಡಾಲೋಡನೋಡ್ಡೀನಂ ಗೌಡಂ ಗುಡುಗುಡಾರವಂ |
ಶ್ರುತ್ವಾ ಗಾಂಧಾರಗಾವೋಗ್ರೇ ದುದ್ರುವುರ್ದ್ರವಿಡಾ ಇವ || ೨೪ ||

ಹೆದರಿ- ಹುಲ್ಲಿನಲ್ಲಿ ಸಿಕ್ಕಿದ ಮೀನುಗಳಂತೆ ರಕ್ತಪಂಕದಲ್ಲಿ ಮುಳುಗಿ ಹೋದರು. ಗುರ್ಜರ ಸೇನೆಯನ್ನು ನಾಶಮಾಡಿ, ತಂಗಣರು ಖಡ್ಗಶಂಕುಗಳಿಂದ ಗುರ್ಜರೀ ಕೇಶ ಲುಂಛನವನ್ನು ಮಾಡಿದರು.

೧೯–೨೨. ಮೋಡಗಳು ಜಲಧಾರೆಗಳಿಂದ ವನಗಳನ್ನು ಹೇಗೋ ಹಾಗೆ, ವೀರರಾದ ನಿಗಡರು ಆಯುಧಗಳನ್ನು ಝಳಪಿಸುತ್ತ, ಎತ್ತಿದ ಆಯುಧಗಳೆಂಬ ಜಲಬಿಂದುಗಳಿಂದ ಗುಹರಿಗೆ ಅಭಿಷೇಕಮಾಡಿದರು. ಹುಲ್ಲುಗಾವಲಿಗೆ ನುಗ್ಗುವ ಹಸುಗಳಂತೆ, ಶತ್ರುಗಳು, ಭುಶುಂಡೀಮಂಡಲದ ಕಾಂತಿಗಳಿಂದ ಸೂರ್ಯನು ಕಪ್ಪಗಾಗಿರುವ ಉತ್ಪಾತಕ್ಕೆ ಹೆದರಿರುವ ಆಭೀರರ ಮೇಲೆ ಬಿದ್ದರು. ಸೊಗಸಾದ ಚಿನ್ನದ ಬಣ್ಣದಿಂದ ಮೆರೆಯುತ್ತ, ತಾಮ್ರ ದೇಶದ ಸಂಗ್ರಾಮವಾಹಿನಿಯೆಂಬ (ನಾಯಿಕೆ) ಯು ಗೌಡಭಟ (ರೆಂಬ ನಾಯಕ)ರಿಂದ ನಖ, ಕೇಶ, ನಿಕರ್ಷಣ ಪೂರ್ವಕವಾಗಿ ಭುಕ್ತಳಾದಳು.

೨೩–೨೪. ಅಸಂಖ್ಯ ವೃಕ್ಷ ಶೈಲಗಳನ್ನೂ ಧ್ವಂಸಮಾಡಬಲ್ಲ ಮೊರೆಯು ತ್ತಿರುವ ಚಕ್ರಗಳ ಕತ್ತರಿಸುವಿಕೆಯಿಂದಲೂ, ಕಂಕ,ಗೃಧ್ರಗಳಂತಿರುವ ಬಾಣಗಳ ಹೊಡೆತದಿಂದಲೂ ಭಾಸಕರು ತಂಗಣರನ್ನು ಕಣಕಣವಾಗಿ ಮಾಡಿದರು. ಲಗುಡ ವನ್ನು ತಿರುಗಿಸುತ್ತಾ ಗೌಡರು ಗುಡುಗುಡು ಎಂದು ಗುಡುಗುತ್ತ ಬರಲು ಅದನ್ನು

ಆಕಾಶಗಾರ್ಣವಪ್ರಖ್ಯೋ ವಹಚ್ಛಕಕದಂಬಕಃ |
ಅಕರೋತ್ಪಾರಸೀಕಾನಾಂ ಘನನೈಶತಮೋಭ್ರಮಂ || ೨೫ ||

ಮಂದರಾಹನನೋಡ್ಡೀನ ಸ್ವಚ್ಛಕ್ಷೀರಾರ್ಣವೋದರೇ |
ವನಾನೀವಾಯುಧಾನ್ಯಾರ್ಸ ಶತ್ರುಪ್ರಾಲೇಯಸಾನುನಿ || ೨೬ ||

ಯದಂಬುದೈರಿವೋಡ್ಡೀನಂ ಶಸ್ತ್ರವೃಂದೈರ್ನಭೋಂಗಣೇ |
ತದ್ದೃಷ್ಟಂ ವೀಚಿವಲಸ್ಯೈರ್ಲೋಲೈಃ ಪ್ಲುತಮಿವಾರ್ಣವೇ || ೨೭ ||

ಶತಚಂದ್ರಂ ಸಿತಚ್ಛತ್ರೈಃ ಶರೈಃ ಶಲಭನಿರ್ಭರಂ |
ಶಕ್ತಿಭಿಃ ಕಿಲ ನೀರಂಧ್ರಂ ದೃಷ್ಟಮಾಕಾಶಕಾನನಂ || ೨೮ ||

ವೀರಾಸವಸಮಾಕ್ರಂದಕಾರಿಣಃ ಕೇಕಯೈಃ ಕೃತಾಃ |
ಕಂಕೈಃ ಕಂಕಕುಲಾಕ್ರಾಂತವ್ಯೋಮೋದ್ಧೂಲಿತಮಸ್ತಕಾಃ || ೨೯ ||

ಕಿರಾತಸೈನ್ಯಕನ್ಯಾನಾಂ ಕಾಮಂ ಕಲಕಲಾರವೈಃ |
ಅಂಗೈರನಂಗತಾಂ ನೀತ್ವಾ ಭೈರವೈರಿವ ಗರ್ಜಿತಂ || ೩೦ ||

ಕೇಳಿಯೇ ಗಾಂಧಾರ ಪಶುಗಳು ದ್ರವಿಡರಂತೆ ಓಡಿಹೋದುವು. ಗಂಗಾ ಸಾಗರದಂತೆ ನುಗ್ಗಿ ಬರುವ ಶಕರ ಗುಂಪುಗಳು ಪಾರಸಿಕರಿಗೆ ದಟ್ಟವಾದ ರಾತ್ರಿಯ ಕತ್ತಲು ಕವಿಯಿತೊ ಎಂಬ ಭ್ರಾಂತಿಯನ್ನು ಹುಟ್ಟಿಸಿತು.

೨೬–೨೮. ಸ್ವಚ್ಛವಾದ ಕ್ಷೀರಾರ್ಣವದ ನಡುವಿರುವ ಮಂದರ ಪರ್ವತದ ಮೇಲಿರುವ ವನಗಳೋ ಎಂಬಂತೆ, ಶತ್ರುಗಳೆಂಬ ಹಿಮವತ್ಪರ್ವತದ ಮೇಲೆ ಹೊಡೆದ ಆಯುಧಗಳು ಮೆರೆದುವು. ಆಯುಧ ಬೃಂದಗಳು ಮೇಘಗಳಂತೆ ಮೇಲಕ್ಕೆ ಹಾರಲು, ಕುಣಿಯುತ್ತಿರುವ ಅಲೆಗಳಿಂದ ಕ್ಷುಬ್ಧವಾದ ಸಮುದ್ರವೋ ಎಂಬಂತೆ ಕಾಣುತ್ತಿತ್ತು. ಆ ಸೇನಾಸ್ಕಂಧವು ಬಿಳಿಯ ಕೊಡೆಗಳೆಂಬ ನೂರಾರು ಚಂದ್ರರಿಂದಲೂ, ನಿಬಿಡವಾಗಿರುವ ಶಾರಗಳೆಂಬ ಶಲಭಗಳಿಂದಲೂ, ಶಕ್ತಿಗಳಿಂದಲೂ ತುಂಬಿಹೋಗಿ ಆಕಾಶಕಾನನದಂತಿತ್ತು.

೨೯–೩೧. ಕೇಕಯರು ಶತ್ರುಗಳು ವೀರಯೋಗ್ಯವಾದ ಪಾನಮಾಡಿದ್ದರೂ ಅಳುವಂತೆ ಮಾಡಿದರು. ಕಂಕರು, ಕಂಕ (ಪಕ್ಷಿ) ಗಳ ಸಾಲುಗಳು ಆಕಾಶದಿಂದ ಶತ್ರುಗಳ ತಲೆಯ ಮೇಲೆ ಇಳಿಯುವಂತೆ ಮಾಡಿದರು. ಕಿರಾತ ಸೈನ್ಯವೆಂಬ ಕನ್ಯೆಯರ ಯಥೇಚ್ಛ ಕಲಕಲದಿಂದಲೂ, ಅಂಗರ ಭಯಂಕರ ಗರ್ಜಿತ

ಕಾಶ್ಯೈಸ್ತದ್ದೇಹಕಾ: ಕ್ರಾಂತಾ ಅದೃಶ್ಯೈರ್ಮಾಯಯಾ ಖಗೈ: |
ನಿರ್ಧೂತಪಕ್ಷೈ: ಕ್ಷುಭಿತೈ: ಪವನೈರಿವ ಪಾಂಸವ: || ೩೧ ||

ಉನ್ಮತ್ತಾ: ಸುವಿನಿರ್ಧೂತಾಸ್ತ್ಯಕ್ತಹೇತಿರಣಾಂಬರಾ: |
ನಾರ್ಮದಾ ನರ್ಮನಿರ್ಮಾತ್ಯ ನನೃತುರ್ಜಹಸುರ್ಜಗು: || ೩೨ ||

ಪ್ರಕ್ವಣತ್ಕಿಂಕಿಣೀಜಾಲಂ ಶಕ್ತಿವರ್ಷಮುಪಾಗತಂ |
ಸಾಲ್ವಬಾಣಾನಿಲೋದ್ಧೂತಮಗಮತ್ಪೃಷದಾಕೃತಿಂ || ೩೩ ||

ಶೈಬ್ಯಾಸ್ತು ಖಂಡಿತಾ: ಕೌಂತೈರ್ಭ್ರಮತ್ಕುಂತೈರ್ವಿಘಟ್ಟಿತಾ: |
ಶವೀಭೂತಾ ದಿವಂ ನೀತಾ ದೃಷ್ಟಾ ವಿದ್ಯಾಧರಾ ಇವ || ೩೪ ||

ಧರಾಧರಣಧರ್ಮಿಣ್ಯಾ ಧೀರಯಾऽ ಹೀನಸೇನಯಾ |
ಲುಂಠಿತಾ: ಪಾಂಡುನಗರಾಶ್ಚಲನೋಲ್ಲಾಸಮಾತ್ರತ: || ೩೫ ||

ತಂ ದೇಹಕಾ: ಪಾಂಚನದೈರ್ದಲಿತಾ ಮತ್ತಕಾಶಿಭಿ: |
ಕುಂತದಂತದ್ರುಮೋದ್ದಾಮಾ ನಗಾ ಇವ ಮತಂಗಜೈ: || ೩೬ ||

ಗಳಿಂದಲೂ ಶತ್ರುಗಳು ಅಸಂಗತ್ವವನ್ನು ಹೊಂದಿದರು. ದೇಹಕರನ್ನು ಅದೃಶ್ಯರಾಗಿ ಮಾಯಾ ಪಕ್ಷಿಗಳಾಗಿ ರೆಕ್ಕೆ ಬಡಿಯುತ್ತ, ಮೇಲೆ ಬಿದ್ದು ಕಾಶರು, ಧೂಳಿಗಳನ್ನು ಗಾಳಿಗಳು ಮುತ್ತುವಂತೆ ಮುತ್ತಿದರು.

೩೨–೩೪. ನಾರ್ಮದರು ಆಯುಧಗಳನ್ನೂ ರಣಾಂಬರಗಳನ್ನೂ ಬಿಟ್ಟು ಸ್ನಾನಾದಿಗಳಿಂದ ಅಲಂಕೃತರಾಗಿ, ಪಾನದಿಂದ ಉನ್ಮತ್ತರಾಗಿ, ಕ್ರೀಡಾಪರರಾಗಿ, ಕುಣಿದರು; ನಕ್ಕರು; ಹಾಡಿದರು. ಚೆನ್ನಾಗಿ ನುಡಿಯುತ್ತಿರುವ ಕಿರುಗಂಟೆಗಳುಳ್ಳ ಶಕ್ತಿಗಳನ್ನು ಸಾಲ್ವರು ತಮ್ಮ ಬಾಣಗಳಿಂದ ಮಳೆಗರೆದರು. ಅವೆಲ್ಲವೂ ಗುಂಡುಗುಂಡಾಗಿ ನಿಂತುವು. ಶೈಬ್ಯರನ್ನು ಕೌಂತರು ಖಂಡಿಸಿದರು: ಕುಂತಗಳನ್ನು ಗರ್ರನೆ ತಿರುಗಿಸಿ ಬಡಿದರು: ಕೊಂದು ಸ್ವರ್ಗಕ್ಕೆ ಕಳುಹಿಸಿದರು: ಅವರು ಅಲ್ಲಿ ವಿದ್ಯಾಧರರಂತೆ ಕಂಡರು.

೩೫–೩೬. ಅಹೀನರು ಭೂಮಿಯನ್ನೆಲ್ಲ ಕಾಪಾಡಬಲ್ಲ ತಮ್ಮ ಸೇನೆಯನ್ನು ಮುಂದಕ್ಕೆ ನಡೆಸಿದ ಮಾತ್ರದಿಂದಲೇ ಪಾಂಡುನಗರದವರು ನೆಲದ ಮೇಲೆ ಬಿದ್ದು ಹೊರಳಾಡಿದರು. ಮತ್ತಕಾಶಿಗಳಾದ ಪಾಂಚನದರು ದೇಹಕರನ್ನು ಕುಂತಗಳಿಂದ ದಂತ ದ್ರುಮಗಳನ್ನು ಆನೆಗಳು ಮುರಿಯುವಂತೆ ಮುರಿದರು.

ಬ್ರಹ್ಮಾವತ್ಸನಕಾ ನೀಪೈಶ್ಚಕ್ರೈ: ಕೃತ್ತ್ವಾ ಗತಾ ಮಹೀಂ |
ಸಹಯಾ: ಕ್ರಕಚೋತ್ಕೃತ್ತಾ ವೃಕ್ಷಾ: ಕುಸುಮಿತಾ ಇವ || ೩೭ ||

ಶ್ವೇತಕಾಕಾನನಂ ಲೂನಂ ಕುಠಾರೈರ್ಜಠರೇರಿತೈ: |
ಏತದ್ದದಾಹ ಪಾರ್ಶ್ವಸ್ಥೋ ಭದ್ರೇಶ: ಶರವಹ್ನಿನಾ || ೩೮ ||

ಕಾಷ್ಠಯೋಧೇ ನಿರಾಲಾನಂ ಮಗ್ನಾ ಜೀರ್ಣಾ ಮತಂಗಜಾ: |
ಲಯಮಾಜಗ್ಮುರಾಯುದ್ಧಮಿದ್ಧೇಗ್ನಾವಿಂಧನಂ ಯಥಾ || ೩೯ ||

ಮಿತ್ರಗರ್ತಾಸ್ತ್ರಿಗರ್ತಾತ್ತಾ ಭ್ರಮಿತ್ವೋರ್ಧ್ವಂ ತೃಣೋಪಮಂ |
ವಿವಿಶುರ್ವ್ಯಸ್ತಮೂರ್ಧಾನ: ಪಾತಾಲಾಂತಂ ಪಲಾಯಿತುಂ || ೪೦ ||

ಮಂದಾನಿಲಚಲಾಂಭೋಧಿಭಾಸುರೇ ಮಾಗಧೇ ಬಲೇ |
ನಿರ್ಮಗ್ನಾ ವನಿಲಾ ಮಂದಾ: ಪಂಕೇ ಜೀರ್ಣಗಜಾ ಇವ || ೪೧ ||

ಚೇದಯಶ್ಚೇತನಾಂ ಜಹ್ರುಸ್ತಂಗಣಾನಾಂ ರಣಾಂಗಣೇ |
ಪುಷ್ಪಾಣಾಂ ಪಥಿ ಶೀರ್ಣಾನಾಂ ಸೌಕುಮಾರ್ಯಮಿನಾತಪಾ: || ೪೨ ||

ಬ್ರಹ್ಮಾವತ್ಸನಕರನ್ನು ನೀಪರು ಕತ್ತರಿಸಿ ನೆಲಕ್ಕೆ ಉರುಳಿಸಿದರು. ಅವರ ಕುದುರೆಯ ಸೇನೆಯನ್ನು ಹೂವುಬಿಟ್ಟ ಮರಗಳನ್ನು ಗರಗಸದಿಂದ ಕತ್ತರಿಸುವಂತೆ ಕತ್ತರಿಸಿದರು.

೩೮-೪೦. ಜಠರರು ಪ್ರಯೋಗಿಸಿದ ಕುಠಾರಗಳಿಂದ ಶ್ವೇತಕರೆಂಬ ವನವು ಮುರಿಯಿತು. ಪಾರ್ಶ್ವದಲ್ಲಿದ್ದ ಭದ್ರೇಶನು ಬಾಣಾಗ್ನಿಯಿಂದ ಸುಟ್ಟನು ಕಟ್ಟುವ ಕಂಬದಿಂದ ತಪ್ಪಿಸಿಕೊಂಡ ಆನೆಗಳು ಕಾಷ್ಠಯೋಧ (ಕೆಸರು) ದಲ್ಲಿ ಮಗ್ನವಾಗಿ ಜೀರ್ಣವಾಗುವಂತೆ, ಮತಂಗ ದೇಶದವರೂ ಪ್ರಬಲವಾದ ಅಗ್ನಿಯಲ್ಲಿ ಸೌದೆಯು ಸುಟ್ಟುಹೋಗುವಂತೆ ಯುದ್ಧದಲ್ಲಿ ಲಯವಾದರು. ಮಿತ್ರಗರ್ತರು ತ್ರಿಗರ್ತರ ಕೈಗೆಸಿಕ್ಕಿ, (ಗಾಳಿಗೆ ಸಿಕ್ಕಿದ)ಹುಲ್ಲಿನಂತೆ ಗರಗರನೆ ತಿರುಗಿ ತಲೆಯೊಡೆದು, ಓಡಿಹೋಗಬೇಕೆಂದು ಪಾತಾಲದ ಕೊನೆಗೆ ಹೋದರು.

೪೧-೩. ಮಂದಮಾರುತನಿಂದ ಅಲೆಯುವ ಸಮುದ್ರದ ಚೆಂದದಿಂದ ನಡೆಯುವ ಮಾಗಧನ ಬಲದಲ್ಲಿ ಮಂದರಾದವರೆಲ್ಲ ಮುದಿಯಾನೆಗಳು ಕೆಸರಿನಲ್ಲಿ ಮುಳುಗಿಹೋಗುವಂತೆ ಮುಳುಗಿಹೋದರು. ಯುದ್ಧದಲ್ಲಿ ಚೇದಿಗಳು ಹಾದಿಯಲ್ಲಿ ಬಿದ್ದಿರುವ ಹೂಗಳ ಸೌಕುಮಾರ್ಯವನ್ನು ಬಿಸಿಲು ಹಾರಿಸುವಂತೆ ತಂಗಣರ ಚೇತನವನ್ನು ಹಾರಿಸಿದರು. ಪೌರವರ ಅಬ್ಬರವನ್ನು ಸಹಿಸದೆ ಕೌಸಲರು

ಕೌಸಲಾ: ಪೌರವಾರಾವಮುಸಹಂತೋಽಂತಕಾ ಇವ |
ತೈರುನ್ಮುಕ್ತಗದಾಪ್ರಾಸಶರಶಕ್ತ್ಯತಿವೃಷ್ಟಯ: || ೪೩ ||

ಬಭೂವುರ್ಭಲ್ಲಕೃತ್ತಾಂಗಾ ವಿಸ್ಮಯಾ ವಿದ್ರುಮದ್ರುಮಾ: |
ಇವಾದ್ರೌ ವಿದ್ರವಂತ್ಯಾರ್ದ್ರಸಾಂದ್ರಾಸೃಕ್ಸೂರ್ಯಮೂರ್ತಯ: | || ೪೪ ||

ನಾರಾಚೌಘಮಹಾಹೇತಿಮಾರುತಾಧೂತಮೂರ್ತಯ: |
ಬಭ್ರಮುರ್ಭ್ರಮರಾನೀಕಭಾಸುರಾ ಜಲದಾ ಇವ || ೪೫ ||

ಶರಧಾರಾಧರಾ ಮೇಘಾ: ಶರೋರ್ಣಾಪೂರ್ಣಮೇಷಕಾ: |
ಶರಪತ್ರಾವೃತಾ ವೃಕ್ಷಾ ಭ್ರೇಮುಸ್ತದ್ಗರ್ಜನಾ ಗಜಾ: || ೪೬ ||

ವನರಾಜ್ಯಜರಾಜೀರ್ಣಾ: ಕಂದಾಕಸ್ಥಲಜಂತವ: |
ಅತ್ರುಟ್ಯ ಪರಮಾಕೃಷ್ಟಾ: ಪೇಲವಾ ಇವ ತಂತವ: || ೪೭ ||

ರಥೇಷು ಧ್ವಸ್ತಚಕ್ರೇಷು ನಿಖಾತೇಽಮುತ್ರ ಮೂರ್ಧಸು |
ನಿಪೇತುರ್ಜನಸಂಘಾತಾ ಮೇಘಾ ಇವ ವನಾದ್ರಿಷು || ೪೮ ||

ಅಂತಕರಂತೆ ಗದಾಪ್ರಾಸ ಶರ ಶಕ್ತಿಗಳ ಅತಿವೃಷ್ಟಿಯನ್ನು ಮಾಡಿ ಅವರನ್ನು ಸದೆ ಬಡಿಯುತ್ತಿದ್ದರು.

೪೪-೪೬. (ಕೌಸಲರು) ಭಲ್ಲೆಗಳಿಂದ ಇರಿಯಲ್ಪಟ್ಟರೂ ಹೆದರದೆ, ಬೆಟ್ಟಗಳಲ್ಲಿ ಓಡಾಡುವ ಹವಳದ ಮರಗಳೋ ಎಂಬಂತೆ, ರಕ್ತದಿಂದ ಚೆನ್ನಾಗಿ ನೆನೆದು ಸೂರ್ಯ ಮೂರ್ತಿಗಳಾಗಿ ಓಡಾಡುತ್ತಿದ್ದರು. ಬಾಣಗಳ ವೇಗವೆಂಬ ಗಾಳಿಯಿಂದ ಚೆನ್ನಾಗಿ ದೇಹಗಳು ಕಂಪಿಸುತ್ತಿರಲು, ಭ್ರಮರಸಮೂಹಗಳಂತೆಯೂ ಮೇಘಗಳಂತೆಯೂ ಮೆರೆಯುತ್ತ ಅಲೆದರು. ಶರಧಾರೆಗಳನ್ನು ಧರಿಸಿದ ಮೇಘಗಳೋ, ಶರಗಳೆಂಬ ಉಣ್ಣೆಯನ್ನು ಧರಿಸಿರುವ ಟಗರುಗಳೋ, ಶರಗಳೆಂಬ ಎಲೆಗಳನ್ನು ಧರಿಸಿರುವ ವೃಕ್ಷಗಳೋ, ಗರ್ಜಿಸುತ್ತಿರುವ ಗಜಗಳೋ ಎಂಬಂತೆ ಆ ಕೋಸಲರು ತಿರುಗಿದರು.

೪೭-೪೮. ಕಂದಾಕವೆಂಬ ವನರಾಜ್ಯದವರು ಮೊದಲೇ ಜರಾಜೀರ್ಣರಾಗಿದ್ದವರು. (ಅವರು ಯುದ್ಧಶ್ರಮವನ್ನು ತಾಳಲಾರದೆ) ಬಹಳವಾಗಿ ಎಳೆದ ಶಕ್ತಿಯಿಲ್ಲದ ದಾರೆಗಳಂತೆ ಕಿತ್ತುಹೋದರು. ಮೇಘಗಳು ವನಗಳಿಂದ ಕೂಡಿದ ಬೆಟ್ಟಗಳಲ್ಲಿ ಬೀಳುವಂತೆ, ಜನಸಂಘಾತಗಳು ಹಳ್ಳದಲ್ಲಿ ಬಿದ್ದು ಚಕ್ರಗಳು ಮುರಿದುಹೋಗಿರುವ ರಥಗಳ ತಲೆಗಳ ಮೇಲೆ ಬಿದ್ದರು. ಶಾಲವನವೂ ತಾಲ

ಶಾಲತಾಲವನಂ ಪ್ರಾಪ್ಯ ಜನತಾವಲನಂ ವನಂ |
ಭುಜಾವಕರ್ತನಂ ಚಾಸೀದುತ್ತಾಲಂ ಸ್ಥಾಣುಕಾನನಂ || ೪೯ ||

ನನರ್ದುರ್ನಂದನೋದ್ಯಾನಸುಂದರ್ಯೋ ಮತ್ತಯೌವನಾ: |
ವನೋಪವನದೇಶೇಷು ಮೇರೋರ್ವೀರವರಾಶ್ರಿತಾ: || ೫೦ ||

ತಾವತ್ತಾರಾರವಂ ರೇಜೇ ಸೈನ್ಯಕಾನನಮುತ್ತಮಂ |
ಯಾವನ್ನ ಪರಪಕ್ಷೇಣ ಪ್ರಾಪ್ತಂ ಕಲ್ಪಾನಲಾರ್ಚಿಷಾ || ೫೧ ||

ಭಿನ್ನಾಃ ಪಿಶಾಚಸಂಯುಕ್ತಾ ಭೂತಾಪಹೃತಹೇತಯಃ |
ಪಾತಯಿತ್ವಾ ಯಯುಃ ಕರ್ಣಾನ್ದಶಾರ್ಣಾಸ್ತರ್ಣಕಾ ಇವ || ೫೨ ||

ಜಹುರ್ಭಗ್ನೇಶ್ವರಾಃ ಕಾಂತಿಂ ತಾಂ ಜಿಗೀಷವನೌಜಸಾ |
ಕಾಶಯಃ ಕಮಲಾನೀವ ಶುಷ್ಕಸ್ರೋತಸ್ವಿನೌಜಸಾ || ೫೩ ||

ವನವೂ ಜನಗಳಂತೆ ಜಂಗಮಗಳಾಗಿ ಯುದ್ಧಕ್ಕಿಳಿದು ಭುಜಗಳನ್ನೂ ತಲೆಗಳನ್ನೂ ಕಳೆದುಕೊಂಡು ಮೋಟುಮರಗಳ ಕಾಡಾಗಿ ನಿಂತು ವೆಂಬಂತಿತ್ತು. (ಶಾಲಗಳು ಶಾಖಾರಹಿತಗಳಾಗಿ ತಾಲಗಳಾದವು: ತಾಲಗಳು ತಲೆಹೋಗಲು ಸ್ಥಾಣುಗಳಾದುವು.)

೫೦-೫೧. ಮತ್ತಯೌವನೆಯರಾದ ನಂದನೋದ್ಯಾನ ಸುಂದರಿಯರು ಮೇರುಪರ್ವತದ ವನೋಪವನ ಪ್ರದೇಶಗಳಲ್ಲಿ ವೀರವರರ ಆಶ್ರಯದಲ್ಲಿ ಆನಂದಿಸಿದರು. ಸೈನ್ಯಕಾನನವು ಪರಪಕ್ಷವೆಂಬ ಕಲ್ಪಾಗ್ನಿ ಜ್ವಾಲೆಯು ತಗಲುವವರೆಗೂ ತಾರಸ್ವರದಲ್ಲಿ ಮೊರೆಯುತ್ತಾ ಮೆರೆಯಿತು.

೫೨-೩. ದಶಾರ್ಣರೂ ತರ್ಣಕರಂತೆಯೇ ಪಿಶಾಚ (ಪ್ರಧಾನರಾದ ಕಾಮರೂಪಾದಿ ದೇಶದವ)ರೊಡನೆ ಯುದ್ಧಮಾಡಿ ಛಿನ್ನರಾಗಿ ಭೂತಗಳು ತಮ್ಮ ಆಯುಧಗಳನ್ನು ಅಪಹರಿಸಲು ಕಿವಿಗಳನ್ನು ಕೆಡವಿಕೊಂಡು ಓಡಿದರು. ಜಿಗೀಷವನ ಪರಾಕ್ರಮದಿಂದ, ನದಿಗಳನ್ನು ಬತ್ತಿಸುವ ಬೇಸಗೆಯ ಪ್ರಭಾವದಿಂದ ಕಮಲಗಳು ಕಾಂತಿಗಳನ್ನು ಕಳೆದುಕೊಳ್ಳುವಂತೆ, ಕಾಶಿಗಳು ಭಗ್ನೇಶ್ವರರಾಗಿ ಕಾಂತಿಯನ್ನು ಕಳೆದುಕೊಂಡರು.

ತುಷಾರಾ ಮೇಖಲೈಃ ಕೀರ್ಣಾಃ ಶರಶಕ್ತ್ಯಸಿಮುದ್ಗರೈಃ |
ವಿದ್ರುತಾ ನರಕೈಃ ಕ್ಷಿಪ್ತಾಃ ಕಟಕಚ್ಛಲನಾ ಅಪಿ || ೫೪ ||

ಕೌಂತಕ್ಷೇತ್ರಾಃ ಪ್ರಸ್ಥವಾಸ್ಯೈಃ ಸ್ಥಿತ್ವಾ ಯೋಧಿಭಿರಾವೃತಾಃ |
ಗುಣಾ ಇವ ಖಲಾಕ್ರಾಂತಾ ಗತಾ ವ್ಯಕ್ತಮಶಕ್ತತಾಂ || ೫೫ ||

ದ್ವಿಪಯೋ ಬಾಹುಧಾನಾನಾಂ ಕ್ಷಣೇನಾದಾಯ ಮಸ್ತಕಂ |
ಭಲ್ಲೈಃ ಪಲಾಯ್ಯಾಶು ಗತಾ ವಿಲೂನಕಮಲಾ ಇವ || ೫೬ ||

ಮಿಥಃ ಸಾರಸ್ವತಾ ನೀತ್ವಾ ಆದಿನಾಂತಂ ಕೃತಾಜಯಃ |
ಪಂಡಿತಾ ಇವ ವಾದೇಷು ನೋದ್ವಿಗ್ನಾ ನ ಪರಾಜಿತಾಃ || ೫೭ ||

ಖರ್ವಗಾಃ ಖದಿತಾಃ ಕ್ಷುದ್ರಾ ಯಾತುಧಾನೈಃ ಪರಾವೃತಾಃ |
ತೇಜಃ ಪರಮಮಾಜಗ್ಮುಃ ಶಾಂತಾಗ್ನಯ ಇವೇಂಧನೈಃ || ೫೮ ||

೫೪-೫. ಮೇಖಲರು ಶರಶಕ್ತಿ ಖಡ್ಗ ಮುದ್ಗರಗಳಿಂದ ತುಷಾರರನ್ನು ಹೊಡೆದು ಓಡಿಸಿದರು: ಅವರು ಕಟಕಚ್ಛಲನರಾಗಿದ್ದರೂ (?) ಅವರನ್ನು ನರಕರು ಸೋಲಿಸಿದರು. ಖಲರ ಕೈಗೆ ಸಿಕ್ಕಿದ ಗುಣವಂತರು ಸ್ಪಷ್ಟವಾಗಿ ಅಶಕ್ತರಾಗುವಂತೆ ಕಾಂತಕ್ಷೇತ್ರದವರು ನಿಂತು ಯುದ್ಧಮಾಡುತ್ತಿದ್ದು ಪ್ರಸ್ಥ (ಎತ್ತರವಾದ ದೇಶ) ವಾಸಿಗಳಾದ ಯೋಧರಿಗೆ ಸೋತರು.

೫೬-೭. ದ್ವಿಪಿಗಳು ಒಂದೇ ಕ್ಷಣದಲ್ಲಿ ಬಾಹುಧಾನರ ತಲೆಗಳನ್ನು ಭಲ್ಲಗಳಿಂದ ಕತ್ತರಿಸಿಕೊಂಡು, ಕಮಲಗಳನ್ನು ಕೊಯ್ದುಕೊಂಡು ಓಡುವರಂತೆ ಓಡಿಬಿಟ್ಟರು. ವಾದಗಳಲ್ಲಿ ಪಂಡಿತರು ಸೋಲದೆ ದಿನವೆಲ್ಲಾ ಕಳೆದು ಸಂತೋಷಪಡುವಂತೆ, ಸಾರಸ್ವತರು ದಿನದ ಕೊನೆಯವರೆಗೂ ಅಪಜಯವನ್ನು ಹೊಂದದೆ ಯುದ್ಧಮಾಡಿದರು.

೫೭-೬೦. ಸಿಕ್ಕಿದಕಡೆ ಓಡಿಹೋಗುತ್ತಿದ್ದ ಕ್ಷುದ್ರರನ್ನು ರಾಕ್ಷಸರು ರಣಭೂಮಿಗೆ ಹಿಂದಿರುಗುವಂತೆ ಮಾಡಿ ತಿಂದುಬಿಟ್ಟರು. ಶಾಂತವಾಗಿದ್ದ ಅಗ್ನಿಗಳಿಗೆ ಕಾಷ್ಟಗಳನ್ನು ಹಾಕಿದಂತೆ (ಆಗ ಆ ರಣಭೂಮಿಯಲ್ಲಿ ವೀರ) ತೇಜಸ್ಸು ಪರಮ ಪ್ರಕಾಶವನ್ನು ಪಡೆಯಿತು.

ಕಿಯದಾಖ್ಯಾಯತ ಏತ-
ಜ್ಜಿಹ್ವಾನಿಚಯೈಃ ಕಿಲಾಲವಮಾಕುಲಿತಃ |
ವಾಸುಕಿರಪಿ ವರ್ಣಯಿತುಂ
ನ ಸಮರ್ಥೋ ರಣವರಂ ರಾಮ || ೫೯ ||

ಇತ್ಯಾರ್ಷೇ ಶ್ರೀವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
“ಜನಪದವರ್ಣನಂ” ನಾಮ ಸಪ್ತತ್ರಿಂಶಃ ಸರ್ಗಃ

---

೫೯. ಸಾವಿರಾರು ನಾಲಗೆಗಳಿರುವ ವಾಸುಕಿಯು ಕೂಡ ಆ ರಣವರವನ್ನು ವರ್ಣಿಸಲು ತಾನು ಸಮರ್ಥನಲ್ಲವೆಂದು ವ್ಯಾಕುಲಿತನಾದನು--ಎನ್ನಲು (ನಾವು) ಎಷ್ಟೆಂದು ಹೇಳುವುದು?

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ “ಜನಪದ ವರ್ಣನ” ಎಂಬ ಮೂವತ್ತೇಳನೆಯ ಸರ್ಗವು.

ಅಷ್ಟತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಏವಮುತ್ಯಾಕುಲೇ ಯುದ್ಧೇ ಸಾಸ್ಫೋಟಭಯಸಂಕುಲೇ |
ಆದಿತ್ಯೇ ತಮಸಾವೃದ್ಧೇ ಚಟತ್ಕಠಿನಕಂಕಟೇ ॥ ೧ ॥

ವಹತ್ಯಂಬೂತ್ಪತಂತೀಷು ಪತಂತೀಷ್ವಶ್ಮವೃಷ್ಟಿಷು |
ನದೀಷು ಕ್ಷೇಪಣಾಚ್ಛಾಸು ವರಕೇಷ್ವಬ್ಜಪಂಕ್ತಿಷು ॥ ೨ ॥

ಮಿಥಃ ಫಲಾಗ್ರಕಾಟೋತ್ಥವಹ್ನಿಶೀಕರಿಣೀಷು ಚ |
ಆಯಾಂತೀಷು ಪ್ರಯಾಂತೀಷು ದೂರಂ ಶರನದೀಷು ಚ ॥ ೩ ॥

ವಹಲ್ಲೂನಶಿರಃಪದ್ಮ ಚಕ್ರಾವರ್ತೈಸ್ತರಂಗಿತೈಃ |
ಖಾರ್ಣವೇ ಪೂರಿತೇ ಹೇತಿ ವೃಂದಮಂದಾಕಿನೀಗಣೈಃ ॥ ೪ ॥

ಮೂವತ್ತೆಂಟನೆಯ ಸರ್ಗ

೧-೨. ಶ್ರೀ ವಸಿಷ್ಠನು ಹೇಳಿದನು:—ಯುದ್ಧವು ಮನಸ್ಸಿಗೆ ಆಯಾಸವನ್ನುಂಟುಮಾಡುವಂತಿತ್ತು. ವೀರರ ವಿಜೃಂಭಣದಿಂದ ಭೀರುಗಳಿಗೆ ಹೆದರಿಕೆಯಾಗುತ್ತಿತ್ತು. ಆದಿತ್ಯನು ತಮಸ್ಸಿನಿಂದ ಮೊಂಕಾಗಿದ್ದನು. ಕಠಿಣಗಳಾದ ಕವಚಗಳೂ ಬಿರಿದುಬೀಳುತ್ತಿದ್ದುವು. ಕವಣೆಕಲ್ಲಿನ ಮಳೆಯು ಸುರಿಯುತ್ತಿತ್ತು. ಬಿದ್ದು ಏಳುವ ಕಲ್ಲುಗಳೊಡನೆ ನೀರುಗಳೂ ಮೇಲಕ್ಕೆ ಹಾರುತ್ತಿದ್ದುವು. ನದಿಗಳಲ್ಲಿ ಕಮಲಗಳು ಮುಚ್ಚಿಕೊಳ್ಳುತ್ತಿದ್ದುವು.

೩-೪. ಆಯುಧಗಳ ಪರಸ್ಪರ ಸಂಘಟ್ಟನದಿಂದ ಉಂಟಾದ ಬೆಂಕಿಯ ಕಿಡಿಗಳೊಡನೆ ಕೂಡಿದ ಶರನದಿಗಳು ದೂರದಿಂದ ಬರುತ್ತಲೂ ಹೋಗುತ್ತಲೂ ಇದ್ದುವು. ಅವುಗಳಲ್ಲಿ ಕತ್ತರಿಸಿದ ಶಿರಗಳೆಂಬ ಪದ್ಮಗಳು ತರಂಗತರಂಗವಾಗಿ ಸುಳಿಸುಳಿಯಾಗಿ ಸುತ್ತಿಕೊಂಡು ಬರುತ್ತಿದ್ದುವು. ಆಯುಧ ಸಮೂಹವೆಂಬ ಮಂದಾಕಿನಿಯು ಆಕಾಶ ಸಮುದ್ರವನ್ನು ತುಂಬಿತ್ತು.

ಸಮೀರಣರಣತ್ಕ್ವಾಣಶಸ್ತ್ರಪೂರ್ಣಘನೈರ್ಘನೈಃ |
ಸಂದೇಹಾಂತೇಷು ಸಿದ್ಧೇಷು ಕಪಿಕಚ್ಛವ್ಯಥಾಪ್ರದೈಃ || ೫ ||

ಅಷ್ಟಭಾಗದಶಾಶೇಷಪ್ರತಾಪಮಧುರಾಕೃತಿ |
ಶಸ್ತ್ರಘಾತೌಜಸಾ ವೀರ ಇವಾಹಸ್ತನುತಾಂ ಯಯೌ || ೬ ||

ಶ್ರಾಂತಾಶ್ವೇಭಾಃ ಪ್ರಭಗ್ನಾಶ್ಚ ಹೇತಿಸಂಘಾತದೀಪ್ತಯಃ |
ದಿವಸೇನ ಸಮಂ ಸೇನಾ ಯಯುರ್ಮಂದಪ್ರತಾಪತಾಂ || ೭ ||

ಅಥ ಸೇನಾಧಿನಾಥಾಭ್ಯಾಂ ವಿಚಾರ್ಯ ಸಹಮಂತ್ರಿಭಿಃ |
ದೂತಾಃ ಪರಸ್ಪರಂ ವೃತ್ತಾ ಯುದ್ಧಂ ಸಂಹ್ರಿಯತಾಮಿತಿ || ೮ ||

ತತ್ರ ಶ್ರಮವಶಾನ್ಮಂದಯಂತ್ರಶಸ್ತ್ರಪರಾಕ್ರಮೈಃ |
ರಣಸಂಹರಣಂ ಕಾಲೇ ಸರ್ವೈರೇವೋರರೀಕೃತಂ || ೯ ||

ತತೋ ಮಹಾರಥೋತ್ತುಂಗ ಕೇತುಪ್ರಾಂತಕೃತಾಸ್ಪದಂ |
ಬಲಯೋರಾರುರೋಹೈಕ ಏಕೋ ಯೋಧೋ ಧ್ರುವೋ ಯಥಾ || ೧೦ ||

೫-೬. ಬಿರುಗಾಳಿಯಂತೆ ಶಬ್ದಮಾಡುತ್ತಿರುವ ಶಸ್ತ್ರಸಮೂಹಗಳೆಂಬ ತುಂಬಿದ ಮೋಡಗಳನ್ನು ಕಂಡು ಕಪಿಗಳಿಗೆ ವ್ಯಥೆಯಾಗುವ ಕಾಲವು ಬಂತೋ ಎಂದು ಸಿದ್ಧರು ಸಂದೇಹಪಟ್ಟರು. ದಿವಸವು ಏಳುಭಾಗ ಕಳೆದು ಸೂರ್ಯನ ಪ್ರತಾಪವೂ ಮಧುರವಾಗುವಂತಾಗಿತ್ತು. ಶಸ್ತ್ರಘಾತದಿಂದ ಕಂಗೆಟ್ಟ ವೀರನಂತೆ, ಅಹಸ್ಸು ಕೃಶವಾಗುತ್ತ ಬಂತು. (ಮಳೆಗಾಲದಲ್ಲಿ ಕಪಿಗಳಿಗೆ ಮದವ್ಯಥೆಯು ಹಿಡಿಯುವುದೆಂದು ಪ್ರತೀತಿ.)

೭-೮. ಆನೆ ಕುದುರೆಗಳು ಆಯಾಸಪಟ್ಟುವು. ಆಯುಧಗಳ ಕಾಂತಿಯು ಎಲ್ಲೆಲ್ಲೂ ಬೆಳಗುತ್ತಿದ್ದರೂ ಸೇನೆಗಳೂ ದಿವಸವೂ ಸಮಸಮವಾಗಿ ಮಂದ ಪ್ರತಾಪವಾಗುತ್ತಿದ್ದುವು. ಆಗ ಸೇನಾಧಿಪತಿಗಳೂ ಮಂತ್ರಿಗಳೂ ಸಮಾಲೋಚನೆ ಮಾಡಿ ಯುದ್ಧವು ನಿಲ್ಲಲೆಂದು ದೂತರನ್ನು ಕಳುಹಿಸಿದರು.

೯-೧೦. ಸರ್ವರಿಗೂ ಆಯಾಸವಾಗಿ ಯಂತ್ರಶಸ್ತ್ರಗಳ ಪರಾಕ್ರಮವೂ ಮಂದವಾಗಿತ್ತು. ಅದರಿಂದ ಎಲ್ಲರೂ ಯುದ್ಧವು ನಿಲ್ಲಲಿ ಎಂದರು. ಆಗ ಎರಡು ಸೈನ್ಯಗಳಲ್ಲಿಯೂ ಮಹಾರಥದ ಎತ್ತರವಾದ ಧ್ವಜದ ಮಗ್ಗುಲಲ್ಲಿ ಇರುವ ಸ್ಥಳಕ್ಕೆ ಹೋಗಿ ಒಬ್ಬೊಬ್ಬ ಸೈನಿಕನು, ಆಕಾಶದಲ್ಲಿ ಧ್ರುವನಂತೆ, ನಿಂತನು.

ಸೋಽಂಶುಕಂ ಭ್ರಾಮಯಾಮಾಸ ಸರ್ವದಿಂಗ್ಮಂಡಲೇ ಸಿತಂ ।
ಶ್ಯಾಮೇವ ದೀರ್ಘಂ ಶುದ್ಧಾಂಶುಂ ಯುದ್ಧಂ ಸಂಹ್ರಿಯತಾಮಿತಿ ‖ ೧೧ ‖

ತತೋ ದುಂದುಭಯೋ ನೇದುಃ ಪ್ರತಿಧ್ವನಿತದಿಂಗ್ಮುಖಾಃ ।
ಮಹಾಪ್ರಳಯಸಂಶಾಂತೌ ಪುಷ್ಕರಾವರ್ತಕಾ ಇವ ‖ ೧೨ ‖

ಶರಾದಿಹೇತಿಸರಿತೋ ವಿಸ್ತೀರ್ಣೇ ಗಗನೇ ಸ್ಥಿತೇ ।
ಪ್ರವೃತ್ತಾಃ ಸುಖಮಾಗಂತುಂ ಸರಸಃ ಸರಿತೋ ಯಥಾ ‖ ೧೩ ‖

ಯೋಧಯೋರ್ದ್ರುಮಸಂಚಾರಸ್ತನುತಾಮಾಯಯೌ ಶನೈಃ ।
ಭೂಕಂಪಾಂತೇ ವನಸ್ಪಂದ ಇವಾಭ್ರಾಂತ ಇವಾರ್ಣವಃ ‖ ೧೪ ‖

ವಿನಿರ್ಗಂತುಂ ಪ್ರವವೃತೇ ರಣಾದಥ ಬಲದ್ವಯಂ ।
ವಾರಿಪೂರಶ್ಚತುರ್ದಿಕ್ಷು ಪ್ರಲಯೈಕಾರ್ಣವಾದಿವ ‖ ೧೫ ‖

ಉತ್‌ಕ್ಷಿಪ್ತಮಂದರಕ್ಷೀರ ಸಮುದ್ರವದನಾಕುಲಂ ।
ಸೈನ್ಯಂ ಪ್ರಶಾಮ್ಯದಾವರ್ತಂ ಶನೈಃ ಸಾಮ್ಯಮುಪಾಯಯೌ ‖ ೧೬ ‖

೧೧-೧೨. ಅವನು ಯುದ್ಧವನ್ನು ನಿಲ್ಲಿಸುವುದರ ಸೂಚನೆಯಾಗಿ ರಾತ್ರಿಯು ಚಂದ್ರನನ್ನು ಮೆರೆಸುವಂತೆ, ಬಿಳಿಯ ಬಟ್ಟೆಯೊಂದನ್ನು ಸುತ್ತಲೂ ತಿರುಗಿಸಿದನು. ಮಹಾಪ್ರಳಯಾಂತದಲ್ಲಿ ಪುಷ್ಕರಾವರ್ತಕಗಳು ಗರ್ಜಿಸುವಂತೆ ದುಂದುಭಿಗಳು ದಿಕ್ಕುಗಳಲ್ಲಿ ಪ್ರತಿಧ್ವನಿಗಳು ಬರುವಂತೆ ಮೊಳಗಿದುವು.

೧೩. ಆಕಾಶದಲ್ಲಿದ್ದ ಶರಾದಿ ಆಯುಧನದಿಗಳು ಸರೋವರದಿಂದ ಪ್ರವಾಹಗಳು ಬರುವಂತೆ, ಸುಖವಾಗಿ ಕೆಳಕ್ಕೆ ಇಳಿದುವು. ಯೋಧರ ದ್ರುತ ಸಂಚಾರವು ಕ್ರಮವಾಗಿ ನಿದಾನವಾಯಿತು. ಭೂಕಂಪವಾಗಿ ನಿಂತಮೇಲೆ ವನಗಳ ಅಲ್ಲಾಡುವಿಕೆಯೂ, ವರ್ಷಾಕಾಲವು ಕಳೆದಮೇಲೆ ಸಮುದ್ರವೂ ಶಾಂತವಾಗುವಂತೆ ಆಯಿತು.

೧೫-೧೬. ಪ್ರಳಯ ಸಮುದ್ರದಿಂದ ಪ್ರವಾಹಗಳೂ ನಾಲ್ಕುದಿಕ್ಕುಗಳಲ್ಲಿಯೂ ಹರಡುವಂತೆ ರಣಭೂಮಿಯಿಂದ ಸೇನೆಗಳು ಹಿಂತಿರುಗಿದುವು. ಕಡೆಯುತ್ತಿದ್ದ ಮಂದರ ಪರ್ವತವನ್ನು ತೆಗೆದಮೇಲೆ ಸುಳಿಗಳಿಲ್ಲದೆ ಶಾಂತವಾಗುವಂತೆ ಸೈನ್ಯವೂ ಸಮಾಧಾನವಾಯಿತು.

ಕ್ರಮೇಣಾಸೀ ಮುಹೂರ್ತೇನ ವಿಕಟೋದರಭೀಷಣಂ |
ಅಗಸ್ತ್ಯಪೀತಾರ್ಣವವಚ್ಛೂನ್ಯಮೇವ ರಣಾಂಗಣಂ || ೧೭ ||

ಶವಸಂತತಿಸಂಪೂರ್ಣಂ ವಹದ್ರಕ್ತನದಾಕುಲಂ |
ಪರಿಕೂಜನಝುಂಕಾರಪೂರ್ಣಝಿಲ್ಲೀವನೋಪಮಂ || ೧೮ ||

ವಹದ್ರಕ್ತಸರಿತ್ ಸ್ರೋತಸ್ತರಂಗಾರವಘರ್ಘರಂ |
ಸಾಕ್ರಂದಾರ್ಧಮೃತಾಹೂತ ಸಪ್ರಾಣವ್ಯಗ್ರಮಾನವಂ || ೧೯ ||

ಮೃತಾರ್ಧಮೃತದೇಹೌಘ ಸೃತಾಸೃಕ್‌ಪ್ಲುತನಿರ್ಝರಂ |
ಸಜೀವನರಪೃಷ್ಠಸ್ಥ ಶವಸ್ಪಂದನಭ್ರಾಂತಿದಂ || ೨೦ ||

ಕರೀಂದ್ರಶವರಾಶ್ಯಗ್ರ ವಿಶ್ರಾಂತಾಂಬುದ ಖಂಡಕಂ |
ವಿಶೀರ್ಣರಥಸಂಘಾತಂ ವಾತಚ್ಛಿನ್ನಮಹಾವನಂ || ೨೧ ||

೧೭-೧೮. ಕ್ರಮವಾಗಿ ಬಂದು ಮುಹೂರ್ತದೊಳಗಾಗಿ ರಣಭೂಮಿಯು ಅಗಸ್ತ್ಯರು ಕುಡಿದ ಸಮುದ್ರದ ಹಳ್ಳದಂತೆ, ವಿಕಟೋದರವಾಗಿ, ಶೂನ್ಯವೂ ಭೀಷಣವೂ ಆಯಿತು. ಅಲ್ಲಿ ಹೆಣಗಳು ಗುಂಪುಗುಂಪಾಗಿ ಬಿದ್ದಿದ್ದುವು. ರಕ್ತ ನದಿಯು ಹರಿಯುತ್ತ ಜುಗುಪ್ಸೆಯನ್ನುಂಟುಮಾಡುತ್ತಿತ್ತು. ಕಾಡಿನಲ್ಲಿರುವಂತೆ ಝಿಲ್ಲಿಗಳ ಝುಂಕಾರದಿಂದ ತುಂಬಿತ್ತು. (ಝಿಲ್ಲಿಯು ಒಂದು ಜಾತಿಯ ದುಂಬಿ ವಸಂತದಲ್ಲಿ ಇದು ಬಹಳ ಕೂಗುತ್ತದೆ.)

೧೯-೨೦. ಹರಿಯುತ್ತಿರುವ ರಕ್ತನದಿಯ ತರಂಗಗಳ ಘರ್ಘರ ಶಬ್ದವೂ, ಅರ್ಧಮೃತರ ಅಳುವೂ ತಮಗೆ ಬೇಕಾದವರನ್ನು ಕರೆಯುವ ಕೂಗೂ ಅದನ್ನು ಕೇಳಿದವರ ಕಳವಳವೂ, ಮೃತರ ಅರ್ಧಮೃತರ ದೇಹಗಳಿಂದ ಸುರಿಯುತ್ತಿರುವ ರಕ್ತದ ಪ್ರವಾಹವೂ, ಬದುಕಿರುವವರ ಮೇಲೆ ಬಿದ್ದಿದ್ದು ಅವರ ವ್ಯಾಪಾರಗಳಿಂದ ಅಲುಗುತ್ತಿರುವ ಶವಗಳೂ ತುಂಬಿತ್ತು.

೨೧-೨೨. ಸತ್ತುಬಿದ್ದಿರುವ ದೊಡ್ಡಾನೆಗಳ ಮೇಲೆ ಮೋಡಗಳ ತುಂಡು ಗಳು ಕುಳಿತಿದ್ದುವು. ರಥ ಸಂಘಾತವು ಮುರಿದುಬಿದ್ದು ಗಾಳಿಗೆ ಸಿಕ್ಕಿ ಕೆಟ್ಟು ಹೋದ ಆರಣ್ಯದಂತಿತ್ತು. ಹರಿಯುತ್ತಿರುವ ರಕ್ತನದಿಯ ವೇಗಕ್ಕೆ ಸಿಕ್ಕಿ ಆನೆ

ವಹದ್ರಕ್ತನದೀರಂಹಃ ಪ್ರೋಹ್ಯಮಾನಹಯದ್ವಿಪಂ |
ಶರಶಕ್ತ್ಯೃಷ್ಟಿಮುಸಲ ಗದಾಪ್ರಾಸಾಸಿಸಂಕುಲಂ || ೨೨ ||

ಪರ್ಯಾಣಾವನಸಂನಾಹ ಕವಚಾವೃತ ಭೂತಲಂ |
ಕೇತುಚಾಮರಪಟ್ಟೌಘ ಗುಪ್ತಂ ಶವಶರೀರಕಂ || ೨೩ ||

ಫಣಾಸ್ಫುಟಕತೂಣೀರ ಕುಂದಕೂಜತ್ ಸಮೀರಣಂ |
ಶವರಾಶಿಪಲಾಲೌಘ ತಲ್ಪಸುಪ್ತಪಿಶಾಚಕಂ || ೨೪ ||

ಮೌಲಿಹಾರಾಂಗದದ್ಯೋತ ಶಕ್ರಚಾಪವನಾವೃತಂ |
ಶ್ವಶೃಗಾಲಕರಾಕೃಷ್ಟ ಸಾಂದ್ರಾಂತ್ರಾದೀರ್ಘರಜ್ಜುಕಂ || ೨೫ ||

ರಕ್ತಕ್ಷೇತ್ರಕ್ವಣತ್ಕಿಂಚಿಚ್ಛೇಷಜೀವನೃದಂತುರಂ |
ರಕ್ತಕರ್ದಮನಿರ್ಮಗ್ನ ಸಜೀವ ನರ ದರ್ದುರಂ || ೨೬ ||

ವರಾಂಗಕವಚಪ್ರಖ್ಯ ನಿರ್ಗತಾಕ್ಷಿಶತೋಚ್ಚಯಂ |
ವಹದ್ಭುಜೋರುಕಾಷ್ಠೌಘ ಘೋರರಕ್ತಸರಿಚ್ಛತಂ || ೨೭ ||

ಕುದುರೆಗಳೂ ಬಾಣ, ಶಕ್ತಿ, ಮೊದಲಾದ ಆಯುಧಗಳೂ ಕೊಚ್ಚಿ ಹೋಗುತ್ತಿದ್ದುವು.

೨೩–೨೪. ಹಲ್ಯಾಣ(ಜೀನು)ಗಳೂ ಗುರಾಣಿಗಳೂ ಕವಚಗಳೂ ನೆಲವನ್ನು ಮುಚ್ಚಿದ್ದುವು. ಧ್ವಜ, ಚಾಮರಗಳೂ ಪಟ್ಟೆಯ ಬಟ್ಟೆಗಳೂ ಹೆಣಗಳಮೇಲೆ ಹೊದಿಸಿದಂತಿದ್ದುವು. ಹರಿದುಬಿದ್ದ ಹೆಡೆಯಂತೆ ಕಾಣುವ ಬತ್ತಳಿಕೆಗಳ ತೂತಿನಲ್ಲಿ ನುಗ್ಗಿ ಗಾಳಿಯು ಮೊರೆಯುತ್ತಿತ್ತು. ಶವರಾಶಿಗಳೆಂಬ ಹೊಟ್ಟಿನ ಗುಡ್ಡೆಗಳ ಮೇಲೆ ಪಿಶಾಚಗಳು ಮಲಗಿದ್ದುವು.

೨೫–೬. ಕಿರೀಟ, ಹಾರ, ಮೊದಲಾದ ಭೂಷಣಗಳ ರತ್ನಕಾಂತಿಯು ತುಂಬಿ ಕಾಮನಬಿಲ್ಲು ಬಿದ್ದಿರುವ ವನದಂತಿತ್ತು. ನಾಯಿ ನರಿಗಳು ಉದ್ದವಾಗಿ ಹಗ್ಗದಂತಿರುವ ಅಂತ್ರಗಳನ್ನು ಎಳೆದುಕೊಂಡು ಹೋಗುತ್ತಿದ್ದುವು. ರಕ್ತಕ್ಷೇತ್ರದಲ್ಲಿ ಬಿದ್ದು ಪ್ರಾಣಶೇಷವುಳ್ಳವರು ನರಳುತ್ತಿದ್ದರು. ಬದುಕಿದ್ದವರೂ ರಕ್ತದ ಕೆಸರಿನಲ್ಲಿ ಕಪ್ಪೆಗಳಂತೆ ಮುಳುಗಿಹೋಗಿದ್ದರು.

೨೭–೨೮. ಕಳಚಿಬಿದ್ದಿರುವ ನೂರಾರು ಕಣ್ಣುಗಳು ತಲೆಬುರುಡೆಗಳಿಗೆ ಹೊದಿಸಿದ ಕವಚಗಳಂತಿದ್ದುವು. ರಕ್ತನದಿಗಳಲ್ಲಿ ತೋಳುಗಳೂ ತೊಡೆಗಳೂ

ಸಾಕ್ರಂದಬಂಧುವಲಿತಂ ಮೃತಾರ್ಧಮೃತಮಾನವಂ |
ಶರಾಯುಧರಥಾಶ್ವೇಭ ಪರ್ಯಾಣಾಸಂವರಾಂತರಂ || ೨೮ ||

ನೃತ್ಯತ್ಕಬಂಧದೋರ್ದಂಡ ಮಂಡಲಾನಮಿತಾಂಬರಂ |
ಮದಮೇದೋವಸಾಗಂಧ ಪೀಡಾರ್ದ್ರಘ್ರಾಣಕೋಟರಂ || ೨೯ ||

ಉತ್ತಾಲ್ವರ್ಧಮೃತೇಭಾಶ್ವ ವಾರ್ಯಮಾಣಾಲ್ಪಜೀವಿತಂ |
ವಹದ್ರಕ್ತನದೀವೀಚಿ ಪ್ರಹಾರಹತದುಂದುಭಿ || ೩೦ ||

ಉಹ್ಯಮಾನಮೃತೇಭಾಶ್ವ ಮಕರಾಸೃಕ್ಸರಿಚ್ಛ್ರತಂ |
ಮ್ರಿಯಮಾಣನರಾನೀಕ ಫೂತ್ಕೃತಾಸೃಕ್ಪ್ರಣಾಳಿಕಂ || ೩೧ ||

ಸ್ವಲ್ಪಜೀವಶರಾಪೂರ್ಣ ಮುಖದೃಕ್ಕ್ರಾಂತಿತಸ್ವನಂ |
ಪಿಂಡಭಾರ್ಯಾವಸಾಗಂಧ ವಾತಾಂತೋತ್ಪೀಠಲೋಹಿತಂ || ೩೨ ||

ಉನ್ನಾಸಾರ್ಧಮೃತೇಭೇಂದ್ರ ಕರಾಕ್ರಾಂತಕಬಂಧಕಂ |
ನಿರಧಿಷ್ಠಿತಹಸ್ತ್ಯಶ್ವ ಪಾತಿತೋಚ್ಚಕಬಂಧಕಂ || ೩೩ ||

ಕಟ್ಟಿಗೆಗಳಂತೆ ಕೊಚ್ಚಿಹೋಗುತ್ತಿದ್ದುವು. ಸತ್ತವರ, ಸಾಯುತ್ತಿರುವವರ ಸುತ್ತಲೂ ಬಂಧುಗಳು ಕುಳಿತು ಅಳುತ್ತಿದ್ದರು. ರಣಭೂಮಿಯು ಬಾಣ, ಆಯುಧ, ರಥ, ಅಶ್ವ, ಹಸ್ತಿ, ಪರ್ಯಾಣ (ಜೀನು) ಗಳಿಂದ ತುಂಬಿಹೋಗಿತ್ತು.

೨೯–೩೦. ಕುಣಿಯುತ್ತಿರುವ ಕಬಂಧಗಳು ಕೈಯ್ಯಿಂದ ಆಕಾಶವನ್ನು ಬಗ್ಗಿಸಿಕೊಂಡುವೋ ಎಂಬಂತಿತ್ತು, ಮದೋದಕ, ಮೇದಸ್ಸು, ಕೊಬ್ಬುಗಳ ನಾತವು ಮೂಗಿಗೆ ಅಸಹ್ಯವಾಗಿತ್ತು. ಅರೆಜೀವರಾಗಿದ್ದವರು ಸಾಯುತ್ತಿರುವ ಆನೆ ಕುದುರೆಗಳಿಗೆ ಸಿಕ್ಕಿ, ಪೂರಾ ಸಾಯುತ್ತಿದ್ದರು. ಹರಿಯುವ ರಕ್ತನದಿಗಳ ತರಂಗಗಳು ಅಲ್ಲಿರುವ ದುಂದುಭಿಗಳನ್ನು ಬಡಿಯುತ್ತಿದ್ದುವು.

೩೧–೩೨. ರಕ್ತನದಿಯಲ್ಲಿ ಮೃತಗಜಾಶ್ವಗಳೆಂಬ ಮೊಸಳೆಗಳು ತೇಲಿಕೊಂಡು ಹೋಗುತ್ತಿದ್ದುವು. ಸಾಯುವವರು ಬಾಯಿಂದ ಉಸಿರು ಬಿಟ್ಟಾಗ ರಕ್ತವು ಚಿಮ್ಮುತ್ತಿತ್ತು. ಮುಖನೇತ್ರಗಳಲ್ಲಿ ಬಾಣ ಚುಚ್ಚಿಕೊಂಡು ಅರ್ಧಜೀವರಾದವರು ಗೋಳಾಡುತ್ತಿದ್ದರು. ವಸಾಗಂಧವುಳ್ಳ ರಕ್ತವು ವಾತಸ್ಪರ್ಶದಿಂದ ಹೆಪ್ಪುಕಟ್ಟಿಕೊಳ್ಳುತ್ತಿತ್ತು.

೩೩–೩೪. ಸಾಯುತ್ತಿರುವ ದೊಡ್ಡಾನೆಯು ಸೊಂಡಿಲನ್ನೆತ್ತಿ ಯಾವುದೋ ಕಬಂಧವನ್ನು ಹಿಡಿದುಕೊಂಡಿರುವುದು: ಸವಾರರಿಲ್ಲದ ಆನೆ ಕುದುರೆಗಳು

ರುದತ್ರಂದತ್ಪರಿಭ್ರಷ್ಟ ಶವಕ್ಷುಬ್ಧಾಸೃಗುದ್ಧತಿ |
ಮೃತಭರ್ತೃಗಲೇ ಶಸ್ತ್ರ ತ್ಯಕ್ತಪ್ರಾಣಕುಲಾಂಗನಂ || ೩೪ ||

ಸೇನೋತ್ಕ್ರಾಂತ ತತಕ್ಷಿಪ್ರ ಬಹುಪಾಂಥಪರೀಕ್ಷಣಂ |
ಶವಹಾರಕರಾಕೃಷ್ಟ ಸಪ್ರಾಣಾನುಚರಾಕುಲಂ || ೩೫ ||

ಕೇಶಶೈವಾಲವಕ್ತ್ರಾಬ್ಜ ಚಕ್ರಾವರ್ತನದೀಶತಂ |
ತರತ್ತುಂಗ ತರಂಗಾಢ್ಯ ವಹದ್ರಕ್ತಮಹಾನದಂ || ೩೬ ||

ಅಂಗಲಗ್ನಾಯುಧೋದ್ಧಾರ ವ್ಯಗ್ರಾರ್ಧಮೃತಮಾನವಂ |
ವಿದೇಶಮೃತಸಾಕ್ರಂದ ಹುತಾಂಗಗಜವಾಜಿನಂ || ೩೭ ||

ಪ್ರಾಣಾಂತಸ್ಮೃತಪುತ್ರೇಷ್ಟ ಮಾತೃದೇವಪರಾಭಿದಂ |
ಹಾಹಾಹೀಹೀತಿ ಕಥಿತ ಮರ್ಮಚ್ಛೇದನವೇದನಂ || ೩೮ ||

ಅದನ್ನು ಕೆಡಹುವುವು. ಅಳುತ್ತ ಕಿರುಚುತ್ತ ಸತ್ತುಬಿದ್ದವರಿಂದ ರಕ್ತನದಿಯು ಮೇಲಕ್ಕೆ ಹಾರುತ್ತಿರುವುದು. ಕುಲಾಂಗನೆಯರು ಶಸ್ತ್ರಗಳಿಂದ ಪ್ರಾಣವನ್ನು ತೆಗೆದುಕೊಂಡು, ತಮ್ಮ ಪತಿ ಶವದ ಕತ್ತಿನಲ್ಲಿ ಬೀಳುತ್ತಿದ್ದರು.

೩೫–೬. ಸಂಸ್ಕಾರಕ್ಕೆಂದು ಶವಗಳನ್ನು ತೆಗೆದುಕೊಡಲು ಬಂದ ಸೈನಿಕರ ಗುಂಪು ತಮಗೆ ಬೇಕಾದವರ ಶವಗಳನ್ನು ಹುಡುಕುತ್ತಿರುವುದು. ಆವಸರದಲ್ಲಿ ಈ ಸೈನಿಕರ ಗುಂಪು ಶವಗಳ ಜೊತೆಯಲ್ಲಿ ಬದುಕಿದವರನ್ನೂ ಎಳೆದುಕೊಂಡು ಹೋಗುತ್ತಿರುವುದು. ಕೂದಲುಗಳೆಂಬ ಪಾಚಿಯೂ ಮುಖಗಳೆಂಬ ಕಮಲಗಳೂ ಚಕ್ರಗಳೆಂಬ ಸುಳಿಗಳೂ ಉಳ್ಳ ನೂರಾರು ರಕ್ತನದಿಗಳೂ ಎತ್ತರವಾದ ಅಲೆಗಳನ್ನು ಎಸೆಯುತ್ತ ಹರಿಯುತ್ತಿರುವ ರಕ್ತ ಮಹಾನದಿಗಳೂ ಅಲ್ಲಿದ್ದುವು.

೩೭–೮. ಅರ್ಧ ಮೃತರಾದವರು ತಮ್ಮ ಮೈಯಲ್ಲಿ ನಾಟಿರುವ ಆಯುಧಗಳನ್ನು ಕೀಳುತ್ತಿದ್ದರು. ಯುದ್ಧದಲ್ಲಿ ಸತ್ತ ವಿದೇಶಿಗಳ ಆಭರಣ ಆನೆ ಕುದುರೆಗಳನ್ನು ವ್ಯಸನದಿಂದ ಇತರರಿಗೆ ಕೊಡುತ್ತಿದ್ದರು. ಪ್ರಾಣವನ್ನು ಬಿಡುವಾಗ ಯೋಧರು ಮಗ, ಮಿತ್ರ, ಮಾತೃ, ದೇವತೆಗಳನ್ನು ಸ್ಮರಿಸಿಕೊಳ್ಳುತ್ತಿದ್ದರು. ಹಾ ಹಾ, ಹೀ ಹೀ ಎನ್ನುತ್ತ ಮರ್ಮಚ್ಛೇದನದಿಂದ ತಮಗಾದ ವ್ಯಥೆಯನ್ನು ತೋರಿಸಿಕೊಳ್ಳುತ್ತಿದ್ದರು.

ಮ್ರಿಯಮಾಣಮಹೌಜಿಷ್ಠ ದ್ವಿಷ್ಟಪ್ರಾರಬ್ಧಸಂಚಯಂ |
ದಂತಿಯುದ್ಧಾಸಮರ್ಥಾಗ್ರ ಮೃತದೇಹೇಷ್ಟದೈವತಂ || ೩೯ ||

ಮ್ರಿಯಮಾಣಮಹಾವಜ್ಞಾ ಶೂರಾಶ್ರಿತಪಲಾಯನಂ |
ಅಶಂಕಿತಾಸೃಗಾವರ್ತ ಭೀಮಾಸ್ಪದಗಮೋತ್ಸುಕಂ || ೪೦ ||

ಮರ್ಮಚ್ಛೇದ ಶರಾಘಾತ ವ್ಯಥಾ ವಿದಿತದುಷ್ಕೃತಿ |
ಕಬಂಧಬಂಧಪ್ರಾರಬ್ಧ ವೇತಾಲವದನಾಕ್ರಮಂ || ೪೧ ||

ಉಹ್ಯಮಾನ ಧ್ವಜಚ್ಛತ್ರ ಚಾರು ಚಾಮರ ಪಂಕಜಂ |
ಕಿರತ್ಸಂಧ್ಯಾರುಣಂ ದಿಕ್ಷು ತೇಜಸ್ಕಂ ರಕ್ತಪಂಕಜಂ || ೪೨ ||

ರಥಚಕ್ರಧರಾವರ್ತಂ ರಕ್ತಾರ್ಣವಮಿವಾಪ್ಲವಂ |
ಪತಾಕಾಫೇನಪುಂಜಾಢ್ಯಂ ಚಾರುಚಾಮರಬುದ್ಬುದಂ || ೪೩ ||

೩೯--೪೦. ಶೂರರಾಗಿದ್ದವರು ಸಾಯುತ್ತ ಅಯ್ಯೋ ಪ್ರಾರಬ್ಧವೇ ಎನ್ನುತ್ತಿದ್ದರು. ಗಜಯುದ್ಧಮಾಡುತ್ತಿದ್ದವರು ತಪ್ಪಿಸಿಕೊಳ್ಳಲಾರದೆ ಏಟು ತಿಂದು ಬಿದ್ದು ಸಾಯುತ್ತ ಇಷ್ಟ ದೈವವನ್ನು ನೆನೆಯುತ್ತಿದ್ದರು. ಹೇಡಿಗಳು ಶೂರರನ್ನು ತಿರಸ್ಕರಿಸುತ್ತ ಪಲಾಯನವನ್ನು ಆಶ್ರಯಿಸಿ, ಗೊತ್ತಿಲ್ಲದೆ ರಕ್ತನದಿಯ ಸುಳಿಗೆ ಸಿಕ್ಕಿ, ಆ ಭಯಂಕರವಾದ ಸ್ಥಳದಿಂದ ಹೊರಬೀಳಲು ಯತ್ನಿಸುತ್ತಿದ್ದರು.

೪೧--೨. ಬಾಣಗಳಿಂದ ಮರ್ಮಚ್ಛೇದವಾಗಿ ಏಟುತಿಂದು ವ್ಯಥಿಸುತ್ತ ಇದು ನಮ್ಮ ದುಷ್ಕರ್ಮ ಎನ್ನುತ್ತಿದ್ದರು. ವೇತಾಳಗಳು ಕಬಂಧಗಳನ್ನು ಹಿಡಿದುಕೊಂಡು ರಕ್ತಪಾನಮಾಡುತ್ತಿದ್ದುವು. ಅಲ್ಲಿನ ರಕ್ತನದಿಗಳಲ್ಲಿ ಛತ್ರ, ಚಾಮರಗಳು ಕಮಲಗಳಂತೆ ತೇಲುತ್ತಿದ್ದುವು. ಸಂಜೆಗೆಂಪು ಸುತ್ತಲೂ ಹರಡುತ್ತಿರಲು ತೇಜಸ್ಸಮೂಹವೆಂಬ ಕೆಂದಾವರೆಯನ್ನು ಎಲ್ಲೆಲ್ಲೂ ಎಸೆದಂತೆ ಕಾಣುತ್ತಿತ್ತು.

೪೩--೪. ರಥವೆಂಬ ಪರ್ವತವೂ ಚಕ್ರವೆಂಬ ಸುಳಿಯೂ ಪತಾಕೆಯೆಂಬ ನೊರೆಯ ಹೊರೆಗಳೂ ಚಾರು ಚಾಮರಗಳೆಂಬ ಬುದ್ಬುದವೂ ಇರಲು, ರಣಭೂಮಿಯು ಎಂಟನೆಯ ಸಮುದ್ರದಂತೆ ಕಾಣಿಸುತ್ತಿತ್ತು. ತಲೆಕೆಳಗಾದ ರಥಗಳು, ಭೂಮಿಪಂಕ (ಕಳ್ಳಕೆಸರು)ದಲ್ಲಿ ಮುಳುಗಿಹೋದ ಪುರಗಳಂತೆ

ವಿಪರ್ಯಸ್ತರಥಂ ಭೂಮಿ ಪಂಕಮಗ್ನಪುರೋಪಮಂ |
ಉತ್ಪಾತವಾತನಿರ್ಧೂತ ದ್ರುಮಂ ವನಮಿವಾತತಂ || ೪೪ ||

ಕಲ್ಪದಗ್ಧ ಜಗತ್ಪ್ರಖ್ಯಂ ಮುನಿಪೀತಾರ್ಣವೋಪಮಂ |
ಅತಿವೃಷ್ಟಿಹತಂ ದೇಶಮಿವ ಪ್ರೋಜ್ಝಿತಮಾನವಂ || ೪೫ ||

ಕಲಾಪಕುಂತವಲಿತಂ ಭುಶುಂಡೀಮಂಡಲಾಕುಲಂ |
ಮತ್ತನಾಗಶತಾಕಾರ ಶವತೋಮರಮುದ್ಗರಂ || ೪೬ ||

ಶಿಲಾಶಿಖರಸಂಜಾತ ತಾಲಜಾಲಮಿವಾತತಂ |
ತರದ್ರಕ್ತನದೀತೀರ ಜಾತಕುಂತೋನ್ನತದ್ರುಮಂ || ೪೭ ||

ನಾಗಾಂಗಸ್ಯೂತಹೇತ್ಯೋಘ ವೃಕ್ಷಾಂಶುಕುಸುಮಾಕುಲಂ |
ಕಂಕಕೃಷ್ಟಾಂತ್ರರಸನಾ ವೃಂದಜಾಲಕಿತಾಂಬರಂ || ೪೮ ||

ಇದ್ದುವು: ಬಿರುಗಾಳಿಯಿಂದ ತಲೆಕೆಳಗಾದ ಗಿಡಗಳುಳ್ಳ ವಿಸ್ತಾರವಾದ ವನದಂತಿದ್ದುವು.

೪೫--೬. ಈ ರಣಭೂಮಿಯು ಕಲ್ಪಾಂತದಲ್ಲಿ ಸುಟ್ಟು ಉರಿದು ಉಳಿದ ಜಗತ್ತಿನಂತೆಯೂ ಅಗಸ್ತ್ಯಮುನಿಯು ಕುಡಿದ ಸಮುದ್ರದಂತೆಯೂ ಅತಿವೃಷ್ಟಿಯಿಂದ ಹಾಳಾದ ದೇಶದಂತೆಯೂ ನಿರ್ಜನವಾಗಿತ್ತು. ಸತ್ತವರ ಆಭರಣಗಳೂ ಆಯುಧಗಳೂ ಅಲ್ಲಿಯೇ ಇದ್ದುವು. ಭುಶುಂಡಿಗಳ ಗುಂಪು ಅಲ್ಲಿಯೇ ಬಿದ್ದಿತ್ತು. ಬಿದ್ದಿದ್ದ ಹೆಣಗಳ ರಾಶಿಯು ಮದ್ದಾನೆಗಳಂತೆಯೂ ಮುದ್ಗರಗಳು ನೂರಾರು ಪರ್ವತಗಳಂತೆಯೂ ಇದ್ದುವು.

೪೭--೮. ಹರಿಯುತ್ತಿರುವ ರಕ್ತನದಿಗಳ ತೀರದಲ್ಲಿ ನಿಂತಿರುವ ಕುಂತಾಯುಧಗಳು ಎಂಬ ಎತ್ತರವಾದ ಮರಗಳು ಬೆಟ್ಟದ ತುದಿಯಲ್ಲಿ ಬೆಳೆದಿರುವ ವಿಸ್ತಾರವಾದ ತಾಳೆಯ ಮರಗಳಂತೆ ಇದ್ದುವು. ಆನೆಗಳ ಮೈಯಲ್ಲಿ ಆಯುಧಗಳು ನಾಟಿರಲು ಮರಗಳಂತೆಯೂ, ಆಯುಧ ಕಾಂತಿಯು ಪುಷ್ಪಮಾಲೆಯಂತೆಯೂ ಇತ್ತು. ಹದ್ದುಗಳು ನರಗಳನ್ನೂ ನಾಲಿಗೆಗಳನ್ನೂ ಎಳೆದುಕೊಂಡು ಹೋಗುತ್ತಿದ್ದರೆ, ಆಕಾಶದಲ್ಲಿ ಬಲೆಯನ್ನು ಬೀಸಿದಂತೆ ಇರುತ್ತಿತ್ತು.

ಅಸೃಕ್ಸರಿತ್ತೀರಜಾತ ಕುಂತೋನ್ನತವನದ್ರುಮಂ |
ಅಸೃಕ್ಸರೋವರೋರ್ಧ್ವಸ್ಥ ಪತಾಕಾನಲಿನೀಗಣಂ || ೪೯ ||

ರಕ್ತಕರ್ದಮನಿರ್ಮಗ್ನ ನರಾಹೂತಸುಹೃಜ್ಜನಂ |
ಕರೀಂದ್ರಕುಣಪಾಪಾತನಿರ್ಯದ್ಭಗ್ನಜನೇಕ್ಷಿತಂ || ೫೦ ||

ಹೇತಿಲೂನಲತೈರ್ವೃಕ್ಷೈಃ ಸಂದಿಗ್ಧಾರ್ಧಕಬಂಧಕಂ |
ಅಸೃಂಗ್ನದೀವಪದ್ಧಸ್ತಿ ಕಟಕರ್ಪಟನೌಗಣಂ || ೫೧ ||

ರಕ್ತಸ್ರೋತಃಸ್ಫುರಚ್ಛುಕ್ಲ ವಸ್ತ್ರಡಿಂಡೀರಪಿಂಡಕಂ |
ಸಂಚಾರನಿಯತಕ್ಷಿಪ್ರ ಭೃತ್ಯವಿಚ್ಛಿನ್ನಮಾನವಂ || ೫೨ ||

ಇತಶ್ಚೇತಶ್ಚ ನಿಪತತ್ಕಬಂಧರವದಾನವಂ |
ಊರ್ಧ್ವಸ್ಥೂಲಾಕ್ಷಚಕ್ರೌಘಚ್ಛಿನ್ನಸೈನ್ಯದ್ರವಜ್ಜನಂ || ೫೩ ||

೪೯--೫೦. ರಕ್ತನದಿಗಳ ತೀರದಲ್ಲಿ ಕುಂತಗಳು ನಿಂತಿದ್ದರೆ ಎತ್ತರವಾದ ಮರಗಳು ಬೆಳೆದಿವೆಯೋ ಎಂಬಂತಿತ್ತು. ರಕ್ತಸರಸ್ಸಿನಲ್ಲಿ ಪತಾಕೆಗಳೆಂಬ ಕಮಲ ಸಮೂಹವಿತ್ತು. ರಕ್ತಪಂಕದಲ್ಲಿ ಮುಳುಗಿದ ನರರು ಎತ್ತಿ, ಬನ್ನಿ ಎಂದು ಮಿತ್ರರನ್ನು ಕರೆಯುತ್ತಿದ್ದರು. ಆನೆಗಳ ಶವಗಳ ನಡುವೆ ಸಿಕ್ಕಿಕೊಂಡು ಕೈಕಾಲು ಮುರಿದುಕೊಂಡವರು ನೋಡುತ್ತಿದ್ದರು.

೫೧–೫೨. ಅರ್ಧಕಬಂಧಗಳು ಬಳ್ಳಿಗಳನ್ನು ಕತ್ತರಿಸಿದ ಮರಗಳೋ ಎನ್ನುವಂತಿದ್ದುವು. ರಕ್ತ ನದಿಯಲ್ಲಿ, ಆನೆಗಳ ಮೇಲೆ ಹಾಕುವ ಚಾಪೆಗಳೂ, ದಟ್ಟಗಳೂ ತೆಪ್ಪಗಳಂತೆ ತೇಲುತ್ತಿದ್ದುವು. ರಕ್ತ ಪ್ರವಾಹಗಳಲ್ಲಿ ಹೋಗುತ್ತಿದ್ದ ಬಿಳಿಯ ಬಟ್ಟೆಗಳು ನೊರೆಯ ಹೊರೆಯಂತಿತ್ತು. ಪಹರೆಯವರು ನಿಂತವರ ನಡುವೆ ಅವಸರಾವಸರವಾಗಿ ದಾರಿಬಿಡಿಸಿಕೊಂಡು ಹೋಗುತ್ತಿದ್ದರು.

೫೩–೫೪. ಕಬಂಧರೆಂಬ ನವರಾಕ್ಷಸರು ಅತ್ತಿತ್ತ ಓಡಾಡುತ್ತಿದ್ದರು. ತಲೆಕೆಳಗಾಗಿ ಬಿದ್ದಿರುವ ರಥಗಳ ದಪ್ಪ ಅಚ್ಚು ಚಕ್ರಗಳಲ್ಲಿ ಓಡುವ ಜನರು ಬಿದ್ದು ಕೈಕಾಲು ಮುರಿದುಕೊಳ್ಳುತ್ತಿದ್ದರು. ರಕ್ತನದಿಗಳ ಭಾಂಕಾರ ಫೇಂಕಾರ ಗಳೊಡನೆ ಸಾಯುತ್ತಿರುವವರ ಕೂಗೂ ಕೇಳಿಸುತ್ತಿತ್ತು. ಬಂಡೆಗಳ ಮೇಲಿನಿಂದ

ರಕ್ತನಿಃಸ್ವನಭಾಂಕಾರ ಫೇತ್ಕಾರಾರ್ಥಮೃತಾರವಂ |
ಶಿಲಾಮುಖಲಲದ್ರಕ್ತ ಧಾರಾಧೂತರಜಃಖಗಂ || ೫೪ ||

ಸುತಾಲೋತ್ತಾಲವೇತಾಲತಾಲತಾಂಡವಸಂಕಟಂ |
ಪರ್ಯಸ್ತರಥದಾರ್ವಂತರರ್ಧಾಂತರಿತಸದ್ಭಟಂ || ೫೫ ||

ಅಂತಸ್ಥಸಜ್ಜೀವಭಟ ಸ್ಪಂದಿಸ್ಪಂದನಭೀತಿದಂ|
ರಕ್ತಕರ್ದಮಪೂರ್ಣಾಸ್ಯ ಕಿಂಚಿಜ್ಜೀವಕೃಪಾಚ್ಛವಂ || ೫೬ ||

ಕಿಂಚಿಜ್ಜೀವನರೋದ್ಗ್ರೀವ ದುಃಖದೃಷ್ಟಶ್ವವಾಯಸಂ |
ಏಕಾಮಿಷೋತ್ಕಕ್ರವ್ಯಾದ ಯುದ್ಧಕೋಲಾಹಲಾಕುಲಂ ||
ಏಕಾಮಿಷಾರ್ಥಯುದ್ಧೇಹಾ ಮೃತಕ್ರವ್ಯಾದಸಂಕುಲಂ || ೫೭ ||

ಬೀಳುತ್ತಿರುವ ರಕ್ತಧಾರೆಗಳಲ್ಲಿ ಪಕ್ಷಿಗಳು ತಮ್ಮ ಮೈಮೇಲಿನ ಧೂಳನ್ನು ತೊಳೆದುಕೊಳ್ಳುತ್ತಿದ್ದುವು.

೫೫. ತಾಳವೃಕ್ಷದಂತೆ ಎತ್ತರವಾಗಿರುವ ಭೇತಾಳಗಳು ತಾಳ ಸಮೇತರಾಗಿ ತಾಂಡವವಾಡುತ್ತ ತುಂಬಿಕೊಂಡಿದ್ದುವು. ಮುರಿದು ಬಿದ್ದುಹೋಗಿರುವ ರಥಗಳ ಮರಗಳ ನಡುವೆ ವೀರಭಟರು ಸಿಕ್ಕಿಹಾಕಿಕೊಂಡಿದ್ದರು.

೫೬. ಕೆಳಗೆ ಬಿದ್ದಿರುವ ಜೀವಂತರಾದ ಭಟರ ಒದ್ದಾಟದಿಂದ ಅವರ ಮೇಲೆ ಬಿದ್ದಿರುವ ಹೆಣಗಳು ಅಲ್ಲಾಡುವುದನ್ನು ನೋಡಿದರೆ ಭೀತಿಯಾಗುತ್ತಿತ್ತು. ರಕ್ತದ ಕೆಸರು ಬಾಯಿ ತುಂಬಾ ತುಂಬಿರಲು, ಕುಟುಕು ಜೀವದವರು ಸತ್ತವರನ್ನು ನೋಡಿ ಅಯ್ಯೋ ಎನ್ನುತ್ತಿದ್ದರು.

೫೭. ಕುಟುಕು ಜೀವದವರು ಕತ್ತೆತ್ತಿ, ತಮಗೆ ತೊಂದರೆ ಕೊಡುತ್ತಿರುವ ನಾಯಿ ಕಾಗೆಗಳನ್ನು ನೋಡುತ್ತಿದ್ದರು.ಒಂದೇ ತುಂಡಿನ ಮಾಂಸಕ್ಕಾಗಿ ಮಾಂಸಾಹಾರಿ ಪಕ್ಷಿಗಳು ಕೋಲಾಹಲದಿಂದ ಯುದ್ಧಮಾಡುತ್ತಿದ್ದುವು. ಹೀಗೆ ಒಂದೇ ತುಂಡಿಗಾಗಿ ಹೋರಾಡಿ ಎಷ್ಟೋ ಮಾಂಸಾಹಾರಿ ಪಕ್ಷಿಗಳು ಸತ್ತುಹೋದುವು.

ವಿವೃತ್ತಾಸಂಖ್ಯಾಶ್ವದ್ವಿರದ ಪುರುಷಾಧೀಶ್ವರರಥ--
ಪ್ರಕೃತ್ತೋಷ್ಟ್ರಗ್ರೀವಾಪ್ರಸೃತ ರುಧಿರೋದ್ಧಾರಸುಸರಿತ್ |
ರಣೋದ್ಯಾನಂ ಮೃತ್ಯೋಸ್ತದಭವದಶುಷ್ಕಾಯುಧಲತಂ
ಸಶೈಲಂ ಕಲ್ಪಾಂತೇ ಜಗದಿವ ವಿಪರ್ಯಸ್ತಮಖಿಲಂ || ೫೮ ||

ಇತ್ಯಾರ್ಷೇ ಶ್ರೀ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿಪ್ರಕರಣೇ
"ಆಹವವರ್ಣನಂ" ನಾಮ ಅಷ್ಟತ್ರಿಂಶಃ ಸರ್ಗಃ

---

೫೮. ಅಸಂಖ್ಯವಾಗಿ ಬಿದ್ದಿರುವ ಕುದುರೆ ಆನೆ ನಾಯಕ ರಥಿಕ ಒಂಟಿ ಇವುಗಳು ಕತ್ತರಿಸಿದ ಕತ್ತುಗಳಿಂದ ಸುರಿಯುವ ರಕ್ತವು ನದಿಯಾಗಿ ಪ್ರವಹಿಸುತ್ತಿರಲು, ಒಣಗದಿರುವ ಆಯುಧಗಳೆಂಬ ಲತೆಗಳಿರಲು, ಕಲ್ಪಾಂತದಲ್ಲಿ ಎಲ್ಲವೂ ತಲೆಕೆಳಗಾಗಿ ಹೋಗಿರುವ ಸಶೈಲ ಜಗತ್ತಿನಂತೆ ಕಾಣುವ ಆ ರಣಭೂಮಿಯು ಮೃತ್ಯುವಿನ ಉದ್ಯಾನವನದಂತಿತ್ತು.

ಇಂತಿಪು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಆಹವ ವರ್ಣನ" ಎಂಬ ಮೂವತ್ತೆಂಟನೆಯ ಸರ್ಗವು.

ಏಕೋನಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಅಥ ವೀರ ಇವಾರಕ್ತಃ ಕಾಲೇನಾಸ್ತಮಿತೋ ರವಿಃ |
ಅಸ್ತ್ರತೇಜಃಪರಿಮ್ಲಾನ ಪ್ರತಾಪೋಽಬ್ಧೌ ಸಮುಜ್ಝಿತಃ || ೧ ||

ರಣರಕ್ತರುಚಿರ್ವ್ಯೋಮ ದರ್ಪಣಪ್ರತಿಬಿಂಬಿತಾ |
ಜಹೌ ಸೂರ್ಯಶಿರಚ್ಛೇದೆ ಸಂಧ್ಯಾಲೇಖೋದಭೂತ್ ಕ್ಷಣಂ || ೨ ||

ಭೂಪಾತಾಲನಭೋದಿಗ್ಭ್ಯಃ ಪ್ರಲಯಾಬ್ಧಿಜಲೌಘವತ್ |
ಸಮಾಜಗ್ಮುಸ್ತನತ್ತಾಲಾ ವೇತಾಲಾ ವಲಯಾ ಇವ || ೩ ||

ಮೃಷ್ಟಧ್ವಾಂತಾಸಿವಲಿತೇ ದಿನನಾಗೇಂದ್ರಮಸ್ತಕೇ |
ಸಂಧ್ಯಾರಾಗಾರುಣಂ ಕೀರ್ಣಂ ತಾರಾನಿಕರಮೌಕ್ತಿಕಂ || ೪ ||

ಮೂವತ್ತೊಂಭತ್ತನೆಯ ಸರ್ಗ

೧, ಶ್ರೀ ವಸಿಷ್ಠನು ಹೇಳಿದನು :—ಅನಂತರ ಭಾಸ್ಕರನು ವೀರನಂತೆ ಕೆಂಪಾಗಿ, ಅಸ್ತ್ರತೇಜಸ್ಸಿನಿಂದ ಮೊಂಕಾದ ಪ್ರತಾಪವುಳ್ಳವನಾಗಿ, ಸಮುದ್ರದಲ್ಲಿ ಬಿದ್ದು ಕಾಲವಶನಾಗಿ ಮುಳುಗಿದನು.

೨.೯ ಸೂರ್ಯನೆಂಬ ವೀರನ ತಲೆಯು ಉರುಳಿದರ ಫಲವೆಂಬಂತೆ, ರಣಭೂಮಿಯ ರಕ್ತಕಾಂತಿಯು ಆಕಾಶವೆಂಬ ಕನ್ನಡಿಯಲ್ಲಿ ಪ್ರತಿಫಲಿಸಿ ತೆಂಬಂತೆ, ಸಂಧ್ಯಾರಾಗವು ಉದಯಿಸಿತು.

೩. ಭೂಮಿ, ಪಾತಾಳ ಆಕಾಶ ದಿಕ್ಕುಗಳಿಂದೆಲ್ಲ ಪ್ರಲಯ ಸಮುದ್ರದ ಜಲಪ್ರವಾಹಗಳು ನುಗ್ಗುವಂತೆ, ತಾಲಗಳನ್ನು ಕಟ್ಟಕೊಂಡು ಗುಂಡು ಗುಂಡು ಗಿರುವ ವೇತಾಲಗಳು ಎದ್ದುಬಂದುವು.

೪. ದಿನವೆಂಬ ಗಜೇಂದ್ರನ ಮಸ್ತಕದಮೇಲೆ ಕತ್ತಲೆಯೆಂಬ ಕತ್ತಿಯನ್ನು ಮಸೆಯಲು, ಸಂಧ್ಯಾರಾಗವೆಂಬ ರಕ್ತವೂ ತಾರಾನಿಕರವೆಂಬ ಮೌಕ್ತಿಕವೂ ಎಲ್ಲೆಲ್ಲೂ ಚೆಲ್ಲಿದುವು.

ನಿಃಸತ್ವೇಷು ತಮೋಂಧೇಷು ರಸನಾರಸಶಾಲಿಷು |
ಸಂಕೋಚಮಾಯಯುಃ ಪದ್ಮಾ ಮೃತಾನಾಂ ಹೃದಯೇಷ್ವಿವ || ೫ ||

ನಿಾಲತ್ಪಕ್ಷಾಃ ಕ್ಷಣತ್ಸುಪ್ತಾಃ ಕೃಚ್ಛ್ರಪ್ರೋಚ್ಛಿತಕಂಧರಾಃ |
ಕುಲಾಯೇಷು ಖಗಾ ಆಸ್ಸ್ ಶವಾಂಗೇಷ್ವಿವ ಹೇತಯಃ || ೬ ||

ಆಸನ್ನಚಂದ್ರಸುಭಗಾ ಲೋಕಾಃ ಕುಸುಮಪಂಕ್ತಯಃ |
ಉಲ್ಲಸದ್ಧೃದಯಾ ಜಾತಾ ವೀರಪಕ್ಷೇಷ್ವಿವ ಶ್ರಿಯಃ || ೭ ||

ರಕ್ತವಾರಿಮಯೀ ಸಾಯಮಂಗ ಗುಪ್ತಶಿಲೀಮುಖಾ |
ಸಂಕುಚದ್ವಕ್ತ್ರಪದ್ಮಾಭೂದ್ರಣಭೂಮಿರಿವಾಬ್ಜನೀ || ೮ ||

ಉಪರ್ಯಭೂದ್ವ್ಯೋಮ ಸರಸ್ತಾರಾಕುಮುದಮಂಡಿತಂ |
ಅಧಸ್ತ್ವಭೂದ್ವಾರಿಸರಃ ಸ್ಫುರತ್ಕುಮುದತಾರಕಂ || ೯ ||

---

೫. ಕೊಳಗಳೂ ನೀರುಗಳೂ ಕತ್ತಲಿನಿಂದ ಮುಚ್ಚಿಹೋಗಿ, ಪ್ರಾಣಿಗಳೊಂದೂ ಇಲ್ಲದಂತಾಗಲು ಮೃತರ ಹೃದಯದಲ್ಲಾಗುವಂತೆ, ಪದ್ಮಗಳು ಸಂಕೋಚವನ್ನು ಹೊಂದಿದುವು. (ಮೃತ ಹೃದಯವು ನಿಸ್ಸತ್ವವಾಗಿ, ತಮಸ್ಸಿನಿಂದ ತುಂಬಿ, ನಾಲಗೆರುಚಿಯನ್ನರಿಯುವ ಪ್ರಾಣಗಳು ಇಲ್ಲವಾಗಲು ಅಲ್ಲಿನ ಹೃದಯಕಮಲವು ಮುಗಿಯುವುದು.)

೬. ಶವಾಂಗಗಳಲ್ಲಿ ಆಯುಧಗಳು ಹೇಗೋ ಹಾಗೆ, ರೆಕ್ಕೆಗಳನ್ನು ಮುದುರಿಕೊಂಡು, ಕ್ಷಣದಲ್ಲಿ ನಿದ್ರಾವಶವಾಗಿ, ಕತ್ತುಗಳನ್ನು ಮಡಿಸಿಕೊಂಡು ಗೂಡುಗಳಲ್ಲಿ ಹಕ್ಕಿಗಳು ಇದ್ದುವು.

೭. ಲೋಕವೆಲ್ಲವೂ ಚಂದ್ರೋದಯದಿಂದ ಮೆರೆಯುತ್ತ (ಆಗ ಅರಳುವ) ಕುಸುಮ ಪಂಕ್ತಿಯುಳ್ಳದಾಗಿ, ಜಯಶ್ರೀಯನ್ನು ಪಡೆದ ವೀರಪಕ್ಷದಂತೆ ಉಲ್ಲಾಸಪಡುತ್ತಿತ್ತು.

೮. ರಣಭೂಮಿಯಂತೆ ಸರಸ್ಸು ಸಂಧ್ಯಾರಾಗದಿಂದ ಕೆಂಪಾದ ನೀರೂ ತನ್ನೊಳಗೆ ಅಡಗಿರುವ ಶಿಳೀಮುಖ (ಬಾಣ, ದುಂಬಿ), ಗಳೂ ಸಂಕೋಚವಾಗುತ್ತಿರುವ ಮುಖಪದ್ಮವೂ ಉಳ್ಳದಾಯ್ತು.

೯. ಮೇಲೆ ಆಕಾಶ ಸರೋವರವು ತಾರೆಗಳೆಂಬ ಕುಮುದಗಳಿಂದ

ತಮಸ್ಯಪೇತಭೀತಾನಿ ಭೂತಾನಿ ಮಿಲಿತಾನ್ಯಲಂ |
ಪಯಾಂಸೀವ ವಿಸೇತೂನಿ ಪ್ರಸೃತಾನಿ ದಿಶಂ ಪ್ರತಿ ॥ ೧೦ ॥

ಆಸೀದ್ರಣಾಂಗಣಂ ಗಾಯದ್ವೇತಾಲಕುಲಸಂಕುಲಂ |
ಕ್ವಣತ್ಕಂಕಾಲಕಾಂಕಸ್ಥಕಂಕಕಾಕೋಲಕೇಲಿಮತ್ ॥ ೧೧ ॥

ಅಥ ಕಾಷ್ಠಚಿತಾಜ್ವಾಲ ಸತಾರಾಂಬರಭಾಸ್ಕರಂ |
ಪಚತ್ಪಚಪಚಾಶಬ್ದ ಮೇದೋಮಾಂಸಮಯಾನಲಂ ॥ ೧೨ ॥

ಸರ್ವಾಂಗಾಸ್ಥಿಸ್ಫುಟಾಸ್ಫೋಟ ಸ್ಫುಟಚ್ಚಿತಿಚಯೋನ್ಮುಖಂ |
ವೇತಾಲಲಲನಾರಬ್ಧ ಜಲಲೀಲಾತಿರೋಹಿತಂ ॥ ೧೩ ॥

ಮುದ್ದಾಯ್ತು: ಕೆಳಗೆ ನೀರಸರೋವರವು ಕುಮುದಗಳೆಂಬ ತಾರೆಗಳಿಂದ ಮುದ್ದಾಯ್ತು.

೧೦. ಕತ್ತಲಾಯಿತು: ಪರಸ್ಪರ ಭೀತಿಯನ್ನು ಬಿಟ್ಟು (ಹೊರಗಿನಿಂದ ಬರುವ ಭೀತಿಯನ್ನು ತಪ್ಪಿಸಿಕೊಳ್ಳಲು) ಪ್ರಾಣಿಗಳು ಒಂದಕ್ಕೊಂದು ಹೊಂದಿಕೊಂಡುವು: ಸೇತುವೊಡೆದು ದಿಕ್ಕು ದಿಕ್ಕಿಗೆ ನುಗ್ಗುವ ನೀರುಗಳು ಮತ್ತೆ ಒಟ್ಟುಗೂಡಿದಂತೆ ಆಯ್ತು.

೧೧. ರಣಾಂಗಣವು ಹಾಡುತ್ತಿರುವ ವೇತಾಲಕುಲ ಸಂಕುಲವಾಗಿ ಹೆಣಗಳ ಮೇಲೆ ನಿಂತು ಕೂಗಿಕೊಂಡು ಕುಣಿಯುತ್ತಿರುವ ಕಾಡುಹಂದಿಗಳಿಂದ ಕೂಡಿತು.

೧೨. ಕಾಷ್ಠ ಚಿತೆಯ ಜ್ವಾಲೆಗಳಿಂದ (ಹಾರುತ್ತಿರುವ ಕಿಡಿಗಳಿಂದ) ನಕ್ಷತ್ರದಿಂದ ಕೂಡಿದ ಆಕಾಶದಂತಿತ್ತು: (ಅಲ್ಲಿ) ಪಚ ಪಚ ಎಂದು ಶಬ್ದಮಾಡಿ ಬೇಯುತ್ತಿರುವ ಮೇದೋ ಮಾಂಸಗಳಿಂದ ಕೂಡಿದ ಬೆಂಕಿಯಿತ್ತು.

೧೩. (ಶವ) ಸರ್ವಾಂಗಗಳ ಅಸ್ಥಿಗಳು ಸ್ಫುಟವಾಗಿ ಆಸ್ಫೋಟವಾಗುತ್ತಿರಲು ಚಿತಿಯ ಮುಂಭಾಗವೂ ಕೆಡುತ್ತಿತ್ತು. ವೇತಾಲ ಲಲನೆಯರು (ಒಳಗೆ ಸೇರಿಕೊಂಡು) ಜಲಕ್ರೀಡೆಯನ್ನು ಆಡುತ್ತಿರುವರೋ ಎಂಬಂತೆ ಜ್ವಾಲೆಗಳು ಚಿತಿಗಳಿಂದ ಮೇಲಕ್ಕೆ ಹಾರುತ್ತಿದ್ದುವು.

ಶ್ವಕಾಕಯಕ್ಷವೇತಾಲ ತಾಲಕೋಲಾಹಲೋಲ್ಬಣಂ|
ಗಮಾಗಮೇನ ಭೂತಾನಾಂ ಸಮುಡ್ಡೀನವನೋಪಮಂ ‖ ೧೪ ‖

ರಕ್ತಮಾಂಸವಸಾಮೇದೋ ಹರಣವ್ಯಗ್ರಡಾಕಿನಿ|
ಚರ್ವಿತಾಸೃಗ್ವಸಾಮಾಂಸ ಸ್ರವತ್ಸೃಕ್ವಿಪಿಶಾಚಕಂ ‖ ೧೫ ‖

ಮಧ್ಯಮಧ್ಯಚಿತಾಲೋಕ ಪ್ರಕಟಾಸೃಕ್ಶವವ್ರಜಂ |
ವಿರೂಪಿಕಾನೀಯಮಾನ ಸ್ವಾಂಸನ್ಯಸ್ತಮಹಾಶವಂ ‖ ೧೬ ‖

ಉತ್ತಾಂಡವೋಗ್ರಕುಂಭಾಂಡ ಮಂಡಲೋಡ್ಡಾಮರೋದರಂ |
ಛಮಿಚ್ಛಮಿತ್ಪ್ರಲಾಪಾಂತಂ ಮೇದೋಸೃಗ್ಬಾಷ್ಪ ಸಾಂಬುದಂ ‖ ೧೭ ‖

ವಹದ್ರಕ್ತನದೀರಂಹೋರೂಢಭೂಚರರೂಪಿಕಂ |
ವೇತಾಲಕುಲಕಂಕಾಲ ಕರ್ಷಣಾಕುಲಕಾಕಲಂ ‖ ೧೮ ‖

---

೧೪. ನಾಯಿ, ಕಾಗೆ, ಯಕ್ಷ, ವೇತಾಲ, ಇವುಗಳ ತಾಲಗಳ ಕೋಲಾಹಲಗಳಿಂದ ಭಯಂಕರವಾಗಿ, ಪ್ರಾಣಿಗಳ ಬಂದುಹೋಗುವಿಕೆಯಿಂದ ಹಾರುತ್ತಿರುವ ವನವೊ ಎಂಬಂತೆಯೂ ಇತ್ತು.

೧೫. ರಕ್ತ ಮಾಂಸ ವಸಾಮೇದಸ್ಸುಗಳನ್ನು ತೆಗೆದುಕೊಂಡು ಹೋಗುತ್ತಿರುವ ಡಾಕಿನಿಯರೂ, ತಿನ್ನುತ್ತಿರುವ ರಕ್ತಮಾಂಸಾದಿಗಳು ಸುರಿಯುತ್ತಿರುವ ಕಟವಾಯುಳ್ಳ ಪಿಶಾಚಿಗಳೂ (ತುಂಬಿದ್ದುವು)-

೧೬. ಆಗಾಗ ಚಿತಾಜ್ವಾಲೆಯ ಬೆಳಕಿನಿಂದ ರಕ್ತವು ನಿಂತಿರುವುದೂ ಹೆಣಗಳು ಒಟ್ಟಿರುವುದೂ ಕಾಣುವುದು. ಕಟಪೂತನೆಯರು ದೊಡ್ಡ ದೊಡ್ಡ ಹೆಣಗಳನ್ನು ಹೆಗಲಮೇಲೆ ಎಳೆದುಕೊಂಡು ಹೋಗುತ್ತಿರುವರು.

೧೭. ಉಗ್ರವಾದ ತಾಂಡವಮಾಡುತ್ತಿರುವ. ಕುಂಭಾಂಡವೆಂಬ ಪಿಶಾಚಗಳ ಗುಂಪು ತಮ್ಮ ಭಾರಿಯ ಹೊಟ್ಟೆಯನ್ನು ಬಿಟ್ಟುಕೊಂಡಿರುವುವು. ಛಮಿ ಛಮಿ, ಎಂಬ ಶಬ್ದದಿಂದ ಮೇದಸ್ಸು ರಕ್ತಗಳ ಹಬೆಯನ್ನು ಚಿತೆಗಳು ಉಗುಳುತ್ತಿರುವುವು.

೧೮. ಹರಿಯುತ್ತಿರುವ ರಕ್ತನದಿಯ ಪ್ರವಾಹ ವೇಗವನ್ನು ತಡೆಯಲು ಭದ್ರವಾಗಿ ಕಾಲೂರಿರಲು, ಭೂಚರಿಯರಂತೆ ಕಾಣುವ ಆ ವೇತಾಲ

ಮೃತೇಭೋದರಮಂಜೂಷಾ ಸುಪ್ತವೇತಾಲಬಾಲಕಂ ।
ವಿವಿಕ್ತೈಕರಣೋದ್ದೇಶ ಪಾನಕ್ರೀಡಾಸ್ಥರಾಕ್ಷಸಂ ॥ ೧೯ ॥

ಮತ್ತವೇತಾಲಕಲಹ ಚಿತಾಲಾತರಣೋಜ್ಜ್ವಲಂ ।
ವಹದ್ರಕ್ತವಸಾಮಿಶ್ರ ಗಂಧಬಂಧುರಮಾರುತಂ ॥ ೨೦ ॥

ರೂಪಿಕಾಪೇಟಿಕಾವಾಂತ ರಣದ್ರಟರಟಾರವಂ ।
ಅರ್ಧಪಕ್ವಶವಾಸ್ವಾದ ಲುಬ್ಧಯಕ್ಷೋಲ್ಲಸತ್ಕಲಿ ॥ ೨೧ ॥

ತುಂಗವಂಗಕಲಿಂಗಾಂಗ ತಂಗಣಾಂಗಲಗತ್ಖಗಂ ।
ತಾರೋಪಾತೋಪಮ ಹಸತ್ಸಂಮುಖಜ್ವಾಲರೂಪಿಕಂ ॥ ೨೨ ॥

ಕುಲಗಳು ತಮಗೆ ಸಹಜವಾದ ಕಾಕಲ (ಹರ್ಷಧ್ವನಿ) ಗಳನ್ನು ಮಾಡುತ್ತ ಶವಗಳನ್ನು ಎಳೆದುಕೊಂಡು ಹೋಗುತ್ತಿರುವುವು.

೧೯. ಸತ್ತುಬಿದ್ದಿರುವ ಆನೆಯ ಹೊಟ್ಟೆಯಲ್ಲಿ ಒಬ್ಬ ಬೇತಾಳ ಬಾಲನು ಮಲಗಿರುವನು. ಏಕಾಂತವಾಗಿರುವ ರಣಭೂಮಿಯೊಂದೆಡೆಯಲ್ಲಿ ಒಬ್ಬ ರಾಕ್ಷಸನು ಪಾನಕ್ರೀಡೆಯಲ್ಲಿರುವನು.

೨೦. ವೇತಾಲಗಳು ಚಿತೆಯಿಂದ ಕೊಳ್ಳಿಗಳನ್ನು ಎಳೆದುಕೊಂಡು ಕೊಳ್ಳಾಕೊಳ್ಳಿಯಾಗಿ ಹೋರಾಡುತ್ತಿರುವುವು. ಹರಿಯುತ್ತಿರುವ ರಕ್ತವಸಗಳ ಮಿಶ್ರಗಂಧವು ಗಾಳಿಯಲ್ಲಿ ಬೆರೆದು ಮೆರೆಯುತ್ತಿರುವುದು.

೨೧. ರೂಪಿಕೆಯರು (ಪೂತನಾಭೇದ) ರಟರಟ ಎಂದು ಶಬ್ದಮಾಡಿಕೊಂಡು ತಮ್ಮ ಪೆಟ್ಟಿಗೆಗಳನ್ನು ಎಳೆದುಕೊಂಡು ತಿರುಗುತ್ತಿರುವರು. ಅರ್ಧಪಕ್ವವಾದ ಶವಗಳನ್ನು ತಿನ್ನುವುದಕ್ಕೆ ಆಸೆಪಟ್ಟ ಯಕ್ಷರು ಅದಕ್ಕಾಗಿ ಹೋರಾಡುತ್ತಿರುವರು.

೨೨. ಎತ್ತರವಾದ ವಂಗ (ಮರ) ದ ಮೇಲಿದ್ದ ಕಲಿಂಗ ಪಕ್ಷಿಗಳು ಅಂಗ (ಸುಲಭ) ವಾಗಿ ತಂಗಣ (ಇಳಿದು) ಅಂಗ (ಹೆಣ) ಗಳಲ್ಲಿ ಕುಳಿತುಕೊಳ್ಳುವುವು. ಆ ಹಕ್ಕಿಗಳು ಉರಿಯುತ್ತಿರುವ ಮುಖಜ್ವಾಲೆಗಳಿಂದ ಅವು ಬೀಳುತ್ತಿರುವ ನಕ್ಷತ್ರಗಳೇ ಎಂಬಂತಿರುವುವು.

ಪತದ್ವೇತಾಲಸೋಲ್ಲಾಸ ಮಧ್ಯಸ್ಥಾಸೃಗ್ವಿರೂಪಿಕಂ |
ಪಿಶಾಚಾಕರ್ಣಿತಾಭ್ಯರ್ಣ ಯೋಗಿನೀಗಣನಾಯಕಂ || ೨೩ ||

ಪ್ರಸೃತಾಂತ್ರಮಹಾತಂತ್ರೀ ಪ್ರಾಯಸಂಪನ್ನವಾದನಂ |
ಪಿಶಾಚವಾಸನೋತ್ಕ್ರಾಂತ ಪಿಶಾಚೀಭೂತಮಾನವಂ || ೨೪ ||

ರೂಪಿಕಾಲೋಕನಾಪೂರ್ವ ತ್ರಾಸಾರ್ಧಮೃತಸದ್ಭಟಂ |
ಕ್ವಚಿದ್ವೇತಾಲರಕ್ಷೋಭಿರಪರೀಪೂರ್ಣಮುದ್ರಕಂ || ೨೫ ||

ಸ್ವರೂಪಿಕಾಸ್ಕಂಧ ಪತಚ್ಛವ ತ್ರಸ್ತನಿಶಾಚರಂ|
ನಭಃಸಂಘಟ್ಟಿತಾಪೂರ್ವಭೂತಪೇಟಕಸಂಕಟಂ || ೨೬ ||

ಅತಿಪ್ರಯತ್ನಾಪಹೃತ ಮ್ರಿಯಮಾಣನರಾಮಿಷಂ
ಸ್ವಭಕ್ಷ್ಯಾಪೇಕ್ಷಪಕ್ಷೇಷು ವಿಕ್ಷಿಪ್ತಶವರಾಶಿಮತ್ || ೨೭ ||

---

೨೩. ರಕ್ತದ ಮಡುವಿನಲ್ಲಿ ಸಂತೋಷವಾಗಿ ಧುಮುಕಿ ವೇತಾಲಗಳೂ ವಿರೂಪವಾಗಿರುವ ಯೋಗಿನೀಗಣದ ನಾಯಕನನ್ನುಸುತ್ತಲೂ ಸುತ್ತಿಕೊಂಡಿರುವ ಪಿಶಾಚಿಗಳೂ,

೨೪. ಕರುಳನ್ನು ಎಳೆದು ತಂತಿಯನ್ನು ಮಾಡಿಕೊಂಡು ವಾದ್ಯ ಬಾರಿಸುತ್ತಿರುವ ಪಿಶಾಚವನ್ನು ಕಂಡು ಹೆದರುತ್ತಿರುವ (ಹೊಸದಾಗಿ) ಪಿಶಾಚವಾಗಿರುವ ಮಾನವರೂ,

೨೫. ಪೂತನೆಯರನ್ನು ಕಂಡು ಹೆದರಿ ಅರ್ಧ ಸತ್ತಂತಾಗಿರುವ ಅಧೀರ ಭಟರೂ (ಇರುವರು.) ಮತ್ತೊಂದು ಕಡೆ ವೇತಾಲಗಳೂ ರಾಕ್ಷಸರೂ ನಡೆಯುತ್ತಿರುವ ಸಂತೋಷೋತ್ಸವವನ್ನು ಮುರಿಯುವರು.

೨೬. ತನ್ನ ಕಾಂತೆಯು ಹೊತ್ತುಕೊಂಡು ಹೋಗುತ್ತಿದ್ದ ಹೆಣವು ಬಿದ್ದು ಹೋಯಿತೆಂದು ನಿಶಾಚರನೊಬ್ಬನು ವ್ಯಸನಪಡುತ್ತಿರುವನು. ಆಕಾಶದಲ್ಲಿ ಭೂತಗಳ ಅಪೂರ್ವಪೇಟಕಗಳು ಒಂದಕ್ಕೊಂದು ತಗಲುತ್ತಿರುವುವು.

೨೭. ಮರಣೋನ್ಮುಖವಾಗಿರುವ ಮನುಷ್ಯನ ಮಾಂಸವನ್ನು ಅತಿ ಪ್ರಯತ್ನದಿಂದ (ಒಬ್ಬ ನಿಶಾಚರನು) ಸಂಪಾದಿಸಿರುವನು. ಅದನ್ನೇ ತಿನ್ನಬೇಕೆಂದು ಬಂದ ತನ್ನ ಕಡೆಯವರಿಗೆ ಶವದ ರಾಶಿಯೊಂದನ್ನು ಎಳೆದು ಹಾಕುತ್ತಿರುವನು.

ಶಿವಾಮುಖಾನಲಶಿಖಾಖಂಡೋತ್ಥಮಿತಿರಕ್ತಗೈಃ |
ಸಮುಡ್ಡೀನನವಾಶೋಕಪುಷ್ಪಗುಚ್ಛಮಿವಾಭಿತಃ || ೨೮ ||

ಕಬಂಧಕಂಧರಾಬಂಧವ್ಯಗ್ರವೇತಾಲಬಾಲಕಂ |
ಯಕ್ಷರಕ್ಷಃಪಿಶಾಚಾದಿಕಚದಾಕಾಸಗೋಲ್ಮುಕಂ || ೨೯ ||

ಆಕಾಶಭೂಧರನಿಕುಂಜಗುಹಾಂತರಾಲ--
ಪಿಂಡೋಪಮಂಡಿತತಮೋಂಬುದಪೀಠಪೂರಂ |
ವ್ಯಾಲೋಲಭೂತರಭಸಾಕುಲಕಲ್ಪವಾತ
ವ್ಯಾಧೂತಲೋಕಕರಕಾಂಡಕಪೇಟಕಲ್ಪಂ || ೩೦ ||

ಇತ್ಯಾರ್ಷೇ ಶ್ರೀ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿಪ್ರಕರಣೇ
" ನಿಶಾಚರಾಕುಲರಾತ್ರಿರಣಾಂಗಣ ವರ್ಣನಂ " ನಾಮ ಏಕೋನಚತ್ವಾರಿಂಶಃ ಸರ್ಗಃ

---

೨೮. ನರಿಗಳ ಬಾಯಿಂದ ಕೆಂಪಾಗಿರುವ ಹೆಣಗಳು ಹೊಸದಾಗಿ ಹುಟ್ಟಿದ ಕೆಂಪು ಹೂಗಳುಳ್ಳ ಅಶೋಕವೋ ಎಂಬಂತಿರುವುವು.

೨೯. ವೇತಾಲ ಬಾಲಕನೊಬ್ಬನು ಹೆಣದ ಕತ್ತನ್ನು ಕಟ್ಟಿಕೊಂಡು ನಲಿಯುತ್ತಿರುವನು. ಯಕ್ಷರಕ್ಷಃಪಿಶಾಚಾದಿ ಆಕಾಶಚರರ ಕೊಳ್ಳಿಗಳಿಂದ ರಣಭೂಮಿಯು ಬೆಳಗುತ್ತಿರುವುದು.

೩೦. ಆಕಾಶ, ಬೆಟ್ಟ, ಪೊದೆ, ಗುಹೆ, ಇವುಗಳಲ್ಲೆಲ್ಲ ಘನೀಭೂತವಾಗಿ ಸೇರಿಕೊಂಡಿರುವ ತಮಸ್ಸೆಂಬ ಮೋಡವು ನೆಲಸಿರುವ ಪೀಠವಾಗಿ, ಕುಣಿ ಕುಣಿಯುತ್ತಿರುವ ನಾನಾ ಪ್ರಾಣಿಗಳ ಚೇಷ್ಟಾವೇಗದಿಂದ ವ್ಯಾಕುಲವಾಗಿ ಬೀಸುತ್ತಿರುವ, ಪ್ರಳಯವಾತ ಸದೃಶವಾದ ಗಾಳಿಗಳಿಂದ ಹಾರಿಹೋಗುತ್ತಿರುವ ಕರಕ (ಆಲಿಕಲ್ಲು) ಗಳಂತಿರುವ ಬ್ರಹ್ಮಾಂಡಗಳ ಪೆಟ್ಟಿಗೆಯೋ ಎಂಬಂತೆ ಆ ರಣಭೂಮಿಯಿತ್ತು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ನಿಶಾಚರಾಕುಲರಾತ್ರಿರಣಾಂಗಣವರ್ಣನ" ಎಂಬ
ಮೂವತ್ತೊಂಭತ್ತನೆಯ ಸರ್ಗವು.

ಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಏವಂ ನಿಶಾಚರಾಚಾರಚಿರಘೋರೇ ರಣಾಂಗಣೇ |
ಅಹನೀವ ಜನಾಚಾರೇ ಸ್ಥಿತೇ ಯಾಮಾವರೇಹಿತೇ ॥ ೧ ॥

ಹಸ್ತಹಾರ್ಯತಮಃಪಿಂಡಸ್ಫುಟಕುಡ್ಯೇ ನಿಶಾಗೃಹೇ |
ಲಾಭೋಚ್ಛ್ರದೋಚ್ಛಲಚತೇ ಭೂರಸಂಘೇ ಪ್ರವಲ್ಗತಿ ॥ ೨ ॥

ನಿಃಶಬ್ದೇ ಧ್ವಾಂತಸಂಚಾರೇ ನಿದ್ರಾರುದ್ಧಕಕುಬ್ಗಣೇ |
ಲೀಲಾಪತಿರುದಾರಾತ್ಮಾ ಕಿಂಚಿತ್ ಖಿನ್ನಮನಾ ಇವ ॥ ೩ ॥

ಪ್ರಾತಃಕಾರ್ಯಂ ವಿಚಾರ್ಯಾಶು ಮಂತ್ರಿಭಿರ್ಮಂತ್ರಕೋವಿದೈಃ |
ದೀರ್ಘಚಂದ್ರಸಮಾಕಾರೇ ಶಯನೇ ಹಿಮಶೀತಲೇ ॥ ೪ ॥

ನಲವತ್ತನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :—ಹೀಗೆ ನಿಶಾಚರರ ಆಚಾರದಿಂದ ಬಹು ಘೋರವಾದ ಆ ರಣಾಂಗಣದಲ್ಲಿ ಹಗಲಲ್ಲಿ ಜನರು ಮಾಡುವಂತೆ, (ಆ ರಾತ್ರಿಯಲ್ಲಿ) ಯಾಮ (ಯಮದೂತ) ರೂ, (ಅವರ ಪಿಶಾಚಾದಿಗಳೂ) ತಮಗೆ ತೋರಿದಂತೆ ಮಾಡುತ್ತಿದ್ದರು.

೨. ಕತ್ತಲೆಯು ಕೈಯಿಂದ ಬೊಳಿದುಕೊಳ್ಳುವಷ್ಟು ಗಟ್ಟಿಯಾಗಿ ನಿಶಾಗೃಹದ ಗೋಡೆಗಳಾಗಿದ್ದುವು. ಭೂತ (ಪ್ರೇತಾದಿ) ಸಂಘಗಳು ತಿನ್ನುವುದಕ್ಕೆ ಬೇಕಾದ ಹಾಗೆ ಸಿಕ್ಕಿತೆಂದು, ಬಟ್ಟೆಯು ಜಾರಿಹೋಗುವುದನ್ನೂ ಕಾಣದೆ, ಓಡುತ್ತ ಸಂತೋಷವಾಗಿ ಕುಣಿಯುತ್ತಿದ್ದುವು.

೩. ದಿಕ್ಕು ವಿದಿಕ್ಕುಗಳೂ ನಿದ್ರಾಪರವಶವಾಗಿ ಅಂಧಕಾರ ಸಂಚಾರವು ತಾನೇ ತಾನಾಗಿ ನಿಶ್ಶಬ್ದವಾಗಿರಲು, ಲೀಲಾಪತಿಯೂ ಉದಾರಾತ್ಮನೂ ಆದ (ಪದ್ಮ) ರಾಜನು ಕೊಂಚ ಖಿನ್ನಮನಸ್ಕನಾದಂತೆ ಇದ್ದನು.

೪. ದೀರ್ಘಚಂದ್ರಾಕಾರವಾಗಿ ಹಿಮಶೀತಲವಾಗಿರುವ ಶಯನದಲ್ಲಿ

ಚಂದ್ರೋದರನಿಭೇ ಚಾರುಗೃಹೇ ಶಿಶಿರಕೋಟರೇ |
ನಿದ್ರಾಂ ಮುಹೂರ್ತಮಗಮನ್ಮುದ್ರಿತೇಕ್ಷಣಪುಷ್ಕರಃ ॥ ೫ ॥

ಅಥ ತೇ ಲಲನೇ ವ್ಯೋಮ ತತ್ಪರಿತ್ಯಜ್ಯ ತದ್ಗೃಹಂ |
ರಂಧ್ರೈರ್ವಿವಿಶತುರ್ವಾತಲೇಖೇಽಬ್ಜಮುಕುಲಂ ಯಥಾ ॥ ೬ ॥

ಶ್ರೀರಾಮ ಉವಾಚ—

ಕಿಯನ್ಮಾತ್ರಮಿದಂ ಸ್ಥೂಲಂ ಶರೀರಂ ವಾಗ್ವಿದಾಂವರ |
ರಂಧ್ರೇಣ ತಂತುತನುನಾ ಕಥಮಾಶ್ವಾವಿಶತ್ಪ್ರಭೋ ॥ ೭ ॥

ಶ್ರೀ ವಸಿಷ್ಠ ಉವಾಚ:—

ಆಧಿಭೌತಿಕದೇಹೋಽಹಮಿತಿ ಯಸ್ಯ ಮತಿಭ್ರಮಃ |
ತಸ್ಯಾಸಾವಣುರಂಧ್ರೇಣ ಗಂತುಂ ಶಕ್ನೋತಿ ನಾನಘ ॥ ೮ ॥

ಕುಳಿತು ಮಂತ್ರಕೋವಿದರಾದ ಮಂತ್ರಿಗಳೊಡನೆ ಪ್ರಾತಃಕಾರ್ಯವನ್ನು ವಿಚಾರಿಸುತ್ತಿದ್ದನು.

೫. ಚಂದ್ರೋದರದಂತೆ ತಣ್ಣಗೆ ಇರುವ ಸುಂದರವಾದ ಮಂದಿರದಲ್ಲಿ ಕಮಲದಂತಿರುವ ಕಣ್ಣುಗಳನ್ನು ಮುಚ್ಚಿಕೊಂಡು ಒಂದು ಗಳಿಗೆ ನಿದ್ದೆ ಹೋದನು.

೬. ಆ ಲಲನೆಯರು ಆಕಾಶವನ್ನು ಬಿಟ್ಟು ಆ ಮನೆಯನ್ನು, ವಾಯುವು ಕಮಲದ ಮೊಗ್ಗನ್ನು ಪ್ರವೇಶಿಸುವಂತೆ ಸಣ್ಣ ರಂಧ್ರಗಳಿಂದ ಪ್ರವೇಶಿಸಿದರು,

೭. ಶ್ರೀ ರಾಮನು ಕೇಳಿದನು :—ಇಷ್ಟು ಗಾತ್ರವಾದ ಈ ಸ್ಥೂಲಶರೀರವು, ಎಲೈ ಮಾತುಬಲ್ಲವರ ಬಲ್ಲಿದನೆ, ಅದೆಂತು ದಾರದ ಎಳೆಗಳಷ್ಟು ಸೂಕ್ಷ್ಮವಾದ ರಂಧ್ರದಿಂದ ಪ್ರವೇಶಿಸಿತು ?

೮. ಶ್ರೀ ವಸಿಷ್ಠನು ಹೇಳಿದನು :—ಎಲೈ ಅನಘನೆ, ಆದಿ ಭೌತಿಕ ದೇಹವೇ ನಾನೆಂಬ ಭ್ರಾಂತಿಯುಳ್ಳವರು ಅಣು ರಂಧ್ರದಿಂದ ಪ್ರವೇಶಿಸಲಾರರು.

ರೋಧಿತೋಽಹಮನೇನೇತಿ ನಮಾಮ್ಯತ್ರೇತಿ ಯಸ್ಯ ಧೀಃ |
ಅನುಭೂತಾನುಭವತೀ ಭವತೀತ್ಯನುಭೂಯತೇ || ೯ ||

ಯೇನಾನುಭೂತಂ ಪೂರ್ವಾರ್ಥಂ ಗಚ್ಛಾಮೀತಿ ಸ ತತ್ಕ್ರಿಯಃ |
ಕಥಂ ಭವತಿ ಪಶ್ಚಾರ್ಥಂ ಗಮನೋನ್ಮುಖಚೇತನ: || ೧೦ ||

ನಹಿ ವಾಯುರ್ಧ್ವಮಾಯಾತಿ ನಾಧೋ ಗಚ್ಛತಿ ಪಾವಕಃ |
ಯಾ ಯಥೈವ ಪ್ರವೃತ್ತಾ ಚಿತ್ಸಾ ತಥೈವ ಪ್ರತಿಷ್ಠಿತಾ || ೧೧ ||

ಛಾಯಾಯಾಮುಪವಿಷ್ಟಸ್ಯ ಕುತಸ್ತಾಪಾನುಭೂತಯ: |
ಯಸ್ಯ ಸಂವೇದನೇಽನ್ಯೋಽರ್ಥಃ ಕೇನಚಿನ್ನಾನುಭೂಯತೇ || ೧೨ ||

ಯಥಾ ಸಂವಿತ್ತಥಾ ಚಿತ್ತಂ ಸಾ ತಥಾವಸ್ಥಿತಿಂ ಗತಾ |
ಪರಮೇಣ ಪ್ರಯತ್ನೇನ ನೀಯತೇಽನ್ಯದಶಾಂ ಪುನಃ || ೧೩ ||

---

೯. ನನಗೆ ಇದರಿಂದ ತಡೆಯಿರುವುದು: ನಾನು ಇಲ್ಲಿ ಹಿಡಿಸಲಾರೆನು: ಎಂದು ಯಾವನ ಬುದ್ಧಿಯು ಪದೇಪದೇ ಅನುಭವಪಟ್ಟಿರುವುದೋ ಅದು ಸ್ಥೂಲ ದೇಹವೇ ತಾನು ಎಂದುಕೊಳ್ಳುವುದು.

೧೦. ಹಾಗಿಲ್ಲದೆ ಯಾವನು ತಾನೆನ್ನುವುದು ಸ್ಥೂಲದೇಹವಲ್ಲವಾದ್ದರಿಂದ ಹೋಗುವೆನು ಎಂದು ಪೂರ್ವವಾಸನಾ ಪರಿಣತಿಯಿಂದ ಅನುಭವಿಸುವನೋ ಅಂತಹವನು ಹೋಗಬೇಕು ಎಂದು ಪ್ರಯತ್ನಿಸಿದಾಗ ಅವನು ತಡೆಯನ್ನು ಅನುಭವಿಸುವುದೆಂತು ?

೧೧. ನೀರು ಎಂದಿಗೂ ಮೇಲಕ್ಕೆ ಹೋಗುವುದಿಲ್ಲ. ಬೆಂಕಿಯು ಕೆಳಮೊಕವಾಗಿ ಉರಿಯುವುದಿಲ್ಲ. ಚಿತ್ತು ಯಾವುದಾದರೂ ಒಂದು ರೂಪವಾಗಿ ವಿವರ್ತಿತವಾದಾಗ ಅಲ್ಲಿ ಏನು ಪ್ರವೃತ್ತಿಯಿರುವುದೋ ಅದು ಹಾಗೆಯೇ ಪ್ರತಿಷ್ಠಿತವಾಗಿರುವುದು.

೧೨. ನೆರಳಿನಲ್ಲಿರುವವನಿಗೆ ಬಿಸಿಲಿನ ಅನುಭವವು ಬರುವುದೆಂತು ? (ಆದರೆ) ಪರಮಾತ್ಮ ಜ್ಞಾನವಾದವನು ಯಾವನಿಗೂ ತದನ್ಯವಾದ ಅರ್ಥವು ಒಂದಿದೆಯೆಂಬ ಅನುಭವವೇ ಬರುವುದಿಲ್ಲ.

೧೩. ಸಂವಿತ್ ಎಂಬುದೇ ಚಿತ್ತವು. ಸಂವಿತ್ತು ಎಂಥದೋ ಚಿತ್ತವೂ ಅಂಥದೇ ! ಆ ಸಂವಿತ್ತೇ ತಾನೇನು ಎಂದುಕೊಳ್ಳುವುದೋ ಅದೇ ಆಗುವುದು.

ಸರ್ಪೈಕಪ್ರತ್ಯಯೋ ರಜ್ಜ್ವಾಮಸರ್ಪಪ್ರತ್ಯಯೇ ಬಲಾತ್ |
ನಿವರ್ತನೇಽನ್ಯಥಾ ತ್ವೇಷ ತಿಷ್ಠತ್ಯೇವ ಯಥಾಸ್ಥಿತಃ || ೧೪ ||

ಯಥಾ ಸಂವಿತ್ತಥಾ ಚಿತ್ತಂ ಯಥಾ ಚಿತ್ತಂ ತಥೇಹಿತಂ |
ಬಾಲಂ ಪ್ರತ್ಯಪಿ ಸಂಸಿದ್ಧಮೇತತ್ಕೋ ನಾನುಭೂತವಾನ್ || ೧೫ ||

ಯಃ ಪುನಃ ಸ್ವಪ್ನಸಂಕಲ್ಪಪುರುಷಃ ಪ್ರತಿಮಾಕೃತಿಃ |
ಆಕಾಶಮಾತ್ರಕಾಕಾರಃ ಸ ಕಥಂ ಕೇನ ರೋಧ್ಯತೇ || ೧೬ ||

ಚಿತ್ತಮಾತ್ರಂ ಶರೀರಂ ತು ಸರ್ವಸ್ಯೈವ ಹಿ ಸರ್ವತಃ |
ವಿದ್ಯತೇ ವೇದನಾಚ್ಚೈತತ್ಕ್ವಚಿದೇತೀವ ಹೃದ್ಗತಾತ್ || ೧೭ ||

ಯಥಾಭಿಮತಮೇವಾಸ್ಯ ಭವತ್ಯಸ್ತಮಯೋದಯಂ |
ಆದಿಸರ್ಗೇ ಸ್ವಭಾವೋತ್ಥಂ ಪಶ್ಚಾದ್ದ್ವೈತೈಕ್ಯಕಾರಣಂ || ೧೮ ||

ಅದು ಒಂದು ದಶೆಯಲ್ಲಿರುವಾಗಲೂ ಪ್ರಯತ್ನಮಾಡಿದರೆ ಮತ್ತೊಂದು ದಶೆಗೆ ತರಬಹುದು.

೧೪. ರಜ್ಜುವನ್ನು ಸರ್ಪವೆಂದುಕೊಂಡು ರಜ್ಜುವಿನಲ್ಲಿ ಸರ್ಪಪ್ರತ್ಯಯ (ಸರ್ಪವೆಂಬ ನಂಬಿಕೆ) ವನ್ನು ಪಡೆದ ಸಂವಿತ್ತಿಗೆ ಬೇರೆ ಪ್ರಯತ್ನಗಳ ಫಲವಾಗಿ ಬಲವಂತದಿಂದ ಅಸರ್ಪ ಪ್ರತ್ಯಯವು ಬಂದರೆ ಆಗ ಸರ್ಪಪ್ರತ್ಯಯವು ಹೋಗಿ ರಜ್ಜು ಪ್ರತ್ಯಯವು ಬರುವುದು. ಇಲ್ಲದಿದ್ದರೆ ಸರ್ಪಪ್ರತ್ಯಯವು ಇದ್ದಂತೆಯೇ ಇರುವುದು.

೧೫. ಸಂವಿತ್ತಿನಂತೆ ಚಿತ್ತವು: ಚಿತ್ತದಂತೆ ಆಶೆಯು, ಇದನ್ನು ಮಕ್ಕಳು ಕೂಡ ಬಲ್ಲರು. ಇದು ಯಾರಿಗೆ ತಾನೇ ಅನುಭವವಿಲ್ಲ?

೧೬. ಯಾವನು ಸ್ವಪ್ನ, ಸಂಕಲ್ಪಗಳ ಪುರುಷನಂತೆ ಆಕಾಶಶರೀರಿಯೋ ಅವನನ್ನು ಯಾರು ಹೇಗೆ ನಿರೋಧಿಸುವುದು ?

೧೭. ಎಲ್ಲರಿಗೂ ಶರೀರವೆಂಬುದು ಚಿತ್ತವೇ ! ಈ ಚಿತ್ತವು ಹೃದ್ಗತವಾದ ವೇದನ (ಸಂವಿತ್)ವು ಹೇಗಿದ್ದರೆ ಹಾಗೆ ಆಗುವುದು.

೧೮. ಯಾವನಿಗೆ ಯಾವುದು ಅಭಿಮತವೋ ಅವನವನ ಅಸ್ತೋದಯಗಳೂ ಅದರಂತೆಯೇ ಆಗುವುವು. ಸೃಷ್ಟಿಯ ಆದಿಯಲ್ಲಿಯೂ ಹೀಗೆಯೇ ಆಯಿತು. ಸೃಷ್ಟಿಯು ಆದಮೇಲೂ ದ್ವೈತಕ್ಕೂ ಐಕ್ಯಕ್ಕೂ ಇದೇ ಕಾರಣವು.

ಚಿತ್ತಾಕಾಶಂ ಚಿದಾಕಾಶಮಾಕಾಶಂ ಚ ತೃತೀಯಕಂ |
ವಿದ್ಧ್ಯೇತತ್ತ್ರಯಮೇಕಂ ತ್ವಮವಿನಾಭಾವನಾವಶಾತ್ || ೧೯ ||

ಏತಚ್ಚಿತ್ತಶರೀರತ್ವಂ ವಿದ್ಧಿ ಸರ್ವಗತೋದಯಂ |
ಯಥಾ ಸಂವೇದನೇಚ್ಛತ್ವಾದ್ಯಥಾ ಸಂವೇದನೋದಯಂ || ೨೦ ||

ವಸತಿ ತ್ರಸರೇಣ್ವಂತರ್ಧ್ರಿಯತೇ ಗಗನೋದರೇ |
ಲೀಯತೇಽಂಕುರಕೋಶೇಷು ರಸೀಭವತಿ ಪಲ್ಲವೇ || ೨೧ ||

ಉಲ್ಲಸತ್ಯಂಬುವೀಚಿತ್ವೇ ಪ್ರನೃತ್ಯತಿ ಶಿಲೋದರೇ |
ಪ್ರವರ್ಷತ್ಯಂಬುದೋ ಭೂತ್ವಾ ಶಿಲೀಭೂಯಾವತಿಷ್ಠತೇ || ೨೨ ||

(ಅಸ್ಯ ಪರಮಾತ್ಮನಃ ಅಭಿಮತಂ ಚಿತ್ತವೃತ್ತಿಃ ತದನತಿಕ್ರಮ್ಯೇತಿ ಯಥಾಭಿಮತಂ|| ಅಸ್ಯ ಭೂತಜಾತಸ್ಯ| ಅಸ್ವಭಾವಃ ಸ್ವಾಭಾವಿಕ ಮಜ್ಞಾನಂ ಕರ್ಮ ವಾ ತದುತ್ಥಂ| ಸ್ಥೂಲಾನಿ ಭೂತಾನಿ ಭೌತಿಕಾನಿ ಚ ದ್ವೈತಂ ತೇಷಾಂ| ಮೇಲನೇನ ಏಕದೇಹಭಾವೇನ ಐಕ್ಯಂ ಚ ತತ್ರ ಕಾರಣಂ ಪಂಚೀಕರಣಂ ಪಶ್ಚಾದ್ಭವತೀತ್ಯರ್ಥಃ||–ತಾ.ಪ್ರ.)

೧೯, ಚಿತ್ತಾಕಾಶ, ಚಿದಾಕಾಶ, ಆಕಾಶ, ಇವು ಮೂರೂ ಬೇರೆಬೇರೆಯಲ್ಲ. ಮೂರೂ ಒಂದೇ! ಎಂದು ತಿಳಿ.

೨೦. ಈ ಚಿತ್ತಶರೀರವು ಎಲ್ಲಿ ಬೇಕೆಂದರಲ್ಲಿ ಉದಯಿಸಬಲ್ಲುದು. ಸಂವೇದನವು ಎಂಥಹುದೋ ಅಂತಹುದೇ ಇಚ್ಛೆಯು ಹುಟ್ಟುವುದರಿಂದ, (ಆ ಇಚ್ಛೆಗೆ ಅನುಗುಣವಾಗಿ ಚಿತ್ತ ಶರೀರವು ಬರುವುದರಿಂದ) ಸಂವೇದನಾನುಗುಣವಾಗಿ ಚಿತ್ತಶರೀರವು (ದಿಕ್ಕಾಲಗಳೆಂಬ ನಿರೋಧವಿಲ್ಲದೆ) ಎಲ್ಲೆಂದರಲ್ಲಿ ಹುಟ್ಟುವುದು.

೨೧. ಈ ಚಿತ್ತಶರೀರವು ತ್ರಸರೇಣುವಿನೊಳಗೂ ಇರುವುದು. ಗಗನಮಧ್ಯದಲ್ಲಿಯಾದರೂ ನಿಲ್ಲುವುದು: ಅಂಕುರ (ಬೀಜ) ಕೋಶಗಳಲ್ಲಿ ಲೀನವಾಗುವುದು. ಚಿಗುರಿನಲ್ಲಿ ರಸವಾಗುವುದು.

೨೨. ಜಲತರಂಗವಾಗಿ ನಲಿಯುವುದು: ಶಿಲಾಗರ್ಭದಲ್ಲಿ ಕುಣಿಕುಣಿಯುವುದು: ಮೋಡವಾಗಿ ಮಳೆಗರೆಯುವುದು: ಕಲ್ಲಾಗಿ ಕುಳಿತಿರುವುದು.

ಯಥೇಚ್ಛಮಂಬರೇ ಯಾತಿ ಜಠರೇಽಪಿ ಚ ಭೂಭೃತಾಂ |
ಅನಂತರಾಕಾಶವಪುರ್ಧತ್ತೇಽಥ ಪರಮಾಣುತಾಂ || ೨೩ ||

ಭವತ್ಯದ್ರಿರ್ಧರಾಧಾರೋ ಬದ್ಧಪೀಠೋ ನಭಃಶಿರಾಃ |
ದೇಹಸ್ಯಾಂತರ್ಬಹಿರಪಿ ದಧದ್ವನತನೂರುಹಂ || ೨೪ ||

ಭವತ್ಯಾಕಾಶಮಾಧತ್ತೇ ಕೋಟೀಃ ಪದ್ಮಜಸದ್ಮನಾಂ |
ಅನನ್ಯಾಃ ಸ್ವಾತ್ಮನೋಂಭೋಧಿರಾವರ್ತರಚನಾ ಇವ || ೨೫ ||

ಅನುದ್ವಿಗ್ನಪ್ರಬೋಧೋಽಸೌ ಸರ್ಗಾದೌ ಚಿತ್ತದೇಹಕಃ |
ಆಕಾಶಾತ್ಮಾ ಮಹಾನ್ಭೂತ್ವಾ ವೇತ್ತಿ ಪ್ರಕೃತತಾಂ ತತಃ || ೨೬ ||

ಅಸತ್ಯಮೇವ ವಾರಿತ್ವಂ ಬುದ್ಧ್ಯೋದೇತೀವ ತತ್ತಥಾ |
ವಂಧ್ಯಾಪುತ್ರೋಽಯಮಸ್ತೀತಿ ಯಥಾ ಸ್ವಪ್ನೇ ಭ್ರಮೋ ನರಃ || ೨೭ ||

೨೩–೨೪. ಈ ಚಿತ್ತಶರೀರವು ಆಕಾಶದಲ್ಲಿಯಾದರೂ ಪರ್ವತಗಳ ಗರ್ಭದಲ್ಲಿ ಯಾದರೂ ಯಥೇಚ್ಛವಾಗಿ ಹೋಗಿಬರಬಲ್ಲುದು. ಪರಮಾಣುವಿನಂತೆ ನಿರವಕಾಶರೂಪವನ್ನೂ ಧರಿಸಬಲ್ಲುದು. ಬದ್ಧಪೀಠವೂ ನಭಶ್ಶಿರವೂ ಆಗಿ, ಒಳಗೂ ಹೊರಗೂ ವನವೃಕ್ಷಗಳೆಂಬ ಕೇಶಗಳನ್ನುಳ್ಳ ಭೂಮಿಯನ್ನು ಹೊತ್ತಿರುವ ಭೂಧರವಾಗಬಲ್ಲುದು.

೨೫. ತಾನೇತಾನಾಗಿ ಅನನ್ಯವಾಗಿರುವ ಸಮುದ್ರವು ತನ್ನ ಸುಳಿಗಳನ್ನು ತಾನೆ ಧರಿಸುವಂತೆ, ಆಕಾಶವಾಗಿ ಬ್ರಹ್ಮಾಂಡಕೋಟಿಗಳನ್ನು ಧರಿಸುವುದು

೨೬. ಸೃಷ್ಟಿಯಲ್ಲಿ ಯಾವುದೊಂದೂ ಉದ್ವೇಗವಿಲ್ಲದ ಪ್ರಬೋಧಮಾತ್ರವಾಗಿದ್ದ ಈ ಚಿತ್ತದೇಹವು ಮಹಾಕಾಶವಾಗಿ, ಕ್ರಮಕ್ರಮವಾಗಿ ಈಗಿರುವಂತೆ ಆಗಿರುವುದು.

೨೭. ಮೃಗತೃಷ್ಣೆಯಲ್ಲಿ ಇಲ್ಲದ ನೀರೂ ಬುದ್ಧಿ(ದೋಷ)ಯಿಂದ ಕಾಣಿಸುವಂತೆ, ಸ್ವಪ್ನದಲ್ಲಿ ಈ ಮನುಷ್ಯನು ವಂಧ್ಯಾಪುತ್ರನು ಎಂಬ ಭ್ರಮವು ಬರುವಂತೆ ಇದಾಗಿರುವುದು.

ಶ್ರೀ ರಾಮ ಉವಾಚ :—

ಕಿಂ ಚಿತ್ತಮೇತದ್ಭವತಿ ಕಿಂ ವಾ ಭವತಿ ನೋ ಕಥಂ |
ಕಥಮೇವ ನ ಸದ್ರೂಪಂ ನಾನ್ಯದ್ಭವತಿ ವೀಕ್ಷಣಾತ್ ‖ ೨೮ ‖

ಶ್ರೀ ವಸಿಷ್ಠ ಉವಾಚ :—

ಪ್ರತ್ಯೇಕಮೇವ ಯಚ್ಚಿತ್ತಂ ತದೇವ ರೂಪಶಕ್ತಿಕಂ |
ಪೃಥಕ್ಪ್ರತ್ಯೇಕಮುದಿತಃ ಪ್ರತಿಚಿತ್ತಂ ಜಗದ್ಭ್ರಮಃ ‖ ೨೯ ‖

---

೨೮. ಶ್ರೀ ರಾಮನು ಕೇಳಿದನು :—(ಹಾಗಾದರೆ) ಚಿತ್ತವೇ ಜಗತ್ತೇ? ಅಥವಾ ಚಿತ್ತವೂ ಜಗತ್ತೂ ಬೇರೆಬೇರೆಯೇ ? ವೀಕ್ಷಣವು (ಇಂದ್ರಿಯಗೋಚರವಾಗುವಿಕೆಯು) ಜಗತ್ತನ್ನು ಸತ್ಯ ಎನ್ನುತ್ತಿರಲು, ಜಗತ್ತು ಅಸತ್ಯ ಎನ್ನುವುದೆಂತು ?

[ತಾತ್ಪರ್ಯ ಪ್ರಕಾಶವು ಬೇರೆ ವಿಧವಾಗಿ ಹೇಳಿರುವುದನ್ನು ವೈಭವವು ಹೀಗೆ ಕನ್ನಡಿಸಿದೆ :—

ಸ್ವಾಮೀ! ತಾವು ಅಪ್ಪಣೆ ಕೊಡಿಸಿದ ಮೇರೆಗೆ—"ಸೂಕ್ಷ್ಮತಮವಾದ ಚಿತ್ತವೇ ಸಮಸ್ತಜಗತ್ತು ; ಇದು ಸರ್ವಶಕ್ತಿಯುಕ್ತವಾದುದು ; ಇದೇ, ತತ್ವತಿಳಿಯದಿದ್ದಾಗ ಸ್ಥೂಲಶರೀರದಂತಾಗಿ ಪರಾಧೀನವಾಗುವುದು ; ಇದಕ್ಕೇ ನಿರೋಧಾದಿಗಳು ಸಂಭವಿಸುವುವು. ತತ್ವತಿಳಿದಕಾಲದಲ್ಲಿ, ಇದು ಸಕಲವ್ಯಾಪಾರದಲ್ಲಿಯೂ ಅಪ್ರತಿಹತವಾಗಿರುವುದು."—ಎಂದು ಸ್ಪಷ್ಟವಾಗಿ ಏರ್ಪಟ್ಟಿತು. ಹಾಗಾದ ಮೇಲೆ ನನಗೊಂದು ಸಂಶಯವುಂಟಾಗುವುದು :—ಈ ನಮ್ಮಗಳ ಚಿತ್ತವೆಲ್ಲವೂ ಪೃಥಕ್ಪೃಥಕ್ಕಾಗಿ ಈ ವಿಧವಾದ ಶಕ್ತಿಯುಳ್ಳದಾಗಿರುವುದೆ? ಅಥವಾ ಹಾಗಿಲ್ಲವೆ? ಪ್ರಥಮಪಕ್ಷವನ್ನಾಶ್ರಯಿಸಿದರೆ, ಆಗ ಪ್ರತಿಯೊಂದು ಚಿತ್ತಕ್ಕೂ ಒಂದೊಂದು ಜಗತ್ತು ಭಿನ್ನಭಿನ್ನವಾಗಿ ಆಕಾರಹೊಂದಬೇಕಾಗುವುದು ; ಈಗ ಹಾಗೆ ಆಗಿಲ್ಲ. ಇದು ಹೇಗೆ? ಅದಲ್ಲದೆ ದ್ವಿತೀಯಪಕ್ಷವನ್ನಾಶ್ರಯಿಸಿದರೆ, ಆಗ ಈ ಜಗತ್ಸ್ವರೂಪವು ಚಿತ್ತದಿಂದ ಹುಟ್ಟದಿರತಕ್ಕುದಾಗಿಯೂ ಚಿತ್ತಕ್ಕಿಂತ ಬೇರೆಯಾದುದಾಗಿಯೂ ಇರಬೇಕಾಗುವುದು. ಜನರ ತಿಳುವಳಿಕೆಯು ಹೀಗೆಯೇ ಇರುತ್ತದೆ. ಅದುಕಾರಣ, ಇದು ಪೃಥಕ್ಕಲ್ಲದಿರುವುದು ಹೇಗೆ? ಆದರೆ, ಈ ಪಕ್ಷವು ಯುಕ್ತವೆಂದೊಪ್ಪಿಕೊಂಡರೆ, ಆಗ ಮತ್ತೊಂದು ಅನುಪಪತ್ತಿಯುಂಟಾಗಬಹುದು. ಚಿತ್ತವೂ ಜಗತ್ತೂ ಬೇರೆಯಾದುದರಿಂದ, ಜ್ಞಾನದಿಂದ ಚಿತ್ತನಾಶವಾದರೂ— ಜಗತ್ತಿಗೆ ನಾಶವುಂಟಾಗದಿರಬೇಕಾಗುವುದು.]

೨೯. ಶ್ರೀ ವಸಿಷ್ಠನು ಹೇಳಿದನು :—ಚಿತ್ತ ಎನ್ನುವುದು ಯಾವಯಾವ

ಕ್ಷಣಕಲ್ಪಜಗತ್ಸಂಘಾಃ ಸಮುದ್ಯಂತಿ ಗಲಂತಿ ಚ |
ನಿಮೇಷಾತ್ಮಕಸ್ಯ ಚಿತ್ ಕಲ್ಪಾತ್ಮಕಸ್ಯ ಚಿಚ್ಚ ಕ್ರಮಂ ಶೃಣು ‖ ೩೦ ‖

ಮರಣಾದಿಮಯೀ ಮೂರ್ಚ್ಛಾ ಪ್ರತ್ಯೇಕೇನಾನುಭೂಯತೇ |
ಯೈಷಾ ತಾಂ ವಿದ್ಧಿ ಸುಮತೇ ಮಹಾಪ್ರಲಯಯಾಮಿನೀಂ ‖ ೩೧ ‖

ತದಂತೇ ತನುತೇ ಸರ್ಗಂ ಸರ್ವ ಏವ ಪೃಥಕ್ಪೃಥಕ್ |
ಸಹಜಸ್ವಪ್ನಸಂಕಲ್ಪಾನ್ ಸಂಭ್ರಮಾಚಲನೃತ್ಯವತ್ ‖ ೩೨ ‖

ಮಹಾಪ್ರಲಯರಾತ್ರ್ಯಂತೇ ಚಿರಾದಾತ್ಮಮನೋವಪುಃ |
ಯಥೇದಂ ತನುತೇ ತದ್ವತ್ಪ್ರತ್ಯೇಕಂ ಮೃತ್ಯನಂತರಂ ‖ ೩೩ ‖

ಶ್ರೀರಾಮ ಉವಾಚ—

ಮೃತೇರನಂತರಂ ಸರ್ಗೋ ಯಥಾ ಸ್ಮೃತ್ಯಾನುಭೂಯತೇ |
ಚಿರಾತ್ತಥಾನುಭವತಿ ನಾತೋ ವಿಶ್ವಮಕಾರಣಂ ‖ ೩೪ ‖

ದುಂಟೋ ಅದಕ್ಕಿಲ್ಲ ಈ ಶಕ್ತಿಯುಂಟು. ಜಗತ್ತು ಸತ್ಯವೆಂಬ ಭ್ರಮೆಯು ಒಂದೊಂದು ಚಿತ್ತಕ್ಕೂ ಬೇರೆಬೇರೆಯಾಗಿಯೇ ಬಂದಿರುವುದು.

೩೦. ಕ್ಷಣದಂತೆ ಕಲ್ಪವೂ ಕಲ್ಪದಂತೆ ಮಹತ್ತೂ ಆದ ಈ ಜಗತ್ಸಂಘಗಳೆಲ್ಲವೂ ಒಂದು ಚಿತ್ತಕ್ಕೆ ಒಂದೇ ನಿಮಿಷದಲ್ಲಿ ಉತ್ಪತ್ತಿಯಾಗಿ ಲಯವಾಗುವುದು. ಇದೇ ಉತ್ಪತ್ತಿಲಯಗಳಾಗಲು ಇನ್ನೊಂದು ಚಿತ್ತಕ್ಕೆ ಒಂದು ಕಲ್ಪವಾಗುವುದು. ಹಾಗಾಗುವ ಕ್ರಮವನ್ನು ಕೇಳು.

೩೧. ಮಹಾಪ್ರಳಯವೆಂಬ ರಾತ್ರಿಯೊಂದುಂಟು. ಆ ಕಾಲದಲ್ಲಿ ಪ್ರತಿಯೊಬ್ಬನೂ ಮರಣಾದಿ ಮೂರ್ಛೆಯನ್ನು ಅನುಭವಿಸುವನು. ಅದನ್ನು ತಿಳಿದುಕೊ.

೩೨-೩. ಮಹಾಪ್ರಳಯ ರಾತ್ರಿಯ ಕೊನೆಯಲ್ಲಿ ಆತ್ಮ (ಸಮಷ್ಟಿ) ಮನೋರೂಪನಾದ ಹಿರಣ್ಯಗರ್ಭನು ಈ ಜಗತ್ತೆಲ್ಲವನ್ನೂ ಹರಡುವಂತೆಯೇ ಪ್ರತಿಯೊಬ್ಬನೂ ತನ್ನ ತನ್ನ ಮರಣಾನಂತರದಲ್ಲಿ ಪರ್ವತವು ಕುಣಿಯುತ್ತಿರುವುದೆಂಬ ಭ್ರಾಂತಿಯಂತೆ ಭ್ರಾಂತಿಮಯವಾದ ಸ್ವಪ್ನ ಸಂಕಲ್ಪರೂಪವಾಗಿ (ತನತನಗೆ ಭೋಗಕ್ಷೇತ್ರವಾಗಿರುವ) ಜಗತ್ತನ್ನು ಹರಡಿಕೊಳ್ಳುವನು.

೩೪. ಶ್ರೀ ರಾಮನು ಕೇಳಿದನು ;—ಮರಣದನಂತರ ಬರುವ ಸರ್ಗವು

ಶ್ರೀ ವಸಿಷ್ಠ ಉವಾಚ—

ಮಹತಿ ಪ್ರಲಯೇ ರಾಮ ಸರ್ವೇ ಹರಿಹರಾದಯಃ |
ವಿದೇಹಮುಕ್ತತಾಂ ಯಾಂತಿ ಸ್ಮೃತೇಃ ಕ ಇವ ಸಂಭವಃ || ೩೫ ||

ಅಸ್ಮದಾದಿಃ ಪ್ರಬುದ್ಧಾತ್ಮಾ ಕಿಲಾವಶ್ಯಂ ವಿಮುಚ್ಯತೇ |
ಕಥಂ ಭವಂತು ನೋ ಮುಕ್ತಾ ವಿದೇಹಾಃ ಪದ್ಮಜಾದಯಃ || ೩೬ ||

ಅನ್ಯೇ ತ್ವಮಿವ ಯೇ ಜೀವಾಸ್ತೇಷಾಂ ಮರಣಜನ್ಮಸು |
ಸ್ಮೃತಿಃ ಕಾರಣತಾಮೇತಿ ಮೋಕ್ಷಾಭಾವವಶಾದಿಹ || ೩೭ ||

ಜೀವೋ ಹಿ ಮೃತಿಮೂರ್ಛಾಂತೇ ಯದಂತಃ ಪ್ರೋನ್ಮಿಷನ್ನಿವ |
ಅನುನ್ಮಿಷಿತ ಏವಾಸ್ತೇ ತತ್ಪ್ರಧಾನಮುದಾಹೃತಂ || ೩೮ ||

ಸರ್ಗವೆಂದು ಅನುಭವಕ್ಕೆ ಬರುವುದು ಸ್ಮೃತಿಯಿಂದ. ಅಂಥಾ ಸ್ಮೃತಿಯು ಬಹುಕಾಲದ್ದು. ಅದರಿಂದ ವಿಶ್ವವು ಅಕಾರಣವು? (ಹಿಂದಿನ ಸ್ಮೃತಿಯಿಂದ ಚತುರ್ಮುಖನು ಇಂದಿನ ಸೃಷ್ಟಿಯನ್ನು ಮಾಡಿರಬೇಕು ಎಂದಾಗುವುದಾಗಿ, ಸ್ಮೃತಿಯು ಅಸತ್ಯವಿಷಯಾತ್ಮಕವಲ್ಲವಾಗಿ ಜಗತ್ತು ಸತ್ಯವೆಂದಾಗುವುದು ಅಲ್ಲವೆ ?)

೩೫. ಶ್ರೀ ವಸಿಷ್ಠನು ಹೇಳಿದನು ;—ರಾಮ, ಮಹಾಪ್ರಳಯದಲ್ಲಿ ಹರಿಹರಾದಿಗಳೆಲ್ಲರೂ ವಿದೇಹ ಮುಕ್ತಿಯನ್ನು ಪಡೆಯುವರು ಎಂದಮೇಲೆ ಸ್ಮೃತಿಯು ಎಲ್ಲಿರುವುದು ?

೩೬. ಆತ್ಮಬೋಧವನ್ನು ಪಡೆದ ನಾವುಗಳೇ ಅವಶ್ಯವಾಗಿ ಮುಕ್ತರಾಗುವೆವೆಂದಮೇಲೆ ವಿದೇಹ (ಭೌತಿಕವಲ್ಲದ ಆತಿವಾಹಿಕದೇಹ)ರಾದ ಬ್ರಹ್ಮಾದಿಗಳು ಮುಕ್ತರಾಗದಿರುವುದೆಂತು ?

೩೭. ನಿಮ್ಮಂತಹವರಿಗ ಮೋಕ್ಷವು ಬಂದಿರುವುದಿಲ್ಲವಾಗಿ ಮರಣಾನಂತರ ಜನ್ಮಗಳಲ್ಲಿ (ಇದು ಪ್ರಪಂಚವೆಂದು ತಿಳಿಯಲು) ಸ್ಮೃತಿಯು ಕಾರಣವಾಗುವುದು.

೩೮–೩೯. ಮೃತಿ, ಮೂರ್ಛೆಗಳಲ್ಲಿ ಜೀವನು ಒಳಗೆ ಮೂಢನಾಗಿದ್ದರೂ ಎಚ್ಚರವಾಗಿರುವಂತೆ ಇರುವ ಅವಸ್ಥೆಯು ಯಾವುದೋ ಅದೇ ಜೀವ ವಿಷಯಕ

ತದ್ವ್ಯೋಮಪ್ರಕೃತಿಃ ಪ್ರೋಕ್ತಾ ತದವ್ಯಕ್ತಂ ಜಡಾಜಡಂ |
ಸಂಸ್ಮೃತೇರಸ್ಮೃತೇಶ್ಚೈವ ಕ್ರಮ ಏಷ ಭವೋದಯೇ || ೩೯ ||

ಬೋಧೋನ್ಮುಖತ್ವೇ ಹಿ ಮಹತ್ತತ್ಪ್ರಬುದ್ಧಂ ಯದಾ ಭವೇತ್ |
ತದಾ ತನ್ಮಾತ್ರದಿಕ್ಕಾಲಕ್ರಿಯಾ ಭೂತಾದ್ಯುದೇತಿ ಖಾತ್ || ೪೦ ||

ತದೇವೋಚ್ಛೂನಮಾಬುದ್ಧಂ ಭವತೀಂದ್ರಿಯಪಂಚಕಂ |
ತದೇವ ಬುಧ್ಯತೇ ದೇಹಃ ಸ ಏಷೋಽಸ್ಯಾತಿವಾಹಿಕಃ || ೪೧ ||

ಚಿರಕಾಲಪ್ರತ್ಯಯತಃ ಕಲ್ಪನಾಪರಿಪೀವರಃ |
ಆಧಿಭೌತಿಕತಾಬೋಧಮಾಧತ್ತೇ ಚೈಷ ಬಾಲವತ್ || ೪೨ ||

ತತೋ ದಿಕ್ಕಾಲಕಲನಾಸ್ತದಾಧಾರತಯಾ ಸ್ಥಿತಾಃ |
ಉದ್ಯಂತ್ಯನುದಿತಾ ಏವ ವಾಯೋಃ ಸ್ಪಂದಕ್ರಿಯಾ ಇವ || ೪೩ ||

ವಾದ ಪ್ರಧಾನವು. ಅದು ವ್ಯೋಮಾತ್ಮಕವಾದುದು. ಅದು ಅವ್ಯಕ್ತವು. ಅದು ಜಡವೂ ಹೌದು ಅಜಡವೂ ಹೌದು. ಅದೇ ಸ್ಮೃತಿ-ಅಸ್ಮೃತಿಕಾರಣವು.

೪೦. ಇದು ಬೋಧೋನ್ಮುಖವಾದಾಗ ಮಹತ್ ಎನ್ನಿಸಿಕೊಳ್ಳುವುದು. ಇದು ಪ್ರಬುದ್ಧವಾದಾಗ ತನ್ಮಾತ್ರ ದಿಕ್ಕು, ಕಾಲ, ಕರ್ಮ, ಭೂತಗಳು ಮೊದಲಾದವೆಲ್ಲ ಆ ಆಕಾಶದಿಂದಲೇ ಹುಟ್ಟುವುವು.

೪೧. ಈ ಮಹತ್ತೇ ಕೊಂಚ ವಿಕಾಸವಾಗಿ ಕೊಂಚ ಬುದ್ಧವಾಗಿರುವಾಗ ಇಂದ್ರಿಯ ಪಂಚಕವೆನ್ನಿಸಿಕೊಳ್ಳುವುದು. ಅದೇ (ಎಂದರೆ ಇಂದ್ರಿಯ ಪಂಚಕವೇ) ಆತಿವಾಹಿಕದೇಹ ಎನ್ನಿಸಿಕೊಳ್ಳುವುದು.

೪೨. ಈ ಆತಿವಾಹಿಕದೇಹವೇ ಕಲ್ಪನಾಬಲದಿಂದ ಸ್ಥೂಲವಾಗಿ ಚಿರತರಾಭ್ಯಾಸದಿಂದ ಆದಿಭೌತಿಕ ಎನ್ನಿಸಿಕೊಳ್ಳುವುದು.

೪೩. ಆದಿಭೌತಿಕ ಬೋಧವು ಬಂದಮೇಲೆ ದಿಕ್ಕು ಕಾಲ, ಮೊದಲಾದ ಕಲ್ಪನೆಗಳು ಅದರ ಆಧಾರದಿಂದ ವಾಯುವಿನ ಸ್ಪಂದವು ಸ್ವಭಾವವಾಗಿ ಹುಟುವಂತೆ ಪ್ರತ್ಯೇಕವಾಗಿ ಸ್ಥಿತಿಯಿಲ್ಲದಿದ್ದರೂ ಹುಟ್ಟಿಕೊಳ್ಳುವುವು.

ವೃದ್ಧಿಮಿತ್ಥಮಯಂ ಯಾತೋ ಮುಧೈವ ಭುವನಭ್ರಮಃ |
ಸ್ವಪ್ನಾಂಗನಾಸಂಗಸಮಸ್ತ್ವನುಭೂತೋಽಪ್ಯಸನ್ಮಯಃ || ೪೪ ||

ಯತ್ರೈವ ಮ್ರಿಯತೇ ಜಂತುಃ ಪಶ್ಯತ್ಯಾಶು ತದೇವ ಸಃ |
ತತ್ರೈವ ಭುವನಾಭೋಗಮಿಮಮಿತ್ಥಮಿವ ಸ್ಥಿತಂ || ೪೫ ||

ವ್ಯೋಮೈವಾನುಭವತ್ಯಚ್ಛಮಹಂ ಜಗದಿತಿ ಭ್ರಮಂ |
ವ್ಯೋಮರೂಪಂ ವ್ಯೋಮರೂಪೀ ಜೀವೋ ಜಾತ ಇವಾತ್ಮವಾನ್ || ೪೬ ||

ಸುರಪತ್ತನಶೈಲಾರ್ಕ ತಾರಾನಿಕರಸುಂದರಂ |
ಜರಾಮರಣವೈಕ್ಲವ್ಯ ವ್ಯಾಧಿಸಂಕಟಕೋಟರಂ || ೪೭ ||

ಸ್ವಭಾವಾಭಾವಸಂರಂಭ ಸ್ಥೂಲಸೂಕ್ಷ್ಮಚರಾಚರಂ |
ಸಾಬ್ಧ್ಯದ್ರ್ಯುರ್ವೀನದೀಶಾಹೇ ರಾತ್ರಿಕಲ್ಪಕ್ಷಣಕ್ಷಯಂ || ೪೮ ||

---

೪೪. ಹೀಗೆ ಜಗದ್ಭ್ರಮೆಯು ವೃದ್ಧಿಯನ್ನು ಪಡೆದಿರುವುದು. ಇದು ಸ್ವಪ್ನಾಂಗನಾ ಸಂಗಮದಂತೆ ಅನುಭವ ವಿಷಯವೇ ಆಗಿದ್ದರೂ ಅಸತ್ಯವಾದುದು ವ್ಯರ್ಥವಾದುದು.

೪೫. ಯಾರು ಎಲ್ಲಿ ಸಾಯುವರೋ ಅವರು ಅಲ್ಲಿಯೇ ಒಂದು ವಿಶಾಲ ವಾದ ಪ್ರಪಂಚವು ಇದರಂತೆಯೇ ಇರುವುದನ್ನು ಕಾಣುವರು.

೪೬. ಶುದ್ಧವಾದ ಚಿದಾಕಾಶವೇ ಅಹಂ ಆಗಿ ಜಗತ್ತಾಗಿ ಭ್ರಮೆಯಿಂದ ಎರಡನ್ನು ಅನುಭವಿಸುವುದು. ಭ್ರಮೆಯೂ ವ್ಯೋಮರೂಪಿಯೇ ಆದುದು. ವ್ಯೋಮರೂಪನಾದ ಜೀವನು ಮತ್ತೆ ಹುಟ್ಟಿದೆನು ಎಂದುಕೊಳ್ಳುವನು.

೪೭. ಸ್ವರ್ಗ, ಪರ್ವತ, ಸೂರ್ಯ, ನಕ್ಷತ್ರ ನಿಕರಗಳಿಂದ ತುಂಬಿ, ಜರಾ, ಮರಣ ಮುಂತಾದ ವಿಕಾರಗಳಿಗೂ ವ್ಯಾಧಿಸಂಕಟಗಳಿಗೂ ಆಕರವಾಗಿರುವುದಾ ವಿಶಾಲಪ್ರಪಂಚವು.

೪೮. ಆ ಪ್ರಪಂಚದಲ್ಲಿ ಸ್ವಭಾವ, ಅಭಾವಗಳಿಗಾಗಿ ನಡೆಯುವ ಕಾರ್ಯ ಗಳು, ಸ್ಥೂಲ, ಸೂಕ್ಷ್ಮಗಳು ಚರ, ಅಚರಗಳೂ, ಸಮುದ್ರ, ಗಿರಿ, ಭೂಮಿ, ಈಶ್ವರ, ಅಹೋರಾತ್ರಿಗಳು, ಕಲ್ಪ, ಕ್ಷಣ, ಕ್ಷಯಗಳು ಎಲ್ಲವೂ ಇರುವುವು.

ಅಹಂ ಜಾತೋಽಮುನಾ ಪಿತ್ರಾ ಕಿಲಾತ್ರೇತ್ಯಾಪ್ತನಿಶ್ಚಯಂ |
ಇಯಂ ಮಾತಾ ಧನಮಿದಂ ಮಮೇತ್ಯುದಿತವಾಸನಂ || ೪೯ ||

ಸುಕೃತಂ ದುಷ್ಕೃತಂ ಚೇದಂ ಮಮೇತಿ ಕೃತಕಲ್ಪನಂ |
ಬಾಲೋಽಭೂವಮಹಂ ತ್ವದ್ಯ ಯುವೇತಿ ವಿಲಸದ್ಧೃದಿ || ೫೦ ||

ಪ್ರತ್ಯೇಕಮೇವ ಮುದಿತಃ ಸಂಸಾರವನಖಂಡಕಃ |
ತಾರಾಕುಸುಮಿತೋ ನೀಲಮೇಘಚಂಚಲಪಲ್ಲವಃ || ೫೧ ||

ಚರನ್ನರಮೃಗಾನೀಕಃ ಸುರಾಸುರವಿಹಂಗಮಃ |
ಆಲೋಕಕೌಸುಮರಜಾಃ ಶ್ಯಾಮಾಗಹನಕುಂಜಕಃ || ೫೨ ||

ಅಬ್ಧಿಪುಷ್ಕರಿಣೀಪೂರ್ಣೋ ಮೇರ್ವಾದ್ಯಚಲಲೋಷ್ಟಕಃ |
ಚಿತ್ತಪುಷ್ಕರಬೀಜಾಂತರ್ನಿಲೀನಾನುಭವಾಂಕುರಃ || ೫೩ ||

---

೪೯. ನಾನು ಈ ತಂದೆಯಿಂದ ಹುಟ್ಟಿದೆನು ಅಲ್ಲವೆ ಎಂಬ ನಂಬಿಕೆಯು ಹುಟ್ಟುವುದು. ಇವಳು ನನ್ನ ತಾಯಿ ಇದು ನನ್ನ ಧನ ಎಂಬ ವಾಸನೆಯು (ಮಮತೆ ?) ಯು ಉದಿಸುವುದು.

೫೦. ಇದು ಸುಕೃತ, ಇದು ದುಷ್ಕೃತ, ಇದು ನನ್ನದು, ನಾನು ಹುಡುಗನಾಗಿದ್ದೆನು, ಈಗ ತರುಣನಾಗಿರುವೆನು, ಎಂಬ ಕಲ್ಪನೆಗಳೆಲ್ಲವೂ ತಲೆದೋರುವುವು.

೫೧. ಹೀಗೆ, ನಕ್ಷತ್ರಕುಸುಮವೂ ನೀಲಮೇಘ ಚಂಚಲ ಪಲ್ಲವವೂ ಆದ ಸಂಸಾರ ವನಖಂಡವು ಪ್ರತಿಯೊಬ್ಬ ಜೀವನಿಗೂ ಪ್ರತ್ಯೇಕವಾಗಿ ಹುಟ್ಟುವುದು.

೫೨. ಈ ಸಂಸಾರ ವನದಲ್ಲಿ ಮನುಷ್ಯರೆಂಬ ಮೃಗಗಣಗಳೂ ಸುರಾ ಸುರರೆಂಬ ವಿಹಂಗಮಗಳೂ ಹಗಲೆಂಬ ಪುಷ್ಪಪರಾಗವೂ ರಾತ್ರಿಯೆಂಬ ಲತಾಗೃಹವೂ ಇರುವುವು.

೫೩. ಇದು ಸಮುದ್ರವೆಂಬ ಸರೋವರವೂ ಮೇರು ಮುಂತಾದ ಪರ್ವತಗಳೆಂಬ ಮಣ್ಣು ಹೆಂಟೆಗಳೂ ಇದುವುವು. ಇಲ್ಲಿರುವ ಚಿತ್ತವೆಂಬ ಕಮಲಬೀಜದಲ್ಲಿ ಅನುಭವ (ಪ್ರಾಕ್ತನವಾಸನೆ) ಗಳೆಂಬ ಅಂಕುರಗಳು ಅಡಗಿರುವುವು.

ಯತ್ರೈಷ ಮ್ರಿಯತೇ ಜೀವಸ್ತತ್ರೈವಂ ಪಶ್ಯತಿ ಕ್ಷಣಾತ್ ।
ಪ್ರತ್ಯೇಕಮುದಿತೇಷ್ವೇವಂ ಜಗತ್ಖಂಡೇಷು ಭೂರಿಶಃ ॥ ೫೪ ॥

ಕೋಟಯೋ ಬ್ರಹ್ಮರುದ್ರೇಂದ್ರ ಮರುದ್ವಿಷ್ಣುವಿವಸ್ವತಾಂ ।
ಗಿರ್ಯಬ್ಧಿಮಂಡಲದ್ವೀಪ ಲೋಕಾಂತರದೃಶಾ ಗತಾಃ ॥ ೫೫ ॥

ಯಾತಾ ಯಾಸ್ಯಂತಿ ಯಾಂತ್ಯೇತಾ ದೃಷ್ಟಯೋ ನಷ್ಟರೂಪಿಣೀಃ ।
ಯಾ ಬ್ರಹ್ಮಣ್ಯುಪಬೃಂಹಾಢ್ಯಾಸ್ತಾಃ ಕೇ ಗಣಯಿತುಂ ಕ್ಷಮಾಃ ॥ ೫೬ ॥

ಏವಂ ಕುಡ್ಯಮಯಂ ವಿಶ್ವಂ ನಾಸ್ತ್ಯೇವ ಮನನಾದೃತೇ ।
ಮನನೇ ಚಲಮೇವಾಂತಸ್ತದಿದಾನೀಂ ವಿಚಾರಯ ॥ ೫೭ ॥

ಯದೇವ ತಚ್ಚಿದಾಕಾಶಂ ತದೇವ ಮನನಂ ಸ್ಮೃತಂ ।
ಯದೇವ ಚ ಚಿದಾಕಾಶಂ ತದೇವ ಪರಮಂ ಪದಂ ॥ ೫೮ ॥

೫೪-೫. ಈ ಜೀವನು ಎಲ್ಲಿ ಮೃತನಾಗುವನೋ ಅಲ್ಲಿಯೇ ಅದೇ ಕ್ಷಣದಲ್ಲಿಯೇ ಹಿಂದೆ ಹೇಳಿದಂತಹ ಜಗತ್ಖಂಡಗಳು ಅದರಲ್ಲಿ ಬ್ರಹ್ಮ ರುದ್ರ ಇಂದ್ರ ಮರುತ್ತು ವಿಷ್ಣು ಸೂರ್ಯರೂ ಕೋಟಿ ಕೋಟಿಯಾಗಿ, ಗಿರಿಸಮುದ್ರಮಂಡಲ ದ್ವೀಪ ಲೋಕಾಂತರಗಳೂ ಇರುವುದನ್ನು ಕಾಣುವನು.

೫೬. ಹೀಗೆ ಕಾಣುವ ಈ ದೃಶ್ಯಗಳೆಲ್ಲವೂ ಹೋದುವು: ಹೋಗುವುವು: ಹೋಗುತ್ತಿರುವುವು. ಇವು ನಷ್ಟರೂಪಿಗಳು (ಅಸತ್ಯವಾದವು). ಇವು ಬ್ರಹ್ಮದಲ್ಲಿ ಉಪಬೃಂಹಣದಿಂದ ಕಾಣುವುವು. ಇವುಗಳೆಷ್ಟಿರುವುವೋ ಎಣಿಸುವುದಕ್ಕೆ ಯಾರು ಶಕ್ತರು ?

೫೭. ಈ ಪ್ರಪಂಚವು ಸ್ಥಿರವಾಗಿರುವಂತೆ ತೋರಿದರೂ ಮನನವೇ ಹೊರತು ಬೇರೆಯಲ್ಲ. ವಿಚಾರಮಾಡಿ ನೋಡಿದರೆ ಸ್ಥಿರವಲ್ಲವೆಂಬುದು ಸಿದ್ಧವಾಗುವುದು. ಅದರಿಂದ ವಿಚಾರಮಾಡಿ ನೋಡು.

೫೮. ಚಿದಾಕಾಶವೇ ಮನನವು. ಚಿದಾಕಾಶವೇ ಪರಮಪದವು.

ಯದೇವಾಂಬು ಸ ಆವರ್ತೋ ನತ್ವಸ್ಯಾವರ್ತವಸ್ತು ಸನ್ ।
ದ್ರಷ್ಟೈವಾಸ್ತೇ ದೃಶ್ಯಮಿವ ದೃಶ್ಯಂ ನತ್ವಸ್ತಿ ವಸ್ತುಸತ್ ॥ ೫೯ ॥

ಚಿದ್ವ್ಯೋಮ್ನೋ ಭೂತನಭಸಿ ಕಚನಂ ಯನ್ಮಣೇರಿವ ।
ತಜ್ಜಗದ್ಭಾವಿನಾನಾಸತತ್ತ್ವಂ ಶ್ವಭ್ರಮಿವಾಂಬರೇ ॥ ೬೦ ॥

ಮದ್ಬುದ್ಧಾರ್ಥೋ ಜಗಚ್ಛಬ್ದೋ ವಿದ್ಯತೇ ಪರಮಾಮೃತಂ ।
ತ್ವದ್ಬುದ್ಧಾರ್ಥಸ್ತು ನಾಸ್ತ್ಯೇವ ತ್ವಮಹಂಶಬ್ದಕಾದಪಿ ॥ ೬೧ ॥

ತಸ್ಮಾಲ್ಲೀಲಾಸರಸ್ವತ್ಯಾವಾಕಾಶವಪುಷೌ ಸ್ಥಿತೇ ।
ಸರ್ವಗೇ ಪರಮಾತ್ಮಾಚ್ಛೇ ಸರ್ವತ್ರಾಪ್ರತಿಘೇಽನಘೇ ॥ ೬೨ ॥

ಯತ್ರ ಯತ್ರ ಸದಾ ವ್ಯೋಮ್ನಿ ಯಥಾಕಾಮಂ ಯಥೇಪ್ಸಿತಂ ।
ಉದಯಂ ಕುರುತಸ್ತೇನ ತದ್ಗೇಹೇಽಸ್ತಿ ಗತಿಸ್ತಯೋಃ ॥ ೬೩ ॥

---

೫೯. ನೀರೇ ಸುಳಿಯು. ನೀರನ್ನು ಬಿಟ್ಟು ಸುಳಿಯೆಂಬುದು ಇನ್ನೊಂದು ನಿಲ್ಲ, ದ್ರಷ್ಟೃವೇ ದೃಶ್ಯವು. ದೃಶ್ಯವೆಂಬ ವಸ್ತುವು ಇನ್ನೊಂದು ಇಲ್ಲ.

೬೦. ಅಭೌತಿಕ ಆಕಾಶದಲ್ಲಿ ಚಿದ್ವ್ಯೋಮವು ಥಳಥಳಿಸುವುದು. ರತ್ನದ ಹೊಳಪಿನಂತೆ ಇರುವ ಕಚನವೇ ಆಕಾಶದಲ್ಲಿ (ಕಾಣುವ ಗಂಧರ್ವ ನಗರಾದಿ) ಛಿದ್ರಗಳಂತೆ ನಾನಾ ರೂಪವಾದ ಜಗತ್ತಾಗಿ ಕಾಣುವುದು. ಇದೇ ತತ್ವವು.

೬೧. ಜಗತ್ ನೀನು, ನಾನು, ಎಂಬ ಶಬ್ದಗಳಿಗೂ ನಾನು ತಿಳಿದುಕೊಂಡಿ ಅರ್ಥವು ಶ್ರೇಷ್ಠವಾದ ಅಮೃತವಾಗಿರುವುದು. ನೀನು ತಿಳಿದುಕೊಂಡಿರುವ ಅರ್ಥವು ಇಲ್ಲವೇ ಇಲ್ಲ.

೬೨. ಅದರಿಂದ ಲೀಲಾ ಸರಸ್ವತಿಯರು ಆಕಾಶ ದೇಹಿಗಳಾಗಿ ಎಲ್ಲಿಬೇಕೆಂದರಲ್ಲಿಗೆ ಹೋಗುವರಾಗಿ, ಪರಮಾತ್ಮನಂತೆ ನಿರ್ಮಲರಾಗಿ, ಸಣ್ಣ ರಂಧ್ರದಲ್ಲಿಯೂ ಹೋಗಬಲ್ಲವರಾಗಿ, ನಿರ್ಮಲರಾಗಿ ಇದ್ದರು.

೬೩. ಅವರಿಬ್ಬರೂ ಯಾವ ಯಾವ ಆಕಾಶದಲ್ಲಿಯೇ ಆದರೂ ತಮಗೆ ತೋರಿದಂತೆ, ಇಷ್ಟಬಂದಂತೆ ಉದಯವಾಗಬಲ್ಲರು. ಅದರಿಂದ ಅವರಿಗೆ ಆ ಅರಮನೆಯ ಒಳಗೂ ಪ್ರವೇಶವುಂಟಾಯಿತು.

ಸರ್ವತ್ರ ಸಂಭವತಿ ಚಿದ್ಗಗನಂ ತದತ್ರ
ಸದ್ವೇದನಂ ವಲನಮಾಮನನಂ ವಿಸಾರಿ |
ತಚ್ಚಾತಿವಾಹಿಕಮಿಹಾಹುರಕುಡ್ಯಮೇವ
ದೇವಂ ಕಥಂ ಕ ಇವ ತಂ ವದ ಕಿಂ ರುಣದ್ಧಿ || ೬೪ ||

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿಪ್ರಕರಣೇ "ಸಮರಸಮನಂತರಸಂಸ್ಮೃತ್ಯನುಭವವರ್ಣನಂ" ನಾಮ ಚತ್ವಾರಿಂಶಃ ಸರ್ಗಃ

---

೬೪. ಚಿದಾಕಾಶವು ಎಲ್ಲೆಲ್ಲಿಯೂ ಇರುವುದು. (ಕಲ್ಪನ) ಎನ್ನಿಸಿಕೊಂಡು ಮನಸ್ಸಿನಿಂದ ಹಿಡಿದು ವಿಷಯಗಳವರೆಗೆ ಹರಡಿರುವುದು. ಹೀಗೆಂದು ತಿಳಿಯುವುದೇ ಯಥಾರ್ಥ ಜ್ಞಾನವೂ ಆಗುವುದು. ಅದೇ ಅತಿವಾಹಿಕ ದೇಹವು ಅದೇ ಸೂಕ್ಷ್ಮದೇಹವು. ಇದನ್ನು ಹೇಗೆ ತಡೆಯುವುದು ? ಯಾರು ತಡೆಯುವರು ? ಏನು ತಡೆಯುವುದು ಹೇಳು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ ಉತ್ಪತ್ತಿ ಪ್ರಕರಣದಲ್ಲಿ "ಸಮರಸಮನಂತರಸಂಸ್ಮೃತ್ಯನುಭವವರ್ಣನಂ" ಎಂಬ ನಾಲ್ವತ್ತನೆಯ ಸರ್ಗವು.

ಏಕಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ತಯೋಃ ಪ್ರವಿಷ್ಟಯೋರ್ದೇವ್ಯೋಃ ಪದ್ಮಸದ್ಮ ಬಭೂವ ತತ್ |
ಚಂದ್ರದ್ವಯೋಯೋದ್ಯೋತ ಧವಳೋದರ ಸುಂದರಂ ॥ ೧ ॥

ಕೋಮಲಾಮಲಸೌಗಂಧ್ಯ ಮೃದುಮಂದಾರ ಮಾರುತಂ |
ತತ್ಪ್ರಭಾವೇನ ನಿದ್ರಾಲುನೃಪೇತರನರಾಂಗನಂ ॥ ೨ ॥

ಸೌಭಾಗ್ಯನಂದನೋದ್ಯಾನಂ ವಿದ್ರುತವ್ಯಾಧಿವೇದನಂ |
ಸವಸಂತಂ ವನಮಿವ ಫುಲ್ಲಂ ಪ್ರಾತರಿವಾಂಬುಜಂ ॥ ೩ ॥

ತಯೋರ್ದೇಹಪ್ರಭಾಪೂರೈಃ ಶಶಿನಿಸ್ಯಂದಶೀತಲೈಃ |
ಆಹ್ಲಾದಿತೋಽಸೌ ಬುಬುಧೇ ರಾಜೋಕ್ಷಿತ ಇವಾಮೃತೈಃ ॥ ೪ ॥

ನಲವತ್ತೊಂದನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ಆ ಇಬ್ಬರೂ ದೇವಿಯರು ಪ್ರವೇಶಿಸಲು ಪದ್ಮರಾಜನರಮನೆಯು ಇಬ್ಬರು ಚಂದ್ರರ ಉದಯವಾದಂತೆ ಬೆಳ್ಳಗೆ ಸುಂದರ ವಾಗಿ ಬೆಳಗಿತು.

೨. ಕೋಮಲವಾಗಿ, ನಿರ್ಮಲವಾಗಿ, ಮಂದಾರ ಸುಗಂಧದಿಂದ ಮೃದು ವಾಗಿರುವ ಮಾರುತವು ಬೀಸಿದಂತಾಯಿತು. ಆ ಪ್ರಭಾವದಿಂದ ಅವರು ಆ ನರ ಪತಿಯನ್ನು ಬಿಡಲು, ಮಿಕ್ಕ ಸ್ತ್ರೀಪುರುಷರೆಲ್ಲರೂ ನಿದ್ರಾವಶರಾದರು.

೩. ನಂದನೋದ್ಯಾನದ ಸೌಭಾಗ್ಯವೂ, ಬಂತು: ಇದ್ದ ವ್ಯಾಧಿಗಳ ನೋವೆಲ್ಲವೂ ಹೋಯಿತು: ವಸಂತಕಾಲದ ವನದಂತೆ ಆಯಿತು. ಪ್ರಾತಃ ಕಾಲದಲ್ಲಿ ಅರಳಿದ ಪದ್ಮದಂತೆ ಆಯಿತು.

೪. ಕರಗಿದ ಚಂದ್ರನೆಂಬಂತೆ ತಂಪಾಗಿರುವ ಆ ದೇವಿಯರ ದೇಹಪ್ರಭಾವ ದಿಂದಲೇ ಆ ರಾಜನಿಗೆ ಅಮೃತವನ್ನೆರೆದಂತೆ ಅಗಿ ಸಂತೋಷದಿಂದಲೇ ಆ ರಾಜನು ಎಚ್ಚೆತ್ತನು.

ಆಸನದ್ವಯ ವಿಶ್ರಾಂತಂ ಸ ದದರ್ಶಾಪ್ಸರೋದ್ವಯಂ |
ಮೇರುಶೃಂಗದ್ವಯೇ ಚಂದ್ರಬಿಂಬದ್ವಯಮಿವೋದಿತಂ || ೫ ||

ನಿಮೇಷಮಿವ ಸಂಚಿಂತ್ಯ ಸ ವಿಸ್ಮಿತಮನಾ ನೃಪಃ |
ಉತ್ತಸ್ಥೌ ಶಯನಾಚ್ಛೇಷಾದಿವ ಚಕ್ರಗದಾಧರಃ || ೬ ||

ಪರಿಸಂಯಮಿತಾಲಂಬಿಮಾಲ್ಯಹಾರಾಧರಾಂಬರಃ |
ಪುಷ್ಪಾಹಾರ ಇವೋತ್ಫುಲ್ಲಂ ಜಗ್ರಾಹ ಕುಸುಮಾಂಜಲಿಂ || ೭ ||

ಉಪಧಾನಪ್ರದೇಶಸ್ಥಾತ್ಸ್ವಯಂ ಪಟಲಕೋಟರಾತ್ |
ಬದ್ಧಪದ್ಮಾಸನೋ ಭೂಮೌ ಭೂತ್ವೋವಾಚೇದಮಾನತಃ || ೮ ||

ಜಯತಾಂ ಜನ್ಮದೌಃಸ್ಥಿತ್ಯ ದಾಹದೋಷ ಶಶಿಪ್ರಭೇ |
ದೇವ್ಯೌ ಬಾಹ್ಯಾಂತರತಮೋ ವಿದ್ರಾವಣರವಿಪ್ರಭೇ || ೯ ||

---

೫. ಮೇರುಶೃಂಗದಲ್ಲಿ ಉದಯಿಸಿದ ಇಬ್ಬರು ಚಂದ್ರರೋ ಎಂಬಂತೆ ಎರಡು ಆಸನಗಳಲ್ಲಿ ಕುಳಿತಿರುವ ಆ ಇಬ್ಬರು ಅಪ್ಸರ ಸ್ತ್ರೀಯರನ್ನು ಕಂಡನು.

೬. ಅದನ್ನು ಕಂಡು ಆ ರಾಜನು ವಿಸ್ಮಯದಿಂದ ಒಂದು ಗಳಿಗೆ ಯೋಚನೆಯಲ್ಲಿದ್ದು, ಶ್ರೀಮನ್ನಾರಾಯಣನು ಶೇಷಶಯನದಿಂದ ಏಳುವಂತೆ ಎದ್ದನು.

೭. ಮಾಲ್ಯ, ಹಾರ, ವಸ್ತ್ರಾದಿಗಳನ್ನು ಸರಿಪಡಿಸಿಕೊಂಡು ಪುಷ್ಪಾಹಾರನಂತೆ ಚೆನ್ನಾಗಿ ಅರಳಿದ ಕುಸುಮಗಳನ್ನು ಅಂಜಲಿಯಲ್ಲಿ ತೆಗೆದುಕೊಂಡನು.

೮. ಆ ಹುವ್ವುಗಳು ಮಂಚದ ಮಗ್ಗುಲಲ್ಲಿ ಬುಟ್ಟಿಯಲ್ಲಿದ್ದುವು. ಎದ್ದು ನೆಲದಮೇಲೆ ಪದ್ಮಾಸನದಲ್ಲಿ ಕುಳಿತು ವಿನಯದಿಂದ ಹೀಗೆ ಹೇಳಿದನು.

೯. ಬಾಳಿನ ದುಃಖವೆಂಬ ದಾಹರೋಗಕ್ಕೆ ಅಮೃತಪ್ರಾಯರಾದ ದೇವಿಯರಿಗೆ ಜಯವಾಗಲಿ: ಒಳಗೂ ಹೊರಗೂ ಇರುವ ಕತ್ತಲನ್ನು ಅಳಿಸಬಲ್ಲ ಬಿಸಿಲಿನಂತಿರುವ ದೇವಿಯರಿಗೆ ಜಯವಾಗಲಿ.

ತಯೋರುಕ್ತ್ವೇತಿ ತತ್ಯಾಜ ಪಾದಯೋಃ ಕುಸುಮಾಂಜಲಿಂ |
ತೀರದ್ರುಮೋ ವಿಕಸಿತ: ಪದ್ಮಿನ್ಯೋಃ ಪದ್ಮಯೋರಿವ || ೧೦ ||

ಲೀಲಾಯೈ ಭೂಪಜನ್ಮಾಥ ವಕ್ತುಂ ಮಂತ್ರಿಣಮೀಶ್ವರೀ |
ಬೋಧಯಾಮಾಸ ಪಾರ್ಶ್ವಸ್ಥಂ ಸಂಕಲ್ಪೇನ ಸರಸ್ವತೀ || ೧೧ ||

ಪ್ರಬುದ್ಧೋಽಪ್ಸರಸೌ ದೃಷ್ಟ್ವಾ ಪ್ರಣಮ್ಯ ಕುಸುಮಾಂಜಲಿಂ |
ತಯೋಃ ಪಾದೇಷು ಸಂತ್ಯಜ್ಯ ವಿವೇಶ ಪುರತೋ ನತಃ || ೧೨ ||

ಉವಾಚ ದೇವೀ ಹೇ ರಾಜನ್ ಕಸ್ತ್ವಂ ಕಸ್ಯ ಸುತಃ ಕದಾ |
ಇಹ ಜಾತ ಇತಿ ಶ್ರುತ್ವಾ ಸ ಮಂತ್ರೀ ವಾಕ್ಯಮಬ್ರವೀತ್ || ೧೩ ||

ದೇವ್ಯೌ ಯುಷ್ಮತ್ಪ್ರಸಾದೋಽಯಂ ಭವತೋರಪಿ ಯತ್ಪುರಃ |
ವಕ್ತುಂ ಶಕ್ನೋಮಿ ತದ್ದೇವ್ಯೌ ಶ್ರೂಯತಾಂ ಜನ್ಮ ಮತ್ಪ್ರಭೋಃ || ೧೪ ||

---

೧೦. ಹೀಗೆ ಹೇಳಿ ಆ ದೇವಿಯರ ಪಾದಕಮಲಗಳಲ್ಲಿ,ತೀರದಲ್ಲಿರುವ ಮರವು ಸರೋವರದ ಪದ್ಮದಮೇಲೆ ಹೂವನ್ನು ಸುರಿಯುವಂತೆ, ಕುಸುಮಾಂಜಲಿಯನ್ನು ಅರ್ಪಿಸಿದನು.

೧೧. ಲೀಲೆಗೆ ಆ ಭೂಮಿಪತಿಯ ಜನ್ಮಾದಿಗಳನ್ನು ಹೇಳಲು, ಅಲ್ಲಿಯೇ ಮಗ್ಗುಲಲ್ಲಿ ಮಲಗಿದ್ದ ಮಂತ್ರಿಯನ್ನು ಸರಸ್ವತೀ ದೇವಿಯು ಎಚ್ಚರಗೊಳಿಸಿದಳು.

೧೨. (ಮಂತ್ರಿಯು) ಎದ್ದು, ಅಪ್ಸರಸೆಯರನ್ನು ಕಂಡು ನಮಸ್ಕಾರಮಾಡಿ, ಕುಸುಮಾಂಜಲಿಯನ್ನು ಅವರ ಪಾದಗಳಲ್ಲಿ ಒಪ್ಪಿಸಿ, ಅವರೆದುರಿಗೆ ಬಂದು ನಮ್ರನಾಗಿ ನಿಂತುಕೊಂಡನು.

೧೩. ದೇವಿಯರು ಎಲೈ ರಾಜನೆ, ನೀನು ಯಾರು ? ಯಾರ ಮಗನು ? ಯಾವಾಗ ಇಲ್ಲಿ ಹುಟ್ಟಿದೆ ? ಎಂದು ಕೇಳಲು ಮಂತ್ರಿಯು ಅದನ್ನು ಕೇಳಿ ಈ ಮಾತನ್ನು ಹೇಳಿದನು.

೧೪. ದೇವಿಯರೆ, ತಮ್ಮಂತಹವರ ಮುಂದೆ ಮಾತನಾಡುತ್ತಿರುವೆನೆಂಬುದೂ ತಮ್ಮ ಪ್ರಸಾದವೇ ! ನಮ್ಮ ಪ್ರಭುವಿನ ಜನ್ಮ ವೃತ್ತಾಂತವನ್ನು ಹೇಳುವೆನು. ಕೇಳಬೇಕು.

ಆಸೀದಿಕ್ಷ್ವಾಕುವಂಶೋತ್ಥೋ ರಾಜಾ ರಾಜೀವಲೋಚನಃ |
ಶ್ರೀಮಾನ್ಕುಂದರಥೋ ನಾಮ ದೋಶ್ಛಾಯಾಚ್ಛಾದಿತಾವನಿಃ || ೧೫ ||

ತಸ್ಯಾಭೂದಿಂದುವದನಃ ಪುತ್ರೋ ಭದ್ರರಥಾಭಿದಃ |
ತಸ್ಯ ವಿಶ್ವರಥಃ ಪುತ್ರಸ್ತಸ್ಯ ಪುತ್ರೋ ಬೃಹದ್ರಥಃ || ೧೬ ||

ತಸ್ಯ ಸಿಂಧುರಥಃ ಪುತ್ರಸ್ತಸ್ಯ ಶೈಲರಥಃ ಸುತಃ |
ತಸ್ಯ ಕಾಮರಥಃ ಪುತ್ರಸ್ತಸ್ಯ ಪುತ್ರೋ ಮಹಾರಥಃ || ೧೭ ||

ತಸ್ಯ ವಿಷ್ಣುರಥಃ ಪುತ್ರಸ್ತಸ್ಯ ಪುತ್ರೋ ನಭೋರಥಃ || ೧೮ ||

ಅಯಮಸ್ಮತ್ಪ್ರಭುಸ್ತಸ್ಯ ಪುತ್ರಃ ಪೂರ್ಣಾಮಲಾಕೃತಿಃ |
ಅಮೃತಾಪೂರಿತಜನಃ ಕ್ಷೀರೋದಸ್ಯೇವ ಚಂದ್ರಮಾಃ || ೧೯ ||

ಮಹದ್ಭಿಃ ಪುಣ್ಯಸಂಭಾರೈರ್ವಿದೂರಥ ಇತಿ ಶ್ರುತಃ |
ಜಾತೋ ಮಾತುಃ ಸುಮಿತ್ರಾಯಾ ಗೌರ್ಯಾ ಗುಹ ಇವಾಪರಃ || ೨೦ ||

---

೧೫. ಇಕ್ಷ್ವಾಕು ವಂಶದಲ್ಲಿ ರಾಜೀವಲೋಚನನಾದ ಕುಂದರಥನೆಂಬ ರಾಜನಿದ್ದನು. ಅವನು ಭುಜಪರಾಕ್ರಮದಿಂದ ಭೂಮಂಡಲವನ್ನೆಲ್ಲ ಪಾಲಿಸಿದ ಶ್ರೀಮಂತನು.

೧೬. ಆತನಿಗೆ ಇಂದುವದನನಾದ ಭದ್ರರಥನೆಂಬ ಪುತ್ರನಾದನು. ಅವನ ಮಗನು ವಿಶ್ವರಥನು. ಅವನ ಮಗನು ಬೃಹದ್ರಥನು.

೧೭. ಅವನ ಮಗನು ಸಿಂಧುರಥನು. ಅವನ ಮಗನು ಶೈಲರಥನು. ಅವನ ಮಗನು ಕಾಮರಥನು. ಅವನ ಮಗನು ಮಹಾರಥನು.

೧೮-೯. ಅವನ ಮಗನು ವಿಷ್ಣುರಥನು. ಅವನ ಮಗನು ನಭೋರಥನು ನಮ್ಮ ಪ್ರಭುವು ಆತನ ಮಗನು. ಕ್ಷೀರಸಮುದ್ರದಲ್ಲಿ ಅಮೃತ ಪೂರ್ಣನಾಗಿ ಹುಟ್ಟಿದ ಚಂದ್ರನಂತೆ ಪೂರ್ಣನೂ ನಿರ್ಮಲನೂ ಆಗಿರುವನು.

೨೦. ಈತನು ದೊಡ್ಡ ಪುಣ್ಯಕಾರ್ಯಗಳನ್ನು ಮಾಡಿದವನು. ವಿದೂರಥ ನೆಂದು ಹೆಸರಾದವನು. ಗೌರೀ ದೇವಿಗೆ ಮಗನಾಗಿ ಹುಟ್ಟಿದ ಗುಹನ ಅಪರಾವ ತಾರವೆಂಬಂತೆ ಹುಟ್ಟಿದವನು.

ಪಿತಾಸ್ಯ ದಶವರ್ಷಸ್ಯ ದತ್ತ್ವಾ ರಾಜ್ಯಂ ವನಂ ಗತಃ |
ಪಾಲಯತ್ಯೇಷ ಭೂಪೀಠಂ ತತಃ ಪ್ರಭೃತಿ ಧರ್ಮತಃ || ೨೧ ||

ಭವತ್ಯಾವದ್ಯಸಂಪ್ರಾಪ್ತೇ ಫಲಿತೇ ಸುಕೃತದ್ರುಮೇ |
ದೇವ್ಯೌ ದೀರ್ಘತಪಃಕ್ಲೇಶಶತೈರ್ದುಷ್ಪ್ರಾಪದರ್ಶನೇ || ೨೨ ||

ಇತ್ಯಯಂ ವಸುಧಾಧೀಶೋ ವಿದೂರಥ ಇತಿ ಶ್ರುತಃ |
ಅದ್ಯ ಯುಷ್ಮತ್ಪ್ರಸಾದೇನ ಪರಾಂ ಪಾವನತಾಂ ಗತಃ
ಇತ್ಯುಕ್ತ್ವಾ ಸಂಸ್ಥಿತೇ ತೂಷ್ಣೀಂ ಮಂತ್ರಿಣ್ಯವನಿಪೇ ತಥಾ | || ೨೩ ||

ಕೃತಾಂಜಲೌ ನತಮುಖೇ ಬದ್ಧಪದ್ಮಾಸನೇಽವನೌ || ೨೪ ||

ರಾಜನ್ ಸ್ಮರ ವಿವೇಕೇನ ಪೂರ್ವಜಾತಿಮಿತಿ ಸ್ವಯಂ |
ವದಂತೀ ಮೂರ್ಧ್ನಿ ಪಸ್ಪರ್ಶ ತಂ ಕರೇಣ ಸರಸ್ವತೀ || ೨೫ ||

---

೨೧. ಈತನು ಇನ್ನೂ ಹತ್ತುವರ್ಷದ ಹುಡುಗನಾಗಿದ್ದಾಗಲೇ ರಾಜ್ಯವನ್ನು ಇವನಿಗೆ ಕೊಟ್ಟು ಇವನ ತಂದೆಯು ವನಕ್ಕೆ ಹೋದನು. ಆಗಿನಿಂದ ಈತನು ಧರ್ಮವಾಗಿ ರಾಜ್ಯವನ್ನು ಪಾಲಿಸುತ್ತಿರುವನು.

೨೨. ಈ ದಿನ ತಾವು ಬಂದಿರಿ. ಸುಕೃತದ್ರುಮವು ಇಂದು ಫಲಿಸಿತು. ದೀರ್ಘತಪಸ್ಸೆಂಬ ಕ್ಲೇಶ ಶತಗಳಿಂದಲೂ ತಮ್ಮ ದರ್ಶನವು ದೊರೆಯತಕ್ಕುದಲ್ಲ.

೨೩. ರಾಜನಾದ ವಿದೂರಥನು ಈಗ ನಿಮ್ಮ ಪ್ರಸಾದದಿಂದ ಶ್ರೇಷ್ಠನೂ ಪಾವನನೂ ಆದನು.

೨೪. ಕೃತಾಂಜಲಿಗಳಾಗಿ ತಲೆಯನ್ನು ಬಗ್ಗಿಸಿಕೊಂಡು ನೆಲದಮೇಲೆ ಪದ್ಮಾಸನದಲ್ಲಿ ಮಂತ್ರಿಯೂ ದೊರೆಯೂ ಹೀಗೆಂದು ಹೇಳಿ ಸುಮ್ಮನೆ ಕುಳಿತಿರಲು,

೨೫. ರಾಜನೇ, ನಿನ್ನ ಪೂರ್ವ ಜನ್ಮವನ್ನು ನೆನೆದುಕೋ ಎಂದು ಹೇಳುತ್ತ ಸರಸ್ವತಿಯು ಅವನ ತಲೆಯನ್ನು ಕೈಯಿಂದ ಮುಟ್ಟಿದಳು.

ಅಥ ಹಾರ್ದಂ ತಮೋ ಮಾಯಾಪದ್ಮಸ್ಯ ಕ್ಷಯಮಾಯಯೌ |
ಸುವಿಕಾಸಂ ಚ ಹೃದಯಂ ಜ್ಞಪ್ತಿಸ್ಪರ್ಶೋದಯೋಽಭವತ್ || ೨೬ ||

ಸಸ್ಮಾರ ಪೂರ್ವವೃತ್ತಾಂತಂ ಅಂತಃ ಸ್ಫುರದಿವಸ್ಥಿತಂ |
ತ್ಯಕ್ತದೇಹೈಕರಾಜ್ಯತ್ವಂ ಲೀಲಾವಿಲಸಿತಾನ್ವಿತಂ || ೨೭ ||

ಜ್ಞಾತ್ವಾ ಪ್ರಜ್ಞಪ್ತಿ ವೃತ್ತಾಂತಂ ಲೀಲಾಯಾಸ್ತು ವಿಜೃಂಭಿತಂ |
ಆತ್ಮೋದಂತಂ ಬಭೂವಾಸಾವುಹ್ಯಮಾನ ಇವಾರ್ಣವೇ || ೨೮ ||

ಉವಾಚಾತ್ಮನಿ ಸಂಸಾರೇ ಬತ ಮಾಯೇಯಮಾತತಾ |
ಪರಿಜ್ಞಾತಾ ಪ್ರಸಾದೇನ ದೇವ್ಯೋರಿಹ ಮಯಾಧುನಾ || ೨೯ ||

ರಾಜೋವಾಚ :—

ಹೇ ದೇವ್ಯೌ ಕಿಮಿದಂ ನಾಮ ದಿನಮೇಕಂ ಮೃತಸ್ಯ ಮೇ |
ಗತಮದ್ಯೇಹ ಜಾತಾನಿ ವಯೋವರ್ಷಾಣಿ ಸಪ್ತತಿಃ || ೩೦ ||

---

೨೬. ಪದ್ಮರಾಜನ ಹೃದಯದಲ್ಲಿದ್ದ ಮಾಯೆಯು ಒಂದು ಕ್ಷಣದಲ್ಲಿ ಕ್ಷಯವಾಯಿತು. ಜ್ಞಪ್ತಿದೇವಿಯ ಸ್ಪರ್ಶದಿಂದ ಹೃದಯವು ವಿಕಾಸವಾಯಿತು.

೨೭. ಪೂರ್ವ ವೃತ್ತಾಂತವು ಹೃದಯದಲ್ಲಿ ತಾನಾಗಿ ಸ್ಫುರಿಸಿ ಎಲ್ಲವೂ ನೆನೆಪಾಯಿತು. ಹಿಂದಿನ ಸಮ್ರಾಟನಾಗಿ ಲೀಲಾಪತಿಯಾಗಿದ್ದುದನ್ನು ಸ್ಮರಿಸಿ ಕೊಂಡನು.

೨೮. ಸರಸ್ವತೀದೇವಿ, ಲೀಲೆ, ತಾನು, ಮೂವರ ವೃತ್ತಾಂತವೂ ಚೆನ್ನಾಗಿ ನೆನೆಪಾಗಿ ಸಮುದ್ರದಲ್ಲಿ ಕೊಚ್ಚಿ ಹೋದವನಂತೆ ಆದನು.

೨೯. ತನ್ನ ಮನಸ್ಸಿನಲ್ಲಿಯೇ "ಸಂಸಾರದಲ್ಲಿ ಮಾಯೆಯು ಹೇಗೆ ಹರಡಿರುವುದು ! ಈ ದೇವಿಯರ ಪ್ರಸಾದದಿಂದ ಇದು ನನಗೆ ಈಗ ತಿಳಿಯಿತು" ಎಂದುಕೊಂಡನು.

೩೦. ರಾಜನು ಹೇಳಿದನು.—ಎಲೌ ದೇವಿಯರೆ, ಇದೇನು ? ನಾನು ಸತ್ತು ಇನ್ನೂ ಒಂದೇ ಒಂದು ದಿನವಾಗಿದ್ದರೂ ಇಲ್ಲಿ ಹುಟ್ಟಿ ಎಪ್ಪತ್ತು ವರ್ಷವಾಯಿತು.

ಸ್ಮರಾನ್ಯನೇಕಕಾರ್ಯಾಣಿ ಸ್ಮರಾಮಿ ಪ್ರಪಿತಾಮಹಂ |
ಸ್ಮರಾಮಿ ಬಾಲ್ಯಂ ತಾರುಣ್ಯಂ ಮಿತ್ರಂ ಬಂಧುಪರಿಚ್ಛದಂ || ೩೧ ||

ಜ್ಞಪ್ತಿರುವಾಚ :—

ರಾಜನ್ ಮೃತಿಮಹಾಮೋಹಮೂರ್ಛಾಯಾಃ ಸಮನಂತರಂ |
ತಸ್ಮಿನ್ ಲೋಕಾಂತರೇಽತೀತೆ ತಸ್ಮಿನ್ನೇವ ಮುಹೂರ್ತಕೇ || ೩೨ ||

ತಸ್ಮಿನ್ನೇವ ಗೃಹೇ ಚಾಸ್ಮಿನ್ನೇವ ವ್ಯೋಮ್ನ್ಯಪಿ ಸದ್ಮನಿ |
ಅಯಂ ತಸ್ಯ ಗೃಹಸ್ಯಾಂತರ್ವ್ಯೋಮನ್ಯೇವ ಕಿಲ ಸ್ಥಿತೇ || ೩೩ ||

ಗಿರಿಗ್ರಾಮಕವಿಪ್ರಸ್ಯ ಗೃಹೇಽಂತರ್ಭೂಪ ಮಂಡಪಃ |
ತಸ್ಯಾಂತರೇಽಯಮಾಭಾತಿ ಪ್ರತ್ಯೇಕಂ ಚ ಜಗದ್ಗೃಹಂ || ೩೪ ||

ಕಿಲ ಬ್ರಾಹ್ಮಣಗೇಹಾಂತರ್ಜೀವಸ್ತೇ ಮಧುಪಾಸ್ಥಿತಃ |
ತತ್ರೈವ ತಸ್ಯ ಭೂಪೀಠಂ ತಸ್ಮಿಂಶ್ಚ ಕಿಲ ಮಂಡಪೇ || ೩೫ ||

ತಸ್ಯೈವ ಚ ಗೃಹಸ್ಯಾಂತರಿದಂ ಸಂಸಾರಮಂಡಲಂ |
ತತ್ರೈವೇದಂ ತವ ಗೃಹಂ ಸ್ಥಿತಮಾರಂಭಮಂಥರಂ || ೩೬ ||

---

೩೧. ನಾನು ಮಾಡಿದ ಎಷ್ಟೋ ಕಾರ್ಯಗಳು ನನಗೆ ನೆನೆಪಿದೆ. ನನ್ನ ತಾತನನ್ನೂ ನಾನು ಬಲ್ಲೆನು. ನನ್ನ ಬಾಲ್ಯ ಯೌವನಗಳೂ ಮಿತ್ರ ಬಾಂಧವರಾದಿಯಾದವರನ್ನು ಬಲ್ಲೆನು.

೩೨–೪. ಜ್ಞಪ್ತಿಯು ಹೇಳಿದಳು :—ಎಲೈ ರಾಜನೆ, ನಿನಗೆ ಮರಣವಾಗಿ ಮಹಾಮೋಹರೂಪವಾದ ಮೂರ್ಛೆಯು ಬಂದಿತ್ತು. ಅದನ್ನು ಕಳೆದ ಕೂಡಲೇ ಆ ಲೋಕಾಂತರವು ಅದೇ ಗಳಿಗೆಯಲ್ಲಿಯೇ ಇದೇ ಆಕಾಶದಲ್ಲಿಯೇ ಇದ್ದರೂ, ಆ ಬ್ರಾಹ್ಮಣನ ಗಿರಿಗ್ರಾಮದ ಗೃಹವೂ ಅದರ ಆಕಾಶದಲ್ಲಿಯೇ ಇದ್ದ ಅರಸನ ಅರಮನೆಯೂ, ಅದರೊಳಗೆ ಇರುವ ಜಗತ್ತೂ ನಿನಗೆ ಪ್ರತ್ಯೇಕ ಪ್ರತ್ಯೇಕವಾಗಿ ಕಾಣುತ್ತಿರುವುವು.

೩೫. ಆ ಬ್ರಾಹ್ಮಣನ ಮನೆಯೊಳಗೆ ನನ್ನ ಉಪಾಸನ ಮಾಡುತ್ತಿರುವ ನಿನ್ನ ಜೀವವೂ ಆ ಮನೆಯೊಳಗೇ ಆ ರಾಜ್ಯ ದೇಶವೂ ಇರುವುವು.

೩೬. ಆ ಮನೆಯೊಳಗೆ ಈ ಸಂಸಾರ ಮಂಡಲವೂ ಎಷ್ಟೋ ಕೆಲಸಗಳು ನಡೆಯುತ್ತಿವ ಈ ನಿನ್ನ ಅರಮನೆಯೂ ಇರುವುವು.

ತತ್ರೈವ ಚೇತಸಿ ತವ ನಿರ್ಮಲಾಕಾಶನಿರ್ಮಲೇ |
ಪ್ರತಿಭಾಮಾಗತಮಿದಂ ವ್ಯವಹಾರಭ್ರಮಾತತಂ || ೩೭ ||

ಯಥೇದಂ ನಾಮ ಮೇ ಜನ್ಮ ತಥೇಕ್ಷ್ವಾಕುಕುಲಂ ಮಮ |
ಏವಂ ನಾಮಾನ ಏತೇ ಮೇ ಪುರಾಭೂವನ್ಪಿತಾಮಹಾಃ || ೩೮ ||

ಜಾತೋಽಹಮಭವಂ ಬಾಲೋ ದಶವರ್ಷಸ್ಯ ಮೇ ಪಿತಾ |
ಪರಿವ್ರಾಡ್ವಿಪಿನಂ ಯಾತ ಇಹ ರಾಜ್ಯೇಽಭಿಷಿಚ್ಯ ಮಾಂ | || ೩೯ ||

ತತೋ ದಿಗ್ವಿಜಯಂ ಕೃತ್ವಾ ಕೃತ್ವಾ ರಾಜ್ಯಮಕಂಟಕಂ |
ಅಮಿಾಭಿರ್ಮಂತ್ರಿಭಿಃ ಪೌರೈಃ ಪಾಲಯಾಮಿ ವಸುಂಧರಾಂ || ೪೦ ||

ಯಜ್ಞಕ್ರಿಯಾಕ್ರಮವತೋ ಧರ್ಮೇ ಪಾಲಯತಃ ಪ್ರಜಾಃ |
ವಯಸಃ ಸಮತೀತಾನಿ ಸಮತೀತಾನಿ ಮಮ ವರ್ಷಾಣಿ ಸಪ್ತತಿಃ || ೪೧ ||

---

೩೭. ನಿರ್ಮಲವಾದ ಆಕಾಶದಂತೆ ನಿರ್ಮಲವಾದ ನಿನ್ನ ಬುದ್ಧಿಯಲ್ಲಿ ಈ ವಿಸ್ತಾರವಾದ ವ್ಯವಹಾರ ರೂಪವಾದ ಪ್ರಪಂಚ ಭ್ರಮವೆಲ್ಲವೂ ಪ್ರತಿಬಿಂಬಿಸಿತು.

೩೮. ಅದು ಹೇಗಿದೆಯೆಂದರೆ, ನಾನು ಇಕ್ಷ್ವಾಕು ಕುಲದಲ್ಲಿ ಹುಟ್ಟಿದವನು. ಇಂತಿಂಥವರು ನನ್ನ ಪಿತೃಪಿತಾಮಹರಾಗಿದ್ದರು.

೩೯. ನಾನು ಹುಟ್ಟಿದೆನು. ಬಾಲಕನಾಗಿದ್ದೆನು. ನಾನು ಹತ್ತು ವರ್ಷದವನಾಗಿದ್ದಾಗ ನನಗೆ ನನ್ನ ತಂದೆಯು ರಾಜ್ಯಾಭಿಷೇಕಮಾಡಿ ತಾನು ಸನ್ಯಾಸಿಯಾಗಿ ಅರಣ್ಯಕ್ಕೆ ಹೋದನು.

೪೦. ನಾನು ದಿಗ್ವಿಜಯ ಮಾಡಿ, ರಾಜ್ಯದಲ್ಲಿ ಕಂಟಕಗನ್ನೆಲ್ಲ ಕಿತ್ತುಹಾಕಿ ಈ ಮಂತ್ರಿ ಪೌರರಿಂದ ಕೂಡಿ ಭೂಮಿಯನ್ನು ಪಾಲಿಸುತ್ತಿರುವೆನು.

೪೧. ಯಜ್ಞ ಕ್ರಿಯೆಗಳನ್ನು ಮಾಡುತ್ತ ಪ್ರಜೆಗಳನ್ನು ಧರ್ಮದಿಂದ ಪಾಲಿಸುತ್ತಿರುವ ನನಗೆ ಎಪ್ಪತ್ತು ವರ್ಷ ತುಂಬಿತು.

ಇದಂ ಪರಬಲಂ ಪ್ರಾಪ್ತಂ ಮಮ ದಾರುಣವಿಗ್ರಹಃ ।
ಯುದ್ಧಂ ಕೃತ್ವೇದಮಾಯಾತೋ ಗೃಹಮಸ್ಮಿನ್ಯಥಾಸ್ಥಿತಃ ॥ ೪೨ ॥

ಇಮೇ ದೇವ್ಯೌ ಗೃಹೇ ಪ್ರಾಪ್ತೇ ಮನ್ಯೈತೇ ಪೂಜಯಾಮ್ಯಹಂ ।
ಪೂಜಿತಾ ಹಿ ಪ್ರಯಚ್ಛಂತಿ ದೇವತಾಃ ಸ್ವಸಮೀಹಿತಂ ॥ ೪೩ ॥

ಮಮೇಯಮೇತಯೋರೇಕಾ ಜ್ಞಾನಂ ಜಾತಿಸ್ಮೃತಿಪ್ರದಂ ।
ಇಹ ದತ್ತವತೀ ದೇವೀ ಭಾಬ್ಜಸ್ಯೇವ ವಿಕಾಸನಂ ॥ ೪೪ ॥

ಇದಾನೀಂ ಕೃತಕೃತ್ಯೋಽಸ್ಮಿ ಜಾತೋಽಸ್ಮಿ ಗತಸಂಶಯಃ ।
ಶಾಮ್ಯಾಮಿ ಪರಿನಿರ್ವಾಮಿ ಸುಖಮಾಸೇ ಚ ಕೇವಲಂ ॥ ೪೫ ॥

ಇತೀಯಮಾತತಾ ಭ್ರಾಂತಿರ್ಭವತೋ ಭೂರಿಸಂಭ್ರಮಾ ।
ನಾನಾಚಾರವಿಹಾರಾಢ್ಯಾ ಸಲೋಕಾಂತರಸಂಚರಾ ॥ ೪೬ ॥

---

೪೨. ಈಗ ಪರಬಲವು ಬಂದಿರುವುದು. ಘೋರವಾದ ಯುದ್ಧವನ್ನು ಮುಗಿಸಿಕೊಂಡು ಮನೆಗೆ ಬಂದಿರುವೆನು.

೪೩. ಈ ದೇವಿಯರು ನಮ್ಮ ಮನೆಗೆ ಬಂದಿರುವರು. ಇವರನ್ನು ಪೂಜಿಸುವೆನು. ಪೂಜೆಯನ್ನು ಮಾಡಿದುದೇ ಆದರೆ ದೇವತೆಗಳು ನಮ್ಮ ನಮ್ಮ ಇಷ್ಟಾರ್ಥವನ್ನು ಕೊಡುವರು.

೪೪. ಇವರಲ್ಲಿ ಒಬ್ಬಳು ನನಗೆ ಸೂರ್ಯ ಪ್ರಕಾಶವು ಕಮಲವನ್ನು ಅರಳಿಸುವಂತೆ, ನನಗೆ ಪೂರ್ವಜನ್ಮದ ಸ್ಮೃತಿಯುಂಟಾಗುವಂತೆ ಅನುಗ್ರಹಿಸಿದಳು.

೪೫. ಈಗ ನಾನು ಕೃತಕೃತ್ಯನಾದೆನು. ಗತಸಂಶಯನಾದೆನು. ಶಾಂತನಾದೆನು. ದುಃಖಗಳೆಲ್ಲವೂ ಹೋದುವು. ಕೇವಲ ಸುಖಿಯಾಗಿರುವೆನು.

೪೬. ಹೀಗೆ ನಿನಗೆ ಭ್ರಾಂತಿಯು ಹಿಡಿದುಕೊಂಡಿರುವುದು. ಇದು ನಾನಾ ಆಚಾರ ವಿಹಾರ ಪೂರ್ಣವೂ ಲೋಕಾಂತರ ಸಂಚಾರದಿಂದ ಬಹು ಸಂಭ್ರಮ ಯುಕ್ತವೂ ಆಗಿರುವುದು.

ಯಸ್ಮಿನ್ನೇವ ಮುಹೂರ್ತೇ ತ್ವಂ ಮೃತಿಮಭ್ಯಾಗತಃ ಪುರಾ |
ತದೈವ ಪ್ರತಿಭೈಷಾ ತೇ ಸ್ವಯಮೇವೋದಿತಾ ಹೃದಿ || ೪೭ ||

ಏಕಾಮಾವರ್ತಚಲನಾಂ ತ್ಯಕ್ತ್ವಾ ದತ್ತೇ ಯಥಾತ್ತಪರಾಂ |
ಕ್ಷಿಪ್ರಮೇವ ನದೀವಾಹೋ ವಿತ್ಪ್ರವಾಹಸ್ತಥೈವ ಚ || ೪೮ ||

ಆವರ್ತಾಂತರಸಂಮಿಶ್ರೋ ಯಥಾವರ್ತಃ ಪ್ರವರ್ತತೇ |
ಕದಾಚಿದೇವಂ ಸರ್ಗಶ್ರೀರ್ಮಿಶ್ರಾಽಮಿಶ್ರಾ ಚ ವರ್ಧತೇ || ೪೯ ||

ತಸ್ಮಿನ್ಮೃತಿಮುಹೂರ್ತೇ ತೇ ಪ್ರತಿಭಾನಮುಪಾಗತಂ |
ಏತಜ್ಜಾಲಮಸದ್ರೂಪಂ ಚಿದ್ಭಾನೋಃ ಸಮುಪಸ್ಥಿತಂ || ೫೦ ||

ಯಥಾ ಸ್ವಪ್ನಮುಹೂರ್ತೇಽಂತಃ ಸಂವತ್ಸರಶತಭ್ರಮಃ |
ಯಥಾ ಸಂಕಲ್ಪನಿರ್ಮಾಣೇ ಜೀವನಂ ಮರಣಂ ಪುನಃ || ೫೧ ||

---

೪೭. ಯಾವ ಮುಹೂರ್ತದಲ್ಲಿ ನೀನು ಮರಣವನ್ನು ಹೊಂದಿದೆಯೋ ಅದೇ ಮುಹೂರ್ತದಲ್ಲಿಯೇ ಈ ಭ್ರಾಂತಿಯು ನಿನಗೆ ತಾನಾಗಿ ನಿನ್ನ ಹೃದಯ ದಲ್ಲಿಯೇ ಹುಟ್ಟಿತು.

೪೮. ನದೀ ಪ್ರವಾಹವು ಒಂದು, ಸುಳಿಯನ್ನು ಬಿಡುತ್ತಿದ್ದ ಹಾಗೆಯೇ ಇನ್ನೊಂದು ಸುಳಿಯನ್ನು ಹಿಡಿಯುವಂತೆ, ಸಂವಿತ್ಪ್ರವಾಹವೂ ಒಂದು ಭ್ರಾಂತಿ ಯನ್ನು ಬಿಡುತ್ತಿದ್ದಂತೆಯೇ ಮತ್ತೊಂದು ಭ್ರಾಂತಿಗೆ ಸಿಕ್ಕುವುದು.

೪೯. ಸುಳಿಯೊಳಗೆ ಸುಳಿಯಿರುವಂತೆ, ಕೆಲವು ವೇಳೆಗಳಲ್ಲಿ ಈ ಸೃಷ್ಟಿಯೂ ಕೂಡ ಮಿಶ್ರವಾಗಿ, ಅಮಿಶ್ರವಾಗಿ ವರ್ಧಿಸುವುದು.

೫೦. ಆ ಮರಣ ಮುಹೂರ್ತಲ್ಲಿ ನಿನಗೆ ಹೊಳೆದ ಈ ಜಗಜ್ಜಾಲವೆಲ್ಲವೂ ಅಸದ್ರೂಪವು: ಚಿತ್ಪ್ರಕಾಶದಿಂದ ನಿನಗೆ ಆ ರೀತಿಯಾಗಿ ಹೊಳೆಯಿತು.

೫೧. ಸ್ವಪ್ನದಲ್ಲಿ ಒಂದುನೂರು ವತ್ಸರಗಳು ಒಂದು ಕ್ಷಣದಲ್ಲಿ ಕಳೆದು ಹೋದಂತೆ ತೋರುವುದು. ಸಂಕಲ್ಪದಿಂದ ಜೀವನ, ಮರಣಗಳು ನಿರ್ಮಾಣ ವಾಗುವುವು.

ಯಥಾ ಗಂಧರ್ವನಗರೇ ಕುಡ್ಯಮುಂಡನವೇದನಂ |
ಯಥಾ ನೌಯಾನಸಂರಂಭೇ ವೃಕ್ಷಪರ್ವತವೇಪನಂ || ೫೨ ||

ಯಥಾ ಸ್ವಧಾತುಸಂಕ್ಷೋಭೇ ಪೂರ್ವಪರ್ವತನರ್ತನಂ |
ಯಥಾಽಸಮಂಜಸಂ ಸ್ವಪ್ನೇ ಸ್ವಶಿರಃ ಪ್ರವಿಕರ್ತನಂ || ೫೩ ||

ಮಿಥ್ಯೈವೈವಮಿಯಂ ಪ್ರೌಢಾ ಭ್ರಾಂತಿರಾತತರೂಪಿಣೀ |
ವಸ್ತುತಸ್ತು ನ ಜಾತೋಽಸಿ ನ ಮೃತೋಽಸಿ ಕದಾಚನ || ೫೪ ||

ಶುದ್ಧವಿಜ್ಞಾನರೂಪಸ್ತ್ವಂ ಶಾಂತ ಆತ್ಮನಿ ತಿಷ್ಠಸಿ |
ಪಶ್ಯಸೀವೈತದಖಿಲಂ ನ ಚ ಪಶ್ಯಸಿ ಕಿಂಚನ || ೫೫ ||

ಸರ್ವಾತ್ಮಕತಯಾ ನಿತ್ಯಂ ಪ್ರಕಚಸ್ಯಾತ್ಮನಾತ್ಮನಿ |
ಮಹಾಮಣಿರಿವೋದಾರ ಆಲೋಕ ಇವ ಭಾಸ್ವರಃ || ೫೬ ||

---

೫೨. ಆಕಾಶದಲ್ಲಿ ಕಾಣುವ ಗಂಧರ್ವನಗರದಲ್ಲಿ ಗೋಡೆಯಿದ್ದು ಅದರ ಮೇಲೆ ಬರೆದಿರುವ ಚಿತ್ರದಂತೆ ಇದು. ದೋಣಿಯಮೇಲೆ ಕುಳಿತು ಹೋಗುತ್ತಿದ್ದರೆ ಮರಗಳೂ ಪರ್ವತಗಳೂ ಚಲಿಸುತ್ತಿರುವಂತೆ ಕಾಣುವುದು.

೫೩. ನಮ್ಮಲ್ಲಿ ವಾತಪಿತ್ತಾದಿ ಧಾತುಗಳು ಹೆಚ್ಚುಕಡಿಮೆಯಾಗುವುದರಿಂದ ಕಾಣಿಸುವ ಪರ್ವತನರ್ತನದಂತೆ ಅಪೂರ್ವವು. ಸ್ವಪ್ನದಲ್ಲಿ ಕಾಣುವ ನಿಜಶಿರಶ್ಛೇದದಂತೆ ಅಸಂಜಮಸವು.

೫೪. ಬಲವಾಗಿ ಹಬ್ಬಿರುವ ಈ ಭ್ರಾಂತಿಯು ಮಿಥ್ಯೆಯು. ವಾಸ್ತವವಾಗಿ ನೀನು ಯಾವಾಗಲೂ ಹುಟ್ಟಲೂ ಇಲ್ಲ; ಸಾಯಲೂ ಇಲ್ಲ.

೫೫. ನೀನು ಶುದ್ಧ ವಿಜ್ಞಾನ ಸ್ವರೂಪನು : ಶಾಂತನು : ನಿರಾಧಾರನಾಗಿ ಆತ್ಮನಲ್ಲಿಯೇ ಇರುವೆ. ಇದೆಲ್ಲವನ್ನೂ ನೀನು ನೋಡುತ್ತಿರುವೆನೆಂದುಕೊಂಡಿರುವೆಯಾದರೂ, ನೀನು ಏನನ್ನೂ ನೋಡುತ್ತಿಲ್ಲ.

೫೬-೭. ನೀನು ಸರ್ವಾತ್ಮಕನಾದುದರಿಂದ ಯಾವಾಗಲೂ ನೀನೇ ನಿನ್ನಲ್ಲಿಯೇ ಹೊಳೆಯುತ್ತಿರುವೆ. ಕಾಂತಿಯುಕ್ತವಾದ ಮಹಾಮಣಿಯಂತೆಯೂ ಹೊಳೆ ಹೊಳೆಯುವ ಪ್ರಕಾಶದಂತೆಯೂ (ಇರುವುದರಿಂದ) ವಾಸ್ತವವಾಗಿ

ವಸ್ತುತಸ್ತು ನ ಭೂಪೀಠಮಿದಂ ನಚ ಭವಾನಯಂ |
ನ ಚೇಮೇ ಗಿರಯೋ ಗ್ರಾಮಾ ನ ಚೈತೇ ನಚ ವೈ ವಯಂ || ೫೭ ||

ಗಿರಿಗ್ರಾಮಕವಿಪ್ರಸ್ಯ ಮಂಡಪಾಕಾಶಕೇ ಕಿಲ |
ತಲ್ಲೀಲಾಭರ್ತೃದಾರಾಢ್ಯಂ ಜಗದಾಭಾತಿ ಭಾಸ್ವರಂ || ೫೮ ||

ತತ್ರ ಲೀಲಾರಾಜಧಾನೀ ಮಂಡಪಾಮಂಡಿತಾಕೃತಿಃ |
ಭಾತಿ ತಸ್ಯೋದರೇ ವ್ಯೋಮ್ನಿ ತದೇವಂ ವಿದಿತಂ ಜಗತ್ || ೫೯ ||

ತಸ್ಮಿನ್ ಜಗತಿ ಗೇಹೇಽಂತರ್ಯಸ್ಮಿನ್ ವಯಮಿಹ ಸ್ಥಿತಾಃ |
ಏವಂ ತೇಷಾಂ ಮಂಡಪಾನಾಂ ವ್ಯೋಮಾವ್ಯೋಮ್ನೈವನಿರ್ಮಲಂ || ೬೦ ||

ತಥೈವ ಮಂಡಪೇಷ್ವಸ್ತಿ ನ ಮಹೀ ನ ಚ ಪತ್ತನಂ |
ನ ವನಾನಿ ನ ಶೈಲೌಘಾ ನ ಮೇಘಸರಿದರ್ಣವಾಃ || ೬೧ ||

ಭೂಪೀಠವೂ ಇಲ್ಲ; ಜಗತ್ತೂ ಇಲ್ಲ: ನೀನೂ ಇಲ್ಲ. ಈ ಬೆಟ್ಟಗಳೂ ಇಲ್ಲ: ಗ್ರಾಮಗಳೂ ಇಲ್ಲ: ನಾವೂ ಇಲ್ಲ.

೫೮. ಗಿರಿಗ್ರಾಮದ ವಿಪ್ರನ ಗೃಹಾಕಾಶದಲ್ಲಿಯೇ ಲೀಲಾಪತಿಯಾದ ಪದ್ಮರಾಜನೂ ಅವನ ಹೆಂಡಿತಿಯೂ ಇದ್ದ ಜಗತ್ತು ಮೆರೆಯಿತು.

೫೯. ಆ ಗೃಹಾಕಾಶದಲ್ಲಿಯೇ ನಾನಾ ಭವನ ಸುಂದರವಾದ ಲೀಲಾ ಪದ್ಮರ ರಾಜಧಾನಿಯೂ ಆ ಜಗತ್ತೂ ಇರುವುದು ಎಂದು ವಿದಿತವು.

೬೦. ನಾವು ಇಲ್ಲಿ ಇರುವ ಈ ಜಗತ್ತೂ ಆ ಮನೆಯ ಆಕಾಶದೊಳಗೇ ಇರುವುದು. ಹೀಗೆ ಮಂಡಪವನ್ನು ಒಳಗೊಂಡಿರುವ ಮಂಡಪಗಳು ಇರುವ ವ್ಯೋಮವು ನಿಜವಾಗಿಯೂ ನಿರ್ಮಲವಾದ ಅವ್ಯೋಮ (ಬ್ರಹ್ಮ)ವು.

೬೧. ಹೀಗೆಯೇ ಆ ಮಂಟಪದಲ್ಲಿ ಭೂಮಿಯಾಗಲೀ ಪತ್ತನವಾಗಲೀ ವನಗಳಾಗಲೀ ಪರ್ವತಗಳಾಗಲೀ ಮೇಘ, ನದಿ, ಸಮುದ್ರಗಳಾಗಲೀ ಇಲ್ಲ.

ಕೇವಲಂ ತತ್ರ ನಿಃಶೂನ್ಯೇ ವಿಹರಂತಿ ಗೃಹೇ ಜನಾಃ |
ನ ಪಶ್ಯಂತಿ ಜನಾ ನಾಪಿ ಪಾರ್ಥಿವಾ ನಚ ಭೂಧರಾಃ || ೬೨ ||

ವಿದೂರಥ ಉವಾಚ —

ಏವಂ ಚೇತ್ತತ್ಕಥಂ ದೇವಿ ಮಮೇಹಾನುಚರಾ ಇಮೇ |
ಸಂಪನ್ನಾ ಆತ್ಮನಾ ಸಂತಿ ತೇ ಕಿಮಾತ್ಮನಿ ನೋಽಥವಾ || ೬೩ ||

ಜಗತ್ಸ್ವಪ್ನಾರ್ಥವದ್ಭಾತಿ ತಸ್ಯ ಸ್ವಪ್ನನರಾದಯಃ |
ಕಥಮಾತ್ಮನಿ ಸತ್ಯಾಃ ಸ್ಯುರ್ನ ಸತ್ಯಾ ವೇತಿ ಮೇ ವದ || ೬೪ ||

ಶ್ರೀಸರಸ್ವತ್ಯುವಾಚ:—

ರಾಜನ್ವಿದಿತವೇದ್ಯೇಷು ಶುದ್ಧಬೋಧೈಕರೂಪಿಷು |
ನ ಕಿಂಚಿದೇತತ್ಸದ್ರೂಪಂ ಚಿದ್ವ್ಯೋಮಾತ್ಮಸು ಜಾಗತಂ || ೬೫ ||

---

೬೨. ಹೀಗೆ ಶೂನ್ಯವೇ ಶೂನ್ಯವಾಗಿರುವ ಆ ಗೃಹದಲ್ಲಿ ಜನರು ವಿಹರಿಸುತ್ತಿರುವರು. ಆ ಜನರು (ಅಲ್ಲಿರುವ ಆಕಾಶದಲ್ಲಿ ಇನ್ನೊಂದು ಜಗತ್ತು, ಅದರೊಳಗೊಂದು ಜಗತ್ತು) ಇದು ಯಾವುದನ್ನೂ ಕಾಣರು. (ಹಾಗೆ ಇದ್ದಂತೆ ಕಂಡರೂ) ರಾಜರೂ ಇಲ್ಲ ಪರ್ವತಗಳೂ ಇಲ್ಲ.

೬೩. ವಿದೂರಥನು ಹೇಳಿದನು :—ಹಾಗಾದರೆ, ಇಲ್ಲಿರುವ ಈ ಪರಿಜನರು ಜೀವಂತರಾಗಿರುವಲ್ಲ ಇವರೆಲ್ಲರೂ ವಾಸ್ತವವೇ ? ಅಲ್ಲವೇ ?

೬೪. ಜಗತ್ತೆಲ್ಲವೂ ಕನಸು ಕಂಡಂತೆ ಎಂದು ಅರಿತವನಿಗೆ ಕನಸಿನಲ್ಲಿ ಕಂಡ ಜನರು ಮೊದಲಾದುವೆಲ್ಲವೂ ತನ್ನಲ್ಲಿಯೇ ಇದ್ದು ಸತ್ಯವಾಗುವುದೆಂತು ? ಅಥವಾ ಅಸತ್ಯವಾಗುವುದೆಂತು ? ನನಗೆ (ತಿಳಿಯುವಂತೆ) ಹೇಳು.

೬೫ ಶ್ರೀ ಸರಸ್ವತಿಯು ಹೇಳಿದಳು :—ವೇದ್ಯವನ್ನು ತಿಳಿದವರೂ, ಶುದ್ಧ ಜ್ಞಾನಸ್ವರೂಪರೂ ಚಿದ್ವ್ಯೋಮಾತ್ಮಕರೂ ಆದವರಿಗೆ ಜಗತ್ತು ಎಂದು ಪ್ರತ್ಯೇಕವಾದ ವಸ್ತುವೊಂದಿಲ್ಲ : ಇರುವುದೆಲ್ಲ ಬ್ರಹ್ಮರೂಪವೇ !

(ಕಥಂಸತ್ಯಾ ಸ್ಯುಃ ತ್ವದುಕ್ತಕಲ್ಪೇ ಇತ್ಯರ್ಥಃ | ಅಜ್ಞದೃಶಾ ಜೀವ

ಶುದ್ಧಬೋಧಾತ್ಮನೋ ಭಾತಿ ಕೃತೋ ನಾಮ ಜಗದ್ಭ್ರಮಃ |
ರಜ್ಜ್ವಾಂ ಸರ್ಪಭ್ರಮೇ ಶಾಂತೇ ಪುನಃ ಸರ್ಪಭ್ರಮಃ ಕುತಃ || ೬೬ ||

ಅಸದ್ಭಾವೇ ಪರಿಜ್ಞಾತೇ ಕುತಃ ಸತ್ತಾ ಜಗದ್ಭ್ರಮೇ |
ಪರಿಜ್ಞಾತೇ ಮೃಗಜಲೇ ಪುನರ್ಜಲಮತಿಃ ಕುತಃ || ೬೭ ||

ಸ್ವಪ್ನಕಾಲೇ ಪರಿಜ್ಞಾತೇ ಸ್ವೇ ಸ್ವಪ್ನಮರಣಂ ಕುತಃ |
ಸ್ವಸ್ವಪ್ನೇ ಸ್ವಪ್ನಮೃತಿಭೀರಮೃತಸ್ಯೈವ ಜಾಯತೇ || ೬೮ ||

ಬುದ್ಧಸ್ಯ ಶುದ್ಧಸ್ಯ ಶರನ್ನಭಃ ಶ್ರೀಃ
ಸ್ವಚ್ಛಾವದಾತಾತಿತತಾಶಯಸ್ಯ |
ಅಹಂ ಜಗಚ್ಚೇತಿ ಕುಶಬ್ದಕಾರ್ಥೋ
ನ ವಸ್ತುತಃ ಸೋಽಂಗ ಹಿ ವಾಚಿಕಂ ತತ್ || ೬೯ ||

ಭಾವೇನ ತೇಷಾಂಯದಿ ಸತ್ಯತಾಂ ಪೃಚ್ಛಸಿ, ತರ್ಹಿ ಸಾ ತವಾಪಿನಾಸ್ತಿ | ತತ್ವ ದೃಶಾ ಅಧಿಷ್ಠಾನ ಚಿನ್ಮಾತ್ರ ಭಾವೇನ ಚೇತ್ ತೇಷಾಮಪಿ ಸಾ ಅಸ್ತ್ಯೇವ ಇತ್ಯಾಶಯೇನ ದೇವೀ ಉತ್ತರಮಾಹ---ತಾ. ಪ್ರ.)

೬೬. ಶುದ್ಧಜ್ಞಾನಸ್ವರೂಪನಿಗೆ ಜಗದ್ಭ್ರಮವೆಂಬುದು ಅದೆಂತು ಬರುವುದು ? ಹಗ್ಗವಲ್ಲ ಹಾವು ಎಂಬ ಭ್ರಾಂತಿಯು ಶಾಂತವಾಗಲು ಮತ್ತೆ ಸರ್ಪಭ್ರಮವೆಲ್ಲಿಂದ ಬರುವುದು ?

೬೭. ಅಸತ್ತು ಎಂದು ಗೊತ್ತಾದಮೇಲೆ ಜಗದ್ಭ್ರಮೆಯಲ್ಲಿ ಸತ್ತಾ ಉಂಟೆನ್ನಿಸುವುದೇನು ? ಇದು ಮೃಗತೃಷ್ಣೆಯೆಂದು ತಿಳಿದಮೇಲೂ ಅದರಲ್ಲಿ ಜಲಭ್ರಾಂತಿಯು ಬರುವುದೇನು ?

೬೮. ತಾನು ಸತ್ತೆನೆಂಬ ಭೀತಿಯು ತನ್ನ ಸ್ವಪ್ನದಲ್ಲಿಯೇ ಬದುಕಿರುವವನಿಗೇ ಬರುವುದು. ಆದರೆ ಇದು ಸ್ವಪ್ನವೆಂದು ತಿಳಿದಮೇಲೆ ಆ ಸ್ವಪ್ನದಲ್ಲಿ ಮರಣವಾದುದು ನಿಜವಾಗುವುದೆಂತು ?

೬೯. ಬುದ್ಧನಾಗಿ ಶುದ್ಧನಾಗಿ ಶರನ್ನಭದಂತೆ ಸ್ವಚ್ಛವೂ ಪ್ರಕಾಶವೂ ಉದಾರವೂ ಆದ ಮತಿಯುಳ್ಳವನಿಗೆ ಅಹಂ, ಜಗತ್ತು ಎಂಬ ಶಬ್ದಗಳು ಅರ್ಥಶೂನ್ಯವಾದವು : ವಾಸ್ತವವಾಗಿ ಅವಿಲ್ಲ : ವಂಧ್ಯಾಪುತ್ರಾದಿ ಶಬ್ದಾರ್ಥದಂತೆ ಕೇವಲ ವಾಚಿಕವೇ ಹೊರತು ವಾಸ್ತವವಲ್ಲ.

ಇತ್ಯುಕ್ತವತ್ಯಥ ಮುನೌ ದಿವಸೋ ಜಗಾಮ
ಸಾಯಂತನಾಯ ವಿಧಯೇಽಸ್ತಮಿನೋ ಜಗಾಮ |
ಸ್ನಾತುಂ ಸಭಾ ಕೃತನಮಸ್ಕರಣಾ ಜಗಾಮ
ಶ್ಯಾಮಾಕ್ಷಯೇ ರವಿಕರೈಶ್ಚ ಸಹಾಜಗಾಮ || ೭೦ ||

ಇತ್ಯಾರ್ಷೇ ಶ್ರೀವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
" ಭ್ರಾಂತಿವಿಚಾರವರ್ಣನಂ " ನಾಮ ಏಕಚತ್ವಾರಿಂಶಃ ಸರ್ಗಃ

---

೭೦. ಶ್ರೀ ವಸಿಷ್ಠ ಮುನೀಂದ್ರನು ಹೀಗೆ ಹೇಳುತ್ತಿರುವ ಹಾಗೆಯೇ ದಿವಸವು ಕಳೆಯಿತು : ಸಂಧ್ಯಾಕರ್ಮಗಳೆಲ್ಲವೂ ನಡೆಯಲೆಂದು ಸೂರ್ಯನು ಅಸ್ತನಾದನು. ವಸಿಷ್ಠಾದಿಗಳಿಗೆ ನಮಸ್ಕಾರಮಾಡಿ ಸಭೆಯು ಸ್ನಾನ (ಮೊದಲಾದ ಕರ್ಮಗಳನ್ನು) ಮಾಡಲು ಎದ್ದಿತು : ಮತ್ತೆ ರಾತ್ರಿಯು ಮುಗಿದು ಉದಯವಾಗುತ್ತಿದ್ದ ಹಾಗೆಯೇ ಸಭಾಂಗಣಕ್ಕೆ ಎಲ್ಲರೂ ಬಂದರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಭ್ರಾಂತಿವಿಚಾರವರ್ಣನಂ" ಎಂಬ
ನಲವತ್ತೊಂದನೆಯ ಸರ್ಗವು.

ದ್ವಿಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಯಸ್ತ್ವಬುದ್ಧಮತಿರ್ಮೂಢೋ ರೂಢೋ ನ ವಿತತೇ ಪದೇ |
ವಜ್ರಸಾರಮಿದಂ ತಸ್ಯ ಜಗದಸ್ತ್ಯಸದೇವ ಸತ್ || ೧ ||

ಯಥಾ ಬಾಲಸ್ಯ ವೇತಾಲೋ ಮೃತಿಪರ್ಯಂತದುಃಖದಃ |
ಅಸದೇವ ಸದಾಕಾರಂ ತಥಾ ಮೂಢಮತೇರ್ಜಗತ್ || ೨ ||

ತಾಪ ಏವ ಯಥಾ ವಾರಿ ಮೃಗಾಣಾಂ ಭ್ರಮಕಾರಣಂ |
ಅಸತ್ಯಮೇವ ಸತ್ಯಾಭಂ ತಥಾ ಮೂಢಮತೇರ್ಜಗತ್ || ೩ ||

ಯಥಾ ಸ್ವಪ್ನಮೃತಿರ್ಜಂತೋರಸತ್ಯಾ ಸತ್ಯರೂಪಿಣೀ |
ಅರ್ಥಕ್ರಿಯಾಕರೀ ಭಾತಿ ತಥಾ ಮೂಢಧಿಯಾಂ ಜಗತ್ || ೪ ||

ನಲವತ್ತೆರಡನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :—ಯಾವನು ಅಬುದ್ಧಮತಿಯಾಗಿ ಮೂಢನಾಗಿ ಆ ಪರಮ ಪದದಲ್ಲಿ ದೃಢನಾಗಿಲ್ಲವೋ ಅವನಿಗೆ, ಈ ಜಗತ್ತು ಅಸತ್ತೇ ಆದರೂ ಸತ್ ಎಂಬ ಭಾವನೆಯು ವಜ್ರಸಾರವಾಗಿರುವುದು.

೨. ಬಾಲಕನಿಗೆ ಮೃತಿಪರ್ಯಂತವಾದ ದುಃಖವನ್ನು ಕೊಡುವ, ವೇತಾಲವು ಸತ್ಯವಾಗಿರುವಂತೆ, ಮೂಢಮತಿಗೆ ಜಗತ್ತು ಅಸತ್ತಾದರೂ ಸದಾಕಾರವಾಗಿರುವುದು.

೩. ಬಿಸಿಲೇ ನೀರಿನಂತೆ ಕಾಣಿಸಿಕೊಂಡು ಮೃಗಗಳಿಗೆ ಭ್ರಮೆ ಕಾರಣವಾಗಿರುವಂತೆ, ಅಸತ್ಯವಾದ ಜಗತ್ತು ಸತ್ಯದಂತೆ ಮೂಢಮತಿಗಳಿಗೆ ತೋರುವುದು.

೪. ಸ್ವಪ್ನ ಮರಣವು ಮನುಷ್ಯರಿಗೆ ಅಸತ್ಯವಾದರೂ ಸತ್ಯವೇ ಆಗಿ ತೋರುವಂತೆ, ಮೂಢಮತಿಗೆ ಜಗತ್ತು ಅರ್ಥಕ್ರಿಯಾಕಾರಿಯಾಗಿರುವುದು (ವ್ಯವಹಾರ ಸಾಧನವಾಗಿರುವುದು.)

ಅವ್ಯುತ್ಪನ್ನಸ್ಯ ಕನಕೇ ಕಾನಕೇ ಕಟಕೇ ಯಥಾ |
ಕಟಕಜ್ಞಪ್ತಿರೇವಾಸ್ತಿ ನ ಮನಾಗಪಿ ಹೇಮಧೀಃ || ೫ ||

ತಥಾಽಜ್ಞಸ್ಯ ಪುರಾಗಾರನಗನಾಗೇಂದ್ರಭಾಸುರಾ |
ಇಯಂ ದೃಶ್ಯದೃಗೇವಾಸ್ತಿ ನತ್ವನ್ಯಾ ಪರಮಾರ್ಥದೃಕ್ || ೬ ||

ಯಥಾ ನಭಸಿ ಮುಕ್ತಾಲೀ ಪಿಚ್ಛಕೇಶೋಂಡ್ರಕಾದಯಃ |
ಅಸತ್ಯಾಃ ಸತ್ಯತಾಂ ಯಾತಾ ಭಾತ್ಯೇವಂ ದುರ್ದೃಶಾಂ ಜಗತ್ || ೭ ||

ದೀರ್ಘಸ್ವಪ್ನಮಿದಂ ವಿಶ್ವಂ ವಿದ್ಧ್ಯಹಂತಾದಿಸಂಯುತಂ |
ಅತ್ರಾನ್ಯೇ ಸ್ವಪ್ನಪುರುಷಾ ಯಥಾ ಸತ್ಯಾಸ್ತಥಾ ಶೃಣು || ೮ ||

ಅಸ್ತಿ ಸರ್ವಗತಂ ಶಾಂತಂ ಪರಮಾರ್ಥಘನಂ ಶುಚಿ |
ಅಚೇತ್ಯಚಿನ್ಮಾತ್ರವಪುಃ ಪರಮಾಕಾಶಮಾತತಂ || ೯ ||

---

೫. ತಿಳಿಯದವನಿಗೆ ಕನಕದಲ್ಲಿಯೂ ಕನಕ ಕಟಕದಲ್ಲಿಯೂ ಕಟಕ ಜ್ಞಾನವಿರುವುದೇ ಹೊರತು ಕನಕ ಜ್ಞಾನವು ಕೊಂಚವೂ ಇರುವುದಿಲ್ಲ(ಹೇಗೋ),

೬. ಹಾಗೆಯೇ ಅಜ್ಞನಿಗೆ ಪುರ, ಮಂದಿರ, ನಗ, ನಾಗೇಂದ್ರ, ಎಂದು ದೃಶ್ಯದೃಕ್ಕು ಇರುವುದೇ ಹೊರತು, ಪರಮಾರ್ಥದೃಕ್ಕು ಇರುವುದೇ ಇಲ್ಲ.

೭. ಮುಕ್ತಾಮಾಲೆಗಳು, ನವಿಲುಗರಿಗಳು, ಕೋಶೋಂಡ್ರಕಗಳು, ಆಕಾಶ ದಲ್ಲಿ ನಿಜವಾಗಿ ಇಲ್ಲವಾದರೂ ಸತ್ಯವಾಗಿ ಇರುವಂತೆ ಕಾಣುವಹಾಗೆ ಸರಿಯಾದ ತಿಳಿವಳಿಕೆ ಇಲ್ಲದವರಿಗೆ ಜಗತ್ತು ಸತ್ಯವಾಗಿರುವಂತೆ ತೋರುವುದು.

೮. ಈ ವಿಶ್ವವನ್ನು ಅಹಂತಾ ಆದಿ ಭಾವಗಳಿಂದ ಕೂಡಿರುವ ದೀರ್ಘ ಸ್ವಪ್ನವೆಂದು ತಿಳಿ. ('ನಾನು' ಎನ್ನುವವನಂತೆಯೇ) ಇತರ ಸ್ವಪ್ನಪುರುಷರೂ ಸತ್ಯವು ಹೇಗೆ ಎನ್ನುವುದನ್ನು ಹೇಳುವೆನು ಕೇಳು.

೯. ಸರ್ವಗತವಾಗಿ ಶಾಂತವಾಗಿ ಪರಮಾರ್ಥವೇ ಘನವಾಗಿ ಶುಚಿಯಾಗಿ, ಚೇತ್ಯವಲ್ಲದ ಚಿನ್ಮಾತ್ರ ಶರೀರಿಯಾಗಿ, ತಾನೇ ತಾನಾಗಿ ಹರಡಿರುವ ಪರಮಾ ಕಾಶವಿರುವುದು.

ತತ್ಸರ್ವಗಂ ಸರ್ವಶಕ್ತಿ ಸರ್ವಂ ಸರ್ವಾತ್ಮಕಂ ಸ್ವಯಂ |
ಯತ್ರ ಯತ್ರ ಯಥೋದೇತಿ ತಥಾಸ್ತೇ ತತ್ರ ತತ್ರ ವೈ || ೧೦ ||

ತೇನ ಸ್ವಪ್ನಪುರೇ ದ್ರಷ್ಟಾ ಯಾನ್ವೇತ್ತಿ ಪುರವಾಸಿನಃ |
ನರಾನಿತಿ ನರಾ ಏವ ಕ್ಷಣಾತ್ತಸ್ಯ ಭವಂತಿ ತೇ || ೧೧ ||

ಯದ್ದ್ರಷ್ಟುಶ್ಚಿತ್ಸ್ವರೂಪಂ ತತ್ಸ್ವಪ್ನಾಕಾಶಾಂತರಸ್ಥಿತಂ |
ಸ್ವಪ್ನಾಕಾಶಚಿತ್ತಾಭಂ ಹಿ ನರಾನಾಮೇತಿ ಭಾವಿತಂ || ೧೨ ||

ವೇದಿತ್ರುತ್ವೈಕ್ಯವಶತೋ ನರತೇವಾವಬುದ್ಧ್ಯತೇ |
ಆತ್ಮನ್ಯತಶ್ಚಿದ್ಬಲೇನ ದ್ವಯೋರಪ್ಯೇತಿ ಸತ್ಯತಾ || ೧೩ ||

ಶ್ರೀರಾಮ ಉವಾಚ—

ಸ್ವಪ್ನೇಪಿ ಸ್ವಪ್ನಪುರುಷಾ ನ ಸತ್ಯಾಃ ಸ್ಯುರ್ಮುನೇ ಯದಿ |
ವದ ತತ್ಕೋ ಭವೇದ್ದೋಷೋ ಮಾಯಾಮಾತ್ರಶರೀರಿಣಿ || ೧೪ ||

---

೧೦. ಅದು ಸರ್ವಗತವು, ಸರ್ವಶಕ್ತಿ (ವಂತವು), ಅದೇ ಸರ್ವವು. ಸರ್ವಾತ್ಮಕವೂ ಅದೇ. ಎಲ್ಲಿ ಎಲ್ಲಿ ಅದು ಹೇಗೆ ಹೇಗೆ ಕಾಣಿಸಿಕೊಳ್ಳುವುದೋ ಅಲ್ಲಿ ಅಲ್ಲಿ ಅದು ಹಾಗೆ ಹಾಗೆ ಕಾಣುವುದು.

೧೧. ಆದರಿಂದ ಸ್ವಪ್ನನಗರದಲ್ಲಿ ದ್ರಷ್ಟೃವು ಯಾರನ್ನು ಪುರವಾಸಿ ಮನುಷ್ಯರೆಂದು ತಿಳಿಯುವನೋ ಅವರು ಮನುಷ್ಯರಾಗಿಯೇ ಕಾಣಿಸುವರು.

೧೨. ದ್ರಷ್ಟೃವಿನ ಸ್ವಪ್ನಾಕಾಶದಲ್ಲಿರುವ ಚಿತ್ಸ್ವರೂಪವೇ, ಸ್ವಪ್ನಾಕಾಶ ಚಿತ್ತವಾಗಿ ಮನುಷ್ಯರಂತೆ ಕಾಣಿಸಿಕೊಳ್ಳುವುದು.

೧೩. ಹೀಗೆ ಕಂಡುದೂ ಕಾಣಿಸಿಕೊಂಡುದೂ ಒಂದೇ ಆದುದರಿಂದ ಮನುಷ್ಯನಾಗಿಯೇ ತಿಳಿಯುವುದು. ಹಾಗೆ ತಿಳಿಯುವುದೂ ಆತ್ಮನಲ್ಲಿಯೇ. ಆದರಿಂದ ಚಿತ್ತೇ ದ್ರಷ್ಟೃ ದೃಶ್ಯಗಳೆರಡೂ ಆದುದರಿಂದ ಎರಡೂ ಸತ್ಯವಾಗಿ ಕಾಣುವುದು.

೧೪. ಶ್ರೀರಾಮನು ಹೇಳಿದನು :—ಸ್ವಪ್ನದಲ್ಲಿ ಸ್ವಪ್ನಪುರುಷರು ಸತ್ಯರಲ್ಲದೆ ಹೋದರೆ ಅದರಲ್ಲೇನು ದೋಷವುಂಟು ? ಸ್ವಪ್ನವು ಮಾಯಾ ಮಾತ್ರ ಶರೀರ ತಾನೇ ?

ಶ್ರೀ ವಸಿಷ್ಠ ಉವಾಚ—

ಸ್ವಪ್ನೇ ನ ಪುರವಾಸ್ತವ್ಯಾ ವಸ್ತುತಃ ಸತ್ಯರೂಪಿಣಃ |
ಪ್ರಮಾಣಮತ್ರ ಶೃಣು ಮೇ ಪ್ರತ್ಯಕ್ಷಂ ನಾಮ ನೇತರತ್ || ೧೫ ||

ಸರ್ಗಾದಾವಾತ್ಮಭೂರ್ಭಾತಿ ಸ್ವಪ್ನಾಭಾನುಭವಾತ್ಮಕಃ |
ತತ್ಸಂಕಲ್ಪಕಲಂ ವಿಶ್ವಮೇವಂ ಸ್ವಪ್ನಾಭಮೇವ ತತ್ || ೧೬ ||

ಏವಂ ವಿಶ್ವಮಿದಂ ಸ್ವಪ್ನಸ್ತತ್ರ ಸತ್ಯಂ ಭವಾನ್ಮಮ |
ಯಥೈವ ತ್ವಂ ತಥೈವಾನ್ಯೇ ಸ್ವಪ್ನೇ ಸ್ವಪ್ನನರಾ ನೃಣಾಂ || ೧೭ ||

ಸ್ವಪ್ನೇ ನಗರವಾಸ್ತವ್ಯಾಃ ಸತ್ಯಾ ನ ಸ್ಯುರಿಮೇ ಯದಿ |
ತದಿಹಾಪಿ ತದಾಕಾರೇ ನ ಸತ್ಯಂ ಮೇ ಮನಾಗಪಿ || ೧೮ ||

ಯಥಾಹಂ ತವ ಸತ್ಯಾತ್ಮಾ ಸತ್ಯಂ ಸರ್ವಂ ಭವೇನ್ಮಮ |
ಸ್ವಪ್ನೋಪಲಂಭೇ ಸಂಸಾರೇ ಮಿಥಃ ಸಿದ್ಧ್ಯೈಕ್ಯ ಪ್ರಮೇದೃಶೀ || ೧೯ ||

---

೧೫. ಶ್ರೀ ವಸಿಷ್ಠನು ಹೇಳಿದನು :—ಸ್ವಪ್ನದಲ್ಲಿ ಕಾಣುವ ಪುರವಾಸಿಗಳು ಸತ್ಯರೂಪಿಗಳಲ್ಲ ಎನ್ನುವುದಕ್ಕೆ ಪ್ರಮಾಣವನ್ನು ಹೇಳುವೆನು ಕೇಳು. ಆ ಪ್ರಮಾಣವು ಪ್ರತ್ಯಕ್ಷವಲ್ಲದೆ ಇತರವಲ್ಲ.

೧೬. ಸರ್ಗದ ಮೊದಲಲ್ಲಿ ಸ್ವಯಂಭುವು ಸ್ವಪ್ನದಂತಹ ಅನುಭವ ಸ್ವರೂಪನಾಗಿ ಕಾಣಿಸಿಕೊಂಡನು. ಅವನ ಸಂಕಲ್ಪದ ಲೇಶದಿಂದ ಈ ವಿಶ್ವವೆಲ್ಲವೂ ಹುಟ್ಟಿತು. ಅದರಿಂದ ಈ ವಿಶ್ವವೆಲ್ಲ. ಸ್ವಪ್ನಸದೃಶ ತಾನೇ ಆಗಬೇಕು ?

೧೭. ಹೀಗೆ ವಿಶ್ವವೆಲ್ಲ ಸ್ವಪ್ನವೇ ಹೌದಾದರೂ ನನಗೆ ನೀನು ಸತ್ಯವಾಗಿ ಕಾಣುವೆ. ಅದರಂತೆಯೇ ಇತರ ಸ್ವಪ್ನನರರು ಅಲ್ಲಿನ ಇತರರಿಗೆ ನಿಜವೇ ಆಗಿರುವರು.

೧೮. ಸ್ವಪ್ನನಗರದಲ್ಲಿದ್ದವರು ಸ್ವಪ್ನಕಾಲದಲ್ಲಿ ಸತ್ಯವಾಗದೇ ಹೋದರೆ, ಅದರಂತೆಯೇ ಇರುವ ಇಲ್ಲಿಯೂ ಅವರು ನನಗೆ ಕೊಂಚವೂ ಸತ್ಯವಾಗುವುದಿಲ್ಲ.

೧೯. ನಾನು ನಿನಗೂ ನೀನು ನನಗೂ ಸತ್ಯವಾಗಿ ಕಾಣುವಂತೆ, ಸ್ವಪ್ನದಂತೆಯೇ ಇರುವ ಈ ಸಂಸಾರದಲ್ಲಿಯೂ ಒಬ್ಬರನ್ನೊಬ್ಬರು ಸತ್ಯವೆಂದುಕೊಳ್ಳುವುದೂ ಹೀಗೆಯೇ !

ಸಂಸಾರೇ ವಿಪುಲೇ ಸ್ವಪ್ನೇ ಯಥಾ ಸತ್ಯಮಹಂ ತವ |
ಯಥಾ ತ್ವಮಪಿ ಮೇ ಸತ್ಯಂ ಸರ್ವಂ ಸ್ವಪ್ನೇಽಪೀತಿ ಕ್ರಮಃ || ೨೦ ||

ಶ್ರೀರಾಮ ಉವಾಚ—

ಸ್ವಪ್ನದ್ರಷ್ಟರಿ ನಿರ್ನಿದ್ರೇ ತದ್ದ್ರಷ್ಟುಃ ಸ್ವಪ್ನಪತ್ತನಂ |
ಸದ್ರೂಪತ್ವಾತ್ತಥೈವಾಸ್ತೇ ಮಮೇತಿ ಭಗವನ್ಮತಿಃ || ೨೧ ||

ಶ್ರೀ ವಸಿಷ್ಠ ಉವಾಚ—

ಏವಮೇತತ್ತಥೈವಾಸ್ತೇ ಸತ್ಯತ್ವಾತ್ಸ್ವಪ್ನಪತ್ತನಂ |
ಸ್ವಪ್ನದ್ರಷ್ಟರಿ ನಿರ್ನಿದ್ರೇಽಪ್ಯಾಕಾಶವಿಶದಾಕೃತಿ || ೨೨ ||

ಏತದಾಸ್ತಾಮಿದಂ ತಾವದ್ಯಜ್ಜಾಗ್ರದಿವ ಮನ್ಯಸೇ |
ವಿದ್ಧಿ ತತ್ಸ್ವಪ್ನಮೇವಾಂತರ್ದೇಶಕಾಲಾದ್ಯಪೂರಕಂ || ೨೩ ||

ಏವಂ ಸರ್ವಮಿದಂ ಭಾತಿ ನ ಸತ್ಯಂ ಸತ್ಯವತ್ಸ್ಥಿತಂ |
ರಂಜಯತ್ಯಪಿ ಮಿಥ್ಯೈವ ಸ್ವಪ್ನಸ್ತ್ರೀಸುರತೋಪಮಂ || ೨೪ ||

---

೨೦. ಸಂಸಾರವೆಂಬುದು ಒಂದು ದೊಡ್ಡ ಕನಸು. ಇದರಲ್ಲಿ ನಾನು ನಿನಗೆ ಸತ್ಯವಾಗಿರುವಂತೆಯೇ, ನೀನು ನನಗೆ ಸತ್ಯ. ಸ್ವಪ್ನದಲ್ಲಿರುವಾಗ ಸ್ವಪ್ನವು ಸತ್ಯ ಎಂದೇ ಕಾಣುವುದು.

೨೧. ಶ್ರೀರಾಮನು ಹೇಳಿದನು :—ಕನಸುಕಾಣುತ್ತಿದ್ದವನು ನಿದ್ರೆಯಿಂದ ಎಚ್ಚತ್ತಮೇಲೆ, ಅವನ ಕನಸಿನ ಪಟ್ಟಣವು ಸತ್ಯವಾದುದರಿಂದ ಹಾಗೆಯೇ ಇರಬೇಕು ಎಂದು ನನಗೆ ತೋರುವುದು.

೨೨. ಶ್ರೀ ವಸಿಷ್ಠನು ಹೇಳಿದನು :—ನೀನು ಹೇಳಿದಂತೆಯೇ ಆ ಸ್ವಪ್ನ ಪಟ್ಟಣವೂ ಸತ್ಯವಾದ ಕಾರಣ ಇದ್ದೇ ಇರುವುದು. (ಆದರೆ) ಕನಸುಕಾಣುತ್ತಿದ್ದವನು ಎಚ್ಚತ್ತ ಮೇಲೆ ಅದು ಆಕಾಶದಂತೆ ನಿರ್ಮಲಾಕೃತಿಯಾಗಿರುವುದು.

೨೩. ಇದು ಹಾಗಿರಲಿ. ಜಾಗ್ರತ್ತೆಂದು ನೀನು ಯಾವುದನ್ನು ತಿಳಿಯುವೆಯೋ ಅದೂ ಸ್ವಪ್ನವೇ ! ಏಕೆಂದರೆ, ಪರಮಾರ್ಥತಃ ಒಬ್ಬೊಬ್ಬರ ಜಾಗ್ರತ್ತೂ ದೇಶಕಲಾದಿಗಳ ದೃಷ್ಟಿಯಿಂದ ಅಪೂರಕವು.

೨೪. ಇವೆಲ್ಲವೂ (ಸ್ವಪ್ನಜಾಗ್ರತ್ತುಗಳೆರಡೂ) ಸತ್ಯವಲ್ಲದಿದ್ದರೂ ಸತ್ಯ

ಸರ್ವತ್ರ ವಿದ್ಯತೇ ಸರ್ವಂ ದೇವಸ್ಯಾಂತರ್ಬಹಿಸ್ತಥಾ |
ಯತ್ತು ವೇತ್ತಿ ಯಥಾ ಸಂವಿತ್ತತ್ತಥಾ ಸ್ವೈವ ಪಶ್ಯತಿ || ೨೫ ||

ಯತ್ಕೋಶೇ ವಿದ್ಯತೇ ದ್ರವ್ಯಂ ತದ್ದ್ರಷ್ಟ್ರಾ ಲಭ್ಯತೇ ಯಥಾ |
ತಥಾಸ್ತಿ ಸರ್ವಂ ಚಿದ್ವ್ಯೋಮ್ನಿ ಚೇತ್ಯತೇ ತತ್ತ್ವನೇನ ವೈ || ೨೬ ||

ಅನಂತರಮುವಾಚೇದಂ ದೇವೀ ಜ್ಞಪ್ತಿರ್ವಿದೂರಥಂ |
ಕೃತ್ವಾ ಬೋಧಾಮೃತಾಸೇಕೈಃ ವಿವೇಕಾಂಕುರಸುಂದರಂ || ೨೭ ||

ಏತದೇವ ಮಯಾ ರಾಜ್ಞೇ ಲೀಲಾರ್ಥಮುಪವರ್ಣಿತಂ |
ಸ್ವಸ್ತಿ ತೇಽಸ್ತು ಗಮಿಷ್ಯಾವೋ ದೃಷ್ಟಾ ದೃಷ್ಟಾಂತದೃಷ್ಟಯಃ || ೨೮ ||

ದಂತೆಯೇ ಕಾಣುವುದು. ಸ್ವಪ್ನಸ್ತ್ರೀಸುರತದಂತೆ ಮನಸ್ಸಿಗೆ ಮೋಹವನ್ನುಂಟು ಮಾಡುವುದು.

೨೫. ಯಾವುದು ಎಲ್ಲವನ್ನೂ ತಿಳಿಯುವುದೋ ಆ ಚಿತ್ತು ದೇಹದ ಹೊರಗೆ ಒಳಗೆ ಎಲ್ಲೆಲ್ಲೂ ಎಲ್ಲವೂ ತಾನೇ ಆಗಿರುವುದು. ಅದು ಹೇಗೆ ಹೇಗೆ ಸಂವಿತ್ ಆಗುವುದೋ ಹಾಗೆ ಹಾಗೆ ತನ್ನನ್ನೇ ಕಾಣುವುದು.

(ಸಂವಿತ್=ಬೋದ್ಧಾ-ತಿಳಿಯುವವನು. ಬೆಲ್ಲದ ಬೆನಕನಿಗೆ ನೇವೇದ್ಯಕ್ಕೆ ತೊಡೆ ಚಿಗುಟಿಟ್ಟರು ಎಂಬ ಗಾದೆಯನ್ನು ನೆನೆದುಕೊಳ್ಳಿ. ಅಂತರ್ಬಹಿಯಲ್ಲಿ ಇರುವುದು ಚಿತ್ತು ಒಂದೇ ! ಆ ಚಿತ್ತು ತನ್ನ ಚಿತ್ತ್ವದಿಂದಲೇ ಸಂವಿತ್ತು ಆಗುವುದು. ಸಂವಿತ್ತು ಆಗುತ್ತಲೇ ಅದೇ ರೂಪವನ್ನು ಹೊರಗೆ ಕಾಣುವುದು.)

೨೬. ಭಂಡಾರದಲ್ಲಿ ಇದ್ದ ದ್ರವ್ಯವನ್ನು ದ್ರಷ್ಟೃವು ಕಾಣುವನಲ್ಲದೆ ಬೇರೆ ಯಾವುದನ್ನೂ ಹೇಗೆ ಕಾಣಲಾರನೋ ಹಾಗೆಯೇ ಚಿದ್ವ್ಯೋಮದಲ್ಲಿ ಯಾವುದು ಯಾವುದನ್ನು ಕಾಣುವನೋ ಅದದೆಲ್ಲವೂ ಅಲ್ಲಿಯೇ ಇದ್ದು ಚೇತ್ಯ (ದೃಶ್ಯ) ವಾಗುವುದು.*

೨೭. ಅನಂತರ ಸರಸ್ವತೀದೇವಿಯು ವಿದೂರಥನಿಗೆ ಉಪದೇಶವೆಂಬ ಅಮೃತವನ್ನು ಎರೆದು ವಿವೇಕವು ಹುಟ್ಟುವಂತೆ ಮಾಡಿ ಹೀಗೆ ಹೇಳಿದಳು :—

೨೮. ಇದನ್ನೇ ಹಿಂದೆ ಲೀಲೆಗೂ ಹೇಳಿದ್ದೆನು ನಿನಗೆ ಮಂಗಳವಾಗಲಿ. ನಾವಿಬ್ಬರೂ ಹೋಗಿಬರುವೆವು. ದೃಷ್ಟಾಂತವಾಗಿ ನೋಡಬೇಕಾದುದನ್ನೆಲ್ಲ ನೋಡಿಯಾಯಿತು.

---

*ಹಿಂದೆ ಶ್ಲೋಕ ೧೩ರಲ್ಲಿ ವೇದಿತ್ವತ್ವೈಕವಶತಾ ಎಂದು ಹೇಳಿರುವುದನ್ನು ಇಲ್ಲಿ ಚಿಂತಿಸಿ.

ಶ್ರೀವಸಿಷ್ಠ ಉವಾಚ—

ಇತಿ ಪ್ರೋಕ್ತೇ ಸರಸ್ವತ್ಯಾ ಗಿರಾ ಮಧುರವರ್ಣಯಾ |
ಉವಾಚ ವಚನಂ ಧೀಮಾ೯ ಭೂಮಿಪಾಲೋ ವಿದೂರಥಃ || ೨೯ ||

ವಿದೂರಥ ಉವಾಚ—

ಮಮಾಪಿ ದರ್ಶನಂ ದೇವಿ ಮೋಘಂ ಭವತಿ ನಾರ್ಥಿನಿ |
ಮಹಾಫಲಪ್ರದಾಯಾಸ್ತು ಕಥಂ ತವ ಭವಿಷ್ಯತಿ || ೩೦ ||

ಅಹಂ ದೇಹಂ ಸಮುತ್ಸೃಜ್ಯ ಲೋಕಾಂತರಮಿತೋಽಪರಂ |
ನಿಜಮಾಯಾಮಿ ಹೇ ದೇವಿ ಸ್ವಪ್ನಾತ್ಸ್ವಪ್ನಾಂತರಂ ಯಥಾ || ೩೧ ||

ಪಶ್ಯಾದಿಶಾಶು ಮಾಂ ಮಾತಃ ಪ್ರಪನ್ನಂ ಶರಣಾಗತಂ |
ಭಕ್ತೇಽವಹೇಲಾ ವರದೇ ಮಹತಾಂ ನ ವಿರಾಜತೇ || ೩೨ ||

ಯಂ ಪ್ರದೇಶಮಹಂ ಯಾಮಿ ತಮೇವಾಯಾತ್ವಯಂ ಮಮ |
ಮಂತ್ರೀ ಕುಮಾರೀ ಚೈವೇಯಂ ಬಾಲೇತಿ ಕುರು ಮೇ ದಯಾಂ || ೩೩ ||

---

೨೯. ಶ್ರೀ ವಸಿಷ್ಠನು ಹೇಳಿದನು :—ಸರಸ್ವತೀ ದೇವಿಯು ಮನೋಹರವಾದ ಮಾತಿನಿಂದ ಹೀಗೆ ಹೇಳಲು, ಬುದ್ಧಿವಂತನಾದ ವಿದೂರಥ ನರಪತಿಯು ಹೀಗೆ ಹೇಳಿದನು :—

೩೦. ಅರ್ಥಿಯಾಗಿ ಬಂದರೆ ನನ್ನ ದರ್ಶನವೂ ವಿಫಲವಾಗುವುದಿಲ್ಲ. ಹೀಗಿರಲು ಮಹಾಫಲಪ್ರದೆಯಾದ ನಿನ್ನ ದರ್ಶನವು ವಿಫಲವಾಗುವುದೆ ?

೩೧. ದೇವಿ, ನಾನು ಈ ದೇಹವನ್ನು ಬಿಟ್ಟು ಸ್ವಪ್ನದಿಂದ ಸ್ವಪ್ನಾಂತರವನ್ನು ಹೊಂದುವಂತೆ ಇಲ್ಲಿಂದ ನನ್ನ ಹಿಂದಿನ ಲೋಕಾಂತರಕ್ಕೆ ಬರುವೆನು.

೩೨. ನಿನ್ನನ್ನೇ ನಂಬಿ ಶರಣಾಗತನಾಗಿರುವ ನನ್ನನ್ನು ಎಲೌ ಮಾತೆಯೆ ನೋಡಿ, ಅನುಗ್ರಹಿಸು. ಎಲೌ ವರದೆಯೆ, ಭಕ್ತರನ್ನು ಅವಹೇಳನ ಮಾಡುವುದು ಎನ್ನುವುದು ಮಹಾತ್ಮರಿಗೆ ಸರಿಯಲ್ಲ.

೩೩. ನಾನು ಯಾವ ಪ್ರದೇಶಕ್ಕೆ ಹೋಗುವೆನೋ ಅಲ್ಲಿಗೆ ನನ್ನ ಜೊತೆಯಲ್ಲಿ ಮಂತ್ರಿಯೂ, ಬಾಲೆಯಾದ ಈ ಕುಮಾರಿಯೂ ಬರುವವರಾಗಲಿ. ನನ್ನಲ್ಲಿ ದಯೆ ತೋರು.

ಶ್ರೀ ಸರಸ್ವತ್ಯುವಾಚ—

ಆಗಚ್ಛ ರಾಜ್ಯಮುಚಿತಾರ್ಥವಿಲಾಸಚಾರು
ಪ್ರಾಗ್ಜನ್ಮಮಂಡಲಪತೇ ಕುರು ನಿರ್ವಿಶಂಕಂ |
ಅಸ್ಮಾಭಿರರ್ಥಿಜನಕಾಮನಿರಾಕೃತಿರ್ಹಿ
ದೃಷ್ಟಾ ನ ಕಾಚನ ಕದಾಚಿದಪೀತಿ ವಿದ್ಧಿ || ೩೪ ||

ಇತ್ಯಾರ್ಷೇ ಶ್ರೀವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿಪ್ರಕರಣೇ
"ಸ್ವಪ್ನಪುರುಷಸತ್ಯತ್ವ ನಿರೂಪಣಂ" ನಾಮ ದ್ವಿಚತ್ವಾರಿಂಶಃ ಸರ್ಗಃ

---

೩೪. ಶ್ರೀ ಸರಸ್ವತಿಯು ಹೇಳಿದಳು :—ಪೂರ್ವಜನ್ಮದಲ್ಲಿಯೂ ಮಂಡಲೇಶ್ವರನಾಗಿದ್ದ ರಾಜನೇ, ಬಾ, ನಿನಗೆ ತಕ್ಕಂತಹ ಭಾಗ್ಯ ಭೋಗಗಳುಳ್ಳ ರಾಜ್ಯವನ್ನು ಸಂತೋಷದಿಂದ ಆಳು. ನಮ್ಮಂಥವರಿಂದ ಅರ್ಥಿಜನರ ಇಷ್ಟವು ಫಲಿಸುವುದಿಲ್ಲ ಎಂಬುದು ಎಂದಿಗೂ ಯಾವುದೂ ಇಲ್ಲ ಎಂದು ತಿಳಿದುಕೊ.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಸ್ವಪ್ನ ಪುರುಷಸತ್ಯತ್ವ ನಿರೂಪಣ" ಎಂಬ
ನಲವತ್ತೆರಡನೆಯ ಸರ್ಗವು.

ತ್ರಿಚತ್ವಾರಿಂಶಃ ಸರ್ಗಃ

ಶ್ರೀ ಸರಸ್ವತ್ಯುವಾಚ—

ಅಸ್ಮಿನ್ ರಣವರೇ ರಾಜನ್ ಮರ್ತವ್ಯಂ ಭವತಾಧುನಾ |
ಪ್ರಾಪ್ತವ್ಯಂ ಪ್ರಾಕ್ತನಂ ರಾಜ್ಯಂ ಸರ್ವಂ ಪ್ರತ್ಯಕ್ಷಮೇವ ತೇ ‖ ೧ ‖

ಕುಮಾರ್ಯಾ ಮಂತ್ರಿಣಾ ಚೈವ ತ್ವಯಾ ಚ ಪ್ರಾಕ್ತನಂ ಪುರಂ |
ಆಗಂತವ್ಯಂ ಶವೀಭೂತಂ ಪ್ರಾಪ್ತವ್ಯಂ ತಚ್ಛರೀರಕಂ ‖ ೨ ‖

ಆವಾಂ ಯಾವೋ ಯಥಾಯಾತಂ ವಾತರೂಪೇಣ ಚ ತ್ವಯಾ |
ಆಗಂತವ್ಯಃ ಸ ದೇಶಸ್ತು ಕುಮಾರ್ಯಾ ಮಂತ್ರಿಣಾಪಿ ಚ ‖ ೩ ‖

ಅನ್ಯೈವ ಗತಿರಶ್ವಸ್ಯ ಗತಿರನ್ಯಾ ಖರೋಷ್ಟ್ರಯೋಃ |
ಮದಸ್ವಿನ್ನಕಪೋಲಸ್ಯ ಗತಿರನ್ಯೈವ ದಂತಿನಃ ‖ ೪ ‖

ನಲವತ್ತಮೂರನೆಯ ಸರ್ಗ

೧. ಶ್ರೀ ಸರಸ್ವತಿಯು ಹೇಳಿದಳು :—ಎಲೈ ರಾಜನೆ, ಪ್ರಶಸ್ತವಾದ ಈ ಯುದ್ಧದಲ್ಲಿ ನೀನು ಈಗ ಮೃತನಾಗಬೇಕು. ಅನಂತರ ನಿನ್ನ ಹಿಂದಿನ ರಾಜ್ಯವು ಸಿಕ್ಕುವುದು. ಇದೆಲ್ಲವೂ ನಿನಗೆ ಈಗಲೇ ಪ್ರತ್ಯಕ್ಷವಾಗುವುದು.

೨. ಕುಮಾರೀಮಂತ್ರಿಗಳೊಡನೆ ನೀನು ನಿನ್ನ ಹಿಂದಿನ ರಾಜಧಾನಿಗೆ ಬಂದು ಅಲ್ಲಿ ಶವವಾಗಿ ಬಿದ್ದಿರುವ ನಿನ್ನ ಶರೀರವನ್ನು ಪಡೆ.

೩. ನಾವು ಬಂದಂತೆಯೇ ವಾಯುರೂಪದಿಂದ ಹೊರಟುಹೋಗುವೆವು. ನೀನೂ ಕುಮಾರೀಮಂತ್ರಿಗಳೊಡನೆ ಆ ದೇಶಕ್ಕೆ ಬಾ.

೪. ಕುದುರೆಯ ಗತಿಯು ಬೇರೆ. ಕತ್ತೆ ಒಂಟೆಗಳ ಗತಿಯು ಬೇರೆ: ಮದವೇರಿ ಮದೋದಕವು ಸ್ರವಿಸುತ್ತಿರುವ ಮದ್ದಾನೆಯ ಗತಿಯೇ ಬೇರೆ (ಆದರಿಂದ ನಾವು ಹೋಗುವಂತೆ ನೀವು ಬರುವಂತಿಲ್ಲ).

ಪ್ರಸ್ತುತೇತಿ ಕಥಾ ಯಾವನ್ಮಿಥೋ ಮಧುರಭಾಷಿಣೋಃ |
ತಾವತ್ಪ್ರವಿಶ್ಯ ಸಂಭ್ರಾಂತ ಉವಾಚೋರ್ಧ್ವಸ್ಥಿತೋ ನರಃ || ೫ ||

ದೇವ ಸಾಯಕಚಕ್ರಾಸಿಗದಾಪರಿಘವೃಷ್ಟಿಮತ್ |
ಮಹತ್ಪರಬಲಂ ಪ್ರಾಪ್ತಮೇಕಾರ್ಣವ ಇವೋದ್ಧತಃ || ೬ ||

ಕಲ್ಪಕಾಲಾನಿಲೋದ್ಧೂತಕುಲಾಚಲಶಿಲೋಪಮಂ |
ಗದಾಶಕ್ತಿಭುಶುಂಡೀನಾಂ ವೃಷ್ಟಿಂ ಮುಂಚತಿ ತುಷ್ಟಿಮತ್ || ೭ ||

ನಗರೇ ನಗಸಂಕಾಶೇ ಲಗ್ನೋಽಗ್ನಿರ್ವ್ಯಾಪ್ತದಿಕ್ತಟಃ |
ದಹಂಶ್ಚಟಚಟಾಸ್ಫೋಟೈಃ ಪಾತಯತ್ಯುತ್ತಮಾಂ ಪುರೀಂ || ೮ ||

ಕಲ್ಪಾಂಬುದಘಟಾತುಲ್ಯಾ ವ್ಯೋಮ್ನಿ ಧೂಮಮಹಾದ್ರಯಃ |
ಬಲಾತ್ಪ್ರೋಡ್ಡಯನಂ ಕರ್ತುಂ ಪ್ರವೃತ್ತಾ ಗರುಡಾ ಇವ || ೯ ||

---

೫. ಹೀಗೆ ಮುದ್ದಾಗಿ ಅವರಿಬ್ಬರೂ ಮಾತನಾಡುತ್ತಿರುವ ಹಾಗೆಯೇ ರಾಜಪುರುಷನೊಬ್ಬನು ಕಳವಳದಿಂದ ಬಂದು ಊರ್ಧ್ವಸ್ಥಿತನಾಗಿಯೇ ಹೀಗೆ ನುಡಿದನು :—

೬. ಪ್ರಭುವೆ, ಬಾಣ, ಚಕ್ರ, ಖಡ್ಗ, ಗದಾ, ಪರಿಘಗಳ ಮಳೆಗರೆಯುತ್ತ ದೊಡ್ಡ ಶತ್ರು ಸೈನ್ಯವು ಉದ್ಧತವಾಗಿ ಪ್ರಳಯಾರ್ಣವದಂತೆ ಬಂದಿರುವುದು.

೭. ಪ್ರಳಯ ವಾಯುವು ಹಾರಿಸಿ ತಂದಿರುವ ಕುಲಾಚಲಗಳ ಶಿಲೆಗಳೋ ಎಂಬಂತಿರುವ ಗದಾ. ಶಕ್ತಿ ಭುಶುಂಡಿಗಳ ಮಳೆಯನ್ನು ಸಂತೋಷವಾಗಿ ಕರೆಯುತ್ತಿರುವುದು.

೮. ಬೆಟ್ಟದಂತಿರುವ ಈ ಪಟ್ಟಣವು ಬೆಂಕಿಗೆ ಸಿಕ್ಕಿರುವುದು. ದಿಕ್ಕು ದಿಕ್ಕೆಲ್ಲವೂ ಉರಿಯುತ್ತಿರುವುದು. ಬೆಂಕಿಯು ಚಟಚಟ ಎಂದು ಉರಿಯುತ್ತ ಈ ನಗರವನ್ನು ಸುಡುತ್ತಿರುವುದು.

೯. ಧೂಮ ಮಹಾಪರ್ವತಗಳು ಪ್ರಲಯ ಮೇಘಗಳ ಗುಂಪೋ ಎನ್ನುವಂತೆ ಇದ್ದು ಬಲವಂತವಾಗಿ ಹಾರುವುದಕ್ಕೆ ಯತ್ನಿಸುತ್ತಿರುವ ಗರುಡರಂತಿರುವುದು.

ಶ್ರೀ ವಸಿಷ್ಠ ಉವಾಚ—

ಸಸಂಭ್ರಮಂ ವದತ್ಯೇವಂ ಪುರುಷೇ ಪುರುಷಾರವಃ |
ಉದಭೂತ್ಪೂರಯನ್ನಾಶಾ ಬಹಿಃ ಕೋಲಾಹಲೋ ಮಹಾನ್ || ೧೦ ||

ಬಲಾದಾಕರ್ಣಕೃಷ್ಟಾನಾಂ ಧನುಷಾಂ ಶರವರ್ಷಿಣಾಂ |
ಬೃಂಹತಾಮತಿಮತ್ತಾನಾಂ ಕುಂಜರಾಣಾಂ ತರಸ್ವಿನಾಂ || ೧೧ ||

ಪುರೇ ಚಟಚಟಾಸ್ಫೋಟೈರ್ದಹತಾಂ ಜಾತವೇದಸಾಂ |
ಪೌರಾಣಾಂ ದಗ್ಧದಾರಾಣಾಂ ಮಹಾಹಲಹಲಾರವೈಃ || ೧೨ ||

ತರತಾಮಗ್ನಿಖಂಡಾನಾಂ ಟಾಂಕಾರಃ ಕಥಿತೋ ರವೈಃ |
ಜ್ವಲಿತಾನಾಂ ಪರಿಸ್ಪಂದಾದ್ಧಗದ್ಧಗಿತಿ ಚಾರ್ಚಿಷಾಂ || ೧೩ ||

ಅಥ ವಾತಾಯನಾದ್ದೇವ್ಯೌ ಮಂತ್ರೀ ರಾಜಾ ವಿಧೂರಥಃ |
ದದೃಶುಃ ಪ್ರೋಲ್ಲಸನ್ನಾದಂ ಮಹಾನಿಶಿ ಮಹಾಪುರಂ || ೧೪ ||

ಪ್ರಲಯಾನಲಸಂಕ್ಷುಬ್ಧಪೂರ್ಣೈಕಾರ್ಣವರಂಹಸಾ |
ಪೂರ್ಣಂ ಪರಬಲೇನೋಗ್ರಹೇತಿಮೇಘತರಂಗಿಣಾ || ೧೫ ||

---

೧೦. ಶ್ರೀ ವಸಿಷ್ಠನು ಹೇಳಿದನು:—ರಾಜಪುರುಷನು ಕಳವಳಗೊಂಡು ಹೀಗೆ ಹೇಳುತ್ತಿದ್ದ ಹಾಗೆಯೇ ಭಯಂಕರವಾದ ಕೋಲಾಹಲಶಬ್ದವು ದಿಕ್ತಟಗಳನ್ನೆಲ್ಲ ತುಂಬುತ್ತ ಹೊರಗೆ ತಾನೇತಾನಾಯಿತು.

೧೧-೧೩. ಬಲವಂತವಾಗಿ ಕಿವಿಯವರೆಗೆ ಎಳೆದು ಶರವರ್ಷಮಾಡುತ್ತಿರುವ ಬಿಲ್ಗಾರರ ಧನುಷ್ಟಂಕಾರವೂ, ವೇಗವಾಗಿ ನುಗ್ಗುತ್ತ ಇರುವ ಅತಿಮತ್ತವಾದ ಆನೆಗಳ ಘೀಳಿಡುವಿಕೆಯೂ, ನಗರವನ್ನೆಲ್ಲ ಸುಡುತ್ತಿರುವ ಅಗ್ನಿಜ್ವಾಲೆಗಳ ಚಟಚಟತ್ಕಾರವೂ, ಹೆಂಡಿರು (ಮಕ್ಕಳು) ಸುಟ್ಟುಹೋದ ಪೌರರ ಎಲಎಲ ಎಂಬ ಮಹಾಶಬ್ದವೂ, ಅತ್ತಿತ್ತ ಹಾರುತ್ತಿರುವ ಅಗ್ನಿಖಂಡಗಳ ಟಂಕಾರವೂ, ನೆಗೆನೆಗೆಯುತ್ತಿರುವ ಉರಿನಾಲಗೆಗಳ ಧಗಧಗ ಶಬ್ದವೂ (ತಾವೇ ತಾವಾದುವು).

೧೪. ಆ ಅರ್ಧ ರಾತ್ರಿಯಲ್ಲಿ ಆ ಮಹಾಪುರವು ಹೀಗೆ ಗದ್ದಲಗೊಂಡಿರುವುದನ್ನು ಆ ದೇವಿಯರೂ ಮಂತ್ರಿಯೂ ವಿದೂರಥ ರಾಜನೂ ಅರಮನೆಯ ಕಿಟಕಿಯಲ್ಲಿ ನಿಂತು ನೋಡಿದರು.

೧೫. ಪ್ರಳಯಾಗ್ನಿಗೆ ಸಿಕ್ಕಿ ಸಂಕ್ಷುಬ್ಧವಾಗಿರುವ ಪ್ರಳಯಾರ್ಣವದಂತೆ,

ಕಲ್ಪಾಂತವಹ್ನಿವಿಗರ್ಲ ಮೇರುಭೂಧರಭಾಸುರೈಃ |
ದಹ್ಯಮಾನಂ ಮಹಾಜ್ವಾಲಾಜ್ವಾಲೈರಂಬರಪೂರಕೈಃ ‖ ೧೬ ‖

ಮುಷ್ಟಿಗ್ರಾಹ್ಯಮಹಾಮೇಘಗರ್ಜಾಸಂತರ್ಜಿತೋರ್ಜಿತೈಃ |
ಘೋರಂ ಕಲಕಲಾರಾವೈರ್ವಾಂಸಲೈರ್ದಸ್ಯುಜಲ್ಪಿತೈಃ ‖ ೧೭ ‖

ಪುಷ್ಕರಾವರ್ತಸಂಕಾಶಧೂಮ್ರಾಭ್ರಪಿಹಿತಾಂಬರಂ |
ಪ್ರೋಡ್ಡೀನಹೇಮಾಗ್ರನಿಭೈರ್ಜ್ವಾಲಾಪುಂಜೈರ್ನಿರಂತರಂ ‖ ೧೮ ‖

ತರದುಲ್ಮುಕಖಂಡೋಗ್ರತಾರಾತರಲಿತಾಂಬರಂ |
ಅನ್ಯೋನ್ಯದೇಶಸದ್ಮೌಘಪ್ರಜ್ವಲಜ್ಜ್ವಲನಾಚಲಂ ‖ ೧೯ ‖

ಹತಸೈನ್ಯಪುರಾಪಾತಂ ದ್ರುತಾಂಗಾರಾಭ್ರಕೋಟರೈಃ |
ಕರ್ಕಶಾಕ್ರಂದನಿರ್ದಗ್ಧಲೋಕಪೂಗೋಗ್ರಗರ್ಜಿತಂ ‖ ೨೦ ‖

ಉಗ್ರವಾದ ಆಯುಧಗಳೆಂಬ ಮೇಘಮಾಲೆಯುಳ್ಳ ಪರಬಲದಿಂದ ಆ ಪುರವು ಆಕ್ರಾಂತವಾಗಿರುವುದನ್ನು ಅವರು ಕಂಡರು.

೧೬. ಮೇರುಪರ್ವತವನ್ನೂ ಕಬಳಿಸುವ ಕಲ್ಪಾಗ್ನಿ ಜ್ವಾಲೆಗಳೋ ಎಂಬಂತಿರುವ ಅಗ್ನಿಜ್ವಾಲೆಗಳು ನಗರವನ್ನು ಸುಡುತ್ತ ಆಕಾಶದವರೆಗೂ ಏಳುತ್ತಿದ್ದುವು.

೧೭. ಕೈಗೆ ಸಿಕ್ಕಿದುದನ್ನು ಕದಿಯುತ್ತ, ಮಹಾಮೇಘಗರ್ಜನೆಗಳಂತೆ ಪ್ರಬಲವಾಗಿ ಗರ್ಜಿಸುತ್ತಿರುವ ಕಳ್ಳರಿಂದ ಘೋರವಾಗಿತ್ತು.

೧೮. ಪುಷ್ಕರ, ಆವರ್ತಗಳೆಂಬ ಪ್ರಲಯಮೇಘಗಳಂತಿರುವ ಧೂಮ ಮೇಘಗಳಿಂದ ಆಕಾಶವೆಲ್ಲವೂ ಮುಚ್ಚಿಹೋಗಿತ್ತು. ಹಾರುತ್ತಿರುವ ಚಿನ್ನದ ಕಲಶಗಳೋ ಎಂಬಂತಿರುವ ಜ್ವಾಲಾಪುಂಜಗಳಿಂದ ತುಂಬಿಹೋಗಿತ್ತು.

೧೯. ಹಾರಾಡುತ್ತಿರುವ ಉರಿಯುತ್ತಿರುವ ಗುಲ್ಮಖಂಡಗಳಿಂದ, ನಕ್ಷತ್ರಗಳಿಂದ ತುಂಬಿರುವ ಆಕಾಶದಂತೆ ಉಗ್ರವಾಗಿತ್ತು. ಒಂದು ಮನೆಯಿಂದ ಇನ್ನೊಂದು ಮನೆಗೆ ಕೊಳ್ಳಿಗಳು ಹಾರುತ್ತಿರಲು ಮನೆ ಮನೆಯೂ ಅಗ್ನಿಪರ್ವತದಂತಿತ್ತು.

೨೦. ಸೋತ ಸೈನ್ಯವು ಊರಿನ ಕಡೆಗೆ ಓಡಿ ಬರುತ್ತಿತ್ತು. ಮೇಘಗಳವರೆಗೂ ಕಿಡಿಗಳು ಹಾರುತ್ತಿದ್ದುವು. ಉಗ್ರವಾಗಿ ಗರ್ಜಿಸುತ್ತ ಶತ್ರು ಸೈನಿಕರು

ಕೃಶಾನುಕಣನಾರಾಚನಿರಂತರತರಾಂಬರಂ |
ಬಹುಹೇತಿಶಿಲಾಜಾಲಲುಠದ್ದಗ್ಧಪುರೋತ್ಕರಂ || ೨೧ ||

ರಣದ್ದ್ವಿರದಸಂಘಟ್ಟಕುಟ್ಟಿತೋದ್ಭಟಸದ್ಭಟಂ |
ವಿದ್ರವತ್ತಸ್ಕರಚ್ಛೇದಮಾರ್ಗಕೀರ್ಣಮಹಾಧನಂ || ೨೨ ||

ಅಂಗಾರರಾಶಿನಿಪತನ್ನರನಾರ್ಯುಗ್ರರೋದನಂ |
ಸ್ಫುಟಚ್ಚಟಚಟಾಶಬ್ದಪ್ರಲುಠತ್ ಸ್ಫುಟಕಾಷ್ಠಕಂ || ೨೩ ||

ವಿಪುಲಾಲಾತಚಕ್ರೌಘಶತಸೂರ್ಯನಭಸ್ತಲಂ ।
ಅಂಗಾರಶಿಖರಾಕೀರ್ಣಸಮಸ್ತವಸುಧಾತಲಂ || ೨೪ ||

ದಗ್ಧಾಗ್ನಿಕಾಷ್ಠಕ್ರೇಂಕಾರರಣಜ್ಜ್ವಲನವೈಣವಂ |
ದಗ್ಧಜಂತುಘನಾಕ್ರಂದರುದತ್ಸಕಲಸೈನಿಕಂ || ೨೫ ||

ರಾಜಧಾನಿಯನ್ನೂ ಸಂಪೂರ್ಣವಾಗಿ ದಹಿಸುತ್ತಿರಲು ಪುರಜನರ ಆಕ್ರಂದನವು ಕರ್ಕಶವಾಗಿತ್ತು.

೨೧. ಬೆಂಕಿಯ ಕಿಡಿಗಳೂ ಬಾಣಗಳೂ ಆಕಾಶವನ್ನು ಮುಚ್ಚಿಬಿಟ್ಟಿದ್ದುವು. ಅನೇಕ ಆಯುಧಗಳಿಂದಲೂ ಶಿಲಾಖಂಡಗಳಿಂದಲೂ ಏಟು ತಿಂದು ಪಟ್ಟಣವು ಬಿದ್ದು ಹೊರಳುತ್ತಿತ್ತು.

೨೨. ಆನೆಗಳ ಗುಂಪಿನ ತುಳಿತಕ್ಕೆ ಸಿಕ್ಕಿ ಸದ್ಭಟರೂ ಚೂರ್ಣವಾಗುತ್ತಿದ್ದರು. ಓಡುತ್ತಿರುವ ಕಳ್ಳರನ್ನು ಕತ್ತರಿಸಿ ಹಾಕಲು, ಅವರು ತಂದಿದ್ದ ಮಹಾ ಧನವೆಲ್ಲವೂ ಅಲ್ಲಿ ಚೆಲ್ಲುತ್ತಿತ್ತು.

೨೩. ಬೆಂಕಿಯ ರಾಶಿಯಲ್ಲಿ ಬಿದ್ದುಹೋದ ಗಂಡು ಹೆಣ್ಣುಗಳು ಉಗ್ರವಾಗಿ ರೋದಿಸುತ್ತಿದ್ದರು. ಸುಟ್ಟು ಒಡೆಯುತ್ತಿರುವ ಚಟ್ಟಿಗೆಗಳು ಚಟಚಟನೆ ಸೀಳುತ್ತಿದ್ದುವು.

೨೪. ದೊಡ್ಡ ದೊಡ್ಡ ಕೊಳ್ಳಿಗಳು ಹಾರಿ ಆಕಾಶದಲ್ಲಿ ಸುತ್ತುತ್ತಿರಲು, ಶತ ಸೂರ್ಯರು ನಭಸ್ಥಲದಲ್ಲಿ ಉದಯವಾದರೋ ಎಂಬಂತಿತ್ತು. ಭೂಮಿತಲವು ಅಗ್ನಿ ಶಿಖರಗಳಿಂದ ತುಂಬಿತ್ತು.

೨೫. ಕೊಳ್ಳಿಗಳು ಬಿದ್ದು ನಗರದ ಹೊರವಳಯದಲ್ಲಿದ್ದ ಬಿದಿರು ಮೆಳೆ

ಪಾಂಸುಶೇಷಾತ್ತರಾಜಶ್ರೀವೃದ್ಧತೃಪ್ತಹುತಾಶನಂ |
ಸಕಲಗ್ರಾಸನಾರಂಭಸೋದ್ಯೋಗಾಗ್ನಿಮಹಾಶನಂ || ೨೬ ||

ಯದೃಚ್ಛಾತ್ಕಾರಡಾತ್ಕಾರಕಠಿನಾಗ್ನಿರಟದ್ಗೃಹಂ |
ಅನಂತಜಂತುಭೋಜ್ಯಾನ್ನವಹ್ನಿಭುಕ್ತೇಂಧನಸ್ಪೃಹಂ || ೨೭ ||

ಅಥ ಶುಶ್ರಾವ ತತ್ರಾಸೌ ಗಿರೋ ರಾಜಾ ವಿದೂರಥಃ |
ಯೋಧಾನಾಂ ದಗ್ಧದಾರಾಣಾಂ ಪಶ್ಯತಾಮಭಿಧಾವತಾಂ || ೨೮ ||

ಹಾ ಮತ್ತಮರುದೂರ್ಧ್ವಸ್ಥಾನಂಗಾರ ಗೃಹಪಾದಪಾನ್ |
ರಣತ್ಖರಖರಂ ನೀರಜಾಲಾಮಾತಪಪಂಥಿನಃ || ೨೯ ||

ಗಳು ಹತ್ತಿಕೊಂಡು ಕ್ರೇಂಕಾರ ಮಾಡುತ್ತ ಉರಿಯುತ್ತಿದ್ದುವು. ಸುಟ್ಟುಹೋದ ಪ್ರಾಣಿಗಳು ಕೂಗಿಕೊಳ್ಳುವುದನ್ನು ಕೇಳಿ ಸಕಲ ಸೈನಿಕರೂ ರೋದನ ಮಾಡುತ್ತಿದ್ದರು.

೨೬. ಧೂಳು ಮಾತ್ರ ಉಳಿಯುವಂತೆ ರಾಜ ಸೌಭಾಗ್ಯವನ್ನೆಲ್ಲ ಸ್ವಾಹಾ ಮಾಡಿ ಬೆಳೆದ ಹುತಾಶನನು ತೃಪ್ತನಾಗಿದ್ದನು. ಆದರೂ ಆ ಹೊಟ್ಟೆಬಾಕನು (ಉಳಿದಿರುವ) ಎಲ್ಲವನ್ನೂ ಗ್ರಾಸ ಮಾಡಿಬಿಡಬೇಕೆಂದು ಯತ್ನ ಮಾಡುತ್ತಿದ್ದನು.

೨೭. ಆಕಸ್ಮಿಕವಾಗಿ ಆಗುತ್ತಿರುವ ಆತ್ಕಾರ, ಡಾತ್ಕಾರಗಳಿಂದಲೂ, ಅಗ್ನಿದಾಹಗಳಿಂದಲೂ ಮನೆಗಳು ನೋಡುವುದಕ್ಕೆ ಆಗದಂತೆ ಆಗಿದ್ದುವು. ಅನಂತ ಜಂತುಗಳ ಅನ್ನವನ್ನು ತಿಂದಿದ್ದರೂ ವಹ್ನಿಯು (ಭಾವಣಿಯು) ಕಟ್ಟಿಗೆಗಳನ್ನೂ ತಿನ್ನಬೇಕೆಂದು ಆಶಿಸುತ್ತಿದ್ದನು. *

೨೮. ತಮ್ಮ ತಮ್ಮ ಹೆಂಡಿರು ಮಕ್ಕಳು ತಮ್ಮ ಕಣ್ಣೆದುರಿಗೇ ಸುಟ್ಟು ಹೋಗುವುದನ್ನು ಕಂಡು ಅವರನ್ನು ರಕ್ಷಿಸಿಕೊಳ್ಳಲು ಯತ್ನಿಸುತ್ತಿರುವ ಯೋಧರು ಆಡಿಕೊಳ್ಳುತ್ತಿರುವ ಮಾತುಗಳನ್ನು ವಿದೂರಥ ರಾಜನು ಕೇಳಿದನು.

೨೯. ತಂಪಾಗಿ, ತಾಪಕ್ಕೆ ಎಡೆಗೊಡದೆ ಬೆಳೆದಿದ್ದ ಗೃಹ ವೃಕ್ಷಗಳನ್ನು ಮತ್ತ ಮಾರುತವು ಖರಖರನೆ ಶಬ್ದಮಾಡುತ್ತ ಹೊತ್ತುಕೊಂಡು ಹೋಯಿತು.

[ನೀರಾಣಾಂ ಜಾಲೇನ ಆಮಾಃ ಹರಿತಾಃ ಶಿಶಿರಾಃ ಇತ್ಯರ್ಥಃ. ಅತ

---

* ಆತ್ಕಾರ=ಸರ್ವಸಾದಾನಂ. ಡಾತ್ಕಾರ=ದಸ್ಯುಭಿಃ ಪ್ರಹರಣಂ—ತಾ. ಪ್ರ.

ಹಾ ದಗ್ಧದಾರಾಃ ಪ್ರಾಲೇಯಶೀತಾ ದೇಹೇಷು ದಂತಿನಾಂ |
ಮಗ್ನಾ ಮನಸ್ಸು ಮಹತಾಮಿವ ವಿಜ್ಞಾನಸೂಕ್ತಯಃ ॥ ೩೦ ॥

ಹಾ ತಾತ ಹೇತಯೋ ಲಗ್ನಾಸ್ತರುಣೀಕಬರೀತೃಣೇ|
ಜ್ವಲಂತಿ ಶುಷ್ಕಪರ್ಣೌಘಾ ಇವ ವೀರಾನಿಲೇರಿತಾಃ ॥ ೩೧ ॥

ಆವರ್ತನನದೀದೀರ್ಘಾ ವಹತ್ಯೂರ್ಧ್ವತರಂಗಿಣೀ |
ಪಶ್ಯೇಯಂ ಧೂಮಯಮುನಾ ವ್ಯೋಮಗಂಗಾಂ ಪ್ರಧಾವತಿ ॥ ೩೨ ॥

ವಹದುಲ್ಮುಕಕಾಷ್ಠೋರ್ಧ್ವಗಾಮಿನೀ ಧೂಮನಿಮ್ನಗಾ |
ವೈಮಾನಿಕಾನಂಧಯತಿ ಪಶ್ಯಾಗ್ನಿಕಣಬುಬ್ಬುದಾ ॥ ೩೩ ॥

ಏವ ಆತಪಸ್ಯ ಸಂತಾಪಸ್ಯ ಪಂಥಿನಃ ಪರಿಪನ್ಥಿನಃ ತಥ್ವಿ ಮದ್ಧಾಃ–ತಾರ್–ಅಂಗ+ಆರ–ಆರ ಇತಿ ಕ್ರಿಯಾಪದಂ, ಆಜಗಾಮ ಇತ್ಯರ್ಥಃ—ತಾ. ಪ್ರ.

೩೦. ಹಿಮಶೀತಲರಾಗಿದ್ದ ಪತ್ನಿಯರು ದಗ್ಧರಾದರು: ಆನೆಗಳ ದೇಹಗಳಲ್ಲಿ ಮಗ್ನರಾದರು (?). ಮಹಾತ್ಮರ ಮನಸ್ಸುಗಳಲ್ಲಿ ವಿಜ್ಞಾನ ಸೂಕ್ತಗಳು ಮಗ್ನವಾಗುವಂತೆ ಆದರು. *

೩೧. ಭರ್ರನೆ ಬೀಸುವ ಗಾಳಿಯಿಂದ ಹಾರಿ ಬಂದು ಬಿದ್ದ (ಜ್ವಾಲೆಗಳು) ತರುಣಿಯರ ಮುಡಿಯಲ್ಲಿ ಸಿಕ್ಕಿಕೊಂಡು ತರಗೆಲೆಗಳ ರಾಶಿಯಲ್ಲಿ ಉರಿಯುವಂತೆ ಉರಿಯುತ್ತಿರುವುವು.

೩೨. ಸುತ್ತಿ ಸುತ್ತಿಕೊಂಡು ಹೋಗುವುದರಿಂದ ದೀರ್ಘವಾಗಿ ಕಾಣುತ್ತ ಮೇಲೆ ಮೇಲಕ್ಕೆ ಏರುವ ತರಂಗಗಳಿಂದ ಕೂಡಿರುವ ಈ ಧೂಮ ಯಮುನಾನದಿಯು, ನೋಡು, ಆಕಾಶ ಗಂಗೆಯನ್ನು ಸೇರಲು ಹೋಗುತ್ತಿರುವುದು.

೩೩. ಈ ಧೂಮನದಿಯು, ಕೊಳ್ಳಿಗಳೆಂಬ ತೇಲುವ ಕಾಷ್ಠಗಳೂ, ಅಗ್ನಿಕಣಗಳೆಂಬ ಬುದ್ಬುದಗಳೂ ಉಳ್ಳದಾಗಿ ಮೇಲಮೇಲಕ್ಕೆ ಹರಿಯುತ್ತಾ ವೈಮಾನಿಕರನ್ನು ಕುರುಡುಮಾಡುತ್ತಿರುವುದು.

---

* ಈ ಅರ್ಥ ಸಮರ್ಪಕವಾಗಿಲ್ಲ.

ಅಸ್ಯಾ ಮಾತಾ ಪಿತಾ ಭ್ರಾತಾ ಜಾಮಾತಾ ಸ್ತನಪಾಃ ಸುತೇ |
ಅಸ್ಮಿನ್ ಸದ್ಮನಿ ನಿರ್ದಗ್ಧಾ ದಗ್ಧೈವಾಸತ್ಸ್ವಿಂಧನೇ || ೩೪ ||

ಹಾ ಹಾ ಹಾಗಚ್ಛ ತೇ ಶೀಘ್ರಮೇತದಂಗಾರಮಂದಿರಂ |
ಇತಃ ಪ್ರವೃತ್ತಂ ಪತಿತುಂ ಸುಮೇರುಃ ಪ್ರಲಯೇ ಯಥಾ || ೩೫ ||

ಅಹೋ ಶರಶಿಲಾಶಕ್ತಿಕುಂತಪ್ರಾಸಾಸಿಹೇತಯಃ |
ಜಾಲಸಂಧ್ಯಾಭ್ರಪಟಲಂ ವಿಶಂತಿ ಶಲಭಾ ಇವ || ೩೬ ||

ಹೇತಿಪ್ರವಾಹಾ ಜ್ವಲನಂ ನಭಸ್ಯಂತ್ಯಾಂವಿಶಂತ್ಯಹೋ|
ಬಡವಾನಲಮುಜ್ಜ್ವಲಮರ್ಣಃಪೂರಾ ಇವಾರ್ಣವಾತ್ || ೩೭ ||

ಧೂಮಾಯಂತಿ ಮಹಾಭ್ರಾಣಿ ಜ್ವಾಲಾಃ ಶಿಖರಿಕೋಟಿಷು |
ಸರಸಾನ್ಯಪಿ ಶುಷ್ಯಂತಿ ಹೃದಯಾನೀವ ರಾಗಿಣಾಂ || ೩೮ ||

---

೩೪. ಮಗಳೇ, ಇವಳ ತಾಯಿ ತಂದೆ ಅಣ್ಣ ಅಳಿಯ ಮಗು ಎಲ್ಲರೂ ಈ ಮನೆಯಲ್ಲಿ ಸುಟ್ಟುಹೋದರು ಎನ್ನುವಷ್ಟರಲ್ಲಿ ಅವಳೂ ಪ್ರಜ್ವಲಿಸುತ್ತಿರುವ ಬೆಂಕಿಗೆ ಸಿಕ್ಕಿ ಸುಟ್ಟುಹೋದಳು.

೩೫. ಅಯ್ಯಯ್ಯೋ ! ಬೇಗಬಾ ಈ ಮನೆಯೆಲ್ಲವೂ ಬೆಂಕಿಯಾಗಿರುವುದು. ಪ್ರಳಯದಲ್ಲಿ ಸುಮೇರು ಪರ್ವತವು ಬೀಳುವಂತೆ ಇದೂ ಇನ್ನೇನು ಬಿದ್ದು ಹೋಗುವುದು.

೩೬. ಅಯ್ಯೋ ! ಶರ, ಶಿಲಾ, ಶಕ್ತಿ, ಕುಂತ, ಪ್ರಾಸ, ಖಡ್ಗ-ಮೊದಲಾದ ಆಯುಧಗಳು ಗವಾಕ್ಷಜಾಲಗಳೆಂಬ ಸಂಧ್ಯಾಮೇಘ ಸಮುದಾಯಗಳನ್ನು ಶಲಭಗಳಂತೆ ಹೊಗುತ್ತಿರುವುವು.

೩೭. ಜ್ವಾಲೆಗಳೆಂಬ ಪ್ರವಾಹಗಳು ಉರಿಯುತ್ತ, ಸಮುದ್ರದಲ್ಲಿ ಹುಟ್ಟಿದ ಜಲಪ್ರವಾಹಗಳು ಉರಿಯುತ್ತಿರುವ ಬಡಬವನ್ನು ಸೇರುವಂತೆ, ಆಕಾಶಕ್ಕೆ ಹೋಗುತ್ತಿರುವ ಧೂಮನದಿಯನ್ನು ಸೇರುತ್ತಿರುವುವು.

೩೮. ಹೊಗೆಗಳು ಮಹಾಮೇಘಗಳನ್ನೂ ಅಗ್ನಿಜ್ವಾಲೆಗಳು ಪರ್ವತಗಳ ಶಿಖರಗಳನ್ನೂ ಹೋಲುತ್ತಿರಲು, ಕಾಮಾಸಕ್ತರ ಹೃದಯಗಳಂತೆ ಸರಸಗಳಾಗಿದ್ದ ವಸ್ತುಗಳೂ ಒಣಗುತ್ತಿರುವುವು.

ಆಲಾನತ್ವರುಷೇವೈತಾ ದಂತಿಭಿರ್ವೃಕ್ಷಪಂಕ್ತಯಃ |
ಸ್ಫುರತ್ಕಟಕಟಾರಾವಂ ಪಾತ್ಯಂತೇ ಕೃತಚೀತ್ಕೃತೈಃ || ೩೯ ||

ಪುಷ್ಪಪುಷ್ಪಫಲಸ್ಕಂಧಾ ಗತಶ್ರೀಕಾ ಗೃಹದ್ರುಮಾಃ |
ಗತಾ ನಿರ್ದಗ್ಧಸರ್ವಸ್ವಾ ಗೃಹಸ್ಥಾ ಇವ ದೀನತಾಂ || ೪೦ ||

ಮಾತಾಪಿತೃವಿನಿರ್ಮುಕ್ತಾ ಬಾಲಕಾಸ್ತಿಮಿರಾವಲೀಂ |
ಮಗ್ನಂತೋಽಂಗೇಷು ರಥ್ಯಾಸು ಕುಡ್ಯಪಾತೇನ ಹಾ ಹತಾಃ || ೪೧ ||

ವಾತವಿದ್ರಾವಿತಾತ್ತ್ರಸ್ಯನ್ಕರಿಣ್ಯೋ ರಣಮೂರ್ಧನಿ |
ಪತದಂಗಾರಕಾಗಾರಭಾರಿಣಃ ಕಟುಕೂಜಿತಂ || ೪೨ ||

ಹಾ ಕಷ್ಟಮುಸಿನಿರ್ಭಿನ್ನೇ ಸ್ಕಂಧೇ ಸನ್ನದೃಢೋಲ್ಮುಕೇ |
ಪತಿತೋ ಯಂತ್ರಪಾಷಾಣಃ ಪುರುಷಸ್ಯಾಶನಿರ್ಯಥಾ || ೪೩ ||

---

೩೯. ವೃಕ್ಷಗಳು ಸ್ತಂಭಗಳಾಗಿ ನಮ್ಮನ್ನು ಕಟ್ಟುವುವು ಎಂಬ ಕೋಪದಿಂದ ವೃಕ್ಷಪಂಕ್ತಿಗಳನ್ನೇ ಆನೆಗಳು ಕಟಕಟ ಎಂದು ಸಚೀತ್ಕಾರವಾಗಿ ಮುರಿಯುತ್ತಿರುವುವು.

೪೦. ಹೂವು ಹಣ್ಣುಗಳಿಂದ ಮನೋಹರವಾಗಿದ್ದ ಗೃಹದ್ರುಮಗಳು ಎಲ್ಲವೂ ಹೋಗಲು ಮನೆ ಸುಟ್ಟುಕೊಂಡು ನಿರ್ಗತಿಕರಾದವರಂತೆ ಆಗಿ, ನೋಡಿದರೆ ಅಯ್ಯೋ ಎನ್ನುವಂತಿರುವುವು.

೪೧. ಮಾತಾಪಿತೃವಿಹೀನರಾದ ಬಾಲಕರು ತಲೆಮರೆಸಿಕೊಳ್ಳಬೇಕೆಂದು ನೆರಳನ್ನು ಹುಡುಕುತ್ತ ರಾಜಬೀದಿಯಲ್ಲಿ ಬರುತ್ತಿರುವಾಗ ಗೋಡೆಯು ಬಿದ್ದು ಅವರು ಹತರಾದರು.

೪೨. ಉರಿಯುತ್ತಿರುವ ಮನೆಯ ಮೇಲುಛಾವಣಿಗಳನ್ನು ಗಾಳಿಯು ಹಾರಿಸಿಕೊಂಡು ಬರುತ್ತಿರುವುದನ್ನು ಕಂಡು ರಣಭೂಮಿಯಲ್ಲಿದ್ದ ಹೆಣ್ಣಾನೆಗಳು ಹೆದರಿ ಓಡುತ್ತಿರುವುವು.

೪೩. ಖಡ್ಗ ನಿರ್ಭಿನ್ನವಾಗಿದ್ದ ಹೆಗ್ಗತ್ತಿನ ಮೇಲೆ ಭಾರಿಯ ಕೊಳ್ಳಿಯೊಂದು ಬಿದ್ದು ಮುರಿಯುವಷ್ಟರಲ್ಲಿ ಕವಣೆಯ ಕಲ್ಲೊಂದು ಬಂದು ಸಿಡಿಲಿನ ಹಾಗೆ ಈ ಮನುಷ್ಯನ ಮೇಲೆ ಬಿತ್ತು.

ಗವಾಶ್ವಮಹಿಷೇಭೋಷ್ಟ್ರಶ್ವಶೃಗಾಲೈಡಕೈರಹೋ |
ಘೋರೈ ರಣಮಿವಾರಬ್ಧಂ ಮಾರ್ಕರೋಧಕಮಾಕುಲೈಃ || ೪೪ ||

ಪಟ್ಟೈಃ ಪಟಪಟಾಶಬ್ದ ಜಲಜಾಲಾಲಿಮಾಲಿತೈಃ |
ಆಕ್ರಂದಂತ್ಯಃ ಸ್ತ್ರಿಯೋ ಯಾಂತಿ ಸ್ಥಲಪದ್ಮಾಚಿತಾ ಇವ || ೪೫ ||

ಸ್ತ್ರೀಣಾಂ ಜ್ವಾಲಾಲವಾಃ ಪಶ್ಯ ಲಿಹಂತ್ಯಲಕವಲ್ಲರೀಃ |
ಕುರ್ವಂತೋಽಶೋಕಪುಷ್ಪಾಭಾಂ ಕರಭಾ ಇವ ಪನ್ನಗೀಃ || ೪೬ ||

ಹಾ ಹಾ ಹರಿಣಶಾವಾಕ್ಷ್ಯಾಃ ಪಕ್ಷ್ಮಲಕ್ಷಣಪಕ್ಷ್ಮಸು |
ಕುಮಾರ್ಗೇಷ್ವಿವ ವಿಶ್ರಾಂತಿಮೇತಿ ಕಾರ್ಶಾನವೀ ಶಿಖಾ || ೪೭ ||

ದಹ್ಯಮಾನೋ ವಿನಿರ್ಯಾತಿ ನ ಕಲತ್ರಂ ವಿನಾ ನರಃ |
ಅಹೋ ಬತ ದುರುಚ್ಛೇದಾಃ ಪ್ರಾಣಿನಾಂ ಸ್ನೇಹವಾಗುರಾಃ || ೪೮ ||

---

೪೪. ಒಂದು ಕಡೆ, ಹಸು, ಕುದುರೆ, ಎಮ್ಮೆ, ಆನೆ, ಒಂಟೆ, ನಾಯಿ, ನರಿ, ಟಗರುಗಳೆಲ್ಲವೂ ದಾರಿಗೆ ಅಡ್ಡವಾಗಿ ನಿಂತು ಯುದ್ಧವನ್ನು ಘೋಷಿಸುವಂತಿರುವುವು.

೪೫. ಅಳುತ್ತಿರುವ ಹೆಂಗುಸರ ಬಟ್ಟೆಗಳು ಪಟಪಟನೆಂದು ಶಬ್ದಮಾಡುತ್ತಿರಲು, ಕಣ್ಣೀರಿನ ಬಿಂದುಗಳೆಂಬ ದುಂಬಿಗಳು ಸುತ್ತಿಕೊಂಡಿರುವ ಸ್ಥಲಪದ್ಮಿನಿಯರೋ ಎಂಬಂತಿರುವುದು.

೪೬. ಮತ್ತೊಂದು ಕಡೆಯಲ್ಲಿ, ನೋಡು, ಆನೆಮರಿಗಳು ಕೊಂಬೆಗಳನ್ನು ಬಗ್ಗಿಸಿಕೊಳ್ಳುವಂತೆ ಅಶೋಕ ಪುಷ್ಪಗಳಂತೆ ಕೆಂಪಾಗಿರುವ ಸಣ್ಣ ಸಣ್ಣ ಉರಿಗಳು ಹೆಂಗುಸರ ಮುಂಗುರುಳುಗಳನ್ನು ಮುಟ್ಟುತ್ತಿರುವುವು*

೪೭. ಈ ಹರಿಣಶಾಬಾಕ್ಷಿಯ ಮನೋಹರವಾದ ರೆಪ್ಪೆಗಳಲ್ಲಿಯೂ ಅಗ್ನಿಶಿಖೆಯು ಕುಮಾರ್ಗಗಳಲ್ಲಿ ಹೇಗೋ ಹಾಗೇ ಒಂದೇ ಗಳಿಗೆ ನಿಂತಿರುವುದು.

೪೮. ತಾನು ಬೆಂಕಿಗೆ ಸಿಕ್ಕಿದ್ದರೂ ಇಲ್ಲೊಬ್ಬನು ಹೆಂಡಿತಿಯನ್ನು ಬಿಟ್ಟು

---

*ಪನ್ನಗೀಃ—ಪತಿತಂ ಯಥಾತಥಾಗಚ್ಛಂತೀತಿ ಪನ್ನಗ್ಯಃ ತಾಃ — ಅವಘುಗ್ನಾಃ ವೃಕ್ಷಶಾಖಾ ಇತ್ಯರ್ಥಃ — ತಾ. ಪ್ರ.

ಕರೀ ರಭಸನಿರ್ಲೂನಜ್ವಲದಂಗಾರಪಾದಪಃ |
ಪ್ಲುಷ್ಟಪುಷ್ಕರಕಃ ಕೋಪಾನ್ಮಗ್ನಃ ಪುಷ್ಕರದಂ ಸರಃ || ೪೯ ||

ಧೂಮೋಽಂಬುದಪದಂ ಪ್ರಾಪ್ಯ ವಿಲೋಲಾಂತಸ್ತಡಿಲ್ಲತಃ |
ಜ್ವಲದಂಗಾರನಾರಾಚನಿಕರಂ ಪರಿವರ್ಷತಿ || ೫೦ ||

ದೇವ ಧೂಮಸ್ಫುರದ್ವಹ್ನಿಕಣ ಆವರ್ತವೃತ್ತಿಮಾನ್ |
ಸ್ಥಿತ ಆಪೀಡವಾನ್ ವ್ಯೋಮ್ನಿ ರತ್ನಪೂರ್ಣ ಇವಾರ್ಣವಃ || ೫೧ ||

ಗೌರಮಂಬರಮಾಭಾತಿ ಜ್ವಾಲಾಶಿಖರತೇಜಸಾ |
ಮೃತ್ಯುನೇವೋತ್ಸವೇ ದತ್ತಃ ಕುಂಕುಮಾಕ್ತಕರಂಡಕಃ || ೫೨ ||

ಅಹೋ ನು ವಿಷಮಂ ಚೇದಂ ವರ್ತತೇ ವೃತ್ತವರ್ಜಿತಂ |
ಧ್ರಿಯಂತೇ ರಾಜನಾರ್ಯೋಽಪಿ ವೈರಿವೀರೈರುದಾಯುಧೈಃ || ೫೩ ||

ಹೋಗಲಾರದೆ ಇರುವನು. ಪ್ರಾಣಿಗಳಿಗೆ ಸ್ನೇಹವೆಂಬ ಬಲೆಯು ಭದ್ರವಾಗಿರುವುದು.

೪೯. ಆನೆಯೊಂದು ಉರಿಯುತ್ತಿರುವ ಮರವನ್ನು ಕೀಳಲು ಹೋಗಿ ತನ್ನ ಪುಷ್ಕರ (ಸೊಂಡಿಲು ತುದಿ) ವು ಸುಟ್ಟುಹೋಗಲು ಪುಷ್ಕರ (ನೀರನ್ನು ಕೊಡುವ) ವಾದ ಸರಸ್ಸಿಗೆ ಕೋಪದಿಂದ ಧುಮುಕಿರುವುದು.

೫೦. ಧೂಮವು ಮೇಘಮಂಡಲದವರೆಗೂ ಹೋಗಿ, ಮಿಂಚುಗಳನ್ನು ಒಳಗಿಟ್ಟುಕೊಂಡು ಉರಿಯುತ್ತಿರುವ ಅಗ್ನಿಬಾಣ ಸಮೂಹಗಳನ್ನು ಕರೆಯುತ್ತಿರುವುದು.

೫೧. ಪ್ರಭುವೆ, ಹೊಗೆಯು ಕಿಡಿಗಳೆಂಬ ತುಂತುರುಗಳನ್ನೆಸೆಯುತ್ತ, ಸುಳಿಸುಳಿಯಾಗಿ ಸುತ್ತುತ್ತ ಎಲ್ಲವನ್ನೂ ಆಕ್ರಮಿಸಿಕೊಂಡು ಆಕಾಶದಲ್ಲಿ ರತ್ನಪೂರ್ಣವಾದ ಸಮುದ್ರಂತೆ ಇರುವುದು.

೫೨. ಜ್ವಾಲಾಶಿಖರಗಳಿಂದ ಗೌರವರ್ಣವಾಗಿ ಆಕಾಶವು ಮೃತ್ಯುವು ಓದಿಸಿಕೊಟ್ಟಿರುವ ಕುಂಕುಮದ ಭರಣಿಯೋ ಎಂಬಂತಿರುವುದು.

೫೩. ವೈರಿವೀರರು ಆಯುಧಧಾರಿಗಳಾಗಿ ಬಂದು ರಾಜನಾರಿಯರನ್ನೂ ಹೊತ್ತುಕೊಂಡು ಹೋಗುತ್ತಿರುವರು. ಇದೆಂತಹ ಅನ್ಯಾಯ! ಎಂತಹ ಕಷ್ಟ!

ಲೋಲಸ್ರಗ್ದಾಮಕುಸುಮೈರ್ಮಾರ್ಗಪ್ರಾಕಾರಕಾರಕೈಃ |
ಅರ್ಧನಿರ್ದಗ್ಧಕಬರೀಕೀರ್ಣವಕ್ಷಸ್ಥಲಸ್ತನಾಃ || ೫೪ ||

ಆಲೋಲಾಂಬರಸಂಲಕ್ಷ್ಯನಿತಂಬಜಘನಸ್ಥಲಾಃ |
ಪತನ್ಮಾಣಿಕ್ಯವಲಯವಲಿತಾವನಿಮಂಡಲಾಃ || ೫೫ ||

ಭಿನ್ನಹಾರಲತಾಜಾಲವಿಕೀರ್ಣಾಮಲಮೌಕ್ತಿಕಾಃ |
ದೃಷ್ಟಾದೃಷ್ಟಸ್ತನಶ್ರೇಣೀಪಾರ್ಶ್ವೋದ್ಯತ್ಕನಕಪ್ರಭಾಃ || ೫೬ ||

ಕುರರೀಕರ್ಕಶಾಕ್ರಂದ ಮಂದೀಕೃತರಣಾರವಾಃ |
ಧಾರಾವಾಹಾಸ್ರುತಾರಾವಭಿನ್ನ ಪಾರ್ಶ್ವವಿಚೇತನಾಃ || ೫೭ ||

ರಕ್ತಕರ್ದಮಬಾಷ್ಪಾಂಬುಕ್ಲಿನ್ನಗ್ರಂಥಿತವಾಸಸಃ |
ಭುಜಮೂಲಾರ್ಪಿತಭುಜೈರ್ನೀಯಮಾನಾ ಬಲಾನ್ನೃಭಿಃ || ೫೮ ||

---

೫೪. ಮುಡಿಯಲ್ಲಿರುವ ಮಾಲೆಗಳ ಕುಸುಮಗಳು ಮಾರ್ಗಪ್ರಾಕಾರಗಳಲ್ಲೆಲ್ಲ ಉದುರಿರುವುವು. ಅವರ ಮುಡಿಗಳು ಅರ್ಧಾರ್ಧವಾಗಿ ಉರಿದು ಆ ಮೊಂಡ ಕೂದಲುಗಳುಳ್ಳ ಅವರ ವಕ್ಷಸ್ಥಲಗಳಲ್ಲಿಯೂ ಸ್ತನಗಳಲ್ಲಿಯೂ ಒದ್ದಾಡುತ್ತಿರುವುವು.

೫೫. ಉಟ್ಟಿರುವ ಬಟ್ಟೆಗಳು ಜಾರಿ ನಿತಂಬಗಳೂ ಜಘನಗಳೂ ಕಾಣಿಸುತ್ತಿರುವುವು.

೫೬. ಕತ್ತಿನ ಹಾರಗಳು ಕಿತ್ತು ಹೋಗಿ ಉತ್ತಮವಾದ ಮುತ್ತುಗಳು ಎರಚಿರುವುವು. ಆ ಸ್ತನಗಳು ಒಂದು ಸಲ ಕಂಡು ಇನ್ನೊಂದು ಸಲ ಕಾಣದಿರುವಾಗ ಆ ಪಕ್ಕದ ಕನಕ ಪ್ರಭೆಯು ಹೊಳೆಯುವುದು.

೫೭. ಹೆಂಗುಸರು ಕುರರಿಗಳಂತೆ ಅಳುತ್ತಿರಲು ರಣರಂಗದ ಗದ್ದಲವೂ ಮುಚ್ಚಿ ಹೋಗಿರುವುದು. ಒಂದೇ ಸಮನಾಗಿ ಅರಿಚಿಕೊಂಡು ಪಾರ್ಶ್ವ (ಅಳ್ಳೆ) ಒಡೆದು ಸತ್ತು ಬಿದ್ದಿರುವರು.

೫೮. ರಕ್ತಕರ್ದಮ (ಕೆಸರು) ದಿಂದಲೂ ಬಾಷ್ಪಾಂಬುವಿನಿಂದಲೂ ನೆನೆದು, ಉಟ್ಟಿದ್ದ ಸೀರೆಯ ಗಂಟು ಜಾರಿ ಹೋಗಿರಲು, ಅವರನ್ನು ಗಂಡುಸರು ಕಂಕುಳಿಗೆ ಕೈಹಾಕಿ ಬಲವಂತವಾಗಿ ಎಳೆದುಕೊಂಡು ಹೋಗುತ್ತಿರುವರು.

ಕ ಇವಾಸ್ಮಿ ಪರಿತ್ರಾತಾ ಸ್ಯಾದಿತ್ಯಾದೀನವೀಕ್ಷಿತೈಃ ।
ಉತ್ಪಲಾಲೀವ ವರ್ಷದ್ಭಿಃ ಪರಿರೋದಿತಸೈನಿಕಾಃ ॥ ೫೯ ॥

ಮೃಣಾಲಕೋಮಲಾಚ್ಛೋರುಮೂಲಜಾಲೈಃ ಸುನಿರ್ಮಲೈಃ ।
ಸ್ವಚ್ಛಾಂಬರತಲಾಲಕ್ಷ್ಯೈರಾಕಾಶನಲಿನೀನಿಭಾಃ ॥ ೬೦ ॥

ಆಲೋಲಮಾಲ್ಯವಸನಾಭರಣಾಂಗರಾಗಾ
ಬಾಷ್ಪಾಕುಲಾತತಚಲಾಲಕವಲ್ಲರೀಕಾಃ ।
ಆನಂದಮಂದರ ನಿರಂತರಮಥ್ಯಮಾನಾತ್
ಕಾಮಾರ್ಣವಾತ್ಸಮುದಿತಾ ಇವ ರಾಜಲಕ್ಷ್ಮ್ಯಃ ॥ ೬೧ ॥

ಇತ್ಯಾರ್ಷೇ ಶ್ರೀ ವಾಸಿಷ್ಠಮಹಾರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿಪ್ರಕರಣೇ
"ಅಗ್ನಿದಗ್ಧಗೃಹಾದಿವರ್ಣನಂ" ನಾಮ ತ್ರಿಚತ್ವಾರಿಂಶಃ ಸರ್ಗಃ

---

೫೯. ನಮ್ಮನ್ನು ಕಾಪಾಡುವನಾರು ? ಎಂದು ದೀನರಾಗಿ ಸುತ್ತಲೂ ನೋಡುತ್ತ, ಉತ್ಪಲಗಳ ಮಳೆಗರೆಯುತ್ತಿರುವರೋ ಎಂಬಂತೆ ಅಳುತ್ತ ಸೈನಿಕರಿಗೂ ದುಃಖವುಂಟುಮಾಡುತ್ತ ಇರುವರು.

೬೦. ಶುಭ್ರವಾದ ಉಟ್ಟುಬಟ್ಟೆಯೊಳಗಡೆಯಿಂದ ಮೃಣಾಳ ಕೋಮಲಗಳೂ ನಿರ್ಮಲಗಳೂ ಆದ ಊರು ಮೂಲಗಳು ಕಾಣುತ್ತಿರಲು (ಈ ಅಂತಃಪುರವನಿತೆಯರು) ಆಕಾಶ ಕಮಲ ಲತೆಗಳಂತೆ ಕಾಣುವರು.

೬೧. ಮಾಲೆ, ವಸ್ತ್ರ, ಆಭರಣ. ಅಂಗರಾಗಗಳೆಲ್ಲವೂ ಅಸ್ತವ್ಯಸ್ತವಾಗಿ, ಕಣ್ಣೀರು ಸುರಿಸುತ್ತ, ಮುಂಗುರುಳುಗಳೆಲ್ಲ ಚೆಲ್ಲಾಡಿ ಹೋಗಿರಲು, ಕಾಮ ಸಮುದ್ರವನ್ನು ಆನಂದ ಮಂದಿರದಿಂದ ನಿರಂತರವಾಗಿ ಮಥಿಸಿದಾಗ ಹುಟ್ಟಿದ ರಾಜಲಕ್ಷ್ಮಿಯರೋ ಎನ್ನುವಂತಿರುವುದು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಅಗ್ನಿದಗ್ಧಗೃಹಾದಿವರ್ಣನ" ಎಂಬ
ನಲವತ್ತ ಮೂರನೆಯ ಸರ್ಗವು.

ಚತುಶ್ಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಏತಸ್ಮಿನ್ನಂತರೇ ರಾಜಮಹಿಷೀ ಮತ್ತಯೌವನಾ ।
ತದ್ವಿವೇಶ ಗೃಹಂ ಲಕ್ಷ್ಮೀರಿವ ಪಂಕಜಕೋಟರಂ ॥ ೧ ॥

ಆಲೋಲಮಾಲ್ಯವಸನಾ ಭಿನ್ನಹಾರಲತಾಕುಲಾ ।
ಅನುಯಾತಾ ವಯಸ್ಯಾಭಿರ್ದಾಸೀಭಿರ್ಭಯವಿಹ್ವಲಾ ॥ ೨ ॥

ಚಂದ್ರಾನನಾವದಾತಾಂಗೀ ಶ್ವಾಸೋತ್ಕಂಪಿಪಯೋಧರಾ ।
ತಾರಕಾಕಾರದಶನಾ ಸ್ಥಿತಾ ದ್ಯೌರಿವ ರೂಪಿಣೀ ॥ ೩ ॥

ಅಥ ತಸ್ಯಾ ವಯಸ್ಯೈಕಾ ರಾಜಾನಂ ತಂ ವ್ಯಜಿಜ್ಞಪತ್ ।
ಭೂತಸಂಗ್ರಾಮಸಂರಬ್ಧಮಮರೇಂದ್ರಮಿವಾಪ್ಸರಾಃ ॥ ೪ ॥

ನಲವತ್ತನಾಲ್ಕನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :—ಇಷ್ಟರಲ್ಲಿ ಲಕ್ಷ್ಮಿಯು ಕಮಲಾಲಯವನ್ನು ಪ್ರವೇಶಿಸುವಂತೆ, ಯೌವನೋನ್ಮತ್ತಳಾದ ರಾಜಮಹಿಷಿಯು ಅಲ್ಲಿಗೆ ಬಂದಳು.

೨. ಅವಳ ಮಾಲೆಗಳೂ ವಸ್ತ್ರಗಳೂ ಕದಲಿದ್ದುವು. ಹಾರಲತೆಯು ಭಿನ್ನವಾಗಿ ಅಳುತ್ತಿತ್ತು. ಸಖಿಯರೂ ದಾಸಿಯರೂ ಹಿಂದೆ ಬರುತ್ತಿದ್ದರು. ಅವಳು ಭಯದಿಂದ ವಿಹ್ವಲಳಾಗಿದ್ದಳು.

೩. (ಅವಳು) ಚಂದ್ರವದನೆಯು ಸ್ವಚ್ಛಶ್ವಾಸದಿಂದ ಕಂಪಿಸುತ್ತಿರುವ ಸ್ತನಮಂಡಲವೂ, ನಕ್ಷತ್ರಗಳಂತೆ ಹೊಳೆಯುವ ಹಲ್ಲುಗಳೂ ಉಳ್ಳವಳಾಗಿ ರೂಪುಗೊಂಡ ಆಕಾಶವೋ ಎಂಬಂತಿದ್ದಳು.

೪. ಅವಳ ಸಖಿಯರಲ್ಲೊಬ್ಬಳು ಭೂತಸಂಗ್ರಾಮವು ಆರಂಭವಾಯಿತೆಂದು ಇಂದ್ರನಿಗೆ ವಿಜ್ಞಾಪಿಸುವ ಅಪ್ಸರೆಯಂತೆ, ರಾಜನಿಗೆ ವಿಜ್ಞಾಪಿಸಿದಳು.

ದೇವ ದೇವೀ ಸಹಾಸ್ಮಾಭಿಃ ಪಲಾಯ್ಯಾಂತಃಪುರಾಂತರಾತ್ |
ಶರಣಂ ದೇವಮಾಯಾತಾ ವಾತಾರ್ತೇವ ಲತಾ ದ್ರುಮಂ || ೫ ||

ರಾಜ್ಞ ದಾರಾ ಹೃತಾಸ್ತಾಸ್ತೇ ಬಲವದ್ಭಿರುದಾಯುಧೈಃ |
ಊರ್ಮಿಜಾಲೈರ್ಮಹಾಬ್ಧೀನಾಂ ತೀರದ್ರುಮಲತಾ ಇವ || ೬ ||

ಅಂತಃಪುರಾಧಿಪಾಃ ಸರ್ವೇ ಪಿಷ್ಟಾಃ ಶತ್ರುಭಿರುದ್ಧತೈಃ |
ಅಶಂಕಿತಾಭಿಪತಿತೈರ್ವಾತೈರಿವ ವರದ್ರುಮಾಃ || ೭ ||

ದೂರೇಣಾಶಂಕಮಾಯಾತೈಃ ಪರೈರ್ನಃ ಪುರಮಾಹೃತಂ |
ರಾತ್ರೌ ವರ್ಷಾಸ್ವಿವೋದ್ಘೋಷೈಃ ಕಮಲಾನೀವ ವಾರಿಭಿಃ || ೮ ||

ಧೂಮಂ ವರ್ಷದ್ಭಿರುನ್ನಾದೈಃ ಲೇಲಿಹಾನೋಗ್ರಹೇತಿಭಿಃ |
ವಹ್ನಿಭಿರ್ನಃ ಪರಂ ಪ್ರಾಪ್ತಂ ಪರಯೋಧೈಶ್ಚ ಭೂರಿಭಿಃ || ೯ ||

---

೫. ಪ್ರಭುವೆ, ಗಾಳಿಗೆ ಹೆದರಿದ ಲತೆಯು ಮರವನ್ನಾಶ್ರಯಿಸುವಂತೆ, ಅಂತಃಪುರದಿಂದ ದೇವಿಯು ನಮ್ಮೆಲ್ಲರೊಡನೆ ಓಡಿಬಂದು ನಿನ್ನನ್ನು ಶರಣು ಹೊಕ್ಕಿರುವಳು.

೬. ಬಲವಂತರೂ ಆಯುಧಧಾರಿಗಳೂ ಆದ (ಶತ್ರುಗಳು), ಮಹಾಂಬುಧಿಯ ತರಂಗಮಾಲೆಗಳೇ ತೀರದಲ್ಲಿರುವ ದ್ರುಮಲತೆಗಳನ್ನು ಹೊಡೆದುಕೊಂಡು ಹೋಗುವಂತೆ ಎಲೈ ರಾಜನೆ, ನಿನ್ನ ಹೆಂಡಿತಿಯರನ್ನು ಹೊತ್ತುಕೊಂಡು ಹೋದರು.

೭. ಬಿರುಗಾಳಿಯಿಂದ ದೊಡ್ಡ ಮರಗಳೂ ಹಾಳಾಗುವಂತೆ, ಅಂತಃಪುರಪಾಲಕರೆಲ್ಲರೂ ಉದ್ಧತರಾಗಿ, ನಿಶ್ಶಂಕೆಯಿಂದ ಬಂದು ಮೇಲೆ ಬಿದ್ದ ಶತ್ರುಗಳಿಂದ ಹತರಾದರು.

೮. ವರ್ಷಾಕಾಲದ ರಾತ್ರಿಯಲ್ಲಿ ಮೊರೆಯುತ್ತ ಬಂದ ಪ್ರವಾಹಗಳಿಂದ ಕಮಲಗಳು ಹಾಳಾಗುವಂತೆ ದೂರದಿಂದ ನಿರ್ಭಯವಾಗಿ ಬಂದು ಮೇಲೆ ಬಿದ್ದ ಶತ್ರುಗಳಿಂದ ನಮ್ಮ ಪುರವು ಆಕ್ರಾಂತವಾಯಿತು.

೯. ಭಯಂಕರವಾಗಿ ಮೊರೆಯುತ್ತ ಎದ್ದೆದ್ದು ಕುಣಿಯುತ್ತಿರುವ ಜ್ವಾಲೆಗಳುಳ್ಳ, ಧೂಮವನ್ನು ಕಾರುತ್ತಿರುವ ಬೆಂಕಿಗಳಿಂದ ಸುಟ್ಟು, ಅಸಂಖ್ಯಾತರಾದ ಪರಯೋಧರು ನಮ್ಮ ಪುರವನ್ನು ಸಾಧಿಸಿದರು.

ಪರಿವಾರೈರ್ವಿಲಾಸಿನ್ಯೋ ದೇವ್ಯ ಆಹೃತ್ಯ ಮೂರ್ಧಜೈಃ |
ಆಕ್ರಂದಂತ್ಯೋ ಬಲಾನ್ನೀತಾಃ ಕುರರ್ಯ ಇವ ಧೀವರೈಃ || ೧೦ ||

ಇತಿ ನೋ ಯೇಯಮಾಯಾತಾ ಶಾಖಾ ಪ್ರಸರಶಾಲಿನೀ |
ಆಪತ್ತಾಮಲಮುದ್ಧರ್ತುಂ ದೇವಸ್ಯೈವಾಸ್ತಿ ಶಕ್ತತಾ || ೧೧ ||

ಇತ್ಯಾಕರ್ಣ್ಯಾವಲೋಕ್ಯಾಸೌ ದೇವ್ಯೌ ಯುದ್ಧಾಯ ಯಾಮ್ಯತಃ |
ಕ್ಷಮ್ಯತಾಂ ಮಮ ಭಾರ್ಯೇಯಂ ಯುಷ್ಮತ್ಪಾದಾಬ್ಜಷಟ್‌ಪದೀ || ೧೨ ||

ಇತ್ಯುಕ್ತ್ವಾ ನಿರ್ಯಯೌ ರಾಜಾ ಕೋಪಾರುಣಿತಲೋಚನಃ |
ಮತ್ತೇಭನಿರ್ಭಿನ್ನವನ ಕಂದರಾದಿವ ಕೇಸರೀ || ೧೩ ||

ಲೀಲಾ ಲೀಲಾಂ ದದರ್ಶಾಥ ಸ್ವಾಕಾರಸದೃಶಾಕೃತಿಂ |
ಪ್ರತಿಬಿಂಬಮಿವಾಯಾತಾಮಾದರ್ಶೇ ಚಾರುದರ್ಶನಾಂ || ೧೪ ||

---

೧೦. ಬೇಡರು ಕುರರಿಗಳನ್ನು ಹಿಡಿದುಕೊಂಡು ಹೋಗುವಂತೆ, ವಿಲಾಸಿನಿಯರಾದ ದೇವಿಯರು ಅಳುತ್ತಿದ್ದರೂ ಬಲವಂತವಾಗಿ ಕೇಶಗಳನ್ನು ಹಿಡಿದು ಶತ್ರುಪರಿವಾರದವರು ಎಳೆದುಕೊಂಡು ಹೋದರು.

೧೧. ಹೀಗೆ ನಮಗೆ ಒದಗಿರುವ ಶಾಖಾಪ್ರಸರ ಶಾಲಿನಿಯಾದ ಈ ಆಪತ್ತಿನಿಂದ ನಮ್ಮನ್ನು ಕಾಪಾಡಲು ದೇವ, ಸಾಮರ್ಥ್ಯವಿರುವುದು ತಮಗೊಬ್ಬರಿಗೇ !

೧೨. ಹೀಗೆಂದು ಕೇಳಿದ ರಾಜನು ದೇವಿಯನ್ನು ಕಂಡು "ನಾನು ಯುದ್ಧಕ್ಕೆ ಹೋಗುವೆನು. (ನನ್ನ ಅಪರಾಧವನ್ನು) ಕ್ಷಮಿಸಿ. ಇವಳು ನನ್ನ ಹೆಂಡಿತಿ. ನಿಮ್ಮ ಪಾದಕಮಲಗಳ ದುಂಬಿಯಿವಳು."

೧೩. ಎಂದು ಹೇಳಿ ರಾಜನು ಕೋಪದಿಂದ ಕೆಂಡವಾದ ಕಣ್ಣುಗಳುಳ್ಳವನಾಗಿ, ಮದ್ದಾನೆಯು ಮುರಿದ ಕಾಡಿನ ಕಂದರದಿಂದ ಕೇಸರಿಯು ಹೊರಡುವಂತೆ ಹೊರಟನು.

೧೪. ಮೊದಲಿನ ಲೀಲೆಯು ಎರಡನೆಯ ಲೀಲೆಯನ್ನು ನೋಡಿದಳು. ಅವಳು ತನ್ನಂತೆಯೇ ಇದ್ದಳು. ಕನ್ನಡಿಯಿಂದ ಇಳಿದು ಬಂದ ತನ್ನ ರೂಪವೋ ಎಂಬಂತಿರುವ ಆ ಮನೋಹರಾಂಗಿಯನ್ನು ಕಂಡಳು.

ಪ್ರಬುದ್ಧ ಲೀಲೋವಾಚ :—

ಕಿಮಿದಂ ದೇವಿ ಹೇ ಬ್ರೂಹಿ ಕಸ್ಮಾದಿಯಮಹಂ ಸ್ಥಿತಾ |
ಯಾ ಸಾಽಭವಮಹಂ ಪೂರ್ವಂ ಕಥಂ ಸೇಯಮಹಂ ಸ್ಥಿತಾ || ೧೫ ||

ಮಂತ್ರಿಪ್ರಭೃತಯಃ ಪೌರಾ ಯೋಧಾಃ ಸಬಲವಾಹನಾಃ |
ಸರ್ವ ಏವ ತ ಏವೇಮೇ ಸ್ಥಿತಾಸ್ತತ್ರ ತಥೈವ ತೇ || ೧೬ ||

ತತ್ರಾಪೀಹ ಚ ಹೇ ದೇವಿ ಸರ್ವೇ ಕಥಮವಸ್ಥಿತಾಃ |
ಬಹಿರಂತಶ್ಚ ಮುಕುರೇ ಇವೈತೇ ಕಿಂ ಪ್ರಚೇತನಾಃ || ೧೭ ||

ಶ್ರೀದೇವ್ಯುವಾಚ :—

ಯಥಾಜ್ಞಪ್ತಿರುದೇತ್ಯಂತಸ್ತಥಾನುಭವತಿ ಕ್ಷಣಾತ್ |
ಚಿತಿಶ್ಚೇತ್ಯಾರ್ಥತಾಮೇತಿ ಚಿತ್ತಂ ಚಿತ್ತಾರ್ಥತಾಮಿವ || ೧೮ ||

ಯಾದೃಗರ್ಥಂ ಜಗದ್ರೂಪಂ ತತ್ರೈವೋದೇತಿ ತತ್ಕ್ಷಣಾತ್ |
ನ ದೇಶಕಾಲದೀರ್ಘತ್ವಂ ನ ವೈಚಿತ್ರ್ಯಂ ಪದಾರ್ಥಜಂ || ೧೯ ||

---

೧೫. ಪ್ರಬುದ್ಧ ಲೀಲೆಯು ಹೇಳಿದಳು :—ದೇವಿ, ಇದೇನಿದು ? ಯಾವ ಕಾರಣದಿಂದ ನಾನು ಇವಳಾಗಿರುವೆನು ? ಅಲ್ಲಿ ಬ್ರಾಹ್ಮಣಿಯಾಗಿದ್ದ ನಾನು ಈಗ ಈ ಲೀಲೆಯೆಂತಾದೆನು ? ಹೇಳು.

೧೬. ಮಂತ್ರಿಮುಖ್ಯರು, ಪೌರರು, ಯೋಧರು, ಅವರವರ ಬಲವಾಹನಗಳು ಎಲ್ಲವೂ ಅವರೇ ! ಅಲ್ಲಿರುವಂತೆಯೇ ಇರುವರಲ್ಲ !

೧೭. ಅಲ್ಲಿ, ಇಲ್ಲಿ, ಎರಡು ಕಡೆಯೂ ನಾವೆಲ್ಲರೂ ಇರುವುದೆಂತು ? ಕನ್ನಡಿಯ ಒಳಗೆ ಹೊರಗೆ ಕೂಡ ಸಚೇತನರಾಶಿ ಇರುವುದೆಂತು ?

೧೮. ಶ್ರೀ ದೇವಿಯು ಹೇಳಿದಳು :—ಒಳಗೆ ಜ್ಞಪ್ತಿಯು ಹೇಗೆ ಉದ್ಭವಿಸುವುದೋ ಅದರಂತೆಯೇ ಹೊರಗೂ ಅದೇಕ್ಷಣದಲ್ಲಿಯೇ ಅನುಭವಕ್ಕೆ ಬರುವುದು. ಚಿತ್ತವು ಚಿತ್ತಾರ್ಥವಾಗುವಂತೆ, ಚಿತಿಯು ಚೇತ್ಯಾರ್ಥತ್ವವನ್ನು ಹೊಂದುವುದು.

೧೯. ಆ ಚಿತ್ತಿನಲ್ಲಿ ಎಂಥಹ ಅರ್ಥವು ತೋರುವುದೋ ಅದೇ ರೂಪವಾದ ಜಗತ್ತು ಅಲ್ಲಿಯೇ ಆ ಕ್ಷಣದಲ್ಲಿಯೇ ಹುಟ್ಟುವುದು. ಆದಕ್ಕೆ ದೇಶ ಕುಲ ದೀರ್ಘತ್ವವು ಬೇಕಿಲ್ಲ : ಹಾಗೆಯೇ ಪದಾರ್ಥಗಳಲ್ಲಿ ಕಾಣುವ ವೈಚಿತ್ರ್ಯವೂ

ಬಾಹ್ಯಮಾಭ್ಯಂತರಂ ಭಾತಿ ಸ್ವಪ್ನಾರ್ಥೋಽತ್ರ ನಿದರ್ಶನಂ |
ಯದಂತಃ ಸ್ವಪ್ನಸಂಕಲ್ಪಪುರಂ ಚ ಕಚನಂ ಚಿತೇಃ || ೨೦ ||

ತದೇತದ್ಬಾಹ್ಯನಾಮ್ನೈವ ಸ್ವಭ್ಯಾಸಾತ್ಸತ್ಸ್ಫುಟಂ ಸ್ಥಿತಂ |
ಯಾದೃಗ್ಭಾವೋ ಮೃತೋ ಭರ್ತಾ ತವ ತಸ್ಮಿಂಸ್ತದಾ ಪುರೇ || ೨೧ ||

ತಾದೃಗ್ಭಾವಸ್ತಮೇವಾರ್ಥಂ ತತ್ರೈವ ಸಮುಪಾಗತಃ |
ಅನ್ಯ ಏವ ಹ್ಯಮೀ ಭೂತಾಸ್ತೇಭ್ಯಸ್ತಾಸ್ತಾದೃಶಾ ಅಪಿ || ೨೨ ||

ಸದ್ರೂಪಾ ಏವ ಚೈತಸ್ಯ ಸ್ವಪ್ನಸಂಕಲ್ಪಸೈನ್ಯವತ್ |
ಅವಿಸಂವಾದಿ ಸರ್ವಾರ್ಥರೂಪಂ ಯದನುಭೂಯತೇ || ೨೩ ||

ಇರುವುದಿಲ್ಲ. ಆಭ್ಯಂತರವೇ ಬಾಹ್ಯದಲ್ಲಿಯೂ ತೋರುವುದು: ಇದು ಸರಿಯೆನ್ನಲು ಸ್ವಪ್ನಾರ್ಥವೇ ನಿದರ್ಶನವು.

(ತಾತ್ಪರ್ಯ ಪ್ರಕಾಶವು ಯಾದೃಗರ್ಥಂ....ಪದಾರ್ಥಜಂ ಇಲ್ಲಿಗೆ ಒಂದು ಶ್ಲೋಕವಾಗಿ ತೆಗೆದುಕೊಂಡಿರುವುದು ಛಂದಶ್ಶಾಸ್ತ್ರಕ್ಕನುಗುಣವಾಗಿದ್ದರೂ, ವೈಭವವು ಮುಂದಿನ ಶ್ಲೋಕದ ಪೂರ್ವಾರ್ಧವನ್ನು ತೆಗೆದುಕೊಂಡು ಒಂದು ಶ್ಲೋಕ ಮಾಡಿರುವುದು ಚೆನ್ನಾಗಿದೆಯಾಗಿ ನಾವೂ ಅದೇ ಕ್ರಮ ಹಿಡಿದಿದ್ದೇವೆ.)

೨೦. ಆ ಸ್ವಪ್ನದಲ್ಲಿ ಸ್ವಪ್ನಸಂಕಲ್ಪ ಪುರಗಳೂ ಸಹ ಚಿತಿಯ ಹೊಳೆಹುಗಳೇ!

೨೧. ಒಳಗೆ ಇದ್ದುದೇ ಸ್ವಭ್ಯಾಸಬಲದಿಂದ ಬಾಹ್ಯವೆನ್ನಿಸಿಕೊಳ್ಳುವುದು.

೨೨. ಯಾವ ಭಾವವನ್ನಿಟ್ಟುಕೊಂಡು ನಿನ್ನ ಗಂಡನು ಆಗ ಆ ಪಟ್ಟಣದಲ್ಲಿ ಮೃತನಾದನೋ ಅದೇ ಭಾವವನ್ನು ಅಲ್ಲಿಯೇ ಆಗಲೇ ಹೊಂದಿದನು.

೨೩. ಹೀಗೆಯೇ ಇತರ ಭೂತಗಳೂ ಹಾಗೆಹಾಗೆಯೇ ಆಗುವುವು. ಸ್ವಪ್ನಸಂಕಲ್ಪ ಸೈನ್ಯದಂತೆ, ಈ ರಾಜನ ಚಿತ್ತೇ ಈ ಎಲ್ಲವೂ ಆಗಿರುವುದು. ಹೀಗಾಗುವುದು ಒಬ್ಬರಿಗೇ ಅಲ್ಲ ಎಲ್ಲರಿಗೂ ಆಗುವುದು ಅನುಭವದಲ್ಲಿರುವುದು.

ತಸ್ಯ ತಾವದ್ಭ್ವದ ಕಥಂ ಕೀದೃಶೀ ವಾಪಿ ಸತ್ಯತಾ |
ಅಥವೋತ್ತರಕಾಲೇತು ಭಂಗುರತ್ವಾದವಸ್ತು ತತ್ || ೨೪ ||

ಈದೃಕ್ಚ ಸರ್ವಮೇವೇದಂ ತತ್ರ ಕಾ ನಾಸ್ತಿತಾಧಿಕಾ |
ಸ್ವಪ್ನೇ ಜಾಗ್ರದಸದ್ರೂಪಾ ಸ್ವಪ್ನೋ ಜಾಗ್ರತ್ಯಸನ್ಮಯಃ || ೨೫ ||

ಮೃತಿರ್ಜನ್ಮನ್ಯಸದ್ರೂಪಾ ಮೃತ್ಯಾಂ ಜನ್ಮಾಪ್ಯಸನ್ಮಯಂ |
ವಿಶರೇದ್ವಿಶರಾರುತ್ವಾದನುಭೂತೇಶ್ಚ ರಾಘವ || ೨೬ ||

ಏವಂ ನ ಸನ್ನಾಸದಿದಂ ಭ್ರಾಂತಿಮಾತ್ರಂ ವಿಭಾಸತೇ |
ಮಹಾಕಲ್ಪಾಂತಸಂಪತ್ತಾವಪ್ಯದ್ಯಾಥ ಯುಗೇಽನಘ || ೨೭ ||

---

೨೪. ಆದರಿಂದ ಈಗ ಕಾಣುತ್ತಿರುವ ಈ ಸ್ವಪ್ನ ಜಗತ್ತು ಸತ್ಯವೆನ್ನುವುದು ಹೇಗೆ?*

೨೫. ಜಾಗ್ರತ್ತಿನಲ್ಲಿಯೂ ಸರ್ವಜಗತ್ತೂ ಹೀಗೆಯೇ ಇರುವುದರಿಂದ ಜಾಗ್ರತ್ತಿನ ಜಗತ್ತಿನಲ್ಲಿಯೂ ಅಧಿಕತೆ ಏನೂ ಇಲ್ಲ.

(ಜಾಗ್ರತ್ತಿನಲ್ಲಿ ಸ್ವಪ್ನವೂ ಸ್ವಪ್ನದಲ್ಲಿ ಜಾಗ್ರತ್ತೂ ಇಲ್ಲ. ಅದರಿಂದ, ಒಂದು ಕಾಲದಲ್ಲಿ ಉಂಟು ಇನ್ನೊಂದು ಕಾಲದಲ್ಲಿ ಇಲ್ಲ ಎನ್ನುವುದರಿಂದ, ಎರಡೂ ಸತ್ಯವಲ್ಲ.)

೨೬. ಮರಣದಲ್ಲಿ ಜನ್ಮವಿಲ್ಲ: ಜನ್ಮದಲ್ಲಿ ಮರಣವಿಲ್ಲ. (ಹುಟ್ಟಿದುದೆಲ್ಲವೂ ವಿನಶ್ವರವೆಂಬ) ಅನುಭವವಿರುವುದರಿಂದ (ಪ್ರತಿಯೊಂದೂ) ವಿನಶ್ವರವೇ ಆದುದರಿಂದ ರಾಮ, ಎಲ್ಲವೂ ನಾಶವಾಗುವುದು.

೨೭. ಹೀಗೆ ಜಗತ್ತು ಸತ್ಯವಲ್ಲ: ಅಸತ್ಯವೂ ಅಲ್ಲ: ಭ್ರಾಂತಿಮಯವಾಗಿ ತೋರುತ್ತಿರುವುದು.

---

* ಉತ್ತರ ಕಾಲದಲ್ಲಿ ನಾಶವಾಗುವುದರಿಂದ ಅದು ಅಸತ್ಯ ಎನ್ನಬೇಕು.

ನ ಕದಾಚನ ಯನ್ನಾಸ್ತಿ ತದ್ಬ್ರಹ್ಮೈವಾಸ್ತಿ ತಜ್ಜಗತ್ |
ತಸ್ಮಿನ್ಮಧ್ಯೇ ಕಚಂತೀಮಾ ಭ್ರಾಂತಯಃ ಸೃಷ್ಟಿನಾಮಿಕಾಃ || ೨೮ ||

ವ್ಯೋಮ್ನಿ ಕೇಶೋಂಡ್ರಕಾನೀವ ನ ಕಚಂತೀವ ವಸ್ತುತಃ |
ಯಥಾ ತರಂಗಾ ಜಲಧೌ ತಥೇಮಾಃ ಸೃಷ್ಟಯಃ ಪರೇ || ೨೯ ||

ಉತ್ಪತ್ತ್ಯೋತ್ಪತ್ತ್ಯ ಲೀಯಂತೇ ರಜಾಂಸೀವ ಮಹಾನಿಲೇ|
ತಸ್ಮಾದ್ಭ್ರಾಂತಿಮಯಾಭಾಸೇ ಮಿಥ್ಯಾತ್ವಮಹಮಾತ್ಮನಿ || ೩೦ ||

ಮೃಗತೃಷ್ಣಾಜಲಚಯೇ ಕೈವಾಸ್ಥಾ ಸರ್ಗಭಸ್ಮನಿ |
ಭ್ರಾಂತಯಶ್ಚ ನ ತತ್ರಾನ್ಯಾಸ್ತಾಸ್ತದೇವ ಪರಂ ಪದಂ || ೩೧ ||

ಘನೇ ತಮಸಿ ಯಕ್ಷಾಭಾಸ್ತಮ ಏವ ನ ಯಕ್ಷಕಃ |
ತಸ್ಮಾಜ್ಜನ್ಮಮೃತಿರ್ಮೋಹೋ ವ್ಯಾಮೋಹತ್ವಮಿದಂ ತತಂ || ೩೨ ||

---

೨೮. ಇದು ಮಹಾ ಕಲ್ಪಾಂತದಲ್ಲಿಯೂ ಈಗಲೂ ಯುಗಾಂತರದಲ್ಲಿಯೂ ಎಲೌ ಅನಘೆಯೇ, ಯಾವಾಗಲೂ ಇಲ್ಲದೇ ಇರುವುದು ಅಲ್ಲದ್ದು ಯಾವುದೋ ಅದೇ ಬ್ರಹ್ಮವು. ಅದೇ ಜಗತ್ತಾಗಿ ತೋರುವುದು. ಆ ಬ್ರಹ್ಮದ ಏಕ ದೇಶದಲ್ಲಿ ಸೃಷ್ಟಿ ಎಂಬ ಹೆಸರಿನ ಭ್ರಾಂತಿಗಳು ಹೊಳೆಯುತ್ತಿರುವುವು.

೨೯–೩೦. ಪರಬ್ರಹ್ಮದಲ್ಲಿ ಈ ಸೃಷ್ಟಿಗಳು ಸಮುದ್ರದಲ್ಲಿ ಕಾಣುವ ತರಂಗಗಳ ಹಾಗೆ, ಆಕಾಶದಲ್ಲಿ ಕಾಣುವ ಕೋಶೋಂಡ್ರಕಗಳಂತೆ, ಕಂಡರೂ ವಾಸ್ತವವಾಗಿ ಇಲ್ಲ. ಬಿರುಗಾಳಿ ಬೀಸಿದಾಗ ಏಳುವ ಧೂಳಿನಂತೆ (ಈ ಜಗತ್ಸೃಷ್ಟಿಗಳು ಪರಬ್ರಹ್ಮದಲ್ಲಿ ಕಂಡು ಕಂಡು ಅಡಗುವುವು.) ಅದರಿಂದ, ತ್ವಂ, ಅಹಂ ಎಂಬುದು ಆತ್ಮನಲ್ಲಿ ಭ್ರಾಂತಿಮಯವು: ಆಭಾಸವು: ಮಿಥ್ಯೆಯು. ಮೃಗತೃಷ್ಣೆಯ ನೀರಿನಲ್ಲಿ ಎಷ್ಟು ಅಕ್ಕರೆಯೋ, ಈ ಸರ್ಗವೆಂಬ ಭಸ್ಮದಲ್ಲಿಯೂ ಅಷ್ಟೇ ಅಕ್ಕರೆಯು.

೩೧. ಆ ಪರಮಾತ್ಮದಲ್ಲಿ ಕಂಡುಬರುವ ಭ್ರಾಂತಿಗಳೂ (ಪರಮಾತ್ಮ ಭಿನ್ನವಾದ ವಸ್ತುತ್ವವುಂಟಾದವುಗಳಲ್ಲಿ. ಅವೂ ಅದೇ ಪರಮದಲ್ಲಿಯೇ ತೋರುವುವು. ಅದರಿಂದ ಅದರದೇ ಎನ್ನಬೇಕು. ಕತ್ತಲು ಘನವಾಗಿರುವಾಗ ಯಕ್ಷಭ್ರಾಂತಿಯು ಬಂದರೂ ಆ ಭ್ರಾಂತಿಗೆ ಕಾರಣವಾದುದೂ ತಮಸ್ಸೇ ಹೊರತು ತಮಸ್ಸಲ್ಲದ ಇನ್ನೊಬ್ಬ ಯಕ್ಷನಿಲ್ಲ.

೩೨. ಅದರಿಂದ ಜನನ ಮರಣವೆಂಬುದು ಮೋಹವು. ಆ ವ್ಯಾಮೋಹತ್ವವೇ ಜಗತ್ತಾಗಿ ಹರಡಿಕೊಂಡಿರುವುದು. ಮಹಾಕಲ್ಪಾಂತದಲ್ಲಿ ಈ ಜಗತ್ತೆ

ಸರ್ವಂ ತತ್ಸಮುಹಾಕಲ್ಪಂ ಶಾಂತೌ ಯದವಶಿಷ್ಯತೇ |
ನಾತಃ ಸತ್ಯಮಿದಂ ದೃಶ್ಯಂ ನ ಚಾಸತ್ಯಂ ಕದಾಚನ || ೩೩ ||

ದ್ವಯಮೇವೈತದಥವಾ ಬ್ರಹ್ಮ ತತ್ರೈವ ಸಂಭವಾತ್ |
ಆಕಾಶೇ ಪರಮಾಣ್ವಂತರ್ದ್ರವ್ಯಾದೇರಣುಕೇಽಪಿ ಚ || ೩೪ ||

ಜೀವಾಣುರ್ಯತ್ರ ತತ್ರೇದಂ ಜಗದ್ವೇತ್ತಿ ನಿಜಂ ವಪುಃ |
ಅಗ್ನಿರೌಷ್ಣ್ಯಂ ಯಥಾ ವೇತ್ತಿ ನಿಜಭಾವಕ್ರಮೋದಿತಂ || ೩೫ ||

ಪಶ್ಯತೀದಂ ತಥೈವಾತ್ಮಾ ಸ್ವಾತ್ಮಭೂತಂ ವಿಶುದ್ಧಚಿತ್ |
ಯಥಾ ಸೂರ್ಯೋದಯೇ ಗೇಹೇ ಭ್ರಮಂತಿ ತ್ರಸರೇಣವಃ || ೩೬ ||

ತಥೇಮೇ ಪರಮಾಕಾಶೇ ಬ್ರಹ್ಮಾಂಡತ್ರಸರೇಣವಃ |
ಯಥಾ ವಾಯೌ ಸ್ಥಿತಃ ಸ್ಪಂದ ಆಮೋದಃ ಶೂನ್ಯಮಂಬರೇ || ೩೭ ||

ಲ್ಲವೂ ಶಾಂತವಾದ ಮೇಲೆ ಯಾವುದು ಉಳಿಯುವುದೋ ಅದೇ ಈ ಸರ್ವದೃಶ್ಯವಾಗಿತ್ತು ಎಂದು ತಿಳಿಯಬೇಕು. *

೩೩. ಅದರಿಂದ ಈ ಜಗದ್ದೃಶ್ಯವು ಸತ್ಯವೂ ಅಲ್ಲ. ಅಸತ್ಯವೂ ಅಲ್ಲ:— ಬ್ರಹ್ಮವೇ ದೃಶ್ಯವಾಗುವುದರಿಂದ ಅದು ಸತ್ಯಾಸತ್ಯಗಳೆರಡೂ ಅಲ್ಲ.

೩೪. ಆಕಾಶವಲ್ಲಾಗಲಿ ಪರಮಾಣುವಿನಲ್ಲಾಗಲೀ, ದ್ರವ್ಯಾದಿ ಅಣುಕಗಳಲ್ಲಿಯಾಗಲಿ ಜೀವಾಣುವೆಲ್ಲೆಲ್ಲಿರುವುದೋ ಅವನ್ನೇ ತನ್ನ ಶರೀರವೆಂದು ತಿಳಿದುಕೊಳ್ಳುವುದು.

೩೫. ಅಗ್ನಿಯು ತನ್ನ ಸನ್ನಿಧಾನದಿಂದಲೇ ಹುಟ್ಟಿದ ಬಿಸಿಯಾಗಿ ಇತರರಿಂದ ಗ್ರಹಿಸಲ್ಪಡುವಂತೆ ಶುದ್ಧ ಚಿತ್ಸ್ವರೂಪನಾದ ಆತ್ಮನು ಈ ಜಗತ್ತೇ ತಾನೆಂದುಕೊಳ್ಳುವನು.

೩೬. ಸೂರ್ಯೋದಯವಾದಾಗ ಮನೆಯಲ್ಲಿ ಬೀಳುವ ಬಿಸಿಲು ಕೋಲಿನಲ್ಲಿ ತ್ರಸರೇಣುಗಳು ಹಾರಾಡುವಂತೆ, ಪರಮಾಕಾಶದಲ್ಲಿ ಬ್ರಹ್ಮಾಂಡಗಳೆಂಬ ತ್ರಸರೇಣುಗಳು ಹಾರಾಡುತ್ತಿರುವುವು.

೩೭. ವಾಯುವಿನಲ್ಲಿ ಸ್ಪಂದ, ಆಮೋದಗಳೆರಡೂ ಇರುವಂತೆ, ಅಂಬರದಲ್ಲಿ

---

* ಮಹಾಕಲ್ಪೇ ಬ್ರಹ್ಮಜ್ಞಾನೇನ ಸರ್ವಬಾಧಾ ಲಕ್ಷಣೋ ವೈನಿಕಃ ಪ್ರಳಯಃ —ತಾ. ಪ್ರ.

ಪಿಂಡಗ್ರಹವಿನಿರ್ಮುಕ್ತಂ ತಥಾ ವಿಶ್ವಂ ಸ್ಥಿತಂ ಪರೇ |
ಭಾವಾಭಾವಗ್ರಹೋತ್ಸರ್ಗಸ್ಥೂಲಸೂಕ್ಷ್ಮಚರಾಚರಾಃ || ೩೮ ||

ವಿವರ್ಜಿತಸ್ಯಾವಯವೈರ್ಭಾಗಾ ಬ್ರಹ್ಮಣ ಈದೃಶಾಃ |
ಸಾಕಾರಸ್ಯಾವಬೋಧಾಯ ವಿಜ್ಞೇಯಾ ಭವತಾಧುನಾ || ೩೯ ||

ಅನನ್ಯಾಃ ಸ್ವಾತ್ಮನಸ್ತಸ್ಯ ತೇನಾನವಯವಾ ಇವ |
ಯಥಾ ಸ್ಥಿತಮಿದಂ ವಿಶ್ವಂ ನಿಜಭಾವಕ್ರಮೋದಿತಂ || ೪೦ ||

ರಿಕ್ತಂ ನ ವಿಶ್ವಶಬ್ದಾರ್ಥೈರನನ್ಯದ್ಬ್ರಹ್ಮಣಿ ಸ್ಥಿತಂ |
ನ ತತ್ಸತ್ಯಂ ನ ಚಾಸತ್ಯಂ ರಜ್ಜುಸರ್ಪಭ್ರಮೋ ಯಥಾ || ೪೧ ||

ಶೂನ್ಯತೆಯಿರುವಂತೆ, ಪಿಂಡಗ್ರಹ ವಿನಿರ್ಮುಕ್ತವಾದ ವಿಶ್ವವು ಪರಬ್ರಹ್ಮದಲ್ಲಿರುವುದು.*

೩೮. ಭಾವ, ಅಭಾವಗಳೆಂಬ ಸ್ಥಿತಿಗಳೂ ಗ್ರಹ—ಉತ್ಸರ್ಗಗಳೆಂಬ ಕ್ರಿಯೆಗಳೂ, ಸ್ಥೂಲಸೂಕ್ಷ್ಮ ಚರ ಅಚರಗಳೆಂಬ ದ್ರವ್ಯಗಳೂ ಅವಯವ (ಭಾಗ)ರಹಿತವಾದ ಪರಬ್ರಹ್ಮದ ಭಾಗಗಳೇ !

೩೯. ಸಾಕಾರವಾಗಿರುವಂತೆ ಕಾಣುವ ಈ ವಿಶ್ವದ (ನಿಜತತ್ವವನ್ನು) ತಿಳಿಯುವುದಕ್ಕೋಸ್ಕರ ಇವುಗಳನ್ನೆಲ್ಲ ನೀನು ತಿಳಿದುಕೊಳ್ಳಬೇಕು. ಆ ಆತ್ಮನಿಗಿಂತ ಇವು ಬೇರೆಯಾದವುಗಳಲ್ಲ: ಅದರಿಂದ ಇವು ಅವಯವಗಳಂತೆ ಕಂಡರೂ ಅನವಯವಗಳೇ.

೪೦. ಈ ವಿಶ್ವವು ಬ್ರಹ್ಮದ ಚಿತ್ತ್ವದ ಪ್ರಭಾವವಾಗಿ (ಹಿಂದೆ ಹೇಳಿದ) ಕ್ರಮದಿಂದ ಹುಟ್ಟಿ ಇರುವುದು. ಆ ಬ್ರಹ್ಮವು, ಅದರಿಂದ ವಿಶ್ವಶಬ್ದಾರ್ಥ ರಹಿತವಲ್ಲ: (ವಿಶ್ವವೆಂದರೂ ಬ್ರಹ್ಮವೇ ! ಏಕೆಂದರೆ) ಬ್ರಹ್ಮವಲ್ಲದ ಇನ್ನೊಂದೇನೂ ಇಲ್ಲವಾಗಿ ಈ ವಿಶ್ವವೂ ಬ್ರಹ್ಮದಲ್ಲಿಯೇ ಇರುವುದು.

೪೧. ಸತ್ಯವಲ್ಲ: ಅಸತ್ಯವೂ ಅಲ್ಲ. (ಈ ವಿಶ್ವವು ಪ್ರತ್ಯೇಕವಾಗಿ ಉಂಟೆಂಬುದು) ರಜ್ಜುಸರ್ಪಭ್ರಮೆಯಂತೆ ಮಿಥ್ಯಾನುಭವವಿರುವವರೆಗೂ ಸತ್ಯವಾಗಿದ್ದು ಚೆನ್ನಾಗಿ ಪರೀಕ್ಷಿತವಾದಾಗ ಅಸತ್ಯವಾಗುವುದು.

---

*ಪಿಂಡಗ್ರಹಃ=ಸ್ಥೂಲತ್ವ—ತಾ. ಪ್ರ.

ಮಿಥ್ಯಾನುಭೂತಿತಃ ಸತ್ಯಮಸತ್ಯಂ ಸತ್ಪರೀಕ್ಷಿತಂ |
ಪರಮಂ ಕಾರಣಂ ಚಿತ್ತ್ವಾಜ್ಜೀವತ್ವಮಿತಿ ಚೇತ್ಯಲಂ || ೪೨ ||

ತತಸ್ತಥೈವಾನುಭವಾಜ್ಜೀವತ್ವಂ ವಿಂದತಿ ಸ್ಫುಟಂ |
ಸತ್ಯಂ ಭವತ್ವಸತ್ಯಂ ವಾ ಖೇ ವಿಭಾತಮಿದಂ ಜಗತ್ || ೪೩ ||

ರಂಜಯತ್ಯೇವ ಜೀವಾಣುಃ ಸ್ವೇಚ್ಛಾಭಿರನುಭೂತಿಭಿಃ |
ಅನುಭೂಯಂತ ಏವಾಶು ಕಾಶ್ಚಿತ್ಪೂರ್ವಾನುಭೂತಿತಃ || ೪೪ ||

ಅಪೂರ್ವಾನುಭವಾಃ ಕಾಶ್ಚಿತ್ಸಮಾಶ್ಚೈವಾಸಮಾಸ್ತಥಾ |
ಕ್ವಚಿತ್ಕದಾಚಿತ್ತಾ ಏವ ಕ್ವಚಿದರ್ಧಸಮಾ ಅಪಿ || ೪೫ ||

ಕಚಂತ್ಯಸತ್ಯಾಃ ಸತ್ಯಾಭಾ ಜೀವಾಕಾಶೇಽನುಭೂತಯಃ |
ತತ್ಕುಲಾಸ್ತತ್ಸಮಾಚಾರಾಸ್ತಜ್ಜನ್ಮಾನಸ್ತದೀಹಿತಾಃ || ೪೬ ||

---

೪೨. ಕಾರಣವಾದ ಪರಮವು ತನ್ನ ಚಿತ್ತ್ವದಿಂದಲೇ ಜೀವತ್ವವನ್ನು ಹೊಂದುವುದು ನಾನು ಜೀವ ಎಂದುಕೊಂಡು ಎಂದುಕೊಂಡು ಜೀವತ್ವವನ್ನು ಹೊಂದುವುದು ಎಂಬುದು ಸ್ಫುಟವು.

೪೩. ಸತ್ಯವಾಗಲಿ, ಅಸತ್ಯವಾಗಲಿ, ಈ ಜಗತ್ತು ಆಕಾಶದಲ್ಲಿ ತೋರುವುದು. ಜೀವಾಣುವು (ಈ ಜಗತ್ತಿನಲ್ಲಿ) ತನ್ನ ಇಚ್ಛೆಗಳನ್ನೇ ಅನುಭವಿಸುತ್ತ ಸಂತೋಷಪಡುವನು.

೪೪. ಕೆಲವು ಅನುಭವಗಳನ್ನು ಪೂರ್ವಾನುಭವದಿಂದಲೂ ಇನ್ನು ಕೆಲವನ್ನು ಅಪೂರ್ವಾನುಭವವಾಗಿಯೂ, ಕೆಲವನ್ನು ಅಸಮವಾಗಿಯೂ ಜೀವನು ಪಡೆಯುವನು.

೪೫. ಕೆಲವು ಅನುಭವಗಳು ಯಾವಾಗಲೋ ಒಂದು ಸಲ ಬರುವುವು. ಇನ್ನು ಕೆಲವು .ಅರ್ಧಸಮಗಳು ಈ ಅನುಭವನಗಳು ಜೀವಾಕಾಶದಲ್ಲಿ ಅಸತ್ಯಗಳಾದರೂ ಸತ್ಯಗಳಂತೆ ಹೊಳೆಯುವುವು.

೪೬–೭. ಅದೇ ಕುಲದಲ್ಲಿ, ಅದೇ ಆಚಾರಗಳುಳ್ಳವರಾಗಿ, ಅವರಂತೆಯೇ ಜನ್ಮಗಳೂ ಆಶೋತ್ತರಗಳೂ ಉಳ್ಳವರಾದ ಅದೇ ಮಂತ್ರಿ, ಪೌರ, ಆದಿಗಳು ಪ್ರತಿಭಾನ*ದಲ್ಲಿಯೂ ಬರುವರು. ಇವರು ದೇಶ, ಕಾಲ, ಆಶೋತ್ತರಗಳಿಂದ ಹಿಂದಿನವರಿಗೆ ಸುಮರು. ಅದರಿಂದ ಅವರು ಸತ್ಯವೆಂದು (ಹಿಂದಿನ ಅನುಭವಕ್ಕೆ

ತ ಏವ ಮಂತ್ರಿಣಃ ಪೌರಾಃ ಪ್ರತಿಭಾನೇ ಭವಂತಿ ಚ|
ತೇ ಚೈವಾತ್ಮನ್ಯಲಂ ಸತ್ಯಾ ದೇಶಕಾಲೇಹಿತೈಃ ಸಮಾಃ || ೪೭ ||

ಸರ್ವಗಾತ್ಮಸ್ವರೂಪಾಯಾಃ ಪ್ರತಿಭಾಯಾ ಇತಿ ಸ್ಥಿತಿಃ |
ಯಥಾ ರಾಜಾತ್ಮನಿ ವ್ಯೋಮ್ನಿ ಪ್ರತಿಭೋದೇತಿ ಸನ್ಮಯಿ || ೪೮ ||

ತಥಾ ತದಗ್ರಗೋದೇತಿ ಸತ್ಯೇವ ಪ್ರತಿಭಾಂಬರೇ |
ತ್ವಚ್ಛೀಲಾ ತ್ವತ್ಸಮಾಚಾರಾ ತ್ವತ್ಕುಲಾ ತ್ವದ್ವಪುರ್ಮಯಿ || ೪೯ ||

ಇತಿ ಲೀಲೇಯಮಾಭಾತಿ ಪ್ರತಿಭಾಪ್ರತಿಬಿಂಬಜಾ |
ಸರ್ವಗೇ ಸಂವಿದಾದರ್ಶೇ ಪ್ರತಿಭಾ ಪ್ರತಿಬಿಂಬತಿ || ೫೦ ||

ಯಾದೃಶೀ ಯತ್ರ ಸಾ ತತ್ರ ತಥೋದೇತಿ ನಿರಂತರಂ |
ಜೀವಾಕಾಶಸ್ಯ ಯಾಂತಸ್ಥಾ ಪ್ರತಿಭಾ ಕುರುತೇ ಸ್ವಯಂ |
ಸಾ ಬಹಿಶ್ಚ ಚಿದಾದರ್ಶೇ ಪ್ರತಿಬಿಂಬಾದಿಯಂ ಸ್ಥಿತಾ || ೫೧ ||

ಸಂವಾದಿಯಾಗಿರುವುದರಿಂದ) ಸ್ವಯಂ ಗ್ರಹಣವಾಗುವುದು.‡

೪೮. ರಾಜನಾದವನಿಗೆ ಪ್ರಜೆಗಳೆಲ್ಲರಿಗೂ ಅನ್ವಯಿಸುವಂತಹ ಪ್ರತಿಭೆಯು ಹುಟ್ಟುವಂತೆ, ಸೃಷ್ಟಿಯ ಆದಿಯಲ್ಲಿ ಈಶ್ವರ ಸ್ವರೂಪವಾದ ಅಂಬರದಲ್ಲಿ ಸತ್ಯವಾಗಿರುವಂತೆ ತೋರುವ ಪ್ರತಿಭೆಯು ಹುಟ್ಟುವುದು.

೪೯. ನಿನ್ನಂತೆಯೇ ಶೀಲವೂ ಆಚಾರವೂ ಉಳ್ಳವಳಾಗಿ, ನಿನ್ನ ಕುಲದವಳಾಗಿ, ನಿನ್ನ ದೇಹವನ್ನೇ ಧರಿಸಿದವಳಾಗಿ ಈ ಲೀಲೆಯು ಪ್ರತಿಭೆಯ ಪ್ರತಿಬಿಂಬ ಜನ್ಯಳಾಗಿ ಕಾಣಿಸುತ್ತಿರುವಳು.

೫೦. ಎಲ್ಲೆಲ್ಲಿಯೂ ಇರುವ ಸಂವಿತ್ ಎಂಬ ಕನ್ನಡಿಯಲ್ಲಿ ಪ್ರತಿಭೆಯು ಪ್ರತಿಬಿಂಬಿಸುವುದು. ಆ ಪ್ರತಿಭೆಯು ಎಲ್ಲಿ ಯಾವ ರೂಪವಾಗಿರುವುದೋ ಅದೇ ರೀತಿಯಲ್ಲಿಯೇ ಬಾಹ್ಯದಲ್ಲಿಯೂ ಕಾಣುವುದು.

೫೧. ಜೀವಾಕಾಶದ ಅಂತಸ್ಥವಾಗಿರುವ ಪ್ರತಿಭೆಯು ಏನನ್ನು ಮಾಡುವುದೋ ಅದೇ ಚಿದಾದರ್ಶದಲ್ಲಿ ಪ್ರತಿಬಿಂಬವಾಗಿ ನಿಲ್ಲುವುದು.

---

‡ ಹೀಗಾಗುವುದು ಸರ್ವರಲ್ಲಿಯೂ ಆತ್ಮಸ್ವರೂಪವಾಗಿರುವ ಚಿತ್ತಿನ ಬಲದಿಂದ.
* ಪ್ರತಿಭಾನದಲ್ಲಿ=ಭಾನಭಾನದಲ್ಲಿಯೂ ಜನ್ಮಪ್ರೊಂದೊಂದೂ ಒಂದೊಂದು ಭಾನ.
† ಮುಂದಿನ ಸರ್ಗದಲ್ಲಿ ಶ್ಲೋಕ ೧೨-೩೧ ನೋಡಿ.

ಏಷಾ ತ್ವಮಂಬರಮಹಂ ಭುವನಂ ಧರಾ ಚ
ರಾಜೇತಿ ಸರ್ವಮಹಮೇವ ವಿಭಾತಮಾತ್ರಂ |
ಚಿದ್ವ್ಯೋಮಬಿಲ್ವಜಠರಂ ವಿದುರಂಗ ವಿದ್ಧಿ
ತ್ವಂ ತೇನ ಶಾಂತಮಮಲಾಸ್ಸ್ವ ಯಥಾಸ್ಥಿತೇಹ || ೫೨ ||

ಇತ್ಯಾರ್ಷೇ ಶ್ರೀ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿಪ್ರಕರಣೇ
"ಅಗ್ನಿದಾಹರಾತ್ರಿಯುದ್ಧೇ ಜಗದ್ಬ್ರಹ್ಮವರ್ಣನಂ" ನಾಮ ಚತುಶ್ಚತ್ವಾರಿಂಶಃ ಸರ್ಗಃ

---

೫೨. ಈ ಎದುರಿಗಿರುವ ಈ ಲೀಲೆಯೂ ನೀನೂ ನಾನೂ ಆಕಾಶ, ಅದರಲ್ಲಿರುವ ಬ್ರಹ್ಮಾಂಡ, ಭೂಮಿ, ರಾಜ, ಇವೆಲ್ಲವೂ ಬರಿಯ ಕೋರಿಕೆಯೇ! ಚಿದಾಕಾಶವೆಂಬ ಬಿಲ್ವಫಲದ ಉದರವಿದು ಎಂದು ತಿಳಿದವರು ತಿಳಿಯುವರು. ಲೀಲೆಯೇ! ನೀನೂ ಹಾಗೆಯೇ ತಿಳಿದುಕೊ. ಅದರಿಂದ ನೀನು ಶಾಂತಳಾಗಿ ಯಥಾ ಯಥಾ ಆಗಿರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಅಗ್ನಿದಾಹರಾತ್ರಿಯುದ್ಧೇ ಜಗದ್ಬ್ರಹ್ಮವರ್ಣನ" ಎಂಬ
ನಲವತ್ತನಾಲ್ಕನೆಯ ಸರ್ಗವು.

---

* ೪೬-೫೦ ರವರೆಗಿನ ಶ್ಲೋಕಗಳಲ್ಲಿ ಹೇಳಿದ ಪ್ರತಿಭಾ, ಪ್ರತಿಭಾನ, ಎರಡೂ ಕಲನಾ, ಕಲನಂ ಎಂದು ಹಿಂದೆ ಹೇಳಿರುವ ಚಿತ್ತವೋ ?

ಪಂಚಚತ್ವಾರಿಂಶಃ ಸರ್ಗಃ

ಶ್ರೀಸರಸ್ವತ್ಯುವಾಚ:—

ವಿದೂರಥಸ್ತೇ ಭರ್ತೈಷ ತನುಂ ತ್ಯಕ್ತ್ವಾ ರಣಾಂಗಣೇ |
ತದೇವಾಂತಃಪುರಂ ಪ್ರಾಪ್ಯ ತಾದೃಗಾತ್ಮಾ ಭವಿಷ್ಯತಿ || ೧ ||

ಶ್ರೀ ವಸಿಷ್ಠ ಉವಾಚ—

ಇತ್ಯಾಕರ್ಣ್ಯ ವಚೋ ದೇವ್ಯಾ ಲೀಲಾ ಸಾ ತತ್ಪುರಾಸ್ಪದಾ |
ಪುರಃ ಪ್ರಹ್ವಾ ಸ್ಥಿತೋವಾಚ ವಚನಂ ವಿಹಿತಾಂಜಲಿಃ || ೨ ||

ದ್ವಿತೀಯ ಲೀಲೋವಾಚ :—

ದೇವೀ ಭಗವತೀ ಜ್ಞಪ್ತಿರ್ನಿತ್ಯಮೇವಾರ್ಚಿತಾ ಮಯಾ |
ಸ್ವಪ್ನೇ ಸಂದರ್ಶನಂ ದೇವಿ ಸಾ ದದಾತಿ ನಿಶಾಸು ಮೇ || ೩ ||

ನಲವತ್ತೈದನೆಯ ಸರ್ಗ

೧. ಸರಸ್ವತಿಯು ಹೇಳಿದಳು:–ನಿನ್ನ ಗಂಡನಾದ ವಿದೂರಥನು ರಣಾಂಗಣ ದಲ್ಲಿ ದೇಹವನ್ನು ಬಿಟ್ಟು, ನಿನ್ನ ಅಂತಃಪುರವನ್ನು ಸೇರಿ, ಅಲ್ಲಿ ಪದ್ಮರಾಜ ನಾಗುವನು.

೨. ಶ್ರೀ ವಸಿಷ್ಠನು ಹೇಳಿದನು :—ದೇವಿಯ ಈ ಮಾತನ್ನು ಕೇಳಿ ಆಕೆಯ ಎದುರಿಗೆ ನಿಂತಿದ್ದ ಲೀಲೆಯು ಭಕ್ತಿಯಿಂದ ಕೈ ಮುಗಿದುಕೊಂಡು ಹೀಗೆ ಹೇಳಿದಳು :—

೩. ಎರಡನೆಯ ಲೀಲೆಯು ಹೇಳಿದಳು :—ನಾನು ನಿತ್ಯವೂ ಭಗವತಿ ಯಾದ ದೇವೀಜ್ಞಪ್ತಿಯನ್ನು ಅರ್ಚಿಸುತ್ತಿದ್ದೆನು. ರಾತ್ರಿರಾತ್ರಿಯಲ್ಲಿಯೂ ಆಕೆಯು ನನಗೆ ಸ್ವಪ್ನದಲ್ಲಿ ದರ್ಶನಕೊಡುವಳು.

ಸಾ ಯಾದೃಶ್ಯೈವ ದೇವೇಶಿ ತಾದೃಶ್ಯೈವ ತ್ವಮಂಬಿಕೇ |
ತನ್ಮೇ ಕೃಪಣಕಾರುಣ್ಯಾದ್ವರಂ ದೇಹಿ ವರಾನನೇ || ೪ ||

ಶ್ರೀ ವಸಿಷ್ಠ ಉವಾಚ—

ಇತ್ಯುಕ್ತಾ ಸಾ ತದಾ ಜ್ಞಪ್ತಿಃ ಸ್ಮೃತ್ವಾ ತದ್ಭಕ್ತಿಭಾವನಂ |
ಇದಂ ಪ್ರಸನ್ನಾ ಪ್ರೋವಾಚ ತಾಂ ಲೀಲಾಂ ತತ್ಪುರಾಸ್ಪದಾಂ || ೫ ||

ಶ್ರೀದೇವ್ಯುವಾಚ :—

ಅನನ್ಯಯಾ ಭಾವನಯಾ ಯಾವಜ್ಜೀವಮಜೀರ್ಣಯಾ |
ಪರಿತುಷ್ಟಾಸ್ಮಿ ತೇ ವತ್ಸೇ ಗೃಹಾಣಾಭಿಮತಂ ವರಂ || ೬ ||

ತದ್ದೇಶಲೀಲೋವಾಚ :—

ರಣಾದ್ದೇಹಂ ಪರಿತ್ಯಜ್ಯ ಯತ್ರ ತಿಷ್ಠತಿ ಮೇ ಪತಿಃ |
ಅನೇನೈವ ಶರೀರೇಣ ತತ್ರ ಸ್ಯಾಮೇತದಂಗನಾ || ೭ ||

---

೪. ಆ ದೇವಿಯು ಹೇಗಿರುವಳೋ ನೀನೂ ಎಲೆ ಅಂಬಿಕೆಯೆ, ಹಾಗೆಯೇ ಇರುವೆ. ಅದರಿಂದ, ಕೇಳಿಕೊಳ್ಳುತ್ತಿರುವ ನನ್ನಲ್ಲಿ ಕೃಪೆಯಿಟ್ಟು, ಎಲೌ ವರಾನನೆಯೇ, ನನಗೆ ವರವನ್ನು ಕೊಡು.

೫. ಶ್ರೀ ವಸಿಷ್ಠನು ಹೇಳಿದನು :—ಹೀಗೆ ಲೀಲೆಯು ಹೇಳಿಕೊಳ್ಳಲು ಆ ಜ್ಞಪ್ತಿಯು ಆ ಲೀಲೆಯ ಭಕ್ತಿಯನ್ನೂ ಪೂಜೆಯನ್ನೂ ಮನಸ್ಸಿಗೆ ತಂದುಕೊಂಡು ಪ್ರಸನ್ನಳಾಗಿ ತನ್ನೆದುರಿಗೆ ಇರುವ ಅವಳಿಗೆ ಹೀಗೆ ಹೇಳಿದಳು:—

೬. ಶ್ರೀ ದೇವಿಯು ಹೇಳಿದಳು :—ಒಂದೇ ಸಮನಾಗಿ ಅನನ್ಯವಾಗಿರುವ ಭಕ್ತಿಯಿಂದ ನೀನು ನನ್ನನ್ನು ಯಾವಜ್ಜೀವವೂ ಪೂಜಿಸಿರುವೆ. ನಿನಗೆ ಒಲಿದಿರುವೆನು. ಎಲೌ ವತ್ಸೆ, ನಿನಗೆ ಬೇಕಾದ ವರವನ್ನು ಕೇಳು.

೭. ಎರಡನೆಯ ಲೀಲೆಯು ಹೇಳಿದಳು :—ನನ್ನ ಗಂಡನು ರಣದಲ್ಲಿ ದೇಹವನ್ನು ಬಿಟ್ಟು ಇನ್ನೆಲ್ಲಿ ಇರುವನೋ ಅಲ್ಲಿಯೇ ನಾನು ಅವನ ಹೆಂಡತಿಯಾಗಿ ಇದೇ ದೇಹದಲ್ಲಿ ಇರಬೇಕು.

ಶ್ರೀ ದೇವ್ಯುವಾಚ :—

ಏವಮಸ್ತು ತ್ವಯಾವಿಘ್ನಂ ಪೂಜಿತಾಸ್ಮಿ ಸುತೇ ಚಿರಂ |
ಅನನ್ಯಭಾವಯಾ ಭೂರಿ ಪುಷ್ಪಧೂಪಸಪರ್ಯಯಾ ‖ ೮ ‖

ಶ್ರೀ ವಸಿಷ್ಠ ಉವಾಚ—

ಅಥ ತದ್ದೇಶಲೀಲಾಯಾಂ ಫುಲ್ಲಾಯಾಂ ತದ್ವರೋದಯಾತ್ |
ಪೂರ್ವಲೀಲಾಬ್ರವೀದ್ದೇವೀಂ ಸಂದೇಹಲುಲಿತಾಶಯಾ ‖ ೯ ‖

ಪೂರ್ವಲೀಲೋವಾಚ—

ಯೇ ಸತ್ಯಕಾಮಾಃ ಸಂತ್ಯೇವಂಸಂಕಲ್ಪಾ ಬ್ರಹ್ಮರೂಪಿಣಃ |
ತ್ವಾದೃಶಾಃ ಸರ್ವಮೇವಾಶು ತೇಷಾಂ ಸಿದ್ಧ್ಯತ್ಯಭೀಪ್ಸಿತಂ ‖ ೧೦ ‖

ತತ್ತೇನೈವ ಶರೀರೇಣ ಕಿಮರ್ಥಂ ನಾಹಮೀಶ್ವರಿ |
ಲೋಕಾಂತರಮಿದಂ ನೀತಾ ತಂ ಗಿರಿಗ್ರಾಮಕಂ ವದ ‖ ೧೧ ‖

---

೮. ಶ್ರೀ ದೇವಿಯು ಹೇಳಿದಳು :—ನೀನು ಬಹುಕಾಲದಿಂದ ಬಿಡದೆ ನನ್ನನ್ನು ಅನನ್ಯಭಾವದಿಂದ, ಬಹುವಾಗಿ, ಪುಷ್ಪ ಧೂಪ ಪೂಜೆಗಳಿಂದ ಅರ್ಚಿಸಿರುವೆಯಾಗಿ, ಎಲೆ ಮಗಳೆ, ಹಾಗೇ ಆಗಲಿ.

೯. ಶ್ರೀ ವಸಿಷ್ಠನು ಹೇಳಿದನು :—ಅವರ ಲಾಭದಿಂದ ಅಲ್ಲಿದ್ದ ಎರಡನೆಯ ಲೀಲೆಯು ಸಂತೋಷಪಟ್ಟಳು. ಪೂರ್ವ ಲೀಲೆಯು ಸಂದೇಹಪಟ್ಟು ದೇವಿಯನ್ನು ಕೇಳಿದಳು.

೧೦. ಪೂರ್ವ ಲೀಲೆಯು ಹೇಳಿದಳು :—ಯಾರು ನಿನ್ನಂತೆ ಸತ್ಯಕಾಮರಾಗಿ, ಬ್ರಹ್ಮರೂಪಿಗಳಾಗಿ, ಸತ್ಯಸಂಕಲ್ಪವಾಗಿರುವರೋ ಅವರ ಅಭೀಪ್ಸಿತಗಳೆಲ್ಲವೂ ಸಿದ್ಧಿಯಾಗುವುವು.

೧೧. ಅದರಿಂದ, ಎಲೆ ಈಶ್ವರಿಯೆ, ನೀನು ನನ್ನನ್ನು ಅದೇ (ಪಾಂಚಭೌತಿಕ) ದೇಹದಿಂದಲೇ ಲೋಕಾಂತರದ ಗಿರಿಗ್ರಾಮಕ್ಕೆ ಏಕೆ ಕರೆದುಕೊಂಡು ಹೋಗಲಿಲ್ಲ ?

ಶ್ರೀದೇವ್ಯುವಾಚ--

ನ ಕಿಂಚತ್ಕಸ್ಯಚಿದಹಂ ಕರೋಮಿ ವರವರ್ಣಿನಿ |
ಸರ್ವಂ ಸಂಪಾದಯತ್ಯಾಶು ಸ್ವಯಂ ಜೀವಃ ಸ್ವವಾಹಿತಂ || ೧೨ ||

ಅಹಂ ಹಿತಂ ರಟೇ ಜ್ಞಪ್ತಿಃ ಸಂವಿನ್ಮಾತ್ರಾಧಿದೇವತಾ |
ಪ್ರತ್ಯೇಕಮಸ್ತಿ ಚಿಚ್ಛಕ್ತಿರ್ಜೀವಶಕ್ತಿಸ್ವರೂಪಿಣೀ || ೧೩ ||

ಜೀವಸ್ಯೋದೇತಿ ಯಾ ಶಕ್ತಿರ್ಯಸ್ಯ ಯಸ್ಯ ಯಥಾ ಯಥಾ |
ಭಾತಿ ತತ್ಫಲದಾ ನಿತ್ಯಂ ತಸ್ಯ ತಸ್ಯ ತಥಾ ತಥಾ || ೧೪ ||

ಮಾಂ ಸಮಾರಾಧಯಂತ್ಯಾಸ್ತು ಜೀವಶಕ್ತಿಸ್ತವೋದಿತಾ |
ತದಾ ಭವದ್ಯದೀಹ ಸ್ಯಾಂ ಮುಕ್ತಾಸ್ಮೀತಿ ಚಿರಂ ತದಾ || ೧೫ ||

ತೇನ ತೇನ ಪ್ರಕಾರೇಣ ತ್ವಂ ಮಯಾ ಸಂಪ್ರಬೋಧಿತಾ |
ತ್ವಯಾ ಯುಕ್ತ್ಯಾಮಲಂ ಭಾವಂ ನೀತಾಸಿ ವರವರ್ಣಿನಿ || ೧೬ ||

---

೧೨. ಶ್ರೀ ದೇವಿಯು ಹೇಳಿದಳು :—ನಾನು ಯಾರಿಗೂ ಏನೂ ಮಾಡುವುದಿಲ್ಲ. ಎಲೆ ಶುಭಾಂಗೆಯೆ, ಜೀವನೇ ತನಗೆ ಬೇಕಾದುದನ್ನೆಲ್ಲ ತಾನೇ ಶೀಘ್ರವಾಗಿ ಸಂಪಾದಿಸಿಕೊಳ್ಳುವನು.

೧೩. ನಾನು ಸಂವಿನ್ಮಾತ್ರಳಾದ ಅಧಿದೇವತೆಯು. ಅವರವರ ಕೋರಿಕೆಯನ್ನು ವರವಾಗಿ ಕೊಡುವ ಜ್ಞಪ್ತಿಯು ನಾನು. ಜೀವಶಕ್ತಿ ಸ್ವರೂಪಿಣಿಯಾದ ಚಿಚ್ಛಕ್ತಿಯು ಬೇರೆಯಿರುವಳು.

೧೪. ಯಾವ ಯಾವ ಜೀವನಿಗೆ ಹೇಗೆ ಹೇಗೆ ಸಂಕಲ್ಪರೂಪವಾಗಿ ತೋರುವುದೋ ಅವನವನಿಗೆ ಆಯಾ ಫಲಗಳನ್ನು ಹಾಗೆಹಾಗೆಯೇ ಕೊಡುವ ಶಕ್ತಿಯು ಜೀವಜೀವನಿಗೂ ಉಂಟು.

೧೫. ನನ್ನನ್ನು ಸಮರ್ಚನಮಾಡುವ ನಿನಗೆ ಜೀವಶಕ್ತಿಯು ಹುಟ್ಟಿದಾಗ ನಾನು ಮುಕ್ತಿಯನ್ನು ಪಡೆಯಬೇಕು ಎಂದು ಬಹುವಾಗಿ ಹೇಳಿಕೊಂಡೆ.

೧೬. ಅದೇಅದೇ ರೀತಿಯಿಂದ ನಾನು ನಿನಗೆ ಜ್ಞಾನವನ್ನೇ ಕೊಟ್ಟೆನು. ಶುಭಾಂಗಿಯೆ, ಆ ಬ್ರಹ್ಮವಿದ್ಯೆಯಿಂದ ಶುದ್ಧಭಾವವನ್ನು ಹೊಂದಿರುವೆ.

ಅನಯೈವಂ ಭಾವನಯಾ ಬೋಧಿತಾಸಿ ಚಿರಂ ತದಾ |
ತಮೇವಾರ್ಥಂ ಪ್ರಾಪ್ತವತೀ ಸದಾ ಸ್ವಚಿತಿಶಕ್ತಿತಃ || ೧೭ ||

ಯಸ್ಯ ಯಸ್ಯ ಯಥೋದೇತಿ ಸ್ವಚಿತ್ತಪ್ರಯತನಂ ಚಿರಂ |
ಫಲಂ ದದಾತಿ ಕಾಲೇನ ತಸ್ಯ ತಸ್ಯ ತಥಾ ತಥಾ || ೧೮ ||

ತಪೋ ವಾ ದೇವತಾ ವಾಪಿ ಭೂತ್ವಾ ಸ್ವೈವ ಚಿದನ್ಯಥಾ |
ಫಲಂ ದದಾತ್ಯಥ ಸ್ವೈರಂ ನಭಃಫಲನಿಪಾತವತ್ || ೧೯ ||

ಸ್ವಸಂವಿದ್ಯತನಾದನ್ಯನ್ನ ಕಿಂಚಿಚ್ಚ ಕದಾಚನ |
ಫಲಂ ದದಾತಿ ತೇನಾಶು ಯಥೇಚ್ಛಸಿ ತಥಾ ಕುರು || ೨೦ ||

ಚಿದ್ಭಾವ ಏವ ನನು ಸರ್ಗಗತೋಽಂತರಾತ್ಮಾ
ಯಚ್ಚೇತತಿ ಪ್ರಯತತೇ ಚ ತದೈತಿ ತಚ್ಛ್ರೀಃ |

---

೧೭. ಇದೇ ಭಾವನೆಯಿಂದಲೇ ನಿನ್ನ ಜೀವಶಕ್ತಿಯನ್ನು ಬೋಧಿಸುತ್ತಿದ್ದೆಯಾಗಿ, ಅದೇ ಅರ್ಥವು, ನಿನ್ನ ಚಿತಿಶಕ್ತಿಯಿಂದ ನನಗೆ ಲಭಿಸಿತು.

೧೮. ಸ್ವಚಿತ್ತದ ಪ್ರಯತ್ನವು ದೀರ್ಘಕಾಲ ಯಾವಯಾವನಿಗೆ ಹೇಗೆಹೇಗೆ ನಡೆಯುವುದೋ ಅವನವನಿಗೆ ಹಾಗೆಹಾಗೆಯೇ ಫಲವಾಗುವುದು.

೧೯. ತನ್ನ ಚಿತ್ತೇ ತಪಸ್ಸೋ ದೇವತೆಯೋ ಆಗಿ ಆಕಾಶದಿಂದ ಹಣ್ಣು ಬಿದ್ದಂತೆ (ಕಾಕತಾಳೀಯವಾಗಿ ?) ಯಥೇಚ್ಛವಾಗಿ ಫಲವನ್ನು ಕೊಡು.

೨೦. ಸ್ವಸಂವಿತ್ತಿಗನುಸಾರವಾದ ಯತ್ನವನ್ನು ಬಿಟ್ಟು ಫಲಪ್ರದವಾದುದು ಇನ್ನು ಯಾವುದೂ ಇಲ್ಲ. ಆದರಿಂದ, ಈ ಕೂಡಲೇ ಏನು ಬೇಕೋ ಅದನ್ನು ಮಾಡು.

೨೧. ಚಿತ್ತೇ ಪ್ರತಿಯೊಂದರಲ್ಲೂ ಅಂತರಾತ್ಮವಾಗಿರುವುದು. ಅದು ಏನು ಮಾಡುವುದೋ ಏನು ಯತ್ನಿಸುವುದೋ, ಅದರಂತೆಯೇ ರಮ್ಯವಾಗಲೀ ಅರಮ್ಯ

ರಮ್ಯಂ ಹ್ಯರಮ್ಯಮಥವೇತಿ ವಿಚಾರಯಸ್ವ
ಯತ್ಪಾವನಂ ತದನುಬುಧ್ಯ ತದಂತರಾಸ್ಸ್ವ ॥ ೨೧ ॥

ಇತ್ಯಾರ್ಷೇ ಶ್ರೀ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿಪ್ರಕರಣೇ "ಸತ್ಯಕಾಮಸತ್ಯಸಂಕಲ್ಪಾಸ್ತಿತಾ" ನಾಮ ಪಂಚಚತ್ವಾರಿಂಶಃ ಸರ್ಗಃ

ವಾಗಲೀ ಅದು ಆಗಿಯೇ ಆಗುವುದು. ಅದರಿಂದ ವಿಚಾರಮಾಡಿನೋಡಿ ಯಾವುದು ಪಾವನವೆಂದು ಕಂಡುಬರುವುದೋ ಅದರಲ್ಲಿ ಮನಸ್ಸಿಡು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ ಉತ್ಪತ್ತಿ ಪ್ರಕರಣದಲ್ಲಿ "ಸತ್ಯಕಾಮಸತ್ಯಸಂಕಲ್ಪಾಸ್ತಿತಾ" ಎಂಬ ನಲವತ್ತೈದನೆಯ ಸರ್ಗವು.

ಷಟ್‌ಚತ್ವಾರಿಂಶಃ ಸರ್ಗಃ

ಶ್ರೀ ರಾಮ ಉವಾಚ—

ಏವಂ ಸಂಕಥಯಂತೀಷು ತಾಸು ತಸ್ಮಿನ್ ಗೃಹೋದರೇ |
ವಿದೂರಥಃ ಕಿಮಕರೋನ್ನಿರ್ಗತ್ಯ ಕುಪಿತೋ ಗೃಹಾತ್ ||೧||

ಶ್ರೀ ವಸಿಷ್ಠ ಉವಾಚ—

ವಿದೂರಥಃ ಸ್ವಸದನಾನ್ನಿರ್ಗತಃ ಪರಿವಾರಿತಃ |
ಪರಿವಾರೇಣ ಮಹತಾ ಋಕ್ಷೌಘೇಣೇವ ಚಂದ್ರಮಾಃ ||೨||

ಸನ್ನದ್ಧಸರ್ವಾವಯವೋ ಲಗ್ನಹಾರವಿಭೂಷಣಃ |
ಮಹಾಜಯಜಯಾರಾವೈಃ ಸುರೇಂದ್ರ ಇವ ನಿರ್ಗತಃ ||೩||

ಸಮಾದಿಶನ್ಯೋಧಗಣಂ ಶೃಣ್ವನ್ಮಂಡಲಸಂಸ್ಥಿತಿಂ |
ಆಲೋಕಯನ್ ವೀರಗಣಾನಾರುರೋಹ ನೃಪೋ ರಥಂ ||೪||

ನಲವತ್ತಾರನೆಯ ಸರ್ಗ

೧. ಶ್ರೀ ರಾಮನು ಹೇಳಿದನು :—ಲೀಲೆಯರೂ ದೇವಿಯೂ ಹೀಗೆ ಅರಮನೆಯಲ್ಲಿ ಮಾತನಾಡುತ್ತಿರುವಾಗ, ಕುಪಿತನಾಗಿ ಅರಮನೆಯಿಂದ ಹೊರಟ ವಿದೂರಥನು ಏನು ಮಾಡಿದನು ?

೨. ಶ್ರೀ ವಸಿಷ್ಠನು ಹೇಳಿದನು :—ವಿದೂರಥನು ನಕ್ಷತ್ರಗಳಿಂದ ಕೂಡಿದ ಚಂದ್ರನಂತೆ, ದೊಡ್ಡ ಪರಿವಾರದೊಡನೆ ಕೂಡಿ ಅರಮನೆಯಿಂದ ಹೊರಟು,

೩. ಕವಚಾದಿಗಳಿಂದ ಸನ್ನದ್ಧನಾಗಿ ಹಾರಭೂಷಣಗಳನ್ನು ಧರಿಸಿ, ಜಯ ಜಯ ಎಂದು ದೊಡ್ಡದಾಗಿ ಹೊಗಳಿಸಿಕೊಳ್ಳುತ್ತ, ದೇವೇಂದ್ರನಂತೆ ಹೊರಟನು.

೪. ಯೋಧರಿಗೆ ಆಜ್ಞಾಪಿಸುತ್ತ, ದೇಶವು ಹೇಗಿರುವುದೆಂದು ಕೇಳುತ್ತ, ವೀರಗಣಗಳನ್ನು ಅವಲೋಕಿಸುತ್ತ ರಥವನ್ನು ಏರಿದನು.

ಕೂಟಾಕಾರಸಮಾಕಾರಂ ಮುಕ್ತಾಮಾಣಿಕ್ಯಮಂಡಿತಂ |
ಪತಾಕಾಪಂಚಭಿರ್ವ್ಯಾಪ್ತಂ ದ್ಯುವಿಮಾನಮಿವೋತ್ತಮಂ || ೫ ||

ಚಕ್ರಭಿತ್ತಿಪರಿಪ್ರೋತಪ್ರಕಚತ್ಕಾಂಚನಾಂಕುರಂ |
ಮುಕ್ತಾಜಾಲರಣತ್ಕಾರಚಾರುವಿಕ್ರಮಕೂಬರಂ || ೬ ||

ಸುಗ್ರೀವೈರ್ಲಕ್ಷಣೋಪೇತೈಃ ಪ್ರಶಸ್ತೈಃ ಪ್ರಚಲೈಃ ಕೃಶೈಃ |
ಜವೋಡ್ಡಯನವೇಗೇನ ಪ್ರವಹದ್ಭಿಃ ಸುರಾನಿವ || ೭ ||

ವಾಯುಂ ಜವೇನ ಸಹಸಾ ಅಹಸದ್ಭಿರ್ಗತಿಕ್ರಮೈಃ |
ಪ್ರೋಹ್ಯದ್ಭಿರಿವ ಪಶ್ಚಾರ್ಧಮಾಪಿಬದ್ಭಿರಿವಾಂಬರಂ || ೮ ||

ಯೋಜಿತೈರಿವ ಸಂಪೂರ್ಣೈಃ ಚಂದ್ರೈಶ್ಚಾಮರದೀಪ್ತಿಭಿಃ |
ಅಶ್ವೈರಷ್ಟಭಿರಾಬದ್ಧಮಾಶಾಪೂರಕಹೇಷಿತೈಃ || ೯ ||

---

೫. ಆ ರಥವು ದೊಡ್ಡ ಬೆಟ್ಟದ ಶಿಖರದಂತಿದ್ದು, ಮುಕ್ತಾಮಾಣಿಕ್ಯ ಖಚಿತವಾಗಿ, ಐದು ಪತಾಕೆಗಳನ್ನುಳ್ಳ, ಆಕಾಶ ವಿಮಾನದಂತೆ ಉತ್ತಮವಾಗಿತ್ತು.

೬. ಚಕ್ರಗಳಲ್ಲಿಯೂ ಸುತ್ತಲೂ ಇರುವ ಭಿತ್ತಿಗಳಲ್ಲಿಯೂ ಹೊಳೆ ಹೊಳೆ ಹೊಳೆಯುತ್ತಿರುವ ಚಿನ್ನದ ಮೊಳೆಗಳನ್ನು ಹೊಡೆದಿದ್ದರು. ಮೇಲೆ ಕಟ್ಟಿರುವ ಮುತ್ತಿನ ಸರಗಳು ಒಂದಕ್ಕೊಂದು ತಗಲಿ ರಣರಣವೆಂದು ಸೊಗಸಾಗಿ ಸದ್ದು ಮಾಡುತ್ತಿದ್ದುವು.

೭. ಲಕ್ಷಣವಂತಗಳಾಗಿ ಪ್ರಶಸ್ತಿಗಳಾಗಿ ವೇಗಶಾಲಿಗಳಾಗಿ ಕೃಶಗಳೂ ಸುಗ್ರೀವಗಳೂ ಆಗಿ, ಹಾರಿ ಹಾರಿ ಹೋಗುವುದರಿಂದ ದೇವರಥಕ್ಕೆ ಯೋಗ್ಯವಾಗಿ,

೮. ತಮ್ಮ ವೇಗ, ಗತಿ, ಕ್ರಮಗಳಿಂದ ವಾಯುವನ್ನೂ ಮತ್ಸರಿಸಿ ಹಿಮ್ಮೆಟ್ಟಿಸಬೇಕೆಂದು, ಪಶ್ಚಾರ್ಧವನ್ನು ಎಳೆದುಕೊಂಡು ಹೋಗುತ್ತಿರುವುವೋ, ಆಕಾಶವನ್ನೇ ಪಾನಮಾಡುತ್ತಿರುವುವೋ ಎಂಬಂತಿರುವ,

೯. ಚಾಮರಕಾಂತಿಯಿಂದ ಬೆಳಗುತ್ತಿರುವ, ಹೇಷಿತಗಳಿಂದ ದಿಕ್ಕುದಿಕ್ಕುಗಳನ್ನೆಲ್ಲ ತುಂಬುತ್ತಿರುವ, ಸಂಪೂರ್ಣ ಚಂದ್ರರೋ ಎಂಬಂತಿರುವ, ಎಂಟು ಕುದುರೆಗಳನ್ನು ಆ ರಥಕ್ಕೆ ಕಟ್ಟಿದ್ದರು.

ಅಧೋದಪತದುದ್ದಾಮ ನಾಗಾಭ್ರರವನಿರ್ಭರಃ |
ಶೈಲಭಿತ್ತಿಪ್ರತಿಧ್ವಾನದಾರುಣೋ ದುಂದುಭಿಧ್ವನಿಃ || ೧೦ ||

ಮತ್ತಸೈನಿಕ ನಿರ್ಮುಕ್ತೈರ್ವ್ಯಾಪ್ತಂ ಕಲಕಲಾರವೈಃ |
ಕಿಂಕಿಣೀಜಾಲನಿರ್ಧ್ವಾನೈರ್ಹೇತಿ ಸಂಘಟ್ಟಘಟ್ಟಿತೈಃ || ೧೧ ||

ಧನುಷ್ಚಟಚಟಾಶಬ್ದೈಃ ಶರಸೀತ್ಕಾರಗಾಯನೈಃ |
ಪರಸ್ಪರಾಂಗನಿಷ್ಪಿಷ್ಟ ಕವಚೌಘಝುಣಜ್ಝಣೈಃ || ೧೨ ||

ಜ್ವಲದಗ್ನಿಟಣತ್ಕಾರೈರಾರ್ತಿಮತ್ಕ್ರಂದನಾರವೈಃ |
ಪರಸ್ಪರಭಟಾಹ್ವಾನೈಃ ಬಂದಿವಿಕ್ಷುಬ್ಧರೋದನೈಃ || ೧೩ ||

ಶಿಲಾಘನೀಕೃತಾಶೇಷಬ್ರಹ್ಮಾಂಡಕುಹರೋ ಧ್ವನಿಃ |
ಹಸ್ತಗ್ರಾಹ್ಯೋಽಭವದ್ಭೀಮೋ ದಶಾಶಾಕುಂಜಪೂರಕಃ || ೧೪ ||

---

೧೦. ಕೂಡಲೆ, ಉದ್ದಾಮಗಜ, ಮೇಘಗಳ ಗರ್ಜನೆಯಂತೆ ತುಂಬಿದ, ಪರ್ವತ ಭಿತ್ತಿಗಳಲ್ಲಿ ಪ್ರತಿಧ್ವನಿಸಿ ಭಯಂಕರವಾದ ದುಂದುಭಿ ಧ್ವನಿಯು ಮೊಳಗಿತು.

೧೧. ಮತ್ತರಾದ ಸೈನಿಕರ ಕಲಕಲವೂ ಆಯುಧಗಳ ಸಂಘಟ್ಟನದಿಂದ ನುಡಿಯುತ್ತಿರುವ ಸಣ್ಣ ಗಂಟೆಗಳ ನಾದವೂ ತಾನೇ ತಾನಾಯ್ತು.

೧೨. ಧನುಸ್ಸಿನ ಚಟಚಟವೂ ಶರಗಳ ಸೀತ್ಕಾರಗೀತವೂ ಒಬ್ಬರ ಮೈಯೊಬ್ಬರಿಗೆ ತಗುಲುವುದರಿಂದ ಪುಡಿಪುಡಿಯಾಗುವ ಕವಚ ಸಮೂಹದ ಝುಣ ಜ್ಝಣವೂ,

೧೩. ಜ್ವಲಿಸುತ್ತಿರುವ ಬೆಂಕಿಯ ಟಣತ್ಕಾರವೂ, ನೊಂದವರ ಅಳುವೂ ಭಟರು ಒಬ್ಬರನ್ನೊಬ್ಬರು ಕೂಗಿ ಕರೆಯುವ ಕೂಗೂ ಸೆರೆಸಿಕ್ಕಿದವರ ವಿಕಾರ ರೋದನವೂ ತುಂಬಿಹೋಯಿತು.

೧೪. ಈ ಧ್ವನಿಗಳೆಲ್ಲವೂ ಸೇರಿ ಅಶೇಷ ಬ್ರಹ್ಮಾಂಡಕುಹರವನ್ನು ಶಿಲೆಯಂತೆ ಘನವಾಗಿಸಿತು. ದಶದಿಕ್ಕುಗಳನ್ನೂ ತುಂಬಿ ಭಯಂಕರವಾದ ಆ ಧ್ವನಿಯೂ ಘನವಾಗಿ ಕೈನೀಡಿದತ್ತ ಹಿಡಿಗೆ ಸಿಕ್ಕುವಂತಾಯ್ತು.

ಅಥೋದಪತದಾದಿತ್ಯಪಥಪೀವರರೋಧಕಂ |
ರಜೋ ನಿಭೇನ ಭೂಪೀಠಮಂಬರೋಡ್ಡಯನೋನ್ಮುಖಂ ॥ ೧೫ ॥

ಗರ್ಭವಾಸಮಿವಾಪನ್ನಂ ತೇನಾಸೀತ್ತನ್ಮಹಾಪುರಂ |
ಮೂಢತ್ವಂ ಯೌವನೇನೇವ ಘನತಾಮಾಯಯೌ ತಮಃ ॥ ೧೬ ॥

ಪ್ರಯಯುಃ ಕ್ವಾಪಿ ದೀಪೌಘಾ ದಿವಸೇನೇವ ತಾರಕಾಃ |
ಆಯಯುರ್ಬಲಮಾಲೋಲಾ ನೈಶಭೂತಪರಂಪರಾಃ ॥ ೧೭ ॥

ದದೃಶುಸ್ತನ್ಮಹಾಯುದ್ಧಂ ದ್ವೇ ಲೀಲೇ ಸಾ ಕುಮಾರಿಕಾ |
ಪ್ರಸ್ಫುಟದ್ಧೃದಯೇನೇವ ದೇವೀ ದತ್ತಮಹಾದೃಶಾ ॥ ೧೮ ॥

ಪ್ರಶೇಮುರಥ ಹೇತಿಷು ಪ್ರೋದ್ಯತ್ಕಟಕಟಾರವಾಃ |
ಏಕಾರ್ಣವಪಯಃಪೂರೈರ್ಬಾಡಬಾ ಇವ ವಹ್ನಯಃ ॥ ೧೯ ॥

---

೧೫. ಆಗ, ಭೂಮಂಡಲವು ಆಕಾಶಕ್ಕೆ ಹಾರಬೇಕೆಂದುಕೊಂಡು ಸೂರ್ಯನ ಮಾರ್ಗಕ್ಕೆ ದೊಡ್ಡ ಅಡ್ಡಿಯಾದ ಧೂಳಿನ ರೂಪವಾಗಿ ಮೇಲಕ್ಕೆದ್ದಿತು.

೧೬. ಅದರಿಂದ ಆ ಮಹಾ ಪುರವು ಮುಚ್ಚಿಕೊಂಡು, ಗರ್ಭವಾಸದಲ್ಲಿದೆಯೋ ಎನ್ನುವಂತಾಯ್ತು. ಯೌವನದಿಂದ ಮೂಢತ್ವವು ಮತ್ತೂ ಘನವಾಗುವಂತೆ ತಮಸ್ಸು ಇನ್ನೂ ಘನವಾಯ್ತು.

೧೭. ಹಗಲಿನಲ್ಲಿ ತಾರಕೆಗಳು ಮರೆಯಾಗುವಂತೆ, ದೀಪಗಳ ಗುಂಪುಗಳು ಎಲ್ಲಿಯೋ ಮರೆಯಾದುವು. ರಾತ್ರಿಂಚರ ಭೂತ ಸಂಘಾತವು ಕುಣಿಕುಣಿಯುತ್ತ ಸೈನ್ಯಕ್ಕೆ ಬಂದುವು.

೧೮. ದೇವಿಯು ದಿವ್ಯ ದೃಷ್ಟಿಯನ್ನು ಕೊಡಲು, ಆ ಇಬ್ಬರು ಲೀಲೆಯರೂ ಆ ಕುಮಾರಿಕೆಯೂ ಆ ಯುದ್ಧವನ್ನು ನೋಡಿದರು. ಆಗ ಅವರ ಎದೆ ಒಡೆಯುವಂತಾಯ್ತು.

೧೯. ಪ್ರಳಯ ಸಮುದ್ರ ಪ್ರವಾಹದಿಂದ ಬಾಡಬಾಗ್ನಿಗಳು ಶಮನವಾಗುವಂತೆ, ಶತ್ರುಗಳ ಆಯುಧ ಬಾಣಗಳ ಕಟಕಟರವವೂ ಶಾಂತವಾಯ್ತು.

ಶನೈಃ ಸೇನಾಂ ಸಮಾಕರ್ಷನ್ನಾಜ್ಞಾಯತ ಬಲಾಂತರಂ |
ವಿವೇಶ ಪಕ್ಷಪ್ರೋಡ್ಡೀನೋ ಮೇರುರೇಕಮಿವಾರ್ಣವಂ || ೨೦ ||

ಅಥೋದಭೂದ್ಗುಣಧ್ವಾನಂ ಚಟಚ್ಚಟದಿತಿ ಸ್ಫುಟಂ |
ರಚಿತಾಂಶುಮಯಾಂಭೋದಾಶ್ಚೇರುಃ ಪರಪರಂಪರಾಃ || ೨೧ ||

ಯಯುರಂಬರಮಾಶ್ರಿತ್ಯ ನಾನಾಹೇತಿವಿಹಂಗಮಾಃ |
ಪ್ರಸಸ್ರುರಲಮಾತ್ತಾಸು ಮಲಿನಾಃ ಶಸ್ತ್ರದೀಪ್ತಯಃ || ೨೨ ||

ಜಜ್ವಲುಃ ಶಸ್ತ್ರಸಂಘಟ್ಟಜ್ವಲನಾ ಉಲ್ಮುಕಾಗ್ನಿವತ್ |
ಜಗರ್ಜುಃ ಶರಧಾರೌಘೈರ್ವರ್ಷಂತೋ ವೀರವಾರಿದಾಃ || ೨೩ ||

ವಿವಿಶುಃ ಕ್ರಕಚಕ್ರೂರಾ ವೀರಾಂಗೇಷು ಚ ಹೇತಯಃ |
ಪೇತುಃ ಪಟಪಟಾರಾವಂ ಹೇತಿನಿಷ್ಪಿಷ್ಟಯೋಽಂಬರೇ || ೨೪ ||

---

೨೦. ತನ್ನ ಸೇನೆಯನ್ನು ನಡೆಸಿಕೊಂಡು ಹೋಗುತ್ತಿದ್ದ ವಿದೂರಥನು ಪ್ರತಿ ಸೈನ್ಯದ ಬಲವನ್ನರಿಯದೆ, ರೆಕ್ಕೆಗಳನ್ನು ಬಡಿಯುತ್ತಾ ಹಾರಾಡುತ್ತಿರುವ ಮೇರುವು ಪ್ರಳಯಾರ್ಣವವನ್ನು ಪ್ರವೇಶಿಸುವಂತೆ, ಹೊಕ್ಕನು.

೨೧. ಆಗ, ಹೆದೆಗಳ ಧ್ವನಿಯು ಚಟಚಟ ಎಂದು ಸ್ಫುಟವಾಗಿ ಕೇಳಿಸಿತು. ಆಯುಧಗಳ ಝಳಪಿಸುವಿಕೆಯಿಂದ ಕಾಂತಿ ಮೇಘಗಳನ್ನು ಕಲ್ಪಿಸುತ್ತ ಪರ ಸೈನ್ಯ ಪರಂಪರೆಯು ಸಂಚರಿಸಲಾರಂಭಿಸಿತು.

೨೨. ನಾನಾ ಆಯುಧಗಳೆಂಬ ಪಕ್ಷಿಗಳು ಅಂಬರವನ್ನು ಸೇರಲು ಹಾರಿದುವು. ಶತ್ರುಗಳು ಶತ್ರುಗಳ ಪ್ರಾಣಗಳನ್ನು ತೆಗೆಯಲು ಅವುಗಳ ಕಾಂತಿಯು ಮಲಿನವಾಗಿ ಮಂದವಾಯಿತು.

೨೩. ಶಸ್ತ್ರ ಸಂಘಟ್ಟನದಿಂದ ಹುಟ್ಟಿದ ಬೆಂಕಿಯು ಕೊಳ್ಳಿಗಳ ಬೆಂಕಿಯಂತೆ ಉರಿಯಿತು. ವೀರರೆಂಬ ಮೇಘಗಳು ಶರವರ್ಷಣವನ್ನು ಕರೆಯುತ್ತ ಗರ್ಜಿಸಿದುವು.

೨೪. ವೀರರ ಅಂಗಗಳಲ್ಲಿ ಗರಗಸದಂತೆ ಕ್ರೂರವಾದ ಆಯುಧಗಳು ಹೊಕ್ಕುವು. ಆಯುಧಗಳು ಆಕಾಶದಲ್ಲಿ ಹೋರಾಡಿ ಪಟಪಟನೆ ಬಿದ್ದುವು.

ಜಗ್ಮುಃ ಶಮಂ ತಮಾಂಸ್ಯಾಶು ಶಸ್ತ್ರಕಾನಲದೀಪಕೈಃ |
ಬಭೂವುರಖಿಲಾ ಸೇನಾ ನವನಾರಾಚರೋಮಶಾಃ || ೨೫ ||

ಉತ್ತಸ್ಥುರ್ಯಮಯಾತ್ರಾಯಾಂ ಕಬಂಧನಟಪಂಕ್ತಯಃ |
ಜಗುರುಚ್ಚೈ ರಣೋದ್ರೇಕಂ ಪಿಶಾಚ್ಯೋ ರಣದಾರಿಕಾಃ || ೨೬ ||

ಉದಗುರ್ದಂತಸಂಘಟ್ಟಟಂಕಾರಾ ದಂತಿನಾಂ ಬಲಾತ್ |
ಊಹುಃ ಕ್ಷೇಪಣಪಾಷಾಣಮಹಾನದ್ಯೋ ನಭಸ್ತಲೇ || ೨೭ ||

ಪೇತುಃ ಶವಾನಿ ವಾತಾಸ್ತಸಂಶುಷ್ಕವನಪರ್ಣವತ್ |
ನಿರ್ಯಯುರ್ಲೋಹಿತಾ ನದ್ಯೋ ರಣಾದ್ರೇರ್ಮೃತಿವರ್ಷಿಣಃ || ೨೮ ||

ಪ್ರಶೇಮುಃ ಪಾಂಸವೋ ರಕ್ತೈಸ್ತಮಾಂಸ್ಯಾಯುಧವಹ್ನಿಭಿಃ |
ಯುದ್ಧೈಕಧ್ಯಾನತಃ ಶಬ್ದಾ ಭಯಾನಿ ಮೃತಿನಿಶ್ಚಯೈಃ || ೨೯ ||

---

೨೫. ಶಸ್ತ್ರಾಗ್ನಿ ಜ್ವಾಲೆಗಳಿಂದ ಕತ್ತಲುಗಳು ಶಾಂತವಾದುವು. ಸೇನೆಯೆಲ್ಲವೂ ಹೊಸ ಬಾಣಗಳೆಂಬ ಅಪೂರ್ವ ರೋಮಗಳುಳ್ಳವಾದುವು.

೨೬. ಯಮಲೋಕ ಯಾತ್ರೆಯ ಆ ಕಾಲದಲ್ಲಿ ಕಬಂಧಗಳು ಎದ್ದು ನಟರಂತೆ ಸಾಲು ಸಾಲಾಗಿ ಕುಣಿದುವು. ಅದಕ್ಕೆ ತಕ್ಕಂತೆ ರಣ ಯೋಗ್ಯವಾದ ವೇಷವನ್ನು ಧರಿಸಿರುವ ತರುಣ ಪಿಶಾಚಿನಿಯರು ರಣೋದ್ರೇಕದಿಂದ ಗಟ್ಟಿಯಾಗಿ ಹಾಡಿದರು.

೨೭. ಆನೆಗಳ ಬಲವಾದ ದಂತಾದಂತಿ ಕಾಳಗದಲ್ಲಿ ಟಂಕಾರಗಳು ತುಂಬಿದುವು. ಕವಣೆ ಗಲ್ಲುಗಳು ಮಹಾ ನದಿಗಳಂತೆ ಆಕಾಶದಲ್ಲಿ ಓಡಿದುವು.

೨೮. ಗಾಳಿ ಬಂದಾಗ ಕಾಡಿನಲ್ಲಿ ಉದುರುವ ತರಗೆಲೆಗಳಂತೆ ಶವಗಳು ಉರುಳಿದುವು. ಮರಣವೆಂಬ ಮಳೆಗರೆಯುತ್ತಿರಲು, ರಣಾಂಗಣವೆಂಬ ಪರ್ವತದಿಂದ ರಕ್ತ ಪ್ರವಾಹಗಳು ಹರಿದುವು.

೨೯. ಧೂಳುಗಳೆಲ್ಲವೂ ರಕ್ತದಿಂದ ಅಡಗಿತು. ಕತ್ತಲೆಯೆಲ್ಲವೂ ಆಯುಧ ಪ್ರಕಾಶಗಳಿಂದ ಬೆಳಗಿತು. ಯುದ್ಧದಲ್ಲಿಯೇ ಮನಸ್ಸು ನಟ್ಟಿರುವುದರಿಂದ ಶಬ್ದವಾಗುವುದು ನಿಂತಿತು. ಸತ್ತರೂ ಸರಿಯೆಂಬ ನಿಶ್ಚಯದಿಂದ ಭೀತಿಗಳು ಅಳಿದುವು.

ಅಭವತ್ಕೇವಲಂ ಯುದ್ಧಮಪಶಬ್ದಮಸಂಭ್ರಮಂ |
ಅನಾಕುಲಾಂಬುವಾಹಾಭಂ ಖಡ್ಗವೀಚಿಸಟಾಂಕೃತಂ || ೩೦ ||

ಖದಖದರವಸಂವಹಚ್ಛರೌಘಂ
ಟಕಟಕಿತಾರವಸಂಪತದ್ಭುಶುಂಡಿ |
ಝಣಝಣರವಸಂಮಿಲನ್ಮಹಾಸ್ತ್ರಂ
ತಿಮಿತಿಮಿವದ್ರಣಮಾಸ ದುಸ್ತರಂ ತತ್ || ೩೧ ||

ಇತ್ಯಾರ್ಷೇ ಶ್ರೀವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
"ವಿದೂರಥನಿರ್ಯಾಣಂ" ನಾಮ ಷಟ್ಚತ್ವಾರಿಂಶಃ ಸರ್ಗಃ

---

೩೦. ನಿಶ್ಚಲವಾದ ಮೇಘದಂತೆ, ಯುದ್ಧವು ನಿಶ್ಶಬ್ದವಾಗಿ, ಗದ್ದಲವಿಲ್ಲದೆ ಕೊಂಚ ಹೊತ್ತು ನಡೆಯಿತು. ಖಡ್ಗಗಳೆಂಬ ಟಂಕಾರವು ಮಾತ್ರ ಕೇಳಿಸುತ್ತಿತ್ತು.

೩೧. ಶರಸಮೂಹಗಳು ಖದಖದ ಎಂದೂ, ಭುಶುಂಡಿಯು ಟಕಟಕಿಯೆಂದೂ, ಮಹಾಸ್ತ್ರಗಳು ಹೋರಾಡುತ್ತ ಝಣಝಣವೆಂದೂ ತಿಮಿತಿಮಿಯೆಂದೂ ಶಬ್ದ ಮಾಡುತ್ತಿರಲು ರಣವು ದುಸ್ತರವಾಗಿತ್ತು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ವಿದೂರಥ ನಿರ್ಯಾಣ" ಎಂಬ
ನಲವತ್ತಾರನೆಯ ಸರ್ಗವು.

ಸಪ್ತಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಏತಸ್ಮಿನ್ವರ್ತಮಾನೇ ತು ಘೋರೇ ಸಮರಸಂಗಮೇ |
ಲೀಲಾದ್ವಯಮುವಾಚೇದಂ ಜ್ಞಪ್ತಿಂ ಭಗವತೀಂ ಪುನಃ ॥ ೧ ॥

ಲೀಲಾದ್ವಯಮುವಾಚ—

ದೇವಿ ಕಸ್ಮಾದಕಸ್ಮಾನ್ನೋ ಭರ್ತಾ ಜಯತಿ ನೋ ರಣೇ |
ವದ ತ್ವಯ್ಯಪಿ ತುಷ್ಟಾಯಾಮಸ್ಮಿನ್ ವಿದ್ರುತವಾರಣೇ ॥ ೨ ॥

ಶ್ರೀ ಸರಸ್ವತ್ಯುವಾಚ—

ಚಿರಮಾರಾಧಿತಾನೇನ ವಿದೂರಥನೃಪಾರಿಣಾ |
ಅಹಂ ಪುತ್ರಿ ಜಯಾರ್ಥೇನ ನ ವಿದೂರಥಭೂಭೃತಾ ॥ ೩ ॥

ನಲವತ್ತೇಳನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ಹೀಗೆ ಸಮರವು ಘೋರವಾಗಿ ನಡೆಯುತ್ತಿರುವಾಗ, ಲೀಲೆಯರಿಬ್ಬರೂ ಸರಸ್ವತೀ ದೇವಿಯನ್ನು ಕುರಿತು ಮತ್ತೆ ಹೀಗೆ ಹೇಳಿದರು;—

೨. ಲೀಲೆಯರು ಹೇಳಿದರು:—ದೇವಿ, ಆನೆಗಳೂ ಕೂಡ (ಹೆದರಿ) ಓಡಿಹೋಗಬೇಕಾದ ಈ ರಣದಲ್ಲಿ ನಮ್ಮ ಗಂಡನು, ನೀನು ಪ್ರಸನ್ನೆಯಾಗಿದ್ದರೂ ಏಕೆ ಜಯಿಸಲಿಲ್ಲ ?

೩. ಶ್ರೀ ಸರಸ್ವತಿಯು ಹೇಳಿದಳು:—ಮಗಳೇ ವಿದೂರಥನು ವೈರಿಯು ಬಹು ಕಾಲದಿಂದ ತನಗೆ ಜಯವಾಗಬೇಕೆಂದು ಕೋರಿಕೊಂಡಿದ್ದನು. ವಿದೂರಥನು ಜಯಾರ್ಥಿಯಾಗಿ ನನ್ನನ್ನು ಪ್ರಾರ್ಥಿಸಿರಲಿಲ್ಲ.

ತೇನಾಸಾವೇವ ಜಯತಿ ಜೀಯತೇ ಚ ವಿದೂರಥಃ | || ೪ ||

* * *

ಜ್ಞಪ್ತಿರಂತರ್ಗತಾ ಸಂವಿದೇತಾಂ ಮಾಂ ಯೋ ಯದಾ ಯಥಾ |
ಪ್ರೇರಯತ್ಯಾಶು ತತ್ತಸ್ಯ ತದಾ ಸಂಪಾದಯಾಮ್ಯಹಂ || ೫ ||

ಯೋ ಯಥಾ ಪ್ರೇರಯತಿ ಮಾಂ ತಸ್ಯ ತಿಷ್ಠಾಮಿ ತತ್ಫಲಾ |
ನ ಸ್ವಭಾವೋಽನ್ಯತಾಂ ಧತ್ತೇ ವಹ್ನೇರೌಷ್ಣ್ಯಮಿವೈಷ ಮೇ || ೬ ||

ಅನೇನ ಮುಕ್ತ ಏವ ಸ್ಯಾಮಹಮಿತ್ಯಸ್ಮಿ ಭಾವಿತಾ |
ಪ್ರತಿಭಾರೂಪಿಣೀ ತೇನ ಬಾಲೇ ಮುಕ್ತೋ ಭವಿಷ್ಯತಿ || ೭ ||

ಏತದೀಯಃ ಸ್ವಯಂ ಶತ್ರುಃ ಸಿಂಧುರ್ನಾಮ ಮಹೀಪತಿಃ |
ಜಯಾಮ್ಯಹಂ ಸ್ಯಾಂ ಸಂಗ್ರಾಮ ಇತ್ಯನೇನಾಸ್ಮಿ ಪೂಜಿತಾ || ೮ ||

---

೪. ಅದರಿಂದ ಅವನೇ ಗೆಲ್ಲುವನು: ವಿದೂರಥನು ಸೋಲುವನು.

* * *

೫. ಸರ್ವ ಪ್ರಾಣಿಗಳಲ್ಲಿಯೂ ಅಂತರ್ಗತವಾಗಿರುವ ಸಂವಿತ್ತು ಎಂಬುದೇ ಜ್ಞಪ್ತಿಯಾದ ನಾನು. ಇಂತಹ ನನ್ನನ್ನು ಯಾವನು ಯಾವಾಗ ಎಂತು ಪ್ರೇರಿಸುವನೋ, ಅವನಿಗೆ ಆಗ ಅಂತಹ ಕೋರಿಕೆಯನ್ನು ನೆರವೇರಿಸಿಕೊಡುವೆನು.

೬. ಯಾವನು ನನ್ನನ್ನು ಹೇಗೆ ಪ್ರೇರಿಸುವನೋ ಅವನಿಗೆ ಅಂತಹ ಫಲವನ್ನು ಕೊಡುವೆನು. ಬೆಂಕಿಯ ಬಿಸಿಯು ಹೇಗೆ ಬದಲಾಗುವುದಿಲ್ಲವೋ ಹಾಗೆಯೇ ಈ ನನ್ನ ಸ್ವಭಾವವೂ ಬದಲಾಗುವುದಿಲ್ಲ.

೭. ವಿದೂರಥನು ಮುಕ್ತನಾಗಬೇಕೆಂದು ಪ್ರತಿಭಾರೂಪಿಣಿಯಾದ ನನ್ನನ್ನು ಪೂಜಿಸಿದನು. ಅದರಿಂದ, ಬಾಲೆಯರೇ, ಮುಕ್ತನೇ ಆಗುವನು.

೮. ಸಿಂಧು ರಾಜನೆಂಬ ನಿಮ್ಮ ಶತ್ರುವಾದ ಈ ಅರಸನು ಸಂಗ್ರಾಮದಲ್ಲಿ ನಾನು ಗೆಲ್ಲಬೇಕೆಂದು ನನ್ನನ್ನು ಪೂಜಿಸಿದನು.

ತಸ್ಮಾದ್ವಿದೂರಥೋ ದೇಹಂ ತತ್ಪ್ರಾಪ್ಯ ಸಹ ಭಾರ್ಯಯಾ |
ತ್ವಯಾನಯಾ ಚ ಕಾಲೇನ ಬಾಲೇ ಮುಕ್ತೋ ಭವಿಷ್ಯತಿ | ॥ ೯ ॥

ಏತದೀಯಂ ಸ್ವಯಂ ಶತ್ರುಃ ಸಿಂಧುರ್ನಾಮ ಮಹೀಪತಿಃ |
ಹತ್ವೈನಂ ವಸುಧಾಪೀಠೇ ಜಯೀ ರಾಜ್ಯಂ ಕರಿಷ್ಯತಿ ॥ ೧೦ ॥

ಶ್ರೀ ವಸಿಷ್ಠ ಉವಾಚ—

ಏವಂ ದೇವ್ಯಾಂ ವದಂತ್ಯಾಂ ತು ಬಲಯೋರ್ಯುಧ್ಯಮಾನಯೋಃ |
ರವಿರ್ದ್ರಷ್ಟುಮಿವಾಶ್ಚರ್ಯಮಾಜಗಾಮೋದಯಾಚಲಂ ॥ ೧೧ ॥

ಜೇಲುಸ್ತಿಮಿರಸಂಘಾತಾ ಬಲಾನೀವಾರಿರೂಪಿಣಃ |
ಅಸೃಜರ್ಜೀವಸಂಘಾನ್ಯೇ ಸಂಧ್ಯಾಯಾಂ ತಾರಕಾ ಇವ ॥ ೧೨ ॥

ಶನೈಃ ಪ್ರಕಟತಾಂ ಜಗ್ಮುರ್ಬಿಲಾಕಾಶಾದ್ರಿಭೂಮಯಃ |
ಭುವನಂ ಕಜ್ಜಲಾಂಭೋಧೇರಿವೋತ್ಕ್ಷಿಪ್ತಮರಾಜತ ॥ ೧೩ ॥

---

೯. ಆದರಿಂದ ಈ ವಿದೂರಥನು ಆ ಹಿಂದಿನ ದೇಹವನ್ನು ಹೊಂದಿ ಭಾರ್ಯೆಯರಾದ ನಿಮ್ಮೊಡನೆ ಸಕಾಲದಲ್ಲಿ, ಎಲೆ ಬಾಲೆಯರೆ, ಮುಕ್ತನಾಗುವನು.

೧೦. ಶತ್ರುವಾದ ಈ ಸಿಂಧು ರಾಜನು ಈ ವಿದೂರಥನನ್ನು ತಾನೇ ಕೊಂದು ಗೆದ್ದು ಭೂಮಂಡಲದಲ್ಲಿ ರಾಜ್ಯವಾಳುವನು.

೧೧. ಶ್ರೀವಸಿಷ್ಠನು ಹೇಳಿದನು:—ದೇವಿಯು ಹೀಗೆ ಹೇಳುತ್ತಿರುವ ಹಾಗೆಯೇ ಹೋರಾಡುತ್ತಿರುವ ಸೇನೆಗಳ ಆಶ್ಚರ್ಯವನ್ನು ನೋಡಬೇಕೆಂದು ಸೂರ್ಯನು ಉದಯಾಚಲಕ್ಕೆ ಬಂದನು.

೧೨. ಸಂಜೆಯಲ್ಲಿ ಕಾಣುವ ನಕ್ಷತ್ರಗಳಂತೆ ಶತ್ರುರೂಪದ ಪಿಶಾಚಾದಿ ಜೀವಸಂಘಗಳನ್ನು ಸೃಜಿಸುತ್ತಿದ್ದ ತಿಮಿರ ಸಂಘಾತಗಳೂ ಶತ್ರು ಸೈನ್ಯಗಳಂತೆ ಚಲಿಸಿದುವು.

೧೩. ಬಿಲ, ಆಕಾಶ, ಅದ್ರಿ, ಭೂಮಿಗಳು ಕ್ರಮವಾಗಿ ಕಣ್ಣಿಗೆ ಕಾಣುವಂತಾದುವು. ಕಾಡಿಗೆಯ ಕಡಲಿನಿಂದ ಕಿತ್ತೆತ್ತಿದಂತೆ ಭೂಮಂಡಲವು ರಾಜಿಸಿತು.

ಪೇತುಃ ಕನಕನಿಷ್ಯಂದಸುಂದರಾ ರವಿರಶ್ಮಯಃ |
ಶೈಲೇಷು ವರವೀರೇಷು ರಣೇ ರಕ್ತಚ್ಛಟಾ ಇವ || ೧೪ ||

ಅದೃಶ್ಯತ ತತೋ ವ್ಯೋಮ ತಥಾ ರಣಮಹೀತಲಂ |
ಬಾಹುಭಿರ್ಭ್ರಾಂತಭುಜಗಂ ಪ್ರಭಾಭಿಃ ಕೀರ್ಣಕಾಂಚನಂ || ೧೫ ||

ಕುಂಡಲೈಃ ಕೀರ್ಣರತ್ನೌಘಂ ಶಿರೋಭಿರ್ದೃಷ್ಟಪಂಕಜಂ |
ಆಯುಧೈಃ ಖಡ್ಗನೀರಂಧ್ರಂ ಶರೈಃ ಶಲಭನಿರ್ಭರಂ || ೧೬ ||

ರಕ್ತಾಭಾಸ್ಥಿರಸಂಧ್ಯಾಢ್ಯಂ ಸಸಿದ್ಧಪುರುಷಂ ಶವೈಃ |
ಹಾರೈಃ ಸಸರ್ಪನಿರ್ಮೋಕಂ ಕಟ್ಯೈರಿದ್ಧಂ ಸುಸಂಕುಲಂ || ೧೭ ||

ಲಸಲ್ಲತಂ ಪತಾಕಾಭಿರುರುಭಿಃ ಕೃತತೋರಣಂ |
ಹಸ್ತೈಃ ಪಾದೈಃ ಪಲ್ಲವಿತಂ ಶರೈಃ ಶರವಣೋಪಮಂ || ೧೮ ||

---

೧೪. ಕನಕಧಾರೆಯಂತೆ ಸುಂದರವಾದ ಸೂರ್ಯಕಿರಣಗಳು, ರಣರಂಗದಲ್ಲಿ ವೀರಶ್ರೇಷ್ಠರ ಮೈಮೇಲೆ ಹರಿಯುವ ರಕ್ತ ಪ್ರವಾಹಗಳಂತೆ ಬೆಟ್ಟಗಳ ಮೇಲೆ ಹರಿದುವು.

೧೫. ಆಗ ರಣರಂಗವು ಭಟರ ತೋಳಗಳ ಚಲನದಿಂದ ಹಾವುಗಳು ಸುತ್ತಿಕೊಂಡಿರುವಂತೆಯೂ, ಅಂತರಿಕ್ಷವು ಸೂರ್ಯಕಾಂತಿಯು ಹರಡಿರಲು ಚಿನ್ನ ವನ್ನು ಚೆಲ್ಲುವಂತೆಯೂ ಇತ್ತು.

೧೬. ಕರ್ಣಕುಂಡಲಗಳು ಚೆಲ್ಲಾಡಿರಲು ರತ್ನಸಮೂಹಗಳನ್ನು ಚೆಲ್ಲಿ ದಂತಿತ್ತು. ತಲೆಗಳು ಉರುಳಿರಲು ಕಮಲಗಳಂತೆ ಕಾಣುತ್ತಿತ್ತು. ಆಯುಧ ಗಳು ತುಂಬಿರಲು ಖಡ್ಗಮೃಗಗಳು ಒತ್ತಾಗಿ ನಿಂತಿತ್ತು. ಬಾಣಗಳು ಇಟ್ಟಣಿ ಸಿರಲು ಮಿಡತೆಗಳ ದಂಡುಹಿಡಿದಂತಿತ್ತು.

೧೭. ಅಲ್ಲಿ ಕೆಂಪು ಕಾಂತಿಯು ವ್ಯಾಪಿಸಿರಲು ಸ್ಥಿರವಾಗಿ ಸಂಧ್ಯೆಯು ನೆಲ ಸಿರುವುದೆಂಬಂತೆ, ಶವಗಳು ಬಿದ್ದಿರಲು ಸಿದ್ಧಪುರುಷರು ತುಂಬಿರುವಂತೆ, ಹಾರ ಗಳು ಹಾರಾಡುತ್ತಿರುವ ಹಾವಿನ ಪೊರೆಗಳಂತೆ, ಕವಚಗಳು ಹರಿದು ಬಿದ್ದು ದಾರಿಗೆ ಅಡ್ಡವಾಗಿ ಇದ್ದುವು.

೧೮. (ಆ ರಣಭೂಮಿಯು) ಪತಾಕೆಗಳೆಂಬ ಲತೆಗಳು, ತೊಡೆಗಳೆಂಬ

ಶಸ್ತ್ರಾಂಶುಶಾದ್ವಲಶ್ಯಾಮಂ ಶಸ್ತ್ರಪೂಗೈಃ ಸಕೈತಕಂ |
ಕೀರ್ಣಮಾಯುಧಮಾಲಾಭಿರುನ್ಮತ್ತಮಿವ ಭೈರವಂ ‖ ೧೯ ‖

ಫುಲ್ಲಾಶೋಕವನಾಕಾರಂ ಶಸ್ತ್ರಸಂಘಟ್ಟವಹ್ನಿಭಿಃ |
ಉದಘುಂಘುಂಮಹಾಶಬ್ದೈರ್ವಿದ್ರವತ್ಸಿದ್ಧನಾಯಕೈಃ ‖ ೨೦ ‖

ಸೌವರ್ಣನಗರಾಕಾರಂ ಬಾಲಾರ್ಕಕಚಿತಾಯುಧೈಃ |
ಪ್ರಾಸಾಸಿಶಕ್ತಿಚಕ್ರರ್ಷ್ಟಿಮುದ್ಗರಾರಣಿತಾಂಬರಂ ‖ ೨೧ ‖

ವಹದ್ರಕ್ತನದೀರಂಹಃ ಪ್ರೋಹ್ಯಮಾನಶವೋತ್ಕರಂ |
ಭುಶುಂಡೀ ಶಕ್ತಿ ಕುಂತಾಸಿಶೂಲಪಾಷಾಣಸಂಕುಲಂ ‖ ೨೨ ‖

ಶೂಲಶಸ್ತ್ರಾಹತಿಚ್ಛಿನ್ನಕಬಂಧಪತನಾನ್ವಿತಂ |
ಕಾಲತಾಂಡವವೇತಾಲಕುಲಾರಬ್ಧಹಲಾರವಂ ‖ ೨೩ ‖

ತೋರಣ ಕಂಭಗಳೂ, ಹಸ್ತ, ಪಾದಗಳೆಂಬ ಪಲ್ಲವಗಳೂ ಇರಲು, ಬಾಣಗಳಿಂದ ಆ ರಣಭೂಮಿಯು ಜೊಂಡುಹುಲ್ಲಿನ ವನದಂತಿತ್ತು.

೧೯. ಶಸ್ತ್ರಕಾಂತಿಗಳಿಂದ ಹುಲ್ಲು ಹಸುರಾಗಿ, ಶಸ್ತ್ರಗಳೆಂಬ ತಾಳೆ ಹೂಗಳಿಂದ ಕೂಡಿ, ಆಯುಧ ಮಾಲೆಗಳನ್ನು ಧರಿಸಿದ ಉನ್ಮತ್ತ ಭೈರವನಂತಿತ್ತು.

೨೦. ಶಸ್ತ್ರ ಸಂಘಟ್ಟದಿಂದ ಉಂಟಾದ ಬೆಂಕಿಯಿಂದ (ಆ ರಣಭೂಮಿಯು ಕೆಂಪಾಗಿ) ಚಿಗುರುತ್ತಿರುವ ಅಶೋಕವನದಂತಿತ್ತು. ಆ ಅಗ್ನಿ ಕಣಗಳು ಘುಂ ಘುಂ ಎಂದು ಸಮುದ್ರದಂತೆ ಮಹಾಶಬ್ದ ಮಾಡುತ್ತಿರಲು ಸಿದ್ಧನಾಯಕರೂ ಹೆದರಿ ಓಡುತ್ತಿರುವರು.

೨೧. ಬಾಲಾರ್ಕನಲ್ಲಿ ಆಯುಧಗಳು ಹೊಳೆಯುತ್ತಿರಲು ರಣಭೂಮಿಯು ಸುವರ್ಣಮಯವಾದ ನಗರದಂತಿತ್ತು. ಪ್ರಾಸ, ಖಡ್ಗ, ಶಕ್ತಿ, ಚಕ್ರ, ಋಷ್ಟಿ, ಮುದ್ಗರ, ಮೊದಲಾದ ಆಯುಧಗಳ ಶಬ್ದದಿಂದ ಆಕಾಶವು ತುಂಬಿತ್ತು.

೨೨. ಹರಿಯುತ್ತಿರುವ ರಕ್ತನದಿಗಳ ವೇಗಕ್ಕೆ ಸಿಕ್ಕಿ ಹೆಣಗಳು ಕೊಚ್ಚಿ ಹೋಗುತ್ತಿದ್ದುವು. ಭುಶುಂಡಿ, ಶಕ್ತಿ, ಕುಂತ, ಖಡ್ಗ, ಶೂಲ, ಪಾಷಾಣಗಳು ರಣಭೂಮಿಯಲ್ಲಿ ತುಂಬಿದ್ದುವು.

೨೩. ಶೂಲ, ಶಸ್ತ್ರಗಳ ಏಟು ತಿಂದು ಭಿನ್ನ ಭಿನ್ನವಾಗಿ ಕಬಂಧಗಳು ಬೀಳುತ್ತಿದ್ದುವು. ವೇತಾಳಗಳು ಪ್ರಳಯ ನರ್ತನವಾಡುತ್ತ ಕೋಲಾಹಲ ಮಾಡುತ್ತಿದ್ದುವು.

ಶೂನ್ಯೇ ರಣಾಂಗಣೇ ದೀಪ್ತೌ ಪದ್ಮಸಿಂಧ್ವೋ್ವೇ ರಥೌ ಚಲೌ |
ಅದೃಶ್ಯೇತಾಂ ನಭಶ್ಚಿಹ್ನೌ ಚಂದ್ರಸೂರ್ಯೌ ದಿವೀವ ತೌ || ೨೪ ||

ಚಕ್ರಶೂಲಭುಶುಂಡ್ಯೃಷ್ಟಿಪ್ರಾಸಾಯುಧ ಸಮಾಕುಲೌ |
ಸಹಸ್ರೇಣ ಸಹಸ್ರೇಣ ವೀರಾಣಾಂ ಪರಿವಾರಿತೌ || ೨೫ ||

ವಿಚರಂತೌ ಯಥಾಕಾಮಂ ಮಂಡಲೈರ್ವಿತತಾರವೈಃ |
ಸಚೀತ್ಕಾರಮಹಾಚಕ್ರಪಿಷ್ಟಾನೇಕಮೃತಾಮೃತೌ || ೨೬ ||

ತರಂತೌ ರಕ್ತಸರಿತೌ ಮತ್ತವಾರಣಲೀಲಯಾ |
ಕೇಶಶೈವಲಸಂಪನ್ನೇ ಚಕ್ರಚಕ್ರಜಲೇಂದುಕೇ || ೨೭ ||

ವಹಚ್ಚಕ್ರಾಹತಿಕ್ಷೋಭಪಾತಿತಾಕುಲವಾರಣೌ |
ಮಣಿಮುಕ್ತಾಝುಣತ್ಕಾರ ರಣತ್ಕೂಬರಕಾರವೌ || ೨೮ ||

---

೨೪. ಹೀಗೆ ಸೈನಿಕರು ಹತರಾಗಿ ಶೂನ್ಯವಾದ ರಣಭೂಮಿಯಲ್ಲಿ ಪದ್ಮ ರಾಜ (ವಿದೂರಥ) ಸಿಂಧುರಾಜರ ರಥಗಳು ಎದುರುಬದುರಾದುವು. ಆಕಾಶಕ್ಕೆ ಭೂಷಣ ಪ್ರಾಯರಾದ ಚಂದ್ರಸೂರ್ಯರಂತೆ ಅವು ಮೆರೆಯುತ್ತಿದ್ದುವು.

೨೫. ಆ ರಥಗಳಲ್ಲಿ ನಾನಾ ಆಯುಧಗಳು ತುಂಬಿದ್ದುವು. ಒಂದೊಂದು ರಥಕ್ಕೂ ಸಾವಿರಾರುಜನ ವೀರರೂ ಕಾವಲಿದ್ದರು.

೨೬. ಆ ಎರಡು ರಥಗಳೂ ಯಥೇಚ್ಛವಾಗಿ ಮಂಡಲಾಕಾರವಾಗಿ ದೊಡ್ಡ ಶಬ್ದದಿಂದ ಸಂಚರಿಸಿದುವು. ಚೀತ್ಕಾರಮಾಡುವ ಆ ಮಹಾರಥದ ದೊಡ್ಡ ಚಕ್ರಗಳಿಗೆ ಸಿಕ್ಕಿ ಅನೇಕರು ಮೃತರೂ ಮೃತರಲ್ಲದವರೂ ಚೂರ್ಣವಾಗಿ ಹೋದರು.

೨೭. ಮದ್ದಾನೆಗಳಂತೆ ಲೀಲಾಜಾಲವಾಗಿ ಆ ರಥಗಳು ಕೇಶವೆಂಬ ಪಾಚಿ ಗಳೂ ಜಲದಲ್ಲಿ ಪ್ರತಿಬಿಂಬಿಸಿದ ಚಂದ್ರನಂತೆ ಕಾಣುವ ಚಕ್ರಸಮೂಹಗಳೂ ಉಳ್ಳ ರಕ್ತನದಿಗಳನ್ನು ದಾಟಿದುವು.

೨೮. ಓಡುತ್ತಿರುವ ರಥ ಚಕ್ರಗಳಿಗೆ ಸಿಕ್ಕಿ, ನೊಂದು ಒದ್ದಾಡಿ ಆನೆ ಗಳೂ ಬಿದ್ದುಹೋಗುತ್ತಿದ್ದುವು. ಆ ರಥಗಳ ಮೂತಿಯ ಮರಕ್ಕೆ ಕಟ್ಟಿರುವ ಮುಕ್ತಾಮಣಿಗಳು ಝುಣತ್ಕಾರ ಮಾಡುತ್ತಿದ್ದುವು.

ವಾತಾಹತಪತಾಕಾಗ್ರಪಟತ್ಪಟಪಟಾರವೌ |
ಅನುಯಾತೌ ಮಹಾವೀರೈರ್ಭೂರಿಭಿರ್ಭೀರು ಸೈನಿಕೈಃ || ೨೯ ||

ಧಾರಾ ವಮದ್ಭಿಃ ಕುಂತಾನಾಂ ಶರಾಣಾಂ ಧನುಷಾಮಪಿ |
ಶಕ್ತೀನಾಂ ಪ್ರಾಸಶಂಕೂನಾಂ ಚಕ್ರಾಣಾಂ ಕಚತಾಂ ರಣೇ || ೩೦ ||

ತತ್ರ ತೌ ಕ್ಷಣಮಾವೃತ್ಯ ಮಂಡಲೇ ಭೂಮಿಕುಂಡಲೇ |
ಉಭೌ ವ್ಯತಿಬಭೂವಾತೇ ಸಂಮುಖಾವಾಯುಧಾವುಭೌ || ೩೧ ||

ನಾರಾಚಧಾರಾ ನಿಕರವಿಕ್ಷೇಪಕರಕಧ್ವನೌ |
ಅನ್ಯೋನ್ಯಮಪಿ ಗರ್ಜಂತೌ ಮತ್ತಾಬ್ಧಿಜಲದಾವಿವ || ೩೨ ||

ತಯೋಃ ಪ್ರಹರತೋರ್ಬಾಣಾ ವಸುಧಾನರಸಿಂಹಯೋಃ |
ಪಾಷಾಣ ಮುಸಲಾಕಾರಾ ವ್ಯೋಮ ವಿಸ್ತಾರಿಣೋಽಭವನ್ || ೩೩ ||

---

೨೯. ಆ ರಥಗಳ ಪತಾಕೆಗಳ ಕೊನೆಗಳು ಗಾಳಿಗೆ ಸಿಕ್ಕಿ ಪಟಪಟ ಎನ್ನುತ್ತಿರುವುವು. ಆ ರಥಗಳ ಹಿಂದೆ ಅನೇಕಾನೇಕ ಮಹಾವೀರರೂ ಭೀರು ಸೈನಿಕರೂ ಬರುತ್ತಿರುವರು.

೩೦. ಆ ವೀರರು ಕುಂತ, ಶರ, ಧನಸ್ಸು, ಶಕ್ತಿ, ಪ್ರಾಸ, ಶಂಕು, ಚಕ್ರಾದಿ ಆಯುಧಗಳ ಮಳೆಯನ್ನು ಕರೆಯುತ್ತ ಇದ್ದರು.

೩೧. ರಣಭೂಮಿದೇವಿಯ ಕುಂಡಲಗಳೋ ಎಂಬಂತಿದ್ದ ಆ ಎರಡೂ ರಥಗಳು ಮಂಡಲಾಕಾರವಾಗಿ ಕ್ಷಣಕಾಲ ಸುತ್ತಿ, ಎದುರುಬದುರು ಬಿದ್ದು ಒಂದನ್ನೊಂದು ಮೀರಿಸಲು ಯತ್ನಿಸಿದುವು.

೩೨. ಬಾಣಗಳ ಧಾರಾಸಮೂಹದಿಂದ ಆಲಿ ಕಲ್ಲುಸುರಿದಂತಾಗುತ್ತಿರಲು ರೇಗಿರುವ ಸಮುದ್ರ ಮೇಘಗಳಂತೆ ಒಂದನ್ನೊಂದು ನೋಡಿ ಗರ್ಜಿಸುತ್ತಲೂ ಇದ್ದುವು.

೩೩. ಆ ಇಬ್ಬರು ರಾಜರೂ ವಸುಧಾನರಸಿಂಹರಂತೆ, ಬಾಣಗಳನ್ನು ಹೊಡೆಯುತ್ತಿದ್ದರೆ, ಪಾಷಾಣ ಮುಸಲಾಕಾರಗಳಾದ ಆ ಬಾಣಗಳು ಆಕಾಶವೆಲ್ಲ ತುಂಬಿಹೋದುವು.

ಕರವಾಲಮುಖಾಃ ಕೇಚಿನ್ಮುದ್ಗರಾನನಕಾಃ ಪರೇ |
ಶಿತಚಕ್ರಮುಖಾಃ ಕೇಚಿತ್ಪರಶುವಕ್ತ್ರಕಾಃ || ೩೪ ||

ಕೇಚಚ್ಛಕ್ತಿಮುಖಾಃ ಕೇಚಿತ್ಕೇಚಿತ್ ಶೂಲಶಿಲಾಮುಖಾಃ |
ತ್ರಿಶೂಲವದನಾಃ ಕೇಚಿತ್ ಸ್ಥೂಲಾ ಇವ ಮಹಾಶಿಲಾಃ || ೩೫ ||

ಪ್ರಲಯಪವನಪಾತಿತಾಃ ಶಿಲೌಘಾ
ಇವ ನಿಪತಂತಿ ಶಿಲೀಮುಖಾಸ್ತದಾಸ್ಮ |
ಪ್ರಮಿಲಿತಮಭವತ್ತಯೋಸ್ತದಾನೀಂ
ಪ್ರಲಯ ವಿಜೃಂಭಿತಸಿಂಧು ಸಂಭ್ರಮೇಣ || ೩೬ ||

ಇತ್ಯಾರ್ಷೇ ಶ್ರೀ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿಪ್ರಕರಣೇ
"ವಿದೂರಥ ಸಿಂಧುಸಮಾಗಮೋ" ನಾಮ ಸಪ್ತಚತ್ವಾರಿಂಶಃ ಸರ್ಗಃ

೩೪–೫. ಆ ಬಾಣಗಳು ಖಡ್ಗ, ಮುದ್ಗರ, ಚಕ್ರ, ಪರಶು, ಶಕ್ತಿ, ಶೂಲ, ಶಿಲಾ, ತ್ರಿಶೂಲ, ಮುಖಗಳಾಗಿದ್ದುವು: ಇನ್ನು ಕೆಲವು ಮಹಾಶಿಲೆಗಳಂತೆ ಸ್ಥೂಲಗಳಾಗಿದ್ದುವು.

೩೬. ಪ್ರಳಯವಾಯುವು ಕಿತ್ತು ಎತ್ತಿಎಸೆದ ಶಿಲಾಸಮೂಹಗಳೆಂಬಂತೆ, ಬಾಣಗಳು ಆಗ ಬೀಳುತ್ತಿರಲು, ಪ್ರಳಯಾರ್ಣವಗಳೆರಡು ಉಕ್ಕಿ ಬಂದು ಒಂದನ್ನೊಂದು ತಾಟಿಸಿತೋ ಎಂಬಂತೆ ಆಯ್ತು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ವಿದೂರಥ ಸಿಂಧು ಸಮಾಗಮ್ಯವರ್ಣನ" ಎಂಬ
ನಲವತ್ತೇಳನೆಯ ಸರ್ಗವು.

ಅಷ್ಟಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಪ್ರಾಪ್ಯ ರಾಜಾ ಪುರಃ ಪ್ರಾಪ್ತಂ ಸಿಂಧುಮುದ್ಧುರಕಂದರಂ |
ಮಧ್ಯಾಹ್ನತಪನಾಂತೇನ ಕೋಪೇನ ವಿತತೋಽಭವತ್ || ೧ ||

ಧನುರಾಸ್ಫಾಲಯಾಮಾಸ ಚಿರಾರಾವಿತದಿಂಗ್ಮುಖಂ |
ಕಲ್ಪಾಂತಪವನಾಸ್ಫೋಟ ಇವ ಮೇರುಗಿರೇಸ್ತಟಂ || ೨ ||

ವಿಸಸರ್ಜೋರ್ಜಿತೋ ರಾಜಾ ಪ್ರಲಯಾರ್ಕಃ ಕರಾನಿವ |
ತೂಣೀರರಜನೀ ಬದ್ಧಾಃ ಶಿಲೀಮುಖಪರಂಪರಾಃ || ೩ ||

ಏಕಏಕ ವಿನಿರ್ಯಾತಿ ಗುಣಾತ್ತಸ್ಯ ಶಿಲೀಮುಖಃ |
ಸಹಸ್ರಂ ಭವತಿ ವ್ಯೋಮ್ನಿ ಗಚ್ಛನ್ಪತತಿ ಲಕ್ಷಶಃ || ೪ ||

ನಲವತ್ತೆಂಟನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :—ವಿದೂರಥನು ಗರ್ವದಿಂದ ತಲೆಯೆತ್ತಿಕೊಂಡು ಎದುರು ನಿಂತಿರುವ ಸಿಂಧು ರಾಜನನ್ನು ಕಂಡು ಮಧ್ಯಾಹ್ನದ ಸೂರ್ಯನಂತೆ ಕೋಪದಿಂದ ವಿಜೃಂಭಿಸಿದನು.

೨. ಅವನು ಧನುಷ್ಟಂಕಾರಮಾಡಲು, ಆ ಶಬ್ದವು ದಿಙ್ಮಂಡಲಗಳಲ್ಲಿ ಪ್ರತಿಧ್ವನಿಯು ಮೊಳಮೊಳಗಿತು: ಪ್ರಳಯ ಮಾರುತನು ಮೇರುಗಿರಿ ತಟವನ್ನು ಒಡೆದನೋ ಎಂಬತ್ತಿತ್ತು.

೩. ರೇಗಿದ ಆ ರಾಜನು ತನ್ನ ತೂಣೀರವೆಂಬ ಕಮಲದಲ್ಲಿ ಅಡಗಿದ್ದ ಬಾಣಗಳೆಂಬ ದುಂಬಿಗಳನ್ನು, ಪ್ರಳಯ ಸೂರ್ಯನು ಕಿರಣಗಳನ್ನು ಬಿಡುವಂತೆ ಬಿಟ್ಟನು.

೪. ಆತನ ಧನುಸ್ಸಿನಿಂದ ಹೊರಟಾಗ ಬಾಣವು ಒಂದಾಗಿದ್ದು, ಆಕಾಶದಲ್ಲಿ ಸಾವಿರವಾಗಿ, ಶತ್ರುಗಳಲ್ಲಿ ಬೀಳುವಾಗ ಒಂದು ಲಕ್ಷವಾಗುತ್ತಿತ್ತು.

ಸಿಂಧೋರಪಿ ತಥೈವಾಸೀಚ್ಛಕ್ತಿರ್ಲಾಘವಮೇವ ಚ |
ವರೇಣ ವರದಸ್ಯೈವಂ ವಿಷ್ಣೋರ್ಧಾನುಷ್ಕತಾ ತಯೋಃ || ೫ ||

ಮುಸಲಾ ನಾಮ ತೇ ಬಾಣಾ ಮುಸಲಾಕೃತಯೋಽಂಬರಂ |
ಛಾದಯಾಮಾಸುರುನ್ಮಾದಾಃ ಕಲ್ಪಾಂತಾಶನಯೋ ಯಥಾ || ೬ ||

ರೇಜುಃ ಕನಕನಾರಾಚರಾಜಯೋ ವ್ಯೋಮ್ನಿ ಸಸ್ವನಾಃ |
ರಸಂತ್ಯಃ ಕಲ್ಪವಾತಾರ್ತಾಃ ಪತಂತ್ಯ ಇವ ತಾರಕಾಃ || ೭ ||

ವಿದೂರಥಾಚ್ಛರಾಸಾರಾ ಅಜಸ್ರಮಭಿನಿರ್ಯಯುಃ |
ಅಬ್ಧೇರಿವ ಪಯಃಪೂರಾಃ ಸೂರ್ಯಾದಿವ ಮರೀಚಯಃ || ೮ ||

ಪ್ರಚಂಡಪವನೋದ್ಧೂತಾತ್ ಪುಷ್ಪಾಣೀವ ಮಹಾತರೋಃ |
ಅಯಃ ಪಿಂಡಾದಿವೋತ್ತಪ್ತಾತ್ತಾಡಿತಾತ್ಕಣಪಂಕ್ತಯಃ || ೯ ||

ಧಾರಾವರ್ಷಮುಚ ಇವ ಸೀಕರಾ ಇವ ನಿರ್ಝರಾತ್ |
ತತ್ಪುರಾಗ್ನಿಮಹಾದಾಹಾತ್ ಸ್ಫುಲಿಂಗಾ ಇವ ಭಾಸುರಾಃ || ೧೦ ||

---

೫. ಸಿಂಧು ರಾಜನಿಗೂ ಅದೇ ಶಕ್ತಿ ಲಾಘವಗಳು ಇದ್ದುವು. ವರಪ್ರದನಾದ ಮಹಾವಿಷ್ಣುವಿನ ವರದಿಂದ ಅವನಿಗೆ ಇಂತಹ ಧಾನುಷ್ಕತೆಯು ಇದ್ದುದು.

೬. ಮುಸಲಗಳೆಂಬ ಮುಸಲಾಕೃತಿ ಬಾಣಗಳು ಪ್ರಳಯದ ಸಿಡಿಲುಗಳೆಂಬಂತೆ ಅರ್ಭಟಿಸುತ್ತ ಅಂಬರವನ್ನೆಲ್ಲ ತುಂಬಿದುವು.

೭. ಪ್ರಳಯ ವಾತಕ್ಕೆ ಸಿಕ್ಕಿ ಸಶಬ್ದವಾಗಿ ಉದುರುವ ನಕ್ಷತ್ರಗಳಂತೆ ಸುವರ್ಣ ಬಾಣ ಸಮೂಹಗಳು ಮೊರೆಯುತ್ತ ಆಕಾಶದಲ್ಲೆಲ್ಲ ಹಾರಾಡಿದುವು.

೮–೧೦. ಸಮುದ್ರದಲ್ಲಿ ನೀರಿನ ಹೊಳೆಗಳೂ ಸೂರ್ಯನಿಂದ ಕಿರಣಗಳೂ ಹೊರಡುವಂತೆ, ಪ್ರಚಂಡ ವಾತಗಳಿಗೆ ಸಿಕ್ಕಿದ ಮರದಿಂದ ಹೂಗಳುದುರುವಂತೆ, ಕಾಸಿ ಬಡಿಯುತ್ತಿರುವ ಕಬ್ಬಿಣದ ಗುಂಡಿನಿಂದ ಕಿಡಿಗಳು ಹೊರಡುವಂತೆ, ಧಾರಾವರ್ಷ ಕರೆಯುವ ನಿರ್ಝರದಿಂದ ಶೀಕರಗಳು ಹಾರುವಂತೆ, ಪಟ್ಟಣವು ಹತ್ತಿಕೊಂಡು ಉರಿಯುವಾಗ ಕೆಂಪಗಿರುವ ಕಿಡಿಗಳು ಹಾರುವಂತೆ, ವಿದೂರಥನಿಂದ ಶರವರ್ಷವೂ ನಿರಂತರವಾಗಿ ಹೊರಟಿತು.

ತಯೋಶ್ಚಟಚಟಾಸ್ಫೋಟಂ ಶೃಣ್ವತ್ಕೋದಂಡಯೋರ್ದ್ವಯೋಃ |
ಬಲದ್ವಯಮಭೂತ್ಪ್ರೇಕ್ಷಾಮೂಕಂ ಶಾಂತ ಇವಾಂಬುಧಿಃ || ೧೧ ||

ವಹಂತಿಸ್ಮ ಶರಾಪೂರಾ ಗಂಗಾಪೂರಾ ಇವಾಂಬರೇ |
ಸಿಂಧೋರಭಿಮುಖಂ ಯುದ್ಧೇ ಘರ್ಘರಾರಾವರಂಹಸಃ || ೧೨ ||

ಕಚತ್ಕನಕನಾರಾಚಶರವರ್ಷಾ ಅನಾರತಂ |
ವಹಚ್ಛವಶವಾಶಬ್ದಂ ನಿರ್ಯಯುರ್ಧನುರಂಬುಧಾತ್ || ೧೩ ||

ಬಾಣಮಂದಾಕಿನೀಪೂರಂ ವ್ರಜಾತಂ ಸಿಂಧುಪೂರಣೇ|
ವಾತಾಯನಾತ್ತಮಾಲೋಕ್ಯ ಲೀಲಾ ತತ್ಪುರವಾಸಿನೀ || ೧೪ ||

ತೇನ ಬಾಣಸಮೂಹೇನ ಜಯಮಾಶಂಕ್ಯ ಭರ್ತರಿ |
ಉವಾಚ ವಾಕ್ಯಮಾನಂದವಿಕಸನ್ಮುಖಪಂಕಜಾ || ೧೫ ||

ಜಯ ದೇವಿ ಜಯತ್ಯೇಷ ನಾಥೋಽಸ್ಮಾಕಂ ವಿಲೋಕಯ |
ಕಿಂಚಾನೇನ ಶರೌಘೇಣ ಮೇರುರಪ್ಯೇತಿ ಚೂರ್ಣತಾಂ || ೧೬ ||

---

೧೧. ಚಟಚಟನೆ ಧನುಷ್ಟಂಕಾರ ಮಾಡುತ್ತ ಅವರಿಬ್ಬರೂ ಹೋರಾಡುತ್ತಿರಲು ಉಭಯ ಸೈನ್ಯವೂ ಶಾಂತ ಸಮುದ್ರದಂತೆ ಪ್ರೇಕ್ಷಾಮೂಕವಾಗಿತ್ತು.

೧೨. ಬಾಣಪ್ರವಾಹಗಳು ಗಂಗಾ ಪ್ರವಾಹದಂತೆ ಯುದ್ಧದಲ್ಲಿ ಸಿಂಧುರಾಜನಿಗೆ ಅಭಿಮುಖವಾಗಿ ಸಘರ್ಘರವಾಗಿ ನುಗ್ಗಿದುವು.

೧೩. ಧನುರ್ಮೇಘದಿಂದ ಶವಶವ ಶಬ್ದಮಾಡುತ್ತ ಹೊಳೆಯುತ್ತಿರುವ ಸುವರ್ಣಬಾಣಗಳು ಸಂತತವಾಗಿ ಮಳೆಯಾಗಿ ಸುರಿದುವು.

೧೪. ಬಾಣ ಗಂಗಾನದಿಯು ಸಿಂಧು ಪೂರಣಕ್ಕಾಗಿ ಹೋಗುತ್ತಿರುವುದನ್ನು ಕಿಟಕಿಯಿಂದಲೇ ದ್ವಿತೀಯಲೀಲೆಯು ನೋಡಿ,

೧೫. ಗಂಡನಿಗೆ ಜಯವಾಗಬಹುದೆಂದು ಊಹಿಸಿ, ಆನಂದದಿಂದ ಅರಳಿದ ಮುಖವುಳ್ಳವಳಾಗಿ ದೇವಿಯನ್ನು ಕುರಿತು ಹೀಗೆ ನುಡಿದಳು :—

೧೬. ದೇವಿಗೆ ಜಯವಾಗಲಿ. ನನ್ನ ಗಂಡನು ಗೆಲ್ಲುತ್ತಿರುವನು ನೋಡು, ಈ ಬಾಣಗಳಿಂಧ ಮೇರುವು ಕೂಡ ಚೂರ್ಣವಾಗುವುದಲ್ಲವೆ ?

ತಸ್ಯಾಮೇವಂ ವದಂತ್ಯಾ ತು ಘನಸ್ನೇಹರವಾಕುಲಂ |
ಪ್ರೇಕ್ಷಣವ್ಯಗ್ರಯೋರ್ದೇವ್ಯೋಃ ಹಸಂತ್ಯೋರ್ಮಾನುಷೀಂ ಹೃದಾ || ೧೭ ||

ತಚ್ಛರಾರ್ಣವಮಾವುತ್ತಮಪಿಬತ್ ಸಿಂಧುಬಾಡವಃ |
ಶರೋಷ್ಮಣಾ ಹ್ಯಗಸ್ತ್ಯೇನ ಜಹ್ನುರ್ಮಂದಾಕಿನೀಮಿವ || ೧೮ ||

ಬಾಣವರ್ಷೇಣ ಕಣಶಸ್ತಂ ಸಾಯಕಮಹಾಘನಂ |
ಛಿತ್ತ್ವಾ ತನುರಜಃ ಕೃತ್ವಾ ಚಿಕ್ಷೇಪ ಗಗನಾರ್ಣವೇ || ೧೯ ||

ಯಥಾ ದೀಪಸ್ಯ ಶಾಂತಸ್ಯ ನ ಪರಿಜ್ಞಾಯತೇ ಗತಿಃ |
ತಸ್ಯ ಸಾಯಕಸಂಘಸ್ಯ ನ ವಿಜ್ಞಾತಾ ತಥಾ ಗತಿಃ || ೨೦ ||

ತಂ ಛಿತ್ವಾ ಸಾಯಕಾಸಾರಂ ಶರೀರಾಂಬುಧರಂ ಘನಂ |
ವ್ಯೋಮ್ನಿ ಪ್ರಸಾರಯಾಮಾಸ ರಸಾಚ್ಛವಶತಾನ್ವಿತಂ || ೨೧ ||

---

೧೭. ಹೀಗೆಂದು ಪತ್ನಿಸ್ನೇಹದಿಂದ ಅವಳು ಹೇಳುತ್ತಿರುವುದನ್ನು ಕೇಳಿ, ಆ ಯುದ್ಧವನ್ನು ನೋಡುತ್ತಿರುವ ದೇವಿಯರಿಬ್ಬರೂ ನಕ್ಕರು.

೧೮. ವಿಜೃಂಭಿಸಿರುವ ಆ ಶರಸಮುದ್ರವನ್ನು ಸಿಂಧುಬಾಡಬನು, ಅಗಸ್ತ್ಯನು ಸಮುದ್ರವನ್ನೂ ಜಹ್ನುವು ಗಂಗೆಯನ್ನೂ ಕುಡಿದಂತೆ ತನ್ನ ಬಾಣಗಳೆಂಬ ತೇಜಸ್ಸಿನಿಂದ ಕುಡಿದುಬಿಟ್ಟನು.

೧೯. ಸಿಂಧುರಾಜನು ಆ ಬಾಣ ಮಹಾಮೇಘವನ್ನು ತನ್ನ ಬಾಣವರ್ಷದಿಂದ ಕಣಕಣವಾಗಿ ಕತ್ತರಿಸಿ ಧೂಳುಮಾಡಿ ಗಗನಾರ್ಣವದಲ್ಲಿ ಹಾಕಿಬಿಟ್ಟನು.

೨೦. ಆರಿಹೋದ ದೀಪವೆಲ್ಲಿ ಹೋಯಿತೋ ಎಂಬುದು ತಿಳಿಯದಂತೆ, ಆ ಸಾಯಕ ಸಮೂಹವೆಲ್ಲಿ ಹೋಯಿತೋ ಯಾರಿಗೂ ತಿಳಿಯಲಿಲ್ಲ.

೨೧. ಆ ಬಾಣ ಸಮೂಹವನ್ನು ಕತ್ತರಿಸಿ ತಾನೊಂದು ಬಾಣಮೇಘವನ್ನು ಆಕಾಶದಲ್ಲಿ ಹರಡಲು, ಅದರ ಮಳೆಯ ನೀರು ನೂರಾರು ಶವಗಳನ್ನು ಹೊಡೆದುಕೊಂಡು ಹೋಯಿತು.

ವಿದೂರಥಸ್ತಮಪ್ಯಾಶು ವ್ಯಥಯತ್ಸಾಯಕೋತ್ತಮೈಃ |
ಸಾಮಾನ್ಯಜಲದಂ ಮತ್ತಂ ಕಲ್ಪಾಂತಪವನೋ ಯಥಾ || ೨೨ ||

ಕೃತಪ್ರತಿಕೃತೈರೇವಂ ಬಾಣವರ್ಷೈರ್ಮಹೀಪತೀ |
ವ್ಯರ್ಥೀಕೃತೈರನಯತಾಂ ಪ್ರಹಾರಮವಿಚಾರಣೈಃ || ೨೩ ||

ಅಥಾದಧೇ ಮೋಹನಾಸ್ತ್ರಂ ಸಿಂಧುರ್ಗಂಧರ್ವಸೌಹೃದಾತ್ |
ಪ್ರಾಪ್ತಂ ತೇನ ಯಯುರ್ಲೋಕಾ ವಿನಾ ಮೋಹಂ ವಿದೂರಥಾತ್ || ೨೪ ||

ವ್ಯಸ್ತಶಸ್ತ್ರಾಂಬರಾ ಮೂಕಾ ವಿಷಣ್ಣವದನೇಕ್ಷಣಾಃ |
ಮೃತಾ ಇವಾಭವನ್ಯೋಧಾಶ್ಚಿತ್ರನ್ಯಸ್ತಾ ಇವಾಥವಾ || ೨೫ ||

ಯಾವದ್ವಿದೂರಥಾದನ್ಯಂ ಮೋಹೋ ನಯತಿ ಮಂದತಾಂ |
ತಾವದ್ವಿದೂರಥೋ ರಾಜಾ ಪ್ರಬೋಧಾಸ್ತ್ರಮಥಾದದೇ || ೨೬ ||

---

೨೨. ಆ ಸಿಂಧುರಾಜನ ಬಾಣಮೇಘವನ್ನು ಸಾಮಾನ್ಯ ಮೇಘವನ್ನು ಕಲ್ಪವಾಯುವು ಹಾರಿಸುವಂತೆ ತನ್ನ ಸಾಯಕೋತ್ತಮಗಳಿಂದ ಊದಿಬಿಟ್ಟನು.

೨೩. ಒಬ್ಬರು ಮಾಡಿದುದಕ್ಕೆ ಇನ್ನೊಬ್ಬರು ಪ್ರತಿಯಾಗಿ ಮಾಡುತ್ತ, ಬಾಣವರ್ಷಗಳನ್ನು ನಿರ್ವಿಚಾರವಾಗಿ ವ್ಯರ್ಥಮಾಡುತ್ತ, ಆ ಮಹೀಪತಿಗಳು ಒಂದು ಪ್ರಹರಕಾಲವನ್ನು ಕಳೆದರು.

೨೪. ಸಿಂಧುರಾಜನು ಗಂಧರ್ವರಲ್ಲಿ ಸ್ನೇಹಮಾಡಿ ಸಂಪಾದಿಸಿದ್ದ ಮೋಹನಾಸ್ತ್ರವನ್ನು ತೊಟ್ಟನು. ಅದರ ಮಹಿಮೆಯಿಂದ ವಿದೂರಥನನ್ನು ಬಿಟ್ಟು ಮಿಕ್ಕವರೆಲ್ಲ ಮೋಹಗೊಂಡರು.

೨೫. ಆಗ ಶಸ್ತ್ರ, ವಸ್ತ್ರಗಳೂ ವ್ಯತ್ಯಸ್ತವಾಗಿ, ಮೂಕವಾಗಿ, ದೈನ್ಯಮುದ್ರೆಯಿಂದ, ಯೋಧರೆಲ್ಲರೂ ಚಿತ್ರಗತರಾದಂತೆ, ಸತ್ತಂತೆ, ಬಿದ್ದಿದ್ದರು.

೨೬. ತಾನೊಬ್ಬನು ಬಿಟ್ಟು ಉಳಿದವರೆಲ್ಲರೂ ಮೂಢರಾಗಿರಲು, ವಿದೂರಥನು ಪ್ರಬೋಧಾಸ್ತ್ರವನ್ನು ತೊಟ್ಟನು.

ತತಃ ಪ್ರಬೋಧಮಾಪನ್ನಾಃ ಪ್ರಜಾಃ ಪ್ರಾತರಿವಾಬ್ಜನೀ |
ವಿದೂರಥೇ ಭವತ್ಸಿಂಧುಃ ಕ್ರುದ್ಧೋಽರ್ಕ ಇವ ರಾಕ್ಷಸೇ || ೨೭ ||

ನಾಗಾಸ್ತ್ರಮಾದದೇ ಭೀಮಂ ಪಾಶಬಂಧನಖೇದದಂ |
ತೇನಾಭವನ್ನಭೋ ವ್ಯಾಪ್ತಂ ಭೋಗಿಭಿಃ ಪರ್ವತೋಪಮೈಃ || ೨೮ ||

ಸರ್ಪೈರ್ವಿಲಸಿತಾ ಭೂಮಿರ್ಮೃಣಾಲೈಃ ಸರಸೀ ಯಥಾ |
ಸಂಪನ್ನಾ ಗಿರಯಃ ಸರ್ವೇ ಕೃಷ್ಣಪನ್ನಗಕಂಬಲಾಃ || ೨೯ ||

ಪದಾರ್ಥಾಃ ಸರ್ವ ಏವೇಮೆ ವಿಷೋಷ್ಮಖಿನ್ನತಾಂ ಯಯುಃ |
ಸಪರ್ವತವನಾ ಭೋಗಾ ಯಯೌ ವಿವಶತಾಂ ಮಹೀಂ || ೩೦ ||

ಪೂತಾಂಗಾರ ಸಮಾಕೀರ್ಣಂ ವಿಷವೈಷಮ್ಯಶಂಸಿನಃ |
ವವೂ ರೂಕ್ಷೋಷ್ಣನೀಹಾರವಾತಾ ಜ್ವಲನರೇಣವಃ || ೩೧ ||

---

೨೭. ಉದಯದಲ್ಲಿ ಕಮಲವರಳುವಂತೆ ಎಲ್ಲರೂ ಪ್ರಬೋಧವನ್ನು ಪಡೆಯಲು, ಸಿಂಧುರಾಜನು ವಿದೂರಥನಮೇಲೆ, (ಮಂದೇಹ) ರಾಕ್ಷಸರಮೇಲೆ ಕೋಪಗೊಳ್ಳುವ ಸೂರ್ಯನಂತೆ ಕೋಪಗೊಂಡನು.

೨೮. ಪಾಶಗಳಿಂದ ಕಟ್ಟಿ ಖೇದಗೊಳಿಸುವ ಭಯಂಕರ ನಾಗಾಸ್ತ್ರವನ್ನು ತೊಟ್ಟನು. ಅದರಿಂದ ಪರ್ವತದಂತಿರುವ ಹಾವುಗಳು ಆಕಾಶವನ್ನೆಲ್ಲಾ ತುಂಬಿದುವು.

೨೯. ತಾವರೆಯ ದಂಟುಗಳು ಕೊಳವನ್ನು ತುಂಬುವಂತೆ, ನೆಲವೆಲ್ಲ ಹಾವುಗಳಿಂದ ತುಂಬಿ ಹೋಯ್ತು. ಪರ್ವತಗಳೆಲ್ಲ ಕರಿಯಹಾವಿನ ಕಂಬಳಿಯನ್ನು ಹೊದೆದುಕೊಂಡುವು.

೩೦. ಸರ್ವ ಪದಾರ್ಥಗಳೂ ವಿಷದ ಬಿಸಿಯಿಂದ ಖಿನ್ನವಾದುವು. ಸಪರ್ವತವನವಾಗಿ ಭೂಮಿಯೆಲ್ಲವೂ ಮೂರ್ಛೆಹೊಂದಿತು.

೩೧. ವಾಯುಗಳು ವಿಷಮಯವಾಗಿ ಬೆಂಕಿ ಕಿಡಿಗಳನ್ನು ಕಾರುತ್ತ, ಎಲ್ಲವನ್ನೂ ನೀರಸವೂ ಬಿಸಿಯೂ ಆಗುವಂತೆ ಮಾಡಿ, ಬೂದಿಯಿಲ್ಲದ ಕೆಂಡಗಳನ್ನೆರಚಿದಂತೆ ಬೀಸಿತು.

ವಿದೂರಥೋಽಥ ಸೌಪರ್ಣಮಾದದೇಽಸ್ತ್ರಂ ಮಹಾಸ್ತ್ರವಿತ್ |
ಉದಗುರ್ಗರುಡಾಸ್ತ್ರೇಣ ಸೌಪರ್ಣಾಃ ಪರ್ವತಾ ಇವ || ೩೨ ||

ಕಾಂಚನೀಕೃತಸರ್ವಾಶಾಃ ಸರ್ವಾಶಾಪರಿಪೂರಕಾಃ |
ಪಕ್ಷಪರ್ವತ ಸಂರಂಭಜನಿತ ಪ್ರಲಯಾನಿಲಾಃ || ೩೩ ||

ಘೋಣಾನಿಲಜವಾಕೃಷ್ಟಶ್ವಸದ್ಭುಜಗಮಂಡಲಾಃ |
ಮಹಾಘುರಘುರಾರಾಪ ಪೂರಿತಾಂಭೋಧಿಖಂಡಕಾಃ || ೩೪ ||

ಸಸುಪರ್ಣಘನೋಽಪಾತ್ತಂ ಸರ್ಪೌಘಂ ಭೂಪ್ರಪೂರಕಂ |
ಕೃಷ್ಟಂ ಶಲಶಲಾಯಂತಮಗಸ್ತ್ಯ ಇವ ವಾರಿಧಿಂ || ೩೫ ||

ಸರ್ಪಕಂಬಲನಿರ್ಮುಕ್ತಂ ಭೂಮಂಡಲಮರಾಜತ |
ಚಿರಾತ್ತಮವನೀರಂಧ್ರಮಿವ ನಿರ್ವಾರಿರಾಶಿ ಚ || ೩೬ ||

ತತಸ್ತದ್ಗರುಢಾನೀಕಂ ಕ್ವಾಪ್ಯಗಚ್ಛದದೃಶ್ಯತಾಂ |
ದೀಪೌಘ ಇವ ವಾತೇನ ಶರದೇವಾಬ್ದ ಮಂಡಲಂ || ೩೭ ||

೩೨-೩. ವಿದೂರಥನು ಸೌಪರ್ಣವನ್ನು ಹೂಡಲು ಪರ್ವತದಂತಹ ಗರುಡಗಳು ಎಲ್ಲಾ ದಿಕ್ಕುಗಳಲ್ಲಿಯೂ ಸುವರ್ಣಕಾಂತಿಯನ್ನು ಬೀರುತ್ತ ಪರ್ವತದಂತಿರುವ ಪಕ್ಷಗಳಿಂದ ಪ್ರಳಯಾನಿಲಗಳನ್ನು ಹುಟ್ಟಿಸುತ್ತ ಎಲ್ಲಾ ದಿಕ್ಕುಗಳಲ್ಲಿಯೂ ತುಂಬಿದುವು.

೩೪. ಅವುಗಳ ನಿಃಶ್ವಾಸದ ಗಾಳಿಗೆ ಸಿಕ್ಕಿ ಸರ್ಪಗಳು ನಿಟ್ಟುಸಿರು ಬಿಡುತ್ತ ಹಾರಿಹೋದುವು: ಆ ಪಕ್ಷಿಗಳ ಕೂಗು ಸಮುದ್ರವನ್ನೆಲ್ಲಾ ವ್ಯಾಪಿಸಿತು.

೩೫. ಭೂಮಿಯನ್ನೆಲ್ಲ ಆವರಿಸಿ ಶಲಶಲ ಎಂದು ಸದ್ದುಮಾಡುತ್ತಿದ್ದ ಆ ಸರ್ಪ ಸಮೂಹವನ್ನು, ಅಗಸ್ತ್ಯನು ಸಮುದ್ರವನ್ನು ಕುಡಿದುಬಿಟ್ಟಂತೆ, ಗರುಡ ಮೇಘವು ಕುಡಿದುಬಿಟ್ಟಿತು.

೩೬. ಸರ್ಪಕಂಬಳವು ಹೋಗಲು ಭೂಮಂಡಲವು ಸಮುದ್ರದಿಂದ ಮೇಲಕ್ಕೆ ಬಂದಂತೆ ತೋರುತ್ತಿತ್ತು.

೩೭-೮. ಗಾಳಿಗೆ ಸಿಕ್ಕಿದ ಸೊಡರುಗಳಂತೆಯೂ ಶರತ್ತಿನ ಮೋಡಗಳಂತೆಯೂ, ವಜ್ರಭೀತನಾದ, ಸಪಕ್ಷ ಪರ್ವತ ಪ್ರಕರದಂತೆಯೂ ಸ್ವಪ್ನದೃಷ್ಟ

ವಜ್ರಭೀತ್ಯೇವ ಪಕ್ಷೌಘಪರ್ವತಪ್ರಕರಃ ಪುರಃ |
ಸ್ವಪ್ನದೃಷ್ಟಂ ಜಗದಿವ ಸಂಕಲ್ಪಪುರಪೂರವತ್ || ೩೮ ||

ತತಸ್ತಮೋಽಸ್ತ್ರಮಸೃಜತ್ ಸಿಂಧುರಂಧಾಂಧಕಾರದಂ |
ತೇನಾಂಧಕಾರೋ ವವೃಧೆ ಕೃಷ್ಣೋ ಭೂಜಠರೋಪಮಃ || ೩೯ ||

ರೋದೋರಂಧ್ರೆ ಪ್ರವಿಸೃತ ಏಕಾರ್ಣವ ಇವಾಭವತ್ |
ಮತ್ಸ್ಯಾ ಇವಾಭವನ್ಸೇನಾಸ್ತಾರಾಶ್ಚ ಮಣಿಯೋಽಭವನ್ || ೪೦ ||

ಅಂಧಕಾರ ಪ್ರವೃತ್ತೇನ ಮಷೀಪಂಕಾರ್ಣವೋಪಮಂ |
ಕಜ್ಜಲಾಚಲಸಂಭಾರೋದ್ಭೂತ ಕಲ್ಪಾನಿಲೈರಿವ || ೪೧ ||

ಅಂಧಕೂಪೆ ನಿಪತಿತಾ ಇವಾಸನ್ಸಕಲಾಃ ಪ್ರಜಾಃ |
ಕಲ್ಪಾಂತ ಇವ ರಂಶೇಮುರ್ವ್ಯವಹಾರಾ ದಿಶಂ ಪ್ರತಿ || ೪೨ ||

ವಿದೂರಥೋಽಥ ಮಾರ್ತಾಂಡಂ ದೀಪಂ ಬ್ರಹ್ಮಾಂಡಮಂಡಪೇ |
ಅಸ್ತ್ರಂ ಮಂತ್ರವಿದಾಂ ಶ್ರೇಷ್ಠಃ ಸೃಷ್ಟ್ವಾ ಮಂತ್ರೋ ವ್ಯಚೇಷ್ಟಯತ್ || ೪೩ ||

ವಾದ ಜಗತ್ತಿನಂತೆಯೂ ಸಂಕಲ್ಪ ಕಲ್ಪಿತ ಪುರ, ಪ್ರವಾಹಗಳಂತೆಯು ಆ ಗರುಡ ಸಮೂಹವೂ ಎಲ್ಲಿಯೋ ಅದೃಶ್ಯವಾಯಿತು.

೩೯. ಸಿಂಧುರಾಜನಾಗ ತಮೋಸ್ತ್ರವನ್ನು ತೊಟ್ಟನು. ಅದು ಎಲ್ಲರಿಗೂ ಕತ್ತಲೆ ಹಿಡಿಸಲು, ಭೂಗರ್ಭದಲ್ಲಿರುವಂತೆ ಎಲ್ಲೆಲ್ಲೂ ಕತ್ತಲೋ ಕತ್ತಲಾಯ್ತು.

೪೦. ಭೂಮ್ಯಂತರಿಕ್ಷಗಳ ನಡುವೆಲ್ಲ ಕತ್ತಲೇ ಆಗಿ ಏಕಾರ್ಣವದಂತಾಗಲು ಸೇನೆಗಳು ಮೀನುಗಳಾದುವು: ತಾರಕೆಗಳು ರತ್ನಗಳಾದುವು.

೪೧. ಅಂಧಕಾರ ವ್ಯಾಪ್ತಿಯಿಂದ ಲೋಕವೆಲ್ಲವೂ ಮಷೀಪಂಕದಿಂದ ತುಂಬಿದ ಸಾಗರದಂತೆ ಆಯಿತು: ಪ್ರಳಯನಾಯಿತು : ನೀಲಗಿರಿಯನ್ನು ಧೂಳಿಮಾಡಿ ತೂರಿದಂತೆ ಆಯ್ತು.

೪೨. ಸಕಲ ಪ್ರಜೆಗಳೂ ಪಾಳುಭಾವಿಯಲ್ಲಿ ಬಿದ್ದಂತಾದರು. ಕೊನೆಗಾಲದಲ್ಲಾಗುವಂತೆ ಎಲ್ಲವೂ ನಿರ್ವ್ಯಾಪಾರಗಳಾದುವು.

೪೩ ಮಂತ್ರಜ್ಞ ಶ್ರೇಷ್ಠನಾದ ವಿದೂರಥನು ಬ್ರಹ್ಮಾಂಡ ಮಂಟಪ ದೀಪನಾದ ಮಾರ್ತಾಂಡನ ಅಸ್ತ್ರವನ್ನು ಪ್ರಯೋಗಿಸಿ, ಎಲ್ಲವನ್ನೂ ಸವ್ಯಾಪಾರವಾಗಿ ಮಾಡಿದನು.

ಅಥೋದಿತತಮೋಂಭೋಧಿಮರ್ಕಾಗಸ್ತ್ಯೋ ಗಭಸ್ತಿಭಿಃ |
ಅಪಿಬತ್ಕೃಷ್ಣಮಂಭೋದಂ ಶರತ್ಕಾಲ ಇವಾಮಲಃ || ೪೪ ||

ಅಂಧಕಾರಾಂಬರೋನ್ಮುಕ್ತಾ ವಿರೇಜುರಮಲಾ ದಿಶಃ |
ಭೂಪರೇಃ ಪುರತಃ ಕಾಂತಾ ಇವ ರಮ್ಯಪಯೋಧರಾಃ || ೪೫ ||

ಯಯುಃ ಪ್ರಕಟತಾಮಂತರಖಿಲಾ ವನರಾಜಯಃ |
ಲೋಭಕಜ್ಜಲಜಾಲೇನ ಮುಕ್ತಾ ಇವ ಸತಾಂ ಧಿಯಃ || ೪೬ ||

ಅಥ ಕೋಪಾಕುಲಃ ಸಿಂಧೂ ರಾಕ್ಷಸಾಸ್ತ್ರಂ ಮಹಾಭಯಂ |
ಕ್ಷಣಾದುದೀರಯಾಮಾಸ ಮಂತ್ರೋದೀರ್ಣ ಶರಾತ್ಮಕಂ || ೪೭ ||

ಉದಗುರ್ಭೀಷಣಾ ದಿಗ್ಭ್ಯಃ ಪರುಷಾ ವನರಾಕ್ಷಸಾಃ |
ಪಾತಾಲಗಜಪೂತ್ಕಾರಕ್ಷುಬ್ಧಾ ಇವ ಮಹಾರ್ಣವಾಃ || ೪೮ ||

---

೪೪. ಶರತ್ಕಾಲವು ಕೃಷ್ಣಾಂಭೋದಗಳನ್ನು ಕಬಳಿಸುವಂತೆ, ಅರ್ಕಾಸ್ತ್ರವೆಂಬ ಅಗಸ್ತ್ಯನು ತಮೋಂಬುಧಿಯನ್ನು ತನ್ನ ಕಿರಣಗಳಿಂದ ಕುಡಿದುಬಿಟ್ಟನು.

೪೫. ರಮ್ಯಪಯೋಧರೆಯರಾದ ರಮಣಿಯರು ನರಪತಿಯ ಮುಂದೆ ಮೆರೆಯುವಂತೆ, ಅಂಧಕಾರವೆಂಬ ಬಟ್ಟೆಯನ್ನು ತೆಗೆಯಲು ದಿಗಂಗನೆಯರು ನಿರ್ಮಲರಾಗಿ ಬೆಳಗಿದರು.

೪೬. ಲೋಭವೆಂಬ ಕಪ್ಪು ತೊಲಗಲು ಸತ್ಪುರಷರ ಬುದ್ಧಿಯು ಬೆಳಗುವಂತೆ, ಅಖಿಲವನರಾಜಿಗಳೂ ಬೆಳಗಿದುವು.

೪೭. ಆಗ ಕೋಪಾವಿಷ್ಟನಾಗಿ ಸಿಂಧುರಾಜನು ಮಹಾಭಯಂಕರವಾದ ರಾಕ್ಷಸಾಸ್ತ್ರವನ್ನು ಅಭಿಮಂತ್ರಿಸಿಬಿಟ್ಟನು.

೪೮. ಪಾತಾಳದಲ್ಲಿರುವ ದಿಗ್ಗಜಗಳ ಫೂತ್ಕಾರದಿಂದ ಅಲ್ಲೋಲಕಲ್ಲೋಲವಾದ ಸಮುದ್ರಗಳೋ ಎಂಬಂತೆ, ಮಹಾಕ್ರೂರರಾದ ರಾಕ್ಷಸರು ಗುಂಪುಗುಂಪಾಗಿ ದಿಕ್ಕುದಿಕ್ಕಿನಿಂದಲೂ ಬಂದರು.

ಕಪಿಲೋರ್ಧ್ವಜಟಾಧೂಮ್ರಾಃ ಸ್ಫುಟಚ್ಚಟಚಟಾರವಾಃ |
ಅಗ್ನಯೋ ಲೇಲಿಹಾನೋಗ್ರಜಿಹ್ವಾ ಆರ್ದ್ರೇಂಧನಾ ಇವ || ೪೯ ||

ಸಾವರ್ತವೃತ್ತಯೋ ವ್ಯೋಮ್ನಿ ಭೀಮಚೀತ್ಕಾರ ಟಾಂಕೃತಾಃ |
ಅಗ್ನಿದಾಹಾ ಮಹಾಧೂಮ ವಿಲೋಲಾ ಇವ ಸೋಲ್ಮುಕಾಃ || ೫೦ ||

ದಂಷ್ಟ್ರಾಬಿಸಾಂಕುರಾಕ್ರಾಂತ ಮುಖಪಂಕಾಕ್ತದೇಹಕಾಃ |
ಉದಿತಾ ಲೋಮಜಂಬಾಲಾ ದುಷ್ಪಲ್ವಲತಟಾ ಇವ || ೫೧ ||

ನಿಗಿರಂತಃ ಪ್ರಧಾವಂತೋ ಗರ್ಜಂತಃಸರ್ಜಿತಾ ಇವ |
ಜಟಾಜಾಲತಡಿತ್ಪುಂಜಾ ಜಲದಾಃ ಸಜಲಾ ಇವ || ೫೨ ||

ಏತಸ್ಮಿನ್ನಂತರೆ ತಸ್ಮಿನ್ ಲೀಲಾನಾಥೋ ವಿದೂರಥಃ |
ನಾರಾಯಣಾಸ್ತ್ರಂ ಪ್ರದಧೇ ದುಷ್ಟಭೂತನಿವಾರಣಂ || ೫೩ ||

---

೪೯. ಕಪಿಲೋರ್ಧ್ವ ಜಟೆಗಳಿಂದ ಧೂಮ್ರರಾಗಿ ದೊಡ್ಡದಾಗಿ ಚಟ ಚಟ ಶಬ್ದಮಾಡುತ್ತ, ಹಸಿಯ ಸೌದೆಯನ್ನು ಸುಡುವ ಬೆಂಕಿಯಂತಿದ್ದರು.

೫೦. ಅವರು ಅಂತರಿಕ್ಷದಲ್ಲಿ ಸುಳಿಗಳಂತೆ ತಿರುಗುತ್ತ, ಭಯಂಕರವಾಗಿ ಚೀತ್ಕಾರಮಾಡುತ್ತ, ಕೈಯಲ್ಲಿ ಕೊಳ್ಳಿಗಳನ್ನು ಹಿಡಿದು ಅಗ್ನಿದಾಹಗಳಂತೆ ಇದ್ದರು.

೫೧. ದಂಷ್ಟ್ರಗಳೆಂಬ ಬಿಸಾಂಕುರಗಳೂ ರೋಮರಾಜಿಯೆಂಬ ಪಾಚಿಯೂ, ದೇಹವನ್ನೆಲ್ಲ ತುಂಬಿರುವ ಜೊಲ್ಲೆಂಬ ಪಂಕವೂ ಇರಲು, ಅವರೆಲ್ಲ ಕ್ಷುದ್ರಸರಸ್ಸುಗಳಂತೆ ಇದ್ದರು.

೫೨. ಸಿಕ್ಕಿದುದನ್ನು ನುಂಗುತ್ತ, ಅಬ್ಬರಿಸಿಕೊಂಡು ಓಡುತ್ತ, ಜಟಾಜಾಲಗಳೆಂಬ ಮಿಂಚುಗಳಿಂದ ಕೂಡಿ ನೀರು ತುಂಬಿದ ಮೋಡಗಳಂತಿದ್ದರು.

೫೩. ಅಷ್ಟರಲ್ಲಿ ಲೀಲಾನಾಥನಾದ ವಿದೂರಥನು ದುಷ್ಟಭೂತನಿವಾರಕರವಾದ ನಾರಾಯಣಾಸ್ತ್ರವನ್ನು ತೊಟ್ಟನು.

ಉದೀರ್ಯಮಾಣ ಏವಾಸ್ಮಿನ್ ಮಂತ್ರರಾಜೇಽಸ್ತ್ರರಾಜಯಃ |
ರಾಕ್ಷಸಾನಾಂ ಪ್ರಶೇಮುಸ್ತಾ ಅಂಧಕಾರ ಇವೋದಯೇ || ೫೪ ||

ಪ್ರಮುಷ್ಟರಾಕ್ಷಸಾನೀಕಮಭವನದ್ಭುವತ್ರಯಂ |
ಶರದೀವ ಗತಾಂಭೋದಂ ವ್ಯೋಮ ನಿರ್ಮಲಮಾಬಭೌ || ೫೫ ||

ಅಥ ಸಿಂಧುರ್ಮುಮೋಚಾಸ್ತ್ರ ಮಾಗ್ನೇಯಂ ಜ್ವಲಿತಾಂಬರಂ |
ಜಜ್ವಲುಃ ಕಕುಭಸ್ತೇನ ಕಲ್ಪಾಗ್ನಿಜ್ವಲಿತಾ ಇವ || ೫೬ ||

ಧೂಮಾಂಬುದಭರಾಚ್ಛನ್ನಾ ಬಭೂವುಃ ಸಕಲಾ ದಿಶಃ |
ಗಗನೇ ಪ್ರೋತಪಾತಾಲ ತಿಮಿರಾಕುಲಿತಾ ಇವ | || ೫೭ ||

ಬಭೂವುರ್ಜ್ವಲಿತಾಕಾರಾ ಗಿರಯಃ ಕಾಂಚನಾ ಇವ |
ಪ್ರಫುಲ್ಲವನನೀರಂಧ್ರ ಚಂಪಕೌಘವನಾ ಇವ | || ೫೮ ||

---

೫೪. ಆ ಅಸ್ತ್ರವನ್ನು ಅಭಿಮಂತ್ರಿಸುತ್ತಿದ್ದ ಹಾಗೆಯೇ, ಸೂರ್ಯೋದಯದಲ್ಲಿ ಅಡಗುವ ಅಂಧಕಾರದಂತೆ, ಆ ರಾಕ್ಷಸಾಸ್ತ್ರ ಸಮೂಹಗಳೆಲ್ಲ ಅಡಗಿಹೋದುವು.

೫೫. ಭುವನತ್ರಯವೂ ರಾಕ್ಷಸ ಶೂನ್ಯವಾಯಿತು. ಶರತ್ಕಾಲದಲ್ಲಿ ಆಕಾಶವು ಮೇಘಶೂನ್ಯವಾಗಿ ನಿರ್ಮಲವಾಗುವಂತಾಯಿತು.

೫೬. ಆಗ ಸಿಂಧುವು ಆಗ್ನೇಯಾಸ್ತ್ರವನ್ನು ಪ್ರಯೋಗಿಸಲು ಆಕಾಶವೂ ಉರಿಯಿತು; ದಿಕ್ಕುಗಳೂ ಜ್ವಲಿಸಿದುವು: ಕಲ್ಪಾಗ್ನಿಯಿಂದ ಸುಟ್ಟಂತೆ ಆಯಿತು.

೫೭. ಧೂಮವೂ ಮೇಘಗಳೂ ಎಲ್ಲಾದಿಕ್ಕುಗಳಲ್ಲೂ ಮುಚ್ಚಿಕೊಂಡುವು: ಪಾತಾಳದಿಂದ ಎದ್ದುಬಂದ ಕತ್ತಲು ಆಕಾಶವನ್ನೆಲ್ಲ ಕವಿದಂತಾಯಿತು.

೫೮. ಬೆಟ್ಟಗಳು ಚಿನ್ನದಂತೆ ಮಾಡಿರುವಂತೆ ಬೆಳಗಿದುವು. ನಿಬಿಡ ಸಂಪಗೆಯ ತೋಪು ಹೂವು ಬಿಟ್ಟಿರುವಂತೆ ಕಾಣಿಸಿತು.

ಯಯುರ್ವ್ಯೋಮಾದ್ರಿದಿಕ್ಕುಂಜಾ ಜ್ವಾಲಾಜಾಲಜಟಾಲತಾಂ |
ಕುಂಕುಮೇನೋತ್ಸವೇ ಮೃತ್ಯೋಃ ಸಮಾಲಬ್ಧಾ ಇವ ಸ್ರಜಃ ॥ ೫೯ ॥

ಜ್ವಲಿತಾ ಜನತಾ ಚೈಕಶಂಕಿನೀ ಸಾ ನಭಃಸ್ಪೃಶಾ |
ಸಹಸ್ರಾಕೃತಿನೌವೇಗ ಚಲಿತೇನೇವ ಸಾಗರಾತ್ ॥ ೬೦ ॥

ಜಿತ್ವಾ ರಿಪುಂ ಪುನರಸೌ ಯಥಾ ಪ್ರಹರತೇ ತಥಾ |
ವಾರುಣಂ ವಿಸಸರ್ಜಾಸ್ತ್ರಂ ಪೂಜಯಿತ್ವಾ ವಿದೂರಥಃ ॥ ೬೧ ॥

ಆಯಯುಃ ಸಲಿಲಾಪೂರಾಸ್ತಮಃಪೂರಾ ಇವಾಥಿತಃ |
ಅಧಸ್ತಾದೂರ್ಧ್ವತೋ ದಿಗ್ಭ್ಯೋ ದ್ರವರೂಪಾ ಇವಾದ್ರಯಃ ॥ ೬೨ ॥

ಭಾಗಾ ಇವ ಶರವ್ಯೋಮ್ನಿ ಧೃತಯಾನಾ ಇವಾಂಬುದಾಃ |
ಮಹಾರ್ಣವಾ ಇವೋಚ್ಛ್ರಸ್ಥಾಃ ಕುಲಶೈಲಶಿಲಾ ಇವ ॥ ೬೩ ॥

---

೫೯. ವ್ಯೋಮ, ಅದ್ರಿ, ದಿಕ್ಕು, ಕುಂಜ, ಗಳೆಲ್ಲವೂ ಜ್ವಾಲಾಜಾಲಗಳೆಂಬ ಜಟಾಲತೆಗಳನ್ನು ಧರಿಸಿದುವು. ಅದನ್ನು ಕಂಡರೆ ಕುಂಕುಮದಲ್ಲಿ ಅದ್ದಿದ ಮಾಲೆಗಳನ್ನು ಮೃತ್ಯುವು ತನಗೆ ಹಬ್ಬವೆಂದು ಇವರೆಲ್ಲರಿಗೂ ಕೊಟ್ಟನೋ ಎಂಬಂತಿತ್ತು.

೬೦. ಸಾವಿರಾರು ಹಡಗುಗಳ ವೇಗವಾದ ಚಲನದಿಂದ ಸಾಗರದಲ್ಲಿರಲಾರದೆ ಹೊರಬಿದ್ದು ಬಡಬಾನಲವು ಆಕಾಶದವರೆಗೂ ಜ್ವಾಲೆಗಳನ್ನು ಚಾಚುತ್ತ ಎಲ್ಲವನ್ನೂ ಸುಟ್ಟಿತೋ ಎಂಬಂತಾಗಲು, ಜನರು ಲೋಕದಲ್ಲಿ ಬೆಂಕಿಯೊಂದಲ್ಲದೆ ಇನ್ನೇನೂ ಇಲ್ಲ ಎಂದುಕೊಂಡರು.

೬೧. ರಿಪುವನ್ನು ಗೆದ್ದು, ಆವನು ಮತ್ತೆ ಹೊಡೆಯುವುದರೊಳಗಾಗಿ ವಿದೂರಥನು ವಾರುಣಾಸ್ತ್ರವನ್ನು ಪೂಜೆಮಾಡಿ ಪ್ರಯೋಗಿಸಿದನು.

೬೨. ಕತ್ತಲು ಕವಿದಂತೆ ನೀರಿನ ಪ್ರವಾಹಗಳು ಕೆಳಗೆ, ಮೇಲೆ, ಸುತ್ತಲೂ, ಬೆಟ್ಟಗಳು ಕರಗಿಹೋದುವೋ ಎಂಬಂತೆ, ಬಂದುವು.

೬೩. ಕುಲಶೈಲ ಶಿಲೆಗಳಂತೆ, ಮಹಾ ಸಮುದ್ರಗಳೇ ಆಕಾಶದಿಂದ ಇಳಿಯುತ್ತಿರುವುವೆಂಬಂತೆ, ಮೇಘಗಳು ಸ್ವಚ್ಛಂದವಾಗಿ ತಿರುಗುತ್ತಿದ್ದ ಬಾಣಾಕಾಶದಲ್ಲಿ ಚೂರು ಚೂರಾದುವೋ ಎಂಬಂತೆ,

ತಮಾಲೌಘಾ ಇವೋಡ್ಡೀನಾಃ ಸಂಧಿತಾ ಇವ ರಾತ್ರಯಃ |
ಕಜ್ಜಲೌಘಾ ಇವೋದ್ಭೂತಾ ಲೋಕಾಲೋಕತಟಾದಿವ || ೬೪ ||

ರಸಾತಲ ಗುಹಾಭೋಗಾ ಇವ ವ್ಯೋಮದಿದೃಕ್ಷವಃ |
ಮಹಾಘುರಘುರಾರಾವರಂಹೋ ಬೃಂಹಿತಮೂರ್ತಯಃ || ೬೫ ||

ತಾಮಗ್ನಿಸಂತತಿಂ ಮತ್ತಾಮಾಚಚಾಮಾಂಬುಸಂತತಿಃ |
ಭುವನವ್ಯಾಪಿನೀಸಂಧ್ಯಾಮಾಶು ಕೃಷ್ಣೇವ ಯಾಮಿನೀ || ೬೬ ||

ತಾಮಗ್ನಿಸಂತತಿಂ ಪೀತ್ವಾ ಪೂರಯಾಮಾಸ ಭೂತಲಂ |
ಜಲಶ್ರೀರ್ಜಟಿತಂ ದೇಹಂ ನಿದ್ರೇವ ವ್ಯಕ್ತಿಮೇಯುಷೀ || ೬೭ ||

ಏವಂ ವಿಧಾನಸ್ತ್ರಮೋಹಾರ್ ವಿದಧುರ್ಧಾವನೇತರೆ |
ಮಿಥೋಮಾಯಾಮಯಾನಗ್ರೇ ಪಶ್ಯಂತ್ಯನುಭವಂತಿ ಚ || ೬೮ ||

---

೬೪. ಹಾರುತ್ತಿರುವ ತಮಾಲಕುಲಗಳಂತೆ, ರಾತ್ರಿಗಳು ಒಂದಕ್ಕೊಂದು ಸನ್ನಿಹಿತಗಳಾದಂತೆ, ಲೋಕಾ ಲೋಕ ಪರ್ವತದಿಂದ ಎದ್ದು ಬಂದ ಅಂಧಕಾರ ವೆಂಬಂತೆ,

೬೫. ಇದುವರೆಗೆ ರಸಾತಲ ಲೋಕದ ಗುಹೆಗಳಲ್ಲಿ ಮಲಗಿದ್ದು ಆಕಾಶ ವನ್ನು ನೋಡಬೇಕೆಂದು ಎದ್ದು ಬಂದಿರುವ, ಘುರ ಘುರ ಶಬ್ದದಿಂದ ಉಬ್ಬಿರುವ ದೇಹಗಳುಳ್ಳ ಜಲಧಾರೆಗಳು,

೬೬. ರೇಗಿ ಉರಿಯುತ್ತಿದ್ದ ಜ್ವಾಲೆಗಳನ್ನು ನೀರುಗಳು ಭುವನವನ್ನೆಲ್ಲ ವ್ಯಾಪಿಸಿರುವ ಸಂಧ್ಯೆಯನ್ನು ರಾತ್ರಿಯು ಸ್ವಾಹಾಮಾಡುವಂತೆ ಆಚಮನ ಮಾಡಿದುವು.

೬೭. ಅಗ್ನಿಸಂತತಿಯನ್ನೆಲ್ಲ ಕುಡಿದು, ಜಟಿತ (ಆಯಾಸ ಪಟ್ಟಿರುವ ?) ದೇಹವನ್ನು ನುಗ್ಗಿ ಬರುತ್ತಿರುವ ನಿದ್ರೆಯು ಹಿಡಿದುಕೊಳ್ಳುವಂತೆ ಜಲರಾಶಿಯು ಭೂಮಿಯನ್ನೆಲ್ಲ ಆವರಿಸಿತು.

೬೮. ಹೀಗೆ ಅಲ್ಲಿ ಯೋಧರು ನಾನಾ ವಿಧವಾದ ಅಸ್ತ್ರ ಮೋಹಗಳನ್ನು ಮಾಡುತ್ತಲೂ, ನೋಡುತ್ತಲೂ, ಅನುಭವಿಸುತ್ತಲೂ ಇದ್ದರು. (ಧಾವನೇತರೇ=ಓಡಿಹೋಗದೆ ನಿಂತವರು ?)

ಹೇತಿಭಾರವರಾಃ ಸಿಂಧೋಶ್ಚಕ್ರರಕ್ಷಾಸ್ತತೋಂಭಸಾ |
ತೃಣಾನೀವ ಗತಾಃ ಪ್ರೋಹ್ಯ ರಥಶ್ಚಾಸ್ಯಾಭವತ್ಪ್ಲುತಃ ‖ ೬೯ ‖

ಏತಸ್ಮಿನ್ನಂತರೆ ಸಿಂಧುರಸ್ತ್ರಂ ಸಸ್ಮಾರ ಶೋಷಣಂ |
ಆಪತ್ತ್ರಾಣಕರಂ ದೈವಂ ದದೌ ಚ ಶರರೂಪಿಣಂ ‖ ೭೦ ‖

ಶಶಾಮಾಂಬುಮಯೀ ಮಾಯಾ ತೇನ ಯಾಮೇವ ಭಾಸ್ವತಾ |
ಯೇ ಮೃತಾಸ್ತೆ ಮೃತಾ ಏವ ಬಭೂವುಃ ಶೋಷಿತಾ ಭುವಃ ‖ ೭೧ ‖

ಅಥ ಮೂರ್ಖರುಷಾ ತುಲ್ಯಸ್ತಾಪಃ ಸಂತಾಪಯನ್ ಪ್ರಜಾಃ |
ಜಜೃಂಭೆ ಝುರ್ಝುರಾಕೀರ್ಣವನವಿಸ್ತಾರಕರ್ಕಶಃ ‖ ೭೨ ‖

ಕಚತ್ಕನಕನಿಃಸ್ಯಂದಸುಂದರಾಂ,ಗಚ್ಛವಿರ್ದಿಶಾಂ |
ಆಸೀದ್ರಾಜವರಸ್ತ್ರೀಣಾಮಿವಾಲೇಪೋಽಂಗಸಂಗತಃ ‖ ೭೩ ‖

---

೬೯. ಆ ವಾರುಣಾಸ್ತ್ರ ಸ್ವಭಾವದಿಂದ ಸಿಂಧುರಾಜನ ಉತ್ತಮವಾದ ಆಯುಧ ಸಮೂಹಗಳೂ ಚಕ್ರರಕ್ಷಕರೂ ಹುಲ್ಲುಕಡ್ಡಿಗಳಂತೆ ಕೊಚ್ಚಿಹೋದರು. ರಥವೂ ತೇಲಿಹೋಯ್ತು.

೭೦ ಅಷ್ಟರಲ್ಲಿ ಸಿಂಧುರಾಜನು ಶೋಷಣಾಸ್ತ್ರವನ್ನು ಸ್ಮರಿಸಿಕೊಂಡು, ಆಪನ್ನಿವಾರಕವಾದ ಇಷ್ಟ ದೈವವನ್ನು ಆ ಶರರೂಪವಾಗಿ ಧ್ಯಾನಿಸಿದನು.

೭೧. ಸೂರ್ಯನಿಂದ ರಾತ್ರಿಯು ಅಡಗುವಂತೆ ಆ ಜಲಮಯವಾದ ಮಾಯೆಯು ಕೂಡಲೆ ಅಡಗಿತು. ಅಷ್ಟರಲ್ಲಿ ಸತ್ತವರು ಸತ್ತೇಹೋದರೂ, ಭೂಮಿಯೆಲ್ಲವೂ ಒಣಗಿತು.

೭೨. ಅನಂತರ ಮೂರ್ಖನ ಕೋಪಕ್ಕೆ ಸಮಾನವಾದ ತಾಪವು ಪ್ರಜೆಗಳನ್ನೆಲ್ಲಾ ಸಂತಾಪ ಪಡಿಸುತ್ತಾ, ಕಾಡಿನ ಎಲೆಗಳನ್ನೂ ಒಣಗಿಸಿ ವಿಜೃಂಭಿಸಿತು..

೭೩. ಆಗ, ಕನಕಧಾರಾ ಸುಂದರ ಕಾಂತಿಯು ರಾಜಸ್ತ್ರೀಯರ ಅಂಗರಾಗದಂತೆ ದಿಕ್ಕುಗಳನ್ನೆಲ್ಲ ಬೆಳಗಿತು.

ತೇನ ಘರ್ಮಮಯೀಂ ಮೂರ್ಛಾಮಾಜಗ್ಮುಸ್ತದ್ವಿರೋಧಿನಃ |
ಗ್ರೀಷ್ಮದಾವಾನಲೋತ್ತಪ್ತಾ ಮೃದವಃ ಪಲ್ಲವಾ ಇವ || ೭೪ ||

ವಿದೂರಥೋ ರಣೋದ್ರೇಕೆ ತಾವತ್ಕ್ರೇಂಕಾರಮಾತತಂ |
ಕೋದಂಡಂ ಕುಂಡಲೀಕೃತ್ಯ ಪರ್ಜನ್ಯಾಸ್ತ್ರಮಥಾದದೇ || ೭೫ ||

ಉದಗುಃ ಪಂಕ್ತಯೋಽಬ್ದಾನಾಂ ಯಾಮಿನ್ಯ ಇವ ಸಂಚಿತಾಃ |
ತಮಾಲವಿಪಿನೋಡ್ಡೀನಸಂರಂಭಾದಂಬುಮಂಥರಾಃ || ೭೬ ||

ವಾಮನಾ ವಾರಿಪೂರೇಣ ಗರ್ಜನೋದ್ದಾಮಸಂಚರಾಃ |
ಮಹಿಮ್ನಾ ಮಂಥರಾಶೇಷಕಕುಮ್ಮಂಡಲಕುಂಡಲಾಃ || ೭೭ ||

ವವುರಾವಲಿತಾಸಾರಾ ಮೇಘಡಂಬರಭೇದಿನಃ |
ಕೀರ್ಣಸೀಕರನೀಹಾರಭಾರೋದಾರಾಃ ಸಮೀರಣಾಃ || ೭೮ ||

---

೭೪. ಗ್ರೀಷ್ಮದ ಕಾಳ್ಗಿಚ್ಚಿಗೆ ಸಿಕ್ಕಿ ಬೆಂದುಹೋದ ಮೃದುವಾದ ಚಿಗುರುಗಳಂತೆ, ಸಿಂಧುರಾಜನ ಶತ್ರುಗಳೆಲ್ಲರೂ ಆ ಬಿಸಿಯನ್ನು ತಡೆಯಲಾರದೆ ಮೂರ್ಛೆ ಹೋದರು.

೭೫. ವಿದೂರಥನು ಕೋಪಗೊಂಡು ಕ್ರೇಂಕಾರ ಮಾಡುತ್ತಿರುವ ಕೋದಂಡವನ್ನು ಕುಂಡಲೀಕರಿಸಿ ಪರ್ಜನ್ಯಾಸ್ತ್ರವನ್ನು ಹೂಡಿದನು.

೭೬. ಒಟ್ಟುಗೂಡಿಸಿದ ರಾತ್ರಿಗಳೆಂಬಂತೆ, ತಮಾಲಮಾಲೆಗಳು ಮೇಲಕ್ಕೆ ಹಾರಿದುವೆಂಬಂತೆ, ನೀರು ತುಂಬಿದ ಮೋಡಗಳು ಸಾಲು ಸಾಲಾಗಿ ಕಾಣಿಸಿದುವು.

೭೭. ನೀರು ತುಂಬಿ ಜೊಗ್ಗಿ, ಉದ್ದಾಮಗರ್ಜನ ಮಾಡುತ್ತ ಸಂಚರಿಸುತ್ತ, ತಾವು ಹೆಚ್ಚಿದುದರಿಂದ ಚಿಕ್ಕದಾದ ದಿಂಗ್ಮಂಡಲಗಳೆಂಬ ಕುಂಡಲಗಳನ್ನು ಧರಿಸಿದಂತೆ ಕಾಣುತ್ತಿತ್ತು.

೭೮. ಮಳೆಯನ್ನು ಒಟ್ಟುಗೂಡಿಸುತ್ತಲೂ, ಮೋಘಗಳನ್ನು ಚದುರಿಸುತ್ತಲೂ ತುಂತುರುಗಳನ್ನು ಬೇಕಾದ ಹಾಗೆ ಹೊತ್ತುತರುತ್ತಲೂ ಗಾಳಿಗಳು ಬೀಸಿದುವು.

ಪ್ರಪುಸ್ಫುರುಃ ಸುಸೌವರ್ಣಸರ್ಪಾಪತ್ಸರಣೋಪಮಾಃ |
ವಿದ್ಯುತೋ ದಿವಿ ದೈವ್ಯಸ್ತ್ರೀಕಟಾಕ್ಷವಲನಾ ಇವ || ೭೯ ||

ಜುಘೂರ್ಣುರ್ಗರ್ಜನೋಚ್ಛೂನಪ್ರತಿಶ್ರುದ್ಘನಕಂದರಾಃ |
ದಿಶಶ್ಚಲಿತಮಾತಂಗಸಿಂಹರ್ಕ್ಷರವಘರ್ಘರಾಃ || ೮೦ ||

ಮಹಾಮುಸಲಧಾರಾಭಿಃ ಪೇತುರಾಸಾರವೃಷ್ಟಯಃ |
ಕಷ್ಟಟಂಕಾರಕಠಿನಾಃ ಕೃತಾಂತಸ್ಯೇವ ದೃಷ್ಟಯಃ || ೮೧ ||

ಉದಭೂತ್ಪ್ರಥಮಂ ಬಾಷ್ಪ ಉಷ್ಣೋಽನಲನಿಭೋ ಭುವಃ |
ಪಾತಾಲಾದಭ್ರವೃಂದಾನಾಂ ಯುದ್ಧಾಯೇವಾತ್ತವಿಭ್ರಮಃ || ೮೨ ||

ತತೋ ನಿಮೇಷಮಾತ್ರೇಣ ಪ್ರಶೇಮುರ್ಮೃಗತೃಷ್ಣಿಕಾಃ |
ಪರಬೋಧರಸಾಪೂರೈರ್ಯಥಾ ಸಂಸಾರವಾಸನಾಃ || ೮೩ ||

---

೭೯. ಸುವರ್ಣಮಯವಾದ ಸರ್ಪಗಳು ಆಪತ್ತಿಂದು ಓಡುತ್ತಿರುವುವೋ, ದೇವತಾ ಸ್ತ್ರೀಯರ ಕಟಾಕ್ಷ ವಲನಗಳೋ ಎಂಬಂತೆ ಆಕಾಶದಲ್ಲಿ ಮಿಂಚುಗಳು ಮಿಂಚಿದುವು.

೮೦. ಮೇಘ ಗರ್ಜನದಿಂದ ಪರ್ವತ ಗುಹೆಗಳು ಪ್ರತಿ ಗರ್ಜನ ಮಾಡಿದುವು. ಅಲ್ಲಿದ್ದ ಆನೆ ಸಿಂಹ ಕರಡಿ ಮೊದಲಾದ ಪ್ರಾಣಿಗಳು ಆ ಪ್ರತಿ ಗರ್ಜನಕ್ಕೆ ಉತ್ತರಕೊಟ್ಟುವು. ಆ ಒಟ್ಟು ಕೂಗಿನ ಘರ್ಘರಕ್ಕೆ ದಿಕ್ಕುಗಳೆಲ್ಲ ಚಲಿಸಿದುವು.

೮೧. ಮಳೆಯು ಮಹಾ ಮುಸಲಧಾರೆಗಳಿಂದ ಕರೆಯಿತು. ಕೇಳುವುದಕ್ಕಾಗದಂತೆ ಟಂ ಟಂ ಎಂದು ಸದ್ದು ಮಾಡುತ್ತ ಕೃತಾಂತನ ದೃಷ್ಟಿಗಳೋ ಎಂಬಂತೆ ಭಯಂಕರಗಳಾಗಿದ್ದುವು.

೮೨. ಮಳೆಯಾಗುತ್ತಲೂ ಎದ್ದ ಬಾಷ್ಪವು (ಬಿಸಿಯಿಂದೇಳುವ ಹಬೆ) ಬಿಸಿಯಾಗಿ ಮೇಲಕ್ಕೇಳಲು ಪಾತಾಳದಿಂದ ಮೇಘಗಳೊಡನೆ ಯುದ್ಧ ಮಾಡಲು ಬಂದ ಅಗ್ನಿಯೋ ಎಂಬತಿತ್ತು.

೮೩. ಬ್ರಹ್ಮಜ್ಞಾನೋಪದೇಶದಿಂದ ಸಂಸಾರ ವಾಸನೆಗಳು ಅಡಗುವಂತೆ, ಒಂದೇ ನಿಮಿಷದಲ್ಲಿಯೇ ಮೃಗತೃಷ್ಣಿಕೆಗಳೆಲ್ಲ ಮರೆಯಾದುವು.

ಆಸೀತ್ಪಂಕಾಂಕಮಖಿಲಂ ಭೂಮಂಡಲಮಸಂಚರಂ |
ಪೂರಿತಃ ಪೂರ್ಣಧಾರಾಭಿಃ ಸಿಂಧುಃ ಸಿಂಧುರಿವಾಂಬುನಾ || ೮೪ ||

ವಾಯವ್ಯಮಸ್ತ್ರಮಸೃಜತ್ ಪೂರಿತಾಕಾಶಕೋಟರಂ |
ಕಲ್ಪಾಂತನೃತ್ತಸಂಮತ್ತರಟದ್ಭೈರವಭೀಷಣಂ || ೮೫ ||

ನವುರಶನಿನಿಪಾತಪೀಡಿತಾಂಗಾ
ದಲಿತಶಿಲಾಶಕಲಾಃ ಕಕುಮ್ಮುಖೇಷು |
ಪ್ರಲಯಸಮಯಸೂಚಕಾ ಭಟಾನಾಂ
ಕೃತಪಟುಟಾಂಕೃತಟಂಕಿನಃ ಸಮೀರಾಃ || ೮೬ ||

ಇತ್ಯಾರ್ಷೇ ಶ್ರೀ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
“ ಆಯುಧ ವರ್ಣನಂ” ನಾಮ ಅಷ್ಟಚತ್ವಾರಿಂಶಃ ಸರ್ಗಃ

---

೮೪. ಭೂಮಂಡಲವೆಲ್ಲವೂ ಕೆಸರಾಗಿ ಸಂಚಾರಕ್ಕೆ ಅಯೋಗ್ಯವಾಯಿತು. ಸಿಂಧುರಾಜನು ಸಿಂಧು (ಸಮುದ್ರ) ವಿನಂತೆ ಪೂರ್ಣಧಾರಾ ಪೂರಿತನಾದನು.

೮೫. ಆಗ ಸಿಂಧುರಾಜನು ವಾಯವ್ಯಾಸ್ತ್ರವನ್ನು ಅಭಿಮಂತ್ರಿಸಿ ಬಿಡಲು, ವಾಯುವು ಅಕಾಶ ಕೋಟರವನ್ನೆಲ್ಲ ತುಂಬಿತು. ಕಲ್ಪಾಂತ ನರ್ತನದಲ್ಲಿ ಉನ್ಮತನಾಗಿ ಕೂಗಿಕೊಳ್ಳುವ ಭೈರವನಂತೆ ಭೀಷಣವಾಗಿ ಬೀಸಿತು.

೮೬. ಅಶನಿಪಾತದಂತೆ ಅಂಗಾಂಗಗಳನ್ನು ಪೀಡಿಸುತ್ತ, ದಿಂಗ್ಮುಖಗಳಲ್ಲಿ ದಲಿತ ಶಿಲಾ ಶಕಲಗಳನ್ನು ಎರಚುತ್ತಲೂ ಭಟರಿಗೆ ಪ್ರಳಯ ಕಾಲವೆಂದು ಸೂಚನೆಯನ್ನು ಕೊಡುತ್ತಲೂ ಭಾರಿಯಾಗಿ ಟಂಕಾರ ಮಾಡುತ್ತಿರುವ ಟಂಕಿ ಕರೋ ಎಂಬಂತೆಯೂ ಗಾಳಿಗಳು ಬೀಸಿದುವು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ “ ಆಯುಧ ವರ್ಣನ ” ಎಂಬ
ನಲವತ್ತೆಂಟನೆಯ ಸರ್ಗವು.

ಏಕೋನಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ವವುರ್ವಲಿತನೀಹಾರಾ ವಿಕೀರ್ಣವನಪಲ್ಲವಾಃ |
ವಾಯವೋ ಧೂತವೃಕ್ಷೌಘಾಃ ಸಲ್ಲೀಲಾಪೀಡಪಾಂಸವಃ || ೧ ||

ಪಕ್ಷಿವದ್ಭ್ರಾಂತವೃಕ್ಷೌಘಾಃ ಪತನೋತ್ಪಾತನೋದ್ಭಟಾಃ |
ವಿಕುಟ್ಟಿತಾಟ್ಟಾಲಖಂಡಾಶ್ಚಾಭ್ರಭಿತ್ತಿವಿಭೇದಿನಃ || ೨ ||

ತೇನಾತಿಭೀಮವಾತೇನ ವಿದೂರಥರಥೋಽಪ್ಯಥ |
ಉಹ್ಯಮಾನೋಽಭವನ್ನದ್ಯಾ ಯಥಾ ಜರ್ಜರಪಲ್ಲವಃ || ೩ ||

ವಿದೂರಥೋಽಥ ತತ್ಯಾಜ ಪಾರ್ವತಾಸ್ತ್ರಂ ಮಹಾಸ್ತ್ರವಿತ್ |
ವ್ಯೋಮಾಪಿ ಘನತೋಯೇನ ಸಮಾದಾತುಮಿವೋದ್ಯತಂ || ೪ ||

ನಲವತ್ತೊಂಭತ್ತನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:— ಕುಂಕುಮಗಳನ್ನು ಎರಚುತ್ತ, ಚಿಗುರುಗಳನ್ನು ಕಿತ್ತೆಸೆಯುತ್ತ, ಹೆಮ್ಮರಗಳ ತೋಪುಗಳನ್ನು ಅಲ್ಲಾಡಿಸುತ್ತ, ಧೂಳುಗಳನ್ನೆಬ್ಬಿಸಿ ಎಲ್ಲರನ್ನೂ ಹಿಂಸಿಸುತ್ತ ವಾಯುಗಳು ಬೀಸಿದುವು.

೨. ಆಗ ಮರಮರಗಳೆಲ್ಲ ಹಕ್ಕಿಗಳಂತೆ ಆಕಾಶದಲ್ಲಿ ಹಾರಾಡಿದುವು. ಮಹಾಭಟರೂ ಹಾರಿಹಾರಿ ಬಿದ್ದರು. ಮಹಡಿಗಳೆಲ್ಲವೂ ಪುಡಿಪುಡಿಯಾಗಿ ಹೋದುವು. ಮೋಡಗಳ ಗೋಡೆಗಳೂ ಒಡೆದುಹೋದುವು.

೩. ಆ ಭಯಂಕರ ವಾಯುಗಳಿಗೆ ಸಿಕ್ಕಿ, ವಿದೂರಥನ ರಥವು ನದಿಯ ವೇಗಕ್ಕೆ ಸಿಕ್ಕಿದ ಜರ್ಜರಿತವಾದ ಚಿಗುರು ಕೊಚ್ಚಿ ಹೋಗುವಂತೆ, ಕೊಚ್ಚಿ ಹೋಯಿತು.

೪. ಅದನ್ನು ಕಂಡು ಮಹಾಸ್ತ್ರಗಳನ್ನು ಬಲ್ಲ ವಿದೂರಥನು ಪರ್ವತಾಸ್ತ್ರವನ್ನು ಪ್ರಯೋಗಿಸಿದನು. ಅದರಿಂದ ಆಕಾಶವೂ ಕೂಡ ಘನವಾಗಿ ಮೂರ್ತಿಯಾಗುವುದಕ್ಕೆ ಪ್ರಯತ್ನ ಮಾಡುವಂತಾಯ್ತು.

ತೇನ ಶೈಲಾಸ್ತ್ರಘಾತೇನ ವಿರಾಟ್ ಪ್ರಾಣಸಮೀರಣಃ |
ಶಮಂ ಚೈತನ್ಯಶಾಂತ್ಯೇವ ಪ್ರಯಯೌ ವಾಯುರಾತತಃ || ೫ ||

ಅಂತರಿಕ್ಷಗತಾ ವೃಕ್ಷಪಂಕ್ತಯಃ ಪತಿತಾ ಭುವಿ |
ನಾನಾಜನಶವವ್ಯೂಹೇ ಕಾಕಾನಾಮಿವ ಕೋಟಯಃ || ೬ ||

ಶೇಮುಃ ಸೂತ್ಕಾರಡಾತ್ಕಾರಭಾಂಕಾರೋತ್ಕಾರಕಾ ದಿಶಾಂ |
ಪ್ರಲಾಪಾ ಇವ ವಿಧ್ವಸ್ತಾಃ ಪೂರ್ಗ್ರಾಮವನವೀರುಧಾಂ || ೭ ||

ಗಿರೀನಪಶ್ಯನ್ನಭಸಃ ಪತತಃ ಪತ್ರವರ್ಣವತ್ |
ಸಿಂಧುಃ ಸಿಂಧುರಿವೋತ್ಪಕ್ಷಾನ್ ಮೈನಾಕಾದೀನಿತಸ್ತತಃ || ೮ ||

---

೫. ಶೈಲಾಸ್ತ್ರವನ್ನು ಪ್ರಯೋಗಿಸಲು, ಬ್ರಹ್ಮಚೈತನ್ಯವು ಮಾಯಾನಿವೃತ್ತಿಯಿಂದ ಶಾಂತಿಯನ್ನು ಪಡೆದಾಗ ವಿರಾಟ್* ಪ್ರಾಣವಾಯುವೂ ಶಾಂತವಾಗುವಂತೆ, ಬೀಸುತ್ತಿದ್ದ ವಾಯುಗಳೆಲ್ಲವೂ ಶಾಂತವಾದುವು.

೬. ಶವಸಮುದಾಯದಲ್ಲಿ ಕಾಗೆಗಳು ಬೀಳುವಂತೆ, (ವಾಯವ್ಯಾಸ್ತ್ರದಿಂದ) ಅಂತರಿಕ್ಷಕ್ಕೆ ಹಾರಿದ್ದ ಮರಗಳ ಗುಂಪುಗಳೆಲ್ಲವೂ ಕೆಳಗೆ ಬಿದ್ದುವು.

೭. ದಿಕ್ಕು ದಿಕ್ಕುಗಳಲ್ಲಿ ಆಗುತ್ತಿದ್ದ ಸೂತ್ಕಾರ, ಡಾತ್ಕಾರ, ಭಾಂಕಾರ, ಉತ್ಕಾರಗಳೂ ಪುರ, ಗ್ರಾಮ, ವನ, ಲತೆಗಳಲ್ಲಿ ಕೇಳಿಸುತ್ತಿದ್ದ ಪ್ರಲಾಪಗಳೂ ಕೂಡ ನಿಂತುಹೋದುವು.

(ಸೂತ್ಕಾರ=ನಿಟ್ಟುಸಿರು, ಡಾತ್ಕಾರ=ಕೊಳ್ಳೆಗಾರರ ಕೂಗು, ಭಾಂಕಾರ=ಭಯಂಕರವಾದ ಕೂಗು, ಉತ್ಕಾರ=ಅತಿಕ್ರೂರವಾದ ಸದ್ದು. ತಾ. ಪ್ರ)

೮. ಹಿಂದೆ ಹಾರಾಡುತ್ತಿದ್ದ ಮೈನಾಕಾದಿ ಪರ್ವತಗಳನ್ನು ಸಮುದ್ರವು ಕಂಡಂತೆ, ಸಿಂಧುರಾಜನು ಪರ್ವತಗಳು ಅಂತರಂಗದಿಂದ ಎರಗುತ್ತಿರುವುದನ್ನು ಕಂಡನು.

---

* ವಿರಾಟ್=ಚೇತನ, ಅಚೇತನ ಸಹಿತವಾದ ಸಮಸ್ತಭೂತರಾಶಿಗಳು ಒಟ್ಟುಗೂಡಿರುವ ಅಖಂಡಜೀವ. ಅವ್ಯಕ್ತದಿಂದ ವ್ಯಕ್ತಕ್ಕೆ ಹೊರಟಿರುವ ಭೂತಗ್ರಾಮದ ಏಕಪಿಂಡ. ಗುಂಪು ಗುಂಪಾಗಿ ಹೂ ಬಿಡುವ ಗಿಡಗಳು ಮೊಗ್ಗು ಕಚ್ಚಿದಾಗ ನೋಡಿದರೆ ತಿಳಿಯುವುದು.

ವಜ್ರಾಸ್ತ್ರಮಸೃಜದ್ದೀಪ್ತಂ ಚೇರುರ್ವಜ್ರಗಣಾಸ್ತತಃ |
ಪಿಬಂತೋಽದ್ರೀಂದ್ರತಿಮಿರಮಗ್ನಿದಾಹಮಿವಾಗ್ನಯಃ || ೯ ||

ತೇ ಗಿರೀಣಾಂ ತಥಾ ಕ್ಷಿಪ್ತಾಃ ಕೋಟಿತುಂಡಾವಖಂಡನೈಃ |
ಶಿರಾಂಸಿ ಪಾತಯಾಮಾಸುಃ ಫಲಾನೀವೋಲ್ಬಣಾನಿಲಾಃ || ೧೦ ||

ವಿದೋರಥೋಽಥ ವಜ್ರಾಸ್ತ್ರಶಾಂತ್ಯೈ ಬ್ರಹ್ಮಾಸ್ತ್ರಮತ್ಯಗಾತ್ |
ತತೋ ಬ್ರಹ್ಮಾಸ್ತ್ರವಜ್ರಾಸ್ತ್ರೇ ಸಮಂ ಪ್ರಶಮಮಾಗತೇ || ೧೧ ||

ಶ್ಯಾಮಾಶ್ಯಾಮಂ ಪಿಶಾಚಾಸ್ತ್ರಮಥ ಸಿಂಧುರಚೋದಯತ್ |
ತೇನೋದಗುಃ ಪಿಶಾಚಾನಾಂ ಪಂಕ್ತಯೋಽತ್ಯಂತಭೀತಿದಾಃ || ೧೨ ||

ಸಂಧ್ಯಾಯಾಮಥ ಭೀತ್ಯೇವ ದಿವಸಃ ಶ್ಯಾಮತಾಂ ಯಯೌ |
ಪಿಶಾಚಾ ಭುವನಂ ಜಗ್ಮುರಂಧಕಾರಭರಾ ಇವ || ೧೩ ||

---

೯. ಆಗ ಸಿಂಧುರಾಜನು ವಜ್ರಾಸ್ತ್ರವನ್ನು ಪ್ರಯೋಗಿಸಿದನು. ವಜ್ರಾಯುಧಗಳು ಎಲ್ಲೆಲ್ಲಿಯೂ ತಿರುಗಲಾರಂಭಿಸಿ, ಸಮಿತ್ತುಗಳನ್ನು ಸ್ವಾಹಾ ಮಾಡುವ ಯಜ್ಞೇಶ್ವರನಂತೆ, ಅದ್ರೀಂದ್ರತಿಮಿರವನ್ನು ಪಾನಮಾಡಿದುವು.

೧೦. ಬಿರುಗಾಳಿಯು ಕಳಿತ ಫಲಗಳನ್ನು ಕೆಡಹುವಂತೆ ಆ ವಜ್ರಗಳು ಕತ್ತರಿಸಿ ಕತ್ತರಿಸಿ ಗಿರಿಗಳ ಶಿಖರಗಳನ್ನೆಲ್ಲಾ ಕತ್ತರಿಸಿಹಾಕಿದುವು.

೧೧. ವಿದೂರಥನು ವಜ್ರಾಸ್ತ್ರ ಶಾಂತಿಗೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಅವೆರಡೂ ಅಸ್ತ್ರಗಳು ಹೋರಾಡಿ ಶಾಂತವಾಗಲು,

೧೨. ಇರುಳಿನಂತೆ ಕಪ್ಪಾಗಿರುವ ಪಿಶಾಚಾಸ್ತ್ರವನ್ನು ಸಿಂಧುರಾಜನು ಪ್ರಯೋಗಿಸಿದನು. ಅದರಿಂದ ಅತ್ಯಂತ ಭಯಂಕರಗಳಾದ ಪಿಶಾಚ ಪಂಕ್ತಿಗಳು ಕಾಣಿಸಿಕೊಂಡುವು.

೧೩. ಸಂಜೆಯಲ್ಲಿಯೇ ದಿವಸವು ಹೆದರಿದಂತೆ ಕಪ್ಪು ಹಿಡಿಯಿತು: ಅಂಧಕಾರ ಸಮೂಹಗಳಂತೆ ಪಿಶಾಚಗಳು ಭೂಮಿಯಲ್ಲಿ ಕಾಣಿಸಿಕೊಂಡುವು.

ಭಸ್ಮನಃ ಸ್ತಂಭಸದೃಶಾಸ್ತಾಲೋತ್ತಾಲವಿಲಾಸಿನಃ |
ದೃಶ್ಯಮಾನಮಹಾಕಾರಾ ಮುಷ್ಟಿಗ್ರಾಹ್ಯಾ ನ ಕಿಂಚನ || ೧೪ ||

ಊರ್ಧ್ವಕೇಶಾಃ ಕೃಶಾಂಗಾಶ್ಚ ಕೇಚಿಚ್ಚ ಶ್ಮಶ್ರುಲಾ ಅಪಿ |
ಕೃಷ್ಣಾಂಗಾ ಮಲಿನಾಂಗಾಶ್ಚ ಗ್ರಾಮ್ಯಾ ಇವ ನಭಶ್ಚರಾಃ || ೧೫ ||

ಸಭಯಾ ಮೂಢದೃಷ್ಟ್ಯಾಶ್ಚ ಯತ್ಕಿಂಚನಕರಾಶ್ಚಲಾಃ |
ದೀನಾ ವಜ್ರಾಸಿನಃ ಕ್ರೂರಾ ದೀನಾ ಗ್ರಾಮ್ಯಜನಾ ಇವ || ೧೬ ||

ತರುಕರ್ದಮಮಧ್ಯಾಂತಃಶೂನ್ಯಗೇಹಗೃಹಾಶ್ಚಲಾಃ |
ಲೇಲಿಹಾನಾಃ ಪ್ರೇತರೂಪಾಃ ಕೃಷ್ಣಾಂಗಾಶ್ಚಪಲಾ ಇವ. || ೧೭ ||

ಜಗೃಹುಸ್ತೇ ತದಾ ಮತ್ತಾ ಹತಶಿಷ್ಟಮರೇರ್ಬಲಂ |
ಆಸಂಸ್ತತ್ಸೈನಿಕಾಸ್ತತ್ರ ಭಿನ್ನಾಸ್ತ್ರಕ್ಷುಬ್ಧಚೇತನಾಃ || ೧೮ ||

---

೧೪. ಬೂದಿಯ ಕಂಭಗಳಂತಿರುವುವು ಕೆಲವು: ವೈಯ್ಯಾರ ಮಾಡುವ ತಾಳೆಯ ಮರದಂತಿರುವುವು ಕೆಲವು: ನೋಡುವುದಕ್ಕೆ ಭಾರಿಯಾಗಿದ್ದರೂ ಕೈಗೆ ಮಾತ್ರ ಒಂದೂ ಸಿಕ್ಕದು.

೧೫. ಊರ್ಧ್ವಕೇಶರು ಕೆಲವರು, ಕೃಶಾಂಗರು ಕೆಲವರು, ಗಡ್ಡ ಮೀಸೆಗಳುಳ್ಳವರು ಕೆಲವರು, ಹಳ್ಳಿಯವರ ಹಾಗೆ ಕಪ್ಪಗಿರುವವರು ಕೆಲವರು, ಇನ್ನೂ ಕೆಲವರು ಕೊಳೆ ಹಿಡಿದವರು ಆಗಿದ್ದರು ಆ ನಭಶ್ಚರರು.

೧೬. ಕೆಲವರು ಭಯಗ್ರಸ್ತರು, ಮೂಢರ ದೃಷ್ಟಿಗೆ ಮಾತ್ರ ಕಾಣುತ್ತಿದ್ದವರು ಕೆಲವರು. ಸಿಕ್ಕಿದ ಕೆಲಸ ಮಾಡಿಕೊಂಡು ತಿರುಗುವವರು ಕೆಲವರು. ದೀನವಾಗಿ ಕಂಡರೂ ವಜ್ರ, ಅಸಿಗಳಿಗಿಂತಲೂ ಕ್ರೂರರಾಗಿದ್ದವರು ಕೆಲವರು. ಗ್ರಾಮ್ಯರಂತೆ ದೀನರಾಗಿದ್ದವರು ಮತ್ತೆ ಕೆಲವರು.

೧೭. ಮರ, ಕೊಚ್ಚೆ, ಬೀದಿಗಳ ಕೂಡುದಲೆ, ಪಾಳುಮನೆಗಳಲ್ಲಿ ವಾಸ ಮಾಡುವ ಅವು, ಅಸ್ಥಿರರಾಗಿ, ಪ್ರೇತರೂಪವಾಗಿ, ಕಟವಾಯಿಗಳನ್ನು ಸವರಿಕೊಳ್ಳುತ್ತ ಕೃಷ್ಣಾಂಗರಾಗಿ ಚಪಲರಾಗಿದ್ದರು.

೧೮. ಆ ಪಿಶಾಚಗಳು ಮತ್ತರಾಗಿ ಸಾಯದೆ ಉಳಿದಿದ್ದ ಶತ್ರು ಬಲವನ್ನು ಮುತ್ತಿದವು. ಆಗ ವಿದೂರಥನ ಸೈನಿಕರೆಲ್ಲ ಅಸ್ತ್ರಶೂನ್ಯರೂ ಬುದ್ಧಿ ಭ್ರಾಂತರೂ ಆದರು.

ತ್ಯಕ್ತಾಯುಧತನುತ್ರಾಣಾಸ್ತ್ರಸ್ತಪ್ರಾಣಾಃ ಸ್ಖಲದ್ಗಮಾಃ |
ನೇತ್ರೈರಂಗೈರ್ಮುಖೈಃ ಪಾದೈರ್ವಿಕಾರಭರಕಾರಿಣಃ || ೧೯ ||

ತ್ಯಕ್ತಕೌಪೀನವಸನಾ ನಿಮಗ್ನಾ ವಸನೋತ್ತರಾಃ |
ವಿಷ್ಠಾಂ ಮೂತ್ರಂ ಚ ಕುರ್ವಂತಃ ಸ್ಥಿರಮಾರಬ್ಧನರ್ತನಾಃ || ೨೦ ||

ಪಿಶಾಚರಾಜೀ ರಾಜಾನಂ ತಸ್ಯ ಯಾವದ್ವಿದೂರಥಂ |
ಸಮಾಕ್ರಾಮತಿ ತಾವತ್ತಾಂ ಮಾಯಾಂ ಸ ಬುಬುಧೇ ಬುಧಃ || ೨೧ ||

ಪಿಶಾಚಸಂಗ್ರಾಮಕರೀಂ ಮಾಯಾಂ ವೇತ್ತಿ ಸ ಭೂಮಿಪಃ |
ತಯಾ ಪಿಶಾಚಸೈನ್ಯಂ ತತ್ಪರಸೈನ್ಯೇ ನ್ಯಯೋಜಯತ್ || ೨೨ ||

ತತಃ ಸ್ವಸೈನಿಕಾಃ ಸ್ವಸ್ಥಾಃ ಪರಯೋಧಾಃ ಪಿಶಾಚಿನಃ |
ತಸ್ಯಾಶು ರೂಪಿಕಾಸ್ತ್ರಂ ಚ ದದಾವನ್ಯದಸೌ ರುಷಾ || ೨೩ ||

೧೯-೨೦. ಆಯುಧ ಕವಚಗಳನ್ನು ಕಿತ್ತೆಸೆದು, ಭಯಗೊಂಡು, ಎಡವಿ ಎಡವಿ ಬೀಳುತ್ತಾ, ನೇತ್ರಾದಿ ಅಂಗ ವಿಕಾರಗಳನ್ನು ಮಾಡುತ್ತ, ಕೌಪೀನ, ಉತ್ತರೀಯಗಳನ್ನೂ ಕಿತ್ತು ಹಾಕಿ, ಮಲಮೂತ್ರ ವಿಸರ್ಜನ ಮಾಡುತ್ತ, ಹುಚ್ಚು ಹುಚ್ಚಾಗಿ ಕುಣಿಯುವುದಕ್ಕೆ ಆರಂಭಿಸಿದರು.

೨೧. ಆ ಪಿಶಾಚಗಳು ತನ್ನನ್ನೂ ಹಿಡಿಯುವುದರೊಳಗಾಗಿ ಆ ವಿದೂರಥನು ಅದು ಮಾಯೆಯೆಂದು ಗ್ರಹಿಸಿದನು.

೨೨. ಪಿಶಾಚ ಯುದ್ಧಕ್ಕೆ ಬೇಕಾದ ಮಾಯೆಯನ್ನು ಬಲ್ಲ ಆ ವಿದೂರಥನು ಆ ಪಿಶಾಚ ಸೈನ್ಯವು ತನ್ನ ಶತ್ರು ಸೈನ್ಯದ ಮೇಲೆಯೇ ಬೀಳುವಂತೆ ಮಾಡಿದನು.

೨೩. ಆದರಿಂದ ಅವನ ಸೈನಿಕರು ಸ್ವಸ್ಥರಾದರು: ಶತ್ರು ಸೈನ್ಯವೆಲ್ಲ ಪಿಶಾಚ ಗ್ರಸ್ತವಾಯಿತು.ಆಗ ವಿದೂರಥನು ಇನ್ನೂ ರೇಗಿ ರೂಪಿಕಾಸ್ತ್ರವನ್ನು ಪ್ರಯೋಗಿಸಿದನು. (ರೂಪಿಕಾ-ಸ್ತ್ರೀ ಪಿಶಾಚಿಕಾ.)

ಉದಗುರ್ಭೂತಲಾದ್ವ್ಯೋಮ್ನೋ ರೂಪಿಕಾ ಊರ್ಧ್ವಮೂರ್ಧಜಾಃ |
ನಿರ್ಮಗ್ನವಿಕರಾಲಾಕ್ಷ್ಯಶ್ಚಲತ್ ಶ್ರೋಣಿಪಯೋಧರಾಃ || ೨೪ ||

ಉದ್ಭಿನ್ನಯೌವನಾ ವೃದ್ಧಾ ಪೀವರಾಂಗ್ಯೋಽಥ ಜರ್ಜರಾಃ |,
ಸ್ವರೂಪಾರೂಪಜಘನಾ ದುರ್ನಾಭ್ಯೋ ವಿಕಸದ್ಭಗಾಃ || ೨೫ ||

ನರರಕ್ತಶಿರೋಹಸ್ತಾಃ ಸಂಧ್ಯಾಭ್ರಾರುಣಗಾತ್ರಿಕಾಃ |
ಅರ್ಧಚರ್ವಿತಮಾಂಸಾಸೃಕ್ ಸ್ರವತ್ಸೃಕ್ಕ್ಯಾಕುಲಾನನಾಃ || ೨೬ ||

ನಾನಾಂಗವಲನಾ ನಾನಾನಮನ್ನಮನಸತ್ತಮಾಃ |
ಶಿಲಾಭುಜಗವಕ್ರೋರುಕಟಿಪಾರ್ಶ್ವಕರಾಂಗಿಕಾಃ || ೨೭ ||

ನಾರೀಕೃತಾರ್ಭಕಶವಾ ಹಸ್ತಾಕೃಷ್ಟಾಂತ್ರರಜ್ಜವಃ |
ಶ್ವಕಾಕೋಲೂಕವದನಾ ನಿಮ್ನವಕ್ತ್ರಹನೂದರಾಃ || ೨೮ ||

---

೨೪. ಭೂತಲದಿಂದಲೂ ಆಕಾಶದಿಂದಲೂ, ಊರ್ಧ್ವಕೇಶಿಯರೂ ವಿರೂಪಾಕ್ಷಿಯರೂ ಆದ ಪಿಶಾಚಿನಿಯರು ಶ್ರೇಣಿ, ಪಯೋಧರಗಳನ್ನು ಕುಣಿಸಿಕೊಂಡು ಬಂದರು.

೨೫. ಅವರಲ್ಲಿ ಯೌವನ ಬರುತ್ತಿರುವವರು ಕೆಲವರು: ಯೌವನ ಕಳೆದವರು ಇನ್ನೂ ಕೆಲವರು: ಸ್ಥೂಲಾಂಗಿಯರು ಕೆಲವರು: ಶಿಥಿಲಾಂಗಿಯರಿನ್ನು ಕೆಲವರು. ವಿಕಾರ ಜಘನೆಯರೂ ದುರ್ನಾಭಿಯರೂ ವಿಕಸದ್ಭಗೆಯರೂ ಇನ್ನು ಕೆಲವರು.

೨೬. ನರರಕ್ತ ಶಿರೋಹಸ್ತೆಯರು ಕೆಲವರು. ಸಂಧ್ಯಾ ಮೇಘದಂತೆ ಕೆಂಪಾದ ಮೈಯ್ಯವರು ಕೆಲವರು. ಇನ್ನು ಕೆಲವರು ಮಾಂಸವನ್ನು ಅರ್ಧಾರ್ಧವಾಗಿ ತಿಂದು ಕಟವಾಯಿಯಿಂದ ರಕ್ತವನ್ನು ಸುರಿಯಿಸಿಕೊಳ್ಳುತ್ತಿರುವರು.

೨೭. ವಿಕಾರವಾಗಿ ಅಂಗಾಂಗಗಳನ್ನು ಕುಣಿಸುತ್ತಿದ್ದುವು ಕೆಲವು: ಜೊಗ್ಗದ ದೇಹವನ್ನು ಬೊಗ್ಗಿಸುವುದಕ್ಕೆ ಯತ್ನಿಸುತ್ತಿದ್ದವು ಕೆಲವು. ಶಿಲೆಯಂತೆಯೂ ಸರ್ಪದಂತೆಯೂ ಇರುವ ಅಂಗಗಳಿದ್ದುವು ಇನ್ನು ಕೆಲವು.

೨೮. ಮಕ್ಕಳ ಹೆಣಗಳನ್ನು ಮಾಲೆಯಾಗಿ ಹಾಕಿಕೊಂಡಿದ್ದವು ಕೆಲವು. ನರಗಳನ್ನು ಹಗ್ಗ ಮಾಡಿ ಕೈಯಿಂದ ಎಳೆಯುತ್ತಿದ್ದುವು ಇನ್ನು ಕೆಲವು. ನಾಯಿ, ಕಾಗೆ, ಗೂಬೆಗಳಂತೆ ಮೊಕವಿದ್ದವು ಕೆಲವು. ಮೊಕ ಮುಸುಡಿ ಹೊಟ್ಟೆಗಳು ಹಿಂದಕ್ಕೆ ಹೋಗಿದ್ದವು ಕೆಲವು.

ಜಗೃಹುಸ್ತ್ರಾ ಪಿಶಾಚಾಂಸ್ತಾ ದುರ್ಬಲಾನ್ದುಃಶಿಶೂನಿವ |
ಪಿಶಾಚರೂಪಿಕಾಸೈನ್ಯಂ ತದಾಸೀದೇಕತಾಂ ಗತಂ || ೨೯ ||

ನಿರ್ಮಗ್ನನರ್ತನೋತ್ತಾನವದನಾಂಗವಿಲೋಚನಂ |
ಪರಸ್ಪರಾಕ್ರಾಂತಿಕರಂ ಪ್ರಧಾವಚ್ಚ ಪರಸ್ಪರಂ || ೩೦ ||

ನಿಷ್ಕಾಸಿತಮಹಾಜಿಹ್ವಂ ನಾನಾಮುಖವಿಕಾರದಂ |
ಶರಭಾರಾಢ್ಯಮನ್ಯೋನ್ಯಂ ಹ್ರಿಯಮಾಣಶವಾಂಗಕಂ || ೩೧ ||

ರುಧಿರಾಂಭಸಿ ಮಜ್ಜಂತದುನ್ಮಜ್ಜದ್ವೃಲ್ಲಸತ್ತನು |
ಲಂಬೋದರಂ ಲಂಬಭುಜಂ ಲಂಬಕರ್ಣೋಷ್ಠನಾಸಿಕಂ || ೩೨ ||

ರಕ್ತಮಾಂಸಮಹಾಪಂಕೇಷ್ವನ್ಯೋನ್ಯಂ ವೇಲ್ಲನಾಭ್ಯಸತ್ |
ಮಂದರೋದ್ಧೂತದುಗ್ಧಾಬ್ಧಿಲಸತ್ಕಲಕಲಾಕುಲಂ || ೩೩ ||

ಯಥೈವ ಮಾಯಾಸಂಚಾರಸ್ತೇನ ತಸ್ಯ ಕೃತಃ ಪುರಾ |
ತೇನಾಪಿ ತಸ್ಯಾಶು ತಥಾ ಕೃತೋ ಬುದ್ಧ್ವಾ ಸ ಲಾಘವಾತ್ || ೩೪ ||

೨೯-೩೩. ಆ ಪಿಶಾಚಿಕೆಗಳು ದುರ್ಬಲರಾದ ಮಕ್ಕಳನ್ನು ಹಿಡಿದುಕೊಳ್ಳು ವಂತೆ ಪಿಶಾಚಗಳನ್ನು ಹಿಡಿದುಕೊಳ್ಳಲು, ಪಿಶಾಚ ಪಿಶಾಚಿಕೆಗಳ ಸೈನ್ಯವು ಒಂದಾ ದಂತೆ ಇತ್ತು. ಒಂದಾದ ಆ ಸೈನ್ಯವು ಉತ್ತಾನನರ್ತನದಲ್ಲಿ ಮಗ್ನವಾಗಿ, ಮೊಕ ಕಣ್ಣುಗಳನ್ನು ಕುಣಿಸಿಕೊಂಡು ಒಂದನ್ನೊಂದು ಹಿಡಿದುಕೊಳ್ಳುತ್ತ ಒಂದ ನ್ನೊಂದು ಓಡಿಸಿಕೊಂಡು ಹೋಗುತ್ತ. ಉದ್ದವಾದ ನಾಲಗೆಯನ್ನು ನೀಡುತ್ತ, ಮುಖವನ್ನು ನಾನಾ ವಿಧವಾಗಿ ವಿಕಾರ ಮಾಡುತ್ತ, ಒಬ್ಬರು ಹೊತ್ತುಕೊಂಡು ಹೋಗುತ್ತಿರುವ ಶವದ ಅಂಗಗಳನ್ನು ಇನ್ನೊಬ್ಬರು ಹಾರಿಸುತ್ತ, ಶವಭಾರಾಢ್ಯ ರಕ್ತದಲ್ಲಿ ಮುಳುಗಿ ಮೈಯೆಲ್ಲ ರಕ್ತಮಾಡಿಕೊಂಡು ಲಂಬೋದರ, ಲಂಬಭುಜ, ಲಂಬ ಕರ್ಣೋಷ್ಠನಾಸಿಕಗಳಾಗಿ, ರಕ್ತ ಮಾಂಸ ಮಹಾ ಪಂಕದಲ್ಲಿ ಬಿದ್ದು ಒಂದನ್ನೊಂದು ತಬ್ಬಿಕೊಳ್ಳಲು ಹೋಗುತ್ತಿದ್ದುವು. ಮಂದರ ಪರ್ವತವನ್ನು ಹಾಕಿ ಕಡೆದಾಗ ಕ್ಷೀರ ಸಮುದ್ರದಲ್ಲಿ ಆದಷ್ಟು ಗದ್ದಲ ಮಾಡುತ್ತಿದ್ದುವು.

೩೪. ವಿದೂರಥನು ಮಾಡಿದಂತೆಯೇ ಸಿಂಧು ರಾಜನು ಮಾಯಾ ಪ್ರಯೋಗ ಮಾಡಿದನು.

ವೇತಾಲಾಸ್ತ್ರಂ ತತೋ ದತ್ತಿ ತೇನೋತ್ತಸ್ಥುಃ ಶವವ್ರಜಾಃ |
ಅಮೂರ್ಧಾನಃ ಸಮೂರ್ಧಾನೋ ವೇತಾಲಾವೇಶವಲ್ಲಿತಾಃ || ೩೫ ||

ತತಃ ಪಿಶಾಚವೇತಾಲರೂಪಿಕೋಗ್ರಕಬಂಧವತ್ |
ತದ್ಬಭೂವ ಬಲಂ ಭೀಮಮುರ್ವೀನಿಗರಣಕ್ಷಮಂ || ೩೬ ||

ಅಥೇತರೋಽಪಿ ಭೂಪಾಲೋ ಮಾಯಾಂ ಸಂಚಾರ್ಯ ತಾಂ ಗುರೌ |
ರಾಕ್ಷಸಾಸ್ತ್ರಂ ಸಸರ್ಜಾಥ ತ್ರೈಲೋಕ್ಯಗ್ರಹಣೋನ್ಮುಖಂ || ೩೭ ||

ಉದಗುಃ ಪರ್ವತಾಕಾರಾಃ ಸರ್ವತಃ ಸ್ಥೂಲರಾಕ್ಷಸಾಃ |
ದೇಹಮಾಶ್ರಿತ್ಯ ನಿಷ್ಕ್ರಾಂತಾಃ ಪಾತಾಲಾನ್ನರಕಾ ಇವ || ೩೮ ||

ಅಥೋದಭೂದ್ಬಲಂ ಭೀಮಂ ಸಸುರಾಸುರಭೀತಿದಂ |
ಗರ್ಜದ್ರಕ್ಷೋಮಹಾನಾದವಾದ್ಯನೃತ್ಯತ್ಕಬಂಧಕಂ || ೩೯ ||

---

೩೫. ಸಿಂಧುರಾಜನು ವೇತಾಳಾಸ್ತ್ರವನ್ನು ಪ್ರಯೋಗಿಸಿದನು. ಅದರಿಂದ ತಲೆಯಿದ್ದ ತಲೆಯಿಲ್ಲದ ಹೆಣಗಳೆಲ್ಲಾ ವೇತಾಳಗಳ ಆವೇಶದಿಂದ ಕುಣಿಯುತ್ತ ಎದ್ದುವು.

೩೬. ಅಲ್ಲಿ ಪಿಶಾಚ, ಪಿಶಾಚಿಕಾ, ವೇತಾಳಗಳು ಹಿಡಿದ ಹೆಣಗಳು ಕುಣಿದಾಡುತ್ತಿರಲು ಕ್ರೂರವಾಗಿದ್ದ ಆ ಸೈನ್ಯವು ಭೂಮಿಯನ್ನೇ ನುಂಗಿಬಿಡುವುದೋ ಎನ್ನುವಂತಿತ್ತು.

೩೭. (ಮಾಯಾ ಪ್ರಯೋಗವನ್ನು ಮೊದಲು ಮಾಡಿ) ಗುರುವಾದ ಸಿಂಧುರಾಜನ ಮೇಲೆ ವಿದೂರಥನು ಮಾಯಾ ಪ್ರಯೋಗ ಮಾಡಿ, ಮೂರು ಲೋಕಗಳನ್ನೂ ಮೆಟ್ಟುವಂಥ ರಾಕ್ಷಸಾಸ್ತ್ರವನ್ನು ಬಿಟ್ಟನು.

೩೮. ಪರ್ವತಾಕಾರರಾದ ರಾಕ್ಷಸರು, ಪಾತಾಳದ ಅಂಧಕಾರವು ದೇಹವನ್ನು ಧರಿಸಿ ಹೊರಗೆ ಬಂತೋ ಎಂಬಂತೆ, ಎಲ್ಲೆಲ್ಲಿಂದಲೂ ಬಂದರು.

೩೯. ಸುರಾಸುರರಿಗೆಲ್ಲ ಭಯಪ್ರದವಾದ ಭೀಮ ರಾಕ್ಷಸ ಬಲವು ಹುಟ್ಟಿತು. ರಾಕ್ಷಸರ ಮಹಾನಾದ ಗರ್ಜನೆಗನುಸಾರವಾಗಿ ಕಬಂಧಗಳು ಕುಣಿದುವು.

ಮೇದೋಮಾಂಸೋಪದಂಶಾಢ್ಯಂ ರುಧಿರಾಸವಸುಂದರಂ |
ಕ್ಷೀಬಕೂಶ್ಮಾಂಡವೇತಾಲಯಕ್ಷತಾಂಡವಸುಂದರಂ || ೪೦ ||

ಕೂಶ್ಮಾಂಡಕೋತ್ತಾಂಡವದಂಡಪಾದ–
ಕ್ಷುಬ್ಧಾಸೃಗುತ್‌ಕ್ಷಿಪ್ತತರಂಗಸಿಕ್ತೈಃ |
ಸಂಧ್ಯಾಭ್ರರಾಗೋತ್ಕರಕೋಟಿಕಾಂತಿ
ಭೂತೈರಸೃಕ್ಸ್ರೋತಸಿ ದತ್ತ ಸೇತು || ೪೧ ||

ಇತ್ಯಾರ್ಷೇ ಶ್ರೀವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
"ತೃತೀಯಾಸ್ತ್ರಯುದ್ಧಂ" ನಾಮ ಏಕೋನಪಂಚಾಶಃ ಸರ್ಗಃ

---

೪೦. ಆ ರಾಕ್ಷಸ ಸೈನ್ಯವು ಮೇದೋಮಾಂಸಗಳನ್ನು ನೆಂಜಿಕೊಂಡು ರಕ್ತವೆಂಬ ಮದ್ಯವನ್ನು ಪಾನಮಾಡುತ್ತಿದ್ದುವು. ಕೂಶ್ಮಾಂಡ ವೇತಾಳ ಯಕ್ಷ ಗಣಗಳ ತಾಂಡವಗಳಿಂದ ರಣಾಂಗಣವು ಚೆನ್ನಾಗಿತ್ತು.

೪೧. ಕೂಶ್ಮಾಂಡಾದಿಗಳು ಉದ್ದಂಡವಾದ ತಾಂಡವ ಮಾಡಲು ರಕ್ತ ಪ್ರವಾಹದಲ್ಲಿ ಕ್ಷೋಭವಾಗಿ ತೆರೆಗಳು ಹಾರುತ್ತಿದ್ದುವು. ಆ ತೆರೆಗಳಿಂದ ನೆನೆದು ಸಂಧ್ಯಾಮೇಘದ ಕಾಂತಿಯನ್ನು ಪಡೆದ ಆ ಪ್ರಾಣಿಗಳು ರಕ್ತ ನದಿಯಲ್ಲಿ ಕಟ್ಟಿದ ಸೇತುವೆಯಂತಿದ್ದುವು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ತೃತೀಯಾಸ್ತ್ರ ಯುದ್ಧ" ಎಂಬ
ನಲವತ್ತೊಂಭತ್ತನೆಯ ಸರ್ಗವು.

ಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ತಸ್ಮಿಂಸ್ತದಾ ವರ್ತಮಾನೇ ಘೋರೇ ಸಮರವಿಭ್ರಮೇ |
ಸರ್ವಾರಿಸೈನ್ಯನಾಶಾರ್ಥಮೇಕಂ ಸ್ವಬಲಶಾಂತಯೇ || ೧ ||

ಸಸ್ಮಾರ ಸ್ಮೃತಿಮಾನಂತೋ ಮಹೋದಾರಾಧಿಧೈರ್ಯಭೃತ್ |
ಅಸ್ತ್ರಮಸ್ತ್ರೇಶ್ವರಂ ಶ್ರೀಮದ್ವೈಷ್ಣವಂ ಶಂಕರೋಪಮಂ || ೨ ||

ಅಥ ಯೋಽಸೌ ಶರಸ್ತೇನ ವೈಷ್ಣವಾಸ್ತ್ರಾಭಿಮಂತ್ರಿತಃ |
ಮುಕ್ತಸ್ತಸ್ಯ ಫಲಪ್ರಾಂತಾದುಲ್ಮುಕಾ ದಿವಿ ನಿರ್ಯಯೌ || ೩ ||

ಪಂಕ್ತಯಃ ಸ್ಫಾರಚಕ್ರಾಣಾಂ ಶತಾರ್ಕೀಕೃತದಿಕ್ತಟಾಃ |
ಗದಾನಾಮಭಿಯಾಂತೀನಾಂ ಶತವಂಶೀಕೃತಾಂಬರಾಃ || ೪ ||

ಐವತ್ತನೆಯ ಸರ್ಗ

೧–೨. ಶ್ರೀ ವಸಿಷ್ಠನು ಹೇಳಿದನು:—ಹೀಗೆ ಘೋರವಾಗಿ ಸಮರವು ನಡೆಯುತ್ತಿರುವಾಗ, ಶತ್ರು ಸೈನ್ಯವೆಲ್ಲ ನಿರ್ಮೂಲವಾಗಿ ತನ್ನ ಸೈನ್ಯವು ಸುಖವಾಗಿರಲೆಂದು, ಸ್ಮೃತಿಮಂತನೂ, ಕಾಲೋಚಿತವಾದ ಬುದ್ಧಿಯುಳ್ಳವರಲ್ಲಿ ಅಗ್ರಗಣ್ಯನೂ, ಮಹೋದಾರಾಧಿಕ ಧೈರ್ಯನೂ ಆದ ಸಿಂಧುರಾಜನು ಅಸ್ತ್ರೇಶ್ವರವಾದ ಕಾಲರುದ್ರೋಪಮವಾದ ವೈಷ್ಣವಾಸ್ತ್ರವನ್ನು ನೆನೆದುಕೊಂಡನು.

೩. ವೈಷ್ಣವಾಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸಲು ಉಲ್ಮುಕಾದಿಗಳು ಹೊರಟುವು.

೪. ಚಕ್ರ ಪರಂಪರೆಗಳು ಏಕಕಾಲದಲ್ಲಿ ಶತಸೂರ್ಯರುದಯಿಸಿದರೋ ಎಂಬಂತೆ ದಿಕ್ಕುಗಳನ್ನು ಬೆಳಗಿದುವು. ಗದಾ ಸಮೂಹಗಳು ಕಾಣಿಸಿಕೊಂಡು ಆಕಾಶದಲ್ಲಿ ನೂರಾರು ಬಿದಿರು ಮೆಳೆಗಳು ಹುಟ್ಟಿದುವೋ ಎಂಬಂತೆ ಮಾಡಿದುವು.

ವಜ್ರಾಣಾಂ ಶತಧಾರಾಣಾಂ ತೃಣರಾಜೀಕೃತಾಂಬರಾಃ |
ಪಟ್ಟಿಶಾನಾಂ ಸಪದ್ಮಾನಾಂ ದೀನವೃಕ್ಷೀಕೃತಾಂಬರಾಃ || ೫ ||

ಶರಾಣಾಂ ಶಿತಧಾರಾಣಾಂ ಪುಷ್ಪಜಾಲೀಕೃತಾಂಬರಾಃ |
ಖಡ್ಗಾನಾಂ ಶ್ಯಾಮಲಾಂಗಾನಾಂ ಪತ್ರರಾಶೀಕೃತಾಂಬರಾಃ || ೬ ||

ಅಥ ರಾಜಾ ದ್ವಿತೀಯೋಽಪಿ ವೈಷ್ಣವಾಸ್ತ್ರಸ್ಯ ಶಾಂತಯೇ |
ದದೌ ವೈಷ್ಣವಮೇವಾಸ್ತ್ರಂ ಶತ್ರುನಿಷ್ಕಾವಪೂರಕಂ || ೭ ||

ತತೋಽಪಿ ನಿರ್ಯಯುರ್ನದ್ಯೋ ಹೇತೀನಾಂ ಹತಹೇತಯಃ |
ಶರಶಕ್ತಿಗದಾಪ್ರಾಸಪಟ್ಟಿಶಾದಿಪಯೋಮಯಾಃ || ೮ ||

ಶಸ್ತ್ರಾಸ್ತ್ರಸರಿತಾಂ ತಾಸಾಂ ವ್ಯೋಮ್ನಿ ಯುದ್ಧಮವರ್ತತ |
ರೋದೋರಂಧ್ರಕ್ಷಯಕರಂ ಕುಲಶೈಲೇಂದ್ರದಾರಣಂ || ೯ ||

---

೫. ಶತಧಾರೆಗಳ ವಜ್ರಗಳು ಬರಲು ಆಕಾಶವೆಲ್ಲ ಹುಲ್ಲು ಹಿಡಿದಂತೆ ಕಂಡಿತು. ಪಟ್ಟಿಶ, ಪದ್ಮ, ಆಯುಧಗಳು ತಂಡವಾಗಿ ಬರಲು, ಆಕಾಶದಲ್ಲಿ ಕಡಿದ ಮರಗಳನ್ನು ಒಟ್ಟಿದ್ದಂತಿತ್ತು.

೬. ಶಿತಧಾರೆಗಳ ಶರಗಳಿಂದ ಆಕಾಶವು ಪುಷ್ಪಾಕೀರ್ಣವಾದಂತಾಯಿತು. ಶ್ಯಾಮಲ ಕಾಂತಿಯುಳ್ಳ ಖಡ್ಗ ಸಮೂಹಗಳಿಂದ ಆಕಾಶವು ಪತ್ರಮಯವಾದಂತಿತ್ತು.

೭. ವಿದೂರಥರಾಜನೂ ವೈಷ್ಣವಾಸ್ತ್ರವನ್ನು ಎದುರಿಸಲು ವೈಷ್ಣವಾಸ್ತ್ರವನ್ನೇ ಪ್ರಯೋಗಿಸಿದನು.

೮. ವಿದೂರಥನು ಪ್ರಯೋಗಿಸಿದ ಆ ವೈಷ್ಣವಾಸ್ತ್ರದಿಂದಲೂ ಆಯುಧ ನದಿಗಳು ಹೊರಟು ಶತ್ರುಪಕ್ಷದ ಆಯುಧಗಳನ್ನು ಧ್ವಂಸಮಾಡಿದುವು.

೯. ಆ ಶಸ್ತ್ರಾಸ್ತ್ರ ನದಿಗಳಿಗೆ ಅಂತರಿಕ್ಷದಲ್ಲಿ ಯುದ್ಧವು ಮೊದಲಾಗಿ ಅಂತರಿಕ್ಷವೆಲ್ಲ ಮುಚ್ಚಿಹೋಗಿ, ಕುಲಶೈಲಗಳೂ ಅಬ್ಬಾ ಎನ್ನುವಂತಾಯ್ತು.

ಶರಪಾತಿತಶೂಲಾಸಿಖಡ್ಗಕುಟ್ಟಿತಪಟ್ಟಿಶಂ |
ಮುಸಲಪ್ರತನಾಪ್ರಾಸಶೂಲಶಾತಿತಶಕ್ತಿಕಂ || ೧೦ ||

ಶರಾಂಬುರಾಶಿಮಥನಮತ್ತ ಮುದ್ಗರಮಂದರಂ |
ಗದಾವದನತೋ ಯುಕ್ತಂ ದುರ್ವಾರಾಸ್ತ್ರನಿಭಾಸಿನಿ || ೧೧ ||

ರಿಷ್ಟಾರಿಷ್ಟಪ್ರಶಮನಭ್ರಮತ್ಕುಂತೇಂದು ಮಂಡಲಂ |
ಪ್ರಾಸಪ್ರಸರಸಂರಬ್ಧ ಪ್ರೋದ್ಯತಾಂತಕೃತಾಂತಕಂ || ೧೨ ||

ಚಕ್ರಾವಕುಂಠಿತೋರ್ಧ್ವಾಸ್ತ್ರಂ ಸರ್ವಾಯುಧಕ್ಷಯಂಕರಂ |
ಶಬ್ದಸ್ಫುಟದ್ವಿರಿಂಚಾಂಡಂ ಘಾತಭಗ್ನಕುಲಾಚಲಂ || ೧೩ ||

ಧಾರಾನಿಕೃತ್ತಶಸ್ತ್ರೌಘಮಸ್ತ್ರಯೋರ್ಯುಧ್ಯಮಾನಯೋಃ |
ಮದಸ್ರವಾರಣೇನೇವ ವಜ್ರಾವಿಜರಪರ್ವತಂ || ೧೪ ||

---

೧೦. ಶರಗಳಿಂದ ಶೂಲಾಸಿಗಳೂ ಖಡ್ಗಗಳಿಂದ ಪಟ್ಟಿಶಗಳೂ ಹರಡುತ್ತಿರುವ ಮುಸಲಗಳಿಂದ ಪ್ರಾಸಗಳೂ ಶೂಲಗಳಿಂದ ಶಕ್ತಿಗಳೂ ಹತವಾದುವು.

೧೧. ಮತ್ತ ಮುದ್ಗರಗಳು ಶರಸಮುದ್ರವನ್ನು ಮಥನ ಮಾಡುತ್ತಿದ್ದುವು. ಗದೆಗಳು, ಅಸಿನಿಗಳು ಅಸ್ತ್ರಗಳಂತೆ ಸಹಿಸಲು ಅಸಾಧ್ಯವಾಗಿದ್ದುವು.

೧೨. ಕುಂತಗಳೆಂಬ ಇಂದು ಮಂಡಲಗಳು ರಿಷ್ಟ (ಹಿಂಸೆ) ವೆಂಬ ಅರಿಷ್ಟವನ್ನು ಶಾಂತಮಾಡಲು ಸುತ್ತುತ್ತಿದ್ದುವು. ಪ್ರಾಸಾಯುಧಗಳು ಎಲ್ಲೆಲ್ಲೂ ಪ್ರಸರಿಸಿ ಕಾರ್ಯಪರವಾಗುತ್ತಿರಲು ಯಮನು ವಿನಾಶ ಮಾಡಬೇಕೆಂದು ಬಂದು ವಿಶೇಷ ಯತ್ನಮಾಡುತ್ತಿರುವನೋ ಎಂಬಂತಿತ್ತು.

೧೩. ಮೇಲಕ್ಕೆ ಹೋಗುತ್ತಿದ್ದ ಅಸ್ತ್ರಗಳನ್ನು ಚಕ್ರಗಳು ನಡುವೆಯೇ ಕತ್ತರಿಸಿದುವು. ಆಯುಧಗಳೆಲ್ಲವೂ ಹತವಾದುವು. ಆ ಶಬ್ದಕ್ಕೇ ಬ್ರಹ್ಮಾಂಡವೇ ಬಿರಿಯಿತು. ಕುಲಾಚಲಗಳು ಮುರಿದುವು.

೧೪. ಆ ಇಬ್ಬರು ರಾಜರ ಶಸ್ತ್ರಗಳು ಪರಸ್ಪರ ಕತ್ತರಿಸುತ್ತಿರಲು, ಮುರಿದ ಶಸ್ತ್ರಾದಿಗಳು ಪರ್ವತವಾಗಿ ಬಿದ್ದುವು. ವಜ್ರಾಯುಧವೂ ಆ ಪರ್ವತವನ್ನು ಕತ್ತರಿಸಲಾರದು ಎಂಬಂತಿತ್ತು. (?)

ಶಂಕುಶಂಕಿತಸೂತ್ಕಾರಕಾಶಿಶೂಲಶಿಲಾಶತಂ |
ಭುಶುಂಡೀ ನಿರ್ಜತೋದ್ದಂಡಭಿಂದಿಪಾಲೋಗ್ರಮಂಡಲಂ || ೧೫ ||

ಪರಶೂಲಕರಾಭ್ಯೈಕ ಪರಶೂಲೈಕಲಂಪಿತಂ |
ವಹದುಚ್ಛಿನ್ನ ಚಂಚೂರಚಾರಣಂ ಶತ್ರುವಾರಣಂ || ೧೬ ||

ಸ್ಫುಟಚ್ಚಟಚಟಾಸ್ಫೋಟರುದ್ಧತ್ರಿಪಥಗಾರಯಂ |
ಹೇತ್ಯಸ್ತ್ರೀಚೂರ್ಣಸಂಭಾರಮಹಾಧೂಮವಿತಾನಕಂ || ೧೭ ||

ಅನ್ಯೋನ್ಯಶಸ್ತ್ರಸಂಘಟ್ಟಾದ್ಭ್ರಮಜ್ಜ್ವಾಲೋಲಸತ್ತಡಿತ್ |
ಶಬ್ದಸ್ಫುಟದ್ವಿರಿಂಚಾಂಡಂ ಘಾತಮಗ್ನಕುಲಾಚಲಂ || ೧೮ ||

ಧಾರಾನಿಕೃತ್ತಶಸ್ತ್ರೌಘಮಸ್ತ್ರಯೋರ್ಯುಧ್ಯಮಾನಯೋಃ |
ಮದಸ್ತ್ರವಾರಣೇನ್ಯೈವ ಕಾಲೋಪಾಯೋಽಚಲಾತ್ಮನಃ || ೧೯ ||

---

೧೫. ಸೂತ್ಕಾರ ಮಾಡುತ್ತ ಬಂದು ಗೂಟಗಳಂತೆ ನೈಗೆ ನಾಟಿಕೊಳ್ಳುತ್ತಿದ್ದ ನೂರಾರು ಶೂಲ ಶಿಲೆಗಳೂ, ಭುಶುಂಡಿಗಳಿಂದ ನಿರ್ಜಿತಗಳಾದ ಉದ್ದಂಡ ಭಿಂಡಿಪಾಲ ಮಂಡಲಗಳೂ,

೧೬. ಉತ್ತಮ ಶೂಲಗಳು ಕಾಲರುದ್ರನಂತೆ ಇತರ ಶೂಲಗಳನ್ನು ಕಡಿಯುತ್ತಿದ್ದುವು. ಕೊಚ್ಚಿ ಹೋಗುತ್ತಿರುವ ಛಿನ್ನಭಿನ್ನಾಯುಧಗಳಿಂದ ಶತ್ರು ಸಂಚಾರಕ್ಕೆ ಅಡ್ಡಿಯಾಯಿತು.

೧೭. ಚಟಚಟ ಎಂದು ಮುರಿಯುತ್ತಿದ್ದ ಆಯುಧಗಳು (ಆಕಾಶ) ಗಂಗೆಯನ್ನು ತಡೆದುವು. ಅವುಗಳ ಸಣ್ಣಸಣ್ಣ ಚೂರುಗಳು ಹೊಗೆಯಂತೆ ಆಕಾಶವನ್ನೆಲ್ಲ ಮುಸುರಿಕೊಂಡಿದ್ದುವು.

೧೮. ಆಯುಧಗಳು ಒಂದಕ್ಕೊಂಡು ತಗಲಿ ಹುಟ್ಟುತ್ತಿದ್ದ ಮಿಂಚುಗಳು ಬಲೆಯನ್ನು ನೆಯ್ಯುವಂತಿದ್ದುವು. ಆ ಶಬ್ದಕ್ಕೆ ಬ್ರಹ್ಮಾಂಡವು ಬಿರಿಯಿತು. ಕುಲಾಚಲಗಳು ಮುರಿದುವು.

೧೯. ಉಭಯ ರಾಜರ ಶಸ್ತ್ರಗಳು ಪರಸ್ಪರ ಕತ್ತರಿಸುತ್ತಿರಲು, ಸ್ಥಿರನಾಗಿದ್ದ ರಾಜನಿಗೆ ಅಸ್ತ್ರನಿವಾರಣೆಯು ಕಾಲಕ್ಷೇಪರೂಪವಾದ ಕ್ರೀಡೆಯಂತಿತ್ತು.

ಅಯಂ ಕಿಯದ್ಬಲ ಇತಿ ಸಿಂಧೌ ತಿಷ್ಠತಿ ಹೇಲಯಾ |
ವಿದೂರಥೋಽಸ್ತ್ರಮಾಗ್ನೇಯಂ ತತ್ಯಾಜಾಶನಿಶಬ್ದವತ್ ‖ ೨೦ ‖

ಜ್ವಾಲಯಾಮಾಸ ಸ ರಥಂ ಸಿಂಧೋಃ ಕಕ್ಷಮಿವಾರಸಂ |
ಏತಸ್ಮಿನ್ನಂತರೆ ವ್ಯೋಮ್ನಿ ಹೇತಿನಿರ್ವಿವರೋದರೇ ‖ ೨೧ ‖

ಸಸನ್ನಾಹ ಇವ ಪ್ರಾವಟ್ಪಯೋದತಟನೀವ ಯಃ ‖ ೨೨ ‖

ಅಸ್ತ್ರೇ ರಾಜ್ಞೋಃ ಕ್ಷಣಂ ಕೃತ್ವಾ ಯುದ್ಧಂ ಪರಮದಾರುಣಂ |
ಅನ್ಯೋನ್ಯಂ ಶಮಮಾಯಾತೇ ಸವೀರ್ಯೇ ಸುಭಟಾವಿವ ‖ ೨೩ ‖

ಏತಸ್ಮಿನ್ನಂತರೆ ಸೋಽಗ್ನೀ ರಥಂ ಕೃತ್ವಾ ತು ಭಸ್ಮಸಾತ್ |
ಪ್ರಾಪ ದಗ್ಧ್ವಾ ವನಂ ಸಿಂಧುಂ ಮೃಗೇಂದ್ರಮಿವ ಕಂದರಾತ್ ‖ ೨೪ ‖

---

೨೦. ಸಿಂಧುರಾಜನು ಶತ್ರುವಿನ ಬಲವಿಷ್ಟೇ ತಾನೇ ! ಎಂದು ಗರ್ವದಿಂದಿರಲು, ವಿಧೂರಥನು ಸಿಡಿಲಿನಂತೆ ಅಬ್ಬರಿಸುತ್ತಿರುವ ಆಗ್ನೇಯಾಸ್ತ್ರವನ್ನು ಬಿಟ್ಟನು.

೨೧. ಅದು ಸಿಂಧುರಾಜನ ರಥವನ್ನು ಒಣಗಿದ ಪೊದೆಯನ್ನು ಸುಡುವಂತೆ ಸುಟ್ಟಿತು. ಇಷ್ಟರಲ್ಲಿ, ಆಕಾಶವೆಲ್ಲವೂ ಆಯುಧಗಳಿಂದ ತುಂಬಿ ಹೋಗಿತ್ತು.

೨೨. ಮಳೆಗರೆಯಲು ಸಿದ್ಧವಾಗಿರುವ ವರ್ಷಾಕಾಲದ ಮೋಡದಂತೆ ಒಬ್ಬ ರಾಜನೂ ಮಳೆಯಿಂದ ತುಂಬಿ ಹರಿಯುತ್ತಿರುವ ನದಿಯಂತೆ ಇನ್ನೊಬ್ಬ ರಾಜನೂ (ಇದ್ದರು.)

೨೩. ಆ ರಾಜರು ಪ್ರಯೋಗಿಸಿದ ಅಸ್ತ್ರಗಳು ಪರಮದಾರುಣವಾದ ಯುದ್ಧವನ್ನು ಮಾಡಿದುವು. ಭಟರು ಆಯಾಸವಾಗುವವರೆಗೆ ಹೋರಾಡುವಂತೆ ಅವೂ ಹೋರಾಡಿ ಸುಮ್ಮನಾದುವು.

೨೪. ಅಷ್ಟರಲ್ಲಿ ಆಗ್ನೇಯಾಸ್ತ್ರವು ಸಿಂಧುರಾಜನ ರಥವನ್ನು ಸುಟ್ಟು ವನವನ್ನು ಸುಟ್ಟು, ಕಂದರದಿಂದ ಮೃಗೇಂದ್ರನ ಬಳಿಗೆ ಬರುವಂತೆ, ಸಿಂಧುರಾಜನ ಬಳಿಗೆ ಬಂತು.

ಸಿಂಧುರಭ್ಯಾಸತೋಽಗ್ನ್ಯಸ್ತ್ರಂ ವಾರುಣಾಸ್ತ್ರೇಣ ಶಾಮಯನ್ |
ರಥಂ ತ್ಯಕ್ತ್ವಾವನಿಂ ಪ್ರಾಪ್ಯ ಖಡ್ಗಾಸ್ಫೋಟಕವಾನಭೂತ್ || ೨೫ ||

ಅಸ್ಫೋರ್ನಿಮೇಷಮಾತ್ರೇಣ ರಥಾಶ್ವಾನಾಂ ರಿಪೋಃ ಖುರಾನ್ |
ಲುಲಾವ ಕರವಾಲೇನ ಮೃಣಾಲಾನೀವ ಲಾಘವಾತ್ || ೨೬ ||

ವಿದೂರಥೋಽಪಿ ವಿರಥೋ ಬಭೂವಾಸ್ಫೋಟಕಾಸಿವಹಿನ್ |
ಸಮಾಯುಧೌ ಸಮೋತ್ಸಾಹೌ ಚೇರತುರ್ಮಂಡಲಾನಿ ತೌ || ೨೭ ||

ಖಡ್ಗೌ ಕ್ರಕಚತಾಂ ಯಾತೌ ಮಿಥಃ ಪ್ರಹರತೋಸ್ತಯೋಃ |
ದಂತಮಾಲೇ ಯಮಸ್ಯೇವ ಬಲೀ ಚರ್ವಯತಃ ಪ್ರಜಾಃ || ೨೮ ||

ಶಕ್ತಿಮಾದಾಯ ಚಿಕ್ಷೇಪ ಖಡ್ಗಂ ತ್ಯಕ್ತ್ವಾ ವಿದೂರಥಃ |
ಸಿಂಧ್ವಂಬುಘರ್ಘರಾರಾವೋ ಮಹೋತ್ಪಾತ ಇವಾಶನಿಃ || ೨೯ ||

ಅವಿಚ್ಛಿನ್ನಾ ಸಮಾಯಾತಾ ಪತಿತಾ ಸಾಸ್ಯ ವಕ್ಷಸಿ |
ಅಪ್ರಿಯಸ್ಯ ಯಥಾ ಭರ್ತುರನಿಚ್ಛಂತೀ ಸ್ವಕಾಮಿನೀ || ೩೦ ||

೨೫–೨೬. ಸಿಂಧುರಾಜನು ಅಭ್ಯಾಸ ಬಲದಿಂದ ಆ ಆಗ್ನೇಯವನ್ನು ವಾರುಣದಿಂದ ಶಮನಮಾಡಿ, ಸುಟ್ಟರಥವನ್ನು ಬಿಟ್ಟು, ಖಡ್ಗ ಚರ್ಮಗಳನ್ನು ಧರಿಸಿ ನೆಲಕ್ಕಿಳಿದನು. ಒಂದು ಸಲ ರೆಪ್ಪೆ ಹೊಡೆಯುವುದರೊಳಗಾಗಿ ಶತ್ರುವಿನ ರಥಾಶ್ವಗಳ ಗೊರಸುಗಳನ್ನು ತನ್ನ ಖಡ್ಗದಿಂದ, ತಾವರೆಯ ದಂಟುಗಳನ್ನು ಕತ್ತರಿಸುವಂತೆ, ಲಾಘವದಿಂದ ಕತ್ತರಿಸಿದನು.

೨೭–೨೮. ವಿರಥನಾದ ವಿದೂರಥನೂ ಖಡ್ಗಚರ್ಮಗಳನ್ನು ಧರಿಸಿದನು. ಸಮಾಯುಧರೂ ಸಮೋತ್ಸಾಹರೂ ಆದ ಅವರಿಬ್ಬರೂ ಮಂಡಲಾಕಾರವಾಗಿ ತಿರುಗಿದರು. ಇಬ್ಬರೂ ಹೊಡೆದಾಡುತ್ತಿರಲು ಅವರ ಖಡ್ಗಗಳು ಗರಗಸಗಳಾದುವು. ಅದನ್ನು ನೋಡಿದರೆ ಇಬ್ಬರ ಸೈನ್ಯಗಳನ್ನೂ ತಿನ್ನಲು ಬಂದಿರುವ ಯಮನ ಹಲ್ಲುಗಳ ಸಾಲೋ ಎಂಬಂತಿತ್ತು.

೨೯-೩೦. ವಿದೂರಥನು ಖಡ್ಗವನ್ನೆಸೆದು ಶಕ್ತಿಯನ್ನು ತೆಗೆದು ಸಮುದ್ರದ ನೀರಿನ ಘರ್ಘರಾರಾವದಿಂದ, ಮಹೋತ್ಪಾತವೋ ಸಿಡಿಲೋ ಎಂಬಂತೆ ಎಸೆದನು. ಆ ಶಕ್ತಿಯು ತಡೆಯೇನೂ ಇಲ್ಲದೆ, ಬೇಡವಾದ ಗಂಡನ ಮೇಲೆ ಇಷ್ಟವಿಲ್ಲದೆ ಬೀಳುವ ಹೆಂಗುಸಿನಂತೆ, ಬಂದು ಸಿಂಧುರಾಜನ ವಕ್ಷದಲ್ಲಿ ಬಿತ್ತು. ಆಶ

ತೇನ ಶಕ್ತಿಪ್ರಹಾರೇಣ ನಾಸೌ ಮರಣಮಾಪ್ತವಾನ್ |
ಕೇವಲಂ ರುಧಿರವ್ರಾತಂ ನಾಗೋ ಜಲಮಿವಾತ್ಯಜತ್ || ೩೧ ||

ತದ್ವೀಶಲೀಲಾ ತಂ ದೃಷ್ಟ್ವಾ ಭಗ್ನಂ ತಮ ಇವೇಂದುನಾ |
ಸವಿಕಾಸಘನಾನಂದಾ ಪೂರ್ವಲೀಲಾಮುವಾಚ ಹ || ೩೨ ||

ದೇವಿ ಪಶ್ಯ ನೃಸಿಂಹೇನ ತತೋ ಭರ್ತ್ರಾಯುವಮಾವಯೋಃ |
ಶಕ್ತಿಕೋಟಿನಖೈರ್ದೈತ್ಯಃ ಸಿಂಧುರುದ್ಧುರಕಂಧರಃ || ೩೩ ||

ಸರಃ ಸ್ಥಲಸನಾಗೇಂದ್ರಕರಪೂತ್ಕೃತವಾರಿವತ್ |
ಪಿಷ್ಟೋ ರಸೋಽಸ್ಯ ನಿರ್ಯಾತಿ ರಕ್ತಂ ಚುಲಚುಲಾರವೈಃ || ೩೪ ||

ಹಾ ಕಷ್ಟಂ ರಥಮಾನೀತಂ ಸಿಂಧುರಾರೋಢುಮುದ್ಯತಃ |
ಸೌವರ್ಣಂ ಮೈರವಂ ಶೃಂಗಂ ಪುಷ್ಕರಾವರ್ತಕೋ ಯಥಾ || ೩೫ ||

ಪಶ್ಯ ದೇವಿ ರಥೋಽಸ್ಯಾಸೌ ಮುದ್ಗರೇಣ ವಿಚೂರ್ಣಿತಃ |
ಭ್ರಮತ್ಪಾರ್ಥನಿಪಾತೇನ ಸೌವರ್ಣಂ ನಗರಂ ಯಥಾ || ೩೬ ||

ಕ್ತಿಯು ಆ ಏಟಿನಿಂದ ಸಿಂಧುರಾಜನಿಗೆ ಏನೂ ಆಗಲಿಲ್ಲ: ಆನೆಗೆ ಮದೋದಕವು ಬರುವಂತೆ ಅವನಿಗೂ ಒಂದಷ್ಟು ರಕ್ತ ಬಂತು.

೩೨-೩೩. ವಿದೂರಥನ ಲೀಲೆಯು ಅದನ್ನು ನೋಡಿ, ಚಂದ್ರನಿಂದ ತಮಸ್ಸು ಭಗ್ನವಾಗುವಂತೆ, (ಆಯಿತೆಂದುಕೊಂಡು) ಆನಂದಪಡುತ್ತ ಪೂರ್ವಲೀಲೆಯನ್ನು ಕುರಿತು ಹೀಗೆಂದಳು:—"ದೇವಿ, ನೋಡು, ನಮ್ಮ ಗಂಡನಾದ (ವಿದೂರಥ) ನೃಸಿಂಹನಿಂದ ಶಕ್ತಿಯ ಅಲಗುಗಳೆಂಬ ನಖಗಳಿಂದ, ದೈತ್ಯ ಸ್ವರೂಪನಾದ ಸಿಂಧುರಾಜನು ಹತನಾದನು.

೩೪-೩೬. ಸರಸ್ಸಿನಲ್ಲಿರುವ ಗಜೇಂದ್ರನ ಸೊಂಡಿಲಿಂದ ಫೂತ್ಕೃತವಾಗಿ ಬರುವ ನೀರಿನಂತೆ, ಚೂರ್ಣವಾದ ಇವನ ಎದೆಯಿಂದ, ಚುಳಚುಳನೆ ಹಿಂಡಿದ ರಸದಂತೆ, ರಕ್ತವು ಬರುತ್ತಿರುವುದು. ಅಯ್ಯೋ ! ಸಿಂಧುರಾಜನಿಗೆ ಹೊಸರಥವು ಬಂತು. ಮೇರುವಿನ ಚಿನ್ನದ ಶೃಂಗವನ್ನು ಪುಷ್ಕರಾವರ್ತಕಗಳು ಏರುವಂತೆ, ಇವನೂ ಆ ಹೊಸರಥವನ್ನು ಏರುವುದರಲ್ಲಿರುವನು. ದೇವಿ, ನೋಡು, ಈ ರಥವೂ ಮುದ್ಗರದಿಂದ ಪುಡಿಪುಡಿಯಾಯಿತು. ಪಾರ್ಥನ ಶಸ್ತ್ರ ಪ್ರಹಾರದಿಂದ ನಿವಾತ ಕವಚರ ಹಾರುತ್ತಿದ್ದ ಸುವರ್ಣ ನಗರವು ಮುರಿದು ಬಿದ್ದಂತಾಯ್ತು.

ಪ್ರವೃತ್ತೋ ರಥಮಾರೋಢುಮಾನೀತಂ ಪತಿರೇಷ ಮೆ |
ಕಷ್ಟಂ ವಜ್ರಮಿವೇಂದ್ರೇಣ ಮುಸಲಂ ಸಿಂಧುನೇಕ್ಷಿತಂ || ೩೭ ||

ಜವಾತ್ಪತಿಃ ಪ್ರಯಾತೋ ಮೇ ಸೈಂಧವಂ ಮುಸಲಾಯುಧಂ |
ವಂಚಯಿತ್ವಾ ವಿಲಾಸೇನ ರಥಮಾರುಹ್ಯ ಲಾಘವಾತ್ || ೩೮ ||

ಹಾ ದಿಕ್ಕಷ್ಟಮಸೌ ಸಿಂಧುರಾರ್ಯಪುತ್ರರಥಂ ರಯಾತ್ |
ಹರಿಶ್ವಭ್ರಮಿವಾರೂಢಂ ಪ್ಲವೇನೋರ್ಧ್ವಮಿವ ದ್ರುಮಂ || ೩೯ ||

ಕ್ರೀಡಿತ್ವಾ ಪೀಡಯಾಮಾಸ ಶರವರ್ಷೈಃ ವಿದೂರಥಂ |
ಛಿನ್ನಧ್ವಜಂ ಛಿನ್ನರಥಂ ಛಿನ್ನಾಶ್ವಂ ಛಿನ್ನಸಾರಥಿಂ || ೪೦ ||

ಛಿನ್ನಕಾರ್ಮುಕವರ್ಮಾಣಂ ಛಿನ್ನಸರ್ವಾಂಗಮಾಕುಲಂ |
ಹೃದಿ ಸ್ಫೋಟಶಿಲಾಪಟ್ಟದೃಢೇ ಪೀವರಮೂರ್ಧನಿ || ೪೧ ||

ಭಿತ್ವಾ ವಜ್ರಸಮೈರ್ಬಾಣೈಃ ಪಾತಯತ್ಯೇಷ ಭೂತಲೇ |
ಅಥಾನ್ಯ ರಥಮಾನೀತಂ ಕೃಚ್ಛ್ರೇಣ ಪ್ರಾಪ್ಯ ಚೇತನಾಂ |

ಖಡ್ಗೇನಾರೋಹತೋಽಸ್ಯಾಂಸಂ ಛಿನ್ನಂ ಭರ್ತುರ್ವಿಲೋಕಯ || ೪೨ ||
ಪದ್ಮರಾಗಗಿರಿದ್ಯೋತಮಿವದ್ಧಾರ್ಸೃಗ್ವಿಮುಂಚತಿ
ಹಾಹಾಧಿಕ್ಕಷ್ಟಮೇತೇನ ಸಿಂಧುನಾ ಖಡ್ಗಧಾರಯಾ || ೪೩ ||

೩೭-೪೩. ಪತಿಯೂ ಹೊಸದಾಗಿ ಬರದಿರುವ ರಥವನ್ನೇರುವುದರಲ್ಲಿರುವನು. ಅಯ್ಯೋ ! ಇಂದ್ರನ ವಜ್ರಾಯುಧದಂತಹ ಮುಸಲವನ್ನು ಸಿಂಧುವು ಪ್ರಯೋಗಿಸಿದನು. ಸಿಂಧುರಾಜನ ಮುಸಲಾಯುಧವನ್ನು ವಂಚಿಸಿ, ಲಾಘವದಿಂದಲೂ ವಿಲಾಸದಿಂದಲೂ ನನ್ನಗಂಡನು ರಥವನ್ನುಏರಿದನು: ಹಾ ಕಷ್ಟಕಷ್ಟ! ಸಿಂಧುರಾಜನು ಆರ್ಯಪುತ್ರನ ರಥವನ್ನು ಮರವನ್ನೇರುವಂತೆ, ಪಾಚಿಯಿಂದ ಹಸುರುಹಿಡಿದ ಹಳ್ಳವನ್ನು ಹಾರುವಂತೆ, ಒಂದೇ ಹಾರಿಗೆ ಹಾರಿ, ತನ್ನ ಶರವರ್ಷಗಳಿಂದ ನೋಯಿಸಿದನು. ಧ್ವಜ, ರಥ, ಅಶ್ವಸಾರಥಿ, ಧನುಸ್ಸು, ಕವಚಗಳನ್ನೆಲ್ಲಾ ಮುರಿದು ಸರ್ವಾಂಗವೂ ನೋಯುವಂತೆ ಮಾಡಿ, ದೊಡ್ಡ ಬಂಡೆಯಂತೆ ದೃಢವಾದ ಅವನ ಎದೆಯಲ್ಲೂ ಆ ದಪ್ಪತಲೆಯಲ್ಲೂ ವಜ್ರ ಸಮವಾದ ಬಾಣಗಳಿಂದ ಹೊಡೆದು ವಿದೂರಥನನ್ನು ನೆಲದ ಮೇಲೆ ಬೀಳಿಸಿದನು. ತನ್ನವರು ತಂದ ಇನ್ನೊಂದು ರಥವನ್ನು ಪ್ರಾಪ್ತ ಚೇತನನಾದ ವಿದೂರಥನು ಕಷ್ಟಪಟ್ಟು ಏರುತ್ತಿರುವಾಗಲೇ, ಸಿಂಧುವು ಖಡ್ಗದಿಂದ ನಮ್ಮ

ಜಂಘಯೋರ್ಮೇ ಪತಿಶ್ಛಿನ್ನಃ ಕ್ರಕಚೇನೇವ ಪಾದಪಃ ॥ ೪೪ ॥
ಹಾಹಾ ಹತಾಸ್ಮಿ ದಗ್ಧಾಸ್ಮಿ ಮೃತಾಸ್ಮ್ಯುಪಹತಾಸ್ಮಿ ಚ ।
ಮೃಣಾಲೇ ಇವ ಪತ್ಯುರ್ಮೇ ಲೂನೇ ದ್ವೇ ಅಪಿ ಜಾನುನೀ ॥ ೪೫ ॥

ಇತ್ಯುಕ್ತ್ವಾ ಸಾ ತದಾಲೋಕ್ಯ ಭರ್ತುರ್ಭಾವಭಯಾತುರಾ ।
ಲತಾ ಪರಶುಕೃತ್ತೇವ ಮೂರ್ಛಿತಾ ಭುವಿ ಸಾಪತತ್ ॥ ೪೬ ॥

ವಿದೂರಥೋಽಪಿ ನಿರ್ಜಾನುಃ ಪ್ರಹರನ್ನೇವ ವಿದ್ವಿಷಿ ।
ಪಪಾತ ಸ್ಯಂದನಸ್ಯಾಧಶ್ಛಿನ್ನಮೂಲ ಇವ ದ್ರುಮಃ ॥ ೪೭ ॥

ಪತನ್ನೇವೈಷ ಸೂತೇನ ರಥೈನ್ಯೈವಾಪವಾಹಿತಃ ।
ಯದಾ ತದಾ ಹತಿಂ ತಸ್ಯ ಕಂಠೇಽದಾತ್ಸಿಂಧುರುದ್ಧತಃ ॥ ೪೮ ॥

ಅರ್ಧವಿಚ್ಛಿನ್ನಕಂಠೋಽಸಾವನುಯಾತೋಽಥ ಸಿಂಧುನಾ ।
ಸ್ಯಂದನೇನಾವಿಶತ್ಸದ್ಮ ಪದ್ಮಂ ರವಿಕರೋ ಯಥಾ ॥ ೪೯ ॥

ಗಂಡನ ಹೆಗ್ಗತ್ತನ್ನು ಕತ್ತರಿಸಿದನು ನೋಡು ಪದ್ಮರಾಗ ಪರ್ವತದ ಕಾಂತಿಯಂತಿರುವ ರಕ್ತವು ಬೇಕಾದಹಾಗೆ ಸುರಿಯುತ್ತಿರುವುದು.

೪೪–೫. ಅಯ್ಯೋ ಕಷ್ಟ ಕಷ್ಟ! ಈ ಸಿಂಧುವಿನ ಖಡ್ಗಧಾರೆಯು, ಮರವನ್ನು ಗರಗಸವು ಕೊಯ್ಯುವಂತೆ, ನನ್ನ ಪತಿಯ ಮೊಣಕಾಲುಗಳೆರಡನ್ನೂ ಕತ್ತರಿಸಿತು. ಹಾಹಾ! ಹತಳಾದೆನು, ದಗ್ಧಳಾದೆನು, ಮೃತಳಾದೆನು: ಉಪಹತಳಾದೆನು. ತಾವರೆಯ ದಂಟಿನಂತೆ ನನ್ನ ಗಂಡನ ಜಾನುಗಳೆರಡೂ ಕತ್ತರಿಸಿ ಹೋದುವು.

೪೬–೭. ಹೀಗೆಂದು ಹೇಳಿ ಗಂಡನ ಸ್ಥಿತಿಯನ್ನು ನೋಡಿ ಅವನಿಗೇನಾಗುವುದೋ ಎಂದು ಹೆದರಿ, ಕೊಡಲಿಗೆ ಸಿಕ್ಕಿ ಕತ್ತರಿಸಿ ಹೋದ ಲತೆಯಂತೆ, ಮೂರ್ಛೆಗೊಂಡು ನೆಲದ ಮೇಲೆ ಬಿದ್ದು ಹೋದಳು. ಜಾನುರಹಿತವಾಗಿದ್ದರೂ ಶತ್ರುಗಳಮೇಲೆ ಹೋರಾಡುತ್ತಿದ್ದ ವಿದೂರಥನು ಛಿನ್ನಮೂಲವಾದ ವೃಕ್ಷದಂತೆ ರಥದಿಂದ ಕೆಳಕ್ಕೆ ಬಿದ್ದನು.

೪೮–೪೯. ಬೀಳುತ್ತಿದ್ದ ಹಾಗೆಯೇ ಸೂತನು (ತಡೆದು) ರಥವನ್ನು ತಿರುಗಿಸಿದನು. ಉದ್ಧತನಾದ ಸಿಂಧುವು ಹಾಗೆ ಹಿಂತಿರುಗುತ್ತಿದ್ದವನನ್ನು ಕತ್ತಿಯಿಂದ

ಸರಸ್ವತ್ಯಾಃ ಪ್ರಭಾವಾಢ್ಯಂ ತತ್ಪ್ರವೇಷ್ಟುಮಸೌ ಗೃಹಂ
ನಾಶಕನ್ಮಶಕೋ ಮತ್ತೋ ಮಹಾಜ್ವಾಲೋದರಂ ಯಥಾ ॥ ೫೦ ॥

ಖಡ್ಗಾವಕೃತ್ತಗಲಗರ್ತಗಲತ್ಸವಾತ–
ರಕ್ತಚ್ಛಟಾಘುರಿತವಸ್ತ್ರತನುತ್ರಗಾತ್ರಂ ।
ತತ್ಯಾಜ ತಂ ಭಗವತೀಮಭಿತೋ ಗೃಹಾಂತಃ
ಸೂತಃ ಪ್ರವೇಶ್ಯ ಮೃತಿತಲ್ಪತಲೇ ಗತೋऽರಿಃ ॥ ೫೧ ॥

ಇತ್ಯಾರ್ಷೇ ಶ್ರೀ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
" ವಿದೂರಥ ಮರಣ ವರ್ಣನಂ " ನಾಮ ಪಂಚಾಶಃ ಸರ್ಗಃ

ಹೊಡೆದು ಅರ್ಧವಿಚ್ಛಿನ್ನ ಕಂಠನನ್ನಾಗಿ ಮಾಡಿ, ಹಿಂಬಾಲಿಸಿ ಬಂದನು. ವಿದೂರಥನು ಪದ್ಮವನ್ನು ಸೂರ್ಯಕಿರಣವು ಪ್ರವೇಶಿಸುವಂತೆ, ರಥದಲ್ಲಿ ಬಂದು ಮನೆಯನ್ನು ಸೇರಿದನು.

೫೦. ಸರಸ್ವತಿಯ ಪ್ರಭಾವವಿದ್ದುದರಿಂದ ಆ ಗೃಹವನ್ನು ಸಿಂಧುರಾಜನು ಮತ್ತವಾದ ಮಶಕವು ಮಹಾಜ್ವಾಲಾ ಮಧ್ಯವನ್ನು ಹೇಗೆ ಪ್ರವೇಶಿಸಲಾರದೋ ಹಾಗೆ ಪ್ರವೇಶಿಸಲಾರದೆ ಹೋದನು.

೫೧. ಕತ್ತಿಯ ಏಟಿನಿಂದ ಕತ್ತರಿಸಿ ಹೋದ ಕತ್ತಿನ ಹಳ್ಳದಿಂದ ಸೋರುತ್ತಿರುವ ನೊರೆನೊರೆಯಾದ ರಕ್ತದ ಕಾಂತಿಯಿಂದ ಕೂಡಿದ ವಸ್ತ್ರ, ಕವಚ, ದೇಹಗಳುಳ್ಳ ಆ ವಿದೂರಥನನ್ನು ಸೂತನು ಅರಮನೆಯೊಳಕ್ಕೆ ತಂದು ಸರಸ್ವತೀ ದೇವಿಯು ಎದುರಿನಲ್ಲಿದ್ದ ಮರಣಶಯ್ಯೆಯಲ್ಲಿ ಮಲಗಿಸಿದನು. ಶತ್ರುವು ಹಿಂತಿರುಗಿದನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ವಿದೂರಥ ಮರಣ ವರ್ಣನ" ಎಂಬ
ಐವತ್ತನೆಯ ಸರ್ಗವು.

ಏಕಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಹತೋ ರಾಜಾ ಹತೋ ರಾಜಾ ಪ್ರತಿರಾಜೇನ ಸಂಯುಗೇ |
ಇತಿಶಬ್ದೇ ಸಮುದ್ಭೂತೇ ರಾಷ್ಟ್ರಮಾಸೀದ್ಭಯಾಕುಲಂ || ೧ ||

ಭಾಂಡೋಪಸ್ಕರಭಾರಾಢ್ಯಂ ವಿದ್ರವಚ್ಛಕಟವ್ರಜಂ |
ಸಾಕ್ರಂದಾರ್ತಕಲತ್ರಾಢ್ಯಂ ದ್ರವನ್ನಾಗರದುರ್ಗಮಂ || ೨ ||

ಪಲಾಯಮಾನಸಾಕ್ರಂದಂ ಮಾರ್ಗಾಹೃತವಧೂಗಣಂ |
ಅನ್ಯೋನ್ಯಲುಠನವ್ಯಗ್ರ ಲೋಕಲಗ್ನಮಹಾಭಯಂ || ೩ ||

ಪರರಾಷ್ಟ್ರಜನಾನೀಕತಾಂಡವೋಲ್ಲಾಸಸಾರವಂ |
ನಿರಧಿಷ್ಠಿತಮಾತಂಗಹಯವೀರಪತಜ್ಜನಂ || ೪ ||

ಕಪಾಟಪಾಟನೋಡ್ಡೀನಕೋಶಾಂತರವಘರ್ಘರಂ |
ಲುಂಠಿತಾಸಂಖ್ಯಕೌಶೇಯಪ್ರಾವೃತಾಭಿಭಟೋದ್ಭಟಂ || ೫ ||

ಐವತ್ತೊಂದನೆಯ ಸರ್ಗ

೧–೨. ಶ್ರೀ ವಸಿಷ್ಠನು ಹೇಳಿದನು :—ರಾಜನು ಹತನಾದನು, ಪ್ರತಿರಾಜನಿಂದ ಯುದ್ಧದಲ್ಲಿ ನಮ್ಮ ರಾಜನು ಹತನಾದನು ಎಂದು ಎಲ್ಲೆಲ್ಲಿಯೂ ಶಬ್ದವು ಹುಟ್ಟಲು ರಾಜ್ಯವೆಲ್ಲವೂ ಭಯದಿಂದ ಕಳವಳಗೊಂಡಿತು. ಪಾತ್ರೆ ಪದಾರ್ಥಗಳನ್ನು ತುಂಬಿಕೊಂಡು ಗಾಡಿಗಾಡಿಗಳು ಓಡಿದುವು. ಹೆಂಗುಸರೆಲ್ಲರೂ ಹೋ ಎಂದತ್ತರು. ನಾಗರಕರು ದುರ್ಗಮ ಪ್ರಾಂತಗಳನ್ನು ಸೇರಿಕೊಂಡರು.

೩–೪–೫. ಅಳುತ್ತ ಓಡಿಹೋಗುತ್ತಿರುವ ಹೆಂಗುಸರನ್ನು ದಾರಿಯಲ್ಲೇ ಹೊತ್ತುಕೊಂಡು ಹೋಗುವ, ಒಬ್ಬರನ್ನೊಬ್ಬರು ಕೊಳ್ಳೆ ಹೊಡೆಯಲು ಕಾದಿರುವ ತುಂಟರಿಂದ, ಎಲ್ಲರಿಗೂ ಮಹಾಭಯವು ಪ್ರಾಪ್ತವಾಯಿತು. ಪರರಾಷ್ಟ್ರಗಳಿಂದ ಬಂದ ಜನಗಳ ಗುಂಪು ಉಲ್ಲಾಸವಾಗಿ, ಕೋಲಾಹಲವಾಗಿ ಕುಣಿಯುತ್ತಿದ್ದರು.

ಕ್ಷುರಿಕೋತ್ಪಾಟಿತಾದ್ರ್ರಾಂತ್ರಮೃತರಾಜ ಗೃಹಾಂಗನಂ |
ರಾಜಾಂತಃಪುರವಿಶ್ರಾಂತಚಂಡಾಲಶ್ವಪಚೋತ್ಕರಂ || ೬ ||

ಗೃಹಾಪಹೃತಭೋಜ್ಯಾನ್ನ ಭೋಜನೋನ್ಮುಖಪಾಮರಂ |
ಸಹೇಮಹಾರವೀರೌಘಪಾದಾಹತರುದಚ್ಛಿಶು || ೭ ||

ಅಪೂರ್ವತರುಣಾಕ್ರಾಂತ ಕೇಶಾಂತಃಪುರಿಕಾಂಗನಂ |
ಚೋರಹಸ್ತಚ್ಯುತಾನರ್ಘ್ಯರತ್ನದಂತುರಮಾರ್ಗಗಂ || ೮ ||

ಹಯೇಭರಥಸಂಘಟ್ಟವ್ಯಗ್ರಸಾಮಂತಮಂಡಲಂ |
ಅಭಿಷೇಕೋದ್ಯಮಾದೇಶ ಪರಮಂತ್ರಿಪುರಃಸರಂ || ೯ ||

ರಾಜಧಾನೀವಿನಿರ್ಮಾಣಸಾರಂಭಸ್ಥಪತೀಶ್ವರಂ |
ಕೃತವಾತಾಯನಶ್ವಭ್ರನಿಪತದ್ರಾಜವಲ್ಲಭಂ || ೧೦ ||

ನಿಲ್ಲುವುದಕ್ಕೆ ನೆಲೆಯಿಲ್ಲದೆ ಆನೆ, ಕುದುರೆಗಳು ಓಡಾಡುತ್ತ ಜನರನ್ನು ಘಾತಿಸುತ್ತಿದ್ದುವು. ಥಟಾರನೆ ಭಂಡಾರಗಳ ಬಾಗಿಲುಗಳನ್ನು ಒಡೆದು ಅಲ್ಲಿದ್ದ ಕಾವಲುಗಾರರನ್ನು ಸೋಲಿಸಿ, ಉದ್ಭಟರು ಅಲ್ಲಿನ ರೇಷ್ಮೆಯ ವಸ್ತ್ರಗಳನ್ನು ಲೂಟಿ ಮಾಡುತ್ತಿದ್ದರು.

೬–೭. ಕಿರುಗತ್ತಿಗಳಿಂದ ಅಂತಃಪುರಾಂಗನೆಯರ ಮೃತದೇಹಗಳನ್ನು ಬಗೆಯುವ ಚಂಡಾಲ ಶ್ವಪಚರ ಗುಂಪು ಅಂತಃಪುರವನ್ನು ಹೊಕ್ಕು ಅಲ್ಲಿ ನೆಲಸಿತು. ಮನೆಗಳನ್ನು ನುಗ್ಗಿ ಪಾಮರರು ತಿಂಡಿ ಮೊದಲಾದವುಗಳನ್ನು ಹೊತ್ತುಕೊಂಡು ಬಂದು ತಿನ್ನುತ್ತಿದ್ದರು. ಚಿನ್ನದ ಒಡವೆಗಳನ್ನು ಧರಿಸಿದ ಮಕ್ಕಳು ಸೈನಿಕರ ಕಾಲಿಗೆ ಸಿಕ್ಕಿ ಅಳುತ್ತಿದ್ದುವು.

೮–೧೦. ಅಂತಃಪುರಾಂಗನೆಯರನ್ನು ಜುಟ್ಟುಹಿಡಿದು ಎಳೆದುಕೊಂಡು ಹೋಗುತ್ತಿದ್ದ ಯಾರು ಯಾರೋ ತರುಣರು; ಕದ್ದ ರತ್ನಗಳನ್ನು ಬೀದಿಯಲ್ಲಿ ಕೆಡವಿಕೊಂಡು ಹೋಗುತ್ತಿರುವ ಕಳ್ಳರು; ಕುದುರೆ, ಆನೆಗಳನ್ನು ನೋಡುಕೊಳ್ಳುತ್ತಿರುವ ಸಾಮಂತರು; ರಾಜ್ಯಾಭಿಷೇಕದ ಸಂಬಂಧವಾಗಿ ಆಜ್ಞೆಮಾಡುತ್ತಿರುವ ಮಂತ್ರಿಗಳು; ರಾಜಧಾನಿಯನ್ನು ಪುನರ್ನಿರ್ಮಾಣಮಾಡುತ್ತಿರುವ ಸ್ಥಪತೀಶ್ವರರು: ಗವಾಕ್ಷಗಳನ್ನು ಹತ್ತಿ ಇಳಿಯಬೀಳುತ್ತಿರುವ ರಾಜವಲ್ಲಭರು.

ಜಯಶಬ್ದಶತೋದ್ಘೋಷಸಿಂಧುರಾಜನ್ಯನಿರ್ಭರಂ ।
ಅಸಂಖ್ಯನಿಜರಾಜೌಘಧೃತಸಿಂಧುಕೃತಾಸ್ಥಿತಿ ॥ ೧೧ ॥

ಗ್ರಾಮಾಂತರಸಮಾಕ್ರಾಂತವಿದ್ರವದ್ರಾಜವಲ್ಲಭಂ ।
ಮಂಡಲಾಂತರಸಂಜಾತ ನಗರಗ್ರಾಮ ಲುಂಠನಂ ॥ ೧೨ ॥

ಅನಂತಚೋರಮೋಷಾರ್ಥರುದ್ಧಮಾರ್ಗಗಮಾಗಮಂ ।
ಮಹಾನುಭಾವವೈಧುರ್ಯಸನೀಹಾರ ದಿನಾತಪಂ ॥ ೧೩ ॥

ಮೃತಬಂಧು ಜನಾಕ್ರಂದೈರ್ಮೃತತೂರ್ಯರವೈರಪಿ ।
ಹಯೇಭರಥಶಬ್ದೈಶ್ಚ ಪಿಂಡಗ್ರಾಹ್ಯಘನಧ್ವನಿ ॥ ೧೪ ॥

ಸಿಂಧುದೇವೋ ಜಯತ್ಯೇಕಚ್ಛತ್ರಭೂಮಂಡಲಾಧಿಪಃ ।
ಇತ್ಯನಂತರಮಾರೇಭೇ ಭೇರ್ಯಃ ಪ್ರತಿಪುರಂ ತದಾ ॥ ೧೫ ॥

ರಾಜಧಾನೀಂ ವಿವೇಶಾಥ ಸಿಂಧುರುದ್ಧುರಕಂಧರಃ ।
ಪ್ರಜಾಃ ಸ್ರಷ್ಟುಂ ಯುಗಸ್ಯಾಂತೇ ಮನುರ್ಜಗದಿವಾಪರಃ ॥ ೧೬ ॥

೧೧–೧೨. ನೂರಾರು ಸಲ ಜಯ ಶಬ್ದವನ್ನು ಉದ್ಘೋಷಿಸುತ್ತಿರುವ ಸಿಂಧುರಾಜನ ಪರಿವಾರದವರು; ರಾಜ್ಯಸ್ಥಿತಿ ರಕ್ಷಣೆಗಾಗಿ ಸಿಂಧುರಾಜನಿಂದ ಸ್ಥಾಪಿತರಾಗಿರುವ ಅವನ ಕಡೆಯ ನೂರಾರು ಅಧಿಕಾರಿಗಳು; ಗ್ರಾಮಾಂತರಗಳಲ್ಲಿ ಬಿದ್ದು ಓಡಿಹೋಗುತ್ತಿದ್ದು ರಾಜಾಧಿಕಾರಿಗಳ ಕೈಗೆ ಸಿಕ್ಕಿರುವ (ಪೂರ್ವ) ರಾಜವಲ್ಲಭರು; ನಗರ ಗ್ರಾಮಗಳನ್ನೆಲ್ಲ ಲೂಟಿಮಾಡುತ್ತಿರುವ ಪರದೇಶಿಗಳು;

೧೩–೧೪. ಕದಿಯುವುದಕ್ಕೆಂದು ಮಾರ್ಗಮಾರ್ಗಗಳನ್ನೂ ಕಟ್ಟಿರುವ ಚೋರರ ಗುಂಪುಗಳು; ಮಹಾನುಭಾವನಾದ ವಿದೂರಥನು ಮೃತನಾದನೆಂದು ಮಂಕಾಗಿರುವ ದಿನಗಳು, ಬಂಧುಗಳು ಮೃತರಾದರೆಂದು ಅಳುತ್ತಿರುವವರು; ನಿಂತುಹೋಗಿರುವ ತೂರ್ಯರವಗಳು, ಕೈಯಲ್ಲಿ ಹಿಡಿದುಕೊಳ್ಳಬಹುದಾದಷ್ಟು ಘನವಾಗಿರುವ ಗಜಾಶ್ವ ರಥಶಬ್ದಗಳೂ ತುಂಬಿದ್ದುವು.

೧೫–೧೬. ಸಿಂಧುರಾಜನು ಏಕಚ್ಛತ್ರ ಭೂಮಂಡಲ ಪತಿಯಾಗಿ ಮೆರೆಯುತ್ತಿರುವನು, ಎಂದು ಭೇರಿಗಳು ಊರೂರಿನಲ್ಲಿಯೂ ಬೇಕಾದಹಾಗೆ ಮೊಳಗಿದುವು. ಸಿಂಧುರಾಜನು, ಪ್ರಳಯಾನಂತರದಲ್ಲಿ, ಪ್ರಜೆಗಳನ್ನು ಸೃಷ್ಟಿಮಾಡಲು

ಪ್ರವೃತ್ತಾ ದಶದಿಗ್ಭ್ಯೋಽಥ ಪ್ರವೇಷ್ಟುಂ ಸೈಂಧವಂ ಪುರಂ |
ಕರಾಃ ಕರಿಹಯಾಕಾರೈ ರತ್ನಪೂರಾ ಇವಾಂಬುಧಿಂ || ೧೭ ||

ನಿಬಂಧನಾನಿ ಚಿಹ್ನಾನಿ ಶಾಸನಾನಿ ದಿಶಂ ಪ್ರತಿ |
ಕ್ಷಣಾನ್ನಿವೇಶಯಾಮಾಸುರ್ಮಂಡಲಂ ಪ್ರತಿ ಮಂತ್ರಿಣಃ || ೧೮ ||

ಜಃದಭೂದಚಿರೇಣೈವ ದೇಶೇ ದೇಶೇ ಪುರೇ ಪುರೇ |
ಜೀವಿತೇ ಮರಣೇ ಮಾನೇ ನಿಯಮೋಽಯಮತೋ ಯಥಾ || ೧೯ ||

ಅಥ ಶೇಮುರ್ನಿಮೇಷೇಣ ದೇಶೋಪಪ್ಲವವಿಭ್ರಮಾಃ |
ಪ್ರಶಾಂತೋತ್ಪಾತಪವನಾಃ ಪದಾರ್ಥಾವೃತ್ತಯೋ ಯಥಾ || ೨೦ ||

ಸೌಮ್ಯತಾಮಾಜಗಾಮಾಶು
ದೇಶೋ ದಶದಿಗನ್ವಿತಃ |
ಕ್ಷೀರೋದಃ ಕ್ಷುಭಿತಾವರ್ತೋ
ದ್ರಾಗಿವೋದ್ಧೃತಮಂದರಃ || ೨೧ ||

ಬರುವ ಹೊಸಮನುವಿನಂತೆ ಗರ್ವೋದ್ಧತನಾಗಿ ರಾಜಧಾನಿಯನ್ನು ಪ್ರವೇಶಿಸಿದನು.

೧೭-೮. ರತ್ನಪ್ರವಾಹಗಳು ಸಮುದ್ರಕ್ಕೆ ಬರುವಂತೆ, ಆ ಸಿಂಧುರಾಜನ ಪುರಕ್ಕೆ ಹತ್ತುದಿಕ್ಕುಗಳಿಂದಲೂ ಕಾಣಿಕೆಗಳು ಆನೆಕುದುರೆಗಳ ರೂಪವಾಗಿ ಬಂದು ಒಳಕ್ಕೆಬರಲು ಕಾದಿದ್ದುವು. ಮಂತ್ರಿಗಳು ದಿಕ್ಕುದಿಕ್ಕಿಗೂ ರಾಜನಿಬಂಧಗಳನ್ನೂ ರಾಜಚಿಹ್ನೆಗಳನ್ನೂ ರಾಜಶಾಸನಗಳನ್ನೂ ಒಂದು ಕ್ಷಣದೊಳಗಾಗಿ ಹಂಚಿ ದೇಶವನ್ನು ವ್ಯವಸ್ಥೆಗೊಳಿಸಿದರು.

೧೯-೨೦. ಬಹುಬೇಗನೆ, ದೇಶದೇಶದಲ್ಲಿಯೂ ಪುರಪುರದಲ್ಲಿಯೂ ಜೀವಿತ ಮರಣ, ಮಾನ, ಸಂಬಂಧವಾದ ನಿಯಮವು ನೆಲೆಯಾಯಿತು. ಬಿರುಗಾಳಿಗಳು ನಿಲ್ಲುತ್ತಲೂ, ಪದಾರ್ಥಗಳು ಹಾರಾಡುವುದು ನಿಲ್ಲುವುದು ಹೇಗೋ ಹಾಗೆ ದೇಶೋಪಪ್ಲವಗಳ ಹಾರಾಟವೆಲ್ಲಾ ಒಂದೇ ನಿಮಿಷದಲ್ಲಿ ನಿಂತುಹೋಯಿತು.

೨೧-೨೨. ಹತ್ತು ದಿಕ್ಕುಗಳಲ್ಲಿಯೂ ದೇಶವು, ಕಡೆತಕ್ಕೆ ಸಿಕ್ಕಿ ಕ್ಷುಬ್ಧವಾಗಿದ್ದ ಕ್ಷೀರಸಮುದ್ರವು ಮಂದರವನ್ನು ತೆಗೆಯುತ್ತಲೂ ಶಾಂತವಾಗುವಹಾಗೆ,

ನವುರಲಕಚಯಾರ್ ವಿಲೋಲಯಂತೋ
ಮುಖಕಮಲಾಲಿಕುಲಾನಿ ಸೈಂಧವೀನಾಂ |
ಜಲಲವಲನಾಕುಲಾಃ ಸಮೀರಾ
ಅಶಿವಗುಣಾನಿವ ಸರ್ವತಃ ಕ್ಷಣೇನ || ೨೨ ||

ಇತ್ಯಾರ್ಷೇ ಶ್ರೀವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
"ಸಿಂಧುರಾಷ್ಟ್ರ ವರ್ಣನ" ನಾಮ ಏಕಪಂಚಾಶಃ ಸರ್ಗಃ

ಸೌಮ್ಯತೆಯನ್ನು ಹೊಂದಿತು. ಸೈಂಧವಿಯರ ಮುಖಕಮಲಗಳ ದುಂಬಿಗಳಂಬಂತಿರುವ ಮುಂಗುರುಳುಗಳನ್ನು ಅಲ್ಲಾಡಿಸುತ್ತ, ಅವರ ಮುಖದ ಬೆವರು ಹನಿಗಳ ಭಾರದಿಂದ ಮಂದವಾಗಿರುವ ಗಾಳಿಗಳು ದೇಶದಲ್ಲಿದ್ದ ಅಶಿವ ಗುಣಗಳನ್ನೆಲ್ಲ ಒಂದೇಕ್ಷಣದಲ್ಲಿಯೇ ಗುಡಿಸಿಹಾಕುವಂತೆ ಬೀಸಿದುವು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಸಿಂಧುರಾಷ್ಟ್ರ ವರ್ಣನ" ಎಂಬ
ಐವತ್ತೊಂದನೆಯ ಸರ್ಗವು.

ದ್ವಿಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಏತಸ್ಮಿನ್ನಂತರೇ ರಾಮ ಲೀಲೋವಾಚ ಸರಸ್ವತೀಂ |
ಶ್ವಾಸಾವಶೇಷಮಾಲೋಕ್ಯ ಮೂಢಂ ಭರ್ತಾರಮಗ್ರಗಂ || ೧ ||

ಪ್ರವೃತ್ತೋ ದೇಹಮುತ್ಸ್ರಷ್ಟುಂ ಮದ್ಭರ್ತಾಯಮಿಹಾಂಬಿಕೇ |

ಜ್ಞಪ್ತಿರುವಾಚ—

ಏವಂ ರೂಪಮುಹಾರಂಭೇ ಸಂಗ್ರಾಮೇ ರಾಷ್ಟ್ರಸಂಭ್ರಮೇ || ೨ ||

ಸಂಪನ್ನೇಽಪಿ ಸ್ಥಿತೇಽಪ್ಯುಚ್ಚೈರ್ವಿಚಿತ್ರಾರಂಭಮಂಥರೇ |
ನ ಕಿಂಚಿದಪಿ ಸಂಪನ್ನಂ ರಾಷ್ಟ್ರಂ ನ ಚ ಮಹೀತಲಂ || ೩ ||

ನ ಸ್ಥಿತಂ ಕ್ವಚನಾಪ್ಯೇವಂ ಸ್ವಪ್ನಾತ್ಮಕಮಿದಂ ಜಗತ್ |
ತಸ್ಯ ತನ್ಮಂಡಪಸ್ಯಾಂತಃ ಶವಸ್ಯ ನಿಕಟಾಂಬರೇ || ೪ ||

ಐವತ್ತೆರಡನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ಇಷ್ಟರಲ್ಲಿಯೇ ಶ್ವಾಸಮಾತ್ರನಾಗಿ ಜ್ಞಾನವಿಲ್ಲದೆ ಮುಂದೆ ಮಲಗಿರುವ ಗಂಡನನ್ನು ನೋಡಿ ಲೀಲೆಯು ಸರಸ್ವತಿಯನ್ನು ಕುರಿತು ಹೀಗೆ ಹೇಳಿದಳು.

೨–೩. ಈ ನನ್ನ ಗಂಡನು, ಎಲೌ ಅಂಬಿಕೆ, ದೇಹವನ್ನು ಬಿಡಲು ಸಿದ್ಧನಾಗಿರುವನು.

ಆಗ ಜ್ಞಪ್ತಿಯು ಹೇಳಿದಳು:—ಇಷ್ಟು ದೊಡ್ಡದಾಗಿ ನಡೆದಿರುವ ಯುದ್ಧವೂ, ನೂತನ ರಾಜ್ಯಸ್ಥಾಪನೆಯೂ ಚಿತ್ರವಿಚಿತ್ರಕಾರ್ಯ ಪರಂಪರೆಗಳಿಂದ ಕೂಡಿ ನಡೆದಿದ್ದರೂ, ವಾಸ್ತವ್ಯವಾಗಿ ಯಾವುದೂ ನಡೆದೇ ಇಲ್ಲ.

೪. ರಾಷ್ಟ್ರವಿಲ್ಲ: ಭೂಮಿಯಿಲ್ಲ: ಆ ಮಂಡಪದಲ್ಲಿರುವ ಶವದ ಮಗ್ಗುಲಲ್ಲಿಯೇ ನಿನ್ನ ಭರ್ತೃಜೀವದ ಆಕಾಶದಲ್ಲಿಯೇ ಈ ಭೂಮಿಯೂ ರಾಷ್ಟ್ರವೂ ತೋರುತ್ತಿರುವುದಲ್ಲದೆ ಇನ್ನೇನೂ ಇಲ್ಲ.

ಇದಂ ಭೂರಾಷ್ಟ್ರಮಾಭಾತಿ ಭರ್ತ್ರುರ್ಜೀವಸ್ಯ ತೇಽನಘೇ |
ಅಂತಃಪುರಗೃಹಾಂತೇ ತದಿದಂ ರಾಷ್ಟ್ರಾನ್ವಿತೋದರಂ || ೫ ||

ವಸಿಷ್ಠವಿಪ್ರಗೇಹೇಽಂತರ್ವಿಂಧ್ಯಾದ್ರಿಗ್ರಾಮಕೇ ಸ್ಥಿತಂ |
ವಸಿಷ್ಠವಿಪ್ರಗೇಹೇಂತಃ ಶವಗೇಹಜಗತ್ಸ್ಥಿತಂ || ೬ ||

ಶವಗೇಹಜಗತ್ಕುಕ್ಷಾವಿದಂ ಗೇಹಜಗತ್ಸ್ಥಿತಂ |
ಏವಮೇಷ ಮಹಾರಂಭೋ ಜಗತ್ತ್ರಯಮಯೋ ಭ್ರಮಃ || ೭ ||

ತ್ವಯಾ ಮಯಾ ನ ಯಾನೇನ ಸಂಯುಕ್ತಃ ಸಾರ್ಣವಾವನಿಃ |
ಗಿರಿಗ್ರಾಮಕದೇಹಾಂತರ್ಮಧ್ಯೇ ಗಗನಕೋಶಕೇ || ೮ ||

ಸ್ವಾತ್ಮೈವ ಕಚತಿ ವ್ಯರ್ಥೋ ನ ಕಚತ್ಯೇವ ವಾ ಕ್ವಚಿತ್ |
ತತ್ಪದಂ ಪರಮಂ ವಿದ್ಧಿ ನಾಶೋತ್ಪಾದವಿವರ್ಜಿತಂ || ೯ ||

---

೫. ಈ ವಿದೂರಥ ಬ್ರಹ್ಮಾಂಡವು ನಿನ್ನ ಅಂತಃಪುರದೊಳಗೆ ಇರುವ ಆಕಾಶದಲ್ಲಿಯೇ ತೋರಿರುವುದು.

೬–೭. ಪದ್ಮರಾಜನ ಬ್ರಹ್ಮಾಂಡವು ವಿಂಧ್ಯಗಿರಿ ಗ್ರಾಮದಲ್ಲಿರುವ ವಸಿಷ್ಠ ವಿಪ್ರನ ಮನೆಯೊಳಗಿರುವುದು. ಅಲ್ಲಿರುವ ಆ ಬ್ರಾಹ್ಮಣನ ಶವದಲ್ಲಿರುವ ಆಕಾಶದಲ್ಲಿ ಈ ಜಗತ್ತೆಲ್ಲವೂ ಇರುವುದು. ಶವಗೇಹ ಜಗತ್ತಿನಲ್ಲಿ ಪದ್ಮರಾಜ ಬ್ರಹ್ಮಾಂಡವಿರುವುದು. ಹೀಗೆ ಬ್ರಹ್ಮಾಂಡದಲ್ಲಿ ಬ್ರಹ್ಮಾಂಡವಾಗಿ ತೋರುತ್ತಿರುವ ಇಷ್ಟು ದೊಡ್ಡದಾದ ಈ ಜಗತ್ತ್ರಯವೂ ಭ್ರಮವು.

೮. ನೀನು, ನಾನು, ಈ ಲೀಲೆ, ಈ ಸಮುದ್ರ, ಈ ಭೂಮಿ, ಇದೆಲ್ಲ ಸೇರಿರುವ ಈ ಬ್ರಹ್ಮಾಂಡವು ಗಿರಿಗ್ರಾಮದಲ್ಲಿರುವ ದೇಹದೊಳಗಿರುವ ಗಗನಕೋಶದಲ್ಲಿಯೇ ಕಾಣುತ್ತಿರುವುದು.

೯. ಇದೆಲ್ಲ ಆಗಿ ಕಾಣುತ್ತಿರುವುದೂ ಆತ್ಮವೇ! ಆತ್ಮನಲ್ಲಿ ಕಚನವು ಕಂಡಾಗಲೆಲ್ಲ ಏನೋ ಒಂದಾಗಿ ಕಂಡರೂ ಆ ಆತ್ಮವೇ ನಾಶ, ಜನನರಹಿತವೂ ಪರಮವೂ ಆದ "ತತ್ಪದ"ವೆಂದು ತಿಳಿ.

(ವ್ಯರ್ಥೋನ ಕಚತ್ಯೇವ ವಾ ಕ್ವಚಿತ್=ಸರಿಯಾಗಿ ಅರ್ಥವಾಗಿಲ್ಲ)

ಸ್ವಯಂ ಕಚಿತಮಾಭಾಷಂ ಶಾಂತಂ ಪರಮನಾಮಯಂ |
ಕಿಲ ಮಂಡಪಗೇಹೇಽಂತಃ ಸ್ವಸ್ವಭಾವೋದಿತಾತ್ಮನಿ ॥ ೧೦ ॥

ಏವಮಾರಂಭಘನಯೋರಪಿ ಮಂಡಪಯೋಸ್ತಯೋಃ |
ಉದರೇ ಶೂನ್ಯಮಾಕಾಶಮೇವಾಸ್ತಿ ನ ಜಗದ್ಭ್ರಮಃ ॥ ೧೧ ॥

ಭ್ರಮದ್ರಷ್ಟುರಭಾವೇ ಹಿ ಕೀದೃಶೀ ಭ್ರಮತಾ ಭ್ರಮೇ |
ನಾಸ್ತ್ಯೇವ ಭ್ರಮಸತ್ತಾತೋ ಯದಸ್ತಿ ತದಜಂ ಪದಂ ॥ ೧೨ ॥

ಭ್ರಮೋ ದೃಶ್ಯಮಸತ್ತಸ್ಯ ದ್ರಷ್ಟೃದೃಶ್ಯದಶಾ ಕುತಃ |
ದ್ರಷ್ಟೃದೃಶ್ಯಕ್ರಮಾಭಾವಾದದ್ವಯಂ ಸಹಜಂ ಹಿ ತತ್ ॥ ೧೩ ॥

ತತ್ಪದಂ ಪರಮಂ ವಿದ್ಧಿ ನಾಶೋತ್ಪಾದವಿವರ್ಜಿತಂ |
ಸ್ವಯಂ ಕಚಿತಮಾಭಾತಂ ಶಾಂತಮಾದ್ಯಮನಾಮಯಂ ॥ ೧೪ ॥

---

೧೦. ಅಂತಃಪುರದ ಒಳಗೆ ಸ್ವಪ್ರಕಾಶದಲ್ಲಿಯೇ ತನ್ನ ಸ್ವಭಾವಕ್ಕನುಗುಣವಾಗಿ ಉದಿತವಾದ ಆತ್ಮನಲ್ಲಿ ಶಾಂತವೂ ಪರವೂ ಅನಾಮಯವೂ ಆದ ತಾನೇ ಹೊಳೆದು ತಾನೇ ನೋಡುವುದು.

೧೧. ಹೀಗೆ, ಕಾರ್ಯದಿಂದ ಘನವಾಗಿ ತೋರುವ ಆ ಎರಡು ಮಂಡಪಗಳಲ್ಲಿಯೂ (ಪದ್ಮವಿದೂರಥ ಬ್ರಹ್ಮಾಂಡಗಳೆರಡರಲ್ಲಿಯೂ) ಶೂನ್ಯವಾದ ಆಕಾಶವಿರುವುದೇ ಹೊರತು ಜಗತ್ತು ಎಂಬ ಭ್ರಮವು (ಪ್ರತ್ಯೇಕವಾಗಿ) ಇಲ್ಲ.

೧೨. ಭ್ರಮವನ್ನುನೋಡುವ ದ್ರಷ್ಟೃವಿದ್ದರೆ ಭ್ರಮವೇ ಹೊರತು ದ್ರಷ್ಟೃವಿಲ್ಲದಿದ್ದರೆ ಭ್ರಮದ ಭ್ರಮತೆಯೆಂತು (ಭ್ರಮವೆಲ್ಲಿಯದು?) ಅದರಿಂದ ಭ್ರಮವೆಂಬ ಬೇರೊಂದು ಪದಾರ್ಥವಿಲ್ಲ: ಇರುವುದೆಲ್ಲ ಒಂದೇ ಒಂದು. ಅದು ಜನ್ಮರಹಿತವಾದ ಬ್ರಹ್ಮವು.

೧೩. ಭ್ರಮವೆಂಬುದೇ ದೃಶ್ಯ: ದೃಶ್ಯವು ಅಸತ್: ಅದರಿಂದ ದ್ರಷ್ಟೃದೃಶ್ಯದಶೆಯೆಂಬುದೇ ಇಲ್ಲ: ದ್ರಷ್ಟೃ ದೃಶ್ಯ ಕ್ರಮವೇ ಇಲ್ಲವಾದುದರಿಂದ ಉಳಿಯುವ 'ಅದು' ಅದ್ವಯವೂ ಸಹಜವೂ ಆದುದು.

೧೪. ಆ ಸಹಜ ಪದವು ಎಲ್ಲದಕ್ಕಿಂತ ಶ್ರೇಷ್ಠವಾದುದು:ನಾಶವೂ ಜನನವೂ ಇಲ್ಲದ್ದು: ತಾನೇ ಹೊಳೆದು ತಾನೇ ನೋಡುವ ಶಾಂತವೂ ಆದ್ಯವೂ ಅನಾಮಯವೂ ಆದದ್ದು.

ಕಿಲ ಮಂಡಪಗೇಹಾಂತಃ ಸ್ವಸ್ವಭಾವೋದಿತಾತ್ಮನಿ |
ವಿಹರಂತಿ ಜನಾಸ್ತತ್ರ ಸ್ವಗೇಹೇ ಸ್ವವ್ಯವಸ್ಥಯಾ || ೧೫ ||

ನ ಜಗತ್ತತ್ರ ನೋ ಸರ್ಗಃ ಕಶ್ಚಿದಪ್ಯನುಭೂಯತೇ |
ತೇನಾಹಮಜಮಾಕಾಶಂ ಜಗದಿತ್ಯೇವ ವರ್ತತೇ || ೧೬ ||

ಸರ್ವಂ ಶೂನ್ಯಾತ್ಮವಿಜ್ಞಾನಂ ಮೇರ್ವಾದಿಗಿರಿಜಾಲಕಂ |
ನೇದಂ ಕುಡ್ಯಮಯಂ ಕಿಂಚಿದ್ಯಥಾ ಸ್ವಪ್ನೇ ಮಹಾಪುರಂ || ೧೭ ||

ದೇಶೇ ಪ್ರಾದೇಶಮಾತ್ರೇಽಪಿ ಗಿರಿಜಾಲಮಯಾನ್ಯಪಿ |
ವಜ್ರಸಾರಾಣಿ ಖಾನ್ಯೇವ ಲಕ್ಷಾಣಿ ಜಗತೋ ವಿದುಃ || ೧೮ ||

---

೧೫. ಮಂಡಪದ ಒಳಗೆ ಸ್ವಭಾವಕ್ಕನುಗುಣವಾಗಿ ಉದಿತ (ಬೇರೆಯಾದಂತೆ) ಆಗಿ ಆತ್ಮನಲ್ಲಿ ಜನರು ತಮ್ಮ ಮನೆಯಲ್ಲಿ ತಮ್ಮದೇ ಆದ ವ್ಯವಸ್ಥೆಯನ್ನು ಮಾಡಿಕೊಂಡು ಸುಖವಾಗಿರುವರು.

(ಇದೇ ಅಧ್ಯಾಸ:—ಮೋಟುಮರ ಮನುಷ್ಯನಂತೆ ಕಾಣುವುದೇ ಅಧ್ಯಾಸ ಹಗ್ಗವನ್ನು ಹಾವು ಎಂದಂತೆ)

೧೬. ಅಲ್ಲಿ ಪ್ರತ್ಯೇಕವಾದ ಜಗತ್ತು ಇಲ್ಲ: ಸೃಷ್ಟಿಯಿಲ್ಲ. ಅನುಭವವೆಂಬುದೂ ಇಲ್ಲ. ಅದರಿಂದ ಅಜವಾದ ಆಕಾಶವೇ 'ಅಹಂ' 'ಜಗತ್ತು' ಎಂದು ವರ್ತಿಸುವುದು.

೧೭. ಮೇರು ಮುಂತಾದ ಗಿರಿ ಮೊದಲಾದವುಗಳಾಗಿ ಕಾಣುವ ಜಗತ್ತೆಲ್ಲವೂ ಶೂನ್ಯವೇ! ಆತ್ಮನೇ ಕಲ್ಪಿಸಿಕೊಂಡ ವಿವಿಧ ಜ್ಞಾನರೂಪವಿದು. ಇದು ಕಣ್ಣಿಗೆ ದೃಢವಾಗಿರುವಂತೆ ಕಂಡರೂ ಕೊಂಚವೂ ಇಲ್ಲ. ಕನಸಿನಲ್ಲಿ ಕಂಡ ಮಹಾ ನಗರದಂತೆ ಇರುವುದು.

೧೮. ಕಂಠದಿಂದ ಹೃದಯದವರೆಗೆ ಇರುವ ಗೇಣುದ್ದದ ಸ್ಥಳದಲ್ಲಿ ವಜ್ರದಂತೆ ಗಟ್ಟಿಯಾಗಿರುವ ಪರ್ವತ ಪಂಕ್ತಿಗಳೂ ಆಕಾಶಮಯವಾದ ಲಕ್ಷಾಂತರ ಜಗತ್ತುಗಳೂ ಕಾಣಿಸುವುವು.

ಜಗಂತಿ ಸುಬಹೂನ್ಯೇವ ಸಂಭವಂತ್ಯಣುಕೇಽಪಿ ಚ |
ಕದಲೀಪಲ್ಲವಾನೀವ ಸಂನಿವೇಶೇನ ಭೂರಿಶಃ || ೧೯ ||

ತ್ರಿಜಗಚ್ಚಿದಣಾವಂತರಸ್ತಿ ಸ್ವಪ್ನಪುರಂ ಯಥಾ |
ತಸ್ಯಾಪ್ಯಂತಶ್ಚಿದಣವಸ್ತೇಷ್ವಪ್ಯೇಕೈಕಶೋ ಜಗತ್ || ೨೦ ||

ತೇಷಾಂ ಯಸ್ಮಿನ್ ಜಗತ್ಯೇಷ ಪದ್ಮೋ ರಾಜಾ ಶವಃ ಸ್ಥಿತಃ |
ಲೀಲಾ ತವ ಸಪತ್ನೀಯಂ ಪ್ರಾಪ್ತಾ ಪೂರ್ವತರಾ ಶುಭೇ || ೨೧ ||

ಯದೈವ ಮೂರ್ಚ್ಛಾಮಾಯಾತಾ ಲೀಲೇಯಂ ಪುರತಸ್ತವ |
ತದೈವ ಭರ್ತುಃ ಪದ್ಮಸ್ಯ ಶವಸ್ಯ ನಿಕಟೇ ಸ್ಥಿತಾ || ೨೨ ||

---

೧೯. ಒಂದು ಅಣುಕದಲ್ಲಿಯೇ ಬೇಕಾದಷ್ಟು ಜಗತ್ತುಗಳು ಬಾಳೆಯ ಕಂದಿನಿಂದ ಮೊಳಕೆಗಳು ಹುಟ್ಟುವಂತೆ ಉಂಟಾಗುವುವು.

೨೦. ಒಂದು ಚಿದಣುವಿನಲ್ಲಿಯೇ ಸ್ವಪ್ನಪುರದಂತೆ, ತ್ರಿಜಗತ್ತೂ ಇರುವುದು. ಆ ಜಗತ್ತಿನೊಳಗೆ ಚಿದಣುಗಳು: ಆವುಗಳು ಒಂದೊಂದರೊಳಗೂ ಜಗತ್ತುಗಳು: ಹೀಗಿರುವುವು.

(ದೇಶ, ಕಾಲ, ಎಂಬ ಎರಡು ಉಪಾಧಿಗಳನ್ನು ಹಿಡಿದು ನಾವು ಸುಳ್ಳು ದಿಟ ಎಂದು ಗೊತ್ತುಮಾಡುತ್ತಿರುವೆವು. ಈ ಎರಡೂ ಉಪಾಧಿಗಳೂ ಕೃತ್ರಿಮವೆಂದಾದರೆ ಆಗ ಈ ಶ್ಲೋಕದ ಅರ್ಥವನ್ನು ತಿಳಿದುಕೊಳ್ಳಲು ಸಾಧ್ಯ.)

೨೧. ಹೀಗಿರುವ ಜಗತ್ತುಗಳಲ್ಲಿ ಯಾವ ಜಗತ್ತಿನಲ್ಲಿ ಪದ್ಮರಾಜನು ಶವವಾಗಿರುವನೋ ಅಲ್ಲಿಗೆ ನಿನ್ನ ಸವತಿಯಾದ ಈ ಲೀಲೆಯು ಮೊದಲೇ ಬಂದಿರುವಳು.

೨೨. ನಿನ್ನೆದುರಿಗೆ ಈ ಲೀಲೆಯು ಮೂರ್ಛೆಯನ್ನು ಹೊಂದಿದ್ದಾಗಲೇ ಗಂಡನಾದ ಪದ್ಮರಾಜನ ಶವದ ಮಗ್ಗುಲಿಗೆ ಬಂದು ಬಿಟ್ಟಳು.

ಲೀಲೋವಾಚ :—

ಕಥಮೇಷಾ ಪುರಾ ದೇವಿ ಸಂಪನ್ನಾ ತತ್ರ ದೇಹಿನೀ |
ಕಥಂ ಚ ತತ್ಸಪತ್ನೀಕಭಾವಮಾಪ್ತವತೀ ಸ್ಥಿತಾ || ೨೩ ||

ತೇ ಚಾಸ್ಯಾ ವದ ಕಿಂ ರೂಪಂ ಪಶ್ಯಂತ್ಯಥ ವದಂತಿ ಕಿಂ |
ತದ್ಗೇಹವರವಾಸ್ತವ್ಯಾಃ ಸಮಾಸೇನೇತಿ ಮೇ ವದ || ೨೪ ||

ಶ್ರೀ ದೇವ್ಯುವಾಚ :—

ಶೃಣು ಸರ್ವಂ ಸಮಾಸೇನ ಯಥಾ ಪೃಷ್ಟಂ ವದಾಮಿ ತೇ |
ಲೀಲೇ ಲೀಲಾಸ್ವವೃತ್ತಾಂತಮಂತದಂ ದೃಶ್ಯದುರ್ದಶಂ || ೨೫ ||

ಪದ್ಮಸ್ತವ ಸ ಭರ್ತೈಷ ಭ್ರಾಂತಿಂ ತಾವತ್ತತಾಮಿಮಾಂ |
ಇಯಂ ಜಗನ್ಮಯಿಾ ತಸ್ಮಿನ್ನೇವ ಸದ್ಮನಿ ಪಶ್ಯತಿ || ೨೬ ||

ಭ್ರಾಂತಿಯುದ್ಧಮಿದಂ ಯುದ್ಧಮೇಷಾ ಭ್ರಾಂತಿರ್ಜನೋಽಜನಃ |
ಭ್ರಾಂತ್ಯೈವಾಸ್ತೀಹ ಮರಣಮೇಷ ಚೈವಂ ಭ್ರಮಾತ್ಮಕಃ || ೨೭ ||

೨೩-೪. ಲೀಲೆಯು ಹೇಳಿದಳು :—ಈ ಲೀಲೆಯು ಹೇಗೆ ಮೊದಲೇ ದೇಹವುಳ್ಳವಳಾಗಿ ಬಂದಳು? ಹೇಗೆ ಪದ್ಮರಾಜನ ಹೆಂಡತಿಯಾದಳು? ಆ ಅರಮನೆಯಲ್ಲಿರುವವರೆಲ್ಲ ಇವರನ್ನು ಏನೆಂದು ನೋಡುವರು? ಇವಳ ವಿಚಾರವಾಗಿ ಏನಾಡಿಕೊಳ್ಳುವರು? ಅದನ್ನು ನನಗೆ ಸಂಕ್ಷೇಪವಾಗಿ ಹೇಳು.

೨೫. ಶ್ರೀದೇವಿಯು ಹೇಳಿದಳು :—ನೀನು ಕೇಳಿದಂತೆ ಎಲ್ಲವನ್ನೂ ಸಮಾಸನಾಗಿಯೇ ಹೇಳುವೆನು. ಲೀಲೆಯೇ, ಅದೆಲ್ಲವೂ ನಿನ್ನ ವೃತ್ತಾಂತವೇ! ಮರಣ ಪರಲೋಕಗಮನಾದಿ ಅಸಾಧಾರಣ ದೃಶ್ಯಗಳ ನಿರ್ಣಯವೇನು ಎಂಬುದು ಅದರಿಂದ ನಿನಗೆ ತಿಳಿಯುವುದು.

೨೬. ನಿನ್ನ ಗಂಡನಾದ ಪದ್ಮನು ತಾನು ವಿದೂರಥನು ಎಂದು ಮುಂತಾದ ಭ್ರಾಂತಿಯನ್ನು ಹೊಂದಿ, ಆ ಭ್ರಾಂತಿಗನುಸಾರವಾಗಿ ಎಲ್ಲವನ್ನೂ ಈ ಅಂತಃಪುರದಲ್ಲಿಯೇ ಶವವಾಗಿದ್ದುಕೊಂಡೇ ನೋಡುವನು.

೨೭. ನೀನು ಕಂಡ ಯುದ್ಧವೂ ಭ್ರಾಂತಿಯೇ! ಜನರು ಇದ್ದರು: ಜನರಿರಲಿಲ್ಲ ಎನ್ನುವುದೆಲ್ಲ ಭ್ರಾಂತಿಯೇ! ಅವನು ಸತ್ತಂತೆ ಕಂಡುದೂ ಈ ಭ್ರಾಂತಿಯಿಂದಲೇ!

ಭ್ರಮಕ್ರಮೇಣಾನೇನೈವ ಲೀಲಾಸ್ಯ ದಯಿತಾ ಸ್ಥಿತಾ |
ತ್ವಂ ಚೈಷಾ ಚ ವರಾರೋಹೇ ಸ್ವಪ್ನಮಾತ್ರಂ ವರಾಂಗನೇ || ೨೮ ||

ಯಥಾ ಭವತ್ಯಾವೇತಸ್ಯ ಸ್ವಪ್ನಮಾತ್ರಂ ವರಾಂಗನೇ |
ತಥಾ ಭವತ್ಯೋರ್ಭರ್ತೈಷ ತಥೈವಾಹಮಪಿ ಸ್ವಯಂ || ೨೯ ||

ಜಗಚ್ಛೋಭೈವೇದೃಶೀಯಂ ದೃಶ್ಯಮೇತದಿಹೋಚ್ಯತೆ |
ಏತದೇವ ಪರಿಜ್ಞಾತಂ ದೃಶ್ಯಶಬ್ದಾರ್ಥಮುಜ್ಝತಿ || ೩೦ ||

ಏವಮೇಷಾ ತ್ವಮೇಷಾ ಚ ಸಂಪನ್ನೈವಮಸೌ ನೃಪಃ |
ಅಹಂ ಚಾತ್ಮನಿ ಸತ್ಯತ್ವಂ ಗತಾ ಸರ್ವತಯಾತ್ಮನಃ || ೩೧ ||

ಇಮೇ ವಯಮಿಹಾನ್ಯೋನ್ಯಂ ಸಂಪನ್ನಾಶ್ಚೋದಿತಾ ಇತಿ |
ಇತ್ಥಂ ಸರ್ವಾತ್ಮಕತಯಾ ಮಹಾಚಿದ್ಘನಸಂಸ್ಥಿತೇಃ || ೩೨ ||

---

೨೮. ಈ ಭ್ರಮಕ್ರಮದಿಂದಲೇ ಲೀಲೆಯು ಅವನಿಗೆ ಹೆಂಡಿತಿಯಾದಳು. ನೀನು ಅವನಿಗೆ ಹೆಂಡಿತಿಯಾಗಿರುವುದೂ ಭ್ರಮೆಯಿಂದಲೇ, ಎಲೆ ಒಳ್ಳೆಯ ಹೆಣ್ಣೆ, ಇದೆಲ್ಲವೂ ಸ್ವಪ್ನಮಾತ್ರವೇ !

೨೯. ಈ ಪದ್ಮರಾಜನಿಗೆ ನೀವಿಬ್ಬರೂ ಹೆಂಡತಿಯಾಗಿದ್ದುದೂ ಸ್ವಪ್ನ ಮಾತ್ರವೇ ! ಹಾಗೆಯೇ ನಿಮ್ಮಿಬ್ಬರಿಗೂ ಇವನು ಗಂಡನಾಗಿದ್ದುದೂ ಭ್ರಾಂತಿಯೇ ! ನಾನೂ ಸ್ವಪ್ನ ಭ್ರಾಂತಿ ಮಾತ್ರವೇ!

೩೦. ಈ ಜಗತ್ತಿನ ವೈಭವವಲ್ಲ ಇಂಥದೇ ! ಇದನ್ನೇ ದೃಶ್ಯವೆನ್ನುವರು! ಇದರ ಸ್ವರೂಪವನ್ನು ತಿಳಿದರೆ ದೃಶ್ಯ ಶಬ್ದಾರ್ಥವು ಅಳಿಯುವುದು.

೩೧. ಈ ಲೀಲೆಯೂ ನೀನೂ ಈ ಸಂಸಾರ ಸ್ಥಿತಿಯೂ ಈ ನೃಪತಿಯೂ ನಾನೂ ಕೂಡ, ಆತ್ಮನು ಸರ್ವಗತನಾಗಿರುವುದರಿಂದ ಆತ್ಮನಲ್ಲಿ ಸತ್ಯತ್ವವನ್ನು ಪಡೆದಿರುವೆವು.

೩೨. ಇವರು, ನಾವು, ಅನ್ಯೋನ್ಯವಾಗಿ ಇರುವೆವು. ವ್ಯವಹಾರ ಮಾಡುತ್ತಿರುವೆವು: ಎಂದು ಕಾಣುತ್ತಿರುವ ಈ ಸಂಸ್ಥಿತಿಯೆಲ್ಲ ಮಹಾಚಿದ್ಘನದ ಸರ್ವಾತ್ಮತ್ವದಿಂದಲೇ ಸಿದ್ಧಿಸುವುದು.

ಏವಮೇಷಾ ಸ್ಥಿತಾ ರಾಜ್ಞೀ ಹಾರಿಹಾಸವಿಲಾಸಿನೀ |
ಲೀಲಾ ವಿಲೋಲವದನಾ ನವಯೌವನಶಾಲಿನೀ || ೩೩ ||

ಪೇಶಲಾಚಾರಮಧುರಾ ಮಧುರೋದಾರಭಾಷಿಣೀ |
ಕೋಕಿಲಾಸ್ವರಸಂಕಾಶಾ ಮದಮನ್ಮಥಮಂಥರಾ || ೩೪ ||

ಅಸಿತೋತ್ಪಲಪತ್ರಾಕ್ಷೀ ವೃತ್ತಪೀನಪಯೋಧರಾ |
ಕಾಂತಾ ಕಾಂಚನಗೌರಾಂಗೀ ಪಕ್ವಬಿಂಬಫಲಾಧರಾ || ೩೫ ||

ತ್ವತ್ಸಂಕಲ್ಪಾತ್ಮಕಸ್ಯೈಷಾ ಯದಾ ಭರ್ತುರ್ಮನಃ ಕಲಾ |
ತದಾ ತ್ವತ್ಸದೃಶಾಕಾರಾ ಸ್ಥಿತೈಷಾ ಚಿಚ್ಚಮತ್ಕೃತೌ || ೩೬ ||

ತ್ವದ್ಭರ್ತುರ್ಮರಣೇ ಕ್ಷಿಪ್ರಂ ಸಮನಂತರಮೇವ ಹಿ |
ತ್ವದ್ಭರ್ತ್ರೈಷಾ ಪುರೋ ದೃಷ್ಟಾ ತ್ವತ್ಸಂಕಲ್ಪಾತ್ಮನಾಮುನಾ || ೩೭ ||

---

೩೩. ಹೀಗೆಯೇ ಮನೋಜ್ಞಹಾಸ ವಿಲಾಸಗಳುಳ್ಳ ಈ ವಿಲೋಲ ವದನೆಯೂ ನವಯೌವನಶಾಲಿನಿಯೂ ಆದ ಲೀಲೆಯು ರಾಣಿಯಾಗಿರುವಳು.

೩೪-೫. ಇವಳು ಒಳ್ಳೆಯ ಆಚಾರಗಳಿಂದ ಮನಸ್ಸಿಗೆ ಹಿತಳಾದವಳು: ಮಧುರವೂ ಉದಾರವೂ ಆದ ಮಾತನ್ನುಳ್ಳವಳು. ಕೋಕಿಲೆಯಂತಿರುವ ಸ್ವರವುಳ್ಳವಳು ಮದದಿಂದ ಮನ್ಮಥ ವ್ಯಾಪಾರವನ್ನು ಕಾಮಿಸುವಳು. ಕನ್ನೈದಿಲೆ ಯಂತೆ ಕಣ್ಣುಳ್ಳವಳು. ವೃತ್ತ ಪೀನಸ್ತನ ಮಂಡಲವುಳ್ಳವಳು. ಕಾಂತೆಯು ಕಾಂಚನಗೌರಾಂಗಿಯು, ಪಕ್ವಬಿಂಬಫಲಾಧರೆಯು.

೩೬. (ಇಂತಪ ಈ ಲೀಲೆಯು) ನಿನ್ನ ಸಂಕಲ್ಪದಿಂದಲೇ ಸೃಷ್ಟಿಯಾಗಿ ರುವ ಗಂಡನ ಮನಸ್ಸಿನ ಒಂದು ಕಲ್ಪನೆಯು. ಇವಳು ನಿನಗೆ ಸಮಾನವಾದ ಆಕಾರವುಳ್ಳವಳಾಗಿ ಚಿತ್ತಿನ ಚಮತ್ಕಾರದಲ್ಲಿ ಸ್ಥಿತಳಾಗಿರುವಳು.

೩೭. ನಿನ್ನ ಗಂಡನು ಸತ್ತ ಕೂಡಲೇ ನಿನ್ನ ಸಂಕಲ್ಪದಿಂದಲೇ ಹುಟ್ಟಿದ ನಿನ್ನ ಗಂಡನ ಜೊತೆಯಲ್ಲಿಯೇ, ಇವಳೂ ಇಲ್ಲಿಗೆ ಬಂದಳು.

ಯದಾಧಿಭೌತಿಕಂ ಭಾವಂ ಚೇತೋಽನುಭವತಿ ಸ್ವಯಂ |
ಚೇತ್ಯಂ ಸನ್ಮಯಮೇವಾತ ಆತಿವಾಹಿಕಕಲ್ಪನಂ || ೩೮ ||

ಯದಾಧಿಭೌತಿಕಂ ಭಾವಂ ಚೇತೋ ವೇತ್ತಿ ನ ಸನ್ಮಯಂ |
ಆತಿವಾಹಿಕಸಂಕಲ್ಪಸ್ತದಾ ಸತ್ಯೋಽಪಜಾಯತೇ || ೩೯ ||

ಅಥೋ ಮರಣಸಂವಿತ್ತ್ಯಾ ಪುನರ್ಜನ್ಮಮಯೇ ಭ್ರಮೆ |
ತ್ವಂ ಹಿ ಸಂವಿದಿತಾನೇನ ತ್ವಯಾ ಚ ಗತ ಏವ ಸಃ || ೪೦ ||

ಇತ್ಥಂ ತ್ವಾಂ ದೃಷ್ಟವಾನೇಷ ದೃಷ್ಟಶ್ಚೈಷ ತ್ವಯೇತಿ ಚ |
ತ್ವಮಪ್ಯಾತ್ಮನಿ ಸಂಪನ್ನಾ ಸರ್ವಗತ್ವಾಚ್ಚಿದಾತ್ಮನಃ || ೪೧ ||

---

೩೮. ಚೇತ(ಚಿತ್ತ)ವು ಯಾವುದನ್ನೇ ಆಗಲಿ ಮೊದಲು ಆತಿವಾಹಿಕ ಕಲ್ಪನವಾಗಿ ಅನುಭವಿಸುವುದು: ಅದೇ ವಾಸನೆಯು ಧೃಢವಾಗುತ್ತ ಬಂದ ಹಾಗೆಲ್ಲ ಅದೇ ಆದಿಭೌತಿಕಹಾಗಿ ಚೈತ್ಯವಾಗಿ ಅನುಭವಕ್ಕೆ ಬಂದ ಹಾಗೆಲ್ಲ ಇದು ಸತ್ಯ ಎನ್ನಿಸುವುದು.

(ವಿಷಯಗಳನ್ನು ಧ್ಯಾನಿಸುತ್ತಿರುವವರಿಗೆ ಅವುಗಳ ಸಂಗವುಂಟಾಗುವುದು ಎಂಬ ಗೀತಾವಚವವನ್ನಿಲ್ಲಿ ಸ್ಮರಿಸಿ.)

೩೯. ಹಾಗೆಯೇ ಯಾವುದಾದರೊಂದು ಆಧಿ ಭೌತಿಕ ಭಾವವನ್ನು ಚೇತವು ಸನ್ಮಯವಲ್ಲ ಎಂದು ತಿಳಿದುಕೊಂಡಂತೆಲ್ಲ, ಆ ವಾಸನೆಯೇ ದೃಢವಾಗುತ್ತ ಬಂದು, ಅದು ಆತಿವಾಹಿಕ ಸಂಕಲ್ಪಾತ್ಮಕವಾದುದೇ ಹೊರತು ಇನ್ನು ಏನೂ ಇಲ್ಲ ಎಂಬುದು ದೃಢವಾಗುವುದು.

೪೦. ಮರಣವಾಯಿತೆಂಬ ಭ್ರಾಂತಿಯಿಂದ ಪುನರ್ಜನ್ಮವಾಯಿತೆಂಬ ಭ್ರಮೆಯು ಬಂದು, ನೀನೇ ಈ ಎರಡನೆಯ ಲೀಲೆಯಾಗಿ ಅವನನ್ನು ಸೇರಿದೆ.

೪೧. ಹೀಗೆಯೇ ಪದ್ಮನು ವಿದೂರಥನಾಗಿ ನಿನ್ನನ್ನೂ, ನೀನು ಎರಡನೆಯ ಲೀಲೆಯಾಗಿ ಅವನನ್ನೂ, ನೋಡಿದಿರಿ. ಚಿದಾತ್ಮನು ಸರ್ವಗತನಾದುದರಿಂದ ನೀನು ನಿನ್ನ ವಾಸನಾನುಗುಣವಾಗಿ ಇದೆಲ್ಲವೂ ಆಗಿರುವೆ.

ಬಹ್ಮ ಸರ್ವಗತಂ ಯಸ್ಮಾದ್ಯಥಾ ಯತ್ರ ಯದೋದಿತಂ |
ಭವತ್ಯಾಶು ತಥಾ ತತ್ರ ಸ್ವಪ್ನಶಕ್ತ್ಯೈವ ಪಶ್ಯತಿ || ೪೨ ||

ಸರ್ವತ್ರ ಸರ್ವಶಕ್ತಿತ್ವಾದ್ಯತ್ರ ಯಾ ಶಕ್ತಿರುನ್ನಯೇತ್ ।
ಆಸ್ತೇ ತತ್ರ ತಥಾ ಭಾತಿ ತೀವ್ರಸಂವೇಗಹೇತುತಃ || ೪೩ ||

ಮೃತಿಮೋಹಕ್ಷಣೇನೈವೆ ಯದೈತೌ ದಂಪತೀ ಸ್ಥಿತೌ |
ತದೈವಾಭ್ಯಾಮಿದಂ ಬುದ್ಧಂ ಪ್ರತಿಭಾಸವಶಾದ್ಧೃದಿ || ೪೪ ||

ಆವಯೋಃ ಪಿತರಾವೇತಾವಿಮೇ ವೈ ಚಾಪಿ ಮಾತರೌ |
ದೇಶ ಏಷ ಧನಂ ಚೇದಂ ಕರ್ಮೇದಂ ಪೂರ್ವಮಾದೃಶಂ || ೪೫ ||

ಆವಾಂ ವಿವಾಹಿತಾವೇವಮೇವಂ ನಾಮ್ನೈಕತಾಂ ಗತೌ |
ಏತಯೋಃ ಸಾಪಿ ಜನತಾ ಯಾತಾ ತತ್ರೈವ ಸತ್ಯತಾಂ || ೪೬ ||

ತಥೈವಾತ್ರಾಸ್ತಿ ದೃಷ್ಟಾಂತಃ ಪ್ರತ್ಯಕ್ಷಂ ಸ್ವಪ್ನವೇದನಂ |
ಇತ್ಯೇವಂ ಭಾವಯಾ ಲೀಲೇ ಲೀಲಾಯಾಹಮುಥಾರ್ಚಿತಾ || ೪೭ ||

---

೪೨. ಬ್ರಹ್ಮವು ಸರ್ವಗತವು, ಅದರಿಂದ ಹೇಗೆ, ಎಲ್ಲಿ, ಯಾವಾಗ, ಅದು ಯಾವ ರೂಪವನ್ನು ಧ್ಯಾನಿಸುವುದೋ ತನ್ನ ಸ್ವಪ್ನ ಶಕ್ತಿಯಿಂದ ತಾನೇ ಅದೇ ಅಲ್ಲಿಯೇ ಆಗಲೇ ಆಗಿ, ಕಾಣಿಸಿಕೊಳ್ಳುವುದು.

೪೩. ಬ್ರಹ್ಮವು ಎಲ್ಲಿ ಏನು ಬೇಕಾದರೂ ಆಗಬಲ್ಲುದು ಅದರಿಂದ ಎಲ್ಲಿ ಯಾವ ಶಕ್ತಿಯು ಪ್ರಾದುರ್ಭಾವವಾಗುದೋ ಅಲ್ಲಿ ಅದೇ ಆಗಿ ಹಾಗೆಯೇ ಕಾಣಿಸಿಕೊಳ್ಳುವುದು. ಹೀಗಾಗುವುದು ವಾಸನೆಯು ದೃಢವಾಗುವುದರಿಂದ.

೪೪–೪೬. ಈ ದಂಪತಿಗಳು ಮರಣದ ಮೋಹವನ್ನು ಪಡೆದ ಕ್ಷಣವೇ ಇವರಿಬ್ಬರಿಗೂ ಪ್ರತಿಭಾಸ ವಶದಿಂದ ಹೃದಯದಲ್ಲಿ "ಇವರಿಬ್ಬರೂ ನಮ್ಮ ತಂದೆಗಳು, ಇವರು ನಮ್ಮ ತಾಯಿಯರು, ಇದು ನಮ್ಮ ದೇಶ, ಇದು ನಮ್ಮ ಧನ, ಇದು ನಮ್ಮ ಪೂರ್ವಕರ್ಮ ನಮ್ಮಿಬ್ಬರಿಗೂ ಮದುವೆಯಾಗಿದೆ. ಇದು ನಮ್ಮ ಹೆಸರು, ನಾವಿಬ್ಬರೂ ಏಕತೆಯನ್ನು ಹೊಂದಿರುವೆವು" ಎಂಬ ಬುದ್ಧಿಯು ಬಂತು. ಹಾಗೆಯೇ ಇವರ ಪ್ರಜೆಗಳೂ ಕೂಡ ಅಲ್ಲಿ ಪ್ರಜೆಗಳಾಗಿ ಬಂದರು.

೪೭. ಹೀಗಾಗುವುದು ಎಂಬುದಕ್ಕೆ ಸ್ವಪ್ನವೇದನವೇ ಪ್ರತ್ಯಕ್ಷ ದೃಷ್ಟಾಂತವು.

ನಾಹಂ ಸ್ಯಾಂ ವಿಧವೇತ್ಯೇವಂ ವರೋ ದತ್ತೋ ಮಯಾಪ್ಯಸೌ |
ಇತ್ಯರ್ಥೇನ ಮೃತಾ ಪೂರ್ವಮೇವೇಹ ಖಲು ಬಾಲಿಕಾ || ೪೮ ||

ಭವತಾಂ ಚೇತನಾಂಶಾನಾಮಹಂ ಚೇತನಧರ್ಮಿಣೀ |
ಕುಲದೇವೀ ಸದಾ ಪೂಜ್ಯಾ'ಸ್ವತ ಏವ ಕರೋಮ್ಯಹಂ || ೪೯ ||

ಅಥಾಸ್ಯಾ ಜೀವಕೋ ದೇಹಾತ್ ಪ್ರಾಣಮಾರುತರೂಪಧೃಕ್ |
ಮನಸಾ ಚಲತಾಂ ಪ್ರಾಪ್ತೋ ಮುಖಾಗ್ರತ್ಯಕ್ತದೇಹಕಃ || ೫೦ ||

ತತೋ ಮರಣಮೂರ್ಚ್ಛಾಂತೇ ಗೃಹೇಽಸ್ಮಿನ್ನೇವ ಚೈತಯಾ |
ಬುದ್ಧ್ಯಾ ಭಾವಿತ ಆಕಾಶೇ ದೃಷ್ಟೋ ಜೀವಾತ್ಮನಾ ತತಃ || ೫೧ ||

---

೪೮. ನಾನು ವಿಧವೆಯಾಗುವುದು ಬೇಡ ಎಂಬ ಭಾವನೆಯಿಂದ ಈ ಎರಡನೆಯ ಲೀಲೆಯು ನನ್ನನ್ನು ಅರ್ಚಿಸಿದಳು. ಹಾಗೇ ಆಗಲೆಂದು ನಾನೂ ವರವನ್ನು ಕೊಟ್ಟೆನು. ಆ ಬಾಲಿಕೆಯೂ ಇದೇ ಕಾರಣದಿಂದಲೇ ಮೊದಲೇ ಇಲ್ಲಿ ಮೃತಳಾದಳು.

೪೯. ಚೇತನಾಂಶರಾದ ನಿಮಗೆ ಚೇತನ ಧರ್ಮಿಣಿಯಾಗಿ, ಕುಲದೇವಿಯಾಗಿ, ಯಾವಾಗಲೂ ಪೂಜೆಗೊಳ್ಳುತ್ತಿರುವ ನಾನೇ ಇದೆಲ್ಲವನ್ನೂ ಮಾಡುವೆನು.

೫೦. ಈ ಲೀಲೆಯ ಜೀವನು ಪ್ರಾಣವಾಯುವಿನ ರೂಪವನ್ನು ಧರಿಸಿ ದೇಹದಿಂದ ಹೊರಟು ಮುಂದೆ ಏನಾಗಬೇಕೆಂಬುದನ್ನು ಮನಸ್ಸಿನಿಂದ ಗೊತ್ತು ಮಾಡಿಕೊಂಡು ಮುಖದಿಂದ ದೇಹವನ್ನು ಬಿಟ್ಟು ಹೊರಟಿತು.

೫೧. ಅನಂತರ (ಬಂದ) ಮರಣ ಮೂರ್ಛೆಯು ಮುಗಿದ ಮೇಲೆ ಇದೇ ಮನೆಯಲ್ಲಿ ಇವಳೇ ಬುದ್ಧಿಯಲ್ಲಿ ಭಾವಿತವಾಗಿರುವ ಆಕಾಶದಲ್ಲಿ ಜೀವಾತ್ಮನಾಗಿ ಕಂಡು ಬಂದಳು.

(ಅಥ ದೇಹಾತ್ ಉಚ್ಚಕ್ರಮಿಷು : ಅಸ್ಯಾ ಅಂಗುಷ್ಟ ಪರಿಮಿತ ಲಿಂಗ ದೇಹಮಾತ್ರತ್ವಾತ್ ಅಲ್ಪೋಜೀವಃ ಜೀವಕಃ "ಪ್ರಾಣಸ್ತೇಜಸಾಯುಕ್ತಃ ಸಹಾತ್ಮನಾ ಯಥಾ ಸಂಕಲ್ಪಿತಂ ಲೋಕಂ ನಯತಿ" ಇತಿ ಶ್ರುತ್ಯಾ ಸರ್ವಕರಣಾನಾಂ ಪ್ರಾಣೇ ಅಪ್ಯಯಾಚ್ಚ ಪ್ರಾಣಮಾರುತ ರೂಪಧೃಕ್ ಬಭೂವೇತ್ಯರ್ಥಃ" ಯಥಾಸಂಕಲ್ಪಿತಂ ಲೋಕಂ ನಯತಿ ಇತಿ ಶ್ರುತೇಃ : "ಯಂಯಂ

ಸಂಪನ್ನೈಷಾ ಹರಿಣನಯನಾ ಚಂದ್ರಬಿಂಬಾನನಶ್ರೀ-
ರ್ಮಾನೋನ್ನದ್ಧಾ ದಯಿತಲಲಿತಾ ಕಾಂತಮಾಭೋಕ್ತುಕಾಮಾ |
ಪೂರ್ವಸ್ಮೃತ್ಯಾ ಸರಭಸಮುಖೀ ಸಂಯುತಾ ಮಂಡಲಾಂತಃ |
ಸ್ವಪ್ನಾಂತೇ ವಾಽಪ್ರಕೃತಿವಿಭವಾ ಪದ್ಮಿನೀ ಚೋದಿತೇವ || ೫೨ ||

ಇತ್ಯಾರ್ಷೇ ಶ್ರೀ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿಪ್ರಕರಣೇ "ಮರಣಸಮನಂತರ ದೇಹಪ್ರತಿಭಾವರ್ಣನಂ" ನಾಮ ದ್ವಿಪಂಚಾಶಃ ಸರ್ಗಃ

ವಾಪಿಸ್ಮರ್ರ ಭಾವಂ" ಇತ್ಯಾದಿ ಸ್ಮೃತೇಶ್ಚ, ಭಾವ್ಯಾರ್ಥ ಸಂಕಲ್ಪ ಪ್ರಧಾನೇನ ಮನಸಾ ಚಲತಾಂ ತತ್ತದರ್ಥ ಪ್ರಾಪ್ತಿ-ಉತ್ಸುಕತಾಂ "ತಸ್ಯಹೃದಯಸ್ಯ ಅಗ್ರ ಪ್ರದ್ಯೋತತೇ ತೇನ ಪ್ರದ್ಯೋತೇನೈಷ ಆತ್ಮಾ ನಿಷ್ಕ್ರಾಮತಿ ಚಕ್ಷುಷೋವಾ ಮೂರ್ಧ್ನೋವಾ ಅನ್ಯೇಭ್ಯೋವಾ ಶರೀರದೇಶೇಭ್ಯಃ" ಇತಿ ಶ್ರುತ್ಯುಕ್ತ ಕ್ರಮೇಣ ನಾಡೀ ಮಾರ್ಗೇಣ ತ್ಯಕ್ತ ದೇಹಕಃ ಅಭೂದಿತಿ ಶೇಷಃ")

೫೨. ಹರಿಣನಯನೆಯೂ ಚಂದ್ರಬಿಂಬದಂತಿರುವ ಮುಖದ ಕಾಂತಿಯುಳ್ಳವಳೂ ಮಾನೋನ್ನದ್ಧಳೂ ದಯಿತಳೂ ಲಲಿತಳೂ ಕಾಂತನೊಡನೆ ಸೌಭಾಗ್ಯಗಳನ್ನು ಭೋಗಿಸಬೇಕೆಂದಿರುವವಳೂ ಆದ ಈ ಲೀಲೆಯು ಪೂರ್ವ ಸ್ಮೃತಿಯಿಂದ, ಸೂರ್ಯಕಿರಣಗಳಿಂದ ಅರಳುವ ಕಮಲದಂತೆ, ಸರಭಸ (ಲಾವಣ್ಯಾದಿಯುಕ್ತ) ಮುಖಿಯಾಗಿ, ಬ್ರಹ್ಮಾಂಡ ಮಂಡಲವನ್ನೂ ಭೇದಿಸಿಕೊಂಡು ಬಂದು ಗಂಡನೊಡನೆ, ಸ್ವಪ್ನದಲ್ಲಿ ಹೇಗೋ ಹಾಗೆ, ಸೇರಿದಳು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠರಾಮಾಯಣದ ಉತ್ಪತ್ತಿ ಪ್ರಕರಣದಲ್ಲಿ "ಮರಣಸಮನಂತರ ದೇಹಪ್ರತಿಭಾವರ್ಣನ" ಎಂಬ ಐವತ್ತೆರಡನೆಯ ಸರ್ಗವು.

ತ್ರಿಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ —

ಅಥ ಲಬ್ಧವರಾ ದೇಹೇನಾನೇನೈವ ಮಹೀಪತಿಂ |
ಪತಿಮಾಪ್ತುಂ ಪ್ರಯಾತ್ಯೇಷಾ ನಭೋಮಾರ್ಗೇಣ ವಿಷ್ಟಪಂ || ೧ ||

ಇತಿ ಸಂಚಿಂತ್ಯ ಸಾನಂದಮುದ್ಭಾಮುಕರಧ್ವಜಾ |
ಪುಪ್ಲುವೇ ಪೇಲವಾಕಾರಾ ಪಕ್ಷಿಣೀವ ನಭಸ್ತಲೇ || ೨ ||

ಕುಮಾರೀಂ ತತ್ರ ಸಾ ಪ್ರಾಪ ಜ್ಞಪ್ತ್ಯೈವ ಪ್ರಹಿತಾಂ ಹಿತಾಂ |
ಸ್ವಸಂಕಲ್ಪಮಹಾದರ್ಶಾತ್ಪುರತೋ ನಿರ್ಗತಾಮಿವ || ೩ ||

ಕುಮಾರ್ಯುವಾಚ

ದುಹಿತಾಸ್ಮಿ ಸಖಿ ಜ್ಞಪ್ತೇಃ ಸ್ವಾಗತಂ ತೇಽಸ್ತು ಸುಂದರಿ |
ಪ್ರತೀಕ್ಷಮಾಣಾ ತ್ವಾಮೇವ ಸ್ಥಿತಾಸ್ಮೀಹ ನಭಃ ಪಥಿ || ೪ ||

ಐವತ್ತು ಮೂರನೆಯ ಸರ್ಗ

೧-೩. ಶ್ರೀ ವಸಿಷ್ಠನು ಹೇಳಿದನು:—ಅನಂತರ, ಅದೇ ದೇಹದಿಂದ ಅರಸನನ್ನು ಹೊಂದಬೇಕೆಂದು ವರವನ್ನು ಪಡೆದ ಲೀಲೆಯು ಪತಿಯನ್ನು ಸೇರಲು ನಭೋಮಾರ್ಗದಲ್ಲಿ ಹೊರಟು ಭುವನ ಭುವನಾಂತರಗಳನ್ನು ದಾಟುವೆನೆಂದುಕೊಂಡು ಆನಂದದಿಂದ, ಪತಿಯನ್ನು ಸೇರಬೇಕೆಂಬ ಕುತೂಹಲದಿಂದ, ಹಕ್ಕಿಗಳ ಹಾಗೆ ಲಘುಶರೀರವುಳ್ಳವಳಾಗಿ ನಭೋಮಾರ್ಗದಲ್ಲಿ ಹಾರಿದಳು. ಅಲ್ಲಿ ಜ್ಞಪ್ತಿದೇವಿಯು ಕಳುಹಿಸಿದ್ದ ತನಗೆ ಹಿತಕಾರಿಣಿಯಾದ ಸ್ವಸಂಕಲ್ಪವೆಂಬ ಮಹಾದರ್ಶದಿಂದ ಹೊರಟು ತನ್ನ ಮುಂದೆ ಹೋಗುತ್ತಿರುವಳೋ ಎಂಬಂತಿರುವ ಕುಮಾರಿಯನ್ನು ಕಂಡಳು.

೪. ಕುಮಾರಿಯು ಹೇಳಿದಳು:—ಜ್ಞಪ್ತಿದೇವಿಗೆ ಸಖಿಯಾದ ಲೀಲೆಯೆ, ನಾನು ನಿನ್ನ ಮಗಳು. ಎಲೆ ಸುಂದರಿಯೆ, ನಿನಗೆ ಸ್ವಾಗತವಾಗಲಿ, ಈ ನಭೋಮಾರ್ಗದಲ್ಲಿ ನಿನ್ನನ್ನು ಎದುರುನೋಡುತ್ತಿರುವೆನು.

ಲೀಲೋವಾಚ :—

ದೇವಿ ಭರ್ತುಃ ಸಮೀಪಂ ಮಾ ನಯ ನೀರಜಲೋಚನೆ |
ಮಹತಾಂ ದರ್ಶನಂ ಯಸ್ಮಾನ್ನ ಕದಾಚನ ನಿಷ್ಫಲಂ || ೫ ||

ಶ್ರೀ ವಸಿಷ್ಠ ಉವಾಚ—

ಏಹಿ ತತ್ರೈವ ಗಚ್ಛಾವ ಇತ್ಯುಕ್ತ್ವಾ ಸಾ ಕುಮಾರಿಕಾ |
ಪುರಸ್ತಸ್ಯಾಃ ಸ್ಥಿತಾ ವ್ಯೋಮ್ನಿ ಮಾರ್ಗದರ್ಶನತತ್ಪರಾ || ೬ ||

ತತಸ್ತದನುಯಾತಾ ಸಾ ಪ್ರಾಪ ಕೋಟರಮಂಬರಂ |
ನಿರ್ಮಲಂ ಕರಮಾಲಾಗ್ರಂ ಯಥಾ ಲಕ್ಷಣಲೇಖಿಕಾ || ೭ ||

ಮೇಘಮಾರ್ಗಮಥೋಲ್ಲಂಘ್ಯ ವಾತಸ್ಕಂಧಾಂತರೇ ಗತಾ |
ಸೂರ್ಯಮಾರ್ಗಾದಭಿಗತಾ ತಾರಾಮಾರ್ಗಮತೀತ್ಯ ಚ || ೮ ||

ವಾಯ್ವಿಂದ್ರಸುರಸಿದ್ಧಾನಾಂ ಲೋಕಾನುಲ್ಲಂಘ್ಯ ಲಾಘವಾತ್ |
ಬ್ರಹ್ಮವಿಷ್ಣುಮಹೇಶಾನಾಂ ಪ್ರಾಪ ಬ್ರಹ್ಮಾಂಡಖರ್ಪರಂ || ೯ ||

---

೫. ಲೀಲೆಯು ಹೇಳಿದಳು:—ಎಲೆ ಕಮಲನಯನೆಯೆ, ದೇವಿ, ನನ್ನನ್ನು ಗಂಡನ ಬಳಿಗೆ ಕರೆದುಕೊಂಡು ಹೋಗು. ಮಹಾತ್ಮರ ದರ್ಶನವು ಯಾವಾಗಲೂ ನಿಷ್ಫಲವಾಗುವುದಿಲ್ಲವಲ್ಲವೆ ?

೬. ಶ್ರೀ ವಸಿಷ್ಠನು ಹೇಳಿದನು:—ಬಾ ಅಲ್ಲಿಗೇ ಹೋಗೋಣ ಎಂದು ಹೇಳಿ ಆ ಕುಮಾರಿಕೆಯು ಮಾರ್ಗವನ್ನು ತೋರಿಸುತ್ತಾ ಆಕಾಶದಲ್ಲಿ ಮುಂದೆ ಹೊರಟಳು.

೭-೯. ಅವಳ ಹಿಂದೆ ಹೊರಟು ಲೀಲೆಯು ಆಕಾಶ ಕೋಟರವನ್ನು ಸೇರಿದಳು. ಅಂಗೈಯಲ್ಲಿರುವ ರೇಖೆಗಳಂತೆ ಆ ಕೋಟರವು ನಿರ್ಮಲವಾಗಿತ್ತು. ಮೇಘ ಮಾರ್ಗವನ್ನು ಉಲ್ಲಂಘಿಸಿ, ವಾತಸ್ಕಂಧದ ಒಳಹೊಕ್ಕು, ಸೂರ್ಯಮಾರ್ಗದಿಂದ ಹೋಗಿ, ತಾರಾಮಾರ್ಗವನ್ನು ದಾಟಿ, ವಾಯು, ಇಂದ್ರ, ಸುರ, ಸಿದ್ಧರ ಲೋಕಗಳನ್ನೆಲ್ಲ ಲಘುವಾಗಿ ದಾಟಿ, ಬ್ರಹ್ಮವಿಷ್ಣು ಮಹೇಶ್ವರರ ಬ್ರಹ್ಮಾಂಡಗಳನ್ನು ಹೊಂದಿದಳು.

ಹಿಮಶೈತ್ಯಂ ಯಥಾಂತಸ್ಥಂ ಕುಂಭೇಽಭಿನ್ನೇ ಬಹಿರ್ಭವೇತ್ |
ತಥಾ ಸಂಕಲ್ಪಸಿದ್ಧಾ ಸಾ ಬ್ರಂಹ್ಮಾಂಡನ್ನಿರ್ಗತಾ ಬಹೀ || ೧೦ ||

ಸ್ವಚಿತ್ತಮಾತ್ರದೇಹೈಷಾ ಸ್ವಸಂಕಲ್ಪಸ್ವಭಾವಜಂ |
ಅಂತರೇವಾನುಭವತಿ ಕಿಲೈವಂ ನಾಮ ವಿಭ್ರಮಂ || ೧೧ ||

ಬ್ರಹ್ಮಾದಿಸ್ಥಾನಮಾಕ್ರಮ್ಯ ಪ್ರಾಪ್ಯ ಬ್ರಹ್ಮಾಂಡಖರ್ಪರಂ |
ತತೋ ಬ್ರಹ್ಮಾಂಡಪಾರಸ್ಥಾ ಜಲಾದ್ಯಾವರಣಾನಿ ಚ || ೧೨ ||

ಸಮುಲ್ಲಂಘ್ಯ ಪುರಃ ಪ್ರಾಪ ಮಹಾಚಿದ್ಗಗನಾಂತರಂ |
ಅದೃಷ್ಟಪಾರಪರ್ಯಂತ ಮತಿವೇಗೇನ ಧಾವತಾ |
ಸರ್ವತೋ ಗರುಡೇನಾಪಿ ಕಲ್ಪಕೋಟಿಶತೈರಪಿ || ೧೩ ||

ತತ್ರ ಬ್ರಹ್ಮಾಂಡಲಕ್ಷಾಣಿ ಸಂತ್ಯಸಂಖ್ಯಾನಿ ಭೂರಿಶಃ |
ತಾನ್ಯನ್ಯೋನ್ಯಮದೃಷ್ಟಾನಿ ಫಲಾನೀವ ಮಹಾವನೇ || ೧೪ ||

ತತ್ರೈಕಸ್ಮಿನ್ ಪುರಃಸಂಸ್ಥೇ ವಿತತಾವರಣಾನ್ವಿತೇ |
ವೇಧಯಿತ್ವಾ ವಿವೇಶಾಂತರ್ಬದರಂ ಕೃಮಿಕೋ ಯಥಾ || ೧೫ ||

೧೦-೧೧. ಒಡೆಯದಿರುವ ಮಡಕೆಯೊಳಗಿರುವ ಹಿಮಶೈತ್ಯವು ಹೊರಗೆ ಬರುವಂತೆ ಸಂಕಲ್ಪ ಸಿದ್ಧಳಾದ ಅವಳು ಬ್ರಹ್ಮಾಂಡದಿಂದ ಹೊರಗೆ ಬಂದಳು. ಸ್ವಚಿತ್ರ ಮಾತ್ರವೇ ದೇಹವಾಗಿರುವ ಆ ಬಾಲಿಕೆಯು ಸ್ವಸಂಕಲ್ಪ ಸ್ವಭಾವ ದಿಂದಲೇ ಹುಟ್ಟಿದ ಆಯಾ ಲೋಕ ಲೋಕಗಳನ್ನೆಲ್ಲಾ ತನ್ನ ಒಳಗೇ ಅನುಭವಿ ಸಿದಳು. ಭ್ರಮವೆಂಬುದು ಇದೇ ಅಲ್ಲವೆ ?

೧೨-೧೪. ಬ್ರಹ್ಮಾದಿ ಸ್ಥಾನಗಳನ್ನು ದಾಟಿ ಬ್ರಹ್ಮಾಂಡ ಖರ್ಪರವನ್ನು ಹೊಕ್ಕು ಬ್ರಹ್ಮಾಂಡದ ಅಂಚನ್ನೂ ಜಲಾದಿ ಅವರಣಗಳನ್ನೂ ದಾಟಿ, ಮಹಾ ಚಿದಾಕಾಶವನ್ನು ಸೇರಿ, ಅತಿವೇಗದಿಂದ ಹಾರುತ್ತಿರುವ ಗರುಡನೂ ಕಲ್ಪಕೋಟಿ ಶತವಾದರೂ ಸೇರುವುದಕ್ಕಾಗದ ಆ ಚಿದಾಕಾಶದ ಅದೃಷ್ಟಪಾರವನ್ನು ಸೇರಿದಳು. ಒಂದೇ ವನದಲ್ಲಿದ್ದರೂ ಒಂದನ್ನೊಂದು ನೋಡದಿರುವ ಮಹಾ ಫಲಗಳಂತೆ, ಅಲ್ಲಿ ಲಕ್ಷಾಂತರ ಬ್ರಹ್ಮಾಂಡಗಳು, ಅಸಂಖ್ಯಗಳಾಗಿ, ಬೇಕಾದ ಹಾಗೆ ಇರುವುವು.

೧೫-೧೭. ಅವುಗಳಲ್ಲಿ ವಿಸ್ತಾರವಾದ ಆವರಣದಿಂದ ಕೂಡಿ ಎದುರಿಗಿರುವ ಬ್ರಹ್ಮಾಂಡವೊಂದನ್ನು ಭೇದಿಸಿಕೊಂಡು ಎಲಚಿಯ ಹಣ್ಣಿನೊಳಕ್ಕೆ ನುಗ್ಗುವ

ಪುನರ್ಬ್ರಹ್ಮೇಂದ್ರವಿಷ್ಣ್ವಾದಿ ಲೋಕಾನುಲ್ಲಂಘ್ಯ ಭಾಸ್ವರಾ |
ತನ್ಮಹೀಮಂಡಲಂ ಶ್ರೀಮತ್ಪ್ರಾಪ ತಾರಾಪಥಾದಧಃ ॥ ೧೬ ॥

ತತ್ರ ತನ್ಮಂಡಲಂ ಪ್ರಾಪ್ಯ ತತ್ಪುರಂ ತಚ್ಚ ಮಂಡಪಂ |
ಪ್ರವಿಶ್ಯ ಪುಷ್ಪಗುಪ್ತಸ್ಯ ಶವಸ್ಯ ನಿಕಟೇ ಸ್ಥಿತಾ ॥ ೧೭ ॥

ಏತಸ್ಮಿನ್ನಂತರೆ ಸಾ ಚ ನ ದದರ್ಶ ಕುಮಾರಿಕಾಂ |
ಮಾಯಾಮಿವ ಪರಿಜ್ಞಾತಾಂ ಕ್ವಾಪಿ ಯಾತಾಂ ವರಾನನಾ ॥ ೧೮ ॥

ಸುಖಮಾಲೋಕ್ಯ ಸಾ ತಸ್ಯ ಸ್ವಭರ್ತುಃ ಶವರೂಪಿಣಃ |
ಇದಂ ಬುದ್ಧವತೀ ಸತ್ಯಂ ಪ್ರತಿಭಾವಶತಃ ಸ್ವತಃ ॥ ೧೯ ॥

ಅಯಂ ಸ ಭರ್ತಾ ಸಂಗ್ರಾಮೇ ನಿಹತೋ ಮಮ ಸಿಂಧುನಾ |
ವೀರಲೋಕಾನಿಮಾನ್ ಪ್ರಾಪ್ಯ ಕ್ಷಣಂ ಶೇತೆ ಯಥಾ ಸುಖಂ ॥ ೨೦ ॥

ಅಹಂ ದೇವ್ಯಾಃ ಪ್ರಸಾದೇನ ಸಶರೀರೈವಮಾದೃಶಂ |
ಇಹ ಪ್ರಾಪ್ತವತೀ ಧನ್ಯಾ ಮತ್ಸಮಾ ನಾಸ್ತಿ ಕಾಚನ ॥ ೨೧ ॥

ಕೃಮಿಯಂತೆ ಹೊಕ್ಕಳು. ಮತ್ತೆ ಬ್ರಹ್ಮ ಇಂದ್ರ ವಿಷ್ಣು ಮೊದಲಾದವರ ಕಾಂತಿಮಯವಾದ ಲೋಕಗಳನ್ನು ದಾಟಿ, ತಾರಾಪಥದಿಂದ ಕೆಳಗಿರುವ ಮಹೀ ಮಂಡಲಕ್ಕೆ ಬಂದು, ಅಲ್ಲಿ ಪದ್ಮರಾಜನ ದೇಶವನ್ನು, ರಾಜಧಾನಿಯನ್ನು, ಅರ ಮನೆಯನ್ನು ಹೊಕ್ಕು ಪುಷ್ಪ ಗುಪ್ತವಾಗಿದ್ದ ಶವದ ಮಗ್ಗುಲಲ್ಲಿ ನಿಂತಳು.

೧೮–೨೦. ಇಷ್ಟೆಲ್ಲಾ ಆಯಿತು ಎನ್ನುವುದರೊಳಗಾಗಿ ಕುಮಾರಿಕೆಯೇ ಅದೃಶ್ಯಳಾಗಿದ್ದಳು. ಮಾಯೆಯೆಂದು ಗುರುತು ಹಿಡಿದ ಮೇಲೆ ಅದೆಲ್ಲಿಯೊ ಮಾಯವೇ ಆಗುವಂತೆ ಆಗಿತ್ತು. ಶವವಾಗಿ ಮಲಗಿರುವ ಗಂಡನ ಮುಖ ವನ್ನು ನೋಡಿ, ಲೀಲೆಯು, ಪ್ರತಿಭಾ ಪ್ರಭಾವದಿಂದಲೂ ತನ್ನ ಅನುಭವ ದಿಂದಲೂ ಇದು ಸತ್ಯವೆಂದುಕೊಂಡು "ಸಿಂಧುರಾಜನಿಂದ ಯುದ್ಧದಲ್ಲಿ ಹತ ನಾದ ನನ್ನ ಗಂಡನೇ ಇವನು. ವೀರರಿಗೆ ಲಭಿಸುವ ಈ ಲೋಕಗಳನ್ನು ಪಡೆದು ಸುಖವಾಗಿ ಮಲಗಿರುವನು.

೨೧-೨೨. ನಾನು ದೇವಿಯ ಪ್ರಸಾದದಿಂದ ಸಶರೀರಳಾಗಿ ಹೀಗೆ ಇಲ್ಲಿಗೆ ಬಂದಿರುವೆನು. ನಾನು ಧನ್ಯಳು. ನನ್ನಂತಹ ಧನ್ಯಳು ಇನ್ನೊಬ್ಬಳು ಇಲ್ಲಿಲ್ಲ.

ಇತಿ ಸಂಚಿಂತ್ಯ ಸಾ ಹಸ್ತೇ ಗೃಹೀತ್ವಾ ಚಾರು ಚಾಮರಂ |
ವೀಜಯಾಮಾಸ ಚಂದ್ರೇಣ ದ್ಯೌರಿವಾವನಿಮಂಡಲಂ ‖ ೨೨ ‖

ಪ್ರಬುದ್ಧ ಲೀಲೋವಾಚ :—

ತೇ ಭೃತ್ಯಾಸ್ತಾಶ್ಚ ವೈ ದಾಸ್ಯಃ ಸ ರಾಜಾ ಚ ಪ್ರಬುದ್ಧವಾನ್ |
ವಕ್ಷ್ಯಂತಿ ವದತಾಂ ದೇವಿ ಕಿಂ ಕಯೈವ ಕಥಂ ಧಿಯಾ ‖ ೨೩ ‖

ಶ್ರೀದೇವ್ಯುವಾಚ :—

ಸ ರಾಜಾ ಸಾ ಚ ತೇ ಭೃತ್ಯಾಃ ಸರ್ವ ಏವ ಪರಸ್ಪರಂ |
ಚಿದಾಕಾಶೈಕತಾವೇಶಾದಾವಯೋಶ್ಚ ಪ್ರಭಾವತಃ ‖ ೨೪ ‖

ಮಹಾಚಿತ್ಪ್ರತಿಭಾಸತ್ವಾನ್ಮಹಾನಿಯತಿ ನಿಶ್ಚಯಾತ್ |
ಅನ್ಯೋನ್ಯಮೇವ ಪಶ್ಯಂತಿ ಮಿಥಃ ಸಂಪ್ರತಿಬಿಂಬಿತಾತ್ ‖ ೨೫ ‖

ಎಂದು ಯೋಚಿಸಿಕೊಂಡು ಸುಂದರವಾದ ಚಾಮರವೊಂದನ್ನು ಕೈಯಲ್ಲಿ ಹಿಡಿದು ಅಂತರಿಕ್ಷವು ಭೂಮಂಡಲಕ್ಕೆ ಚಂದ್ರನೆಂಬ ಚಾಮರವನ್ನು ಬೀಸುವಂತೆ ಬೀಸಿದಳು.

೨೩. ಪ್ರಬುದ್ಧ ಲೀಲೆಯು ಹೇಳಿದಳು:—ಅಲ್ಲಿದ್ದ ಭೃತ್ಯರು, ದಾಸಿಯರು, ಎಚ್ಚರಗೊಂಡ ರಾಜ, ಇವರೆಲ್ಲರೂ ಮೊದಲಿದ್ದವರು. ಅವರು ಈ ಹೊಸಲೀಲೆಯನ್ನು ಯಾವ ದೃಷ್ಟಿಯಿಂದ ಹೇಗೆ ಕಾಣುವರೋ ಏನು ಹೇಳುವರೋ ಅದನ್ನು ಹೇಳು.

೨೪. ಶ್ರೀ ದೇವಿಯು ಹೇಳಿದಳು:—ಆ ರಾಜನೂ ಅವಳೂ ಆ ಭೃತ್ಯರೂ ಎಲ್ಲರೂ ಒಂದೇ ಚಿದಾಕಾಶದ ಆವೇಶ (ಸ್ಫುರಣ)ಕ್ಕೆ ಸಿಕ್ಕಿದವರು : ನಮ್ಮ ಪ್ರಭಾವಕ್ಕೆ ಒಳಗಾದವರು. ಆದರಿಂದ ಪರಸ್ಪರವಾಗಿ ಗುರುತು ಹಿಡಿಯುವರು.

೨೫. ಮಹಾ ಚಿತ್ತಿನ ಸಂಕಲ್ಪವೂ ಮಹಾ ನಿಯತಿಯ ನಿಶ್ಚಯವೂ ಇರುವುದರಿಂದಲೂ ಅಲ್ಲಿ ಪ್ರತಿಬಿಂಬ ಸ್ವರೂಪರಾಗಿರುವುದರಿಂದಲೂ ಒಬ್ಬರನ್ನೊಬ್ಬರು ಗುರುತು ಹಿಡಿಯುವರು.

ಇಯಂ ಮೇ ಸಹಜಾ ಭಾರ್ಯಾ ಮಮೇಯಂ ಸಹಜಾ ಸಖೀ |
ಮಮೇಯಂ ಸಹಜಾ ರಾಜ್ಞೀ ಭೃತ್ಯೋಽಯಂ ಸಹಜೋ ಮಮ || ೨೬ ||

ಕೇವಲಂ ತ್ವಮಹಂ ಸಾ ಚ ಯಥಾವೃತ್ತಮಖಂಡಿತಂ |
ಜ್ಞಾಸ್ಯಾಮ ಇದಮಾಶ್ಚರ್ಯಂ ನನು ಕಶ್ಚಿದಪೀತರಃ || ೨೭ ||

ಪ್ರಬುದ್ಧ ಲೀಲೋವಾಚ :—

ಅಮುನೈವ ಶರೀರೇಣ ಕಿಮರ್ಥಂ ನ ಗತಾ ಪತಿಂ |
ಏಷಾ ವರೇಣ ಸಂಪ್ರಾಪ್ತಾ ಲೀಲಾ ಲಲಿತವಾದಿನೀ || ೨೮ ||

ಶ್ರೀ ದೇವ್ಯುವಾಚ :

ಅಪ್ರಬುದ್ಧಧಿಯಃ ಸಿದ್ಧಲೋಕಾ್ನ ಪುಣ್ಯವಶೋದಿತಾ್ನ |
ನ ಸಮರ್ಥಾಃ ಸ್ವದೇಹೇನ ಪ್ರಾಪ್ತುಂ ಛಾಯಾ ಇವಾತಪಾನ್ || ೨೯ ||

---

೨೬. ಇವಳು ನನ್ನ ಸಹಜ ಭಾರ್ಯೆ, ಇವಳ ನನ್ನ ಸಹಜ ಸಖಿ, ಇವಳು ಸಹಜವಾದ ನನ್ನ ರಾಣಿ, ಇವನು ನನ್ನ ಸಹಜ ಭೃತ್ಯ–(ಎಂದು ತಿಳಿಯುವುದು).

೨೭. ನೀನು, ನಾನು, ಆ ಎರಡನೆಯ ಲೀಲೆ, ಈ ಮೂವರು ಮಾತ್ರ ಈ ಆಶ್ಚರ್ಯವನ್ನು ಬಲ್ಲೆವಲ್ಲದೆ ಇನ್ನು ಯಾರಿಗೂ ಇದು ತಿಳಿಯದು.

೨೮. ಪ್ರಬುದ್ಧ ಲೀಲೆಯು ಹೇಳಿದಳು:—ಲಲಿತ ವಾದಿನಿಯಾದ ಈ ಲೀಲೆಯು (ವಿದೂರಥನ ಪತ್ನಿಯಾಗಿದ್ದ) ಶರೀರದಿಂದಲೇ ಏತಕ್ಕೆ ಪತಿಯನ್ನು ಸೇರಲಿಲ್ಲ ? ಇವಳಿಗೆ ವರವಿತ್ತಿಲ್ಲವೆ ?

೨೯. ಶ್ರೀ ದೇವಿಯು ಹೇಳಿದಳು:—ಅಪ್ರಬುದ್ಧ ಬುದ್ಧಿಗಳು (ಆತ್ಮನು ಸ್ಥೂಲನಲ್ಲ ಎಂಬುದನ್ನು ಅರಿಯದವರು) ಅವರವರ ಪುಣ್ಯವಶವಾಗಿ ಪ್ರಾಪ್ತವಾಗುವ ಸಿದ್ಧ ಲೋಕಗಳನ್ನು ನೆರಳು ಬಿಸಿಲನ್ನು ಹೇಗೆ ಹಿಡಿಯಲಾರದೋ ಹಾಗೆ, ಸ್ವದೇಹದಿಂದಲೇ ಪಡೆಯಲಾರರು.

ಆದಿಸರ್ಗೇ ಚ ನಿಯತಿಃ ಸ್ಥಾಪಿತೇತಿ ಪ್ರಬೋಧಿಭಿಃ |
ಯಥಾ ಸತ್ಯಮಲೀಕೇನ ನ ಮಿಲತ್ಯೇವ ಕಿಂಚನ || ೩೦ ||

ಯಾವದ್ವೇತಾಲಸಂಕಲ್ಪೋ ಬಾಲಸ್ಯ ಕಿಲ ವಿದ್ಯತೇ |
ನಿರ್ವೇತಾಲಧಿಯಸ್ತಾವದುದಯಸ್ತಸ್ಯ ಕಃ ಕಥಂ || ೩೧ ||

ಅವಿವೇಕಜ್ವರೋಷ್ಣತ್ವಂ ವಿದ್ಯತೇ ಯಾವದಾತ್ಮನಿ |
ತಾವದ್ವಿವೇಕಶೀತಾಂಶುಶೈತ್ಯಂ ಕುತ ಉದೇತ್ಯಲಂ || ೩೨ ||

ಅಹಂ ಪೃಥ್ವ್ಯಾದಿದೇಹಃ ಖೇ ಗತಿರ್ನಾಸ್ತಿ ಮಮೋತ್ತಮಾ |
ಇತಿ ನಿಶ್ಚಯವಾನ್ಯೋಽಂತಃ ಕಥಂ ಸ್ಯಾತ್ಸೋಽನ್ಯನಿಶ್ಚಯಃ || ೩೩ ||

ಅತೋ ಜ್ಞಾನವಿವೇಕೇನ ಪುಣ್ಯೇನಾಥ ವರೇಣ ಚ |
ಪುಣ್ಯನೇಹೇನ ಗಚ್ಛಂತಿ ಪರಂ ಲೋಕಮನೇನ ತು || ೩೪ ||

---

೩೦. ಸರ್ಗವು ಆರಂಭವಾಗುತ್ತಿದ್ದ ಹಾಗೆಯೇ ಹಿರಣ್ಯ ಗರ್ಭಾದಿಗಳಿಂದ ಹೀಗೆಂದು ನಿಯತಿಯು ಸ್ಥಾಪಿತವಾಗಿರುವುದು. ಸತ್ಯವು ಸುಳ್ಳಿನೊಡನೆ ಬೆರೆಯುವುದು ಎಂತು ಅಸಂಭವವೋ ಹಾಗೆಯೇ ಈ ನಿಯತಿಯು ತಪ್ಪುವುದೂ ಅಸಂಭವವು.

೩೧. ಬಾಲಕನಿಗೆ ವೇತಾಲ ಸಂಕಲ್ಪವಿರುವವರೆಗೂ ವೇತಾಲವಿಲ್ಲವೆಂಬ ಬುದ್ಧಿಯು ಅವನಿಗೆಂತು ಬರುವುದು ?

೩೨. ಎಲ್ಲಿಯವರೆಗೆ ಬುದ್ಧಿಯಲ್ಲಿ ಅವಿವೇಕವೆಂಬ ಜ್ವರದ ಬಿಸಿಯು ಇರುವುದೋ ಅಲ್ಲಿಯವರೆಗೂ ವಿವೇಕ ಚಂದ್ರನ ತಂಪು ಬರುದೆಂತು ?

೩೩. "ನಾನು ಪೃಥಿವ್ಯಾದಿ ಭೂತಗಳಿಂದ ಆದ ದೇಹವುಳ್ಳವನು. ನನಗೆ ಆಕಾಶದಲ್ಲಿ ಹೋಗುವ ಉತ್ತಮವಾದ ಗತಿಯಿಲ್ಲ" ಎಂಬ ನಿಶ್ಚಯವು ಒಳಗಿರುವುದೋ ಅಲ್ಲಿನವರೆಗೂ ಅವನಿಗೆ ಬೇರೆ ನಿಶ್ಚಯವೆಂತು ಬರುವುದು ?

೩೪. ಅದರಿಂದ ಜ್ಞಾನಜನ್ಯವಾದ ವಿವೇಕದಿಂದಲೂ ಪುಣ್ಯದಿಂದಲೂ ವರದಿಂದಲೂ ಪುಣ್ಯ ದೇಹದಿಂದಲೂ ಪರಲೋಕವನ್ನು ಪಡೆಯುವರು.

ಶುಷ್ಕಪರ್ಣಂ ಕಿಲಾಂಗಾರೇ ಏತದೇವಾಶು ದಹ್ಯತೇ |
ಅಯಂ ದೇಹಮುಹಂದೇಹಃ ಪ್ರಾಪ್ತ ಏವ ವಿಶೀರ್ಯತೇ || ೩೫ ||

ಏತಾವದೇವ ಭವತಿ ವರಶಾಪವಿಜೃಂಭಿತೈಃ |
ಯಥಾ ಸಂಚಿಂತ್ಯ ಏವಾಹಂ ತಥಾ ಸ್ಮೃತ ಇತಿ ಸ್ಮೃತಿಃ || ೩೬ ||

ಯಃ ಸರ್ಪಪ್ರತ್ಯಯೋ ರಜ್ಜ್ವಾಂ ಸ ಕಥಂ ಸರ್ಪಕಾರ್ಯಕೃತ್ |
ಆತ್ಮನ್ಯೇವ ಹಿ ಯೋ ನಾಸ್ತಿ ತಸ್ಯ ಕಾ ಕಾರ್ಯಕಾರಿತಾ || ೩೭ ||

---

೩೫. ಒಣಗಿದೆಲೆಯು ಬೆಂಕಿಯಲ್ಲಿ ಬೀಳುತ್ತಿದ್ದ ಹಾಗೆಯೇ ಸುಟ್ಟು ಹೋಗುವಂತೆ, ಈ ಭೌತಿಕ ದೇಹವು ಅಹಂ (ಕಾರವಾಸನಾ ಮಾತ್ರಮಯವಾದ ಆತಿವಾಹಿಕ) ದೇಹವನ್ನು ಹೊಂದುತ್ತಲೂ ನಾಶವಾಗುವುದು.

೩೬. ವರಶಾಪ ವಿಜೃಂಭಣಗಳಿಂದಲೂ ಹೀಗೆಯೇ ಆಗುವುದು. ಹಿರಿಯರು ಏನಾಗು ಎಂದು ಹೇಳಿದರೋ ತಾನು ಅದೇ ಎಂಬ ಸ್ಮೃತಿಯು ಬರುವುದು.

೩೭. (ಹಾಗಿಲ್ಲದಿದ್ದರೆ ವರಶಾಪಗಳು ಅರ್ಥಕ್ರಿಯಾಕಾರಿಗಳಾಗುವುವೆಂತು ?) ರಜ್ಜುವಿನಲ್ಲಿ ಕಾಣುವ ಸರ್ಪ ಪ್ರತೀತಿಯು ಸರ್ಪಕಾರ್ಯವನ್ನು ಮಾಡಬಲ್ಲುದೆ ? ತನ್ನಲ್ಲಿ ಯಾವುದು ಇಲ್ಲವೇ ಇಲ್ಲವೋ ಅದರ ಕಾರ್ಯವನ್ನು ಅದು ಮಾಡುವುದೆಂತು ? (ಹಾಗೆ, ವರಶಾಪಗಳು ಆ ಪ್ರತೀಕವನ್ನು ತಂದುಕೊಡದಿದ್ದರೆ, ಆ ಸ್ಮೃತಿಯು ಬರುವುದಿಲ್ಲ. ಸ್ಮೃತಿಯು ಬರದಿದ್ದರೆ ಅರ್ಥಕ್ರಿಯಾಕಾರಿಯಾಗುವುದಿಲ್ಲ.)

(ಈಗ ಮತ್ತೊಂದು ವಿಧವಾಗಿ ಶಂಕಿಸಬಹುದು :—ಸ್ಥೂಲದೇಹವು ಕಾರ್ಯನಿಷ್ಪತ್ತಿ ಮಾಡತಕ್ಕುದೆಂದು ಸರ್ವಾನುಭವಸಿದ್ಧವಾಗಿರುವುದರಿಂದ, ತತ್ವಜ್ಞಾನವಾದಮಾತ್ರದಿಂದಲೇ ಇದಕ್ಕೆ ಬಾಧೆಯುಂಟಾಗುವುದು ಹೇಗೆ? ಎಂದು ಶಂಕಿಸಬಹುದು. ಆದರೆ, ತತ್ವಜ್ಞಾನಾವಸ್ಥೆಯಲ್ಲಿ ಈ ಪ್ರಾಪಂಚಿಕಕಾರ್ಯನಿಷ್ಪತ್ತಿಯೇ ಇರುವುದಿಲ್ಲವಾದಕಾರಣ, ಈ ಶಂಕೆಗೆ ಅವಕಾಶವಿಲ್ಲ. ರಜ್ಜುವನ್ನು ನೋಡಿ ಸರ್ಪವೆಂದು ತಿಳಿದುಕೊಂಡ ಮಾತ್ರದಿಂದಲೇ, ಆ ಸರ್ಪಜ್ಞಾನವು ಸರ್ಪದಿಂದ ಆಗಬೇಕಾದ ದಂಶ (ಕಚ್ಚುವಿಕೆ) ಮುಂತಾದ ಕಾರ್ಯಗಳನ್ನು ಮಾಡಬಲ್ಲುದೆ? ಹೀಗೆ, ಯಾವ ಸ್ಥೂಲಶರೀರವು ಸ್ವಭಾವತಃ ಇಲ್ಲವೇ ಇಲ್ಲವೋ, ಅದು ಕಾರ್ಯನಿಷ್ಪತ್ತಿ ಮಾಡುತ್ತದೆಯೆಂಬುದಾವುದು ?—ವೈಭವ)

ಯಸ್ತ್ವೇತನ್ಮೃತ ಇತ್ಯೇವ ಮಿಥ್ಯಾ ಸಮನುಭೂಯತೇ |
ಪ್ರಾಗಭ್ಯಾಸಸ್ಯ ಪುಷ್ಟಸ್ಯ ನಾನ್ಯೈತತ್ಪ್ರವಿಜೃಂಭತೇ || ೨೮ ||

ಸ್ವಾನುಭೂತೇ ಜಗಜ್ಜಾಲೇ ಸುಗಮಾಃ ಸಂಸ್ಮೃತಿಭ್ರಮಾಃ |
ನಾಸ್ಯಸಂಕಲ್ಪಿತೋ ನಾಮ ಸರ್ಗಾದ್ಯಭ್ಯಾಸ ಈದೃಶಃ || ೨೯ ||

---

೨೮. ಈ ದೇಹವು ಮೃತವಾಯಿತು ಎಂಬ ಮರಣಭ್ರಮವು ನಮ್ಮ ಅನುಭವದಲ್ಲಿರುವುದು. ಹಿಂದಿನಿಂದಲೂ ಹಾಗೆ ಮರಣ ವಾಸನೆಯು ಅಭ್ಯಾಸದಿಂದ ದೃಢವಾವಾಗಿರುವುದರಿಂದ ಹಾಗೆ ತೋರುವುದು.

('ಶರೀರವೆಂಬುದು ಸುತರಾಂ ಅಸತ್ಯವಾಗಿದ್ದಪಕ್ಷದಲ್ಲಿ, ಇದು ಮೃತವಾಯ್ತೆಂದು ಸರ್ವರಿಗೂ ಜ್ಞಾನವುಂಟಾಗುವ ಬಗೆ ಹೇಗೆ'–ಎಂದರೆ, ಇದು ಮೃತವಾಯ್ತೆಂಬುದೂ ಮಿಥ್ಯಾರೂಪವಾದ ಭ್ರಮವಲ್ಲದೆ, ವಾಸ್ತವ್ಯವಲ್ಲ. ಈ ಭ್ರಮವು, ಸ್ಥಿರವಾಗಿ ನೆಲೆಸಿರುವ ಪೂರ್ವಾಭ್ಯಾಸದ ವಾಸನೆಯಿಂದ ಉತ್ಪನ್ನವಾಗುವುದು—ವೈಭವ.)

೨೯. ತನ್ನ ಅನುಭವಕ್ಕೆ ಬರುವ ಜಗತ್ತೆಂಬ ಸಂಸಾರದಲ್ಲಿ ಪ್ರತಿಯೊಂದೂ ತನ್ನ ತನ್ನ ಸ್ಮೃತಿಯಿಂದ ಉಂಟಾದ ಭ್ರಮೆಯೇ ಹೊರತು ಇನ್ನೊಬ್ಬರ ಸಂಕಲ್ಪದಿಂದ ತನತನಗೆ ಇಂತಹ ಸುಖದುಃಖಗಳು ಬಂತು ಎಂಬುದಿಲ್ಲ.

ಹೀಗಿರುವುದರಿಂದ, ನಾವು ಹಿಂದೆ ಅನುಭವಿಸಿರುವ ಜಗತ್ತಿನಲ್ಲಿಯೇ ನಮಗೆ ಈಗ ಸ್ಮರಣರೂಪವಾದ ಭ್ರಮ ಹುಟ್ಟುವುದೆಂದು ನಿರ್ಧರವಾಯ್ತು. ಅಷ್ಟೇ ಹೊರತು, ವರಕೊಡತಕ್ಕವರಾಗಲಿ–ಅಥವಾ ಹಿರಣ್ಯಗರ್ಭಾದಿಗಳಾಗಲಿ–ಮಾಡುವ ಸಂಕಲ್ಪದಿಂದ ಹೀಗಾಗುವುದೆಂದು ತಿಳಿಯಬಾರದು. ಅಂತು, ಸೃಷ್ಟಿಸ್ಥಿತಿ ಮುಂತಾದುವುಗಳ ಅಭ್ಯಾಸ ಸ್ವರೂಪವೇ ಇಂತಹುದು—ವೈಭವ.)

ಅಂತರನುಭೂಯಮಾನಾಃ
ಸಂಸೃತಯೋ ಬಾಹ್ಯಭೂತಜಲಾನಾಂ |
ಅವಿದಿತವೇದ್ಯದೃಶಾಮಪಿ
ದೂರೇ ಪುಂಸಾಮಿವೈಂದವಂ ಬಿಂಬಂ || ೪೦ ||

ಇತ್ಯಾರ್ಷೇ ಶ್ರೀ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
" ಸಂಸೃತಿವಿದಿತವೇದ್ಯಂ " ನಾಮ ತ್ರಿಪಂಚಾಶಃ ಸರ್ಗಃ

---

೪೦. ಸಂಸಾರಗಳು ಎಂಬುದು ಅವಿದಿತವೇದ್ಯದೃಷ್ಟಿಯುಳ್ಳವರಿಗೆ ಬಾಹ್ಯ ಭೂತ ಸಮೂಹಗಳು ಎಂದು ತೋರಿದರೂ, ಅವೆಲ್ಲವೂ ಒಳಗೇ ಅನುಭವವಾಗ ತಕ್ಕವು. (ಕಣ್ಣಿನ ದೋಷದಿಂದ ಕಾಣುವ ಎರಡನೆಯ) ಚಂದ್ರ ಬಿಂಬವು ದೂರದಲ್ಲಿಯೇ ಕಂಡರೂ (ಅದು ಇರುವುದು ಕೆಟ್ಟಿರುವ ಕಣ್ಣಿನಲ್ಲಿ ಅಲ್ಲವೆ ?).

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಸಂಸೃತಿ ವಿದಿತ ವೇದ್ಯ" ಎಂಬ
ಐವತ್ತಮೂರನೆಯ ಸರ್ಗವು.

ಚತುಃಪಂಚಾಶಃ ಸರ್ಗಃ

ಶ್ರೀದೇವ್ಯುವಾಚ :—

ತಸ್ಮಾದ್ಯೇ ವೇದ್ಯವೇತ್ತಾರೋ ಯೇ ವಾ ಧರ್ಮಂ ಪರಂ ಶ್ರಿತಾಃ|
ಆತಿವಾಹಿಕಲೋಕಾಂಸ್ತೇ ಪ್ರಾಪ್ನುವಂತೀಹ ನೇತರೆ || ೧ ||

ಆಧಿಭೌತಿಕದೇಹತ್ವಂ ಮಿಥ್ಯಾಭ್ರಮಮಯಾತ್ಮಕಂ |
ಕಥಂ ಸತ್ಯೇ ಸ್ಥಿತಿಂ ಯಾತಿ ಚ್ಛಾಯಾತ್ತೇ ಕಥಮಾತಪೇ || ೨ ||

ಲೀಲಾ ವಿದಿತವೇದ್ಯಾ ನೋ ಪರಮಂ ಧರ್ಮಮಾಶ್ರಿತಾ |
ಕೇವಲಂ ತೇನ ಸಾ ಭರ್ತುಃ ಕಲ್ಪಿತಂ ನಗರಂ ಗತಾ || ೩ ||

ಐವತ್ತನಾಲ್ಕನೆಯ ಸರ್ಗ

೧. ಶ್ರೀದೇವಿಯು ಹೇಳಿದಳು:—ಆದರಿಂದ ಯಾರು ವೇದ್ಯವನ್ನು ಬಲ್ಲವರೋ, ಯಾರು ಪರಧರ್ಮವನ್ನು ಆಶ್ರಯಿಸಿದವರೋ ಅವರು ಆತಿವಾಹಿಕ ಲೋಕಗಳನ್ನು ಪಡೆಯುವರು. ಇತರರು ಇಲ್ಲ.

(ಪರಂ-ಯೋಗಭ್ಯಾಸಜಂ—ತಾ. ಪ್ರ.)

೨. ಆದಿ ಭೌತಿಕ ದೇಹವೆಂಬುದು ಮಿಥ್ಯೆಯು : ಭ್ರಮಾತ್ಮಕವಾದುದು : ನಿನ್ನ ನೆರಳು ಬಿಸಿಲಿನಲ್ಲಿ ಹೇಗೆ ಇರಲಾರದೋ ಹಾಗೆಯೇ ಅದೂ ಸತ್ಯದಲ್ಲಿ ಇರಲಾರದು.

(ನನು ಆತಿವಾಹಿಕ ಬ್ರಹ್ಮಾದಿಲೋಕೇಷು ಆಪಿ ಅತ್ರೇವ ಚಿರಾಭ್ಯಾಸಾತ್ ಆದಿಭೌತಿಕ ದೇಹತ್ವೋದಯಃ ಕಿಂ ನ ಸ್ಯಾತ್ | ತತ್ರಾಹ :—ಆದಿಭೌತಿಕೇತಿ "ಅಪಾಗಾದಗ್ನೇರಗ್ನಿತ್ವಂ ತ್ರೀಣಿರೂಪಾಣಿ ಇತ್ಯೇವ ಸತ್ಯಂ ಪ್ರಾಣಾ ವೈ ಸತ್ಯಂ ತೇಷಾಂ ಏಷ ಸತ್ಯಃ" ಇತ್ಯಾದಿ ಶ್ರುತಿಷು ಸ್ಥೂಲಸ್ಯ ಸೂಕ್ಷ್ಮೇ ತ್ರಿವೃತ್ಕರಣಾದಿನಾ ಅಧ್ಯಸ್ತತ್ವ ಉಕ್ತೇಃ ಸ್ಥೂಲಾಪೇಕ್ಷಯಾ ಸತ್ಯಂ ಆತಿವಾಹಿಕಭಾವೇ ಪುಣ್ಯೋತ್ಕರ್ಷಾತ್ ಪ್ರಾಪ್ತೇಸತಿ ಇತ್ಯರ್ಥಃ || ತಾ.ಪ್ರ.)

೩. ಎರಡನೆಯ ಲೀಲೆಯು ವಿದಿತವೇದ್ಯಳಲ್ಲ. ಆದರೂ ಕೇವಲ ಪರಮ

ಲೀಲೋವಾಚ :—

ಏವಮೇಷಾ ಪ್ರಯಾತಾಸ್ತು ಭರ್ತಾ ಪಶ್ಯ ಮಮಾಂಬಿಕೆ |
ಪ್ರವೃತ್ತಃ ಪ್ರಾಣಸಂತ್ಯಾಗೇ ಕರ್ತವ್ಯಂ ಕಿಮಿಹಾಧುನಾ || ೪ ||

ಭಾವಾಭಾವೇಷು ಭಾವಾನಾಂ ಕಥಂ ನಿಯತಿರಾಗತಾ |
ಕಥಂ ಭೂಯೋಽಪ್ಯನಿಯತಿರ್ಮೃತಿಜನ್ಮಾದಿಸೂಚಿತಾ || ೫ ||

ಕಥಂ ಸ್ವಭಾವಸಂಸಿದ್ಧಃ ಕಥಂ ಸತ್ತಾ ಪದಾರ್ಥಗಾ |
ಕಥಮಗ್ನ್ಯಾದಿಷೂಷ್ಣತ್ವಂ ಪೃಥ್ವ್ಯಾದೌ ಸ್ಥಿರತಾ ಕಥಂ || ೬ ||

ಹಿಮಾದಿಷು ಕಥಂ ಶೈತ್ಯಂ ಕಾ ಸತ್ತಾ ಕಾಲಖಾದಿಷು |
ಭಾವಾಭಾವಗ್ರಹೋತ್ಸರ್ಗಸ್ಥೂಲಸೂಕ್ಷ್ಮದೃಶಃ ಕಥಂ || ೭ ||

ಧರ್ಮವನ್ನು (ಯೋಗ) ಆಶ್ರಯಿಸಿದವಳು. (ಅದರಿಂದ) ಭರ್ತೃಕಲ್ಪಿತವಾದ ನಗರವನ್ನು ಹೊಂದಿದಳು.

೪. ಪ್ರಬುದ್ಧ ಲೀಲೆಯು ಹೇಳಿದಳು :—ಇವಳೇನೋ ಹೀಗೆ ಹೋಗಲಿ. ಈಗ ನನ್ನ ಗಂಡನು, ಪ್ರಾಣವನ್ನು ಬಿಡುವುದರಲ್ಲಿರುವನು. ಅಂಬಿಕೆ, ಈಗ ಏನು ಮಾಡಬೇಕು ?

೫. ದೇಹಗಳಿಗೆ ಸುಖಾದಿ ಭಾವವೂ ದುಃಖಾದಿ ಭಾವವೂ ಬರುವುದರಲ್ಲಿ ನಿಯತಿ ಏನು ? ಮೃತಿ, ಜನ್ಮ, ಇವುಗಳಲ್ಲಿ ಅನಿಯತಿಯೆಂತು ?

೬. ಸ್ವಭಾವ ಸಂಸಿದ್ಧಿ ಎಂದರೇನು ? ಪದಾರ್ಥಗಳಲ್ಲಿರುವ ಸತ್ತಾ ಎಂಥದು ? ಅಗ್ನ್ಯಾದಿಗಳಲ್ಲಿ ಉಷ್ಣತ್ವವೂ ಪೃಥಿವ್ಯಾದಿಗಳಲ್ಲಿ ಸ್ಥಿರತೆಯೂ ಇರುವುದೆಂತು ?

(ಸ್ವಭಾವ ಸಂಸಿದ್ಧಿ–ನೀರಿನ ತಂಪು, ಬೆಂಕಿಯ ಬಿಸಿ ಮೊದಲಾದುದು.)

೭. ಹಿಮಾದಿಗಳಲ್ಲಿ ಶೈತ್ಯವಿರುವುದೆಂತು ? ಕಾಲ ಆಕಾಶಾದಿಗಳಲ್ಲಿ ಸತ್ತಾ ಎಂಥದು ? ಭಾವ, ಅಭಾವ, ಗ್ರಹ, ಉತ್ಸರ್ಗ, ಸ್ಥೂಲ, ಸೂಕ್ಷ್ಮಗಳೆಂಬ ದೃಷ್ಟಿಗಳು ಬರುವುದೆಂತು ?

ಕಥಮತ್ಯಂತಮುಚ್ಛ್ರಾಯಂ ತೃಣಗುಲ್ಮನರಾದಿಕಂ |
ವಸ್ತು ನಾಯಾತ್ಯನಿಷ್ಟೇಽಪಿ ಸ್ಥಿತೇ ಸ್ವೋಚ್ಛ್ರಾಯಕಾರಣೇ || ೮ ||

ಶ್ರೀದೇವ್ಯುವಾಚ—

ಮಹಾಪ್ರಳಯಸಂಪತ್ತೌ ಸರ್ವಾರ್ಥಾಸ್ತಮಯೇ ಸತಿ |
ಅನಂತಾಕಾಶಮಾಶಾಂತಂ ಸದ್ಬ್ರಹ್ಮೈವಾವತಿಷ್ಠತೇ || ೯ ||

ತಚ್ಚಿದ್ರೂಪತಯಾ ತೇಜಃಕಣೋಽಹಮಿತಿ ಚೇತತೆ |
ಸ್ವಪ್ನೇ ಸಂವಿದ್ಯಥಾ ಹಿ ತ್ವಮಾಕಾಶಗಮನಾದಿ ಚ || ೧೦ ||

ತೇಜಃಕಣೋಽಸೌ ಸ್ಥೂಲತ್ವಮಾತ್ಮನಾತ್ಮನಿ ವಿಂದತಿ |
ಅಸತ್ಯಮೇವ ಸತ್ಯಾಭಂ ಬ್ರಹ್ಮಾಂಡಂ ತದಿದಂ ಸ್ಮೃತಂ || ೧೧ ||

ತತ್ರಾಂತಬ್ರಹ್ಮ ತದ್ವೇತ್ತಿ ಬ್ರಹ್ಮಾಯಮಹಮಿತ್ಯಥ |
ಮನೋರಾಜ್ಯಂ ಸ ಕುರುತೇ ಸ್ವಾತ್ಮೈವಂ ತದಿದಂ ಜಗತ್ || ೧೨ ||

---

೮. ಎತ್ತರವೂ ದಪ್ಪವೂ ಉಳ್ಳ ತೃಣ, ಗುಲ್ಮ, ನರಾದಿಗಳು ಆಗುವುದೆಂತು? ಎತ್ತರವೂ ದಪ್ಪವೂ ಉಳ್ಳ ವಸ್ತುಗಳು ಎದುರಿಗೆ ಇದ್ದರೂ ಅವು ವಸ್ತುವಲ್ಲ ಎಂದು ಹೇಳುವುದೆಂತು?

೯. ಶ್ರೀದೇವಿಯು ಹೇಳಿದಳು :—ಮಹಾಪ್ರಲಯವಾದಾಗ, ಸರ್ವಾರ್ಥಗಳೂ ಅಸ್ತಮಯವಾಗಿ ಹೋಗಲು, ಅನಂತಾಕಾಶವುಳ್ಳ ಶಾಂತವೂ ಸತ್ತೂ ಆದ ಬ್ರಹ್ಮವೊಂದು ಉಳಿಯುವುದು.

೧೦. ಅದರ ಚಿದ್ರೂಪವಾಗಿ ತೇಜಃಕಣವೊಂದು ಅಹಂ ಎಂದು ಕೊಳ್ಳುವುದು. ಕನಸಿನಲ್ಲಿ ಸಂವಿತ್ತೇ ಆದ ನೀನು, ಆಕಾಶಗಮನಾದಿಗಳನ್ನು ಮಾಡುವುದಿಲ್ಲವೇ? ಹಾಗೆ!

೧೧. ಈ (ಚಿದ್ರೂಪ) ತೇಜಃಕಣವು ತನ್ನಲ್ಲಿಯೇ ತನ್ನಿಂದಲೇ ಸ್ಥೂಲತ್ವವನ್ನು ಹೊಂದುವುದು. ಹಾಗೆ ಬಂದ ಸ್ಥೂಲತ್ವವು ಅಸತ್ಯವಾದರೂ ಸತ್ಯದಂತೆ ಕಾಣುವುದು. ಆ ಸ್ಥೂಲರೂಪವೇ ಬ್ರಹ್ಮಾಂಡವೆನ್ನಿಸಿಕೊಳ್ಳುವುದು.

೧೨. ಆ ಬ್ರಹ್ಮಾಂಡದೊಳಗಿರುವ ಆ ತೇಜಃಕಣವು ತಾನು ಬ್ರಹ್ಮವೇ ಆಗಿದ್ದರೂ ಅಹಂ ಎಂದುಕೊಂಡು (ಪ್ರತ್ಯೇಕವಾಗಿರುವಂತೆ ಭಾವಿಸಿಕೊಂಡು) ಮನೋರಾಜ್ಯವನ್ನು ಕಟ್ಟುವುದು. ಅದರಿಂದ ಈ ಜಗತ್ತೆಲ್ಲವೂ ಆತ್ಮವೇ!

ತಸ್ಮಿನ್ ಪ್ರಥಮತಃ ಸರ್ಗೇ ಯಾ ಯಥಾ ಯತ್ರ ಸಂವಿದಃ |
ಕಚಿತಾಸ್ತಾಸ್ತಥಾ ತತ್ರ ಸ್ಥಿತಾ ಅದ್ಯಾಪಿ ನಿಶ್ಚಲಾಃ || ೧೩ ||

ಯದ್ಯಥಾ ಸ್ಫುರಿತಂ ಚಿತ್ತಂ ತತ್ತಥಾ ಹ್ಯಾತ್ಮಚಿದ್ಭವೇತ್ |
ಸ್ವಯಮೇವಾನಿಯಮಸ್ತತ್ತತ್ಸ್ಯಾನ್ನೇಹ ಕಿಂಚನ || ೧೪ ||

ನಚ ನಾಮ ನಕಿಂಚಿತ್ತ್ವಂ ಯುಜ್ಯತೇ ವಿಶ್ವರೂಪಿಣಃ |
ತ್ಯಕ್ತ್ವಾ ಸಮಸ್ತಸಂಸ್ಥಾನಂ ಹೇಮ ತಿಷ್ಠತಿ ವೈ ಕಥಂ || ೧೫ ||

ಸರ್ಗಾದೌ ಸ್ವಯಮೇವಾಂತಶ್ಚಿದ್ಯಥಾ ಕಚಿತಾತ್ಮನಿ |
ಹಿಮಾಗ್ನ್ಯಾದಿತಯಾದ್ಯಾಪಿ ಸಾ ತಥಾಸ್ತೇ ಸ್ವಸತ್ತಯಾ || ೧೬ ||

ತಸ್ಮಾತ್ಸ್ವಸತ್ತಾಸಂತ್ಯಾಗಃ ಸತಃ ಕರ್ತುಂ ನಯುಜ್ಯತೇ |
ಯದಾ ಚಿದಾಸ್ತೇ ತೇನೇಯಂ ನಿಯತಿರ್ನ ವಿನಶ್ಯತಿ || ೧೭ ||

---

೧೩. ಆ ಸರ್ಗಕಾಲದಲ್ಲಿ ಮೊದಲು ಸಂವಿತ್ತು ಹೇಗೆ ಹೇಗೆ ಹೊಳೆಯಿತೊ ಹಾಗೆ ಹಾಗೆ ಇದುವರೆಗೂ ನಿಶ್ಚಲವಾಗಿರುವುದು.

೧೪. ಯಾವ ಯಾವ ಚಿತ್ತದಲ್ಲಿ ಯಾವ ಯಾವ ಭಾವವಾಗಿ ಸ್ಫುರಿಸುವುದೋ ಆಯಾ ಆತ್ಮವು ಹಾಗೆ ಹಾಗೇ ಆಗುವುದು. ಆದರಿಂದ ಈ ಜಗತ್ತಿನಲ್ಲಿ ಯಾವುದೂ ಅನಿಯತವಾಗಿ ಆಗುವುದೆಂಬ ಹಾಗಿಲ್ಲ.

೧೫. ವಿಶ್ವರೂಪಿಯಾದ ಆತ್ಮನು ನಕಿಂಚಿತ್ವ(ಸರ್ವಶೂನ್ಯ)ವಾಗಿ ಇರುವುದೆಂತು? ಚಿನ್ನವು ಯಾವ ರೂಪವೂ ಇಲ್ಲದೆ ಇರುವುದೆಂತು?

೧೬. ಸರ್ಗಾದಿಯಲ್ಲಿ ಚಿತ್ತು ತನ್ನಲ್ಲಿ ಎಂತು ಭಾವಗೊಂಡಿತೋ ಹಾಗೆ, ಹಿಮವೆಂದರೆ ಹಿಮವಾಗಿ, ಅಗ್ನಿಯೆಂದರೆ ಅಗ್ನಿಯಾಗಿ, ಸ್ವಸತ್ತೆಯಿಂದಲೇ ಇರುವುದು.

೧೭. ಅದರಿಂದ ಸತ್ತಾಗಿರುವ ವಸ್ತುವು ಸ್ವಸತ್ತೆಯನ್ನು ಬಿಟ್ಟಿರುವುದು ಸಾಧ್ಯವೇ ಇಲ್ಲ. ಚಿತ್ತು ಎಂದು ಇದ್ದ ಮೇಲೆ ಅದರಿಂದ ಆದ ನಿಯುತಿಯು ಎಂತು ನಾಶವಾಗುವುದು?

ಯದ್ಯಥಾ ಕಚಿತಂ ಯತ್ರ ವ್ಯೋಮರೂಪ್ಯಪಿ ಪಾರ್ಥಿವಂ |
ಸರ್ಗಾದೌ ತಸ್ಯ ಚಲಿತುಮುದ್ಯಯಾವನ್ನ ಯುಜ್ಯತೇ || ೧೮ ||

ಯಾ ಯಥಾ ಚಿತ್ಪ್ರಕಚಿತಾ ಪ್ರತಿಪಕ್ಷವಿದಂ ವಿನಾ |
ನ ಸಾ ತತಃ ಪ್ರಚಲತಿ ವೇದನಾಭ್ಯಾಸತಃ ಸ್ವಯಂ || ೧೯ ||

ಜಗದಾದಾವನುತ್ಪನ್ನಂ ಯಚ್ಛೇದಮನುಭೂಯತೇ |
ತತ್ಸಂವಿದ್ವ್ಯೋಮಕಚನಂ ಸ್ವಪ್ನಸ್ತ್ರೀಸುರತಂ ಯಥಾ || ೨೦ ||

ಅಸತ್ಯಮೇವ ಸತ್ಯಾಭಂ ಪ್ರತಿಭಾನಮಿದಂ ಸ್ಥಿತಂ |
ಇತಿ ಸ್ವಭಾವಸಂಪತ್ತಿರಿತಿ ಭೂತಾನುಭೂತಯಃ || ೨೧ ||

ಸರ್ಗಾದೌ ಯಾ ಯಥಾ ರೂಢಾ ಸಂವಿತ್ಕಚನಸಂತತಿಃ |
ಸದ್ಯಾಪ್ಯಚಲಿತಾನ್ಯೇನ ಸ್ಥಿತಾ ನಿಯತಿರುಚ್ಯತೇ || ೨೨ ||

---

೧೮. ವ್ಯೋಮ ರೂಪಿಯಾಗಿಯೋ ಪಾರ್ಥಿವವಾಗಿಯೋ ಯಾವುದು ಯಾವುದಾಗಿ ಸರ್ಗಾದಿಯಲ್ಲಿ ಭಾವಗೊಂಡಿತೋ ಅದು ಅದೇ ಆಗಿರುವುದು: ಅದನ್ನು ಬದಲಾಯಿಸಲೂ ಆಗುವುದಿಲ್ಲ.

೧೯. ಚಿತ್ತು ತನಗಿಂತ ಬೇರೆಯಾದ ಪ್ರತಿಚಿತ್ತು ಇಲ್ಲದಿರುವಾಗ ಯಾವುದೆಂದು ಭಾವಿಸಿಕೊಂಡಿತೋ ಅದು ಅದೇ ಎಂದು ತಿಳಿದುಕೊಂಡು, ಅದೇ ಪಾಠವಾಗಿ, ಅದೇ ತಾನೆಂದುಕೊಂಡು ಸ್ಥಿರವಾಗುವುದು.

೨೦. ಅನುತ್ಪನ್ನವಾದರೂ ಆ ಚಿತ್ತು ಜಗದಾದಿಯಲ್ಲಿ ಅದೇ ಏನೆಂದು ಭಾವಿಸಿಕೊಳ್ಳುವುದೋ ಅದೇ ರೂಪವಾಗಿ ಸಂವಿದ್ವ್ಯೋಮದಲ್ಲಿ ಭಾವಗೊಳ್ಳುವುದು. ಅದು ಸ್ವಪ್ನದ ಸ್ತ್ರೀ ಸುರತದಂತೆ–

೨೧. ಅಸತ್ಯವೇ ಆದರೂ ಸತ್ಯವೇ ಎಂಬಂತೆ ಹೊಳೆಯುವುದು. ಅದರಿಂದ ಪ್ರತಿಯೊಂದು ಪ್ರಾಣಿಯ ಅನುಭವೊಂದೊಂದೂ (ಎಷ್ಟೆಷ್ಟೇ ವಿಚಿತ್ರವಾಗಿರಲಿ)ತನ್ನ ಸ್ವಭಾವದಲ್ಲಿಯೇ ಇರುವುದು. (ಸ್ವಭಾವ ಸಂಪತ್ತಿಯು).

೨೨. ಸರ್ಗಾದಿಯಲ್ಲಿ ಸಂವಿತ್ತಿನ ಕಚನ ಸಂತತಿಯು ಯಾವುದಾಗಿ ಆರಂಭವಾಗಿ ರೂಢವಾಯಿತೋ ಅದು ಅದೇ ಆಗಿ ಇನ್ನು ಯಾವುದರಿಂದಲೂ ಅಚಲಿತವಾಗಿ ಇದ್ದೇ ಇರುವುದು. ಅದೇ ನಿಯತಿಯು.

ಗೃಹೀತವ್ಯೋಮಸಂವಿತ್ತಿ। ಚಿದ್ವ್ಯೋಮ ವ್ಯೋಮತಾಂ ಗತಂ।
ಗೃಹೀತಕಾಲತಾ ಸಂವಿಚ್ಛಿನ್ನಭಃ ಕಾಲತಾಂ ಗತಂ || ೨೩ ||

ಗೃಹೀತಜಲಸಂವಿತ್ತಿ ಚಿದ್ವ್ಯೋಮ ವಾರಿವತ್ ಸ್ಥಿತಂ |
ಸ್ವಪ್ನೇ ಯಥಾ ಹಿ ಪುರುಷಃ ಪಶ್ಯತ್ಯಾತ್ಮನಿ ವಾರಿತಾಂ || ೨೪ ||

ಸ್ವಪ್ನಚಿತ್ಸಂವಿದಾಭಾತಿ ಭವತ್ಯೇಷಾ ಯಥಾ ಸ್ಥಿತಾ |
ಚಿಚ್ಚಮತ್ಕಾರ ಚಾತುರ್ಯಾದಸದೇತತ್ ಸಮೂಹತೇ || ೨೫ ||

ಖತ್ವಂ ಜಲತ್ವಮುರ್ವೀತ್ವಮಗ್ನಿವಾಯುತ್ವಮಪ್ಯಸತ್ |
ವೇತ್ತ್ಯಂತಃ ಸ್ವಪ್ನಸಂಕಲ್ಪಧ್ಯಾನೇಷ್ವಿವ ಚಿತಿಃ ಸ್ವಯಂ || ೨೬ ||

ಮರಣಾನಂತರಂ ಕರ್ಮಫಲಾನುಭವನಕ್ರಮಂ |
ಸರ್ವಸಂದೇಹಶಾಂತ್ಯರ್ಥಂ ಮೃತಿ ಶ್ರೇಯಸ್ಕರಂ ಶೃಣು || ೨೭ ||

---

೨೩. ವ್ಯೋಮವೆಂದು ಭಾವಿಸಿಕೊಂಡ ಚಿದಾಕಾಶವು ವ್ಯೋಮತ್ವವನ್ನೇ ಹೊಂದುವುದು. ಚಿದಾಕಾಶವು ತಾನು ಕಾಲವೆಂದುಕೊಂಡರೆ ಕಾಲವೇ ಆಗುವುದು.

೨೪. ಚಿದ್ವ್ಯೋಮವು ಜಲವೆಂದು ಭಾವಿಸಿಕೊಂಡು ಜಲವಾಗುವುದು: ಪುರುಷನು ಸ್ವಪ್ನದಲ್ಲಿ ನೀರು ಕಾಣುವಂತೆಯೇ ಇದು.

೨೫. ಸ್ವಪ್ನದಲ್ಲಿ ಎಲ್ಲವೂ ಯಥಾವತ್ತಾಗಿ ಇರುವಂತೆಯೇ ಚಿದ್ಬಲದಿಂದ ಕಾಣುವಂತೆ, ಚಿತ್ತಿನ ಚಮತ್ಕಾರ ಚಾತುರ್ಯಗಳಿಂದ, ಅಸತ್ತಾದುದೆಲ್ಲವೂ ಅದರಲ್ಲಿಯೇ, ಕಂಡಂತಾಗುವುದು.

೨೬. ಆಕಾಶ, ಜಲ, ಪೃಥ್ವೀ, ಅಗ್ನಿ, ವಾಯುಗಳು ಸತ್ತಾಗಿದ್ದರೂ, ಸ್ವಪ್ನ ಸಂಕಲ್ಪ, ಧ್ಯಾನಗಳಲ್ಲಿ ಗೋಚರವಾಗುವಂತೆಯೇ, ಚಿತ್ತೇ ಆಯಾ ರೂಪವಾಗಿ ಕಂಡಂತಾಗುವುದು.

೨೭. ಮರಣವಾದ ಮೇಲೆ ಕರ್ಮ ಫಲಗಳನ್ನು ಅನುಭವಿಸುವುದೆಂತು ಎಂಬುದನ್ನು, ಕೇಳು, ಅದರಿಂದ ಸರ್ವಸಂದೇಹಗಳೂ ಶಾಂತವಾಗುವುವು: ಮರಣವನ್ನು ತಿಳಿಯುವುದರಿಂದ ಶ್ರೇಯಸ್ಸಾಗುವುದು.

ರೂಢಾದಿಸರ್ಗೇ ನಿಯತಿರ್ಯೈಕದ್ವಿತ್ರಿಚತುಃಶತಾ |
ಪೂರ್ವಾದಿಷ್ವಾಯುಷಃ ಪುಂಸಾಂ ತಸ್ಯಾ ಮೇ ನಿಯತಿಂ ಶೃಣು || ೨೮ ||

ದೇಶಕಾಲಕ್ರಿಯಾದ್ರವ್ಯಶುದ್ಧ್ಯಶುದ್ಧೀ ಸ್ವಕರ್ಮಣಾಂ |
ನ್ಯೂನತ್ವೇ ಚಾಧಿಕತ್ವೇ ಚ ನೃಣಾಂ ಕಾರಣಮಾಯುಷಃ || ೨೯ ||

ಸ್ವಕರ್ಮಧರ್ಮೇ ಹ್ರಸತಿ ಹ್ರಸತ್ಯಾಯುರ್ನೃಣಾಮಿಹ |
ವೃದ್ಧೇ ವೃದ್ಧಿಮುಪಾಯಾತಿ ಸಮಮೇವ ಭವೇತ್ಸಮೇ || ೩೦ ||

ಬಾಲಮೃತ್ಯುಪ್ರದೈರ್ಬಾಲೋ ಯುವಾ ಯೌವನಮೃತ್ಯುದೈಃ |
ವೃದ್ಧಮೃತ್ಯುಪ್ರದೈರ್ವೃದ್ಧಃ ಕರ್ಮಭಿರ್ಮೃತಿಮೃಚ್ಛತಿ || ೩೧ ||

ಯೋ ಯಥಾಶಾಸ್ತ್ರಮಾರಬ್ಧಂ ಸ್ವಧರ್ಮಮನುತಿಷ್ಠತಿ |
ಭಾಜನಂ ಭವತಿ ಶ್ರೀಮಾನ್ಸ ಯಥಾಶಾಸ್ತ್ರಮಾಯುಷಃ || ೩೨ ||

---

೨೮. ಸರ್ಗಾದಿಯಲ್ಲಿ ಕೃತಾದಿಯುಗಕ್ರಮದಿಂದ ಮನುಷ್ಯರ ಆಯುಸ್ಸು ನಾಲ್ಕು, ಮೂರು, ಎರಡು, ಒಂದು ನೂರು ಎಂಬುದಾಗಿ ನಿಯಮಿತವಾಗಿರುವುದು. ಅದನ್ನು ಕೇಳು.

೨೯. ದೇಶ, ಕಾಲ, ಕ್ರಿಯಾ, ದ್ರವ್ಯ, ಶುದ್ಧಿ, ಅಶುದ್ಧಿ, ತನ್ನ ತನ್ನ ಕರ್ಮಗಳ ನ್ಯೂನತೆ, ಆಧಿಕ್ಯ, ಇವು ಮನುಷ್ಯರ ಆಯುಸ್ಸುಗಳಿಗೆ ಕಾರಣಗಳು.

೩೦. ಸ್ವಕರ್ಮ ಧರ್ಮಗಳು ಹ್ರಾಸವಾಗುತ್ತಿದ್ದ ಹಾಗೆಲ್ಲ, ಮನುಷ್ಯರ ಆಯುಸ್ಸೂ ಹ್ರಾಸವಾಗುವುವು. ಸಮವಾಗಿದ್ದರೆ ಸಮವಾಗಿರುವುವು.

೩೧. ಬಾಲಮೃತ್ಯು ಪ್ರದವಾದ ಕರ್ಮಗಳಿಂದ ಬಾಲ್ಯದಲ್ಲಿ, ಯೌವನ ಮೃತ್ಯುಪ್ರದವಾದ ಕರ್ಮಗಳಿಂದ ಯೌವನದಲ್ಲಿ ವೃದ್ಧಮೃತ್ಯುಪ್ರದವಾದ ಕರ್ಮಗಳಿಂದ ವಾರ್ಧಿಕ್ಯದಲ್ಲಿ ಮರಣವಾಗುವುದು.

೩೨. ಯಾವನೇ ಆಗಲಿ ಶಾಸ್ತ್ರೋಕ್ತವಾದ ಸ್ವಧರ್ಮವನ್ನು ಅನುಷ್ಠಾನ ಮಾಡುವನೋ ಆತನು ಶ್ರೀಮಂತನಾಗಿ ಶಾಸ್ತ್ರವು ಹೇಳಿರುವಷ್ಟು ಆಯುಸ್ಸನ್ನು ಅನುಭವಿಸುವನು.

(ಪುರುಷನ ವ್ಯವಹಾರವೆಲ್ಲವೂ ಶ್ರೇಯಸ್ಸು ಪ್ರೇಯಸ್ಸು ಎಂದು ಎರಡು ವಿಧವು. ಪ್ರೇಯಸ್ಸೆಂದರೆ ಸದ್ಯಸ್ಸುಖ ಕಾರಣವಾದ ಕಾರ್ಯಗಳು. ಇವು

ಏವಂ ಕರ್ಮಾನುಸಾರೇಣ ಜಂತುರಂತ್ಯಾಂ ದಶಾಮಿತಃ |
ಭವಂತ್ಯಂತಃ ಗತವತೋ ದೃಙ್ಮರ್ಮಚ್ಛೇದವೇದನಾಃ || ೩೩ ||

ಗಳನ್ನು ಮನುಷ್ಯನ ಅರ್ಥಕಾಮಾಪೇಕ್ಷೆಯೇ ಮಾಡಿಸುವುದು. ಹಳ್ಳದ ಕಡೆಗೆ ಹರಿಯುವ ನೀರನ್ನು ಯಾರೂ "ನೀರೇ ಹರಿದು ಹೋಗು" ಎಂದು ಹೇಳಿಕಳುಹಿಸಬೇಕಾಗಿಲ್ಲ. ಆದರೆ, ಇಲ್ಲಿನದಕ್ಕಿಂತಲೂ ಹೆಚ್ಚಿನದೊಂದು ಇದೆ ಎಂದು ನಂಬಿದವನಿಗೆ, ಅಲ್ಲಿಗೆ ಹೋಗಲು ಒಂದು ಹಾದಿಯು ಬೇಕು, ಹಳ್ಳದಲ್ಲಿರುವ ನೀರನ್ನು ಮೇಲಕ್ಕೆ ಎತ್ತಲು ಒಂದು ಸಾಧನವು ಬೇಕು. ಸಾಧನವು ಕಾಲದೇಶಕರ್ಮಾದ್ಯನುಗುಣವಾಗಿ ಭಿನ್ನೈಸುವುದು. ಹಾಗೆ, ಶ್ರೇಯಸ್ಸು ಬೇಕೆಂದವನು ಧರ್ಮವನ್ನು ಸ ಧಿಸಬೇಕಾಗುವುದು. ಧರ್ಮವು ವರ್ಣಾಶ್ರಮಾನುಗುಣವು. ಆದರಿಂದ, ಶ್ರೇಯಸ್ಕಾಮಿಯಾವವನಿಗೆ, ಧರ್ಮವನ್ನು ಬೋಧಿಸುವುದು ಯಾವುದೋ ಅದು ಶಾಸ್ತ್ರವು.

ಆಧುನಿಕರು ಶಾಸ್ತ್ರದಲ್ಲಿ ಪಕ್ಷಪಾತವುಂಟು ಎನ್ನುವರು. ಆದರೆ ವಿಚಾರಮಾಡಿ ನೋಡಿದರೆ ಪಕ್ಷಪಾತವಿಲ್ಲ ಎನ್ನುವುದು ತಿಳಿಯುವುದು. ಈಗ ದೇವದತ್ತನಾಗಿರುವ ಜೀವನು ಬ್ರಾಹ್ಮಣ ದೇಹದಲ್ಲಿರುವನು. ಅವನಿಗೆ ಬ್ರಾಹ್ಮಣಕರ್ಮವಾದ ಯಜನ, ಯಾಜನಗಳಲ್ಲಿ ಅಧಿಕಾರವುಂಟು. ಮತ್ತೆ ಅವನು ಕರ್ಮದೋಷದಿಂದ ತಿರ್ಯಗ್ಯೋನಿಯಲ್ಲಿ ಹುಟ್ಟಿದರೆ, ಆಗ ಅವನಿಗೆ ಬ್ರಾಹ್ಮಣಾದಿ ಕರ್ಮವಿಲ್ಲ.

(ಹೀಗಿರುವುದರಿಂದ ಶಾಸ್ತ್ರದಲ್ಲಿ ಪಕ್ಷಪಾತವಿಲ್ಲ.)

೩೩. ಹೀಗೆ ಕರ್ಮಾನುಸಾರವಾಗಿ ಆಯುಸ್ಸು ಮುಗಿದಿರುವ ಜಂತುವು ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ಹೋಗುವಾಗ, ಎಲ್ಲರೂ ಕಾಣುವ ಮರ್ಮಚ್ಛೇದ ವೇದನಗಳು ಉಂಟಾಗುವುವು.

(ಒಂದು ಕಡೆ ಪ್ರತಿಷ್ಠಿಸಿದ ಒಂದು ಯಂತ್ರವನ್ನು ಒಂದು ಕಡೆಯಿಂದ ಇನ್ನೊಂದು ಕಡೆ ತೆಗೆದು ಹಾಕಬೇಕಾದರೆ, ಕೀಳುವುದು, ಬಿಚ್ಚುವುದು, ಜೋಡಿಸುವುದು ಹೇಗೆ ನಡೆಯಬೇಕೋ, ಹಾಗೆಯೇ ಜೀವನು ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ಹೋಗುವಾಗ, ದೈಹಿಕ ಕ್ರಿಯೆಗಳೂ ಕೆಲವು ನಡೆಯುವುವು. ಅದೇ ಮರ್ಮಚ್ಛೇದಗಳು.)

ಪ್ರಬುದ್ಧಲೀಲೋವಾಚ

ಮರಣಂ ಮೇ ಸಮಾಸೇನ ಕಥಯೇಂದುಸಮಾನನೇ |
ಕಿಂ ಸುಖಂ ಮರಣಂ ಕಿಂ ವಾ ದುಃಖಂ ಮೃತ್ವಾ ಚ ಕಿಂ ಭವೇತ್ || ೩೪ ||

ಶ್ರೀದೇವ್ಯುವಾಚ :—

ತ್ರಿವಿಧಾಃ ಪುರುಷಾಃ ಸಂತಿ ದೇಹಸ್ಯಾಂತೇ ಮುಮೂರ್ಷವಃ |
ಮೂರ್ಖೋಽಥ ಧಾರಣಾಭ್ಯಾಸೀ ಯುಕ್ತಿಮಾನ್ ಪುರುಷಸ್ತಥಾ || ೩೫ ||

ಅಭ್ಯಸ್ಯ ಧಾರಣಾನಿಷ್ಠೋ ದೇಹಂ ತ್ಯಕ್ತ್ವಾ ಯಥಾಸುಖಂ |
ಪ್ರಯಾತಿ ಧಾರಣಾಭ್ಯಾಸೀ ಯುಕ್ತಿಯುಕ್ತಸ್ತಥೈವ ಚ || ೩೬ ||

ಧಾರಣಾ ಯಸ್ಯ ನಾಭ್ಯಾಸಂ ಪ್ರಾಪ್ತಾ ನೈವ ಚ ಯುಕ್ತಿಮಾನ್ |
ಮೂರ್ಖಃ ಸ್ವಮೃತಿಕಾಲೇಽಸೌ ದುಃಖಮೇತ್ಯವಶಾಶಯಃ || ೩೭ ||

---

೩೪. ಪ್ರಬುದ್ಧ ಲೀಲೆಯು ಹೇಳಿದಳು :—ಇಂದುಸಮಾನನೆಯಾದ ದೇವಿಯೆ, ಸಮಾಸವಾಗಿ ಮರಣವೆಂದರೇನು ಎಂಬುದನ್ನು ನನಗೆ ಹೇಳು. ಸುಖವೆಂದರೇನು ? ಮರಣವೆಂದರೇನು ? ದುಃಖವೆಂದರೇನು ? ಸತ್ತು ಏನಾಗುವುದು ?

೩೫. ಶ್ರೀದೇವಿಯು ಹೇಳಿದಳು:—ಸಾಯುವವರು ಮೂರು ವಿಧ. ಮೂರ್ಖ, ಧಾರಣಾಭ್ಯಾಸಿ, ಯೋಗವಂತ ಎಂದು.

೩೬. ಧಾರಣಾ ನಿಷ್ಠನು ಅಭ್ಯಾಸ ಬಲದಿಂದ ದೇಹವನ್ನು ಯಥಾಸುಖವಾಗಿ ಬಿಟ್ಟು ಹೋಗುವನು. ಯೋಗವಂತನೂ ಹಾಗೆಯೇ ಮಾಡುವನು.

೩೭. ಯಾವನಿಗೆ ಯೋಗಧಾರಣೆಯು ಅಭ್ಯಾಸವಾಗಿಲ್ಲವೋ, ಯಾವನು ಯುಕ್ತಿ (ಬ್ರಹ್ಮಜ್ಞಾನ) ವಂತನೂ ಅಲ್ಲವೋ ಅವನು ಮೂರ್ಖನು. ಅಂತಹವನು ಕರ್ಮವಾಸನಗಳಿಂದ ಅವಶನಾಗಿ, ತನ್ನ ಮರಣಕಾಲದಲ್ಲಿ ದುಃಖವನ್ನು ಹೊಂದುವನು.

ವಾಸನಾವೇಶವೈವಶ್ಯಂ ಭಾವಯನ್ವಿಷಯಾಶಯಃ |
ದೀನತಾಂ ಪರಮಾಮೇತಿ ಪರಿಲೂನಮಿವಾಂಬುಜಂ ॥ ೩೮ ॥

ಅಶಾಸ್ತ್ರಸಂಸ್ಕೃತಮತಿರಸಜ್ಜನಪರಾಯಣಃ |
ಮೃತಾವನುಭವತ್ಯಂತರ್ದಾಹಮಗ್ನಾವಿವ ಚ್ಯುತಃ ॥ ೩೯ ॥

ಯದಾ ಘುರ್ಘುರಕಂಠತ್ವಂ ವೈರೂಪ್ಯಂ ದೃಷ್ಟಿವರ್ಣಜಂ |
ಗಚ್ಛತ್ಯೇಷೋಽವಿವೇಕಾತ್ಮಾ ತದಾ ಭವತಿ ದೀನಧೀಃ ॥ ೪೦ ॥

ಪರಮಾಂಧ್ಯಮನಾಲೋಕೋ ದಿವಾಪ್ಯುದಿತತಾರಕಃ |
ಸಾಭ್ರದಿಂಗ್ಮಂಡಲಾಭೋಗೋ ಘನಮೇಚಕಿತಾಂಬರಃ ॥ ೪೧ ॥

ಮರ್ಮವ್ಯಥಾವಿಚ್ಛುರಿತಃ ಪ್ರಭ್ರಮದ್ದೃಷ್ಟಿಮಂಡಲಃ |
ಆಕಾಶೀಭೂತವಸುಧೋ ವಸುಧಾಭೂತಖಾಂತರಃ ॥ ೪೨ ॥

---

೩೮. ವಾಸನೆಗಳಿಗೆ ವಶನಾಗಿ, ವಿಷಯ ಭೋಗಗಳನ್ನೇ ಧ್ಯಾನಿಸುತ್ತಾ, ಕಿತ್ತಿಸಿದ ಕಮಲದಂತೆ ಪರಮ ದೀನನಾಗುವನು.

೩೯. ಶಾಸ್ತ್ರ ಸಂಸ್ಕಾರವನ್ನು ಪಡೆಯದ ಬುದ್ಧಿಯುಳ್ಳವನಾಗಿ, ಅಸಜ್ಜನರೊಡನೆಯೇ ವರ್ತಿಸುವವನಾಗಿ, ಬೆಂಕಿಯಲ್ಲಿ ಬಿದ್ದವನಂತೆ, ಮರಣಕಾಲದಲ್ಲಿ ಅಂತರ್ದಾಹವನ್ನು ಅನುಭವಿಸುವನು.

೪೦. ಗಂಟಲಿನಲ್ಲಿ ಗರಗರ ಎನ್ನುತ್ತ, ಕಣ್ಣಿನ ದೃಷ್ಟಿಯು ಕೆಟ್ಟುಹೋಗಿ, ಈ ಅವಿವೇಕಿಯು ದೀನನಾಗುವನು.

೪೧. ಕತ್ತಲುಕವಿದು ಏನೂ ಕಾಣದಾಗುವುದು: ಹಗಲಿನಲ್ಲಿಯೇ ನಕ್ಷತ್ರಗಳು ಕಾಣಿಸುವುವು. ದಿಕ್ಕು ದಿಕ್ಕುಗಳಲ್ಲೆಲ್ಲಾ ಮೋಡಗಳು ಕವಿದಂತಿರುವುವು. ಮೋಡಗಳಿಂದ ಆಕಾಶವೇ ಕಪ್ಪು ಹಿಡಿದಂತಾಗಿರುವುದು.

೪೨–೪೩. ಮರ್ಮವೇದನಗಳಿಂದ ಕೊಯ್ದಂತಾಗುತ್ತಿರುವುದು. ಕಣ್ಣು ನೆಲೆಗಾಣದೆ ಅಲೆಯುತ್ತಿರುವುದು. ನೆಲವು ಆಕಾಶವಾಗಿಯೂ ಆಕಾಶವು ನೆಲವಾಗಿಯೂ ಕಾಣುವುದು. ದಿಕ್ಚಕ್ರವು ಸುತ್ತುತ್ತಿರುವಂತಿರುವುದು: ಸಾಗರ

ಪರಿವೃತ್ತಕಕುಪ್ ಚಕ್ರ ಉಹ್ಯಮಾನ ಇವಾರ್ಣವೇ|
ನೀಯಮಾನ ಇವಾಕಾಶೇ ಘನನಿದ್ರೋನ್ಮುಖಾಶಯಃ || ೪೩ ||

ಅಂಧಕೂಪ ಇವಾಪನ್ನಃ ಶಿಲಾಂತರಿವ ಯೋಜಿತಃ |
ಸ್ವಯಂ ಜಡೀಭವದ್ವರ್ಣೋ ವಿನಿಕೃತ್ತ ಇವಾಶಯೇ || ೪೪ ||

ಪತತೀವ ನಭೋಮಾರ್ಗಾತ್ ತೃಣಾವರ್ತ ಇವಾರ್ಪಿತಃ |
ರಥೇ ದ್ರುತ ಇವಾರೂಢೋ ಹಿಮವದ್ಗಲನೋನ್ಮುಖಃ || ೪೫ ||

ವ್ಯಾಕುರ್ವನ್ನಿವ ಸಂಸಾರಂ ಬಾಂಧವಾನಸ್ಪೃಶನ್ನಿವ |
ಭ್ರಮಿತಕ್ಷೇಪಣೇನೇವ ವಾತಯಂತ್ರ ಇವಾಸ್ಥಿತಃ || ೪೬ ||

ದಲ್ಲಿ ಕೊಚ್ಚಿ ಹೋದಂತಿರುವುದು ; ಆಕಾಶದಲ್ಲಿ ಹೊತ್ತುಕೊಂಡು ಹೋದಂತಿರುವುದು. ಘನ ನಿದ್ರೆಯನ್ನು ಮಾಡಬೇಕೆನ್ನಿಸುವುದು.

೪೪. ಪಾಳು ಬಾವಿಗೆ ಬಿದ್ದವನಂತೆಯೂ, ಬಂಡೆಗಳ ನಡುವೆ ಸೇರಿ ಹೋದವನಂತೆಯೂ, ತಾನೇ ಜಡನಾದಂತೆಯೂ, ಹೊಟ್ಟೆಯಲ್ಲಿ ತಿವಿಸಿಕೊಂಡವನಂತೆಯೂ ಆಗುವನು.

(ತನ್ನ ದುಃಖವನ್ನು ಹೇಳಿಕೊಳ್ಳಬೇಕೆಂದು ಆಶೆಯಿದ್ದರೂ ಕೈಲಾಗದವನು ಜಡ. ತಾ.ಪ್ರ.)

೪೫: ಆಕಾಶಮಾರ್ಗದಿಂದ ಬಿದ್ದವನಂತೆಯೂ, ಬಿರುಗಾಳಿಗೆ ಸಿಕ್ಕಿದ ಹುಲ್ಲಿನಂತೆಯೂ, ವೇಗವಾಗಿ ಓಡುತ್ತಿರುವ ರಥದಲ್ಲಿ ಕುಳಿತವನಂತೆಯೂ, ಆಲಿಕಲ್ಲಿನಂತೆ ತಾನು ಕರಗಿ ಹೋಗುತ್ತಿರುವಂತೆಯೂ ಆಗುವುದು.

೪೬. ಸಂಸಾರದ ದುಃಖಗಳನ್ನೆಲ್ಲಾ ಮತ್ತೆಮತ್ತೆ ಯೋಚಿಸುತ್ತ, ಬಾಂಧವರನ್ನು ಮುಟ್ಟಬೇಕೆಂದಿದ್ದರೂ ಮುಟ್ಟಲಾರದೆ, ಕವಣೆಯಲ್ಲಿಟ್ಟು ತಿರುಗಿಸಿ ಹೊಡೆದ ಕಲ್ಲಿನಂತೆಯೂ, ಗಾಳಿಯಿಂದ ತಿರುಗುವ ಯಂತ್ರದಂತೆಯೂ ಅಸ್ಥಿರನಾಗುವನು.

ಭ್ರಮಿತೋ ಹಿ ಭ್ರಮ ಇವ ಕೃಷ್ಟೋ ರಶನಯೇವ ವಾ |
ಭ್ರಮನ್ನಿವ ಜಲಾವರ್ತೇ ವಸ್ತ್ರಯಂತ್ರ ಇವಾರ್ಪಿತಃ || ೪೭ ||

ಪ್ರೋಹ್ಯಮಾನಸ್ತೃಣಮಿವ ವಹತ್ಪರ್ಜನ್ಯಮಾರುತೇ |
ಆರುಹ್ಯ ವಾರಿಪೂರೇಣ ನಿಪತನ್ನಿವ ಚಾರ್ಣವೇ || ೪೮ ||

ಅನಂತಗಗನೇ ಶ್ವಭ್ರೇ ಚಕ್ರಾವರ್ತೇ ಪತನ್ನಿವ |
ಅಬ್ಧಿರುರ್ವೀವಿಪರ್ಯಾಸದಶಾಮನುಭವನ್ ಸ್ಥಿತಃ || ೪೯ ||

ಪತನ್ನಿವಾನವರತಂ ಪ್ರೋತ್ಪತನ್ನಿವ ಚಾಭಿತಃ |
ಸೂತ್ಕಾರಾಕರ್ಣನೋದ್ಭ್ರಾಂತ ಪೂರ್ಣ ಸರ್ವೇಂದ್ರಿಯವ್ರಜಃ || ೫೦ ||

ಕ್ರಮಾತ್ ಶ್ಯಾಮಲತಾಂ ಯಾಂತೇ ತಸ್ಯ ಸರ್ವಾಕ್ಷಸಂವಿದಃ |
ಯಥಾಸ್ತಂ ಗಚ್ಛತಿ ರವೌ ಮಂದಾಲೋಕತಯಾ ದಿಶಃ || ೫೧ ||

ಪೂರ್ವಾಪರಂ ನ ಜಾನಾತಿ ಸ್ಮೃತಿಸ್ತಾನವಮಾಗತಾ |
ಯಥಾ ಪಾಶ್ಚಾತ್ಯ ಸಂಧ್ಯಾಂತೇ ನಷ್ಟಾ ದೃಷ್ಟಿರ್ದಿಗಷ್ಟಕೇ || ೫೨ ||

ಮನಃ ಕಲ್ಪನಸಾಮರ್ಥ್ಯಂ ತ್ಯಜತ್ಯಸ್ಯ ವಿಮೋಹತಃ |
ಅವಿವೇಕೇನ ತೇನಾಸೌ ಮಹಾಮೋಹೇ ನಿಮಜ್ಜತಿ || ೫೩ ||

---

೪೭. ಭ್ರಮಿಯಂತ್ರದಲ್ಲಿಟ್ಟು ತಿರುಗಿಸಿದಂತೆ, ಹಗ್ಗಹಾಕಿ ಎಳೆದಂತೆ, ಸುಳಿಗೆಸಿಕ್ಕಿ ತಿರುಗುವನಂತೆ, ಶಸ್ತ್ರಯಂತ್ರದಲ್ಲಿ ಸಿಕ್ಕಿಕೊಂಡವನಂತೆ ಆಗುವನು.

೪೮-೪೯. ಓಡುತ್ತಿರುವ ಮಳೆಗಾಳಿಗೆ ಸಿಕ್ಕಿ ಸಮುದ್ರದ ಪಾಲಾದವನಂತೆ, ಭೂಮಿಯನ್ನು ತಲೆಕೆಳಗೆ ಮಾಡಿದರೆ ಸಮುದ್ರವು ಅನಂತಾಕಾಶ ಕೋಟರದೊಳಗೆ ಸುರಿಯುತ್ತಿರುವುದನ್ನು ಕಂಡವನಂತೆಯೂ ಆಗಿ ಒದ್ದಾಡುವನು.

೫೦-೫೧. ಒಂದೇ ಸಮನಾಗಿ ಕೆಳಕ್ಕೆ ಬೀಳುತ್ತಿರುವಂತೆಯೂ, ಸುತ್ತಮುತ್ತಲೂ ಹಾರಿಹಾರಿ ಬೀಳುತ್ತಿರುವಂತೆಯೂ, ಸೂತ್ಕಾರವನ್ನು ಕೇಳಿ— ಉದ್ಭ್ರಾಂತವಾಗಿರುವ ಸರ್ವೇಂದ್ರಿಯಗಳುಳ್ಳವನಾಗುವನು. ಕ್ರಮವಾಗಿ ದೇಹವೆಲ್ಲ ಕಪ್ಪಾಗುತ್ತಾ ಬರುವುದು. ಸೂರ್ಯನು ಮುಳುಗುತ್ತಲೂ ಬೆಳಕಿಲ್ಲದೆ ದಿಕ್ಕುಗಳೆಲ್ಲ ಕಪ್ಪಾಗುವಂತೆ ಆಗುವುದು.

೫೨-೫೩. ಅವನಿಗೆ ಸ್ಮೃತಿಯು ಮಂದವಾಗುತ್ತ ಬಂದು ಪೂರ್ವಾಪರಗಳು ತೋರದೆ ಹೋಗುವುದು. ಪಶ್ಚಿಮ ಸಂಧ್ಯೆಯ ಹೊತ್ತಿನಲ್ಲಿ ದೃಷ್ಟಿಯು ಎಂಟು

ಯದೈವಾಮೋಹಮಾದತ್ತೇ ನಾದತ್ತೇ ಪವನಸ್ತದಾ |
ನತ್ವಾದತ್ತೇ ಯದಾ ಪ್ರಾಣಾನ್ಮೋಹಮಾಯಾತ್ಯಲಂ ತದಾ || ೫೪ ||

ಅನ್ಯೋನ್ಯಪುಷ್ಟತಾಂ ಯಾತೈರ್ಮೋಹಸಂವೇದನಭ್ರಮೈಃ |
ಜಂತುಃ ಪಾಷಾಣತಾಮೇತಿ ಸ್ಥಿತಮಿತ್ಯಾದಿಸರ್ಗತಃ || ೫೫ ||

ಪ್ರಬುದ್ಧ ಲೀಲೋವಾಚ—

ವ್ಯಥಾಂ ವಿಮೋಹಂ ಮೂರ್ಛಾಂತಂ ಭ್ರಮಂ ವ್ಯಾಧಿಮಚೇತನಂ |
ಕಿಮರ್ಥಮಯಮಾಯಾತಿ ದೇಹೋ ಹ್ಯಷ್ಟಾಂಗವಾನಪಿ || ೫೬ ||

ಶ್ರೀ ದೇವ್ಯುವಾಚ :—

ಏವಂ ಸಂವಿಹಿತಂ ಕರ್ಮ ಸರ್ಗಾದೌ ಸ್ಪಂದಸಂವಿದಾ |
ಯದ್ಯಸ್ಮಿನ್ ಸಮಯೇ ದುಃಖಂ ಕಾಲೇನೈತಾವತೇದೃಶಂ || ೫೭ ||

ದಿಕ್ಕೂ ಕಾಣದೆ ಹೋದಂತಾಗುವುದು. ಇಂತಹ ವಿಮೋಹದಿಂದ ಮನಸ್ಸು ಕಲ್ಪನಾ ಸಾಮರ್ಥ್ಯವನ್ನೂ ಕಳೆದುಕೊಳ್ಳುವುದು. ಅವಿವೇಕ ಈ ಮೂರ್ಖನು ಮಹಾಮೋಹದಲ್ಲಿ ಬೀಳುವನು.

೫೪. ಯಾವಾಗ ಆ ಮಹಾಮೋಹವು ಬರುವುದೋ ಆಗ ಪ್ರಾಣವು ಸ್ಥಲವನ್ನು ಬಿಡುವುದು. ಪ್ರಾಣವು ಸ್ಥಲವನ್ನು ಬಿಡುತ್ತಲೂ ಮೋಹವು ತಾನೇ ತಾನಾಗುವುದು.

೫೫. ಹೀಗೆ, ಮೋಹ (ಮೂರ್ಛೆ) ಭ್ರಮ ಇವುಗಳೆಲ್ಲ ಒಂದಕ್ಕೊಂದು ಬಲವಾಗಿ ತಾವೇ ತಾವಾಗಲು, ಜಂತುವು ಪಾಷಾಣದಂತೆ ಸ್ಥಿರನಾಗುವನು. ಇದೇ ಸರ್ಗದ ಆದಿಯಿಂದ ಬಂದಿರುವ ನಿಯತಿಯು.

೫೬. ಪ್ರಬುದ್ಧಲೀಲೆಯು ಹೇಳಿದಳು :—ವ್ಯಥೆಯನ್ನೂ ವಿಮೋಹವನ್ನೂ ಮೂರ್ಛೆಯನ್ನೂ ಭ್ರಮವನ್ನೂ ವ್ಯಾಧಿಯನ್ನೂ ಅವಿಚೇತನತೆಯನ್ನೂ ದೇಹವು ತಾನು ಅಷ್ಟಾಂಗವಾಗಿದ್ದರೂ ಹೊಂದುವುದಲ್ಲ ಅದೇಕೆ ?

(ಶಿರಃ, ಪಾಣಿ, ಪಾದ, ಗುಹ್ಯ, ನಾಭಿ, ಹೃದಯಾನ್ಯಷ್ಟಾಂಗಾನಿ — ತಾ. ಪ್ರ.)

೫೭-೮. ಶ್ರೀದೇವಿಯು ಹೇಳಿದಳು :—ಸರ್ಗಾದಿಯಲ್ಲಿ ಕ್ರಿಯಾಶಕ್ತಿ

ಸ್ಯಾನ್ಮೇ ಇತ್ಯೇವ ಸಂವಿಶ್ಯ ಗುಲ್ಮವತ್ತತ್ಸ್ವಭಾವಜಂ |
ವೇತ್ತಿ ಚಿತ್ತವಿಜೃಂಭೋತ್ಥಂ ನಾನ್ಯದತ್ರಾಸ್ತಿ ಕಾರಣಂ || ೫೮ ||

ಯದಾ ವ್ಯಥಾವಶಾನ್ನಾಡ್ಯಃ ಸ್ವಸಂಕೋಚವಿಕಾಸನೈಃ |
ಗೃಹ್ಣಂತಿ ಮಾರುತೋ ದೇಹೇ ತದೋಜ್ಝತಿ ನಿಜಾಂ ಸ್ಥಿತಿಂ || ೫೯ ||

ಪ್ರವಿಷ್ಟಾ ನ ವಿನಿರ್ಯಾಂತಿ ಗತಾಃ ಸಂಪ್ರವಿಶಂತಿ ನೋ |
ಯದಾ ವಾತಾ ವಿನಾಡೀತ್ವಾತ್ತದಾ ಸ್ಪಂದಾತ್ ಸ್ಮೃತಿರ್ಭವೇತ್ || ೬೦ ||

ನ ವಿಶತ್ಯೇವ ವಾತೋ ನ ನಿರ್ಯಾತಿ ಪವನೋ ಯದಾ |
ಶರೀರನಾಡೀವೈಧುರ್ಯಾನ್ಮೃತ ಇತ್ಯುಚ್ಯತೇ ತದಾ || ೬೧ ||

ಆಗಂತವ್ಯೋ ಮಯಾ ನಾಶಃ ಕಾಲೇನೈತಾವತೇತಿ ಯಾ |
ಪೂರ್ವಸಂವಿದಿತಾ ಸಂವಿದ್ಯಾತಿ ತಜ್ಜ್ಯೋದಿತಾ ಮೃತಿಂ || ೬೨ ||

ಸ್ವರೂಪನಾದ ಜೀವನು ಇಂತಿಂತಹ ಸಮಯದಲ್ಲಿ ಈಯೀ ದುಃಖವು ಇಷ್ಟಿಷ್ಟು ನನಗಾಗಲಿ ಎಂದು ಸಂಕಲ್ಪಮಾಡಿಕೊಂಡು, ಹೊರಡುವನು. ಆಯಾ ಕಾಲಗಳಲ್ಲಿ ತನ್ನ ಚಿತ್ತದಿಂದಲೇ ಹುಟ್ಟಿರುವ ದುಃಖವನ್ನು ಅನುಭವಿಸುವನು. ಅಷ್ಟೇ ಹೊರತು ಇನ್ನು ಯಾವ ಕಾರಣವೂ ಇಲ್ಲ.

೫೯. ವ್ಯಥೆಯಿಂದ ನಾಡಿಗಳು ಸಂಕೋಚ ವಿಕಾಸಗಳನ್ನು ಮಾಡುತ್ತ ವಿಪರೀತವಾಗುವುವೋ ಆಗ ದೇಹದಲ್ಲಿರುವ ಪ್ರಾಣವೂ ತನ್ನ ಸ್ಥಿತಿಯನ್ನು ಬಿಡುವುದು. (ಸ್ವಸ್ಥಾನದಿಂದ ಚಲಿಸುವುದು.)

೬೦. ಹೋದ ಉಸಿರು ಹಿಂದಿರುಗುವುದಿಲ್ಲ; ಎಳೆದು ಉಸಿರು ಬಿಡುವುದಿಲ್ಲ. ಹೀಗೆ, ನಾಡಿಗಳ ವ್ಯತ್ಯಾಸದಿಂದ ಆಗಲು, ಅವನು ಇಂದ್ರಿಯ ಜ್ಞಾನ ಶೂನ್ಯನಾಗುವನು.

೬೧. ಗಾಳಿಯು (ಉಸಿರು) ಒಳಕ್ಕೆ ಹೋಗದೆ ಹೊರಕ್ಕೆ ಬರದೆ, ಶರೀರ ನಾಡಿಗಳ ವ್ಯತ್ಯಾಸದಿಂದ, ನಿಂತು ಹೋಗುವುದೋ ಆಗ ಮರಣವು ಬಂತು ಎನ್ನುವರು.

೬೨. ಇಂತಿಷ್ಟು ಕಾಲಕ್ಕೆ ನನಗೆ ನಾಶವಾಗಬೇಕು ಎಂದು ಮೊದಲೇ ಸಂವಿತ್ತು ಗೊತ್ತುಮಾಡಿಕೊಂಡಿರುವುದು. ಅದರಂತೆಯೆ ಮರಣವಾಯಿತೆಂಬ ಸಂವಿತ್ತೂ ಬರುವುದು.

ಈದೃಶೇನ ಮಯೇಹೇತ್ಥಂ ಭಾವ್ಯಮುತ್ಯಾದಿ ಸರ್ಗಜಾ |
ಸಂವಿದ್ಬೀಜಕಲಾ ನಾಶಂ ನ ಕದಾಚನ ಗಚ್ಛತಿ || ೬೩ ||

ಸಂವಿದೋ ವೇದನಂ ನಾಮ ಸ್ವಭಾವೋ ವ್ಯತಿರೇಕವಾನ್ |
ತಸ್ಮಾತ್ಸ್ವಭಾವಸಂವಿತ್ತೇರ್ನಾನ್ಯೇ ಮರಣಜನ್ಮನೀ || ೬೪ ||

ಕ್ವಚಿದಾವೃತಿಮತ್ಸೌಮ್ಯಂ ಕ್ವಚಿನ್ನದ್ಯಾಂ ಜಲಂ ಯಥಾ |
ಕ್ವಚಿತ್ಸೌಮ್ಯಂ ಕ್ವಚಿಜ್ಜೀವಧರ್ಮೇದಂ ಚೇತನಂ ತಥಾ || ೬೫ ||

ಯಥಾ ಲತಾಯಾಃ ಪರ್ವಾಣಿ ದೀರ್ಘಾಯಾ ಮಧ್ಯಮಧ್ಯತಃ |
ತಥಾ ಚೇತನಸತ್ತಾಯಾ ಜನ್ಮಾನಿ ಮರಣಾನಿ ಚ || ೬೬ ||

ನ ಜಾಯತೇ ನ ಮ್ರಿಯತೇ ಚೇತನಃ ಪುರುಷಃ ಕ್ವಚಿತ್ |
ಸ್ವಪ್ನಸಂಭ್ರಮವದ್ಭ್ರಾಂತಮೇತತ್ಪಶ್ಯತಿ ಕೇವಲಂ || ೬೭ ||

---

೬೩. ನಾನು ಈಯೀ ರೂಪವಾಗಿ ಇಲ್ಲಿ ಹುಟ್ಟಬೇಕು ಎಂದು ಮೊದಲಾಗಿ ಸರ್ಗಕಾಲದಲ್ಲಿ ಮಾಡಿದ್ದ ಬೀಜಸಂಕಲ್ಪವು ಎಂದಿಗೂ ನಾಶವಾಗುವುದಿಲ್ಲ.

೬೪. ಸಂವಿತ್ತೇ ವೇದನವು. ಆದೇ ಸ್ವಭಾವವು. ಅದು ಯಾವಾಗಲೂ ಬದಲಾಯಿಸುವುದಿಲ್ಲ. ಅದರಿಂದ ಸ್ವಭಾವ ಸಂವಿತ್ತಿಗೆ ಬೇರೆ ಕಾರಣಗಳಿಂದ, ಮರಣ ಜನ್ಮಗಳಿಲ್ಲ.

೬೫. ನದೀಜಲವು ಕೆಲವೆಡೆಗಳಲ್ಲಿ ಸುಳಿಯಾಗಿ ತಿರುಗಿ, ಇನ್ನು ಕೆಲವೆಡೆ ಸೌಮ್ಯವಾಗಿ ಹರಿದು, ಹೋಗುವಂತೆ, ಚೇತನವು ಜೀವಧರ್ಮದಿಂದ ಒಂ ದೊಂದು ಸಲ ಸೌಮ್ಯವಾಗಿ, (ಇನ್ನೊಂದು ಸಲ ಅತಥಾ ಆಗಿ) ಇರುವುದು.

೬೬. ಉದ್ದವಾಗಿರುವ ಬಳ್ಳಿಯಲ್ಲಿ ಹೇಗೆ ನಡು ನಡುವೆ ಪರ್ವಗಳು ಇದ್ದೇ ಇರುವುವೋ ಹಾಗೆಯೇ ಚೇತನ ಸತ್ತೆಯಲ್ಲಿ ಜನ್ಮಗಳೂ ಮರಣಗಳೂ ಇದ್ದೇ ಇರುವುವು.

೬೭. ಚೇತನನಾದ ಪುರುಷನು ಯಾವಾಗಲೂ ಹುಟ್ಟುವುದೂ ಇಲ್ಲ. ಸಾಯುವುದೂ ಇಲ್ಲ, ಸ್ವಪ್ನ ಸಂಭ್ರಮದಂತೆ ಇರುವ ಈ ಜನನ ಮರಣ ಗಳನ್ನು ನೋಡುತ್ತಿರುವನು.

ಪುರುಷಶ್ಚೇತನಾಮಾತ್ರಂ ಸ ಕದಾ ಕ್ವೇವ ನಶ್ಯತಿ |
ಚೇತನವ್ಯತಿರಿಕ್ತತ್ವೇ ವದಾನ್ಯತ್ಕಿಂ ಪುಮಾನ್ಭವೇತ್ || ೬೮ ||

ಕೋಽದ್ಯಯಾವನ್ಮೃತಂ ಬ್ರೂಹಿ ಚೇತನಂ ಕಸ್ಯ ಕಿಂ ಕಥಂ |
ಮ್ರಿಯಂತೇ ದೇಹಲಕ್ಷಾಣಿ ಚೇತನಂ ಸ್ಥಿತಮಕ್ಷಯಂ || ೬೯ ||

ಅಮರಿಷ್ಯನ್ನ ವೈ ಚಿತ್ತಮೇಕಸ್ಮಿನ್ನೇವ ತನ್ಮೃತೇ |
ಅಭವಿಷ್ಯತ್ ಸರ್ವಭಾವವ್ಯತಿರೇಕವ್ಯತಾವಿಹ || ೭೦ ||

ವಾಸನಾಮಾತ್ರವೈಚಿತ್ರ್ಯಂ ಯಜ್ಜೀವೋಽನುಭವೇತ್ಸ್ವಯಂ |
ತಸ್ಯೈವ ಜೀವಮರಣೇ ನಾಮನೀ ಪರಿಕಲ್ಪಿತೇ || ೭೧ ||

ಏವಂ ನ ಕಶ್ಚಿ ಮ್ರಿಯತೇ ಜಾಯತೇ ನ ಚ ಕಶ್ಚನ |
ವಾಸನಾವರ್ತಗರ್ತೇಷು ಜೀವೋ ಲುಠತಿ ಕೇವಲಂ || ೭೨ ||

---

೬೮. ಪುರುಷನೆಂದರೆ ಕೇವಲ ಚೇತನವು. ಆ ಚೇತನವದೆಂತು ಎಲ್ಲಿ ನಾಶವಾಗುವುದು ? ಚೇತನವಲ್ಲದ ಇನ್ನೇನು ಮನುಷ್ಯನಾಗುವುದು ಹೇಳು.

೬೯. ಇಲ್ಲಿನವರೆಗೆ ಚೇತನವು ಮೃತವಾಯಿತು ಎನ್ನುವುದಕ್ಕೆ ಯಾರು ಸಾಕ್ಷಿ ? ಯಾರ ಚೇತನವು ಹೇಗೆ ಏತಕ್ಕೆ ಮೃತವಾಯಿತು ? ಲಕ್ಷಾಂತರ ದೇಹಗಳು ಮೃತವಾದವು. ಆದರೂ ಚೇತನವು ಮಾತ್ರ ಅಕ್ಷಯವಾಗಿ ಇದ್ದೇ ಇರುವುದು.

೭೦. (ಹಾಗಲ್ಲದೆ) ಯಾವನಾದರೊಬ್ಬನು ಸತ್ತರೆ, ಆ ಚೇತನವೂ ಸಾಯಬೇಕು. (ಎಂದರೆ) ಅದರ ಜೊತೆಯಲ್ಲಿಯೇ ಇದ್ದ ಬಿದ್ದುದೆಲ್ಲ ; ಸರ್ವಭಾವಗಳೂ ಮೃತವಾಗಬೇಕು

(ಚೇತನವು ದೇಹದೇಹಕ್ಕೂ ಭಿನ್ನಯಿಸುವುದಿಲ್ಲ: ಏಕೋ ದೇವಃ ಸರ್ವಭೂತೇಷು ಗೂಢಃ ಇತ್ಯಾದಿ ಶ್ರುತಿಗಳನ್ನು ಹಿಡಿದುಹೇಳಿರುವ ಮಾತಿದು.)

೭೧. (ಅದರಿಂದ) ಜೀವನು ವಾಸನಾಮಾತ್ರವೈಚಿತ್ರ್ಯದಿಂದ ತಾನೇ ತನ್ನಲ್ಲಿಯೇ ಅನುಭವಿಸಿಕೊಳ್ಳುವ ಬೇರೆ ಬೇರೆ ಭಾವಗಳೇ ಜನನ ಮರಣಗಳೆನ್ನಿಸಿಕೊಳ್ಳುವುವು.

೭೨. (ಅದರಿಂದ) ಯಾರೂ ಹುಟ್ಟುವುದಿಲ್ಲ : ಸಾಯುವುದಿಲ್ಲ. ಜನನ

ಅತ್ಯಂತಾಸಂಭವಾದೇವ ದೃಶ್ಯಸ್ಯಾಸೌ ಚ ವಾಸನಾ |
ನಾಸ್ತ್ಯೇವೇತಿ ವಿಚಾರೇಣ ದೃಢಜ್ಞಾತ್ಯೈವ ನಶ್ಯತಿ || ೭೩ ||

ಅನುದಿತಮುದಿತಂ ಜಗತ್ಪ್ರಬಂಧಂ
ಭವಭಯತೋಽಭ್ಯಸನೈರ್ವಿಲೋಕ್ಯ ಸಮ್ಯಕ್ |
ಅಲಮನುದಿತವಾಸನೋ ಹಿ ಜೀವೋ
ಭವತಿ ವಿಮುಕ್ತ ಇತೀಹ ಸತ್ಯವಸ್ತು || ೭೪ ||

ಇತ್ಯಾರ್ಷೇ ಶ್ರೀವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
" ಮರಣವಿಚಾರೋ ನಾಮ " ನಾಮ ಚತುಷ್ಪಂಚಾಶಃ ಸರ್ಗಃ

ಮರಣ ವಾಸನಾ ರೂಪವಾದ ಹಳ್ಳಗಳಲ್ಲಿ ಜೀವನು ಬಿದ್ದು ಒದ್ದಾಡುತ್ತಿರುವನು. ಅಷ್ಟೇ !

೭೩. ಆದರಿಂದ ಈ ದೃಶ್ಯವು ಅತ್ಯಂತಾಸಂಭವವೆಂಬುದರಿಂದ, ಈ ವಿಚಾರ ಪೂರ್ವಕವಾಗಿ ಈ ದೃಶ್ಯವಾದ ಈ ಜಗತ್ತು ಇಲ್ಲವೆಂದು ದೃಢವಾಗಿ ತಿಳಿದುದೇ ಆದರೆ, ಈ ಜಗದ್ವಾಸನೆಯೂ ಇಲ್ಲವಾಗುವುದು.

೭೪. ಈ ಜಗತ್ತೆಂಬ ಈ ದೊಡ್ಡ ಬಂಧವು ಅನುದಿತವೇ ಆಗಿದ್ದರೂ ಉದಿತವಾದಂತೆ ಉಂಟು. ಇದನ್ನು ಕಂಡು ಹೆದರಿದವನು ಅಭ್ಯಾಸಮಾಡಿ ಚೆನ್ನಾಗಿ ವಿಚಾರ ಮಾಡಿ ನೋಡಿದರೆ, ವಾಸನಾಬಲದಿಂದ ಜೀವನಾಗಿದ್ದವನು ತನ್ನ ವಾಸನೆಯ ತಿರೋಧಾನದಿಂದ ತನ್ನ ಜೀವತ್ವವನ್ನು ಕಳೆದುಕೊಂಡು ವಿಮುಕ್ತನಾಗುವನು. (ಜಗತ್ತು ನಿಶ್ಶೇಷವಾದಾಗ ಉಳಿಯುವ) ಸತ್ಯ ವಸ್ತುವೇ ಅವನಾಗುವನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ " ಮರಣವಿಚಾರ ವರ್ಣನ " ಎಂಬ
ಐವತ್ತನಾಲ್ಕನೆಯ ಸರ್ಗವು.

ಪಂಚಪಂಚಾಶಃ ಸರ್ಗಃ

ಪ್ರಬುದ್ಧಲೀಲೋವಾಚ :—

ಯಥೈವ ಜಂತುರ್ಮ್ರಿಯತೇ ಜಾಯತೇ ಚ ಯಥಾ ಪುನಃ |
ತನ್ಮೇ ಕಥಯ ದೇವೇಶಿ ಪುನರ್ಬೋಧವಿವೃದ್ಧಯೇ || ೧ ||

ಶ್ರೀದೇವ್ಯುವಾಚ :—

ನಾಡೀಪ್ರವಾಹೇ ವಿಧುರೇ ಯಥಾ ವಾತವಿಸಂಸ್ಥಿತಂ |
ಜಂತುಃ ಪ್ರಾಪ್ನೋತಿ ಹಿ ತದಾ ಶಾಮ್ಯತೀವಾಸ್ಯ ಚೇತನಾ || ೨ ||

ಶುದ್ಧಂ ಹಿ ಚೇತನಂ ನಿತ್ಯಂ ನೋದೇತಿ ನಚ ಶ್ಯಾಮತಿ |
ಸ್ಥಾವರೇ ಜಂಗಮೇ ವ್ಯೋಮ್ನಿ ಶೈಲೇಽಗ್ನೌ ಪವನೇ ಸ್ಥಿತಂ || ೩ ||

ಐವತ್ತೈದನೆಯ ಸರ್ಗ

೧. ಪ್ರಬುದ್ಧಲೀಲೆಯು ಹೇಳಿದಳು :—ಜಂತುವು ಸಾಯುವುದು ಹೇಗೆ? ಮತ್ತೆ ಹುಟ್ಟುವುದೆಂತು? ಅದನ್ನು ಎಲೆ ದೇವೇಶಿಯೆ, ನನಗೆ ಹೇಳು, ನನ್ನ ಜ್ಞಾನವು ಅಭಿವೃದ್ಧಿಯಾಗಲಿ.

೨. ಶ್ರೀದೇವಿಯು ಹೇಳಿದಳು:—ನಾಡೀ ಮಂಡಲವು ಕಳೆಗೆಟ್ಟು, ಪ್ರಾಣ ವಾಯುವು ತನ್ನ ಚಲನವನ್ನು ಬಿಟ್ಟು ಸ್ಥಿರವಾಗಿ ನಿಂತಾಗ ಜಂತುವಿಗೆ ಮರಣ ವಾಗುವುದು ಆಗ ಅವನ ಚೇತನವು ಸ್ಥಾನವನ್ನು ಬಿಡುವುದು.

(ಏತೇಭ್ಯೋ ಭೂತೇಭ್ಯಃ ಸಮುತ್ಥಾಯ ತಾನ್ಯೇವಾನು ವಿನಶ್ಯತಿ ನಪ್ರೇತ್ಯ ಸಂಜ್ಞಾಸ್ತಿ || ಇತಿಶ್ರುತೇಃ ಇತಿಭಾವಃ—ತಾ. ಪ್ರ.)

೩. ಸ್ಥಾವರಜಂಗಮಗಳಲ್ಲಿಯೇ ವ್ಯೋಮಶೈಲ ಪವನಗಳಲ್ಲಾಗಲೀ ಚೇತನವು ಎಲ್ಲೇ ಇರಲಿ ಅದು ಶುದ್ಧವಾಗಿಯೂ ನಿತ್ಯವಾಗಿಯೂ ಇರುವುದು. ಅದು ಹುಟ್ಟುವುದೂ ಇಲ್ಲ: ಸಾಯುವುದೂ ಇಲ್ಲ.

(ಅವಿನಾಶೀವಾ ಅರೇ ಅಯಮಾತ್ಮಾ ಅನುಚ್ಛಿತ್ತಿಧರ್ಮಾ ಇತಿ ಶ್ರುತೇಃ ಇತಿಭಾವಃ—ತಾ. ಪ್ರ.)

ಕೇವಲಂ ವಾತಸಂರೋಧಾದ್ಯದಾ ಸ್ಪಂದಃ ಪ್ರಶಾಮ್ಯತಿ |
ಮೃತ ಇತ್ಯುಚ್ಯತೇ ದೇಹಸ್ತದಾಸೌ ಜಡನಾಮಕಃ || ೪ ||

ತಸ್ಮಿನ್ದೇಹೇ ಶವೀಭೂತೇ ವಾತೇ ಚಾನಿಲತಾಂ ಗತೇ |
ಚೇತನಂ ವಾಸನಾಮುಕ್ತಂ ಸ್ವಾತ್ಮತತ್ತ್ವೇಽವತಿಷ್ಠತಿ || ೫ ||

ಜೀವ ಇತ್ಯುಚ್ಯತೇ ತಸ್ಯ ನಾಮಾಣೋರ್ವಾಸನಾವತಃ |
ತತ್ರೈವಾಸ್ತೇ ಸ ಚ ಶವಗಾರೇ ಗಗನಕೇ ತಥಾ || ೬ ||

ತತೋಽಸೌ ಪ್ರೇತಶಬ್ದೇನ ಪ್ರೋಚ್ಯತೇ ವ್ಯವಹಾರಿಭಿಃ |
ಚೇತನಂ ವಾಸನಾಮಿಶ್ರಮಾಮೋದಾನಿಲವತ್ ಸ್ಥಿತಂ || ೭ ||

ಇದಂ ದೃಶ್ಯಂ ಪರಿತ್ಯಜ್ಯ ಯದಾಸ್ತೇ ದರ್ಶನಾಂತರೇ |
ಸ ಸ್ವಪ್ನ ಇವ ಸಂಕಲ್ಪ ಇವ ನಾನಾಕೃತಿಸ್ತದಾ || ೮ ||

---

೪. ಶರೀರದಲ್ಲಿರುವ ಪ್ರಾಣಾದಿವಾಯುಗಳು ತಡೆಯನ್ನು ಹೊಂದಿ ಯಾವಾಗ ನಿಶ್ಚಲವಾಗುವುದೋ ಆಗ ದೇಹವು ಮೃತವಾಯಿತು ಎನ್ನುವರು. ಆಗ ಅದು ಜಡವೆನ್ನಿಸಿಕೊಳ್ಳುವುದು.

೫. ವಾತ(ಶರೀರದ ಪ್ರಾಣವಾಯು)ವು ಅನಿಲ (ಮಹಾವಾಯು) ನಲ್ಲಿ ಸೇರಿ ಹೋಗಲು. ದೇಹವು ಶವವಾಗುವುದು : ಚೇತನವು ವಾಸನಾಮುಕ್ತವಾಗುವುದು: ತನ್ನ ಆತ್ಮ ತತ್ವದಲ್ಲಿ ನಿಲ್ಲುವುದು.

(ಅಥಾಽಸ್ಯ ಪ್ರಯತಃ ವಾಂಗ್ಮನಸಿ ಸಂಪದ್ಯತೇ, ಮನಃ ಪ್ರಾಣೇ, ಪ್ರಾಣಸ್ತೇಜಸಿ, ತೇಜಃ ಪರಸ್ಯಾಂ ದೇವತಾಯಾಂ ಇತಿಶ್ರುತಿಃ)

೬. ವಾಸನಾ ವಿಶಿಷ್ಟವಾಗಿರುವ ಚಿದಣುವೇ ಜೀವನೆನ್ನಿಸಿಕೊಳ್ಳುವುದು. ಅದು ಶವವಿರುವ ಮನೆಯ ಆಕಾಶದಲ್ಲಿಯೇ ಇರುವುದು.

೭. ವ್ಯವಹಾರವಂತರು ಅದನ್ನು ಪ್ರೇತ ಎನ್ನುವರು. ಆಗ ಅದು ಗಂಧದಿಂದ ಕೂಡಿರುವ ಗಾಳಿಯಂತೆ ವಾಸನಾ ಮಿಶ್ರವಾಗಿರುವುದು.

೮. ಈ ದೃಶ್ಯವನ್ನು ಬಿಟ್ಟು ಇನ್ನೊಂದು ದೃಶ್ಯಾಂತರವನ್ನು ನೋಡುತ್ತಿರವಾಗ, ಅದು ಸ್ವಪ್ನದಂತೆ, ಸಂಕಲ್ಪದಂತೆ ನಾನಾಕೃತಿಯಾಗಿರುವುದು.

ತಸ್ಮಿನ್ನೇವ ಪ್ರದೇಶೇಽಂತಃ ಪೂರ್ವವತ್ ಸ್ಮೃತಿರ್ನಾ ಭವೇತ್ |
ತದೈವ ಮೃತಿಮೂರ್ಚ್ಛಾಂತೆ ಪಶ್ಯತ್ಯನ್ಯಶರೀರಕಂ || ೯ ||

ಆತ್ಮನ್ಯಸ್ತಿ ಘಟಾಪುಷ್ಪಮನ್ಯಸ್ಯ ವ್ಯೋಮ ಕೇವಲಂ |
ಆಕಾಶಭೂತಲೇ ಸಾಕಂ ಸಾಕಾಶ ಶಶಿವಾಸರಂ || ೧೦ ||

ಭವಂತಿ ಷಡ್ವಿಧಾಃ ಪ್ರೇತಾಸ್ತೇಷಾಂ ಭೇದಮಿಮಂ ಶೃಣು |
ಸಾಮಾನ್ಯಪಾಪಿನೋ ಮಧ್ಯಪಾಪಿನಃ ಸ್ಥೂಲಪಾಪಿನಃ || ೧೧ ||

ಸಾಮಾನ್ಯಧರ್ಮಾ ಮಧ್ಯಮಧರ್ಮಾ ಚೋತ್ತಮಧರ್ಮವಾನ್ |
ಏತೇಷಾಂ ಕಸ್ಯಚಿದ್ಭೇದೋ ದ್ವೌ ತ್ರಯೋಽಪ್ಯಥ ಕಸ್ಯಚಿತ್ || ೧೨ ||

ಕಶ್ಚಿನ್ಮಹಾಪಾತಕವಾನ್ವತ್ಸರಂ ಸ್ಮೃತಿಮೂರ್ಚ್ಛನಂ |
ವಿಮೂಢೋಽನುಭವತ್ಯಂತಃ ಪಾಷಾಣಹೃದಯೋಪಮಃ || ೧೩ ||

---

೯. (ಆ ಶವವಿರುವ) ಪ್ರದೇಶದಲ್ಲಿಯೇ ಇರುವ ಜೀವನಿಗೆ ಮೊದಲಿನಂತೆಯೇ ಸ್ಮೃತಿಯಿರುವುದು. ಮೃತಿಸಂಬಂಧವಾದ ಮೂರ್ಛೆಯು ತೀರುತ್ತಿದ್ದ ಹಾಗೆಯೇ ಮತ್ತೊಂದು ಶರೀರವನ್ನು ಪಡೆಯುವನು.

೧೦. ಇತರರಿಗೆ ಕೇವಲ ಆಕಾಶವಾಗಿ ತೋರುತ್ತಿರುವೆಡೆಯಲ್ಲಿಯೇ, ಆಕಾಶ, ಭೂಮಿ, ಚಂದ್ರ ಎಲ್ಲವೂ ಇರುವ ಸಂಪೂರ್ಣ ಪ್ರಪಂಚವೊಂದು ಇದ್ದೇ ಇರುವುದು. (ಆತ್ಮನು ಅನಂತನು ಮಾಯೆಯು ಅಘಟಿವಟನಾ ಸಾಮರ್ಥ್ಯವುಳ್ಳವಳು. ಇವರಿಬ್ಬರ ಯೋಗದಲ್ಲಿ ಏನೇನೂ ಬೇಕಾದರೂ ಆಗುವುದು).

೧೧. ಪ್ರೇತಗಳಲ್ಲಿ ಆರುವಿಧಗಳು : ಸಾಮಾನ್ಯ ಪಾಪಿ, ಮಧ್ಯಮ ಪಾಪಿ, ಸ್ಥೂಲ ಪಾಪಿ,

೧೨. ಸಾಮಾನ್ಯಧರ್ಮ, ಮಧ್ಯಮಧರ್ಮ, ಉತ್ತಮ ಧರ್ಮ, ಎಂದು. ಇವರಲ್ಲಿ ಭೇದಗಳು ಒಂದು, ಎರಡು, ಮೂರು ಕೂಡ ಉಂಟು.

೧೩–೧೪. (ಹೇಗೆಂದರೆ) ಒಬ್ಬನು ಮಹಾಪಾತಕ ಮಾಡಿದವನು ಒಂದು ವರ್ಷ ಸ್ಮೃತಿಯೇ ಇಲ್ಲದೆ ವಿಮೂಢನಾಗಿ ಅರೆಬಂಡೆಯ ಮಧ್ಯದಂತೆ, ಅರಿವೇ

ತತಃ ಕಾಲೇನ ಸಂಬುದ್ಧೋ ವಾಸನಾಜಠರೋದಿತಂ |
ಅನುಭೂಯ ಚಿರಂ ಕಾಲಂ ನಾರಕಂ ದುಃಖಮಕ್ಷಯಂ || ೧೪ ||

ಭುಕ್ತ್ವಾ ಯೋನಿಶತಾನ್ಯುಚ್ಚೈರ್ದುಃಖಾದ್ದುಃಖಾಂತರಂ ಗತಃ |
ಕದಾಚಿಚ್ಛಮಮಾಯಾತಿ ಸಂಸಾರಸ್ವಪ್ನಸಂಭ್ರಮೇ || ೧೫ ||

ಅಥವಾ ಮೃತಿಮೋಹಾಂತೇ ಜಡದುಃಖಶತಾಕುಲಾಂ |
ಕ್ಷಣಾದ್ವೃಕ್ಷಾದಿತಾಮೇವ ಹೃತ್ಸ್ಥಾಮನುಭವಂತಿ ತೇ || ೧೬ ||

ಸ್ವವಾಸನಾನುರೂಪಾಣಿ ದುಃಖಾನಿ ನರ್ಕೇ ಪುನಃ |
ಅನುಭೂಯಾಥ ಯೋನೀಷು ಜಾಯಂತೇ ಭೂತಲೇ ಚಿರಾತ್ || ೧೭ ||

ಅಥ ಮಧ್ಯಮಪಾಪೋ ಯೋ ಮೃತಿಮೋಹಾದನಂತರಂ |
ಸಶಿಲಾಜಠರಂ ಜಾಡ್ಯಂ ಕಂಚಿತ್ಕಾಲಂ ಪ್ರಪಶ್ಯತಿ || ೧೮ ||

ತತಃ ಪ್ರಬುದ್ಧಃ ಕಾಲೇನ ಕೇನಚಿದ್ವಾ ತದೈವ ವಾ |
ತಿರ್ಯಗಾದ್ಯಿಕ್ರಮೈರ್ಭುಕ್ತ್ವಾ ಯೋನೀಃ ಸಂಸಾರಮೇಷ್ಯತಿ || ೧೯ ||

ಇಲ್ಲದೆ ಬಿದ್ದಿರುವನು. ಅನಂತರ ಕಾಲವಶದಿಂದ ಎದ್ದು ತನ್ನ ವಾಸನೆಯಲ್ಲಿಯೇ ಹುಟ್ಟಿರುವ ಅಕ್ಷಯ ದುಃಖಪ್ರದವಾದ ನರಕವನ್ನು ಚಿರಕಾಲ ಅನುಭವಿಸುವನು.

೧೫. ನೂರಾರು ಜನ್ಮಗಳಲ್ಲಿ ಮಹತ್ತಾದ ದುಃಖಗಳನ್ನು ಒಂದಾಗುತ್ತಲೊಂದು ಅನುಭವಿಸಿ, ಈ ಸಂಸಾರ ಸ್ವಪ್ನ ಸಂಭ್ರಮದಲ್ಲಿ ಯಾವಾಗಲೋ ಒಮ್ಮೆ ಶಾಂತಿಯನ್ನು ಹೊಂದುವನು. (ಅಥ ಯ ಇಹ ಕಪೂಯ ಚರಣಾ ಅಭ್ಯಾಶೋಹಯತ್ತೇ ಕಪೂಯಾಂ ಯೋನಿಮಾಪದ್ಯೇರ್ರ ಶ್ವಯೋನಿಂ ವಾ ಸೂಕರಯೋನಿಂ ವಾ ಚಂಡಾಲಯೋನಿಂ ವಾ ಇತಿ–ಶ್ರುತಿಃ)

೧೬–೧೭. ಅಥವಾ ಮರಣ ಮೂರ್ಛಾನಂತರದಲ್ಲಿ ಜಡವಾಗಿ ದುಃಖಶತಾಕುಲವಾಗಿಯೂ ಇರುವ ವೃಕ್ಷತ್ವಾದಿಗಳನ್ನು ತಮ್ಮ ಹೃದಯದಲ್ಲಿಯೇ ಒಂದೇ ಕ್ಷಣದಲ್ಲಿಯೇ ಅನುಭವಿಸುವರು. ಮತ್ತೆ ಸ್ವವಾಸನಾನುಸಾರವಾದ ದುಃಖಗಳನ್ನು ಮತ್ತೆ ನರಕದಲ್ಲಿ ಅನುಭವಿಸಿ ಬಹುಕಾಲವಾದ ಮೇಲೆ ಭೂಮಿಯಲ್ಲಿ ಹುಟ್ಟುವನು.

೧೮-೧೯. ಮಧ್ಯಮ ಪಾಪಿಯಾದವನು, ಮೃತಿಮೋಹವು ಕಳೆದ ಮೇಲೆ

ಮೃತ ಏವಾನುಭವತಿ ಕಶ್ಚಿತ್ಸಾಮಾನ್ಯಪಾತಕೀ |
ಸ್ವವಾಸನಾನುಸಾರೇಣ ದೇಹಂ ಸಂಪನ್ನಮಕ್ಷತಂ || ೨೦ ||

ಸ ಸ್ವಪ್ನ ಇವ ಸಂಕಲ್ಪ ಇವ ಚೇತತಿ ತಾದೃಶಂ |
ತಸ್ಮಿನ್ನೇವ ಕ್ಷಣೇ ತಸ್ಯ ಸ್ಮೃತಿರಿತ್ಥಮುದೇತಿ ಚ || ೨೧ ||

ಯೇ ತೂತ್ತಮಮಹಾಪುಣ್ಯಾ ಮೃತಿಮೋಹಾದನಂತರಂ |
ಸ್ವರ್ಗವಿದ್ಯಾಧರಪುರಂ ಸ್ಮೃತ್ಯಾ ಸ್ವನುಭವಂತಿ ತೇ || ೨೨ ||

ತತೋಽನ್ಯಕರ್ಮಸದೃಶಂ ಭುಕ್ತ್ವಾನ್ಯತ್ರ ಫಲಂ ನಿಜಂ |
ಜಾಯಂತೇ ಮಾನುಷೇ ಲೋಕೇ ಸಶ್ರೀಕೇ ಸಜ್ಜನಾಸ್ಪದೇ || ೨೩ ||

ಯೇ ಚ ಮಧ್ಯಮಧರ್ಮಾಣೋ ಮೃತಿಮೋಹಾದನಂತರಂ |
ತೇ ವ್ಯೋಮವಾಯುವಲಿತಾಃ ಪ್ರಯಾಂತ್ಯೋಷಧಿಪಲ್ಲವಂ || ೨೪ ||

ಶಿಲಾಜಠರದಂತೆ ಜಡನಾಗಿ ಕೆಲವು ಕಾಲವಿದ್ದು, ಕಾಲವಶನಾಗಿ ಎಚ್ಚತ್ತು, ತಿರ್ಯಗಾದಿ ಜನ್ಮಗಳನ್ನು ಪಡೆದು ಮತ್ತೆ ಸಂಸಾರಕ್ಕೆ ಬರುವನು.

೨೦-೨೧. ಸಾಮಾನ್ಯ ಪಾತಕಿಯು ಸಾಯುತ್ತಿದ್ದ ಹಾಗೆಯೇ ಸ್ವ(ಕರ್ಮ) ವಾಸನಾನುಗುಣವಾದ ದೇಹವು ಅಕ್ಷತವಾಗಿ ಎದುರು ನಿಂತಿರುವಂತೆ ಕಾಣು ವನು. ಸ್ವಪ್ನದಂತೆ, ಸಂಕಲ್ಪದಂತೆ, ಅದೇ ಕ್ಷಣದಲ್ಲಿಯೇ ಸ್ಮೃತಿಯು ಆ ರೂಪವಾಗಿ ಉದಿಸಿ, ಅದೇ ಆಗಿ ವ್ಯಾಪಾರ ಮಾಡುವನು.

೨೨. ಉತ್ತಮ ಮಹಾಪುಣ್ಯರು ಯಾರೋ ಅವರು ಮೃತಿಮೋಹವು ಕಳೆ ಯುತ್ತಲೂ ಸ್ವರ್ಗ, ವಿದ್ಯಾಧರಪುರಗಳ ಸ್ಮರಣವನ್ನು ಹೊಂದಿ ಚೆನ್ನಾಗಿ ಸುಖ ಪಡುವರು.

೨೩. ಅನಂತರ ಏನಾದರೂ ಪಾಪವಿದ್ದರೆ ಅದರ ಫಲವನ್ನೂ ಅನ್ಯತ್ರ ಭೋಗಮಾಡಿ, ಮಾನುಷ ಲೋಕದಲ್ಲಿ ಶ್ರೀಮಂತರೂ ಸಜ್ಜನರೂ ಆದವರ ಮನೆಯಲ್ಲಿ ಹುಟ್ಟುವರು.

೨೪-೨೫. ಮಧ್ಯಮ ಧರ್ಮರು ಮೃತಿಮೋಹಾನಂತರ ಆಕಾಶವಾಯುವಿ

ತತ್ರ ಚಾರುಫಲಂ ಭುಕ್ತ್ವಾ ಪ್ರವಿಶ್ಯ ಹೃದಯಂ ನೃಣಾಂ |
ರೇತಸಾಮಧಿತಿಷ್ಟಂತಿ ಗರ್ಭೇ ಜಾತಿಕ್ರಮೋಚಿತೇ || ೨೫ ||

ಸ್ವವಾಸನಾನುಸಾರೇಣ ಪ್ರೇತಾ ಏತಾಂ ವ್ಯವಸ್ಥಿತಂ |
ಮೂರ್ಚ್ಛಾಂತೇಽನುಭವತ್ಯಂತಃ ಕ್ರಮೇಣೈವಾಕ್ರಮೇಣ ಚ || ೨೬ ||

ಆದೌ ಮೃತಾ ವಯಮಿತಿ ಬುಧ್ಯಂತೇ ತದನುಕ್ರಮಾತ್ |
ಬಂಧುಪಿಂಡಾದಿದಾನೇನ ಪ್ರೋತ್ಪನ್ನಾ ಇತಿ ವೇದಿನಃ || ೨೭ ||

ತತೋ ಯಮಭಟಾ ಏತೇ ಕಾಲಪಾಶಾನ್ವಿತಾ ಇತಿ |
ನೀಯಮಾನಃ ಪ್ರಯಾಮ್ಯೇಭಿಃ ಕ್ರಮಾದ್ಯಮಪುರಂ ತ್ವಿತಿ || ೨೮ ||

ನಲ್ಲಿ ಸೇರಿ (ದೇವ ಶರೀರವನ್ನು ಪಡೆದು). ಔಷಧಿಪಲ್ಲವ (ವಾದ ಗಿಡಗನ್ನುಳ್ಳ ನಂದನಾದಿ)ಗಳನ್ನು ಸೇರುವರು.

೨೫. ಅಲ್ಲಿ ಬೇಕಾದ ಹಾಗೆ ಶುಭ ಫಲಗಳನ್ನು ಅನುಭವಿಸಿ, ಮನುಷ್ಯ ಹೃದಯವನ್ನು ಪ್ರವೇಶಿಸಿ, ಅಲ್ಲಿಂದ ರೇತಸ್ಸನ್ನು ಸೇರಿ ತಮ್ಮ ಜನ್ಮಕ್ಕೆ ಯೋಗ್ಯವಾದ ಗರ್ಭವನ್ನು ಸೇರುವರು.

(ಅಥಯ ಇಹ ರಮಣೀಯ ಚರಣಾ ಅಭ್ಯಾಶೋ ಹ ಯತ್ತೇ ರಮಣೀಯಾಂ ಯೋನಿಮಾಪದ್ಯೇರ್ರ ಬ್ರಾಹ್ಮಣ ಯೋನಿಂ ವಾ ಕ್ಷತ್ರಿಯ ಯೋನಿಂವಾ ವೈಶ್ಯಯೋನಿಂ ವಾ ಇತಿ ಶ್ರುತೇಃ)

. ೨೬. ಸತ್ತವರು ಹೀಗೆ ತಮ್ಮ ತಮ್ಮ ವಾಸನಾನುಸಾರವಾಗಿ ಮರಣ ಮೂರ್ಛಾನಂತರದಲ್ಲಿ ಇದೇ ವ್ಯವಸ್ಥಿತಿಯನ್ನು ಕ್ರಮವಾಗಿಯೋ ಅಕ್ರಮವಾಯೋ ಅಂತೂ ಪಡೆಯುವರು.

೨೭-೨೮-೯. ಮೊದಲು ನಾವು ಸತ್ತೆವು ಎಂದು ಕೊಳ್ಳುವರು. ಆಮೇಲೆ ಬಂಧುಗಳು ಕೊಟ್ಟ ಪಿಂಡಾದಿ ದಾನಗಳಿಂದ ಮತ್ತೆ ದೇಹವನ್ನು ಪಡೆದೆವು ಎಂದುಕೊಳ್ಳುವರು. ಇವರು ಯಮಪಾಶದೊಡನೆ ಬಂದಿರುವ ಯಮಭಟರು ಇವರು ನಮ್ಮನ್ನು ಯಮಪುರಕ್ಕೆ ತೆಗೆದುಕೊಂಡು ಹೋಗುತ್ತಿರುವರು ಎಂದು

ಉದ್ಯಾನಾನಿ ವಿಮಾನಾನಿ ಶೋಭನಾನಿ ಪುನಃಪುನಃ |
ಸ್ವಕರ್ಮಭಿರುಪಾತ್ತಾನಿ ದಿವ್ಯಾನೀತ್ಯೇವ ಪುಣ್ಯವಾನ್ || ೨೯ ||

ಹಿಮಾನೀಕಂಟಕಶ್ವಭ್ರಶಸ್ತ್ರಪತ್ರವನಾನಿ ಚ |
ಸ್ವಕರ್ಮದುಷ್ಕೃತೋತ್ಥಾನಿ ಸಂಪ್ರಾಪ್ತಾನೀತಿ ಪಾಪವಾನ್ || ೩೦ ||

ಇಯಂ ಮೇ ಸೌಮ್ಯಸಂಪಾತಾ ಸರಣಿಃ ಶೀತಶಾದ್ವಲಾ |
ಸ್ನಿಗ್ಧಚ್ಛಾಯಾ ಸವಾಪೀಕಾ ಪುರಃಸಂಸ್ಥೇತಿ ಮಧ್ಯಮಃ || ೩೧ ||

ಅಯಂ ಪ್ರಾಪ್ತೋ ಯಮಪುರಮಹಮೇಷ ಸ ಭೂತಪಃ |
ಅಯಂ ಕರ್ಮವಿಚಾರೋಽತ್ರ ಕೃತ ಇತ್ಯನುಭೂತಿರ್ಮಾ || ೩೨ ||

ಇತಿ ಪ್ರತ್ಯೇಕಮಭ್ಯೇತಿ ಪೃಥುಃ ಸಂಸಾರಖಂಡಕಃ |
ಯಥಾ ಸಂಸ್ಥಿತಿನಿಃಶೇಷಪದಾರ್ಥಾಚಾರಭಾಸುರಃ || ೩೩ ||

ಆಕಾಶ ಇವ ನಿಃಶೂನ್ಯೇ ಶೂನ್ಯಾತ್ಮೈವ ವಿಬೋಧವಾ |
ದೇಶಕಾಲಕ್ರಿಯಾದ್ರವ್ಯೈರ್ಭಾಸುರೋಽಪಿ ನ ಕಿಂಚನ || ೩೪ ||

ಕೊಳ್ಳುವರು. ದಾರಿಯಲ್ಲಿ ಪುಣ್ಯವಂತರು ತಮ್ಮ ಕರ್ಮಗಳಿಂದ ಲಭಿಸುವ ದಿವ್ಯವೂ ಮಂಗಳಕರವೂ ಆದ ಉದ್ಯಾನಗಳನ್ನೂ ವಿಮಾನಗಳನ್ನೂ ಕಾಣುವರು.

೩೦. ಪಾಪಿಗಳು ತಮ್ಮ ಪಾಪಕರ್ಮಗಳಿಂದ ಹಿಮದ ಮಳೆ, ಮುಳ್ಳುಗಳು, ಹಳ್ಳಗಳು, ಶಸ್ತ್ರಗಳೇ ಪತ್ರಗಳಾಗಿರುವ ವನಗಳು, ಇವುಗಳನ್ನು ಕಾಣುವರು. ಮಧ್ಯಮರು ಹಸರು ಹುಲ್ಲಿನಿಂದ ತಂಪಾಗಿ, ನೆಳಲಿನಿಂದ ಹಿತವಾಗಿ, ಅಲ್ಲಲ್ಲಿ ಬಾವಿಗಳಿರುವ ಸುಖವಾದ ಹಾದಿಗಳನ್ನು ಕಾಣುವರು.

೩೨. ನಾನು ಯಮಪುರಕ್ಕೆ ಬಂದೆನು, ಪ್ರಾಣಿಗಳಿಗೆಲ್ಲ ನಾಥನಾದ ಯಮನು ಇವನು. ನನ್ನ ಕರ್ಮ ವಿಚಾರವೆಲ್ಲ ಇಲ್ಲಿ ಆಯಿತು ಎಂದು ಅನುಭವವಾಗುವುದು.

೩೩. ಹೀಗೆ ಒಬ್ಬರೊಬ್ಬರಿಗೂ ಬೇರೆಬೇರೆಯಾಗಿಯೇ ಈ ಸಂಸಾರವು ಅನುಭವವಾಗುವುದು. ಆ ಅನುಭವವು ನಿಜವೇ ಆಗಿದ್ದಂತೆ ಇರುವುದು. ಅಗಿನ ಪದಾರ್ಥಗಳೂ ಆಚಾರಗಳೂ ನಿಜವೇ ಆದಂತೆ ಇರುವುವು.

೩೪. ಆಕಾಶದಂತೆ ನಿಶ್ಶೂನ್ಯವಾದೆಡೆಯಲ್ಲಿ ತಾನೂ ಶೂನ್ಯನೇ ಆದ ಆತ್ಮನು ದೇಶ, ಕಾಲ, ಕ್ರಿಯೆಗಳಿಂದ ದೀರ್ಘವಾಗಿದ್ದರೂ ವಾಸ್ತವವಾಗಿ ಏನೂ ಇಲ್ಲದ ಅನುಭವವನ್ನು ಪಡೆಯುವನು.

ಇತೋಽಯಮಹಮಾದಿಷ್ಟಃ ಸ್ವಕರ್ಮಫಲಭೋಜನೇ |
ಗಚ್ಛಾಮ್ಯಾಶು ಶುಭಂ ಸ್ವರ್ಗಮಿತೋ ನರಕಮೇವ ಚ || ೩೫ ||

ಯಃ ಸ್ವರ್ಗೋಽಯಂ ಮಯಾ ಭುಕ್ತೋ ಭುಕ್ತೋಽಯಂ ನರಕೋಽಥವಾ |
ಇಮಾಸ್ತಾ ಯೋನಯೋ ಭುಕ್ತಾ ಜಾಯೇಽಹಂ ಸಂಸೃತೌ ಪುನಃ || ೩೬ ||

ಅಯಂ ಶಾಲಿರಹಂ ಜಾತಃ ಕ್ರಮಾತ್ಫಲಮಹಂ ಸ್ಥಿತಃ |
ಇತ್ಯುದರ್ಕಪ್ರಬೋಧೇನ ಬುಧ್ಯಮಾನೋ ಭವಿಷ್ಯತಿ || ೩೭ ||

ಸಂಸುಪ್ತಕರಣಸ್ತ್ವೇವಂ ಬೀಜತಾಂ ಯಾತ್ಯಸೌ ನರೇ |
ತದ್ಬೀಜಂ ಯೋನಿಗಲಿತಂ ಗರ್ಭೋ ಭವತಿ ಮಾತರಿ || ೩೮ ||

ಸ ಗರ್ಭೋ ಜಾಯತೇ ಲೋಕೇ ಪೂರ್ವಕರ್ಮಾನುಸಾರತಃ |
ಭವ್ಯೋ ಭವತ್ಯಭವ್ಯೋ ವಾ ಬಾಲಕೋ ಲಲಿತಾಕೃತಿಃ || ೩೯ ||

---

೩೫. ಸ್ವಕರ್ಮಭೋಗಕ್ಕಾಗಿ ನನ್ನನ್ನು ಇಲ್ಲಿಂದ ಕಳುಹಿಸಿದರು. ಶುಭವಾದ ಸ್ವರ್ಗವನ್ನೋ ನರಕವನ್ನೋ ಕುರಿತು ಈಗ ಹೋಗುವೆನು.

೩೬. ಸ್ವರ್ಗವನ್ನು ನಾನು ಅನುಭವಿಸಿದೆನು. ನರಕವನ್ನು ನಾನು ಅನುಭವಿಸಿದೆನು. ಈ ಜನ್ಮವನ್ನು ಅನುಭವಿಸಿದೆನು: ಮತ್ತೆ ಸಂಸಾರದಲ್ಲಿ ಹುಟ್ಟಿಬಂದೆನು.

೩೭. ನಾನು ಭತ್ತವಾಗಿ ಹುಟ್ಟಿ ಪಕ್ವವಾದೆನು: (ಅಲ್ಲಿಂದ ಆಹಾರವಾಗಿ ಪುರುಷ ದೇಹವನ್ನು ಸೇರಿ ರೇತೋ ಮಾರ್ಗವಾಗಿ ಸ್ತ್ರೀ ಗರ್ಭವನ್ನು ಹೊಕ್ಕು ಶಿಶುವಾದೆನು. ಇತ್ಯಾದಿಯಾಗಿ) ಮುಂದೆ ತಾನು ಗರ್ಭದಲ್ಲಿರುವಾಗ ತಿಳಿಯುವನು.

•(ಈ ಅಂಶವನ್ನು ಗರ್ಭೋಪನಿಷತ್ತಿನಲ್ಲಿ ಚೆನ್ನಾಗಿ ಹೇಳಿದೆ. ತಾತ್ಪರ್ಯ ಪ್ರಕಾಶವು "ಉದರ್ಕೇ ಔತ್ತರ ಕಾಲಿಕೇ ಮನುಷ್ಯ ಶರೀರೇ ಶ್ರುತಿಪುರಾಣಾದಿ ಜನ್ಯ ಪ್ರಬೋಧೇನ ಬುಧ್ಯಮಾನೋಽಯಂ ಭವಿಷ್ಯತಿ ಎಂದು ಹೇಳಿದ್ದರೂ ಗರ್ಭೋಪನಿಷತ್ತನ್ನು ಇಲ್ಲಿ ಉದಹರಿಸಿಲ್ಲ. ಕಾರಣವೇನಿರಬಹುದು ?)

೩೮-೯. ಇವನು ತನ್ನ ಇಂದ್ರಿಯಗಳೆಲ್ಲವೂ ಸುಪ್ತವಾಗಿರಲು ಪುರುಷನನ್ನು ಸೇರಿ ಬೀಜವಾಗುವನು., ಆ ಬೀಜವು ಯೋನಿಯಲ್ಲಿ ಬಿದ್ದು ಮಾತೃವಿನಲ್ಲಿ ಗರ್ಭವಾಗುವುದು. ಆ ಗರ್ಭವು ಲೋಕದಲ್ಲಿ ಹುಟ್ಟುವುದು. ಪೂರ್ವಕರ್ಮಾನು

ತತೋಽನುಭವತೀಂದ್ವಾಭಂ ಯೌವನಂ ಮದನೋನ್ಮುಖಂ |
ತತೋ ಜರಾಂ ಪದ್ಮಮುಖೇ ಹಿಮಾಶನಿಮಿವ ಚ್ಯುತಾಂ || ೪೦ ||

ತತೋಽಪಿ ವ್ಯಾಧಿಮರಣಂ ಪುನರ್ಮರಣಮೂರ್ಛನಾಂ |
ಪುನಃ ಸ್ವಪ್ನವದಾಯಾತಂ ಪಿಂಡೈರ್ದೇಹಪರಿಗ್ರಹಂ || ೪೧ ||

ಯಾಮ್ಯಂ ಯಾತಿ ಪುನರ್ಲೋಕಂ ಪುನರೇವ ಭ್ರಮಕ್ರಮಂ |
ಭೂಯೋ ಭೂಯೋಽನುಭವತಿ ನಾನಾಯೋನ್ಯಂತರೋದಯೇ || ೪೨ ||

ಇತ್ಯಾಜವಂ ಜವೀಭಾವಮಾಮೋಕ್ಷಮತಿಭಾಸುರಂ |
ಭೂಯೋ ಭೂಯೋಽನುಭವತಿ ವ್ಯೋಮ್ನ್ಯೇವ ವ್ಯೋಮರೂಪವಾನ್ || ೪೩ ||

ಪ್ರಬುದ್ಧಲೀಲೋವಾಚ :—

ಆದಿಸರ್ಗೇ ಯಥಾ ದೇವಿ ಭ್ರಮ ಏಷ ಪ್ರವರ್ತತೇ|
ತಥಾ ಕಥಯ ಮೇ ಭೂಯಃ ಪ್ರಸಾದಾದ್ಬೋಧವೃದ್ಧಯೇ || ೪೪ ||

ಸಾರವಾಗಿ ಭವ್ಯವಾಗಿಯೋ ಅಭವ್ಯವಾಗಿಯೋ ಇರುವ ಮುದ್ದುಮಗುವಾಗುವುದು.

೪೦–೧. ಆನಂತರ ಚಂದ್ರನಂತೆ ಬೆಳೆಯುವ ಕಾಮುದೀಪ್ತವಾದ ಯೌವನವನ್ನು ಅನುಭವಿಸಿ, ಪದ್ಮದಂತಿರುವ ಮುಖದಲ್ಲಿ ಹಿಮದಂತೆಯೂ ಅಶನಿಯಂತೆಯೂ ಬಿದ್ದ ಜರೆಯನ್ನು ಅನುಭವಿಸಿ, ವ್ಯಾಧಿ ಮರಣಗಳನ್ನೂ ಪುನಃ ಮರಣ ಮೂರ್ಛೆಯನ್ನೂ, ಮತ್ತೆ ಕನಸಿನಂತೆ ಬಂದ, ಪಿಂಡಾದಿಜನ್ಯವಾದ ದೇಹವನ್ನೂ ಅನುಭವಿಸುವನು.

೪೨–೩. ಮತ್ತೆ ಯಮಲೋಕಕ್ಕೆ ಹೋಗುವನು. ಮತ್ತೆ ಸ್ವರ್ಗ ನರಕಗಳನ್ನು ಸುತ್ತಿಸುತ್ತಿ ಬರುವನು. ಮತ್ತೆ ಮತ್ತೆ ಎಷ್ಟೋ ಜನ್ಮಗಳಲ್ಲಿ ಹುಟ್ಟುತ್ತಿರುವನು. ಹೀಗೆ ಜೀವನು ತಾನು ವ್ಯೋಮರೂಪನಾಗಿದ್ದರೂ ವ್ಯೋಮದಲ್ಲಿಯೇ ಮೋಕ್ಷವಾಗುವವರೆಗೂ ಪರಿವರ್ತನವನ್ನು ಮತ್ತೆಮತ್ತೆ ಅನುಭವಿಸುವನು.

೪೪. ಪ್ರಬುದ್ಧಲೀಲೆಯು ಹೇಳಿದಳು :—ಆದಿಸರ್ಗದಲ್ಲಿ ಈ ಭ್ರಮಣವು (ತಿರುಗುವಿಕೆ) ಹೇಗೆ ಆರಂಭವಾಗುವುದು ? ನನಗೆ ಜ್ಞಾನವು ಬೆಳೆಯುವಂತೆ ಎಲೆ ದೇವಿ, ಅದನ್ನು ಹೇಳು.

ಶ್ರೀ ದೇವ್ಯುವಾಚ :—

ಪರಮಾರ್ಥಘನಂ ಶೈಲಾಃ ಪರಮಾರ್ಥಘನಂ ದ್ರುಮಾಃ |
ಪರಮಾರ್ಥಘನಂ ಪೃಥ್ವೀ ಪರಮಾರ್ಥಘನಂ ನಭಃ || ೪೫ ||

ಸರ್ವಾತ್ಮಕತ್ವಾತ್ಸ ಯತೋ ಯತೋದೇತಿ ಚಿದೀಶ್ವರಃ |
ಪರಮಾಕಾಶಶುದ್ಧಾತ್ಮಾ ತತ್ರ ತತ್ರ ಭವೇತ್ತಥಾ || ೪೬ ||

ಸರ್ಗಾದೌ ಸ್ವಪ್ನಪುರುಷನ್ಯಾಯೇನಾದಿಪ್ರಜಾಪತಿಃ |
ಯಥಾ ಸ್ಫುಟಂ ಪ್ರಕಚಿತಸ್ತಥಾದ್ಯಾಪಿ ಸ್ಥಿತಾ ಸ್ಥಿತಿಃ || ೪೭ ||

ಪ್ರಥಮೋಽಸೌ ಪ್ರತಿಸ್ಪಂದಃ ಪದಾರ್ಥಾನಾಂ ಹಿ ಬಿಂಬಕಂ |
ಪ್ರತಿಬಿಂಬಿತಮೇತಸ್ಮಾದ್ಯತ್ತದದ್ಯಾಪಿ ಸಂಸ್ಥಿತಂ || ೪೮ ||

ಯನ್ನಾಮ ಸುಷಿರಂ ಸ್ಥಾನಂ ದೇಹಾನಾಂ ತದ್ಗತೋಽನಿಲಃ |
ಕರೋತ್ಯಂಗಪರಿಸ್ಪಂದಂ ಜೀವತೀತ್ಯುಚ್ಯತೇ ತತಃ || ೪೯ ||

---

೪೫. ಶ್ರೀದೇವಿಯು ಹೇಳಿದಳು :—ಪರಮಾರ್ಥವಾದ ಬ್ರಹ್ಮವು ಘನವಾಗಿ ಶೈಲ, ದ್ರುಮ, ಪೃಥಿವೀ, ನಭಗಳಾಯಿತು.

೪೬. ಚಿದೀಶ್ವರನು ಸರ್ವಾತ್ಮಕನು. ಆದರಿಂದ, ಆಕಾಶದಂತೆ ಪರಮ ಶುದ್ಧನಾದ ಆತನು ಹೇಗೆ ಹೇಗೆ ಆಗಬೇಕೆಂದು ಸಂಕಲ್ಪಿಸುವನೋ ಆದದೇ ಆಗುವನು.

೪೭. ಆದಿಸರ್ಗದಲ್ಲಿ ಪ್ರಜಾಪತಿಯು ಸ್ವಪ್ನಪುರುಷನ್ಯಾಯದಿಂದ ಏನೇನು ಹೇಗೆ ಹೇಗೆ ಇರಬೇಕೆಂದು ಸಂಕಲ್ಪಿಸಿದನೋ ಅದದೆಲ್ಲ ಹಾಗೆ ಹಾಗೆಯೇ ಇರುವುದು.

೪೮. ಆ ಚಿತ್ತಿನಲ್ಲಿ ಆದ ಮೊದಲನೆಯ ಪ್ರತಿಸ್ಪಂದವೇ ಪದಾರ್ಥಗಳ ಬಿಂಬವು. ಅದರ ಪ್ರತಿಬಿಂಬಗಳಾಗಿ ಈ ಪದಾರ್ಥಗಳೆಲ್ಲವೂ ಇರುವುವು.

೪೯. ದೇಹಗಳಲ್ಲಿ ಸುಷಿರ (ನಾಡಿ) ಗಳು ಉಂಟು. ಅವುಗಳಲ್ಲಿ ಪ್ರಾಣವಾಯುವು ಸೇರಿಕೊಂಡು ಚೇಷ್ಟೆ ಮಾಡುವುದು. ಆಗ ಜೀವಿಸುತ್ತಿರುವನು ಎನ್ನುವರು.

ಸರ್ಗಾದಾವೇವಮೇವೈಷಾ ಜಂಗಮೇಷು ಸ್ಥಿತಾ ಸ್ಥಿತಿಃ |
ಚೇತನಾ ಅಪಿ ನಿಸ್ಪಂದಾಸ್ತೇನೈತೇ ಪಾದಪಾದಯಃ || ೫೦ ||

ಚಿದಾಕಾಶೋಽಯಮೇವಾಂಶಂ ಕುರುತೇ ಚೇತನೋದಿತಂ |
ಸ ಏವ ಸಂವಿದ್ಭವತಿ ಶೇಷಂ ಭವತಿ ನೈವ ತತ್ || ೫೧ ||

ನರೋಪಾಧಿಪುರಂ ಪ್ರಾಪ್ತಂ ಚೇತತ್ಯಕ್ಷಿಪುಟಂ ನಯತ್ |
ತತ್ತಸ್ಯಾ ನಾಕ್ಷಿಚಿಜ್ಜೀವಂ ನೋ ಜೀವತ್ಯೇವ ಸರ್ಗತಃ || ೫೨ ||

ತಥಾ ಖಂ ಖಂ ತಥಾ ಭೂಮಿರ್ಭೂಮಿತ್ವೇನಾಪ್ತ್ವವಜ್ಜಲಂ |
ಯದ್ಯಥಾ ಚೇತತಿ ಸ್ವೈರಂ ತದ್ವೇತ್ತ್ಯೇವ ತಥಾ ವಪುಃ || ೫೩ ||

ಇತಿ ಸರ್ವಶರೀರೇಣ ಜಂಗಮತ್ವೇನ ಜಂಗಮಂ |
ಸ್ಥಾವರಂ ಸ್ಥಾವರತ್ವೇನ ಸರ್ವಾತ್ಮಾ ಭಾವಯನ್ ಸ್ಥಿತಃ || ೫೪ ||

---

೫೦. ಸರ್ಗದ ಆಡಿಯಲ್ಲಿಯೇ ಜಂಗಮಗಳಲ್ಲಿ ಇದೇ ಸ್ಥಿತಿಯೆಂದು ಗೊತ್ತಾಗಿ, ಹಾಗೆಯೇ ನಡೆದುಕೊಂಡು ಬಂದಿರುವುದು. ಚೇತನಗಳೇ ಆದರೂ ನಿಶ್ಚೇಷ್ಟಗಳಾಗಿರುವುವು ತರುಪಾಷಾಣಾದಿಗಳು.

೫೧. ಉಳಿದುದೇ ಚಿದಾಕಾಶವು ಬುದ್ಧಿಯೆಂಬ ಉಪಾಧಿಯುಳ್ಳ ಅಂಶವಾದಾಗ ಅದು ಜೀವಚೇತನ ಎನ್ನಿಸಿಕೊಳ್ಳುವುದು. ಅದನ್ನು ಬಿಟ್ಟು ಮಿಕ್ಕೆಲ್ಲವೂ ಅಚೇತನವು.

೫೨. ಹೀಗೆ ಬುದ್ಧಿಯೆಂಬ ಉಪಾಧಿಯನ್ನು ಹೊಕ್ಕ ಚಿತ್ತು ಮಾನವ ದೇಹವನ್ನು ಹೊಂದಿ, ತನಗೆ ಅಧಿಷ್ಠಾನವಾಗಿರುವ ಬುದ್ಧಿಯನ್ನೇ ಕಣ್ಣು ಮುಂತಾದ ಇಂದ್ರಿಯಗಳನ್ನು ಮಾಡಿಕೊಳ್ಳುವುದು. ಅದರಿಂದ ಕಣ್ಣು ಮೊದಲಾದ ಇಂದ್ರಿಯಗಳು ಚಿತ್ತೂ ಅಲ್ಲ: ಜೀವವೂ ಅಲ್ಲ: ಸರ್ಗ ಕಾಲದಿಂದಲೂ ಜೀವಿಸಿಯೂ ಇರುವುದಿಲ್ಲ.

೫೩. ಆಕಾಶವು ಅವಕಾಶ ಪ್ರದವಾಗಿಯೂ ಭೂಮಿಯು ಸರ್ವಧಾರಕವಾಗಿಯೂ ಜಲವು ಸರ್ವಾಪ್ಯಾಯನವಾಗಿಯೂ ಇರುವುದರಿಂದ ಅವುಗಳೆಲ್ಲ ಶರೀರದಲ್ಲಿ ಹಾಗೆ ಹಾಗೆಯೇ ವ್ಯಾಪಾರ ಮಾಡುವುವು.

೫೪. ಹೀಗೆ ಪಂಚ ಭೂತಗಳೂ ಸೇರಿ ಆದ ಶರೀರವು ಜಂಗಮವಾಗಿದ್ದರೆ

ತಸ್ಮಾದ್ಯಜ್ಜಂಗಮಂ ನಾಮ ತತ್ಸ್ವಬೋಧನರೂಪವತ್ |
ತೇನ ಬುದ್ಧಂ ತತಸ್ತದ್ವತ್ತದೇವಾದ್ಯಾಪಿ ಸಂಸ್ಥಿತಂ || ೫೫ ||

ಯದ್ವೃಕ್ಷಾಭಿದಮಾಬುದ್ಧಂ ಸ್ಥಾವರತ್ವೇನ ವೈ ಪುನಃ |
ಜಡಮದ್ಯಾಪಿ ಸಂಸಿದ್ಧಂ ಶಿಲಾತರುತೃಣಾದಿ ಚ || ೫೬ ||

ನ ತು ಜಾಡ್ಯಂ ಪೃಥಕ್ಕಿಂಚಿದಸ್ತಿ ನಾಪಿ ಚ ಚೇತನಂ |
ನಾತ್ರ ಭೇದೋಽಸ್ತಿ ಸರ್ಗಾದೌ ಸತ್ತಾಸಾಮಾನ್ಯಕೇನ ಚ || ೫೭ ||

ವೃಕ್ಷಾಣಾಮುಪಲಾನಾಂ ಯಾ ನಾಮಾಂತಃಸ್ಥಾಃ ಸ್ವಸಂವಿದಃ |
ಬುದ್ಧ್ಯಾದಿವಿಹಿತಾನ್ಯೇವ ತಾನಿ ತೇಷಾಮಿತಿ ಸ್ಥಿತಿಃ || ೫೮ ||

ವಿದೋಂತಃ ಸ್ಥಾವರಾದೇರ್ಯಾಸ್ತಸ್ಯಾ ಬುದ್ಧ್ಯಸ್ತಥಾ ಸ್ಥಿತೇಃ |
ಅನ್ಯಾಭಿಧಾನಾಸ್ಥಾನಾರ್ಥಾಃ ಸಂಕೇತೈರಪರೈಃ ಸ್ಥಿತಾಃ || ೫೯ ||

ಜಂಗಮವೆಂತಲೂ ಸ್ಥಾವರವಾಗಿದ್ದರೆ ಸ್ಥಾವರವೆಂತಲೂ ಭಾವಿಸಿಕೊಂಡು ಜೀವನು ಇರುವನು.

೫೫. ಆದರಿಂದ ಜಂಗಮವೆನ್ನುವುದು ಹಾಗೆ ತಿಳಿದುಕೊಂಡಿರುವ ಬೋಧನದ ರೂಪವು. ಆ ಬೋಧವು ಹಾಗೆಂದು ಕೊಂಡಿರುವುದು: ಆದರಿಂದ, ಅಂದಿನಿಂದ ಹಾಗೆಯೇ ಇರುವುದು.

೫೬. ಯಾವುದು ಸ್ಥಾವರವಾಗಿ ವೃಕ್ಷ ಎಂದುಕೊಂಡಿರುವುದೋ ಅದು ಇಂದಿನವರೆಗೂ ಶಿಲಾ ತರುತೃಣಾದಿಗಳಾಗಿ ಸ್ಥಾವರವಾಗಿಯೇ ಇರುವುದು.

೫೭. ಜಡವೆಂಬುದೊಂದು ಬೇರೆ, ಚೇತನವೆಂಬುದು ಬೇರೆ ಇನ್ನೊಂದು ಆಗಿ ಇಲ್ಲ: ಎರಡಕ್ಕೂ ಭೇದವಿಲ್ಲ. ಸರ್ಗಾದಿಯಲ್ಲಿ ಎರಡರ ಸತ್ತೆಯೂ ಒಂದೇ ಆಗಿತ್ತು.

೫೮. ಬುದ್ಧಿಯಲ್ಲಿರುವ ಚೇತನವು ತಾನು ವೃಕ್ಷವೆಂದುಕೊಂಡು ವೃಕ್ಷವಾಗಿಯೂ ಶಿಲೆಯೆಂದುಕೊಂಡು ಶಿಲೆಯಾಗಿಯೂ ಇರುವುದಲ್ಲದೆ, ವೃಕ್ಷಶಿಲೆಗಳೂ ಬೇರೆ ಬೇರೆಯಲ್ಲ.

೫೯. ಸ್ಥಾವರಾದಿಗಳಲ್ಲಿರುವ ಚಿತ್ತು ತನ್ನ ಬುದ್ಧಿಯಿಂದ ತಾನು ಏನು

ಕೃಮಿಕೀಟ ಪತಂಗಾನಾಂ ಯಾ ನಾಮಾಂತಃ ಸ್ವಸಂವಿದಃ |
ತಾನ್ಯೇವ ತೇಷಾಂ ಬುದ್ಧ್ಯಾದೀನ್ಯಭಿದಾರ್ಥಾನಿ ಕಾನಿಚಿತ್ || ೬೦ ||

ಯತೋತ್ತರಾಬ್ಧಿ ಜನತಾ ದಕ್ಷಿಣಾಬ್ಧಿ ಜನಂ ಸ್ಥಿತಂ |
ನ ಕಿಂಚಿದಪಿ ಜಾನಾತಿ ನಿಜಸಂವೇದನಾದೃತೇ || ೬೧ ||

ಸ್ವಸಂಜ್ಞಾನುಭವೇ ಲೀನಾಸ್ತಥಾ ಸ್ಥಾವರಜಂಗಮಾಃ|
ಪರಸ್ಪರಂ ಯದಾ ಸರ್ವೇ ಸ್ವಸಂಕೇತ ಪರಾಯಣಾಃ || ೬೨ ||

ಯಥಾ ಶಿಲಾಂತಃ ಸಂಸ್ಥಾನಾಂ ಬಹಿಷ್ಠಾನಾಂ ಚ ವೇದನಂ |
ಅಸಜ್ಜಡಂ ಚ ಭೇಕಾನಾಂ ಮಿಥೋಽನ್ಯತಸ್ತಸ್ಥುಷಾಂ ತಥಾ || ೬೩ ||

ಸರ್ವಂ ಸರ್ವಗತಂ ಚಿತ್ತಂ ಚಿದ್ವ್ಯೋಮ್ನಾ ಯತ್ಪ್ರಚೇತಿತಂ |
ಸರ್ಗಾದೌ ಚೋಪನಂ ವಾಯುಃ ಸ ಇಹಾದ್ಯಾಪಿ ಸಂಸ್ಥಿತಃ || ೬೪ ||

ಎಂದುಕೊಳ್ಳುವುದೋ ಅದೇ.ಆಗಿ ನಿಲ್ಲುವುದು. ಜಂಗಮ ಎಂದುಕೊಂಡು ಜಂಗಮವಾಗಿ ನಿಲ್ಲುವುದು.

೬೦. ಕೃಮಿ, ಕೀಟ, ಪತಂಗಗಳಲ್ಲೂ ಹೀಗೇ ಒಳಗಿರುವ ಚಿತ್ತು ಯಾವ ರೂಪವಾಗಿ ತನ್ನನ್ನು ಬಾಧಿಸಿಕೊಳ್ಳುವುದೋ ಅದು ಹಾಗೇ ಆಗುವುದು.

೬೧. ಉತ್ತರ ಸಮುದ್ರ ತೀರದಲ್ಲಿರುವ ಜನವು ದಕ್ಷಿಣ ಸಮುದ್ರ ತೀರದಲ್ಲಿಯೂ ಜನವಿದೆಯೆಂಬುದನ್ನು ತನಗೆ ಗೊತ್ತಾದ ಹೊರತು ತಿಳಿಯುವುದು ಹೇಗೆ !

೬೨-೬೩. ಅದರಂತೆಯೇ, ಸ್ಥಾವರ ಜಂಗಮುಗಳೂ ಪರಸ್ಪರ ಗೊತ್ತಾಗುವವರೆಗೂ ತಮ್ಮ ತಮ್ಮ ಪಾಡಿಗೆ ಬೇರೆ ಬೇರೆಯಾಗಿಯೇ ಇರುವುವು.ಶಿಲಾ ಗರ್ಭದಲ್ಲಿದ್ದ ಕಪ್ಪೆಗಳೂ ಹೊರಗಿದ್ದ ಕಪ್ಪೆ ಗಳೂ ಸೇರಿದಾಗ ಒಂದನ್ನೊಂದು ಬೇರೆಯೆನ್ನುವಂತೆ, ಸ್ಥಾವರ ಜಂಗಮುಗಳು ಒಂದೆಡೆ ಸೇರಿದಾಗ ಅದಕ್ಕಿದು ಇದಕ್ಕದು ಒಂದೊಂದುಸಂಕೇತಮಾಡಿಕೊಳ್ಳಬೇಕಾಗುವುದು.

೬೪. ಚಿದಾಕಾಶದಿಂದ ಪ್ರಚೇತಿತವಾದ ಚಿತ್ತವು ಸರ್ವಾತ್ಮಕವು ಸರ್ವಗತವು ಸರ್ಗಾದಿಯಲ್ಲಿ ಯಾವುದರ ಸ್ಪಂದನದಿಂದ ವಾಯುವು ಹುಟ್ಟಿತೋ ಆ ಚಿತ್ತು ಇನ್ನೂ ಇದ್ದೇಇರುವುದು.

ಚೇತಿತಂ ಯತ್ತು ಸೌಷಿರ್ಯಂ ತನ್ನಭಸ್ತತ್ರ ಮಾರುತಃ |
ಸ್ಪಂದಾತ್ಮೇತ್ಯಾದಿಸರ್ಗೇಹಾಃ ಪದಾರ್ಥೇಷ್ವಿವ ಚೋಪನಂ || ೬೫ ||

ಚಿತ್ತಂತು ಪರಮಾರ್ಥೇನ ಸ್ಥಾವರೆ ಜಂಗಮೇ ಸ್ಥಿತಂ |
ಚೋಪನಾನ್ಯನಿಲೈರೇವ ಭವಂತಿ ನ ಭವಂತಿ ಚ || ೬೬ ||

ಏವಂ ಭ್ರಾಂತಿಮಯೇ ವಿಶ್ವೇ ಪದಾರ್ಥಾಃ ಸಂವಿದಂಶವಃ |
ಸರ್ಗಾದಿಷು ಯಥೈವಾಸಂಸ್ತಥೈವಾದ್ಯಾಪಿ ಸಂಸ್ಥಿತಾಃ || ೬೭ ||

ಯಥಾ ವಿಶ್ವಪದಾರ್ಥಾನಾಂ ಸ್ವಭಾವಸ್ಯ ವಿಜೃಂಭಿತಂ |
ಅಸತ್ಯಮೇವ ಸತ್ಯಾಭಂ ತದೇತತ್ಕಥಿತಂ ತವ || ೬೮ ||

---

೬೫. ನಾಡಿಗಳ ನಡುವೆ ಯಾವುದು ವ್ಯಾಪಾರ ಮಾಡುವುದೋ ಅದೇ ನಭವು, ನಭವಿದ್ದಲ್ಲಿ ಮಾರುತನು ಉಂಟು. ಆ ಮಾರುತನು ಸರ್ವಕ್ರಿಯಾ ಶಕ್ತಿ ರೂಪನು. ಆ ಮಾರುತನ ವ್ಯಾಪಾರದಿಂದ ಸಕಲ ಸಂಕಲ್ಪಗಳೂ ಪದಾರ್ಥಗಳ ವ್ಯಾಪಾರಗಳೂ ನಡೆಯುವುವು.

೬೬. ಚಿತ್ತವು ಸ್ಥಾವರ ಜಂಗಮಗಳೆರಡಲ್ಲಿಯೂ ಇರುವುದು; ಅದರ ವ್ಯಾಪಾರಗಳೆಲ್ಲವೂ ಮಾರುತನವು. ಆದರೆ ಆ ವ್ಯಾಪಾರಗಳು ಜಂಗಮದಲ್ಲಿ ಆಗಿ ಸ್ಥಾವರದಲ್ಲಿ ಆಗದೆ ಹೋಗುವುವು.

೬೭. ಹೀಗೆ ಮೊದಲಿನಿಂದ ಕೊನೆಯವರೆಗೆ ಭ್ರಾಂತಿಮಯವಾಗಿರುವ ವಿಶ್ವದಲ್ಲಿ ಸಂವಿತ್ತಿನ ಕಿರಣಗಳಾಗಿ ಎಲ್ಲಾ ಪದಾರ್ಥಗಳೂ ಇರುವುವು. ಸರ್ಗದ ಆದಿಯಲ್ಲಿ ಹೇಗೆ ಇದ್ದವೋ ಈಗಲೂ ಹಾಗೆಯೇ ಇರುವುವು.

೬೮. ವಿಶ್ವದಲ್ಲಿರುವ ಪದಾರ್ಥಗಳೆಲ್ಲವೂ ಚಿತ್ತಿನ ಚಿತ್ತ್ವದಿಂದಲೇ ವಿಜೃಂಭಿತವಾದವು. ಅದರಿಂದ ಎಲ್ಲವೂ ಅಸತ್ಯಗಳು; ಆದರೂ ಸತ್ಯದಂತೆ ತೋರುವುವು. ಇದನ್ನೇ ನಾನು ನಿನಗೆ ಹೇಳಿದುದು;

ಅಯಮಸ್ತಂ ಗತಃ ಪ್ರಾಯಃ ಪಶ್ಯ ರಾಜಾ ವಿದೂರಥಃ |
ಮಾಲಾಶವಸ್ಯ ಪದ್ಮಸ್ಯ ಪತ್ಯುಸ್ತೇ ಯಾತಿ ಹೃದ್ಗತಂ ॥ ೬೯ ॥

ಪ್ರಬುದ್ಧ ಲೀಲೋವಾಚ :—

ಕೇನ ಮಾರ್ಗೇಣ ದೇವೇಶಿ ಯಾತ್ಯೇಷ ಶವಮಂಡಪಂ |
ಏನಮೇವಾಶು ಪಶ್ಯಂತ್ಯಾವಾವಾಂ ಗಚ್ಛಾವ ಉತ್ತಮೇ ॥ ೭೦ ॥

ಶ್ರೀದೇವ್ಯುವಾಚ—

ಮನುಷ್ಯವಾಸನಾಂತಸ್ಥಂ ಮಾರ್ಗಮಾಶ್ರಿತ್ಯ ಗಚ್ಛತಿ |
ಏಷೋಽಹಮುಪರಂ ಲೋಕಂ ದೂರಂ ಯಾಮೀತಿ ಚಿನ್ಮಯಃ ॥ ೭೧ ॥

ಮಾರ್ಗೇಣೈವಮನೇನೈವ ಯಾವಸ್ತೇಯೇನ (?) ಸಂಮತಂ |
ಪರಸ್ಪರೇಚ್ಛಾವಿಚ್ಛಿತ್ತಿರ್ನ ಹಿ ಸೌಹಾರ್ದಬಂಧನೀ ॥ ೭೨ ॥

---

೬೯. ಈ ವಿದೂರಥ ರಾಜನು ಇನ್ನೇನು ಮೃತನೇ ಆಗಿರುವನು. ಪುಷ್ಪಮಾಲಿಕೆಗಳ ಮಧ್ಯದಲ್ಲಿರುವ ನಿನ್ನ ಗಂಡನಾದ ಪದ್ಮರಾಜನ ಹೃದಯವನ್ನು ಪ್ರವೇಶಿಸುವನು.

೭೦. ಪ್ರಬುದ್ಧಲೀಲೆಯು ಹೇಳಿದಳು;-ಈ ವಿದೂರಥನು ಯಾವ ಮಾರ್ಗದಿಂದ ನಮ್ಮ ಅಂತಃಪುರಕ್ಕೆ ಹೋಗುವನೋ ಎಲೌ ಶ್ರೇಷ್ಠಳೆ, ಅದೇ ಮಾರ್ಗದಿಂದ ನಾವೂ ಇವನನ್ನು ನೋಡಿಕೊಂಡೇ ಹೋಗೋಣ.

೭೧. ಶ್ರೀದೇವಿಯು ಹೇಳಿದಳು:—ಈ ವಿದೂರಥನು ಮನುಷ್ಯ ವಾಸನೆಯಲ್ಲಿರುವ ಮಾರ್ಗವನ್ನು ಹಿಡಿದು ಹೋಗುವನು ; ಅವನಿಗೆ ನಾನು ದೂರದಲ್ಲಿರುವ ಇನ್ನೊಂದು ಲೋಕಕ್ಕೆ ಹೋಗುವೆನು ಎಂಬ ಭಾವನೆಯಿರುವುದು.

೭೨. ನೀನು ಹೇಳಿದಂತೆ ಅವನು ಹೋಗುವ ದಾರಿಯಲ್ಲಿಯೇ ಹೋಗೋಣ. ಪರಸ್ಪರ ಬೇರೆ ಬೇರೆಯಾಗಿ ಭಿನ್ನೈಸುವುದಾದರೆ, ಸೌಹಾರ್ದವೆಲ್ಲಿಯದು ?

ಶ್ರೀ ವಸಿಷ್ಠ ಉವಾಚ—

ಇತಿ ವಿಹಿತಕಥಾಗತಕ್ಲಮಾಯಾಂ
    ಪರಮದೃಶಿ ಪ್ರಸೃತೇ ವಿಬೋಧಭಾನೌ|
ನೃಪತಿವರಸುತಾಮನಸ್ಯುದಾರೇ
    ವಿಗಲಿತಚಿತ್ತಜಡೋ ವಿದೂರಥೋಽಭೂತ್ || ೭೩ ||

ಇತ್ಯಾರ್ಷೇ ಶ್ರೀ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿಪ್ರಕರಣೇ "ಸಂಸಾರಮರಣಾವಸ್ಥಾ ವರ್ಣನಂ" ನಾಮ ಪಂಚಪಂಚಾಶಃ ಸರ್ಗಃ

---

೭೩. ಶ್ರೀ ವಸಿಷ್ಠನು ಹೇಳಿದನು :—ಹೀಗೆ ವಿಹಿತವಾದ ಕಥಾಲಾಪದಿಂದ ಲೀಲೆಗೆ, ಉತ್ತಮ ದೃಷ್ಟಿಯುಂಟಾಗಿ, ಜ್ಞಾನಸೂರ್ಯನುದಯಿಸಿ ಮನಸ್ಸಿನ ಆಯಾಸವೆಲ್ಲವೂ ಪರಿಹಾರವಾಗುತ್ತಿರಲು' ವಿದೂರಥನು ಮರಣ ಮೂರ್ಛೆಗೆ ಸಂದನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ ಉತ್ಪತ್ತಿ ಪ್ರಕರಣದಲ್ಲಿ "ಸಂಸಾರ ಮರಣಾವಸ್ಥಾ ವರ್ಣನಂ" ಎಂಬ ಐವತ್ತೈದನೆಯ ಸರ್ಗವು.

ಷಟ್‌ಪಂಚಾಶಃ ಸರ್ಗ

ಶ್ರೀ ವಸಿಷ್ಠ ಉವಾಚ —

ಏತಸ್ಮಿನ್ನಂತರೇ ರಾಜಾ ಪರಿವೃತ್ತಾಕ್ಷಿತಾರಕಃ |
ಬಭೂವೈಕತನುಪ್ರಾಣಶೇಷಃ ಶುಷ್ಕಸಿತಾಧರಃ || ೧ ||

ಜೀರ್ಣಪರ್ಣಸವರ್ಣಾಭಃ ಕ್ಷೀಣಪಾಂಡುಮುಖಚ್ಛವಿಃ |
ಭೃಂಗಧ್ವನಿತಸಚ್ಛಾಯ ಶ್ವಾಸಕೂಜಾವಿಕೂಣಿತಃ || ೨ ||

ಮಹಾಮರಣಮೂರ್ಚ್ಛಾಂಧಕೂಪೇ ನಿಪತಿತಾಶಯಃ |
ಅಂತರ್ನಿಲೀನ ನಿಃಶೇಷನೇತ್ರಾದೀಂದ್ರಿಯವೃತ್ತಿಮಾನ್ || ೩ ||

ಚಿತ್ರನ್ಯಸ್ತ ಇವಾಕಾರಮಾತ್ರದೃಶ್ಯೋ ವಿಚೇತನಃ |
ನಿಃಸ್ಪಂದಸರ್ವಾವಯವಃ ಸಮುತ್ಕೀರ್ಣ ಇವೋಪಲೇ || ೪ ||

ಬಹುನಾತ್ರ ಕಿಮುಕ್ತೇನ ತನುದೇಶೇನ ತಂ ಜಹೌ |
ಪ್ರಾಣಃ ಪಿಪತಿಷುಂ ವೃಕ್ಷಂ ಸ್ವಂ ಪಕ್ಷೀವಾಂತರಿಕ್ಷಗಃ || ೫ ||

ಐವತ್ತಾರನೆಯ ಸರ್ಗ

೧–೫. ಶ್ರೀ ವಸಿಷ್ಠನು ಹೇಳಿದನು:—ಇಷ್ಟರಲ್ಲಿಯೇ ವಿದೂರಥ ರಾಜನ ಕಣ್ಣಾಲಿಗಳು ಮೇಲಕ್ಕೆ ಸಿಕ್ಕಿಕೊಂಡುವು. ತುಟಿಗಳೆಲ್ಲವೂ ಒಣಗಿ ಬಿಳಿಚಿಕೊಂಡುವು. ಎಲ್ಲೋ ಪ್ರಾಣಶೇಷವುಳ್ಳವನಾದನು. ಒಣಗಿದ ಎಲೆಯ ಬಣ್ಣವುಳ್ಳವನಾಗಿ, ಮುಖದ ಕಾಂತಿಯು ಹೀನವಾಗಿ ಬೆಳ್ಳಗಾಗಿ, ದುಂಬಿಯ ಧ್ವನಿಯಂತೆ ಎಳೆಯುವ ಶ್ವಾಸವುಳ್ಳವನಾದನು. ಆವನ ಹೃದಯವು ಮಹಾ ಮರಣ ಮೂರ್ಛೆಯಲ್ಲಿ ಬಿದ್ದಿತು. ಅವನ ಇಂದ್ರಿಯ ವೃತ್ತಿಗಳೆಲ್ಲವೂ ಸಂಪೂರ್ಣವಾಗಿ ನಿಂತು ಹೋದುವು. ಚಿತ್ರಗತನಾದವನಂತೆ ಆಕಾರಮಾತ್ರನಾಗಿ, ವಿಚೇತನನಾಗಿ, ಯಾವ ಅವಯವದಲ್ಲೂ ಏನೂ ಚೇಷ್ಟೆಯಿಲ್ಲದೆ, ಕಲ್ಲಿನಲ್ಲಿ ಕೆತ್ತಿದ ಬೊಂಬೆಯಂತೆ ಮಲಗಿದ್ದನು. ಎಷ್ಟು ಹೇಳಿಯೇನು ? ಹಾರಬೇಕೆಂದಿರುವ ಹಕ್ಕಿಯು ಮರವನ್ನು ಬಿಟ್ಟು ಆಕಾಶಕ್ಕೆ ಹಾರುವಂತೆ ವಿದೂರಥನ ಪ್ರಾಣವನ್ನು ದೇಹವನ್ನು ಬಿಟ್ಟು ಹೊರಟು ಹೋಯಿತು-

ತೇ ತಂ ದದೃಶತುರ್ಬಾಲೇ ದಿವ್ಯದೃಷ್ಟೀ ನಭೋಗತಂ |
ಜೀವಂ ಪ್ರಾಣಮಯಿ ಸಂವಿದ್ಗಂಧಲೇಶಮಿವಾನಿಲೇ || ೬ ||

ಸಾ ಜೀವಸಂವಿದ್ಗಗನೇ ವಾತೇನ ಮಿಲಿತಾಸತೀ |
ಖೇ ದೂರಂ ಗಂತುಮಾರೇಭೇ ವಾಸನಾನುವಿಧಾಯಿನೀ || ೭ ||

ತಾಮೇವಾನುಸಸಾರಾಥ ಸ್ತ್ರೀದ್ವಯಂ ಜೀವಸಂವಿದಂ |
ಭ್ರಮರೀಯುಗಲಂ ವಾತಲಗ್ನಾಂ ಗಂಧಕಲಾಮಿವ || ೮ ||

ತತೋ ಮುಹೂರ್ತಮಾತ್ರೇಣ ಶಾಂತೇ ಮರಣಮೂರ್ಛನೇ |
ಅಂಬರೇ ಬುಬುಧೇ ಸಂವಿದ್ಗಂಧಲೇಖೇನ ವಾಯುನಾ || ೯ ||

ಅಪಶ್ಯತ್ಪುರುಷಾ ಯಾಮ್ಯಾನ್ನೀಯಮಾನಂ ಚ ತೈರ್ವಪುಃ |
ಬಂಧುಪಿಂಡಪ್ರದಾನೇನ ಶರೀರಂ ಜಾತಮಾತ್ಮನಃ || ೧೦ ||

ಮಾರ್ಗೇ ಕರ್ಮಫಲೋಲ್ಲಾಸಮತಿದೂರತರೇ ಸ್ಥಿತಂ |
ವೈವಸ್ವತಪುರಂ ಪ್ರಾಪ ಜಂತುಭಿಃ ಪರಿವೇಷ್ಟಿತಂ || ೧೧ ||

೬-೭-೮. ದಿವ್ಯದೃಷ್ಟಿಯುಳ್ಳ ಆ ಅಂಗನೆಯರು ಆಕಾಶದಲ್ಲಿರುವ ಆ ಪ್ರಾಣವು ಘ್ರಾಣೇಂದ್ರಿಯವು ಗಾಳಿಯಲ್ಲಿರುವ ಗಂಧಲೇಶವನ್ನು ಹಿಡಿಯುವ ಹಾಗೆ ಕಂಡರು. ಆ ಜೀವವು ಆಕಾಶದಲ್ಲಿ ವಾತ (ಆತಿವಾಹಿಕ ಪ್ರಾಣ) ದೊಡನೆ ಸೇರಿ ತನ್ನ ವಾಸನಾನುಸಾರವಾಗಿ ದೂರ ಪ್ರಯಾಣ ಹೊರಡಲು ಸಿದ್ಧವಾಯಿತು. ಗಾಳಿಯಲ್ಲಿ ಬೆರೆದಿರುವ ಸಣ್ಣ ಗಂಧವನ್ನು ಎರಡು ಭ್ರಮರಿಗಳು ಅನುಸರಿಸಿಕೊಂಡು ಹೋಗುವಂತೆ, ಅವರಿಬ್ಬರೂ ಆ ಜೀವಕಲೆಯನ್ನು ಹಿಂಬಾಲಿಸಿಕೊಂಡು ಹೊರಟರು.

• ೯-೧೦. ಒಂದು ಗಳಿಗೆಯೊಳಗಾಗಿ ಆ ಜೀವಕ್ಕೆ ಮರಣಮೂರ್ಛನವು ಕಳೆಯಿತು. ಮತ್ತೆ ಆಕಾಶದಲ್ಲಿಯೇ ಆತಿವಾಹಿಕ ಪ್ರಾಣದೊಡನೆ ಹೋಗುತ್ತಿರುವ ಜೀವವು ಎಚ್ಚರಗೊಂಡಿತು. ಬಂಧುಗಳು ಕೊಟ್ಟ ಪಿಂಡದಿಂದ ತನಗೆ ಶರೀರವು ಹುಟ್ಟಿರುವುದನ್ನು, ತನ್ನನ್ನು ಕರೆದುಕೊಂಡು ಹೋಗುತ್ತಿರುವ ಯಮದೂತರನ್ನೂ ಕಂಡಿತು.

೧೧. ದಾರಿಯಲ್ಲಿ ತನ್ನ ಕರ್ಮಗಳ ಫಲಗಳೆಲ್ಲವೂ ಬಂದು ನಿಂತಿರುವು

ಪ್ರಾಪ್ತಂ ವೈವಸ್ವತಪುರಮಾದಿದೇಶ ತತೋ ಯಮಃ |
ಅಸ್ಯ ಕರ್ಮಾಣ್ಯಶುಭ್ರಾಣಿ ನೈವ ಸಂತಿ ಕದಾಚನ || ೧೨ ||

ನಿತ್ಯಮೇವಾವದಾತಾನಾಂ ಕರ್ತಾಯಂ ಶುಭಕರ್ಮಣಾಂ |
ಭಗವತ್ಯಾಃ ಸರಸ್ವತ್ಯಾಃ ವರೇಣಾಯಂ ವಿವರ್ಧಿತಃ || ೧೩ ||

ಪ್ರಾಕ್ತನೋಽಸ್ಯ ಶವೀಭೂತೋ ದೇಹೋಽಸ್ತಿ ಕುಸುಮಾಂಬರೇ |
ಪ್ರವಿಶತ್ವೇಷ ತಂ ಗತ್ವಾ ತ್ಯಜ್ಯತಾಮಿತಿ ಚೇತಸಾ || ೧೪ ||

ತತಸ್ತ್ಯಕ್ತೋ ನಭೋಮಾರ್ಗೇ ಯಂತ್ರೋಪಲ ಇವ ಚ್ಯುತಃ |
ಅಥ ಜೀವಕಲಾ ಲೀಲಾ ಜ್ಞಪ್ತಿಶ್ಚೇತಿ ತ್ರಯಂ ನಭಃ || ೧೫ ||

ಪುಪ್ಲುವೇ ಜೀವಲೇಖಾ ತು ರೂಪಿಣ್ಯೌ ತೇ ನ ಪಶ್ಯತಿ |
ತಾಮೇವಾನುಸರಂತ್ಯೌ ತೇ ಸಮುಲ್ಲಂಘ್ಯ ನಭಸ್ತಲಂ || ೧೬ ||

ದನ್ನೂ ಬಹಳ ದೂರದಲ್ಲಿ ನಾನಾ ಜಂತು ಪರಿವೇಷ್ಟಿತವಾಗಿರುವ ವೈವಸ್ವತಪುರವಿರುವುದನ್ನೂ ಕಂಡಿತು;

೧೨-೧೪. ವೈವಸ್ವತನ (ಸಂಯಮಿನೀ) ಪಟ್ಟಣವನ್ನು ಸೇರಲು ಯಮನು "ಇವನಿಗೆ ಅಶುಭವಾದ ಕರ್ಮಗಳು ಯಾವವೂ ಇಲ್ಲ. ಈತನು ಯಾವಾಗಲೂ ಶುಭ ಕರ್ಮಗಳನ್ನೇ ಮಾಡುತ್ತಿದ್ದನು. ಸರಸ್ವತೀ ದೇವಿಯ ವರದಿಂದ ಬೆಳೆದವನು. ಇವನ ಹಿಂದಿನ ದೇಹವು ಕುಸುಮ ರಾಶಿಯಲ್ಲಿ ಶವವಾಗಿ ಇದೆ. ಇವನನ್ನು ಬಿಟ್ಟು ಬಿಡಿ. ಇವನು ಹೋಗಿ ಆ ದೇಹವನ್ನು ಸೇರಿಕೊಳ್ಳಲಿ" ಎಂದು ಅಪ್ಪಣೆ ಮಾಡಿದನು.

೧೫. ಹಾಗೆಯೇ ಯಮದೂತರಿಂದ ಬಿಡುಗಡೆಯನ್ನು ಹೊಂದಿ, ಕವಣೆಯಿಂದ ಹೊರಟ ಕಲ್ಲಿನಂತೆ, ಆಕಾಶ ಮಾರ್ಗದಲ್ಲಿ ಜೀವಕಲೆಯೂ ಅದರ ಹಿಂದೆ ಲೀಲಾಜ್ಞಪ್ತಿಯರೂ ಹೊರಟರು.

೧೬. ಜೀವಲೇಖೆಯು ಆಕಾಶದಲ್ಲಿ ಹಾರಿತು. ತನ್ನನ್ನು ಅನುಸರಿಸಿ ಬರುತ್ತಿರುವ ಲೀಲಾಜ್ಞಪ್ತಿಯರನ್ನು ಕಾಣಲಿಲ್ಲ. ಅವರಿಬ್ಬರೂ ಅವನ ಹಿಂದೆಯೇ ಆಕಾಶದಲ್ಲಿ, ಹಾರಿ ಬಂದರು.

ಲೋಕಾಂತರಾಣ್ಯತೀತ್ಯಾಶು ವಿನಿರ್ಗತ್ಯ ಜಗದ್ಗೃಹಾತ್ |
ದ್ವಿತೀಯಂ ಜಗದಾಸಾದ್ಯ ಭೂಮಂಡಲಮುಪೇತ್ಯ ಚ || ೧೭ ||

ತೇ ದ್ವೇ ಸಂಕಲ್ಪರೂಪಿಣ್ಯೌ ಸಂಗತೇ ಜೀವಲೇಖಯಾ |
ಪದ್ಮರಾಜಪುರಂ ಪ್ರಾಪ್ಯ ಲೀಲಾಂತಃಪುರಮಂಡಪಂ || ೧೮ ||

ಕ್ಷಣಾದ್ವಿವಿಶತುಃ ಸ್ವೈರಂ ವಾತಲೇಖಾ ಯಥಾಂಬುಜಂ |
ಸೂರ್ಯಭಾಸೋ ಯಥಾಂಭೋಜಂ ಸುರಭಿಃ ಪವನಂ ಯಥಾ || ೧೯ ||

ಶ್ರೀ ರಾಮ ಉವಾಚ—

ಬ್ರಹ್ಮನ್ ಪ್ರಾಪ್ತಃ ಕಥಮಸೌ ಶವಸ್ಯ ಸಿಕಟಂ ಗೃಹಂ |
ಕಥಂ ತೇನ ಪರಿಜ್ಞಾತೋ ಮಾರ್ಗೋ ಮೃತಶರೀರಿಣಾ || ೨೦ ||

ಶ್ರೀ ವಸಿಷ್ಠ ಉವಾಚ—

ತಸ್ಯ ಸ್ವವಾಸನಾಂತಸ್ಥಶವಸ್ಯ ಕಿಲ ರಾಘವ |
ತತ್ಸರ್ವಂ ಹೃದ್ಗತಂ ಕಸ್ಮಾನ್ನಾಸೌ ಪ್ರಾಪ್ನೋತಿ ತದ್ಗೃಹಂ || ೨೧ ||

೧೭-೧೯. ಲೀಲಾಜ್ಞಪ್ತಿಯರಿಬ್ಬರೂ ಸಂಕಲ್ಪ ರೂಪಿಣಿಯರು (ಆತಿವಾಹಿಕ ದೇಹದವರು). ಆ ವಿದೂರಥನ ಜೀವಕಳೆಯನ್ನು ಹಿಂಬಾಲಿಸಿ ಪದ್ಮರಾಜಪುರಕ್ಕೆ ಬಂದು, ಲೀಲೆಯ ಅಂತಃಪುರವನ್ನು ಸೂಕ್ಷ್ಮವಾದ ವಾಯು ಲೇಖೆಯು ಕಮಲವನ್ನು ಪ್ರವೇಶಿಸುವಂತೆ, ಸೂರ್ಯನ ಕಿರಣವು ತಾವರೆಯನ್ನು ಸೇರುವಂತೆ ಸುಗಂಧವು ಗಾಳಿಯನ್ನು ಸೇರುವಂತೆ, ಒಂದು ಕ್ಷಣದೊಳಗೆ ಸೇರಿದರು.

೨೦. ಶ್ರೀರಾಮನು ಹೇಳಿದನು:——ಎಲೈ ಬ್ರಹ್ಮನೆ, ವಿದೂರಥನು ಮರಣವನ್ನು ಹೊಂದಿದ್ದನಲ್ಲವೆ ? ಅವನಿಗೆ ಪದ್ಮರಾಜನ ಶವವಿದ್ದ ಅರಮನೆಯೆಂತು ತಿಳಿಯಿತು ! ಅಲ್ಲಿಗೆ ಹಾದಿಯು ತಾನೇ ಹೇಗೆ ಗೊತ್ತಾಯಿತು ?

೨೧. ಶ್ರೀ ವಸಿಷ್ಠನು ಹೇಳಿದನು:—ಎಲೈ ರಾಘವನೆ, ಆ ವಿದೂರಥನ ವಾಸನಾಗರ್ಭದಲ್ಲಿಯೇ ಶವವು ಇದ್ದಿತಲ್ಲವೆ ? ಆದರಿಂದ ಶವ, ಶವವಿರುವ ಅರಮನೆ, ಇವೆಲ್ಲವೂ ಆ ವಿದೂರಥ ಜೀವದ ಹೃದಯಕ್ಕೆ ತಿಳಿದೇ ಇತ್ತು. ಹೀಗಿರಲು, ಅರಮನೆಗೆ ಬರದೆ ಇರುವುದೆಂತು ?

ಭ್ರಾಂತಿಮಾತ್ರಮಸಂಖ್ಯೇಯಂ ಜಗಜ್ಜೀವಕಣೋದರೇ|
ವಟಧಾನಾತರುಮಿವ ಸ್ಥಿತಂ ಕೋ ವಾ ನ ಪಶ್ಯತಿ || ೨೨ ||

ಯಥಾ ಜೀವದ್ವಪುರ್ಬೀಜಮಂಕುರಂ ಹೃದಿ ಪಶ್ಯತಿ |
ಸ್ವಭಾವಭೂತಂ ಚಿದಣುಸ್ತ್ರೈಲೋಕ್ಯನಿಚಯಂ ತಥಾ || ೨೩ ||

ನರೋ ಯಥೈಕದೇಶಸ್ಥೋ ದೂರದೇಶಾಂತರಸ್ಥಿತಂ |
ಸಂಪಶ್ಯತಿ ನಿಧಾನಂ ಸ್ವಂ ಮನಸಾಸಾರತಂ ಸದಾ || ೨೪ ||

ತಥಾ ಸ್ವವಾಸನಾಂತಸ್ಥಮಭೀಷ್ಟಂ ಪರಿಪಶ್ಯತಿ |
ಜೀವೋ ಜಾತಿಶತಾಢ್ಯೋಽಪಿ ಭ್ರಮೇ ಪರಿಗತೋಽಪಿ ಸನ್ || ೨೫ ||

ಶ್ರೀರಾಮ ಉವಾಚ —

ಭಗವನ್ ಪಿಂಡದಾನಾದಿವಾಸನಾರಹಿತಾಕೃತಿಃ |
ಕೀದೃಕ್ ಸಂಪದ್ಯತೇ ಜೀವಃ ಪಿಂಡೋ ಯಸ್ಮೈ ನ ದೀಯತೇ || ೨೬ ||

---

೨೨. ಜೀವವೆಂಬ ಚಿದಣುವಿನ ಉದರದಲ್ಲಿ ಜಗತ್ತೆಂಬ ಭ್ರಾಂತಿಗಳು ಅನೇಕಾನೇಕವಾಗಿರುವುವು. ಆಲದ ಬೀಜದಲ್ಲಿ ಮರವಿರುವಂತೆ ಇದು. ಇದನ್ನು ಯಾರು ತಾನೇ ಕಾಣರು ?

೨೩. ಬದುಕಿರುವ ಬೀಜದಲ್ಲಿ ಅಂಕುರವು ಕಾಣುವಂತೆ, ಚಿದಣುವು. ತನ್ನ ಸ್ವಭಾವದಲ್ಲಿಯೇ ತ್ರೈಲೋಕ್ಯ ಸಮೂಹಗಳು ಇರುವುದನ್ನು ಕಾಣುವುದು

೨೪–೨೫. ಯಾವುದೋ ಒಂದು ದೇಶದಲ್ಲಿರುವ ಮನುಷ್ಯನು ತಾನು ದೇಶಾಂತರದಲ್ಲಿ ಹೂಳಿಟ್ಟಿರುವ ಧನವನ್ನು ತನ್ನ ಮನಸ್ಸಿನಿಂದ ಯಾವಾಗಲೂ ನೋಡುತ್ತಲೇ ಇರುವಂತೆ, ಜೀವನೂ ನೂರಾರು ಜನ್ಮಗಳನ್ನು ಪಡೆದರೂ, ಸಂಸಾರ ಭ್ರಮದಲ್ಲಿ ಮುಳುಗಿದ್ದರೂ ತನ್ನ ವಾಸನೆಯಲ್ಲಿರುವ ಅಭೀಷ್ಟವನ್ನು ನೋಡುತ್ತಲೇ ಇರುವನು.

೨೬. ಶ್ರೀರಾಮನು ಹೇಳಿದನು:–ಭಗವಂತನೇ, ಪಿಂಡದಾನಾದಿ ವಾಸನಾ ರಹಿತನಾದ ಜೀವನು, ತನಗೆ ಯಾರೂ ಪಿಂಡಗಳನ್ನು ಕೊಡದಿರುವಾಗ ಹೇಗಿರುವನು ?

ಶ್ರೀ ವಸಿಷ್ಠ ಉವಾಚ—

ಪಿಂಡೋಽಥ ದೀಯತೆ ಮಾವಾ ಪಿಂಡೋ ದತ್ತೋ ಮಯೇತಿ ಚೇತ್ |
ವಾಸನಾ ಹೃದಿ ಸಂರೂಢಾ ತತ್ಪಿಂಡಫಲಭಾಙ್ನರಃ || ೨೭ ||

ಯಚ್ಚಿತ್ತಂ ತನ್ಮಯೋ ಜಂತುಃ ಭವತೀತ್ಯನುಭೂತಯಃ |
ಸದೇಹೇಷು ವಿದೇಹೇಷು ನ ಭವತ್ಯನ್ಯಥಾ ಕ್ವಚಿತ್ || ೨೮ ||

ಸಪಿಂಡೋಽಸ್ಮೀತಿ ಸಂವಿತ್ತ್ಯಾ ನಿಷ್ಪಿಂಡೋಽಪಿಸಪಿಂಡವಾನ್ |
ನಿಷ್ಪಿಂಡೋಽಸ್ಮೀತಿ ಸಂವಿತ್ತ್ಯಾ ಸಪಿಂಡೋಽಪಿ ನ ಪಿಂಡವಾನ್ || ೨೯ ||

ಯಥಾಭಾವನಮೇತೇಷಾಂ ಪದಾರ್ಥಾನಾಂ ಹಿ ಸತ್ಯತಾ |
ಭಾವನಾ ಚ ಪದಾರ್ಥೇಭ್ಯಃ ಕಾರಣೇಭ್ಯ ಉದೇತಿ ಹಿ || ೩೦ ||

ಯಥಾ ವಾಸನಯಾ ಜಂತೋರ್ವಿಷಮಪ್ಯಮೃತಾಯತೇ |
ಅಸತ್ಯಃ ಸತ್ಯತಾಮೇತಿ ಪದಾರ್ಥೋ ಭಾವನಾತ್ತಥಾ || ೩೧ ||

---

೨೭. ಶ್ರೀ ವಸಿಷ್ಠನು ಹೇಳಿದನು;—ಪಿಂಡವನ್ನು ಇತರರು ಕೊಡಲಿ, ಕೊಡದಿರಲಿ, ನಾನು ಗಂಡವನ್ನು ಕೊಟ್ಟೆನು ಎಂಬ ವಾಸನೆಯೊಂದು ಮನಸ್ಸಿನಲ್ಲಿ ಬಲವಾಗಿರುವುದರಿಂದ, ಪಿಂಡವನ್ನು ಪಡೆದಷ್ಟೇ ಫಲವನ್ನು ಪಡೆಯುವನು.

೨೮. ಚಿತ್ತವೆಂಬುದು ವಾಸನಾ ಜಾಲವು. ಎಂತಹ ಚಿತ್ತವೋ ಜಂತುವೂ ಅಂತಹವನೇ ಆಗಿರುವನು ಎಂಬುದೂ ಅನುಭವಸಿದ್ಧವು. ಈ ಅನುಭವವು ಜಂತುವು ಸದೇಹಿಯಾಗಿರಲಿ, ವಿದೇಹಿಯಾಗಿರಲಿ, ಸುಳ್ಳಾಗುವುದಿಲ್ಲ.

೨೯: ನಾನು ಸಪಿಂಡನು ಎಂಬ ವಾಸನೆಯಿರುವುದರಿಂದ, ಜಂತುವು ನಿಷ್ಪಿಂಡನಾಗಿದ್ದರೂ ಸಪಿಂಡನಂತಾಗುವನು. ನಾನು ನಿಷ್ಪಿಂಡನೆಂಬ ವಾಸನೆಯಿಂದ ಸಪಿಂಡನಾಗಿದ್ದರೂ ನಿಷ್ಪಿಂಡನೇ ಆಗುವನು.

೩೦. ನಮ್ಮ ಭಾವನೆಯು ಎಂಥಹುದೋ ಪದಾರ್ಥಗಳ ಸತ್ಯತೆಯೂ ಅಂಥಹುದೇ!(ನಾವು ಸತ್ಯವೆಂದರೆ ಸತ್ಯ, ಅಸತ್ಯವೆಂದರೆ ಅಸತ್ಯ) ಕಾರಣಗಳಾದ ಪದಾರ್ಥಗಳಿಂದಲೇ ಭಾವನೆಯೂ ಉತ್ಪನ್ನವಾಗುವುದು.

೩೧. ವಾಸನಾಬಲವಿರುವವನಿಗೆ ವಿಷವೂ ಅಮೃತವಾಗುವುದು: ಅಸತ್ಯವೂ ಸತ್ಯವಾಗುವುದು : . ಭಾವನಾಬಲದಿಂದ ಪದಾರ್ಥವು ಭಾವನೆಯಂತೆಯೇ ಆಗುವುದು.

ಕಾರಣೇನ ವಿನೋದೇತಿ ನ ಕದಾಚನ ಕಸ್ಯಚಿತ್ |
ಭಾವನಾ ಕಾಚಿದಪಿ ನೋ ಇತಿ ನಿಶ್ಚಯವಾನ್ಭವ || ೩೨ ||

ಕಾರಣೇನ ವಿನಾ ಕಾರ್ಯಮಾ ಮಹಾಪ್ರಳಯಂ ಕ್ವಚಿತ್ |
ನ ದೃಷ್ಟಂ ನ ಶ್ರುತಂ ಕಿಂಚಿತ್ಸ್ವಯಂ ತ್ವೇಕೋದಯಾದೃತೇ || ೩೩ ||

ಚಿದೇವ ವಾಸನಾ ಸೈವ ಧತ್ತೇ ಸ್ವಪ್ನ ಇವಾರ್ಥತಾಂ |
ಕಾರ್ಯಕಾರಣತಾಂ ಯಾತಿ ಸೈವಾಗತ್ಯೇವ ತಿಷ್ಠತಿ || ೩೪ ||

ಶ್ರೀ ರಾಮ ಉವಾಚ—

ಧರ್ಮೋ ನಾಸ್ತಿ ಮಮೇತ್ಯೇವ ಯಃ ಪ್ರೇತೋ ವಾಸನಾನ್ವಿತಃ |
ತಸ್ಯ ಚೇತ್ಸುಹೃದಾ ಭೂರಿಧರ್ಮಃ ಕೃತ್ವಾ ಸಮರ್ಪಿತಃ || ೩೫ ||

ತತ್ತದಾತ್ರ ಸ ಕಿಂ ಧರ್ಮೋ ನಷ್ಟಃ ಸ್ಯಾದುತ ವಾ ನ ವಾ |
ಸತ್ಯಾರ್ಥಾ ವಾಪ್ಯಸತ್ಯಾರ್ಥಾ ಭಾವನಾ ಕಿಂ ಬಲಾಧಿಕಾ || ೩೬ ||

---

೩೨. ಕಾರಣವಿಲ್ಲದೆ ಯಾವ ಭಾವನೆಯೂ ಯಾರಿಗೂ ಯಾವಾಗಲೂ ಹುಟ್ಟುವುದಿಲ್ಲ ಎಂದು ನಿಶ್ಚಯಿಸಿಕೊ.

೩೩. ಬ್ರಹ್ಮವೊಂದನ್ನು ಬಿಟ್ಟು ಮಿಕ್ಕ ಯಾವುದೇ ಆಗಲೀ, ಮಹಾಪ್ರಲಯದವರೆಗೆ ಯಾವುದೇ ಆಗಲಿ, ಕಾರಣವಿಲ್ಲದೆ ಕಾರ್ಯವಾಗುವುದೆಂಬುದನ್ನು ಯಾರೂ ಎಲ್ಲಿಯೂ ನೋಡಿಯೂ ಇಲ್ಲ ಕೇಳಿಯೂ ಇಲ್ಲ.

೩೪. ಚಿತ್ತೇ ವಾಸನೆಯು. ಅದು ಸ್ವಪ್ನದಂತೆ ಅರ್ಥ (ಬಾಹ್ಯರೂಪ)ವನ್ನು ತಳೆಯುವುದು. ಅದೇ ಕಾರ್ಯಕಾರಣವಾಗುವುದು. ಅದು ಹಾಗೆಯೇ ಅಗತ್ಯವಾಗಿ ನಿಂತಿರುವುದು.

೩೫–೩೬. ಶ್ರೀರಾಮನು ಹೇಳಿದನು :—ಯಾವ ಪ್ರೇತಕ್ಕೆ "ನನಗೆ ಧರ್ಮವಿಲ್ಲ" ಎಂಬ ವಾಸನೆಯು ಬಲವಾಗಿದೆಯೋ, ಅಂತಹವನಿಗೆ ಅವನ ಇಷ್ಟರು ಮೊದಲಾದವರು ಬೇಕಾದ ಹಾಗೆ ಧರ್ಮಮಾಡಿ (ಆ ಧರ್ಮ ಫಲವನ್ನು) ಕೊಟ್ಟರೆ, ಆ ಪ್ರೇತಕ್ಕೆ ಧರ್ಮಫಲದಿಂದ ಲಾಭವಾಗುವುದೇ ? (ಅಥವಾ ಸ್ವವಾಸನೆಯೇ ಬಲವಾಗಿ) ಧರ್ಮಫಲವು ನಷ್ಟವಾಗುವುದೇ ? ಸತ್ಯಾರ್ಥವಾದ ಧರ್ಮ ಫಲ, ಅಸತ್ಯಾರ್ಥವಾದ ಭಾವನಾ, ಈ ಎರಡರಲ್ಲಿ ಯಾವುದು ಬಲ ?

ಶ್ರೀ ವಸಿಷ್ಠ ಉವಾಚ—

ದೇಶಕಾಲಕ್ರಿಯಾದ್ರವ್ಯಸಂಪತ್ತ್ಯೋದೇತಿ ಭಾವನಾ |
ಯತ್ನೈವಾಭ್ಯುದಿತಾ ಸಾ ಸ್ಯಾತ್ಸ ದ್ವಯೋರಧಿಕೋ ಜಯೀ || ೩೭ ||

ಧರ್ಮದಾತುಃ ಪ್ರವೃತ್ತಾ ಚೇದ್ವಾಸನಾ ತತ್ತಯಾ ಕ್ರಮಾತ್ |
ಆಪೂರ್ಯತೇ ಪ್ರೇತಮತಿರ್ನ ಚೇತ್ಪ್ರೇತಧಿಯಾ ಶುಭಾ || ೩೮ ||

ಏವಂ ಪರಸ್ಪರಜಯಾಜ್ಜಯತ್ಯತ್ರಾತಿ ವೀರ್ಯವಾನ್ |
ತಸ್ಮಾಚ್ಛುಭೇನ ಯತ್ನೇನ ಶುಭಾಭ್ಯಾಸಮುದಾಹರೇತ್ || ೩೯ ||

ಶ್ರೀ ರಾಮ ಉವಾಚ :—

ದೇಶಕಾಲಾದಿನಾ ಬ್ರಹ್ಮನ್ ವಾಸನಾ ಸಮುದೇತಿ ಚೇತ್ |
ತನ್ಮಹಾಕಲ್ಪಸರ್ಗಾದೌ ದೇಶಕಾಲಾದಯಃ ಕುತಃ || ೪೦ ||

ಕಾರಣೇ ಸಮುದೇತೀದಂ ತೈಸ್ತದಾ ಸಹಕಾರಿಭಿಃ |
ಸಹಕಾರಿಕಾರಣಾನಾಮಭಾವೇ ವಾಸನಾ ಕುತಃ || ೪೧ ||

---

೩೭. ಶ್ರೀ ವಸಿಷ್ಠನು ಹೇಳಿದನು:—ಭಾವನೆಯು ದೇಶ, ಕಾಲ, ಕ್ರಿಯಾ, ದ್ರವ್ಯಗಳು ಸಂಪನ್ನವಾಗಿದ್ದರೆ ಹುಟ್ಟುವುದು. ಅದು ಯಾವ ಕಾರಣದಿಂದ ಹುಟ್ಟಿತೋ ಅದರಂತಾಗುವುದು. ಎರಡು ಭಾವನೆಗಳಿದ್ದರೆ, ಬಲವಾದದ್ದು ಗೆಲ್ಲುವುದು.

೩೮. ಧರ್ಮ ಮಾಡಿಕೊಡುವವನ ವಾಸನೆಯು ಶಾಸ್ತ್ರಕ್ಕೆ ಅನುಗುಣವಾಗಿ ಕ್ರಮವಾಗಿದ್ದರೆ, ಪ್ರೇತಮತಿಯು ಧರ್ಮವಾಸನಾಪೂರ್ಣವಾಗುವುದು : ಇಲ್ಲದಿದ್ದರೆ ಪ್ರೇತಬುದ್ಧಿಯು ಅಶುಭವಾಸನಾಮಯವಾಗುವುದು.

೩೯. ಹೀಗೆ ಎರಡು ವಾಸನಗಳಲ್ಲಿ ಬಲವಾದುದು ಗೆಲ್ಲುವುದು. ಅದರಿಂದ ಶುಭವಾದ ಯತ್ನದಿಂದ, ಶುಭಾಭ್ಯಾಸವನ್ನು ಬಲಪಡಿಸಬೇಕು.

೪೦. ಶ್ರೀರಾಮನು ಹೇಳಿದನು :—ಎಲೈ ಬ್ರಹ್ಮನೆ, ದೇಶಕಾಲಗಳಿಂದ ವಾಸನೆಯು ಹುಟ್ಟುವುದಾದರೆ, ಮಹಾಕಲ್ಪಸರ್ಗದ ಆದಿಯಲ್ಲಿ ದೇಶಕಾಲಾದಿಗಳು ಎಲ್ಲಿದ್ದುವು ?

೪೧. ಸಹಕಾರಿ ಕಾರಣಗಳಿಂದ ಇದು ಕಾರಣದಲ್ಲಿ ಹುಟ್ಟುವುದು ಎನ್ನುವು

ಶ್ರೀ ವಸಿಷ್ಠ ಉವಾಚ.—

ಏವಮೇತನ್ಮಹಾಬಾಹೋ ಸತ್ಯಾತ್ಮನ್ಯ ಕದಾಚನ ।
ಮಹಾಪ್ರಳಯಸರ್ಗಾದೌ ದೇಶಕಾಲೌ ನ ಕೌಚನ ॥ ೪೨ ॥

ಸಹಕಾರಿಕಾರಣಾನಾಮಭಾವೇ ಸತಿ ದೃಶ್ಯಧೀಃ ।
ನೇಯಮಸ್ತಿ ನಚೋತ್ಪನ್ನಾ ನಚ ಸ್ಫುರತಿ ಕಾಚನ ॥ ೪೩ ॥

ದೃಶ್ಯಸ್ಯಾಸಂಭವಾದೇವ ಕಿಂಚಿದ್ಯದ್ದೃಶ್ಯತೇ ತ್ವಿದಂ ।
ತದ್ಬ್ರಹ್ಮೈವ ಸ್ವಚಿದ್ರೂಪಂ ಸ್ಥಿತಮಿತ್ಥಮನಾಮಯಂ ॥ ೪೪ ॥

ಏತಚ್ಚಾಗ್ರೇ ಯುಕ್ತಿಶತೈಃ ಕಥಯಿಷ್ಯಾಮ ಏವ ತೇ।
ಏತದರ್ಥಂ ಪ್ರಯತ್ನೋಽಯಂ ವರ್ತಮಾನ ಕಥಾಂ ಶೃಣು ॥ ೪೫ ॥

ದಾದರೆ, (ಮೊದಲಲ್ಲಿ) ಸಹಕಾರಿ ಕಾರಣಗಳು ಇರಲಿಲ್ಲವಲ್ಲ, ಆಗ ವಾಸನೆ ಯೆಂತು ಬಂತು ?

೪೨. ಶ್ರೀವಸಿಷ್ಠನು ಹೇಳಿದನು:—ಎಲೈ ಮಹಾಬಾಹುವೇ, ನೀನು ಹೇಳಿದುದು ಸರಿ; ಮಹಾಪ್ರಲಯ ಸರ್ಗಾದಿಗಳಲ್ಲಿ ಆತ್ಮನಲ್ಲಿ ದೇಶಕಾಲಗಳು ಯಾವುದೂ ಇರಲಿಲ್ಲ.

(ದೇಶಕಾಲಗಳು ಆತ್ಮನಿಂದ ಹುಟ್ಟಿದುವು: ಅದರಿಂದ ಆತ್ಮನು ಅವೆರಡಕ್ಕೂ ಆಚಿನವನು: ಅಹಂ ತೇಷು ನ ತೇ ಮಯಿ ಎಂಬಂತೆ.)

೪೩. ಸಹಕಾರಿ ಕಾರಣಗಳು ಇಲ್ಲದಾಗ ಈ ದೃಶ್ಯಬುದ್ಧಿಯು ಇಲ್ಲವೇ ಇಲ್ಲ: ಹುಟ್ಟುವುದೇ ಇಲ್ಲ; ಹೇಗೆ ಹೇಗೂ ಹೊಳೆಯುವುದೇ ಇಲ್ಲ.

೪೪. ದೃಶ್ಯವು ಅಸಂಭವವೆಂದಾಗ, ಯಾವುದು ಯಾವುದು ಕಾಣುವುದೋ ಅದೆಲ್ಲವೂ ಬ್ರಹ್ಮವೇ ! ಬ್ರಹ್ಮವೇ ತನ್ನ ಚಿದ್ರೂಪದಲ್ಲಿ ನಿರ್ವಿಕಾರವಾಗಿ ಇತ್ತು ಎನ್ನಬೇಕು.

೪೫. ಇದೇ ಅರ್ಥವನ್ನೇ ಇನ್ನು ಮುಂದೆಯೂ ನಿನಗೆ ನೂರಾರು ಯುಕ್ತಿಗಳಿಂದ ಬೋಧಿಸುವೆವು. ಅದನು ನಿನಗೆ ತಿಳಿಸುವುದಕ್ಕಾಗಿಯೇ ನಾವು ಈಗ ಪ್ರಯತ್ನಮಾಡುತ್ತಿರುವುದು. ಈಗ, ಹೇಳುತ್ತಿರುವ ಈ ಕಥೆಯನ್ನು ಕೇಳು.

ಏವಂ ದದೃಶತುಃ ಪ್ರಾಪ್ತೇ ಮಂದಿರಂ ಸುಂದರೋದರಂ ।
ಕೀರ್ಣಂ ಪುಷ್ಪೋಪಹಾರೇಣ ವಸಂತಮಿವ ಶೀತಲಂ ॥ ೪೬ ॥

ಪ್ರಶಾಂತಾಚಾರಸಂರಂಭರಾಜಧಾನ್ಯಾ ಸಮನ್ವಿತಂ ।
ಮಂದಾರಕುಂದಮಾಲ್ಯಾದಿಶವಂ ತತ್ರ ಸಮಂ ಸ್ಥಿತಂ ॥ ೪೭ ॥

ಮಂದಾರಕುಂದಸ್ರಗ್ದಾಮವೃತ್ತಾಂಬರ ಬೃಹಚ್ಛವಂ ।
ಶವಶಯ್ಯಾ ಶಿರಃ ಸ್ಥಾಗ್ರ್ಯಪೂರ್ಣಕುಂಭಾದಿ ಮಂಗಲಂ ॥ ೪೮ ॥

ಅನಿವೃತ್ತ ಗೃಹದ್ವಾರಗವಾಕ್ಷಕರಿನಾರ್ಗಲಂ ।
ಪ್ರಶಾಮ್ಯದ್ದೀಪಕಾಲೋಕಶ್ಯಾಮಲಾಮಲಭಿತ್ತಿಕಂ ॥
ಗೃಹೈಕದೇಶಸಂಸುಪ್ತಮುಖಶ್ವಾಸ ಸಮಾಕೃತಂ॥ ॥ ೪೯ ॥

---

೪೬. ಹೀಗೆ ಆ ಲೀಲಾಜ್ಞಪ್ತಿಯರಿಬ್ಬರೂ ಚೆನ್ನಾಗಿ ಅಲಂಕಾರವಾಗಿರುವ ಆ ರಾಜಮಂದಿರವನ್ನು ಸೇರಿದರು. ಆ ಮಂದಿರವು ವಸಂತದಂತೆ ಪುಷ್ಪಾಲಂಕಾರದಿಂದ ತುಂಬಿ ತಂಪಾಗಿತ್ತು.

೪೭. ರಾಜಧಾನಿಯಲ್ಲಿ ಯಾವುದೂ ಹೆಚ್ಚಿನ ರಾಜಕಾರ್ಯಗಳಿಲ್ಲದೆ, ಎಲ್ಲವೂ ಹಾಗೆ ಹಾಗೇ ಇತ್ತು. ಶವವೂ ಕುಂದಮಂದಾರಾದಿ ಕುಸುಮಹಾರಗಳಲ್ಲಿ ಸರಿಯಾಗಿತ್ತು.

೪೮. ಕುಂದ ಮಂದಾರ ಕುಸುಮಮಾಲೆಗಳೆಂಬ ಭಾರಿಯ ವಸ್ತ್ರವನ್ನು ಶವಕ್ಕೆ ಹೊದಿಸಿ, ಶಯ್ಯಾಶಿರಸ್ಥಾನದಲ್ಲಿ ಪೂರ್ಣಕುಂಭಾದಿ ಮಂಗಲ ಪದಾರ್ಥಗಳಿಟ್ಟಿದ್ದರು.

೪೯. ಗೃಹದ್ವಾರಗಳಿಗೂ ಗವಾಕ್ಷಗಳಿಗೂ ಹಾಕಿದ್ದ ಅಗಳಿಗಳು ಹಾಗೆಯೇ ಭದ್ರವಾಗಿದ್ದುವು. ದೀಪಗಳು ಆರುತ್ತ ಬಂದು, ಬೆಳಕು ಮಂದವಾಗಿ, ಬೆಳ್ಳಗಿರುವ ಗೋಡೆಗಳೂ ಮೊಂಕಾಗಿದ್ದವು. ಮೂಲೆಯಲ್ಲಿ ಮಲಗಿದ್ದವರ ಸಮವಾದ ಉಸಿರು ಕೇಳಿಸುತ್ತಿತ್ತು.

ಸಂಪೂರ್ಣಚಂದ್ರ ಸಕಲೋದಯ ಕಾಂತಿಕಾಂತಂ
ಸೌಂದರ್ಯ ನಿರ್ಜಿತ ಪುರಂದರಮಂದಿರರ್ದ್ಧಿ |
ವೈರಂಚಿಪದ್ಮಮುಕುಲಾಂತರ ಚಾರುಶೋಭಂ
ನಿಃಶಬ್ದಮಂದಮಿವ ನಿರ್ಮಲಮಿಂದುಕಾಂತಂ || ೫೦ ||

ಇತ್ಯಾರ್ಷೇ ಶ್ರೀವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
“ ಮರಣಶಯನಾನಂತವ್ಯವಸ್ಥಾ ” ನಾಮ ಷಟ್ಪಂಚಾಶಃ ಸರ್ಗಃ

---

೫೦. ಸಂಪೂರ್ಣ ಚಂದ್ರನು ಷೋಡಶ ಕಲೆಗಳಿಂದಲೂ ಕೂಡಿ ಉದಯವಾಗಿ ತನ್ನ ಕಾಂತಿಯಿಂದ ಎಲ್ಲವನ್ನೂ ಬೆಳಗುತ್ತಿದ್ದನು. ಅರಮನೆಯು ತನ್ನ ಸೌಂದರ್ಯದಿಂದ ಪುರಂದರನ ಸಂಪತ್ತನ್ನೂ ಗೆದ್ದಂತಿತ್ತು. ಬ್ರಹ್ಮನು ಕುಳಿತುಕೊಳ್ಳುವ ಕಮಲದ ಮೊಗ್ಗಿನಂತೆ ನಿರ್ಮಲವಾದ ಚಂದ್ರಿಕೆಯಲ್ಲಿ ನಿಶ್ಶಬ್ದವಾಗಿ ಅರಮನೆಯು ಮನೋಹರವಾಗಿತ್ತು.

ಇಂತು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ “ ಮರಣಶಯನಾನಂತವ್ಯವಸ್ಥಾ ” ಎಂಬ
ಐವತ್ತಾರನೆಯ ಸರ್ಗವು.

ಸಪ್ತಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ತತೋ ದದೃಶತುಸ್ತತ್ರ ಶವಶಯ್ಯೈಕಪಾರ್ಶ್ವಗಾಂ |
ಲೀಲಾಂ ವಿದೂರಥಸ್ಯಾಗ್ರೇ ಮೃತಾಂ ತೇ ಪ್ರಥಮಾಗತಾಂ ‖ ೧ ‖

ಪ್ರಾಗ್ವೇಷಾಂ ಪ್ರಾಕ್ಸಮಾಚಾರಾಂ ಪ್ರಾಗ್ದೇಹಾಂ ಪ್ರಾಕ್ಸವಾಸನಾಂ |
ಪ್ರಾಕ್ತನಾಕಾರಸದೃಶೀಂ ಸರ್ವರೂಪಾಂಗಸುಂದರೀಂ ‖ ೨ ‖

ಪ್ರಾಗ್ರೂಪಾವಯವಸ್ಪಂದಾಂ ಪ್ರಾಗಂಬರಪರೀವೃತಾಂ |
ಪ್ರಾಗ್ಭೂಷಣಭರಚ್ಛನ್ನಾಂ ಕೇವಲಂ ತತ್ರ ಸಂಸ್ಥಿತಾಂ ‖ ೩ ‖

ಗೃಹೀತಚಾಮರಾಂ ಚಾರು ವೀಜಯಂತೀಂ ಮಹೀಪತಿಂ |
ಉದ್ಯಚ್ಚಂದ್ರಾಮಿವ ದಿವಂ ಭೂಷಯಂತೀಂ ಮಹೀತಲಂ ‖ ೪ ‖

ಐವತ್ತೇಳನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :—ಅನಂತರ ಲೀಲಾಜ್ಞಪ್ತಿಯರು ವಿದೂರಥನೆದುರಿಗೆ ಸತ್ತು, ಮೊದಲೇ ಅಲ್ಲಿಗೆ ಬಂದು ಶವಶಯ್ಯೆಯ ಪಾರ್ಶ್ವದಲ್ಲಿರುವ ಎರಡನೆಯ ಲೀಲೆಯನ್ನು ಕಂಡರು.

೨-೩-೪. ಅವಳು ಸರ್ವಾಂಗ ಸುಂದರಿಯಾಗಿ ವೇಷ, ಆಚಾರ, ದೇಹ, ಆಕಾರಗಳಲ್ಲೆಲ್ಲಾ ಮೊದಲಿನಂತೆಯೇ ಇದ್ದಳು. ಅವಳಿಗೆ ತಾನು ಲೀಲೆಯೆಂಬುದೂ ಮರೆತಿರಲಿಲ್ಲ. ಹಿಂದಿನಂತೆಯೇ ರೂಪ ಯೌವನ ಸಂಪನ್ನಳಾಗಿ, ಮೊದಲಿನಂತೆಯೇ ಉಡುವೂ ತೊಡವೂ ಉಳ್ಳವಳಾಗಿ, ಅಲ್ಲಿ ಕುಳಿತಿರುವುದರಿಂದ ಮಾತ್ರ ಬೇರೆಯವಳೋ ಎಂಬಂತೆ ತೋರುತ್ತ ಸುಂದರವಾದ ಚಾಮರವನ್ನು ಅರಸನಿಗೆ ಬೀಸುತ್ತ, ಉದಯಿಸುತ್ತಿರುವ ಚಂದ್ರನು ಆಕಾಶವನ್ನು ವಿಭೂಷಿಸುವಂತೆ ಮಹೀಮಂಡಲವನ್ನು ವಿಭೂಷಿಸುತ್ತ, ಎಡಗೈಯ್ಯಲ್ಲಿ ಮುಖಚಂದ್ರನನ್ನಿಟ್ಟುಕೊಂಡಿರುವುದರಿಂದ ಬಗ್ಗಿ, ಮೌನವಾಗಿ, ಒಡವೆಗಳ ಬೆಳಕೆಂಬ ಅರಳಿದ ಹೂಗಳಿಂದ ಲತೆಯು ವನವನ್ನು ಬೆಳಗುವಂತೆ ಬೆಳಗುತ್ತಿದ್ದಳು.

ಮೌನಸ್ಥಾಂ ವಾಮಹಸ್ತಸ್ಥವದನೇಂದುತಯಾ ನತಾಂ |
ಭೂಷಣಾಂಶುಲತಾಪುಷ್ಪೈಃ ಫುಲ್ಲಾಮಿವ ವನಸ್ಥಲೀಂ || ೫ ||

ಕುರ್ವಾಣಾಂ ವೀಕ್ಷಿತೈರ್ದಿಕ್ಷು ಮಾಲತ್ಯುತ್ಪಲವರ್ಷಣಂ |
ಸೃಜಂತೀಮಾತ್ಮಲಾವಣ್ಯಾದಿಂದುಮಿಂದುಂ ನಭೋದಿತಂ || ೬ ||

ನರಪಾಲಾತ್ಮನೋ ವಿಷ್ಣೋರ್ಲಕ್ಷ್ಮೀಮಿವ ಸಮಾಗತಾಂ |
ಉದಿತಾಂ ಪುಷ್ಪಸಂಭಾರಾದಿವ ಪುಷ್ಪಾಕರಶ್ರಿಯಂ || ೭ ||

ಭರ್ತುರ್ವದನಕೇ ನ್ಯಸ್ತದೃಷ್ಟಿಮಿಷ್ಟವಿಚೇಷ್ಟಿತಾಂ |
ಕಿಂಚಿತ್ ಪ್ರಮ್ಲಾನವದನಾಂ ಮ್ಲಾನಚಂದ್ರಾಂ ನಿಶಾಮಿವ || ೮ ||

ತಾಭ್ಯಾಂ ಸಾ ಲಲನಾ ದೃಷ್ಟಾ ತಯಾ ತೇ ತು ನ ಲಕ್ಷಿತೇ |
ಯಸ್ಮಾತ್ತೇ ಸತ್ಯಸಂಕಲ್ಪೇ ಸಾ ನ ತಾವತ್ತಥೋದಿತಾ || ೯ ||

ಶ್ರೀರಾಮ ಉವಾಚ :—

ತಸ್ಮಿನ್ ಪ್ರದೇಶೇ ಸಾ ಪೂರ್ವಲೀಲಾ ಸಂಸ್ಥಾಪ್ಯ ದೇಹಕಂ|
ಧ್ಯಾನೇನ ಜ್ಞಪ್ತಿಸಹಿತಾ ಗತಾಭೂದಿತಿ ವರ್ಣಿತಂ || ೧೦ ||

೫-೬. ನೋಟಗಳಿಂದಲೇ ದಿಕ್ಕುದಿಕ್ಕುಗಳಲ್ಲೆಲ್ಲ ಮಾಲತೀ, ಉತ್ಪಲ ಮೊದಲಾದ ಹೂಗಳ ಮಳೆಗರೆಯುವಂತೆ ಕಾಣುವ ತನ್ನ ಲಾವಣ್ಯದಿಂದ ಆಕಾಶದಲ್ಲಿ ಕಳಾಹೀನನಾಗಿರುವ ಚಂದ್ರನಿಗೆ ಪ್ರತಿಯಾಗಿ ಕಳಾಪೂರ್ಣನಾದ ಇನ್ನೊಬ್ಬ ಚಂದ್ರನನ್ನು ಹುಟ್ಟಿಸುವಂತೆ ತೋರುತ್ತಿದ್ದಳು.

೭-೮-೯. ನರಪಾಲಾತ್ಮಕನಾದ ಮಹಾವಿಷ್ಣುವಿನ ಜೊತೆಯಲ್ಲಿ ಬಂದ ಮಹಾಲಕ್ಷ್ಮಿಯೋ ಎಂಬಂತೆ, ಹೂವಿನ ರಾಶಿಯಿಂದ ಎದ್ದು ಬಂದ ವಸಂತ ಲಕ್ಷ್ಮಿಯೋ ಎಂಬಂತೆ, ಗಂಡನ ಮೊಗವನ್ನು ನೆಟ್ಟನೋಟದಿಂದ ನೋಡುತ್ತ, ಮೊಂಕಾದ ಚಂದ್ರನಿರುವ ರಾತ್ರಿಯಂತೆ ಕೊಂಚ ಕಂದಿದ ಮುಖವುಳ್ಳವಳಾಗಿದ್ದ ಆ ಲೀಲೆಯನ್ನು ಅವರಿಬ್ಬರೂ ಕಂಡರು. ಅವರಿಬ್ಬರೂ ಸತ್ಯಸಂಕಲ್ಪರಾಗಿದ್ದರಿಂದ ಅವಳಿಗೆ ಅವರು ಕಾಣಲಿಲ್ಲ.

೧೦-೧೧. ಶ್ರೀರಾಮನು ಹೇಳಿದನು :—ಮೊದಲಿನ ಲೀಲೆಯು ತನ್ನ ದೇಹವನ್ನು ಅಲ್ಲಿಯೇ ಬಿಟ್ಟು ಜ್ಞಪ್ತಿದೇವಿಯೊಡನೆ ಧ್ಯಾನದಿಂದ (ಆತಿವಾಹಿಕ ದೇಹದಲ್ಲಿ) ಹೋಗಿದ್ದಳೆಂದು ಮೊದಲು ವರ್ಣಿತವಾಯಿತು. ಈಗ ಅಂತಃಪುರ

ಕಿಮಿದಾನೀಂ ಸ ಲೀಲಾಯಾ ದೇಹಸ್ತತ್ರ ನ ವರ್ಣಿತಃ |
ಕಿಂಸಂಪನ್ನಂ ಕ್ವ ವಾ ಜಾತ ಇತಿ ಮೇ ಕಥಯ ಪ್ರಭೋ || ೧೧ ||

ಶ್ರೀ ವಸಿಷ್ಠ ಉವಾಚ —

ಕ್ವಾಸೀಲ್ಲೀಲಾ ಶರೀರಂ ತತ್ಕುತಸ್ತಸ್ಯಾಸ್ತಿ ಸತ್ಯತಾ |
ಕೇವಲಾ ಭ್ರಾಂತಿರೇವಾಭೂಜ್ಜಲಬುದ್ಧಿರ್ಮರಾವಿವ || ೧೨ ||

ಆತ್ಮೈವೇದಂ ಜಗತ್ಸರ್ವಂ ಕುತೋ ದೇಹಾದಿಕಲ್ಪನಾ |
ಬ್ರಹ್ಮೈವಾನಂದರೂಪಂ ಸದ್ಯತ್ಪಶ್ಯಸಿ ತದೇವ ಚಿತ್ || ೧೩ ||

ಯಥೈವ ಬೋಧೇ ಲೀಲಾಸೌ ಪರಿಣಾಮಮಿತಾ ಕ್ರಮಾತ್ |
ಪರೇ ತಥೈವ ತಸ್ಮಾತ್ತದ್ಧಿಮವದ್ಗಲಿತಂ ವಪುಃ || ೧೪ ||

ಆತಿವಾಹಿಕ ದೇಹಸ್ಯ ಕಾಲೇನಾಭ್ಯುದಿತೋ ಭ್ರಮಃ |
ಆಧಿಭೌತಿಕದೇಹೋಽಹಮಿತಿ ರಜ್ಜುಭುಜಂಗವತ್ || ೧೫ ||

ದಲ್ಲಿ ಲೀಲಾದೇಹವಿತ್ತು ಎಂದು ವರ್ಣಿಸಲಿಲ್ಲವಲ್ಲ? ಎಲ್ಲಿ ಹೋಯಿತು ? ಎಂಬುದನ್ನು ಹೇಳು.

೧೨. ಶ್ರೀ ವಸಿಷ್ಠನು ಹೇಳಿದನು;—ಲೀಲಾ ಶರೀರವು ಎಲ್ಲಿತ್ತು ? ಅದಕ್ಕೆ ಸತ್ಯತೆಯೆಲ್ಲಿತ್ತು ? ಲೀಲಾ ಶರೀರವೆಂಬುದು ಮರುಭೂಮಿಯಲ್ಲಿ ಜಲವುಂಟೆಂಬ ಬುದ್ಧಿಯಂತೆ ಒಂದು ಕೇವಲ ಭ್ರಾಂತಿಯಾಗಿತ್ತು.

೧೩. ಈ ಜಗತ್ತೆಲ್ಲವೂ ಆತ್ಮವೇ ! ಹಾಗಿರಲು ದೇಹಾದಿ ಪ್ರತ್ಯೇಕ ಕಲ್ಪನೆಯೆಂತು ? ಇರುವುದೆಲ್ಲವೂ ಆನಂದರೂಪವಾದ ಬ್ರಹ್ಮವೇ ! ಯಾವ ಯಾವುದನ್ನು ನೋಡುವೆಯೋ ಅದೆಲ್ಲವೂ ಚಿತ್ತೇ!

೧೪. ಪ್ರಬುದ್ಧಲೀಲೆಯು ಆತ್ಮಜ್ಞಾನವನ್ನು ಪಡೆಯುತ್ತಲೂ ಅವಳ ದೇಹವು ಹಿಮದಂತೆ ಕರಗಿ ಹೋಯಿತು.

೧೫. ಆತಿವಾಹಿಕ ದೇಹಕ್ಕೆ ಕಾಲವಶವಾಗಿ ನಾನು ಆಧಿಭೌತಿಕದೇಹವೆಂಬ ಭ್ರಮೆಯು ರಜ್ಜುಭುಜಂಗ ನ್ಯಾಯದಿಂದ ಬರುವುದು.

ಆತಿವಾಹಿಕದೇಹೇನ ದೃಶ್ಯಂ ಯದವಲೋಕಿತಂ |
ಭೂವ್ಯಾದಿ ನಾಮ ತಸ್ಯೈವ ಕೃತಂ ತಚ್ಚಾಧಿಭೌತಿಕಂ ॥ ೧೬ ॥

ವಾಸ್ತವೇನ ತು ರೂಪೇಣ ಭೂವ್ಯಾದ್ಯಾತ್ಮಾಧಿಭೌತಿಕಃ |
ನ ಶಬ್ದೇನ ನ ಚಾರ್ಥೇನ ಸತ್ಯಾತ್ಮಾ ಶಶಶೃಂಗವತ್ ॥ ೧೭ ॥

ಪುಂಸೋ ಹರಿಣಕೋಽಸ್ಮೀತಿ ಸ್ವಪ್ನೇ ಯಸ್ಯೋದಿತಾ ಮತಿಃ |
ಸ ಕಿಮನ್ವಿಷ್ಯತಿ ಮೃಗಂ ಸ್ವಮೃಗತ್ವಪರಿಕ್ಷಯೇ ॥ ೧೮ ॥

ಉದೇತ್ಯಸತ್ಯಮೇವಾಶು ತಥಾಽಸತ್ಯಂ ವಿಲೀಯತೇ |
ಭ್ರಾಂತಿರ್ಭ್ರಮವತೋ ರಜ್ಜ್ವಾಮಪಿ ಸರ್ಪಭ್ರಮೇ ಗತೇ ॥ ೧೯ ॥

ಸಮಸ್ತಸ್ಯಾ ಪ್ರಬುದ್ಧಸ್ಯ ಮನೋಜಾತಸ್ಯ ಕಸ್ಯಚಿತ್ |
ಬೀಜಂ ವಿನಾ ಮೃಷೈವೇಯಂ ಮಿಥ್ಯಾರೂಢಿಮುಪಾಗತಾ ॥ ೨೦ ॥

---

೧೬. ಆತಿವಾಹಿಕ ದೇಹವು ಭೂವ್ಯಾದಿ ಯಾವ ಯಾವ ಪದಾರ್ಥಗಳನ್ನು ನೋಡಿತೋ ಅವೆಲ್ಲವೂ ಆದಿಭೌತಿಕಗಳೇ !

೧೭. ಆ ಆಧಿಭೌತಕಗಳು ಎಲ್ಲವೂ ರೂಪದಿಂದ ಇರುವುವೇ ಹೊರತು ವಾಸ್ತವವಾಗಿ ಇಲ್ಲ: ಆ ಶಬ್ದಗಳು, ಅವುಗಳೂ ಎರಡೂ .ಶಶಶೃಂಗದಂತೆ ಅತ್ಯಂತಾಭಾವಗಳು.

೧೮. ಒಬ್ಬನಿಗೆ ಸ್ವಪ್ನದಲ್ಲಿ ತಾನು ಜಿಂಕೆಯಾಗಿದ್ದಂತೆ ಕಾಣಿಸಿತು. ಎಚ್ಚರವಾದ ಮೇಲೆ ಆ ಜಿಂಕೆಯತನ ಹೋದರೂ, ಅವನು ಮತ್ತೊಂದು ಜಿಂಕೆಯನ್ನು ಹುಡುಕಿಕೊಂಡು ಹೋಗುವನೇನು ?

೧೯. ರಜ್ಜುವಿನಲ್ಲಿ ಬಂದಿದ್ದ ಸರ್ಪಭ್ರಮವು ಹೋದಮೇಲೆ ಭ್ರಾಂತಿಪಟ್ಟಿದ್ದವರ ಭ್ರಾಂತಿಯೂ ಹೋಗುವಂತೆ, ಸತ್ಯದ ಬೋಧವಾಗುತ್ತಲೂ ಅಸತ್ಯವು ಕೂಡಲೇ ನಾಶವಾಗುವುದು.

೨೦. ಬ್ರಹ್ಮಾಂಡವು ಸ್ಥೂಲವಾಗಿ ಇರುವುದೆಂಬ ಭ್ರಾಂತಿಯೊಂದು, ಕಾರಣವಿಲ್ಲದೆ, ಅಜ್ಞಾನಿಗಳಲ್ಲಿ ರೂಢಿಯಾಗಿರುವುದು. ಅದು ಮಿಥ್ಯೆಯು.

ಸ್ವಪ್ನೋಪಲಂಭಂ ಸರ್ಗಾಖ್ಯಂ ಸ ಸರ್ವೋಽನುಭರ್ವ ಸ್ಥಿತಃ |
ಚಿರಮಾವೃತ್ತದೇಹಾತ್ಮಾ ಭೂಚಕ್ರಭ್ರಮಣಂ ಯಥಾ || ೨೧ ||

ಶ್ರೀರಾಮ ಉವಾಚ —

ಬ್ರಹ್ಮನ್ ಲೋಕೈಃ ಪುರಸ್ಥಸ್ಯ ಗಚ್ಛತೋ ಯೋಗಿನೋ ನಿಜಂ |
ಆತಿವಾಹಿಕತಾಂ ದೇಹಃ ಕೇದೃಶೋಽಯಂ ವಿಲೋಕ್ಯತೇ || ೨೨ ||

ಶ್ರೀ ವಸಿಷ್ಠ ಉವಾಚ —

ದೇಹಾದ್ದೇಹಾಂತರಪ್ರಾಪ್ತಿಃ ಪೂರ್ವದೇಹಂ ವಿನಾ ಸದಾ |
ಆತಿವಾಹಿಕದೇಹೇಽಸ್ಮಿನ್ ಸ್ವಪ್ನೇಷ್ವಿವ ವಿನಶ್ವರೀ || ೨೩ ||

ಯಥಾತಪೇ ಹಿಮಕಣಃ ಶರದ್ವ್ಯೋಮ್ನಿ ಸಿತೋಂಬುದಃ |
ದೃಶ್ಯಮಾನೋಽಪ್ಯದೃಶ್ಯತ್ವಮಿತ್ಯೇವಂ ಯೋಗಿದೇಹಕಃ || ೨೪ ||

---

೨೧. ಸೃಷ್ಟಿಯೆಂಬುದು ಸ್ವಪ್ನದಂತೆ: ಅಜ್ಞನು ಅದನ್ನು ಅನೇಕ ಜನ್ಮಗಳಲ್ಲಿ, ಭೂಚಕ್ರಭ್ರಮಣದಂತೆ ಅನುಭವಿಸುತ್ತಿರುವನು. (ಅಪ್ಪಾಲೆ ತಿಪ್ಪಾಲೆ ತಿರುಗಿದ ಮೇಲೆ ಭೂಮಿಯೆಲ್ಲವೂ ಸುತ್ತುವಂತೆ ಕಾಣುವುದು ಭೂಚಕ್ರ ಭ್ರಮಣ.)

೨೨. ಶ್ರೀರಾಮನು ಕೇಳಿದನು :—ಎಲೈ ಬ್ರಹ್ಮನೆ, ಯೋಗಿಯೊಬ್ಬನು ಆಧಿಭೌತಿಕವನ್ನು ಬಿಟ್ಟು ಆತಿವಾಹಿಕ ದೇಹವನ್ನು ಸೇರುವಾಗ ಎದುರಿಗಿದ್ದವರಿಗೆ ಆ ಆಧಿಭೌತಿಕ ದೇಹವೆಂತು ಕಾಣುವುದು ?

೨೩. ಶ್ರೀ ವಸಿಷ್ಠನು ಹೇಳಿದನು :—ಒಂದು ದೇಹದಿಂದ ಇನ್ನೊಂದು ದೇಹಕ್ಕೆ ಹೋಗುವುದು ಸ್ವಪ್ನಗಳಲ್ಲಿ ಆಗುವ ಹಾಗೆ, ಮೊದಲಿನ ದೇಹವೇ ಇನ್ನೊಂದು ರೂಪವಾಗುವುದು. ಅದು ಕ್ಷಣಿಕವು.

೨೪. ಆಗ ನೋಡುತ್ತಿದ್ದವರಿಗೆ ಹಿಮಕಿರಣವು ಬಿಸಿಲಿನಲ್ಲಿ ಕರಗಿ ಹೋಗುವಂತೆ, ಶರದಾಕಾಶದಲ್ಲಿ ಬಿಳಿಯ ಮೋಡದ ಚೂರು ಕಾಣುತ್ತಿದ್ದ ಹಾಗೆಯೇ ಮಾಯವಾಗುವಂತೆ ಯೋಗಿ ದೇಹವು ಅದೃಶ್ಯವಾಗುವುದು.

ದ್ರಾಗಿತ್ಯೇವಾಥವಾ ಕಶ್ಚಿದ್ಯೋಗಿದೇಹೋ ನ ಲಕ್ಷ್ಯತೇ ।
ಯೋಗಿಭಿಶ್ಚ ಪುರೋ ವೇಗಾತ್ಪ್ರೋಡ್ಡೀನ ಇವ ಖೇ ಖಗಃ ॥ ೨೫ ॥

ಸ್ವವಾಸನಾಭ್ರಮೇಣೈವ ಕ್ವಚಿತ್ ಕೇಚಿತ್ಕದಾಚನ ।
ಮೃತೋಽಯಮಿತಿ ಪಶ್ಯಂತಿ ಕೇಚಿದ್ಯೋಗಿನಮುಗ್ರಗಾಃ ॥ ೨೬ ॥

ಭ್ರಾಂತಿಮಾತ್ರಂ ತು ದೇಹಾತ್ಮಾ ತೇಷಾಂ ತಮುಪಶಾಮ್ಯತಿ ।
ಸತ್ಯಬೋಧೇನ ರಜ್ಜ್ವಾನಾಂ ಸರ್ಪಬುದ್ಧಿರಿವಾತ್ಮನಿ ॥ ೨೭ ॥

ಕೋ ದೇಹಃ ತಸ್ಯ ವಾ ಸತ್ತಾ ಕಸ್ಯ ನಾಶಃ ಕಥಂ ಕುತಃ ।
ಸ್ಥಿತಂ ತದೇವ ಯದಭೂದಬೋಧಃ ಕೇವಲಂ ಗತಃ ॥ ೨೮ ॥

(ಇಲ್ಲಿ ತಾತ್ಪರ್ಯ ಪ್ರಕಾಶವು "ಯೋಗಿಗಳಿಗೆ ಮರಣವು ಎರಡು ವಿಧ. ಪ್ರಾರಬ್ಧ ಭೋಗಕ್ಕೋಸ್ಕರ ಸ್ವೇಚ್ಛೆಯಿಂದ ನಾನಾ ದೇಹಕಲ್ಪನವೊಂದು ವಿಧ: ಸರ್ವಪ್ರಾರಬ್ಧ ಕ್ಷಯವಾದ ಮೇಲೆ ಪಡೆಯುವ ವಿದೇಹ ಮುಕ್ತಿಯಿನ್ನೊಂದು ವಿಧ" ಎಂದು ಹೇಳಿ, ೨೪ನೆಯ ಶ್ಲೋಕದಲ್ಲಿ ಮೊದಲನೆಯ ವಿಧವನ್ನೂ ೨೫ನೆಯ ಶ್ಲೋಕದಲ್ಲಿ ಎರಡನೆಯ ವಿಧವನ್ನೂ ಹೇಳಿದೆಯೆನ್ನುತ್ತದೆ.)

೨೫. ಅಥವಾ ಯೋಗಿ ದೇಹವು ಹಠಾತ್ತಾಗಿಯೇ ಕಾಣದೆ ಹೋಗಬಹುದು. ಎದುರಿಗೆ ವೇಗವಾಗಿ ಹಾರಿಹೋದ ಹಕ್ಕಿಯು ಕಣ್ಣಿಗೆ ಕಾಣದೆ ಹೋಗುವಂತೆ ಆಗಿ, ಯೋಗಿಗಳಿಗೂ ಅರಿವಾಗದಂತೆ ಹಠಾತ್ತಾಗಿ ಲಯವಾಗಬಹುದು.

೨೬. ಎದುರಿಗಿರುವವರು ತಮ್ಮ ತಮ್ಮ ವಾಸನಾನುಸಾರವಾಗಿ, ಈ ಯೋಗಿಯು ಸತ್ತನು ಎಂದು ಕೊಳ್ಳುವರು.

೨೭. ಭ್ರಾಂತಿಯಿಂದ ಅವರು ದೇಹವನ್ನೇ ಆತ್ಮವೆಂದು ಕೊಳ್ಳುವರು. ಸತ್ಯವನ್ನು ತಿಳಿದರೆ, ಹಗ್ಗವೆಂದು ತಿಳಿದವನಿಗೆ ಸರ್ಪ ಬುದ್ಧಿಯು ಹೋಗುವಂತೆ ಆ ಭ್ರಾಂತಿಯು ಅಳಿಯುವುದು.

೨೮. ದೇಹವು ಯಾವುದು ? ಅದರ ಸತ್ತಾ ಎಂಥದು ? ಅವಕ್ಕೆ ನಾಶವು ಎಲ್ಲಿಯದು ? ಹೇಗೆ ಬರುವುದು ? ಯಾವುದು ಇತ್ತೋ ಅದು ಇದ್ದೇ ಇರುವುದು. ಹೋದುದು ಕೇವಲ ಅಜ್ಞಾನ ಮಾತ್ರ.

ಶ್ರೀರಾಮ ಉವಾಚ—

ಆತಿವಾಹಿಕತಾಮೇತಿ ಆಧಿಭೌತಿಕ ಏವ ಕಿಂ |
ಉತಾನ್ಯ ಇತಿ ಮೇ ಬ್ರೂಹಿ ಯೇನೋಹ್ಯ ಇವ ಭೋಃ ಪ್ರಭೋ || ೨೯ ||

ಶ್ರೀ ವಸಿಷ್ಠ ಉವಾಚ—

ಬಹುಶೋ ಹ್ಯುಕ್ತಮೇತತ್ತೇ ನ ಗೃಹ್ಣಾಸಿ ಕಿಮುತ್ತಮ |
ಆತಿವಾಹಿಕ ಏವಾಸ್ತಿ ನಾಸ್ತ್ಯೇವೇಹಾಧಿಭೌತಿಕಃ || ೩೦ ||

ತಸ್ಯೈವಾಭ್ಯಾಸತೋಽಪ್ಯೇತಿ ಸಾಧಿಭೌತಿಕತಾಮತಿಃ |
ಯದಾ ಶಾಮ್ಯತಿ ಸೈವಾಸ್ಯ ತದಾ ಪೂರ್ವಾ ಪ್ರವರ್ತತೇ || ೩೧ ||

ತದಾ ಗುರುತ್ವಂ ಕಾಠಿನ್ಯಮಿತಿ ಯಶ್ಚ ಮುಧಾ ಗ್ರಹಃ |
ಶಾಮ್ಯೇತ್ ಸ್ವಪ್ನನರಸ್ಯೇವ ಬೋದ್ಧುರ್ಬೋಧಾನ್ನಿರಾಮಯಾತ್ || ೩೨ ||

---

೨೯. ಶ್ರೀ ರಾಮನು ಕೇಳಿದನು:—ಎಲೈ ಪ್ರಭುವೆ, (ಅತ್ಯಂತಾಭಾವವಾದ) ಆಧಿಭೌತಿಕ ದೇಹವೇ ಆತಿವಾಹಿಕ ದೇಹವಾಗಿ (ಪರಿಣಾಮವನ್ನು ಹೊಂದುವುದೋ? ಅಥವಾ (ಆಧಿಭೌತಿಕದಿಂದ ಭಿನ್ನವಾದ) ಆತಿವಾಹಿಕ ದೇಹವು ಬರುವುದೋ? ಎಂಬುದನ್ನು ಹೇಳು. ಈ (ಸಂಶಯವು)ನನ್ನನ್ನು ಕೊಚ್ಚಿಕೊಂಡು ಹೋಗುವಂತಿರುವುದು.

೩೦. ಶ್ರೀ ವಸಿಷ್ಠನು ಹೇಳಿದನು:—ಉತ್ತಮನೆ, ನಾನು ನಿನಗೆ ಈ ವಿಷಯವನ್ನು ಎಷ್ಟೋ ವಿಧವಾಗಿ ಹೇಳಿದೆನು. ಆದರೂ ನೀನೇಕೆ ಗ್ರಹಿಸಲಿಲ್ಲ? ಇರುವುದು ಆತಿವಾಹಿಕವೇ ಹೊರತು ಆಧಿಭೌತಿಕವಲ್ಲ.

೩೧. ಆತಿವಾಹಿಕ ದೇಹಕ್ಕೆ ವಾಸನಾಬಲದಿಂದ ತಾನು ಆಧಿಭೌತಿಕವೆಂಬ ಬುದ್ಧಿಯುಂಟಾಗುವುದು. ಅದು ಶಾಂತವಾಗುತ್ತಲೂ ಮೊದಲಿದ್ದ ಆತಿವಾಹಿಕ ಬುದ್ಧಿಯೇ ಬರುವುದು.

೩೨. ಆಗ ಆಧಿಭೌತಿಕ ದೇಹದ ವಿಚಾರವಾಗಿ ಮನಸ್ಸಿನಲ್ಲಿರುವ ಗುರುತ್ವ ಕಾಠಿಣ್ಯಾದಿ ಭ್ರಾಂತಿಜ್ಞಾನವು, ಸ್ವಪ್ನಪಟ್ಟಣದ ಸತ್ಯದಂತೆ, ಜ್ಞಾನಿಗೆ ಜ್ಞಾನೋದಯವಾದ ಮೇಲೆ ಶಾಂತವಾಗುವುತು.

ಲಘುತೂಲಸಮಾಪತ್ತಿಸ್ತತಃ ಸಮುಪಜಾಯತೇ |
ಸ್ವಪ್ನೇ ಸ್ವಪ್ನಪರಿಜ್ಞಾನಾದಿವ ದೇಹಸ್ಯ ಯೋಗಿನಃ || ೩೩ ||

ಸ್ವಪ್ನೇ ಸ್ವಪ್ನ ಪರಿಜ್ಞಾನಾದ್ಯಥಾ ದೇಹೋ ಲಘುರ್ಭವೇತ್ |
ತಥಾ ಬೋಧಾದಯಂ ದೇಹಃ ಸ್ಥೂಲವತ್ಪ್ಲುತಿಮಾನ್ಭವೇತ್ || ೩೪ ||

ಅನೇಕದಿನಸಂಕಲ್ಪದೇಹೇ ಪರಿಣತಾತ್ಮನಾಂ |
ಅಸ್ಮಿನ್ದೇಹೇ ಶವೇ ದಗ್ಧೇ ತತ್ಕೈವಾಸ್ಥಿತಿರಾಯುಷಾಂ || ೩೫ ||

ಲಘುದೇಹಾನುಭವನಮವಶ್ಯಂ ಭಾವಿ ವೈ ತಥಾ |
ಪ್ರಬೋಧಾತಿಶಯಾದೇತಿ ಜೀವತಾಮಪಿ ಯೋಗಿನಾಂ || ೩೬ ||

ಉದಿತಾಯಾಂ ಸ್ಮೃತೌ ಯತ್ರ ಸಂಕಲ್ಪಾತ್ಮಾಹಮಿತ್ಯಲಂ |
ಯಾದೃಶಃ ಸ ಭವದ್ದೇಹಸ್ತಾದೃಶೋಽಯಂ ಪ್ರಬೋಧತಃ || ೩೭ ||

---

೩೩. ಸ್ವಪ್ನದಲ್ಲಿ ಇದು ಸ್ವಪ್ನವೆಂಬ ತಿಳಿವಳಿಕೆ ಬಂದರೆ ಆಗುವಂತೆ, ಯೋಗಿಯ ದೇಹಕ್ಕೆ ಹತ್ತಿಯಂತೆ ಲಘುವಾಗುವ ಶಕ್ತಿಯು ಬರುವುದು.

೩೪. ಸ್ವಪ್ನದಲ್ಲಿ ಇದು ಸ್ವಪ್ನವೆಂಬ ತಿಳಿವಳಿಕೆ ಬಂದರೆ ದೇಹವು ಲಘು ವಾಗುವಂತೆ, ಜ್ಞಾನಲಾಭವಾದಾಗ, ಈ ದೇಹವು ಹತ್ತಿಯಂತಾಗಿ ಆಕಾಶ ಗಮ ನಾದಿಗಳನ್ನು ಉಳ್ಳದಾಗುವುದು.

೩೫-೩೬. ಅನೇಕ ದಿನಗಳಿಂದ ಆಧಿಭೌತಿಕ ದೇಹವೇ ತಾನೆಂಬ ಬುದ್ಧಿ ಯು ದೃಢವಾಗಿ, ಆ ದೇಹವೇ ಇರಲಿ ಎಂದು ಹಾರೈಸುತ್ತಿರುವವರಿಗೂ, ಆ ದೇಹವು ಮೃತವಾಗಿ ದಗ್ಧವಾದ ಮೇಲೆ, ಸೂಕ್ಷ್ಮ ಶರೀರವು ಬಂದೇ ಬರುವುದ ಲ್ಲವೆ ? ಹೀಗಿರಲು, ಜ್ಞಾನಾತಿಶಯದಿಂದ ಯೋಗಿಗಳಿಗೆ ಬದುಕಿರುವಾಗಲೇ ಸೂಕ್ಷ್ಮ ದೇಹವು ಬರುವುದರಲ್ಲಿ ಏನು ಅತಿಶಯ ?

೩೭. ನಾನು ಸಂಕಲ್ಪಾತ್ಮನು ಎಂಬ ಸ್ಮರಣೆಯು ಬರುತ್ತಲೂ ದೇಹವು ಏನಾಗುವುದೋ ಹಾಗೆಯೇ ಜ್ಞಾನಬಂದಾಗಲೂ ಆಗುವುದು.

ಭ್ರಾಂತಿರೇವಮಿಯಂ ಭಾತಿ ರಜ್ಜ್ವಾಮಿವ ಭುಜಂಗತಾ |
ಕಿಂ ನಷ್ಟಮಸ್ಯಾಂ ನಷ್ಟಾಯಾಂ ಜಾತಾಯಾಂ ಕಿಂ ಪ್ರಜಾಯತೇ || ೩೮ ||

ಶ್ರೀ ರಾಮ ಉವಾಚ—

ಅನಂತರಂ ಯೇ ವಾಸ್ತವ್ಯಾ ಲೀಲಾಂ ಪಶ್ಯಂತಿ ತೇ ಯದಿ |
ತತ್ಸತ್ಯ ಸಂಕಲ್ಪತಯಾ ಬುಧ್ಯಂತೇ ಕಿಮತಃ ಪ್ರಭೋ || ೩೯ ||

ಶ್ರೀ ವಸಿಷ್ಠ ಉವಾಚ—

ಏವಂ ಜ್ಞಾಸ್ಯಂತಿ ತೇ ರಾಜ್ಞೀ ಸ್ಥಿತೇಯಮಿಹ ದುಃಖಿತಾ |
ವಯಸ್ಯಾ ಕಾಚಿದನ್ಯೇಯಂ ಕುತೋಽಪ್ಯಸ್ಯಾ ಉಪಾಗತಾ || ೪೦ ||

ಸಂದೇಹಃ ಕ ಇವಾತ್ರೈಷಾಂ ಪಶವೋ ಹ್ಯವಿವೇಕಿನಃ |
ಯಥಾದೃಷ್ಟಂ ವಿಚೇಷ್ಟಂತೇ ಕುತ ಏಷಾಂ ವಿಚಾರಣಾ || ೪೧ ||

---

೩೮. ಈ ಸ್ಥೂಲದೇಹವೇ ನಾನೆಂಬ ಭ್ರಾಂತಿಯು ರಜ್ಜುವಿನಲ್ಲಿ ತೋರುವ ಭುಜಂಗತೆಯಂತೆ ಭ್ರಾಂತಿಯು. ಆದರಿಂದ ಈ ಭ್ರಾಂತಿಯು ನಷ್ಟವಾದರೇನು ನಷ್ಟ ? ಹುಟ್ಟಿದರೇನು ಲಾಭ ?

೩೯. ಶ್ರೀರಾಮನು ಕೇಳಿದನು:—ಎಲೈ ಪ್ರಭುವೆ, ಆ ಅಂತಃಪುರದಲ್ಲಿರುವವರು, ಲೀಲೆಯು ತನ್ನನ್ನು ಅವರು ನೋಡಬೇಕೆಂದುಕೊಂಡರೆ, ಅವಳು ಸತ್ಯಸಂಕಲ್ಪಳಾದುದರಿಂದ, ಅವಳನ್ನು ನೋಡಿಯೇ ನೋಡುವರು. ಆಗ ಅವರಿಗೆ ಇವಳೇ ಲೀಲೆಯೆಂದು ತಿಳಿಯುವುದೇ ?

೪೦. ಶ್ರೀ ವಸಿಷ್ಠನು ಹೇಳಿದನು:—ಅವರು 'ರಾಣಿಯು ಇಲ್ಲಿ ದುಃಖಿಸುತ್ತಿರುವಳು: ಅವಳ ಸ್ನೇಹಿತೆಯು ಮತ್ತೊಬ್ಬಳು ಎಲ್ಲಿಂದಲೋ ಬಂದಿರುವಳು' ಎಂದುಕೊಳ್ಳುವರು.

೪೧. ಅವರಿಗೆ ಸಂದೇಹವು ಬರುವುದೇ ಇಲ್ಲ. ಪಶುಗಳಾಗಿ ವಿವೇಕಶೂನ್ಯರಾದವರು ಕಂಡುದನ್ನು ನಿಜವೆಂದು ನಂಬುವರು : ಅದರಂತೆ ನಡೆಯುವರು ; ಅಷ್ಟಲ್ಲದೆ, ಅವರಿಗೆ ವಿಚಾರವೆನ್ನುವುದು ಎಲ್ಲಿ ಬಂತು ?

ಯಥಾ ಲೋಷ್ಟೋ ಲುಠದ್ವೃಕ್ಷಂ ವಂಚಯಿತ್ವಾಶು ಗಚ್ಛತಿ |
ಅಜ್ಞಾನತ್ವೇಽಜ್ಞಪಶವಸ್ತಥಾ ಹ್ಯಸ್ತಿ ಪುರಾದಿಕಂ || ೪೨ ||

ಯಥಾ ಸ್ವಪ್ನವಪುರ್ಬೋಧಾಸ್ನ ಜಾನೇ ಕ್ವೇವ ಗಚ್ಛತಿ |
ಅಸತ್ಯಮೇವ ತದ್ಯಸ್ಮಾತ್ತಥೈವೇಹಾಧಿಭೌತಿಕಂ || ೪೩ ||

ಶ್ರೀ ರಾಮ ಉವಾಚ—

ಭಗವನ್ ಸ್ವಪ್ನಶಿಖರೀ ಪ್ರಬೋಧೇ ಕ್ವೇವ ಗಚ್ಛತಿ |
ಇತಿ ಮೇ ಸಂಶಯಂ ಛಿಂಧಿ ಶರದಭ್ರಮಿವಾನಿಲಃ || ೪೪ ||

ಶ್ರೀ ವಸಿಷ್ಠ ಉವಾಚ—

ಸ್ವಪ್ನಭ್ರಮೇಽಥ ಸಂಕಲ್ಪೇ ಪದಾರ್ಥಾಃ ಪರ್ವತಾದಯಃ |
ಸಂವಿದೋಂತರ್ವಿಲಂತ್ಯೇತೇ ಸ್ಪಂದನಾನ್ಯನಿಲೇ ಯಥಾ || ೪೫ ||

---

೪೨. ಮಣ್ಣಿನ ಹೆಂಟೆಯು ಮರಕ್ಕೆ ತಗಲಿ, ಅದಕ್ಕೆ ಯಾವ ರೀತಿಯಲ್ಲೂ ಏನೂ ಮಾಡಲಾರದೆ ಹಿಂತಿರುಗುವಂತೆ, ಅಜ್ಞರಾದ ಪಶುಸಮಾನರು ಸತ್ಯವನ್ನು ಭೇದಿಸಲಾರರು: ಅದರಿಂದ ಅವರು ಶರೀರ ವಿಷಯದಲ್ಲಿಯೂ ಅಜ್ಞರಾಗಿಯೇ ಇರುವರು.

೪೩. ಅಸತ್ಯವಾದ ಸ್ವಪ್ನ ಶರೀರವು (ಎಚ್ಚರಿಕೆಯಾದಾಗ) ಎಲ್ಲಿ ಹೋಗುವುದು ಎಂಬುದು ತಿಳಿಯುವುದಿಲ್ಲ: ಹಾಗೆಯೇ, ಆಧಿಭೌತಿಕವಾದ ದೇಹವೂ ಅಸತ್ಯವಾದುದರಿಂದ ಎಲ್ಲಿ ಹೋಗುವುದೋ ತಿಳಿಯುವುದಿಲ್ಲ.

೪೪. ಶ್ರೀರಾಮನು ಕೇಳಿದನು: ಸ್ವಪ್ನ ಪರ್ವತವು ಎಲ್ಲಿ ಹೋಗುವುದು? ಎಲೈ ಭಗವಂತನೇ, ಈ ನನ್ನ ಸಂಶಯವನ್ನು, ಶರತ್ಕಾಲದ ಮೋಡವನ್ನು ಹಾರಿಸುವ ಗಾಳಿಯಂತೆ, ನೀನೂ ಪರಿಹರಿಸು.

೪೫. ಶ್ರೀ ವಸಿಷ್ಠನು ಹೇಳಿದನು: ಸ್ಪಂದಗಳೆಲ್ಲವೂ ವಾಯುವಿನಲ್ಲಿ ಬೆರೆತು ಹೋಗುವಂತೆ, ಸ್ವಪ್ನದಲ್ಲಿಯೂ ಸಂಕಲ್ಪದಲ್ಲಿಯೂ ಕಂಡ ಪದಾರ್ಥಗಳೆಲ್ಲವೂ ಸಂವಿತ್ತಿನಲ್ಲಿ ಲಯವಾಗಿ ಹೋಗುವುವು.

ಅಸ್ಪಂದಸ್ಯ ಯಥಾ ವಾಯೋಃ ಸಸ್ಪಂದೋಽಂತರ್ವಿಶತ್ಯಲಂ |
ಅನನ್ಯಾತ್ಮಾ ತಥೈವಾಯಂ ಸ್ವಪ್ನಾರ್ಥಃ ಸಂವಿದೋ ಮಲಂ || ೪೬ ||

ಸ್ವಪ್ನಾದ್ಯರ್ಥಾವಭಾಸೇನ ಸಂವಿದೇವ ಸ್ಫುರತ್ಯಲಂ |
ಅಸ್ಫುರಂತೀ ತು ತೇನೈವ ಯಾತ್ಯೇಕತ್ವಂ ತದಾತ್ಮಿಕಾ || ೪೭ ||

ಸಂವಿತ್ಸ್ವಪ್ನಾರ್ಥಯೋರ್ದ್ವಿತ್ವಂ ನ ಕದಾಚನ ಲಭ್ಯತೇ|
ಯಥಾ ದ್ರವತ್ವಪಯಸೋರ್ಯಥಾ ವಾ ಸ್ಪಂದವಾತಯೋಃ || ೪೮ ||

ಯಸ್ತತ್ರ ಸ್ಯಾದಿವಾಬೋಧಸ್ತದಜ್ಞಾನಮನುತ್ತಮಂ |
ಸೈಷಾ ಸಂಸೃತಿರಿತ್ಯುಕ್ತಾ ಮಿಥ್ಯಾಜ್ಞಾನಾತ್ಮಿಕೋದಿತಾ || ೪೯ ||

ಸಹಕಾರಿಕಾರಣಾನಾಮಭಾವೇ ಕಿಲ ಕೀದೃಶೀ |
ಸಂವಿತ್ಸ್ವಪ್ನಪದಾರ್ಥಾನಾಂ ದ್ವಿತಾ ಸ್ವಪ್ನೇ ನಿರರ್ಥಿಕಾ || ೫೦ ||

---

೪೬. ಸ್ಪಂದವು ನಿಃಸ್ಪಂದವಾದ ವಾಯುವಿನಲ್ಲಿ ಸೇರಿಹೋಗುವಂತೆ, ಪ್ರತ್ಯೇಕವಾದ ಅಸ್ತಿತ್ವವಿಲ್ಲದೆ ಸಂವಿತ್ತಿನ ಮಲವಾಗಿ ತೋರುವ ಸ್ವಪ್ನ ಪದಾರ್ಥವು ಸಂವಿತ್ತಿನಲ್ಲಿಯೇ ಲೀನವಾಗುವುದು.

೪೭. ಸಂವಿತ್ತೇ ಸ್ವಪ್ನ ಪದಾರ್ಥಾದಿಯಾಗಿ ತೋರುವುದು. ಆ ತೋರುವಿಕೆಯು ತಪ್ಪಿದರೆ, ತಾನೂ ಚಿದಾತ್ಮಕವೇ ಆದುದರಿಂದ ಚಿತ್ತಿನೊಡನೆಯೇ ಐಕ್ಯವಾಗುವುದು.

೪೮. ಸಂವಿತ್ತು ಬೇರೆ, ಸ್ವಪ್ನಾರ್ಥವು ಬೇರೆ ಎಂಬ ದ್ವಿತ್ವವು ಯಾವಾಗಲೂ ಇಲ್ಲ. ದ್ರವತ್ವವು ಬೇರೆ, ನೀರು ಬೇರೆ ಎಂದೂ, ಸ್ಪಂದವು ಬೇರೆ, ವಾಯುವು ಬೇರೆ ಎಂದೂ ಎಲ್ಲಾದರೂ ಉಂಟೇನು ?

೪೯. ಒಂದು ವೇಳೆ ಯಾರಾದರೂ ಅವು ಬೇರೆ ಬೇರೆ ಎನ್ನುವುದಾದರೆ, ಅದು ನಿಜವಾಗಿಯೂ ಅಜ್ಞಾನವು: ಅದು ಶ್ರೇಷ್ಠವಾದುದಲ್ಲ: ಅದನ್ನೇ ಸಂಸೃತಿಯೆನ್ನುವರು: ಮಿಥ್ಯಾಜ್ಞಾನದಿಂದ ಹುಟ್ಟಿದುದು ಅದು.

೫೦. ಸಹಕಾರಿ ಕಾರಣಗಳು ಇಲ್ಲದಿರಲು, ಸಂವಿತ್ತಿಗೂ ಸ್ವಪ್ನ ಪದಾರ್ಥಕ್ಕೂ ಭೇದವೆಲ್ಲಿಯದು ? ಆ ಭೇದವಿದೆಯೆನ್ನುವುದು ವ್ಯರ್ಥವು.

ಯಥಾ ಸ್ವಪ್ನಸ್ತಥಾ ಜಾಗ್ರದಿದಂ ನಾಸ್ತ್ಯತ್ರ ಸಂಶಯಃ |
ಸ್ವಪ್ನೇ ಪುರಮಸದ್ಭಾತಿ ಸರ್ಗಾದೌ ಭಾತ್ಯಸಜ್ಜಗತ್ || ೫೧ ||

ನಚಾರ್ಥೋ ಭವಿತುಂ ಶಕ್ಯಃ ಸತ್ಯತ್ವೇ ಸ್ವಪ್ನತೋದಿತಃ |
ಸಂವಿದೋ ನಿತ್ಯಸತ್ಯತ್ವಂ ಸ್ವಪ್ನಾರ್ಥಾನಾಮಸತ್ಯತಾ || ೫೨ ||

ಝುಟಿತ್ಯೇವ ಯಥಾಕಾಶಂ ಭವತಿ ಸ್ವಪ್ನಪರ್ವತಃ |
ಕ್ರಮೇಣ ವಾ ತಥಾ ಬೋಧೇ ಖಂ ಭವತ್ಯಾಧಿಭೌತಿಕಂ || ೫೩ ||

ಉಡ್ಡೀನೋಯಂ ಮೃತೋ ವೇತಿ ಪಶ್ಯಂತಿ ನಿಕಟಸ್ಥಿತಾಃ |
ಜ್ಞಮಾತಿವಾಹಿಕೀಭೂತಂ ಸ್ವಸ್ವಭಾವಹತಾ ಯತಃ || ೫೪ ||

ಮಿಥ್ಯಾದೃಷ್ಟಯ ಏವೇಮಾಃ ಸೃಷ್ಟಯೋ ಮೋಹದೃಷ್ಟಯಃ |
ಮಾಯಾಮಾತ್ರದೃಶೋ ಭ್ರಾಂತಿಃ ಶೂನ್ಯಾಃ ಸ್ವಪ್ನಾನುಭೂತಯಃ || ೫೫ ||

---

೫೧. ಸ್ವಪ್ನವು ಹೇಗೋ ಜಾಗ್ರತ್ತೂ ಹಾಗೆಯೇ! ಇದರಲ್ಲಿ ಏನೂ ಸಂಶಯವಿಲ್ಲ. ಸ್ವಪ್ನದಲ್ಲಿ ಅಸತ್ತಾದ ಪುರಾದಿಗಳು ಭಾಸವಾಗುವಂತೆ, ಸರ್ಗಾದಿಯ.ಲ್ಲಿ (ಜಾಗ್ರತ್ತಿನಲ್ಲಿಯೂ) ಅಸತ್ತಾದ ಜಗತ್ತೇ ಭಾಸವಾಗುವುದು.

೫೨. ಸಂವಿತ್ತು ನಿತ್ಯಸತ್ಯವು: ಸ್ವಪ್ನಾರ್ಥವು ಅಸತ್ಯವು: (ಅದರಿಂದ) ಸ್ವಪ್ನದಲ್ಲಿ ಕಾಣಿಸುವ ಪ್ರಪಂಚವು ಸತ್ಯವೆಂದುಕೊಳ್ಳಲು ಶಕ್ಯವಿಲ್ಲ.

೫೩. ಸ್ವಪ್ನದಲ್ಲಿ ಕಂಡ ಪದಾರ್ಥವು ಎಚ್ಚರವಾಗುತ್ತಿದ್ದ ಹಾಗೆಯೇ ಬಯಲಾಗುವಂತೆ, ಆಧಿಭೌತಿಕವು ಕೂಡ ಕ್ರಮವಾಗಿಯಾದರೂ ಅಥವಾ ಜ್ಞಾನಲಾಭವಾದಾಗಲಾದರೂ ಬಯಲಾಗುವುದು.

೫೪. ಜ್ಞಾನಿಯಾದವನ ಬಳಿಯಲ್ಲಿರುವವರು ತಮ್ಮ ತಮ್ಮ ಅಜ್ಞಾನ ಸ್ವಭಾವಕ್ಕನುಗುಣವಾಗಿ, ಆತನು ಆತಿವಾಹಿಕ ದೇಹಿಯಾದಾಗ, 'ಹಾರಿ ಹೋದನು, ಸತ್ತನು," ಎಂದು ಮುಂತಾಗಿ ತಿಳಿಯುವರು.

೫೫. ಈ ಸೃಷ್ಟಿಗಳೆಲ್ಲವೂ ಮಿಥ್ಯಾದೃಷ್ಟಿಯಿಂದ, ಮೋಹದೃಷ್ಟಿಯಿಂದ, ಸತ್ಯವೆಂದು ಕಾಣುವುವು. ಇವು ಮಾಯಾಮಾತ್ರಗಳು, ಸ್ವಪ್ನಾನುಭವಗಳಂತೆ ಶೂನ್ಯಗಳು.

ಸ್ವಪ್ನಾನುಭೂತಯ ಇವಾಮರಣಾಂತಬೋಧೇ
ಭ್ರಾಂತ್ಯೇತರಭ್ರಮದೃಶಃ ಸ್ಫುಟಸರ್ಗಭಾಸಃ |
ಭ್ರಾಂತ್ಯಾತಿವಾಹಿಕಶರೀರಗತಾಃ ಸಮಸ್ತಾ
ಮಿಥ್ಯೋದಿತಾ ಮೃಗನದೀಸರಣಕ್ರಮೇಣ || ೫೬ ||

ಇತ್ಯಾರ್ಷೇ ಶ್ರೀ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
"ಸ್ವಪ್ನಾರ್ಥಸ್ಯ ವಿಚಾರೋ" ನಾಮ ಸಪ್ತಪಂಚಾಶಃ ಸರ್ಗಃ

---

೫೬. ನಾನಾ ಭ್ರಮಗಳನ್ನು ನೋಡಿ ನೋಡಿ ಇದೇ ಸತ್ಯವೆಂದುಕೊಂಡಿರುವ ಭ್ರಾಂತಿಯುಳ್ಳವನಿಗೆ, ಮರಣಕಾಲದಲ್ಲಿ ಆತಿವಾಹಿಕ ಶರೀರದಲ್ಲಿರುವ ಸ್ವಪ್ನಾನುಭವಗಳೆಲ್ಲವೂ (ಮಾನಸಿಕವೇ ಆದರೂ) ಮಿಥ್ಯೆಯಿಂದ ಬಾಹ್ಯದಲ್ಲಿರುವಂತೆ, ಮೃಗಮರೀಚಿಕೆಯ ನದೀ ಪ್ರವಾಹದಂತೆ, (ಅಸತ್ತಾದರೂ ಸತ್ತಾಗಿ) ಕಾಣುವುವು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಸ್ವಪ್ನಾರ್ಥಸ್ಯ ವಿಚಾರ" ಎಂಬ
ಐವತ್ತೇಳನೆಯ ಸರ್ಗವು.

ಅಷ್ಟಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಏತಸ್ಮಿನ್ನಂತರೇ ಜ್ಞಪ್ತಿರ್ಜೀವಂ ವೈದೂರಥಂ ಪುನಃ |
ಸಂಕಲ್ಪೇನ ರುರೋಧಾಶು ಮನಸಃ ಸ್ಪಂದನಂ ಯಥಾ ‖ ೧ ‖

ಲೀಲೋವಾಚ :—

ವದ ದೇವಿ ಕಿಯಾನ್ಕಾಲೋ ಗತೋಽಸ್ಯಾಮಿಹ ಮಂದಿರೇ |
ಸಮಾಧೌ ಮಯಿ ಲೀನಾಯಾಂ ಮಹೀಪಾಲೇ ಶವೇ ಸ್ಥಿತೇ ‖ ೨ ‖

ಜ್ಞಪ್ತಿರುವಾಚ—

ಇಹ ಮಾಸಸ್ತ್ವತಿಕ್ರಾಂತ ಇಹ ದಾಸ್ಯಾವಿಮೇ ತವ|
ರಕ್ಷಾರ್ಥಂ ವಾಸಗೃಹಕೇ ಸ್ವಪತೋಽವಹಿತೇ ಸ್ಥಿತೇ ‖ ೩ ‖

ಶೃಣು ದೇಹಸ್ಯ ಕಿಂ ವೃತ್ತಂ ತವೇಹ ವರವರ್ಣಿನಿ |
ಶರೀರಂ ತವ ಪಕ್ಷೇಣ ತತ್ಕ್ಲಿನ್ನಂ ಬಾಷ್ಪತಾಂ ಗತಂ ‖ ೪ ‖

ಐವತ್ತೆಂಟನೆಯ ಸರ್ಗ

೧. ಶ್ರೀವಸಿಷ್ಠನು ಹೇಳಿದನು:—ಇಷ್ಟರೊಳಗೆ, ಜ್ಞಪ್ತಿದೇವಿಯು ವಿದೂರಥನ ಜೀವವನ್ನು, ಮನಸ್ಸಿನ ಸ್ಪಂದವನ್ನು ತಡೆಯುವಂತೆ, ಸಂಕಲ್ಪದಿಂದ ತಡೆದಳು.

೨. ಲೀಲೆಯು ಹೇಳಿದಳು:—ಎಲೌ ದೇವಿಯೆ, ನಾನು ಸಮಾಧಿಯನ್ನು ಹೊಂದಿ, ಪದ್ಮರಾಜನು ಶವವಾಗಿ ಎಷ್ಟು ಕಾಲವಾಯಿತು ? ಹೇಳು.

೩. ಜ್ಞಪ್ತಿದೇವಿಯು ಹೇಳಿದಳು:—ಒಂದು ತಿಂಗಳಾಯಿತು. ಇದೋ ನಿನ್ನ ವಾಸಗೃಹದಲ್ಲಿ ರಕ್ಷಾರ್ಥವಾಗಿದ್ದ ಇಬ್ಬರು ದಾಸಿಯರು ಇಲ್ಲಿಯೇ ಮಲಗಿರುವರು.

೪. ಎಲೌ ವರವರ್ಣಿನಿಯೇ, ನಿನ್ನ ದೇಹವು ಏನಾಯಿತು ಎಂಬುದನ್ನು

ನಿರ್ಜೀವಂ ಪತಿತಂ ಭೂಮೌ ಸಂಶುಷ್ಕಮಿವ ಪಲ್ಲವಂ |
ಕಾಷ್ಠಕುಡ್ಯೋಪಮೋ ಜಾತಃ ಶವಸ್ತು ಹಿಮಶೀತಲಃ || ೫ ||

ತತೋ ಮಂತ್ರಿಭಿರಾಗತ್ಯ ಮೃತೈವೇಯಮಿತಿ ಸ್ವಯಂ |
ಕ್ಲೇದಾಲೋಕಾದ್ವಿನಿರ್ಣೀಯ ಭೂಯೋ ನಿಷ್ಕಾಸಿತಂ ಗೃಹಾತ್ || ೬ ||

ಬಹುನಾತ್ರ ಕಿಮುಕ್ತೇನ ನೀತ್ವಾ ಚಂದನದಾರುಭಿಃ |
ಚಿತೌ ಸಂಕ್ಷಿಪ್ಯ ಸಘೃತಂ ಸಹಸಾ ಭಸ್ಮಸಾತ್ಕೃತಂ || ೭ ||

ತತೋ ರಾಜ್ಞೀ ಮೃತೇತ್ಯುಚ್ಚೈಃ ಕೃತ್ವಾ ರೋದನಮಾಕುಲಂ |
ಪರಿವಾರಸ್ತವಾಶೇಷಂ ಕೃತವಾನೌರ್ಧ್ವದೇಹಿಕಂ || ೮ ||

ಇದಾನೀಂ ತ್ವಾಮಿಹಾಲೋಕ್ಯ ಸಶರೀರಾಮುಪಾಗತಾಂ |
ಪರಲೋಕಾದಾಗತೇತಿ ಮಹಚ್ಚಿತ್ರಂ ಭವಿಷ್ಯತಿ || ೯ ||

ಕೇಳು. ನಿನ್ನ ಶರೀರವು ಹದಿನೈದು ದಿನವಾಗುತ್ತಲೂ ಮೊದಲು ನೆನೆದು ಅನಂತರ ಆವಿಯಾಗಿ ಹೋಯಿತು.

(ಕ್ಲಿನ್ನಃ ಸ್ವೇದಾರ್ದ್ರಂ ಸತ್ ಪ್ರಾಣನಿರೋಧ ಪ್ರದೀಪ್ತ ಜಠರಾಗ್ನಿನಾ ತಪ್ಯಮಾನಂ ಬಾಷ್ಪತಾಂ ಸಾರ್ದ್ರಧೂಮತಾಂಗತಂ.—ತಾ.ಪ್ರ.)

೫. ಆಮೇಲೆ, ನಿರ್ಜೀವವಾಗಿ ಒಣಗಿದ ಚಿಗುರಿನಂತೆ, ಭೂಮಿಯಲ್ಲಿ ಬಿದ್ದು, ಆ ದೇಹವು ಹಿಮದಂತೆ ತಣ್ಣಗಾಗಿ ಸೌದೆಯ ಹಾಗೆ ಆಗಿ ಹೋಯಿತು.

೬. ಅನಂತರ ಮಂತ್ರಿಗಳು ಬಂದು ದೇಹವು ತಣ್ಣಗಾಗಿರುವುದರಿಂದ ಈಕೆಯು ಸತ್ತಳೆಂದು ನಿಶ್ಚಯಿಸಿ, ಮನೆಯಿಂದ ಹೊರಕ್ಕೆ ಸಾಗಿಸಿದರು.

೭. ಹೆಚ್ಚು ಹೇಳುವುದೇನು? ಅದನ್ನು ತೆಗೆದುಕೊಂಡು ಹೋಗಿ ಗಂಧದ ಕಟ್ಟಿಗೆಗಳ ಚಿತೆಯಲ್ಲಿಟ್ಟು, ತುಪ್ಪವನ್ನು ಹೊಯ್ದು ಹಚ್ಚಿ ಸುಟ್ಟರು.

೮. ಅನಂತರ ನಿನ್ನ ಪರಿವಾರವು ನಮ್ಮ ರಾಣಿಯು ಸತ್ತಳೆಂದು ಗಟ್ಟಿಯಾಗಿ ಅತ್ತು ಸಮಸ್ತ ಆಪರ ಕರ್ಮವನ್ನು ಮಾಡಿತು.

೯. ಈಗ ಇಲ್ಲಿ ನಿನ್ನನ್ನು ಸಶರೀರಳನ್ನಾಗಿ ನೋಡಿದರೆ, ಪರಲೋಕದಿಂದ ಬಂದಿರುವಳೆಂದು ಬಹು ಆಶ್ಚರ್ಯಪಡುವರು.

ತ್ವಂ ತು ತೇನ ಶರೀರೇಣ ಸತ್ಯಸಂಕಲ್ಪತಃ ಸುತೇ |
ದೃಶ್ಯಸೇ ಸ್ವವದಾತೇನ ಚಿತ್ರಂ ತತ್ರ ತವೋಪರಿ || ೧೦ ||

ಯದ್ವಾಸನಾತ್ವಮುಭವೋ ದೇಹಂ ಪ್ರತಿ ತದೇವ ತೇ |
ರೂಪಮುಭ್ಯುದಿತಂ ಬಾಲೇ ತೇನ ಪ್ರಾಕ್ಸದೃಶಂ ತವ || ೧೧ ||

ಸ್ವವಾಸನಾನುಸಾರೇಣ ಸರ್ವಃ ಸರ್ವಂ ಹಿ ಪಶ್ಯತಿ |
ದೃಷ್ಟಾಂತೋಽತ್ರಾವಿಸಂವಾದೀ ಬಾಲವೇತಾಲದರ್ಶನಾತ್ || ೧೨ ||

ಆತಿವಾಹಿಕದೇಹಾಸಿ ಸಂಪನ್ನಾ ಸಿದ್ಧಸುಂದರಿ |
ವಿಸ್ಮೃತಸ್ತ್ವೇವ ದೇಹೋಽಸೌ ಪ್ರಾಕ್ತನೋಽತನಪವಾಸನಃ || ೧೩ ||

ರೂಢಾತಿವಾಹಿಕದೃಶಃ ಪ್ರಶಾಮ್ಯತ್ಯಾಧಿಭೌತಿಕಃ |
ಬುಧಸ್ಯ ದೃಶ್ಯಮಾನೋಽಪಿ ಶರನ್ಮೇಘ ಇವಾಂಬರೇ || ೧೪ ||

---

೧೦. ನೀನು ಸತ್ಯಸಂಕಲ್ಪಳು. ಅದರಿಂದ ನೀನು ಕೊಂಚವೂ ವ್ಯತ್ಯಾಸ ತೋರದ ಪೂರ್ವದೇಹದಿಂದಲೇ ಅವರಿಗೆ ಕಾಣಿಸುವೆ. ಅದರಿಂದ ನಿನ್ನ ವಿಚಾರ ದಲ್ಲಿ ಅವರೆಲ್ಲರೂ ಆಶ್ಚರ್ಯಪಡುವರು.

೧೧. ನೀನು 'ನಾನು ಹಿಂದಿನ ಲೀಲೆ' ಎಂಬ ದೇಹವಾಸನೆಯುಳ್ಳವಳಾದು ದರಿಂದ ಅದೇ ರೂಪವೇ, ಆಗಿನಂತೆಯೇ, ಈಗ ನಿನಗೆ ಉಂಟಾಗುವುದು.

೧೨. ಪ್ರತಿಯೊಬ್ಬರೂ ತಮ್ಮ ತಮ್ಮ ವಾಸನಾನುಗುಣವಾಗಿಯೇ ಲೋಕ ವನ್ನು ಅನುಭವಿಸುವರು ಎಂಬ ವಿಷಯದಲ್ಲಿ ಬಾಲಕನಿಗೆ ವೇತಾಳ ದರ್ಶನವಾ ವಾಗುವುದೇ ಸರಿಯಾದ ದೃಷ್ಟಾಂತವು.

೧೩. ಸಿದ್ಧಳಾಗಿರುವ ಸುಂದರಿಯೇ ! ನೀನು ಪೂರ್ವ ದೇಹವನ್ನು ಮರೆತಿದ್ದರೂ ನಿನಗೆ ವಾಸನಾ ಶೇಷವಿರುವುದು.

೧೪. ಆತಿವಾಹಿಕ ಜ್ಞಾನವು ಸ್ಥಿರವಾಗಿರುವ ಜ್ಞಾನಿಗೆ, ಅಧಿಭೌತಿಕ ದೇಹವು ಆಕಾಶದಲ್ಲಿ ಶರನ್ಮೇಘವು ಬಯಲಾಗುವಂತೆ ಬಯಲಾಗುವುದು.

ರೂಢಾತಿವಾಹಿಕೀಭಾವಃ ಸರ್ವೋ ಭವತಿ ದೇಹಕಃ |
ನಿರ್ಜಲಾಂಭೋದಸದೃಶೋ ನಿರ್ಗಂಧಕುಸುಮೋಪಮಃ || ೧೫ ||

ಸದ್ವಾಸನಸ್ಯ ರೂಢಾಯಾಮಾತಿವಾಹಿಕಸಂವಿದಿ |
ದೇಹೋ ವಿಸ್ಮೃತಿಮಾಯಾತಿ ಗರ್ಭಸಂಸ್ಥೇವ ಯೌವನೇ || ೧೬ ||

ಏಕತ್ರಿಂಶೋಽದ್ಯ ದಿವಸೋ ಪ್ರಾಪ್ತಾ ವಯಮಿಹಾಂಬರೇ |
ಪ್ರಭಾತೇ ಮೋಹಿತೇ ದಾಸ್ಯೌ ಮಯೈತೇ ನಿದ್ರಯಾಧುನಾ || ೧೭ ||

ತದೇಹಿ ಯಾವಲ್ಲೀಲಾಯೈ ಲೀಲೇ ಸಂಕಲ್ಪಲೀಲಯಾ |
ಆತ್ಮಾನಂ ದರ್ಶಯಾವೋಽಸ್ಯೈ ವ್ಯವಹಾರಃ ಪ್ರವರ್ತತಾಂ || ೧೮ ||

ಶ್ರೀ ವಸಿಷ್ಠ ಉವಾಚ—

ಆವಾಂ ತಾವದಿಮೇ ಲೀಲಾ ಪಶ್ಯತ್ವಿತ್ಯೇವ ಚಿಂತಿತೇ |
ಜ್ಞಪ್ತ್ಯಾ ದೇವ್ಯಾ ತತಸ್ತತ್ರ ದೃಶ್ಯೇ ದೀಪ್ತೇ ಬಭೂವತುಃ || ೧೯ ||

---

೧೫. ಆತಿವಾಹಿಕಭಾವವು ಸ್ಥಿರವಾಗಿರುವ ದೇಹಗಳೆಲ್ಲವೂ ನಿರ್ಜಲವಾದ ಮೇಘಕ್ಕೂ ನಿರ್ಗಂಧ ಕುಸುಮಕ್ಕೂ ಸರಿಯಾಗಿರುವುವು.

೧೬. ವಾಸನಾ ಶೇಷವಿದ್ದರೂ, ಆತಿವಾಹಿಕ ಸಂವಿತ್ತು ಸ್ಥಿರವಾದರೆ, ಯೌವನದಲ್ಲಿ ತಾನು ಹಿಂದೆ ಮಾಡಿದ್ದ ಗರ್ಭವಾಸವು ಮರೆತು ಹೋಗುವಂತೆ, ಸ್ಥೂಲಶರೀರವು ಮರೆತು ಹೋಗುವುದು.

೧೭. ನಾವು ಈ ಸ್ಥಳವನ್ನು ಬಿಟ್ಟು ಅಂಬರವನ್ನು ಸೇರಿ ಇವೊತ್ತಿಗೆ ಮೂವತ್ತೊಂದು ದಿನವಾಯಿತು. ಈಗ ನಾವಿಲ್ಲಿ ಬಂದಿರುವೆವು. ಈ ದಿನ ಬೆಳಿಗ್ಗೆ ಈ ನಿನ್ನ ದಾಸಿಯರಿಬ್ಬರಿಗೂ ನಿದ್ರಾಮೋಹವು ಬರುವಂತೆ ಮಾಡಿದೆನು.

೧೮. ಆದರಿಂದ, ಬಾ, ನಮ್ಮ ಸಂಕಲ್ಪ ಲೀಲೆಯಿಂದ (ವಿದೂರಥ) ಲೀಲೆಗೆ ಕಾಣಿಸಿಕೊಳ್ಳೋಣ. ಇಲ್ಲಿಯ ವ್ಯವಹಾರವು ನಡೆಯಲಿ.

೧೯. ಶ್ರೀ ವಸಿಷ್ಠನು ಹೇಳಿದನು :—ಹೀಗೆ ಆ ಸರಸ್ವತೀದೇವಿಯು, ಈ ಲೀಲೆಯು ನಮ್ಮಿಬ್ಬರನ್ನೂ ನೋಡಲಿ ಎಂದು ಸಂಕಲ್ಪ ಮಾಡುತ್ತಿದ್ದ ಹಾಗೆಯೇ ಆ ಇಬ್ಬರೂ ಅಲ್ಲಿರುವವರ ಕಣ್ಣಿಗೆ ಕಾಣುವರಾದರು.

ಸಾ ವಿದೂರಥಲೀಲಾಥ ಸಮಾಕುಲವಿಲೋಚನಾ |
ಗೃಹಮಾಲೋಕಯಾಮಾಸ ತತ್ತೇಜಃಪುಂಜಭಾಸ್ವರಂ ॥ ೨೦ ॥

ಚಂದ್ರಬಿಂಬಾದಿವೋತ್ಕೀರ್ಣಂ ಧೌತಂ ಹೇಮದ್ರವೈರಿವ |
ಜ್ವಾಲಾಯಾ ಪ್ರವಶೀತಾಯಾಸ್ತತ್ಪ್ರಭಾದ್ರವಭಿತ್ತಿಮತ್ ॥ ೨೧ ॥

ಗೃಹಮಾಲೋಕ್ಯ ಪುರತೋ ಲೀಲಾಜ್ಞಪ್ತೀ ವಿಲೋಕ್ಯ ತೇ |
ಉತ್ಥಾಯ ಸಂಭ್ರಮವತೀ ತಯೋಃ ಪಾದೇಷು ಸಾಪತತ್ ॥ ೨೨ ॥

ಮಜ್ಜಯಾಯಾಗತೇ ದೇವ್ಯೌ ಜಯತಾಂ ಜೀವನಪ್ರದೇ|
ಇಹ ಪೂರ್ವಮಹಂ ಪ್ರಾಪ್ತಾ ಭವತ್ಯೋರ್ಮಾರ್ಗಶೋಧಿನೀ ॥ ೨೩ ॥

ಇತ್ಯುಕ್ತವತ್ಯಾಂ ತಸ್ಯಾಂ ತಾ ಮಾನಿನ್ಯೋ ಮತ್ತಯೌವನಾಃ |
ಉಪಾವಿಶನ್ ವಿಷ್ಟರೇಷು ಲತಾಮೇರುಶಿರಃಸ್ವಿವ ॥ ೨೪ ॥

ಜ್ಞಪ್ತಿರುವಾಚ :—

ಸುತೇ ವದ ಕಥಂ ಪ್ರಾಪ್ತಾ ತ್ವಾಮಿಮಂ ದೇಶಮಾದಿತಃ |
ಕಿಂ ವೃತ್ತಂ ತೇ ತ್ವಯಾ ದೃಷ್ಟಂ ಕಿಮಿವಾಧ್ವನಿ ಕುತ್ರ ವಾ ॥ ೨೫ ॥

---

೨೦. ಆ ವಿದೂರಥ ಲೀಲೆಯಾಗ ತನ್ನ ಕಣ್ಣು ಕುಕ್ಕುತ್ತಿರುವ ತೇಜೋಮಂಡಲಗಳಿಂದ ಮನೆಯೆಲ್ಲವೂ ಬೆಳೆದುದನ್ನು ಕಂಡಳು.

೨೧. ಚಂದ್ರಬಿಂಬದಿಂದ ಎತ್ತಿಟ್ಟಂತೆ, ಚಿನ್ನದ ನೀರಿನಿಂದ ತೊಳೆದಂತೆ, ತಣ್ಣಗೆ ಹರಡಿದ ಅವರ ಪ್ರಭಾರಸದಿಂದ ಗೋಡೆಗಳೆಲ್ಲವೂ ಬೆಳಗಿದುವು.

೨೨. ಹೀಗಿರುವ ಮನೆಯನ್ನೂ ಮುಂಭಾಗದಲ್ಲಿರುವ ಲೀಲಾ ಸರಸ್ವತಿಯರನ್ನೂ ನೋಡಿ, ಅವಳು ಸಂಭ್ರಮದಿಂದ ಎದ್ದು ಅವರ ಪಾದಕ್ಕೆರಗಿದಳು.

೨೩–೨೪. ನನ್ನ ಮಂಗಳಕ್ಕಾಗಿಯೇ ಬಂದಿರುವ ಜೀವನ ಪ್ರದೆಯರಾದ ದೇವಿಯರಿಗೆ ಜಯವಾಗಲಿ, ನಿಮ್ಮಿಬ್ಬರ ಮಾರ್ಗಶೋಧನಕ್ಕಾಗಿಯೇ ನಾನು ಇಲ್ಲಿಗೆ ಮೊದಲು ಬಂದೆನು"-ಎಂದು ಹೇಳಲು, ಅಲ್ಲಿದ್ದ ಹೆಂಗಸರೆಲ್ಲರೂ ಮೇರು ಶಿಖರದಲ್ಲಿ ಲತೆಗಳು ಕುಳಿತುಕೊಳ್ಳುವಂತೆ, ಆಸನಗಳಲ್ಲಿ ಕುಳಿತರು.

೨೫. ಜ್ಞಪ್ತಿದೇವಿಯು ಹೇಳಿದಳು:—ಮಗಳೇ, ನೀನು ಇಲ್ಲಿಗೆ ಮೊದಲು

ವಿದೂರಥಲೀಲೋವಾಚ:—

ದೇವಿ ತಸ್ಮಿನ್ ಪ್ರದೇಶೇ ಸಾ ಜಾತಮೂರ್ಛಾ ತದಾಭವಂ |
ದ್ವಿತೀಯೇಂದೋಃ ಕಲೇವಾಹಂ ಕಲ್ಪಾಂತಜ್ವಾಲಯಾ ಹತಾ ॥ ೨೬ ॥

ನ ಚೇತಿತಂ ಮಯಾ ಕಿಂಚಿತ್ಸಮಂ ವಿಷಮಮೇವ ಚ |
ತತಸ್ತರಲಪಕ್ಷ್ಮಾಂತೇ ವಿನಿಮೀಲ್ಯ ವಿಲೋಚನೇ ॥ ೨೭ ॥

ತತೋ ಮರಣಮೂರ್ಛಾಂತೇ ಪಶ್ಯಾಮಿ ಪರಮೇಶ್ವರಿ |
ಯಾವದಭ್ಯುದಿತಾಸ್ಮ್ಯಾಶು ಪ್ಲುತಾ ಚ ಗಗನೋದರೇ ॥ ೨೮ ॥

ಭೂತಾಕಾಶೇಽನಿಲರಥಂ ಸಮಾರೂಢಾಸ್ಮ್ಯಹಂ ತತಃ |
ಆನೀತಾ ಗಂಧಲೇಖೇವ ತೇನಾಹಮಿಮಮಾಲಯಂ ॥ ೨೯ ॥

ದೇವಿ ಪಶ್ಯಾಮಿ ಸದನಂ ನಾಯಕೇನಾಭ್ಯಲಂಕೃತಂ |
ದೀಪ್ತದೀಪಂ ವಿವಿಕ್ತಂ ಚ ಮಹಾರ್ಹಶಯನಾನ್ವಿತಂ ॥ ೩೦ ॥

ಹೇಗೆ ಬಂದೆ ? ನೀನು ಏನು ಮಾಡಿದೆ ? ಯಾವ ಹಾದಿಯಲ್ಲಿ ಏನೇನು ನೋಡಿಕೊಂಡು ಬಂದೆ ? ಹೇಳು.

೨೬. ವಿದೂರಥ ಲೀಲೆಯು ಹೇಳಿದಳು:—ದೇವಿ, ಅಲ್ಲಿ ಕಲ್ಪಾಂತ ಜ್ವಾಲೆಯಿಂದ ಹತವಾದ ಎರಡನೆಯ ಚಂದ್ರಕಲೆಯೆಂಬಂತೆ, ನಾನು ಮೂರ್ಛಿತಳಾದೆನು.

೨೭. ನಾನು ಬರುವಾಗ ಕಣ್ಣು ಮುಚ್ಚಿತ್ತು: ರೆಪ್ಪೆಗಳು ಅಲುಗುತ್ತಿದ್ದರೂ ದಾರಿಯಲ್ಲಿ ಹಳ್ಳತಿಟ್ಟುಗಳೊಂದೂ ನನಗೆ ಕಾಣಲಿಲ್ಲ.

೨೮-೨೯. ಪರಮೇಶ್ವರಿ, ನನಗೆ ಮರಣ ಮೂರ್ಛೆಯಿಂದ ಎಚ್ಚರವಾದಾಗ ಆಕಾಶದಲ್ಲಿ ಹಾರುತ್ತಿದ್ದೆನು. ಮಹಾಕಾಶದಲ್ಲಿ ಗಾಳಿಯ ತೇರನ್ನೇರಿದ್ದೆನು. ಗಾಳಿಗೆ ಸಿಕ್ಕಿದ ಗಂಧಲೇಖೆಯಂತೆ ಈ ಮನೆಗೆ ಬಂದೆನು.

೩೦-೩೧. ಈ ಮನೆಯಲ್ಲಿ ಯಾರೂ ಇರಲಿಲ್ಲ. ದೀಪಗಳು ಬೆಳಗುತ್ತಿದ್ದವು. ಉತ್ತಮವಾದ ಶಯನದಲ್ಲಿ ನನ್ನ ಪತಿಯು ಮಲಗಿದ್ದನು. ಪುಷ್ಪವನ

ಪತಿಮಾಲೋಕಯಾವಿಾಮಂ ಯಾವದೇಷ ವಿದೂರಥಃ |
ಶೇತೇ ಕುಸುಮಗುಪ್ತಾಂಗೋ ಮಧುಃ ಪುಷ್ಪವನೇ ಯಥಾ || ೩೧ ||

ಅಥ ಸಂಗ್ರಾಮಸಂರಂಭಶ್ರಮಾರ್ತೋ೯ಽಯಂ ಸ್ವಪಿತ್ಯಲಂ |
ಇತಿ ನಿದ್ರಾ ಮಯಾ ಸೇಯಂ ದೇವೇಶ್ವರಿ ನ ವಾರಿತಾ || ೩೨ ||

ಅನಂತರಮಿಮಂ ದೇಶಂ ಪ್ರಾಪ್ತೇ ದೇವ್ಯಾವಿಮೇ ತ್ವಿತಿ |
ಯಥಾನುಭೂತಂ ಕಥಿತಂ ಮದನುಗ್ರಹಕಾರಿಣಿ || ೩೩ ||

ಜ್ಞಪ್ತಿರುವಾಚ :—

ಹೇ ಹಂಸಹಾರಿಗಾಮಿನ್ಯೌ ಲೀಲೇ ಲಲಿತಲೋಚನೇ |
ಉತ್ಥಾಪಯಾವೋ ನೃಪತಿಂ ಶವತಲ್ಪತಲಾದಿಮಂ || ೩೪ ||

ಇತ್ಯುಕ್ತ್ವಾ ಮುಮುಚೇ ಜೀವಮಾಮೋದಮಿವ ಪದ್ಮಿನೀ |
ಸಸಮೀರಲತಾಕಾರಸ್ತನ್ನಾಸಾನಿಕಟಂ ಯಯೌ || ೩೫ ||

ದಲ್ಲಿ ಮಲಗಿದ ವಸಂತನಂತೆ, ನನ್ನ ಪತಿಯಾದ ವಿದೂರಥನು ಹೂವನ್ನು ಹೊದೆದುಕೊಂಡು ಮಲಗಿದ್ದನು.

೩೨–೩೩. ಯುದ್ಧದ ಆಯಾಸದಿಂದ ಮಲಗಿರುವನೆಂದು ದೇವೇಶ್ವರಿಯೆ, ನಾನು ಈತನ ನಿದ್ರೆಯನ್ನು ಕೆಡಿಸಲಿಲ್ಲ. ಅಷ್ಟರಲ್ಲಿಯೇ ನೀವಿಬ್ಬರೂ ಇಲ್ಲಿಗೆ ಬಂದಿರಿ. ಎಲೌ ಅನುಗ್ರಹಕಾರಿಣಿಯೆ, ನಡೆದುದೆಲ್ಲವನ್ನೂ ಹೇಳಿದೆನು.”

೩೪. ಜ್ಞಪ್ತಿಯು ಹೇಳಿದಳು:—ಹಂಸದಂತೆ ಮನೋಹರವಾದ ಗಮನವುಳ್ಳ, ಸುಂದರನೇತ್ರಿಯರಾದ ಲೀಲೆಯರೆ, ಶವತಲ್ಪದಲ್ಲಿ ಮಲಗಿರುವ ಈ ಅರಸನನ್ನು ಎಬ್ಬಿಸೋಣ.

೩೫. ಎಂದು ಹೇಳಿ, ಕಮಲವು ಸುಗಂಧವನ್ನು ಬಿಡುವಂತೆ, ಆಕೆಯು ಪದ್ಮರಾಜನ (ವಿದೂರಥನ) ಜೀವಕಲೆಯನ್ನು ಬಿಟ್ಟಳು : ಅದು ವಾಯುವಿನ ಬಳ್ಳಿಯಂತೆ ಆ ಶವದ ಮೂಗಿನ ಬಳಿಗೆ ಹೋಯಿತು.

ಘ್ರಾಣಕೋಶಂ ವಿವೇಶಾಂತರ್ವಂಶರಂಧ್ರಮಿವಾನಿಲಃ |
ಸ್ವವಾಸನಾಶತಾನ್ಯಂತರ್ದಧದಬ್ಧಿರ್ಮಣೀನಿವ || ೩೬ ||

ಅಂತಸ್ಥಜೀವಂ ವದನಂ ತಸ್ಯ ತತ್ಕಾಂತಿಮಾಯಯೌ |
ಪದ್ಮಸ್ಯಾವಗ್ರಹೇ ಪದ್ಮಂ ಸುವೃಷ್ಟ ಇವ ವಾರಿಣಿ || ೩೭ ||

ಕ್ರಮಾದಂಗಾನಿ ಸರ್ವಾಣಿ ಸರಸಾನಿ ಚಕಾಶಿರೇ |
ತಸ್ಯ ಪುಷ್ಪಾಕರ ಇವ ಲತಾಜಾಲಾನಿ ಭೂಭೃತಃ || ೩೮ ||

ಅಥಾಬಭೌ ಕಲಾಪೂರ್ಣಃ ಸರಾಕಾಯಾಮಿವೋಡುರಾಟ್ |
ಭಾಸಯನ್ ಭುವನಂ ಭೂರಿ ವದನೇಂದುಮರೀಚಿಭಿಃ || ೩೯ ||

ಸ್ಫುರಯಾಮಾಸ ಸೋಽಂಗಾನಿ ರಸವಂತಿ ಮೃದೂನಿ ಚ |
ಕನಕೋಜ್ಜ್ವಲಕಾಂತೀನಿ ಪಲ್ಲವಾನೀವ ಮಾಧವಃ || ೪೦ ||

---

೩೬. ರತ್ನಗಳನ್ನು ಇಟ್ಟುಕೊಂಡಿರುವ ಸಮುದ್ರದಂತೆ, ತನ್ನ ನೂರಾರು ವಾಸನೆಗಳನ್ನು ಒಳಗಿಟ್ಟುಕೊಂಡಿರುವ ಆ ಜೀವನು ಬಿದಿರನ್ನು ವಾಯುವು ಹೊಗುವಂತೆ, ಮೂಗಿನ ಸೊಳ್ಳೆಯೊಳಕ್ಕೆ ಹೋಯಿತು.

೩೭. ಅನಾವೃಷ್ಟಿಯಲ್ಲಿ ಒಣಗಿದ್ದ ಪದ್ಮವು ಚೆನ್ನಾಗಿ ಮಳೆಯಾದಾಗ ಮೆರೆಯುವಂತೆ, ಜೀವವು ಒಳಸೇರುತ್ತಲೂ ಮುಖದ ಕಾಂತಿಯು ಬೆಳಗಿತು.

೩೮. ಬೆಟ್ಟದ ಮೇಲಿರುವ ಬಳ್ಳಿಗಳು ವಸಂತವು ಬರುತ್ತಲೂ ಚಿಗುರುವಂತೆ, ಅತನ ಅವಯವಗಳೆಲ್ಲವೂ ಸರಸಗಳಾಗಿ ಮೆರೆದುವು.

೩೯. ಹುಣ್ಣಿಮೆಯಲ್ಲಿ ಚಂದ್ರನು ಕಲಾಪೂರ್ಣವಾಗಿ ಬೆಳಗುವಂತೆ, ದೊರೆಯು ತನ್ನ ಮುಖಚಂದ್ರ ಕಿರಣಗಳಿಂದ ಲೋಕವನ್ನೆಲ್ಲ ಬೆಳಗಿದನು.

೪೦. ವಸಂತನು ಚಿಗುರುಗಳನ್ನು ಅಲ್ಲಾಡಿಸುವಂತೆ, ಆ ಅರಸನೂ ಸರಸವೂ ಮೃದುವೂ ಕನಕಕಾಂತಿ ಯುಕ್ತವೂ ಆಗಿರುವ ತನ್ನ ಅಂಗಗಳನ್ನು ಅಲ್ಲಾಡಿಸಿದನು.

ಉನ್ಮೀಲಯಾಮಾಸ ದೃಶೌ ವಿಮಲಾಲೋಲತಾರಕೇ |
ಹಾರಿಣ್ಯೌ ಸುಭಗಾಭೋಗೇ ಚಂದ್ರಾರ್ಕಾ ಭುವನಂ ಯಥಾ || ೪೧ ||

ಉತ್ತಸ್ಥೌ ಪ್ರೋಲ್ಲಸತ್ಕಾಯೋ ವಿಂಧ್ಯಾದ್ರಿರ್ವೃದ್ಧಿಮಾನಿವ |
ಉವಾಚ ಕಃ ಸ್ಥಿತ ಇತಿ ಘನಗಂಭೀರನಿಃಸ್ವನಂ || ೪೨ ||

ಲೀಲಾದ್ವಯಮಥಸ್ಯಾಗ್ರೇ ಪ್ರೋವಾಚಾದಿಶ್ಯತಾಮಿತಿ |
ಸ ದದರ್ಶ ಪುರೋ ನಮ್ರಂ ಲೀಲಾದ್ವಯಮವಸ್ಥಿತಂ || ೪೩ ||

ಸಮಾಚಾರಂ ಸಮಾಕಾರಂ ಸಮರೂಪಂ ಸಮಸ್ಥಿತಿ |
ಸಮವಾಕ್ಯಂ ಸಮೋದ್ಯೋಗಂ ಸಮಾನಂದಂ ಸಮೋದಯಂ || ೪೪ ||

ಕಾ ತ್ವಂ ಕೇಯಂ ಕುತಶ್ಚೇಯಮಿತ್ಯಾಹ ಸ ವಿಲೋಕಯನ್ |
ತಸ್ಮೈ ಲೀಲಾಹ ಹೇ ದೇವ ಶ್ರೂಯತಾಂ ಯದ್ವದಾಮ್ಯಹಂ || ೪೫ ||

ಮಹಿಲಾ ತವ ಲೀಲಾಹಂ ಪ್ರಾಕ್ತನೀ ಸಹಧರ್ಮಿಣೀ |
ವಾಗರ್ಥಸ್ಯೇವ ಸಂಪೃಕ್ತಾ ಸ್ಥಿತಾ ಸಂಶ್ಲೇಷಶಾಲಿನೀ || ೪೬ ||

---

೪೧. ಭುವನ(ವಿರಾಟ್ಪುರುಷ)ನು ತನ್ನ ಕಣ್ಣುಗಳಾದ ಸೂರ್ಯ ಚಂದ್ರರನ್ನು ಬಿಡುವಂತೆ, ಆ ಅರಸನೂ ನಿರ್ಮಲವೂ ಚಂಚಲ ತಾರಕೆಗಳುಳ್ಳದೂ ಮುದ್ದಾದುದೂ ಆದ ತನ್ನ ಕಣ್ಣುಗಳನ್ನು ತೆರೆದನು.

೪೨. ಮಲಗಿದ್ದು ಬೆಳೆದೆದ್ದ ವಿಂಧ್ಯ ಪರ್ವತದಂತೆ, ಅರಸನು ಮೇಲಕ್ಕೆದ್ದು ಅಲ್ಲಿ ಯಾರು ಇರುವರು ಎಂದು ಮೇಘ ಗಂಭೀರಧ್ವನಿಯಿಂದ ಕೂಗಿದನು.

೪೩-೪೪. ಆಗ ಲೀಲೆಯರಿಬ್ಬರೂ ಮುಂದೆ ನಿಂತು ನಮ್ರವಾಗಿ ಅಪ್ಪಣೆಯಾಗಬೇಕು ಎಂದು ಹೇಳಿದರು. ಆಚಾರ, ಆಕಾರ, ವೇಷ, ನಡತೆ, ಮಾತು, ವ್ಯವಹಾರ, ಸಂತೋಷ ಸಮೃದ್ಧಿ ಎಲ್ಲದರಲ್ಲಿಯೂ ಒಂದೇ ಸಮನಾಗಿರುವ ಆ ಲೀಲೆಯರಿಬ್ಬರನ್ನು ಅರಸನು ನೋಡಿದನು.

೪೫-೪೯. ನೀನು ಯಾರು ? ಇವಳು ಯಾರು ? ಎಲ್ಲಿಂದ ಬಂದಳು ? ಎಂದು ಕೇಳಲು, (ಪೂರ್ವ) ಲೀಲೆಯು, "ದೇವ, ನಾನು ಹೇಳುವುದನ್ನು ಕೇಳಬೇಕು, ನಾನು ನಿನ್ನ ಲೀಲೆಯು, ಮೊದಲಿನ ಸಹಧರ್ಮಿಣಿಯು, ಅರ್ಥದೊಡನೆ ಬೆರೆತ ವಾಕ್ಕಿನಂತೆ, ನಿನ್ನೊಡನೆ ಬೆರೆತು ಬಾಳಿದವಳು. ಇವಳು ಎರಡನೆಯ ಲೀಲೆಯು, ಇವಳೂ ನಿನ್ನ ಭಾರ್ಯೆಯೇ. ನಾನು ನಿನ್ನ ವಿಹಾರಾರ್ಥವಾಗಿ,

ಇಯಂ ಲೀಲಾ ದ್ವಿತೀಯಾ ತೇ ಮಹಿಲಾ ಹೇಲಯಾ ಮಯಾ |
ಉಪಾರ್ಜಿತಾ ತ್ವದರ್ಥೇನ ಪ್ರತಿಬಿಂಬಮಯೀ ಶುಭಾ || ೪೭ ||

ಶಿರೋಭಾಗೋಪವಿಷ್ಟೇಯಂ ಪಾಹಿ ಹೈಮಮಹಾಸನೇ |
ಏಷಾ ಸರಸ್ವತೀ ದೇವ ತ್ರೈಲೋಕ್ಯಜನನೀ ಶಿವಾ || ೪೮ ||

ಅಸ್ಮಾಕಂ ಪುಣ್ಯಸಂಭಾರೈರಿಹ ಸಾಕ್ಷಾದುಪಾಗತಾ |
ಅನಯೇಮೇ ಪರಾಲ್ಲೋಕಾದಿಹಾನೀತೇ ಮಹೀಪತೇ || ೪೯ ||

ಇತ್ಯಾಕರ್ಣ್ಯ ಸಮುತ್ಥಾಯ ರಾಜಾ ರಾಜೀವಲೋಚನಃ |
ಲಂಬಮಾಲ್ಯಾಂಬರಧರಃ ಪಪಾತ ಜ್ಞಪ್ತಿಪಾದಯೋಃ || ೫೦ ||

ಸರಸ್ವತಿ ನಮಸ್ತುಭ್ಯಂ ದೇವಿ ಸರ್ವಹಿತಪ್ರದೇ |
ಪ್ರಯಚ್ಛ ವರದೇ ಮೇಧಾಂ ದೀರ್ಘಮಾಯುರ್ಧನಾನಿ ಚ || ೫೧ ||

ಇತ್ಯುಕ್ತವಂತಂ ಹಸ್ತೇನ ಪಸ್ಪರ್ಶ ಜ್ಞಪ್ತಿದೇವತಾ |

ಶ್ರೀಸರಸ್ವತ್ಯುವಾಚ:—

ತ್ವಂ ಪುತ್ರಾಭಿಮತಾರ್ಥಾರ್ಥ್ಯೋ ಭವೇತಿ ಭವನಾನ್ವಿತಃ || ೫೨ ||

ನನ್ನ ಪ್ರತಿಬಿಂಬದಂತಿರುವ, ಈ ಶೋಭನಾಂಗಿಯನ್ನು ಸಂಪಾದಿಸಿರುವೆನು. ನಿನ್ನ ತಲೆಯ ಕಡೆ, ಸ್ವರ್ಣಾಸನದಲ್ಲಿ ಕುಳಿತಿರುವ ಈಕೆಯು ಸರಸ್ವತಿಯು. ದೇವ, ಈಕೆಯು ಮಂಗಳ ಸ್ವರೂಪಳಾದ ತ್ರೈಲೋಕ್ಯ ಜನನಿಯು ನಮ್ಮ ಪುಣ್ಯದಿಂದ ಇಲ್ಲಿ ಸಾಕ್ಷಾತ್ತಾಗಿ ಬಂದಿರುವಳು. ಅರಸ, ಈಕೆಯೇ ಲೋಕಾಂತರದಲ್ಲಿದ್ದ ನಮ್ಮಿಬ್ಬರನ್ನು ಇಲ್ಲಿಗೆ ಕರೆದು ತಂದವಳು" ಎಂದು ಹೇಳಿದಳು.

೫೦. ರಾಜೀವಲೋಚನನಾದ ರಾಜನು, ಆ ಮಾತನ್ನು ಕೇಳಿ, ಎದ್ದು, ಧರಿಸಿದ್ದ ಮಾಲ್ಯಾಂಬರಗಳು ಜೋಲಾಡುತ್ತಿರಲು ಆಕೆಯ ಕಾಲಿಗೆ ಬಿದ್ದನು.

೫೧-೫೨. "ಸರಸ್ವತಿಯೇ ನಿನಗೆ ನಮಸ್ಕಾರವು. ದೇವಿ, ನೀನು ಎಲ್ಲರಿಗೂ ಹಿತವನ್ನು ಮಾಡತಕ್ಕವಳು. ವರಪ್ರದೆಯೇ, ಮೇಧಸ್ಸನ್ನೂ ದೀರ್ಘಾಯುಷ್ಯವನ್ನೂ ಧನವನ್ನೂ ಕೊಡು" ಎಂದು ಹೇಳಿದ ಆ ಅರಸನನ್ನು ಜ್ಞಪ್ತಿದೇವಿಯು ಕೈಯ್ಯಿಂದ ಮುಟ್ಟಿ ಹೇಳಿದಳು:—"ವತ್ಸ, ನಿನಗೆ ಬೇಕಾದುದೆಲ್ಲವೂ ಲಭಿಸಲಿ. ನಿನಗೆ ಭವನ (ಪಾರಮಾರ್ಥಿಕ ಸುಖ)ವೂ ದೊರೆಯಲಿ."

ಸರ್ವಾಪದಃ ಸಕಲದುಷ್ಕೃತದೃಷ್ಟಯಶ್ಚ
ಗಚ್ಛಂತು ವಃ ಶಮಮನಂತಸುಖಾನಿ ಸಮ್ಯಕ್ |
ಆಯಾಂತು ನಿತ್ಯಮುದಿತಾ ಜನತಾ ಭವಂತು
ರಾಷ್ಟ್ರೇ ಸ್ಥಿರಾಶ್ಚ ವಿಲಸಂತು ಸದೈವ ಲಕ್ಷ್ಮ್ಯಃ || ೫೩ ||

ಇತ್ಯಾರ್ಷೇ ಶ್ರೀವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
" ಪದ್ಮಜೀವನಂ " ನಾಮ ಅಷ್ಟಪಂಚಾಶಃ ಸರ್ಗಃ

---

೫೩. "ನಿಮ್ಮ ಸಕಲ ವಿಪತ್ತುಗಳೂ ದುಷ್ಕರ್ಮಗಳೂ ಶಾಂತವಾಗಲಿ. ನಿಮಗೆ ಅನಂತರ ಸುಖವಾಗಲಿ, ದೇಶದಲ್ಲಿರುವ ಜನರೆಲ್ಲರೂ ನಿತ್ಯ ಸಂತೋಷಿಗಳಾಗಿರಲಿ. ರಾಷ್ಟ್ರದಲ್ಲಿ ಯಾವಾಗಲೂ ಲಕ್ಷ್ಮಿಯರೆಲ್ಲಿ ಸ್ಥಿರವಾಗಿ ವಿಲಾಸ ಮಾಡುತ್ತಿರಲಿ" (ಎಂದು ಮತ್ತೆ ಹರಸಿದಳು).

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಪದ್ಮಜೀವನ" ಎಂಬ ಐವತ್ತೆಂಟನೆಯ ಸರ್ಗವು.

ಏಕೋನಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ__

ಸರಸ್ವತೀ ತಥೇತ್ಯುಕ್ತ್ವಾ ತತ್ರೈವಾಂತರ್ಧಿಮಾಯಯೌ |
ಪ್ರಭಾತೇ ಪಂಕಜೈಃ ಸಾರ್ಧಂ ಬುಬುಧೇ ಸಕಲೋ ಜನಃ ‖ ೧ ‖

ಆಲಿಲಿಂಗ ಚ ತಾಂ ಲೀಲಾಂ ಲೀಲಾ ಚ ದಯಿತಂ ಕ್ರಮಾತ್ |
ಪುನಃ ಪುನರ್ಮಹಾನಂದಾನ್ಮೃತಂ ಪ್ರೋಜ್ಜೀವಿತಂ ಪುನಃ ‖ ೨ ‖

ಸದಾಸೀದ್ರಾಜಸದನಂ ಮದಮನ್ಮಥಮಂಥರಂ |
ಆನಂದಮತ್ತಜನತಂ ವಾದ್ಯಗೇಯರವಾಕುಲಂ ‖ ೩ ‖

ಜಯಮಂಗಳಪುಣ್ಯಾಹಘೋಷಘುಂಘುಮಘರ್ಘರಂ |
ತುಷ್ಟಪುಷ್ಟಜನಾಪೂರ್ಣಂ ರಾಜಲೋಕವೃತಾಂಗಣಂ ‖ ೪ ‖

ಸಿದ್ಧವಿದ್ಯಾಧರೋನ್ಮುಕ್ತ ಪುಷ್ಪವರ್ಷಸಹಸ್ರಭೃತ್ |
ಧ್ವನನ್ಮೃದಂಗಮುರಜಕಾಹಲಾಶಂಖದುಂದುಭಿ ‖ ೫ ‖

ಐವತ್ತೊಂಬತ್ತನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :—ಹೀಗೆಂದು ಹೇಳಿ ಸರಸ್ವತಿಯು ಅಲ್ಲಿಯೇ ಅಂತರ್ಧಾನ ಹೊಂದಿದಳು. ಪ್ರಾತಃಕಾಲದಲ್ಲಿ ಕಮಲಗಳೊಡನೆ ಜನರು ಎಚ್ಚೆತ್ತರು.

• ೨. ಲೀಲೆಯು ದ್ವಿತೀಯ ಲೀಲೆಯನ್ನೂ ಸತ್ತು ಬದುಕಿದ ತನ್ನ ಗಂಡನನ್ನೂ ಮಹಾನಂದದಿಂದ ಮತ್ತೆ ಮತ್ತೆ ಆಲಿಂಗಿಸಿಕೊಂಡಳು.

೩–೫. ಅರಮನೆಗೆ ಅರಮನೆಯೇ ಆನಂದೋನ್ಮತ್ತವಾಗಿ, ಸಂತೋಷದಿಂದ, ವಾದ್ಯಗಾನಗಳನ್ನು ಮಾಡಿತು. ಜಯಶಬ್ದಗಳೂ, ಮಂಗಳ ಧ್ವನಿಯೂ, ಪುಣ್ಯಾಹ ಘೋಷಗಳೂ ತುಂಬಿ ಹೋದುವು. ಸಂತೋಷದಿಂದ ಜನರ ಮೈಯುಬ್ಬಿತು. ಅರಮನೆಯ ಅಂಗಳವು ರಾಜಲೋಕದಿಂದ ತುಂಬಿತು.

ಊರ್ಧ್ವೀಕೃತಬೃಹದ್ಧಸ್ತಹಾಸ್ತಿಕಸ್ತನಿತೋತ್ಕಟಂ ।
ಉತ್ತಾಲತಾಂಡವಸ್ತ್ರೈಣಪೂರ್ಣಾಂಗಣಲಸದ್ಧ್ವನಿ ॥ ೬ ॥

ಮಿಥಃ ಸಂಘಟ್ಟನಿಪತಜ್ಜನೋಪಾಯನದಂತುರಂ ।
ಪುಷ್ಪಶೇಖರಸಂಭಾರಮಯಸಂಸಾರಸುಂದರಂ ॥ ೭ ॥

ವಿಕೀರ್ಣಾಪಾದಿತಕ್ಷೌಮಂ ಮಂತ್ರಿಸಾಮಂತನಾಗರೈಃ ॥
ಸ್ಥೂಲಪದ್ಮಮಯಂ ವ್ಯೋಮ ರಕ್ತೈಃ ಸ್ತ್ರಾಂಡವಿನೀಕರೈಃ ॥ ೮ ॥

ಮತ್ತಸ್ತ್ರೀಕಂಧರಾವೃತ್ತಲೀಲಾಂದೋಲಿತಕುಂಡಲಂ ।
ಪ್ರವೃತ್ತಪಾದಸಂಪಾತಪ್ರೋಲ್ಲಸತ್ಪುಷ್ಪಕರ್ದಮಂ ॥ ೯ ॥

ಪಟ್ಟವಾಸಃಶರನ್ಮೇಘವಿತಾನಕವಿತಾನಕಂ ।
ವರಾಂಗನಾಮುಖೈರ್ನೃತ್ಯಚ್ಚಂದ್ರಲಕ್ಷಗೃಹಾಜಿರಂ ॥ ೧೦ ॥

ಪರಲೋಕಾದುಪಾನೀತಾ ರಾಜ್ಞೀ ಸಾ ಪತಿರೇವ ಚ ।
ಇತಿ ನಿರ್ವೃತ್ತಗಾಥಾಭಿರ್ಜಗುರ್ದೇಶಾಂತರೇ ಜನಾಃ ॥ ೧೧ ॥

ಸಿದ್ಧವಿದ್ಯಾಧರಾದಿಗಳು ಕರೆದ ಪುಷ್ಪವರ್ಷವು ಅನೇಕವಾಗಿ ಇಳಿಯಿತು. ಮೃದಂಗ, ಮುರಜ, ಕಹಳೆ ಶಂಖ, ದುದುಂಭಿ ವಾದ್ಯಗಳು ಮೊಳಗಿದುವು.

೬–೮. ಗಜ, ಸಮೂಹಗಳು ದೊಡ್ಡದಾದ ಸೊಂಡಿಲುಗಳನ್ನೆತ್ತಿ ಕೂಗಿದುವು. ಸಂಭ್ರಮದಿಂದ ಕುಣಿಯುತ್ತಿರುವ ಹೆಂಗಸರ ಗುಂಪಿನ ಗದ್ದಲವು ಅಂಗಳವನ್ನು ತುಂಬಿತು. ಗದ್ದಲದಲ್ಲಿ ಜನರು ತರುತ್ತಿದ್ದ ಕಾಣಿಕೆಗಳೆಲ್ಲ ಚೆಲ್ಲಿ ಹೋದುವು. ಹೂಮುಡಿದ ಜನರ ಗುಂಪುಗಳಿಂದ ಅರಮನೆಯು ಸುಂದರವಾಯಿತು. ಮಂತ್ರಿ, ಸಾಮಂತ, ನಾಗರರು ಎರಚಿದ ಹೂಗಳಿಂದ ನೆಲವು ಬಿಳಿಯ ಬಟ್ಟೆಯನ್ನು ಹಾಸಿದಂತಾಯಿತು ನರ್ತಕಿಯರ ಎತ್ತಿದ ಕೆಂಪಾದ ಕೈಗಳಿಂದ ಆಕಾಶವೆಲ್ಲವೂ ದೊಡ್ಡ ಕಮಲಗಳಿಂದ ತುಂಬಿದಂತಾಯಿತು.

೯-೧೦. ಮತ್ತರಾದ ಸ್ತ್ರೀಯರು ಕತ್ತು ತಿರುಗಿಸುವಾಗ ಕುಂಡಲಗಳು ಕುಣಿಯುತ್ತಿದ್ದುವು. ಜನರ ತುಳಿತಕ್ಕೆ ಸಿಕ್ಕಿ ಅಲ್ಲಿದ್ದ ಹೂಗಳೆಲ್ಲವೂ ಕೆಸರಾದುವು. ಶುಭ್ರವಾದ ಪಟ್ಟೆ ವಸ್ತ್ರಗಳ ಮೇಲ್ಕಟ್ಟು ಶರತ್ಕಾಲದ ಮೇಘದಂತಿದ್ದುವು. ತಿರುಗುತ್ತಿರುವ ಉತ್ತಮಾಂಗನೆಯರ ಮುಖಗಳೆಂಬ ಚಂದ್ರ ಲಕ್ಷಗಳು ಆ ಅಂಗಳದಲ್ಲಿ ಕುಣಿಯುತ್ತಿರುವುವೋ ಎಂಬಂತಿತ್ತು.

೧೧. ಲೀಲೆಯು ಪರಲೋಕದಿಂದ ಪತಿಯನ್ನೂ ಮತ್ತೊಬ್ಬ ರಾಣಿ

ಪದ್ಮೋ ಭೂಮಿಪತಿಃ ಶ್ರುತ್ವಾ ವೃತ್ತಾಂತಂ ಕಥಿತಂ ಮನಾಕ್ |
ಚಕ್ರೇ ಸ್ನಾನಂ ಸಮಾನೀತೈಶ್ಚತುಃ ಸಾಗರವಾರಿಭಿಃ || ೧೨ ||

ತತೋಽಭಿಷಿಷಿಚುರ್ವಿಪ್ರಾ ಮಂತ್ರಿಣೋ ಭೂಭುಜಶ್ಚ ತಂ |
ಲಬ್ಧೋದಯಮನಂತೇಹಮಮರೇಂದ್ರಮಿವಾಪರಾಃ || ೧೩ ||

ಲೀಲಾ ಲೀಲಾ ಚ ರಾಜಾ ಚ ಜೀವನ್ಮುಕ್ತಮಹಾಧಿಯಃ|
ರೇಮಿರೇ ಪೂರ್ವವೃತ್ತಾಂತಕಥನೈಃ ಸುರತೈರಿವ || ೧೪ ||

ಸರಸ್ವತ್ಯಾಃ ಪ್ರಸಾದೇನ ಸ್ವಪೌರುಷಕೃತೇನ ತತ್ |
ಪ್ರಾಪ್ತಂ ಲೋಕತ್ರಯಶ್ರೇಯಃ ಪದ್ಮೇನೇತಿ ಮಹೀಭುಜಾ || ೧೫ ||

ಸ ಜ್ಞಪ್ತಿಜ್ಞಾನಸಂಬುದ್ಧೋ ರಾಜಾ ಲೀಲಾದ್ವಯಾನ್ವಿತಃ |
ಚಕ್ರೇ ವರ್ಷಾಯುತಾನ್ಯಷ್ಟೌ ತತ್ರ ರಾಜ್ಯಮನಿಂದಿತಃ || ೧೬ ||

ಜೀವನ್ಮುಕ್ತಾಸ್ತ ಇತ್ಯೇವಂ ರಾಜ್ಯಂ ವರ್ಷಾಯುತಾಷ್ಟಕಂ |
ಕೃತ್ವಾ ವಿದೇಹಮುಕ್ತತ್ವಮಾಸೇದುಃ ಸಿದ್ಧಸಂವಿದಃ || ೧೭ ||

ಯನ್ನೂ ಕರೆತಂದಳೆಂದು ದೇಶ ದೇಶದ ಜನರೆಲ್ಲರೂ ಹಾಡುಕಟ್ಟಿ ಹಾಡಿದರು.

೧೨. ಪದ್ಮರಾಜನೂ ಸಂಕ್ಷೇಪವಾಗಿ ವೃತ್ತಾಂತವನ್ನು ಕೇಳಿ, ಚತುಸ್ಸಮುದ್ರಜಲಗಳನ್ನೂ ತರಿಸಿ ಸ್ನಾನ ಮಾಡಿದನು. ವಿಪ್ರರು, ಮಂತ್ರಿಗಳೂ, ಅರಸರೂ, ಮತ್ತೆ ಜನ್ಮವೆತ್ತಿ ಸೌಭಾಗ್ಯ ಸಂಪನ್ನನಾದ ಆ ರಾಜನಿಗೆ, ಅಮರರು ಅಮರೇಂದ್ರನಿಗೆ ಮಾಡಿದಂತೆ, ಅಭಿಷೇಕ ಮಾಡಿದರು.

೧೪. ಲೀಲೆಯರೂ ರಾಜನೂ ಜೀವನ್ಮುಕ್ತ ಜ್ಞಾನವುಳ್ಳವರಾಗಿ, ಪೂರ್ವ ವೃತ್ತಾಂತ ಕಥನಗಳಿಂದಲೂ ಸುರತಗಳಿಂದಲೂ ಸಂತೋಷಪಟ್ಟರು.

೧೫. ಸ್ವಪೌರುಷದಿಂದ ಆ ಪದ್ಮರಾಜನು ಸರಸ್ವತಿಯ ಪ್ರಸಾದವನ್ನೂ ಮೂರು ಲೋಕಗಳ ಶ್ರೇಯಸ್ಸನ್ನೂ ಸಂಪಾದಿಸಿಕೊಂಡನು.

೧೬-೭. ಜ್ಞಪ್ತಿ ದೇವಿಯ ಅನುಗ್ರಹದಿಂದ ಜ್ಞಾನ ಸಂಪನ್ನನಾದ ಪದ್ಮ ರಾಜನು ಲೀಲಾದ್ವಯದೊಡನೆ ಎಂಭತ್ತು ಸಾವಿರ ವರ್ಷ ರಾಜ್ಯವನ್ನು ಪ್ರಶಸ್ತ ವಾಗಿ ಆಳಿದನು. ಮೂವರೂ ಜೀವನ್ಮುಕ್ತರಾಗಿದ್ದು ಕೊನೆಗೆ ವಿದೇಹ ಮುಕ್ತಿಯನ್ನೂ ಹೊಂದಿದರು.

ಯದುದಯವಿಶದಂ ವಿದಗ್ಧಮುಗ್ಧಂ |:
ಸಮುಚಿತಮಾತ್ಮಹಿತಂ ಚ ಪೇಶಲಂ ಚ ||
ತದಖಿಲಜನತೋಷದಂ ಸ್ವರಾಜ್ಯಂ |
ಚಿರಮನುಪಾಲ್ಯ ಸುದಂಪತೀ ವಿಮುಕ್ತೌ || ೧೮ ||

ಇತ್ಯಾರ್ಷೇ ಶ್ರೀ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
"ಪದ್ಮನಿರ್ವಾಣಂ" ನಾಮ ಏಕೋನಷಷ್ಟಿತಮಃ ಸರ್ಗಃ

---

೧೮. ಅವರ ರಾಜ್ಯದಲ್ಲಿ ಸೌಭಾಗ್ಯವು ಬೆಳೆಯಿತು: ಪಂಡಿತರು ಹೆಚ್ಚಿದರು: ಎಲ್ಲರೂ ಸಮುಚಿತವೂ ಆತ್ಮಹಿತವೂ ಪ್ರಿಯವೂ ಆದ ಕಾರ್ಯಗಳನ್ನು ಮಾಡುತ್ತಿದ್ದರು. ಅದರಿಂದ ಎಲ್ಲ ಜನರಿಗೂ ಸಂತೋಷವಾಗುತ್ತಿತ್ತು. ಹೀಗೆ ರಾಜ್ಯವನ್ನು ಬಹುಕಾಲ ಪಾಲಿಸಿ ಆ ದಂಪತಿಗಳು ಮುಕ್ತರಾದರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಪದ್ಮನಿರ್ವಾಣ" ಎಂಬ ಐವತ್ತೊಂಬತ್ತನೆಯ ಸರ್ಗವು.

ಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ.—

ಏತತ್ತೇ ಕಥಿತಂ ರಾಮ ದೃಶ್ಯದೋಷನಿವೃತ್ತಯೇ |
ಲೀಲೋಪಾಖ್ಯಾನಮನಘಂ ಘನತಾಂ ಜಗತಸ್ತ್ಯಜ || ೧ ||

ಶಾಂತ್ಯೈವ ದೃಶ್ಯಸತ್ತಾಸ್ಯಾಃ ಶಮನಂ ನೋಪಯುಜ್ಯತೇ |
ಸತೋ ಹಿ ಮಾರ್ಜನಕ್ಲೇಶೋ ನಾಸತಸ್ತು ಕದಾಚನ || ೨ ||

ಜ್ಞಾನೇನಾಕಾಶರೂಪೇಣ ದೃಶ್ಯಂ ಜ್ಞೇಯಸ್ವರೂಪಕಂ |
ಇತ್ಯೇಕೀಭೂತಮಾಲೋಕ್ಯ ಜ್ಞಸ್ತಿಷ್ಠತ್ಯಂಬರೋಪಮಃ || ೩ ||

ಪೃಥ್ವ್ಯಾದಿರಹಿತೇನೇದಂ ಚಿದ್ಭಾಸೈವ ಸ್ವಯಂಭುವಾ |
ಸಾಧಿತಂ ಯದಿ ಸಿದ್ಧೇನ ತತಃ ಸ್ವಾತ್ಮನಿ ಸಾಧಿತಂ || ೪ ||

ಅರವತ್ತನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ನಿನ್ನ ದೃಶ್ಯ (ವುಂಟೆಂಬ) ದೋಷ ನಿವಾರಣಕ್ಕಾಗಿ, ಅನಘವಾದ ಈ ಲೀಲೋಪಾಖ್ಯಾನವನ್ನು ನಿನಗೆ ಹೇಳಿದೆನು. (ಇನ್ನು) ಜಗತ್ತು ಘನವು (ಪ್ರತ್ಯೇಕವಾದ ಸತ್ತೆಯನ್ನು ಉಳ್ಳುದು ಎಂಬ ಪಿಂಡ ಗ್ರಹವನ್ನು) ಎಂಬುದನ್ನು ಬಿಡು.

೨. ತಾನಾಗಿ ಶಾಂತವೇ ಆಗಿರುವ ದೃಶ್ಯ ಸತ್ತೆಯ ಶಮನಕ್ಕಾಗಿ ಯತ್ನಿಸುವುದು ಸರಿಯಲ್ಲ. ಇದ್ದರಲ್ಲವೇ ಅದನ್ನು ತೊಳೆಯಬೇಕು ? ಇಲ್ಲದುದನ್ನು ನಿವಾರಿಸುವುದೆಂತು ?

೩. ಆಕಾಶದಂತೆ ಶುದ್ಧವಾದ ಜ್ಞಾನದಿಂದ ಜ್ಞೇಯ ಸ್ವರೂಪವಾದ ಈ ಪ್ರಪಂಚವೂ ಬ್ರಹ್ಮವೇ ಎಂಬುದನ್ನು ತಿಳಿದು ಪ್ರಾಜ್ಞನಾದವನು ಆಕಾಶದಂತೆ ನಿರ್ಲಿಪ್ತನಾಗುವನು.

೪. ಪೃಥಿವ್ಯಾದಿಗಳೊಂದೂ ಇಲ್ಲದೆ ಚತುರ್ಮುಖನು ಚಿತ್ಪ್ರಕಾಶದಿಂದಲೇ ಇದೆಲ್ಲವನ್ನೂ ಸೃಷ್ಟಿ ಮಾಡಿದನು. ಅದರಿಂದ ಇದೆಲ್ಲವೂ ಬ್ರಹ್ಮನಲ್ಲಿಯೇ ತೋರಿತು ಎಂದು ಸಿದ್ಧವಾಗುವುದು.

ಸಂವಿದ್ಯಥಾ ಯಾ ಯತತೇ ತಥಾ ಸೈವ ವ್ಯವಸ್ಥಿತಾ |
ವಿಸೃಷ್ಟಾ ಸೃಷ್ಟಿವಿನ್ನದ್ಯಾಂ ಯಾವದ್ಯತ್ನಾನ್ನ ರೋಧಿತಾ || ೫ ||

ಚಿದಾಕಾಶಾವಭಾಸೋಽಯಂ ಜಗದಿತ್ಯವಬುಧ್ಯತೇ |
ಚಿದ್ವ್ಯೋಮ್ನ್ಯೇವಾತ್ಮನಿ ಸ್ವಚ್ಛೇ ಪರಮಾಣುಕಣಂ ಪ್ರತಿ || ೬ ||

ಏವಮಸ್ಯಾ ಮುಧಾಭ್ರಾಂತೇಃ ಕಾ ಸತ್ತಾ ಕೇವ ವಾಸನಾ |
ಕಾವಾಸ್ಥಾ ಕಾಚ ನಿಯತಿಃ ಕಾವಶ್ಯಂಭಾವಿತೋಚ್ಯತಾಂ || ೭ ||

ಸರ್ವಂ ಚೈತದ್ಯಥಾದೃಷ್ಟಂ ಸ್ಥಿತಮಿತ್ಥಮಖಂಡಿತಂ |
ಮಾಯೈವೇಯಮನಂತೇಯಂ ನಚ ಮಾಯಾಸ್ತಿ ಕಾಚನ || ೮ ||

---

೫. ಯತ್ನ ಮಾಡಿ ನಿರೋಧಿಸದೆ ವ್ಯವಹಾರವೆಂಬ ನದಿಯಲ್ಲಿ ಬಿಟ್ಟು ಬಿಟ್ಟರೆ ಸಂವಿತ್ತೆಂಬುದು ಹೇಗೆ ಹೊರಡುವುದೋ ಹಾಗೆ ಹಾಗೆಯೇ ವ್ಯವಸ್ಥಿತವಾಗುವುದು: (ಅದರಿಂದ ಉಪದೇಶಾದಿಗಳು ಬೇಕು)

೬. ಚಿದಾಕಾಶದಿಂದ ನಿರ್ಮಲವಾದ ಆತ್ಮನಲ್ಲಿ, ಸಣ್ಣ ಪರಮಾಣುವಿನಷ್ಟಾಗಿ ಹೊಳೆದ ಚಿದಾಕಾಶ ಪ್ರಕಾಶವೇ ಜಗತ್ತು ಎಂದು ತಿಳಿದಿರುವುದು.

("ಚಿದ್ವ್ಯೋಮ್ನೇವ ಸ್ವಚ್ಛೇ ಬ್ರಹ್ಮಾತ್ಮನಿ ಚಿದಾಕಾಶಸ್ಯ ಮಾಯಿಕೋಽವಭಾಸೋಽಯಂ ಜಗದಿತ್ಯವಬುಧ್ಯತೇ ಇತಿ ಬ್ರಹ್ಮಸೃಷ್ಟಂ ಜಗತ್ ತಥಾಪಿ ತನ್ನಾಪರಿಚ್ಛಿನ್ನ ಬ್ರಹ್ಮಭಾವಂ ಪ್ರತಿ ತಥಾವಬುಧ್ಯತೇ, ಕಿಂತು ಬುಧ್ಯಾದಿಪರಿಚ್ಛಿನ್ನೋಪಾಧಿವಶಾತ್ ಪರಮಾಣು ಕಣಮತ್ಯಂತಪರಿಚ್ಛಿನ್ನಂ ಜೀವಂ ಪ್ರತಿ | ತದೀಯ ಪ್ರಯತ್ನ ಜನ್ಯಕರ್ಮೋಪಭೋಗಾರ್ಥಮೇವ ಬ್ರಹ್ಮಣಿ ತದಾರೋಪಾತ್–ತಥಾಚ-ತತ್ಪ್ರಯತ್ನ ಜನ್ಯ ಬೋಧೇನ ದೃಶ್ಯಮಾರ್ಜನಂ ಸಂಭವತ್ಯೇವ ಇತಿ ಭಾವಃ" ತಾ. ಪ್ರ.)

೭. ಇಂತಹ ಈ ಮಿಥ್ಯಾ ಭ್ರಾಂತಿಗೆ ಪ್ರತ್ಯೇಕ ಸತ್ತೆಯಾವುದು ? ಇದಕ್ಕೆ ವಾಸನಾ ಯಾವುದು ? ಇದಕ್ಕೆ ಅಸ್ತಿತ್ವವೆಲ್ಲಿ ? ನಿಯತಿ ಯಾವುದುಂಟು ? ಇದು ಆಗಿಯೇ ತೀರಬೇಕು ಎನ್ನುವುದು ಹೇಗೆ ? ಹೇಳು.

೮. ಈ ಎಲ್ಲವೂ, ನಮಗೆ ಕಾಣುತ್ತಿರುವುದೆಲ್ಲವೂ ಅನಂತವಾದ ಮಾಯೆಯು. ಆದರೆ ಆ ಮಾಯೆಯೆಂಬುದು ಮಾತ್ರ (ಪ್ರತ್ಯೇಕವಾಗಿ) ಇಲ್ಲ.

ಶ್ರೀ ರಾಮ ಉವಾಚ—

ಅಹೋ ನು ಪರಮಾ ದೃಷ್ಟಿರ್ದರ್ಶಿತಾ ಭಗವರ್ನ್ ತ್ವಯಾ |
ದಾವಾಗ್ನಿದಗ್ಧಕಕ್ಷಾಣಾಂ ದಾಹಶಾಂತೌ ಕಲೈಂದವೀ || ೯ ||

ಅಹೋ ನು ಸುಚಿರೇಣಾದ್ಯ ಜ್ಞಾತಂ ಜ್ಞಾತವ್ಯಮುಕ್ಷತಂ|
ಮಯಾ ಯಥೇದಂ ಯಚ್ಚೇದಂ ಯಾದೃಗ್ ಜ್ಞೇಯಂ ಯತೋ ಯದಾ ||

ಶಾಮ್ಯಾಮಿವ ದ್ವಿಜಶ್ರೇಷ್ಠ ನಿರ್ವಾಮಿವ ವಿಕಲ್ಪಯನ್ |
ಏತದಾಖ್ಯಾನಮಾಶ್ಚರ್ಯಂ ವ್ಯಾಖ್ಯಾನಂ ಶಾಸ್ತ್ರದೃಷ್ಟಿಷು || ೧೧ ||

ಇಮಂ ಮೇ ಭಗವರ್ನ್ ಬ್ರೂಹಿ ಸಂಶಯಂ ಸರ್ವಕೋವಿದ |
ತವ ಪಾತುಂ ನ ತೃಪ್ತೋಽಸ್ಮಿ ಶ್ರೋತ್ರಪಾತ್ರೈರ್ವಚೋಮೃತಂ || ೧೨ ||

ಸಸರ್ಗತ್ರಿತಯೇ ಕಾಲೋ ಲೀಲಾಭರ್ತುರ್ಹಿ ಯೋಗತಃ |
ಸ ಕ್ವಚಿತ್ಕಿಮಹೋರಾತ್ರಃ ಕ್ವಚಿತ್ಕಿಂ ಮಾಸಮಾತ್ರಕಃ || ೧೩ ||

---

೯. ಶ್ರೀರಾಮನು ಹೇಳಿದನು:—ಎಲೈ ಭಗವಂತನೇ, ಈ ಪರಮ (ಉತ್ತಮ) ದೃಷ್ಟಿಯು ಎಂಥದು ! ಇದನ್ನು ನೀನು ತೋರಿಸಿದೆ. ಕಾಡುಗಿಚ್ಚಿನಲ್ಲಿ ಸುಟ್ಟುಹೋದ ಪೊದೆಗಳಿಗೆ ಚಂದ್ರಿಕೆಯು ದಾಹಶಾಂತಿಯನ್ನು ಮಾಡುವುದಲ್ಲವೆ ?

೧೦. ಈ ದೃಶ್ಯವು ಹೇಗೆ ಬಂತು ? ದೃಶ್ಯವೆಂದರೇನು ? ದೃಶ್ಯವೆಂಥದು ? ಎಲ್ಲಿಂದ ಯಾವಾಗ ಬಂತು ? ಎಂಬುದನ್ನು ಬಹು ದಿನದಿಂದ ತಿಳಿಯಬೇಕೆಂದಿದ್ದ ನಾನು ಈಗ ತಿಳಿದುಕೊಂಡೆನು.

೧೧. ದ್ವಿಜ ಶ್ರೇಷ್ಠನೆ, ತನಗೆ ಶಾಂತಿಯು ಲಭಿಸಿತು. ಏನೇನೋ ಯೋಚಿಸುತ್ತಿದ್ದವನು ಇಂದು ತೃಪ್ತನಾಗಿರುವೆನು. ಈ ಲೀಲೋಪಾಖ್ಯಾನವು ಶಾಸ್ತ್ರ ದೃಷ್ಟಿಯಿಂದ ನೋಡಿದರೆ, ಆಶ್ಚರ್ಯಕರವಾದ (ಬ್ರಹ್ಮ) ವ್ಯಾಖ್ಯಾನದಂತಿರುವುದು.

೧೨. ಸರ್ವ ಕೋವಿದನಾದ ಭಗವಂತನೆ, ನಿನ್ನ ವಚೋಮೃತವನ್ನು ಶ್ರೋತ್ರ ಪಾತ್ರಗಳಿಂದ ಎಷ್ಟು ಕುಡಿದರೂ ಸಾಲದು. ಸಾಲದೆನ್ನಿಸುತ್ತಿರುವುದು. ನನ್ನ ಈ ಒಂದು ಸಂಶಯವನ್ನು ಪರಿಹರಿಸು.

೧೩-೪. ಲೀಲಾ ಭರ್ತನಾದವನಿಗೆ ಮೂರು ಜನ್ಮಗಳಾಯಿತು. ಅದರಲ್ಲಿ

ಕ್ವಚಿತ್ಕಿಂ ಬಹುವರ್ಷಾಣಿ ಕಸ್ಯಚಿತ್ಕಿಮು ಪೇಲವಃ |
ಕಸ್ಯಚಿತ್ಕಿಂ ಮಹಾದೀರ್ಘಃ ಕಸ್ಯಚಿತ್ಕಿಂ ಕ್ಷಣಃ ಸ್ಥಿತಃ || ೧೪ ||

ಇತಿ ಮೇ ಭಗವನ್ ಬ್ರೂಹಿ ತ್ವಂ ಯಥಾವದನುಗ್ರಹಾತ್ |
ಸಕೃಚ್ಛ್ರುತಂ ನ ವಿಶ್ರಾಂತಿಮೇತಿ ಲೋಷ್ಟೇ ಯಥಾ ಜಲಂ || ೧೫ ||

ಶ್ರೀ ವಸಿಷ್ಠ ಉವಾಚ—

ಯೇನ ಯೇನ ಯಥಾ ಯದ್ಯದ್ಯದಾ ಸಂವೇದ್ಯತೇಽನಘ |
ತೇನ ತೇನ ತಥಾ ತತ್ತತ್ತದಾ ಸಮನುಭೂಯತೇ || ೧೬ ||

ಅಮೃತತ್ವಂ ವಿಷಂ ಯಾತಿ ಸದೈವಾಮೃತವೇದನಾತ್ |
ಶತ್ರುರ್ಮಿತ್ರತ್ವಮಾಯಾತಿ ಮಿತ್ರಸಂವಿತ್ತಿವೇದನಾತ್ || ೧೭ ||

ಯಥಾ ಭಾವಿತಮೇತೇಷಾಂ ಪದಾರ್ಥಾನಾಂ ನಿಜಂ ವಪುಃ |
ತದೇವ ಹಿ ಚಿರಾಭ್ಯಾಸಾನ್ನಿಯತೇರ್ವಶಮಾಯತಂ || ೧೮ ||

ಒಂದೆಡೆ ದಿನಗಳಾಗಿ, ಇನ್ನೊಂದೆಡೆ ತಿಂಗಳಾಗಿ, ಮತ್ತೊಂದೆಡೆ ಬಹು ವರ್ಷಗಳಾಯಿತು. ಹೀಗೆ ಒಂದೆಡೆ ಸೂಕ್ಷ್ಮವಾಗಿ, ಮತ್ತೊಂದೆಡೆ ಮಹಾ ದೀರ್ಘವಾಗಿ, ಇನ್ನೊಂದೆಡೆ ಕ್ಷಣವಾಗಿಯೂ (ಒಂದೇ ಪ್ರಾಣಿಗೆ) ಹೇಗೆ ಆಯಿತು ?

೧೫. ಈ ಸಂಶಯವನ್ನು ಭಗವಂತನು ಪರಿಹರಿಸಬೇಕು. (ಈ ವಿಚಾರ ವನ್ನೂ) ಒಂದು ಸಲ ಕೇಳಿದರೆ, ಮಣ್ಣು ಹೆಂಟೆಯ ಮೇಲೆ ಒಂದು ಸಲ ನೀರು ಹಾಕಿದಂತಾಗುವುದೇ ಹೊರತು ತೃಪ್ತಿಯಾಗುವುದಿಲ್ಲ.

೧೬. ಶ್ರೀ ವಸಿಷ್ಠನು ಹೇಳಿದನು:—ಅನಘನಾದ ರಾಘವನೆ, ಯಾರು ಯಾರು ಯಾವ ಯಾವುದನ್ನೂ ಹೇಗೆ ಹೇಗೆ ಭಾವಿಸಿಕೊಳ್ಳುವರೋ, ಅವರವ ರಿಗೆ ಅದದು ಹಾಗೆ ಹಾಗೆಯೇ ಅನುಭವಕ್ಕೆ ಬರುವುದು.

೧೭. ವಿಷವನ್ನು ಅಮೃತವೆಂದುಕೊಂಡರೆ ಅಮೃತವೇ ಆಗುವುದು. ಶತ್ರುವನ್ನು ಮಿತ್ರನೆಂದುಕೊಂಡರೆ ಮಿತ್ರನೇ ಆಗುವನು.

೧೮. ಈ ಪದಾರ್ಥಗಳಿಗೆಲ್ಲ ಭಾವನಾನುಗುಣವಾದ ದೇಹವು ಬಹು ಕಾಲ ದಿಂದ ಅಭ್ಯಾಸವಾಗಿರುವುದು: ನಿಯತಿಯೂ ಹಾಗೆಯೇ ಇರುವುದು.

ಕಚನ್ನೈಕಾತ್ಮಿಕೈಷಾ ಚಿದ್ಯಥಾ ಕಚತಿ ಯಾದೃಶಂ |
ತಥಾ ತಥಾಶು ಭವತಿ ತತ್ಸ್ವಭಾವೈಕಕಾರಣಾತ್ || ೧೯ ||

ನಿಮೇಷೇ ಯದಿ ಕಲ್ಪೌಘಸಂವಿದಂ ಪರಿವಿಂದತಿ |
ನಿಮೇಷ ಏವ ತತ್ಕಲ್ಪೋ ಭವತ್ಯತ್ರ ನ ಸಂಶಯಃ || ೨೦ ||

ಕಲ್ಪೇ ಯದಿ ನಿಮೇಷತ್ವಂ ವೇತ್ತಿ ಕಲ್ಪೋಽಪ್ಯಸೌ ತತಃ |
ನಿಮೇಷೀಭವತಿ ಕ್ಷಿಪ್ರಂ ತಾದೃಗ್ರೂಪಾತ್ಮಿಕಾ ಹಿ ಚಿತ್ || ೨೧ ||

ದುಃಖಿತಸ್ಯ ನಿಶಾಕಲ್ಪಃ ಸುಖಿತಸ್ಯೈವ ಚ ಕ್ಷಣಃ|
ಕ್ಷಣಃ ಸ್ವಪ್ನೇ ಭವೇತ್ಕಲ್ಪಃ ಕಲ್ಪಶ್ಚ ಭವತಿ ಕ್ಷಣಃ || ೨೨ ||

ಯಥಾ ಚ ಮೃತ್ವಾ ಜಾತೋಽಹಂ ತರುಣೋ ಯೌವನಸ್ಥಿತಃ |
ಯಾತೋಽಸ್ಮಿ ಯೋಜನಶತಂ ಸ್ವಪ್ನ ಇತ್ಯನುಭೂಯತೇ || ೨೩ ||

ರಾತ್ರಿಂ ದ್ವಾದಶವರ್ಷಾಣಿ ಹರಿಶ್ಚಂದ್ರೋಽನುಭೂತವಾನ್ |
ಲವಣೋ ಭುಕ್ತವಾನಾಯುರೇಕರಾತ್ರ್ಯಾ ಸಮಾಃ ಶತಂ || ೨೪ ||

---

೧೯. ಚಿತ್ ಎಂಬುದು ಯಾವಾಗಲೂ ಕಚನವೇ ಸ್ವಭಾವವಾಗಿಉಳ್ಳುದು ಯಾವಾಗ ಯಾವ ರೂಪದಲ್ಲಿ ಕಚನವಾಗುವುದೋ ಆ ಕೂಡಲೇ ಹಾಗೆ ಹಾಗೆಯೇ ಆಗುವುದು. ಇದಕ್ಕೆ ಅದರ ಸ್ವಭಾವವೇ ಕಾರಣವು.

೨೦-೧. ಒಂದು ನಿಮಿಷವನ್ನು ಕಲ್ಪಗಳ ಗುಂಪು ಎಂದು ಕೊಂಡರೆ, ನಿಮಿಷವೇ ಕಲ್ಪವಾಗುವುದು. ಸಂಶಯವಿಲ್ಲ. ಕಲ್ಪವನ್ನು ನಿಮಿಷವೆಂದು ಕೊಂಡರೆ ಕಲ್ಪವೂ ನಿಮಿಷವೇ ಆಗುವುದು. ಚಿತ್ತಿನ ಸ್ವಭಾವವಂತಹುದು.

೨೨-೩. ದುಃಖಿತನಿಗೆ ಒಂದು ರಾತ್ರಿಯು ಕಲ್ಪವಾಗುವುದು: ಸುಖಿಗೆ ಆ ರಾತ್ರಿಯೇ ಒಂದು ಕ್ಷಣವಾಗುವುದು. ಸ್ವಪ್ನದಲ್ಲಿ ಕ್ಷಣವು ಕಲ್ಪವಾಗುವುದು. ಕಲ್ಪವು ಕ್ಷಣವಾಗುವುದು. ಸ್ವಪ್ನದಲ್ಲಿ ಸತ್ತು ಹುಟ್ಟಿದೆನು. ತರುಣನಾದೆನು, ಯೌವ್ವನವಂತನಾದೆನು, ನೂರು ಯೋಜನ ಹೋಗಿ ಬಂದೆನು, ಎಂಬ ಅನುಭವಗಳಾಗುವುವು.

೨೪. ಒಂದೇ ರಾತ್ರಿಯನ್ನು ಹರಿಶ್ಚಂದ್ರನು ಹನ್ನೆರಡು ವರ್ಷವಾಗಿ ಅನು

ಯನ್ಮುಹೂರ್ತಃ ಪ್ರಜೇಶಸ್ಯ ಸ ಮನೋರ್ಜೀವಿತಂ ಮುನೇಃ|
ಜೀವಿತಂ ಯದ್ವಿರಿಂಚಸ್ಯ ತದ್ದಿನಂ ಕಿಲ ಚಕ್ರಿಣಃ || ೨೫ ||

ವಿಷ್ಣೋರ್ಯಜ್ಜೀವಿತಂ ರಾಮ ತದ್ವೃಷಾಂಕಸ್ಯ ವಾಸರಃ |
ಧ್ಯಾನಪ್ರಕ್ಷೀಣಚಿತ್ತಸ್ಯ ನ ದಿನಾನಿ ನ ರಾತ್ರಯಃ || ೨೬ ||

ನ ಪದಾರ್ಥಾ ನಚ ಜಗತ್ಸತ್ಯಮಾತ್ಮನಿ ಯೋಗಿನಃ |
ಮಧುರಂ ಕಟುತಾಮೇತಿ ಕಟುಭಾವೇನ ಚಿಂತಿತಂ || ೨೭ ||

ಕಟು ಚಾಯಾತಿ ಮಾಧುರ್ಯಂ ಮಧುರತ್ವೇನ ಚಿಂತಿತಂ |
ಮಿತ್ರಬುದ್ಧ್ಯಾ ದ್ವಿಷನ್ಮಿತ್ರಂ ರಿಪುಬುದ್ಧ್ಯಾ ರಿಪುಃ ಸುಹೃತ್ || ೨೮ ||
ಭವತೀತಿ ಮಹಾಬಾಹೋ ಯಥಾಸಂವೇದನಂ ಜಗತ್ || ೨೯ ||

ಭವಿಸಿದನು. ಲವಣನೆಂಬ ರಾಜನು ಒಂದೇ ರಾತ್ರಿಯಲ್ಲಿ ನೂರು ವರ್ಷದ ಆಯುಸ್ಸನ್ನು ಅನುಭವಿಸಿದನು.

(ಲವಣೋಪಾಖ್ಯಾನವು ಇದೇ ಪ್ರಕರಣದಲ್ಲಿ ಮುಂದೆ ಬರುವುದು.)

೨೫-೬. ಪ್ರಜೇಶನ ಒಂದು ಮುಹೂರ್ತವು ಮನುವಿನ ಪೂರ್ಣಾಯುಸ್ಸು. ಬ್ರಹ್ಮನ ಪೂರ್ಣಾಯುವು ವಿಷ್ಣುವಿನ ಒಂದು ದಿನವು. ವಿಷ್ಣುವಿನ ಪೂರ್ಣಾಯುಷ್ಯವು ಈಶ್ವರನ ಒಂದು ದಿನವು. ಧ್ಯಾನದಲ್ಲಿ ಕುಳಿತು ಚಿತ್ತವನ್ನು ಕ್ಷಯಿಸಿರತಕ್ಕವನಿಗೆ ದಿನವೂ ಇಲ್ಲ: ರಾತ್ರಿಯೂ ಇಲ್ಲ.

೨೭-೯. ಧ್ಯಾನದಿಂದ ಚಿತ್ತವನ್ನು ತನ್ನಲ್ಲಿ ಲಯಮಾಡಿಕೊಂಡಿರುವ ಯೋಗಿಯಾದವನಿಗೆ ಪದಾರ್ಥಗಳೊಂದೂ ಇಲ್ಲ: ಜಗತ್ತು ಎಂಬುದಿಲ್ಲ. ಕಟುವೆಂದುಕೊಂಡರೆ ಮಧುರವೂ ಕಟುವಾಗುವುದು: ಮಧುರವೆಂದುಕೊಂಡರೆ ಕಟುವೂ ಮಧುರವಾಗುವುದು. ಮಿತ್ರ ಬುದ್ಧಿಯಿಂದ ನೋಡಿದರೆ ಶತ್ರುವು ಮಿತ್ರನಾಗುವನು. ರಿಪು ಬುದ್ಧಿಯಿಂದ ನೋಡಿದರೆ ಸುಹೃತ್ತುವೂ ರಿಪುವಾಗುವನು. (ಅದರಿಂದ) ಎಲೈ ಮಹಾ ಬಾಹುವೇ, ಜಗತ್ತು ಯಥಾ ಸಂವೇದನವಾಗಿರುವುದು.

ಅನಭ್ಯಸ್ತಾಃ ಪದಾರ್ಥಾ ಯೇ ಶಾಸ್ತ್ರಪಾಠಜಪಾದಯಃ|
ತೇಷಾಂ ಸಂವೇದನಾಭ್ಯಾಸಾನ್ನೂನಮಭ್ಯೇತಿ ಸಾಮ್ಯತಾ || ೩೦ ||

ನೌಯಾಯಿನಾಂ ಭ್ರಮಾರ್ತಾನಾಂ ವೇದನಾದ್ಭೂರ್ವಿವರ್ತತೇ |
ಅವೇದನಾಭ್ರಮಾರ್ತಾನಾಮಪಿ ನೈಷಾಂ ವಿವರ್ತತೇ || ೩೧ ||

ಶೂನ್ಯಮಾಕೀರ್ಣತಾಮೇತಿ ವೇದನಾತ್ ಸ್ವಪ್ನದೃಕ್ಷ್ವಿವ |
ವೇದನಾತ್ಪೀತಮಾನೀಲಂ ಶುಕ್ಲಂ ವಾಪ್ಯನುಭೂಯತೇ || ೩೨ ||

ಆಪದ್ವದುತ್ಸವಃ ಖೇದಂ ಕರೋತಿ ಪರಿಮೋಹಿತಃ |
ಕುಡ್ಯೇಽಪಿ ಖ ಇವಾಚಾರೋ ದೃಷ್ಟೋ ನನ್ವವಿಚಾರಿಣಃ || ೩೩ ||

ಅಸದ್ಯಕ್ಷೋ ವಿಮೂಢಾನಾಂ ಪ್ರಾಣಾನಪ್ಯಪಕರ್ಷತಿ |
ವೇದನಾತ್ಸ್ವಪ್ನವನಿತಾ ಜಾಗ್ರತೀವ ರತಿಪ್ರದಾ | || ೩೪ ||

---

೩೦. ಶಾಸ್ತ್ರ, ಮಂತ್ರ ಮೊದಲಾದ ಅಭ್ಯಾಸವಿಲ್ಲದ ಆ ಪದಾರ್ಥಗಳೂ ಕೂಡ, ಯಾವ ಯಾವ ಭಾವದಿಂದ ಅಭ್ಯಾಸ ಮಾಡಿದರೆ, ಹಾಗೆ ಹಾಗೆ ಆಗುವುವು.

೩೧. ಹಡಗಿನಲ್ಲಿ ಹೋಗುವವರಿಗೂ ತಲೆ ತಿರುಗುತ್ತಿರುವವರಿಗೂ ಭೂಮಿಯೇ ತಿರುಗುವಂತೆ ಕಾಣುವುದು. ತಲೆ ತಿರುಗು ಇದ್ದವರಿಗೂ ವೇದನವಿಲ್ಲದಿರುವಾಗ ಭೂಮಿಯು ತಿರುಗುವುದಿಲ್ಲ.

೩೨. ಸ್ವಪ್ನದಲ್ಲಿ ಆಗುವಂತೆ, ಶೂನ್ಯವು ಪರಿಪೂರ್ಣವಾಗುವುದು. ಪೀತವರ್ಣವು ನೀಲವಾಗಿಯೋ ಶುಕ್ಲವಾಗಿಯೋ ಇರುವಂತೆ ಅನುಭವವಾಗುವುದು.

೩೩-೪. ಉತ್ಸವವೂ ಆಪತ್ತಿನಂತೆಯೇ ಖೇದವನ್ನುಂಟುಮಾಡುವುದು. ಪ್ರಬಲವಾದ ಮೋಹದಿಂದ ಗೋಡೆಯನ್ನು ನೋಡಿಯೂ ಶೂನ್ಯವೆಂದುಕೊಂಡ ಅವಿಚಾರಿಗಳನ್ನು ಬಲ್ಲೆವು. ಅಸತ್ಯವಾದ ಯಕ್ಷನು ಮೂಢರ ಪ್ರಾಣಗಳನ್ನೇ ತಿನ್ನುವನು. ಸ್ವಪ್ನವನಿತೆಯು ಜಾಗ್ರದ್ವನಿತೆಯಂತೆ ರತಿಯನ್ನು ಕೊಡುವಳು.

ಯದ್ಯಥಾಭಾಸಮಾಯತಂ ತತ್ತಥಾ ಸ್ಥಿರತಾಂ ಗತಂ |
ಅಸದೇವ ನಭಶ್ಚೈವ ನಭ ಏವ ಚಿದಾತ್ಮನಿ || ೩೫ ||

ಶತಹಸ್ತಾಂಬುದಚ್ಛಾಯಾನಟನೃತ್ತಮಿವಾತತಂ |
ಗಮನೇ ಮಾನಸಂ ಸ್ಪಂದಂ ಜಗದ್ವಿದ್ಧಿ ನ ವಸ್ತುತತ್ || ೩೬ ||

ಮಿಥ್ಯಾಜ್ಞಾನಪಿಶಾಚಸ್ಯ ಸ್ಪಂದದರ್ಶನಮಾಕೃತಿ |
ಮಾಯಾಮಾತ್ರಕಮೇವೇದಮರೋಧಕಮಭಿತ್ತಿಮತ್ || ೩೭ ||

ಇದಂ ಭಾಸ್ವರಮಾಭಾತಂ ಸ್ವಪ್ನಸಂದರ್ಶನಂ ಸ್ಥಿತಂ |
ಅಪೂರ್ವಮೇವಾಸುಪ್ತಸ್ಯ ನರಸ್ಯೈವೋದಿತಂ ವಿದುಃ || ೩೮ ||

ಅಚೇತಾ ಚೇತತಿ ಸ್ತಂಭೋ ಯಾದೃಶಂ ಶಾಲಭಂಜಿಕಾಂ |
ಪರಮಾರ್ಥಮಹಾಸ್ತಂಭಃ ಸೃಷ್ಟಿಂ ಚೇತತಿ ತಾದೃಶಂ || ೩೯ ||

---

೩೫. ಚಿದಾತ್ಮನಲ್ಲಿ ಆಕಾಶವು ಅಸತ್ಯವೇ ಆಗಿದ್ದರೂ, ಅದು ಯಾವ ಯಾವ ರೀತಿಯಲ್ಲಿ ಭಾಸವಾಗುವುದೋ ಹಾಗೆ ಹಾಗೆಯೇ ಸ್ಥಿರವಾಗಿ ನಿಲ್ಲುವುದು.

೩೬. ಮೋಡದ ನೆರಳು ನೋಡಿ ನೂರು ಕೈಗಳ ನಟನು ನರ್ತನ ಮಾಡುತ್ತಿರುವನು ಎಂದುಕೊಳ್ಳುವುದು ಆಕಾಶದಲ್ಲಿ ಕಾಣುವ ಮನಸ್ಸಿನ ವ್ಯಾಪಾರವು. ಅದರಂತೆಯೇ ಜಗತ್ತು ಕೂಡ ವಾಸ್ತವವಲ್ಲ.

೩೭. ಮನೋವ್ಯಾಪಾರವೇ ಆಕೃತಿಯಾಗುಳ್ಳ ಭ್ರಮಾಜಾತ ಪಿಶಾಚದಂತೆ ಈ ಜಗತ್ತೆಲ್ಲವೂ ಮಾಯಾ ಮಾತ್ರವು. ಇದು ಅರೋಧಕವು (ತಡೆಯಲಾರದು) ಅಭಿತ್ತಿಕವು (ನಿರಾಧಾರವು).

೩೮. ನಿದ್ದೆಯೇ ಬರದಿದ್ದವನಿಗೆ ಒಮ್ಮೆ ನಿದ್ದೆಯು ಬಂದರೆ, ಅವನಿಗಾಗುವ ಸ್ವಪ್ನವು ಸ್ಫುಟವಾಗಿ ಅವನಿಗೆ ನೆನಪಿರುವಂತೆ, ಈ ಜಗತ್ತು: (ಅಸತ್ಯವಾದರೂ ಸ್ಫುಟವಾಗಿರುವಂತೆ ಇರುವುದು).

೩೯. ಸ್ತಂಭವು ಅಚೇತನವೇ ಆದರೂ (ತನ್ನಲ್ಲಿ ಶಿಲ್ಪಿ ವ್ಯಾಪಾರದಿಂದ) ಸಾಲ ಭಂಜಿಕೆಯನ್ನು ಕಾಣುವಂತೆ, ಬ್ರಹ್ಮವೆಂಬ ಮಹಾ ಸ್ತಂಭವು (ಮಾಯಾ ಪ್ರಾಬಲ್ಯದಿಂದ) ಸೃಷ್ಟಿಯನ್ನು ಕಾಣುವುದು.

ಯಾದೃಶೋ ಮೇ ನರಃ ಪಾರ್ಶ್ವೇ ಸ್ವಪ್ನೇ ಕ್ಷುಬ್ಧೋ ಮಹಾಭಟೈಃ |
ತಾದೃಶೋ ಬ್ರಹ್ಮಣಃ ಸರ್ಗೋ ಬುದ್ಧ ಏವ ಸುಷುಪ್ತವತ್ || ೪೦ ||

ತೃಣಗುಲ್ಮಲತಾಯುಕ್ತಃ ಶಿಶಿರಾಂತೇ ಯಥಾ ರಸಃ |
ವಾಸಂತಃ ಸಂಸ್ಥಿತೋ ಭೂಮೌ ತಥಾ ಸರ್ಗಃ ಪರೇ ಪದೇ || ೪೧ ||

ಯಥಾ ದ್ರವತ್ವಂ ಕನಕೇ ಸ್ಥಿತಮಂತರನುಲ್ಬಣಮ್ |
ತಥಾ ಸ್ಥಿತಃ ಪರೇ ಸರ್ಗ ಆತ್ಮವರ್ಗಾದಣಾವಣೌ || ೪೨ ||

ಸಂನಿವೇಶೋ ಯಥಾಂಗಾನಾಮಂಗಿನೋಽನನ್ಯ ಆತ್ಮನಃ |
ಜಗದೇವಮನಂಗಸ್ಯ ಸ್ವಾತ್ಮನೋ ಬ್ರಹ್ಮಣಸ್ತಥಾ || ೪೩ ||

ಯಾದೃಗೇಕನರಃ ಸ್ವಪ್ನೇ ಯುದ್ಧಮನ್ಯಂ ನರಂ ಪ್ರತಿ |
ತಾದೃಶಂ ಸದಸದ್ರೂಪಂ ಸ್ವಾತ್ಮೇದಂ ವ್ಯೋಮಗಂ ಜಗತ್ || ೪೪ ||

---

೪೦. ನನ್ನ ಮಗ್ಗುಲಲ್ಲಿದ್ದವರನ್ನು ಮಹಾ ಭಟರು ಹಿಡಿದುಹೊಡೆದಂತೆ ಕನಸು ಕಂಡರೆ ಹೇಗೋ ಈ ಜಗತ್ತು ಬ್ರಹ್ಮದಿಂದ ಹುಟ್ಟಿತು ಎನ್ನುವುದೂ ಕೂಡ ಹಾಗೆಯೇ ! (ಅದು ಸ್ಪಷ್ಟವಾಗಿ ಮನಸ್ಸಿಗೆ ತೋರುತ್ತಿದ್ದರೂ ಕನಸೇ ಆಗಿರುವಂತೆ) ಇದು ಸ್ವಪ್ನ ರೂಪವಾಗಿ ಉಂಟು: ಬೋಧರೂಪವಾಗಿ (ಇಲ್ಲ).

೪೧. ಶಿಶಿರದ ಕೊನೆಯಲ್ಲಿ ರಸವು ವಸಂತದ ತೃಣಗುಲ್ಮಲತಾ ರೂಪವಾಗಿ ಭೂಮಿಯಲ್ಲಿ ಮೆರೆಯುವಂತೆ, ಬ್ರಹ್ಮದಲ್ಲಿ ಸೃಷ್ಟಿಯೂ ಮೆರೆಯುವುದು.

೪೨. ಸುವರ್ಣದಲ್ಲಿ ದ್ರವತ್ವವು ಹೇಗೆ ಅಡಗಿರುವುದೋ, ಹಾಗೆಯೇ ಆತ್ಮ ವರ್ಗವೂ, (ಆ ಆತ್ಮ ವರ್ಗದ) ಅಣು ಅಣುವಿನಲ್ಲಿಯೂ ಸೃಷ್ಟಿಯೂ ಇರುವುದು. (ಆತ್ಮ ವರ್ಗಾತ್ ಜೀವ ಸಂಘಾತ್ ನಿಮಿತ್ತಾತ್ ಅಣಾವಣೌ ತದ್ಭೋಗ್ಯಸ್ಸರ್ಗಃ ಪರೇ ಸ್ಥಿತಃ—ತಾ. ಪ್ರ.)

೪೩. ಅಂಗಿಯಾವನಿಗೆ ಅಂಗ ಸನ್ನಿವೇಶವು ಹೇಗೋ ಹಾಗೆಯೇ ಅನಂಗನೂ ಸ್ವಾತ್ಮನೂ ಆದ ಬ್ರಹ್ಮನಿಗೆ ಈ ಜಗತ್ತು ಹಾಗೆ.

೪೪. ಒಬ್ಬನು ಇನ್ನೊಬ್ಬನೊಡನೆ ಯುದ್ಧ ಮಾಡಿದಂತೆ ಕಂಡ ಕನಸು ಹೇಗೋ ಅದರಂತೆಯೇ, ಸತ್ತಾಗಿ ಕಂಡರೂ ಅಸತ್ತಾಗಿರುವ ಜಗತ್ತು ವ್ಯೋಮದಲ್ಲಿರುವ ಆತ್ಮವೇ (ಎನ್ನಬೇಕು).

ಮಹಾಕಲ್ಪಾಂತಸರ್ಗಾದೌ ಚಿತ್ಸ್ವಭಾವಮಿದಂ ಜಗತ್ |
ಕಾರಣತ್ವಂ ಮಿಥಃ ಪಶ್ಚಾದಸದೇತಿ ನ ವಾಸ್ತವಂ || ೪೫ ||

ಮುಕ್ತೇಽಸ್ಮಿನ್ ಬ್ರಹ್ಮಣಿ ಯದಿ ಬ್ರಹ್ಮಾನ್ಯಃ ಸ್ಮೃತಿಜೋ ಭವೇತ್ |
ತತ್ಸ್ಮೃತಿಜ್ಞಪ್ತಿಜೇ ಸರ್ಗೇ ಸ್ಥಿತೈವ ಜ್ಞಪ್ತಿಮಾತ್ರತಾ || ೪೬ ||

ಶ್ರೀರಾಮ ಉವಾಚ:—

ಪೌರಾಣಾಂ ಮಂತ್ರಿಮುಖ್ಯಾನಾಂ ವಿದೂರಥಕುಲಕ್ರಮಃ |
ಸಮಮೇವ ಕಥಂ ತತ್ರ ಸರ್ವೇಷಾಂ ಪ್ರತಿಭಾಸಿತಃ || ೪೭ ||

ಶ್ರೀ ವಸಿಷ್ಠ ಉವಾಚ —

ಚಿತಃ ಸಮನುವರ್ತಂತೆ ಮುಖ್ಯಾಯಾಃ ಸರ್ವಸಂವಿದಃ |
ಯಥಾ ವಿಪುಲವಾತ್ಯಾಯಾಃ ಸಾಮಾನ್ಯಾ ವಾತಲೇಖಿಕಾಃ || ೪೮ ||

---

೪೫. ಮಹಾ ಕಲ್ಪದ ಕೊನೆಯಲ್ಲಿಯೂ ಸರ್ಗದ ಮೊದಲಲ್ಲಿಯೂ ಈ ಜಗತ್ತು ಚಿತ್ತಾಗಿಯೇ ಇರುವುದು. ಆದರಿಂದ (ಚಿತ್ತು) ಕಾರಣ (ವಾಗಿ ಜಗತ್ತು ಉದಯಿಸಿಕೊಂಡಿತು) ಎಂಬ ವ್ಯವಹಾರವು ಈಚಿನದು. ಅಸತ್ತು ವಾಸ್ತವವಲ್ಲ.

೪೬. ಈಗಿರುವ ಚತುರ್ಮುಖನು ಮುಕ್ತನಾಗುತ್ತಲೂ ಇನ್ನೊಬ್ಬ ಬ್ರಹ್ಮನು ಸ್ಮೃತಿಯಿಂದ ಹುಟ್ಟಿ ಬರುವನು ಎಂಬುದರಿಂದ, ಆ ಸ್ಮೃತಿ ಜ್ಞಾನ ದಿಂದ ಸರ್ಗವು ಹುಟ್ಟುವುದು. (ಕಲ್ಪದ ಆಚೆ, ಸರ್ಗದ ಈಚೆ) ಜ್ಞಾನ ಮಾತ್ರವೇ ಇರುವುದು.

೪೭. ಶ್ರೀರಾಮನು ಕೇಳಿದನು:—ವಿದೂರಥ(ನು ಪದ್ಮರಾಜನಾದರೆ, ಆ ವಿದೂರಥನ ಹಿಂದೂ ಮುಂದೂ ಎಂಬ) ವಂಶವು ಕ್ರಮವಾಗಿ ಬಂದಂತೆ ಅಲ್ಲಿನ ಪೌರರಿಗೂ ಮಂತ್ರಿ ಮುಖ್ಯರಿಗೂ ಒಂದೇ ಸಮನಾಗಿ ತಿಳಿದುದು ಎಂತು ?

೪೮. ಶ್ರೀವಸಿಷ್ಠನು ಹೇಳಿದನು:—ಸರ್ವ ಸಂವಿತ್ಸ್ವರೂಪವಾದ ಮುಖ ಚಿತ್ತನ್ನು (ಇತರ ಚಿತ್ತುಗಳೆಲ್ಲವೂ) ಅನುಸರಿಸುವುವು. ದೊಡ್ಡ ಬಿರುಗ್ಯಾಳಿ

ಪರಸ್ಪರಾನುಸಾರೇಣ ತಥಾ ರೂಪೇಣ ಸಂವಿದಃ |
ಕಚಿತಾಸ್ತಾಃ ಪ್ರಜಾಪಾಲಪ್ರಜಾವಾಸ್ತವ್ಯಮಂತ್ರಿಣಃ || ೪೯ ||

ಏವಂ ರೂಪಾತ್ಕುಲಾಜ್ಜಾತೋ ರಾಜಾಸ್ಮಾಕಮಯಂ ತ್ವಸೌ |
ಕಚಿತಾ ಇವ ವಾಸ್ತವ್ಯವಿದೋ ವೈದೂರಥೇ ಪುರೇ || ೫೦ ||

ಕಚನೇ ಚಿತ್ಸ್ವಭಾವಸ್ಯ ನ ಚ ಕಾರಣಮಾರ್ಗಣಂ |
ಯುಕ್ತಂ ಮಹಾಮಣೇರ್ಭಾಸಾಮಿವಾನ್ಯತ್ರ ಸ್ವಭಾವತಃ || ೫೧ ||

ಅಹಮೇವಂ ಕುಲಾಚಾರೋ ರಾಜಾ ಸ್ಯಾಮೇವಮಿತ್ಯಪಿ |
ವಿದೂರಥವಿದೋ ರತ್ನಾದುದಿತಾ ಪ್ರತಿಭಾ ಯಥಾ || ೫೨ ||

ಯಲ್ಲಿ ವಾಯು ಪ್ರವಾಹಗಳು ಹಲವಿದ್ದರೂ ಅದನ್ನೇ ಅನುಸರಿಸುವುದಿಲ್ಲವೇ ? ಹಾಗೆ.

೪೯. ಹೀಗೆ ಸಂವಿತ್ತುಗಳು ಒಂದನ್ನೊಂದು ಹಿಡಿದು ನಡೆಯಬೇಕಾಗಿರುವುದರಿಂದ ರಾಜ, ಪ್ರಜೆಗಳೆಲ್ಲರೂ ಏಕರೂಪವಾಗಿಯೇ ತೋರಿದರು.

೫೦. "ಇಂತಹ ಕುಲದಿಂದ ಈ ನಮ್ಮ ರಾಜನು ಹುಟ್ಟಿದನು" ಎಂದು ವೈದೂರಥಪುರದಲ್ಲಿ ಎಲ್ಲರಿಗೂ ಹೊಳೆಯಿತು.

೫೧. ಚಿತ್ಸ್ವಭಾವವು ಹೀಗೇಕೆ ಹೊಳೆಯುವುದು ಎಂಬ ಕಾರಣವನ್ನು ಹುಡುಕುವುದು ಯುಕ್ತವಲ್ಲ. ಮಹಾ ರತ್ನದಲ್ಲಿ ಪ್ರಕಾಶವು ನಾನಾ ರೂಪವಾಗಿ ಕಾಣುವುದು· ಅದರ ಸ್ವಭಾವವೇ (ಅಲ್ಲದೆ ಅದಕ್ಕೆ ಬೇರೆ ಏನು ಕಾರಣ ವುಂಟು ?)

೫೨-೩. "ನಾನು ಈ ಕುಲದವನು; ಈ ಆಚಾರವುಳ್ಳವನು: ಇಂತಹ ರಾಜನು" ಎಂಬ ಪ್ರತಿಭೆಯು ವಿದೂರಥ ಸಂವಿತ್ತಿಯೆಂಬ ರತ್ನದಿಂದ ಹೇಗೆ ಹುಟ್ಟಿತೋ, ಹಾಗೆಯೇ ಯಾವ ಯಾವ ಸರ್ಗದಲ್ಲಿ ಎಷ್ಟೆಷ್ಟು ಜಂತುಗಳು ಯಾವ ಯಾವಾಗ ಹುಟ್ಟಿ ಬರುವವೋ ಅವೆಲ್ಲವೂ ಸರ್ವಗತವಾದ ಚಿದ್ಧಾತುವಿನಿಂದಲೇ ಒಂದಕ್ಕೊಂದು ಹೊಂದಿಕೊಂಡು ಹೋಗುವುವು.

(ರಾಜನೆಂದರೆ ಸಪರಿವಾರನೆಂದೇ ಅರ್ಥವಾಗುವಂತೆ, ಮರವೆಂದರೆ ಬೇರು, ಬುಡ, ಸಾರು, ತೊಗಟೆ, ಕೊಂಬೆ, ಎಲೆ, ಚಿಗುರು, ಕಾಯಿ, ಹಣ್ಣು, ಇತ್ಯಾದಿ

ಯಾವಂತೋ ಜಂತವೋ ಯಸ್ಮಿ಼ ಯೇ ಯೇ ಸರ್ಗೇ ಯದಾ ಯದಾ |
ತೇ ಸರ್ಗಗತ್ವಾಚ್ಚಿದ್ಧಾತೋರನ್ಯೋನ್ಯಾದರ್ಶತಾಂ ಗತಾಃ || ೫೩ ||

ತೀವ್ರವೇಗವತೀ ಯಾ ಸ್ಯಾತ್ತತ್ರ ಸಂವಿದಕಂಪಿತಾ |
ಸೈವಾಯಾತಿ ಪರಂ ಸ್ಥೈರ್ಯಮಾಮೋಕ್ಷಂ ತ್ವೇಕರೂಪಿಣೀ || ೫೪ ||

ಬಲವಚ್ಚಿದ್ವಿಲಾಸಾನಾಮನುವೃತ್ತ್ಯಾ ಪರಸ್ಪರಂ |
ಸ್ವಭಾವಾಃ ಪ್ರತಿಬಿಂಬಂತಿ ಚಿದಾದರ್ಶೇ ಸ್ವಭಾಗತಃ || ೫೫ ||

ತತ್ರಾತಿಯತ್ನಾಜ್ಜಯತಿ ಸತ್ಯಾಃ ಸಂವಿದ ಆತ್ಮಸಾತ್ |
ಕುರ್ವಂತಿ ಸರಿದಂಭೋಧಿಗಾಮಿನಿ ಸರಿತೋ ಯಥಾ || ೫೬ ||

ಯೆಲ್ಲವೂ ಎಂಬಂತೆ, ಸೃಷ್ಟಿಯೆಂದರೆ ಒಂದು ಸಮಗ್ರ ಸಂಸಾರ: ಆಯಾ ಸಂಸಾರದಲ್ಲಿ ಅದೊಂದು ಸಂವಿತ್ಕಚನವು ಸಾಮಾನ್ಯವಾಗಿದ್ದು, ವ್ಯಕ್ತಿಗತ ವೈಶಿಷ್ಟ್ಯವೂ ರಾಗದಲ್ಲಿ ಸ್ವರವಿರುವಂತೆ ಇರುವುದು.)

(ಜಾತಿ ವ್ಯಕ್ತಿ ವ್ಯವಹಾರವನ್ನು ಚಿಂತಿಸಿ)

(ಮುಂದೆ ೬ಗನೆಯ ಶ್ಲೋಕ ನೋಡಿ.)

೫೪. ಯಾವ ಸಂವಿತ್ತು ಅಕಂಪಿತವಾಗಿ ತೀವ್ರ ವೇಗವುಳ್ಳುದಾಗುವುದೋ ಅದು ಮೋಕ್ಷದವರೆಗೆ ಏಕ ರೂಪವಾಗಿ ಸ್ಥಿರವಾಗಿ ನಿಲ್ಲುವುದು.

೫೫. ಈ ಚಿದ್ವಿಲಾಸಗಳು ಎಷ್ಟೇ ಪ್ರಬಲವಾಗಿದ್ದರೂ ಒಂದಕ್ಕೊಂದು ಹೊಂದಿಕೊಂಡೇ ಇರುವುದರಿಂದ (ಜೀವ ಚೈತನ್ಯ-ರೂಪವಾದ) ಚಿದಾದರ್ಶದಲ್ಲಿ (ಅದರ) ಸ್ವಭಾವ(ವೇ ಕಾರಣ)ವಾಗಿ, (ಮಿಕ್ಕ ಜಗದಾದಿ ಪರಮಾರ್ಥವಾದ) ಸ್ವಭಾವಗಳೆಲ್ಲವೂ ಪ್ರತಿಬಿಂಬಿಸುವುವು.

೫೬. ನಾನಾ ವಿಧವಾಗಿರುವ ಸಂವಿತ್ತುಗಳಲ್ಲಿ ಅತಿಯತ್ನಶೀಲವಾದುದು ಯಾವುದೋ ಅದು, ಸಮುದ್ರಗಾಮಿನಿಯಾದ ಮಹಾ ನದಿಯು ಮಿಕ್ಕವುಗಳನ್ನೆಲ್ಲ ತನ್ನ ವಶಮಾಡಿಕೊಳ್ಳುವಂತೆ, ಇತರ ಸಂವಿತ್ತುಗಳನ್ನೆಲ್ಲ ತನ್ನಂತೆ ಮಾಡಿಕೊಳ್ಳುವುದು.

ಯೇ ಸಮಾಸ್ತತ್ರ ತೇ ತಾವದ್ಯತಂತೇ ಚಿತ್ಸ್ವಭಾವತಃ |
ಯಾವದೇಕೋ ಜಯತ್ಯತ್ರ ದ್ವಿತೀಯಃ ಸ ನಿಮಜ್ಜತಿ || ೫೭ ||

ಜಾಯಮಾನೇಷು ನಶ್ಯತ್ಸು ವರ್ತಮಾನೇಷು ಭೂರಿಶಃ |
ಏವಂ ಸರ್ಗಸಹಸ್ರೇಷು ಪರಮಾಣುಕಣಂ ಪ್ರತಿ || ೫೮ ||

ನ ಕಿಂಚಿತ್ಕೇನಚಿದ್ವ್ಯಾಪ್ತಂ ನ ಕಿಂಚಿತ್ಕೇನಚಿತ್ ಸ್ಥಿತಂ |
ಚಿದಾಕಾಶಮಿದಂ ಶಾಂತಮತಃ ಸರ್ವಮಭಿತ್ತಿಮತ್ || ೫೯ ||

ಅಯಮಾಭಾಸತೇ ಸ್ವಪ್ನೋ ನಿರ್ನಿದ್ರೋ ದೃಷ್ಟಿವರ್ಜಿತಃ |
ಆವಶ್ಯಂಭಾವಿಬೋಧಸ್ತು ಸ್ವನುಭೂತೋಽಪ್ಯಸನ್ಮಯಃ || ೬೦ ||

(ಹಿಂದಿನ ಪ್ರಕರಣದಲ್ಲಿ ಪೌರುಷ ವಿಚಾರವಾಗಿ ಹೇಳಿರುವುದನ್ನು ನೆನೆಸಿಕೊಳ್ಳಿ.)

೫೭. ಸಮಸಮವಾಗಿರುವ ಸಂವಿತ್ತುಗಳಲ್ಲಿ ಚಿತ್ಸ್ವಭಾವಕ್ಕನುಗುಣವಾಗಿ ಯತ್ನಿಸುವಾಗ, (ಅತಿ ಬಲವಾದ) ಒಂದು ಗೆಲ್ಲುವುದು: (ಹೀನ ಬಲವಾದ) ಇನ್ನೊಂದು ಮುಳುಗುವುದು.

೫೮-೯. ಪರಮಾಣು ಕಣಕಣದಲ್ಲಿಯೂ ಹೀಗೆ ಸೃಷ್ಟಿ ಸಹಸ್ರಗಳು ಎಷ್ಟೆಷ್ಟೋ ಹುಟ್ಟುತ್ತವೆ: ಸತ್ತಿವೆ: ಇವೆ: ಆದರೂ ಯಾವುದೂ ಯಾವುದನ್ನೂ ವ್ಯಾಪಿಸಿಕೊಂಡಿಲ್ಲ: ಯಾವುದೂ ಯಾವುದನ್ನೂ ಹೊತ್ತುಕೊಂಡಿಲ್ಲ: ಎಲ್ಲವೂ ಚಿದಾಕಾಶವೇ ಆಗಿ, ಶಾಂತವಾಗಿ, ಸರ್ವವೂ ಅಭಿತ್ತಿಮತ್ (ಬಂದೇ: ಪ್ರತ್ಯೇಕವಲ್ಲದುದು) ಆಗಿ ಇರುವುದು.

೬೦. ಈ ಕಾಣುತ್ತಿರುವ ದೃಶ್ಯ ಜಾಲವೆಲ್ಲವೂ ನಿರ್ನಿದ್ರ ಸ್ವಪ್ನವೆಂದು ತಿಳಿ: ಇದು ಪರಮಾರ್ಥ ದೃಷ್ಟಿಯಿಲ್ಲದುದರಿಂದ, ಅಸನ್ಮಯವಾದರೂ (ಸತ್ತೋ ಎಂಬಂತೆ) ಅನುಭವಕ್ಕೆ ಬರುತ್ತಿರುವುದು. (ಇಷ್ಟಾದರೂ ಇದರಲ್ಲಿ ಅವಶ್ಯ

ಪತ್ರಪುಷ್ಪಫಲಾಂಶಾತ್ಮಾ ಯಥೈಕಃ ಸ್ವಾಸ್ಥಿತೋ ದ್ರುಮಃ |
ಅನಂತಸರ್ವಶಕ್ತ್ಯಾತ್ಮಾ ಹ್ಯೇಕ ಏವ ತಥಾ ವಿಭುಃ || ೬೧ ||

ಮಾತೃಮೇಯಪ್ರಮಾಣಾದಿಮಾಯಾತ್ಮಕಮಜಂ ಪದಂ |
ಬುದ್ಧಂ ವಿಸ್ಮೃತಿಮಾಯಾತಿ ನ ಕದಾಚನ ಕಸ್ಯಚಿತ್ || ೬೨ ||

ಶೂನ್ಯೋದಯಾಸ್ತಮಯತಸ್ತು ತಮಃಪ್ರಕಾಶಂ |
ದಿಕ್ಕಾಲರೂಪ್ಯಪಿ ಸದೈಕಮನಾದಿ ಶುದ್ಧಂ
ಆದ್ಯಂತಮಧ್ಯರಹಿತಂ ಸ್ಥಿತಮಚ್ಛಮಂಬು
ಸೌಮ್ಯತ್ವವೀಚಿವಲನಾಢ್ಯಮಿವೈಕಮೇವ || ೬೩ ||

ವಾಗಿ ಮುಂದೆ ಜ್ಞಾನವು ಲಭಿಸಲು ಅವಕಾಶವಾಗುವುದು ಎಂದು) ಇದು ಅವಶ್ಯಂ ಭಾವಿಬೋಧವು.

೬೧. ಪತ್ರ, ಪುಷ್ಪ, ಫಲ, ಎಂಬ ಅಂಶಾತ್ಮವಾಗಿ ನಾನಾ ಆಗಿದ್ದರೂ ಮರವು ತಾನು ಒಂದೇ ಆಗಿರುವಂತೆ, ಅನಂತ ಸರ್ವಶಕ್ತ್ಯಾತ್ಮವಾದರೂ ಬ್ರಹ್ಮವು ಒಂದೇ ಒಂದಾಗಿ ಇರುವುದು.

೬೨. ಜನ್ಮಾದಿರಹಿತವಾದ ಆ ಬ್ರಹ್ಮವು ಮಾಯಾ ದೃಷ್ಟಿಯಿಂದ ನೋಡಿದಾಗ ಪ್ರಮಾತೃ, ಪ್ರಮೇಯ, ಪ್ರಮಾಣ ಎಂಬ ತ್ರಿಪುಟೀರೂಪವಾಗಿ ಕಂಡರೂ, (ವಿಚಾರ ಮಾಡಿ ತಿಳಿದ) ಜ್ಞಾನಿ ಯಾವನಿಗೂ ಯಾವಾಗಲೂ ಮರೆಯಾಗುವುದಿಲ್ಲ: ಮರೆಯುವುದಿಲ್ಲ.

೬೩. ಆ ಬ್ರಹ್ಮವೆಂಬುದು ಉದಯ, (ಉತ್ಪತ್ತಿ) ಅಸ್ತಮಯ (ಪ್ರಲಯ) ಎಂಬುದಿಲ್ಲದ ಸತ್ಯ ವಸ್ತುವು. ತಮಸ್ಸನ್ನೂ (ಅವಿದ್ಯೆ) ಬೆಳಗಬಲ್ಲುದು. ದಿಕ್ಕಾಲರೂಪಿಯಾದರೂ ಅದು ಸತ್: ಏಕವು: ಅನಾದಿಯು: ಶುದ್ಧವು, ಆದಿ, ಅಂತ, ಮಧ್ಯ ರಹಿತವು: ಸೌಮ್ಯವಾಗಿ ಒಮ್ಮೆ. ತರಂಗವಲನಗಳಿಂದ ಕೂಡಿ ಇನ್ನೊಮ್ಮೆ ಇದ್ದರೂ, ನೀರು ಒಂದೇ ಆಗಿರುವಂತೆ, ಇದೂ ನಿರ್ವಿಕಾರವಾಗಿಯೇ ಇರುವುದು.

ಅಹಂತ್ವಮಿತ್ಯಾದಿಜಗತ್ಸ್ವರೂಪಾ
ವಿಶುದ್ಧ ಬೋಧೈಕವಿಭಾ ವಿಭಾತಿ |
ಆಕಾಶಕೋಶೇ ನಿಜಶೂನ್ಯತೇವ
ದ್ವೈತೈಕ್ಯಸಂಕಲ್ಪವಿಕಲ್ಪನಾಚ್ಛ || ೬೪ ||

ಇತ್ಯಾರ್ಷೇ ಶ್ರೀವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಉತ್ಪತ್ತಿ ಪ್ರಕರಣೇ
" ಲೀಲೋಪಾಖ್ಯಾನ ಪ್ರಯೋಜನ ಕಥನ " ನಾಮ ಷಷ್ಠಿತಮಃ ಸರ್ಗಃ

---

೬೪. ನಿಶ್ಶೂನ್ಯವಾದ ಆಕಾಶದಲ್ಲಿ ಅದರ ಶೂನ್ಯತೆಯೇ (ನಾನಾ ವಿಧವಾಗಿ ಕಾಣಿಸಿಕೊಳ್ಳುವಂತೆ) ಈ ಬ್ರಹ್ಮವೇ, ಸಂಕಲ್ಪ ವಿಕಲ್ಪಗಳಿಂದ ದ್ವೈತವಾಗಿಯೂ ಏಕವಾಗಿಯೂ,ಅಹಂ ತ್ವಂ ಇತ್ಯಾದಿ ಜಗತ್ಸ್ವರೂಪವಾಗಿಯೂ, ಸರ್ವಶುದ್ಧ ಜ್ಞಾನ ಪ್ರಕಾಶವಾಗಿಯೂ ಬೆಳಗುವುದು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉತ್ಪತ್ತಿ ಪ್ರಕರಣದಲ್ಲಿ "ಲೀಲೋಪಾಖ್ಯಾನ ಪ್ರಯೋಜನ ಕಥನ" ಎಂಬ
ಅರವತ್ತನೆಯ ಸರ್ಗವು.

ಮೂರನೆಯ ಸಂಪುಟವು

ಮುಗಿದುದು